ನವ್ಹಂಬರ ತಿಂಗಳಲ್ಲಿ ಬಿಡುಗಡೆ!

ಹುಬ್ಬಳ್ಳಿ

ಸಂಗೀತ — ಸುಜಾತಾ — ಡೆಕ್ಕನ್

ಶ್ರೀನಿವಾಸ-ಧಾರವಾಡ, ಕಪೀಲ-ಬೆಳಗಾವಿ, ಅವಿ:ಿರ-ವಿಜಾಪುರ, ವೆಂಕಟೇಶ-ಗದಗ, ಸಂಗಮ-ರಾಣೇಬೆನ್ನೂರ, ನಟರಾಜ-ಶಿರ್ಶಿ, ಶಕ್ತಿ-ಬಾಗಲಕೋಟೆ, ಮಾಗಾವಿ-ಹಾವೇರಿ ಹಾಗೂ ಮಧುಕೇಶ್ವರ ಟಾಕೀಜ ಬನವಾಸಿ (ಬನವಾಸಿಯಲ್ಲಿ ಈ ಚಿತ್ರದ ಸಂಪೂರ್ಣ ಉತ್ಪನ್ನವನ್ನು ಮಧುಕೇಶ್ವರ ದೇವಸ್ಥಾನದ ಸಹಾಯಾರ್ಥವಾಗಿ ಕೊಡಲಾಗುವದು)

ಮಯೂರನ ಕಥೆ ಕನ್ನಡಿಗರ ಕಥೆ, ಮಯೂರನ ಸಾಹಸ ಕನ್ನಡಿಗರ ಸಾಹಸ, ಮಯೂರನ ಸಿಂಹವಾಣಿ. ಕನ್ನಡಿಗರ ಸಿಂಹವಾಣಿ,
ಮಯೂರನ ನೆನಪು ಮುಕ್ಕೋಟಿ ಕನ್ನಡಿಗರಿಗೆಲ್ಲಾ ಸ್ವಾಭಿಮಾನ ತುಂಬುವ ಮಹಾ ಚೈತನ್ಯ.

ಮುಕ್ಕೋಟಿ ಕನ್ನಡಿಗರಿಗೆ ದೀಪಾವಳಿಯ ಶುಭಾಶಯಗಳು!!

ಕನ್ನಡ ಕಂಠೀರವ - ರಸಿಕರ ರಾಜ
ನಟಸಾರ್ವಭೌಮ **ರಾಜ್‌ಕುಮಾರ್** ನಟಿಸಿರುವ
ರಮೇಶ್ ಮೂವೀಸ್ ರವರ

ಮಯೂರ

ಹಿರಿಯ ಸಾಹಿತಿ
"**ದೇವುಡು**" ರವರ
ಕಾದಂಬರಿ ಆಧಾರಿತ

ಈಸ್ಟ್‌ಮನ್ ಕಲರ್

ನಿರ್ಮಾಪಕ:
ಟಿ.ಪಿ.ವೇಣುಗೋಪಾಲ್ M.A.

ನಿರ್ದೇಶಕ:
ವಿಜಯ್

ಪಂಭಾಷಣೆ:ಚಿ.ಉದಯಶಂಕರ
ಸಂಗೀತ:ಜಿ.ಕೆ.ವೆಂಕಟೇಶ್
ಛಾಯಾಗ್ರಹಣ:ಅಣ್ಣಯ್ಯ




ಮಂಜುಳ
ಆದವಾನಿ ಲಕ್ಷ್ಮೀದೇವಿ
ವಜ್ರಮುನಿ
ತೂಗುದೀಪ ಶ್ರೀನಿವಾಸ್
ಬಿ.ಎಂ.ವೆಂಕಟೇಶ್
ಕೆ.ಎಸ್.ಅಶ್ವತ್ಥ್
ರಾಜಾಶಂಕರ್

ಮಯೂರ ಮೂವೀಸ್ ಹಂಚಿಕೆ

ಉತ್ತರ ಕರ್ನಾಟಕಕ್ಕೆ ಹಂಚಿಕೆದಾರರು ಮಾಡರ್ನ ಮೂವ್ಹೀಸ ಹುಬ್ಬಳ್ಳಿ





ಬೆಲೆಯನ್ನು ಹೋಲಿಸಿ
ಗುಣವನ್ನು ಪರೀಕ್ಷಿಸಿ

ಹೊಸ

ಪಾಯಿಂಟ್

ಶ್ರೇಷ್ಠ ತರಗತಿಯ
ಡಿಟರ್ಜೆಂಟ್ ವಾಷಿಂಗ್ ಪೌಡರ್



ಬೆಲೆ ಪಟ್ಟಿ

ಪ್ಯಾಕಿನ ಮೇಲೆ ನಮೂದಿಸಿರುವ ಬೆಲೆಯಲ್ಲಿ ಸ್ಥಳೀಯ-ತೆರಿಗೆಗಳನ್ನು ಸೇರಿಸಿಲ್ಲ: ಈ ತೆರಿಗೆಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಿರುತ್ತದೆ.
ಬೆಂಗಳೂರಿನಲ್ಲಿ ಪಾಯಿಂಟ್ ಮಾರುವ ಬೆಲೆಗಳನ್ನು ಇಲ್ಲಿ ಕೊಡಲಾಗಿದೆ. ಇತರ ಬೆಲೆಗಳೊಂದಿಗೆ ಹೋಲಿಸಿ ನೋಡಿ.

ಪಾಯಿಂಟ್	750 ಗ್ರಾಂ	550 ಗ್ರಾಂ	200 ಗ್ರಾಂ
ಗರಿಷ್ಠ ಬೆಲೆ (ಸ್ಥಳೀಯ ತೆರಿಗೆಗಳು ಪ್ರತ್ಯೇಕ)	8.90	6.80	2.63
ಕಡೆಗೆ ಮಾರುವ ಬೆಲೆ (ಎಲ್ಲವೂ ಸೇರಿ)	9.30	7.10	2.75

ಬೆಂಗಳೂರಿನ
ಸರಕಾರಿ ಸಾಬೂನು ಕಾರ್ಖಾನೆಯ
ಒಂದು ಶ್ರೇಷ್ಠ ತಯಾರಿಕೆ.

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ರೈತಬಾಂಧವರಿಗೂ ಮತ್ತು ಹಿತೈಷಿಗಳಿಗೂ ಸುಖಪ್ರದವಾಗಲಿ !

ವಿ ಶೇ ಷ ಸೂ ಚ ನೆ :

ನಮ್ಮ "ಜೈಕಿಸಾನ" ಟ್ರೇಲರಗಳು



೨ ಗಾಲಿಯ ನಾನ್ ಟಿಪಿಂಗ್ ಟ್ರೇಲರ್

ಯಾವದೇ ಬ್ಯಾಂಕಿನಿಂದ ವ ತಗಾಯಿ ಸಾಲ ಹಾಗೂ ಕರ್ನಾಟಕ ಸ್ಟೇಟ್ ಆಗ್ರೋ ಇಂಡಸ್ಟ್ರೀಜ ಕಾರ್ಪೊರೇಷನ್ ಮುಖಾಂತರ ಮಂಜೂರು ಮಾಡಲ್ಪಡುತ್ತವೆ.



೪ ಗಾಲಿಯ ಸ್ಪ್ರಿಂಗ್ ಟ್ರೇಲರ್

ಟ್ರ್ಯಾಕ್ಟರ್ ಟ್ರೇಲರ್ ಸ್ಟೀಲಬಾಡಿ ೧ ಟನ್, ೨ ಟನ್, ೩ ಟನ್, ೫ ಟನ್, ೬ ಟನ್, ೮ ಟನ್, ೧೦ ಟನ್ ಟಿಪಿಂಗ್ ಆ್ಯಂಡ್ ನಾನ್ ಟಿಪಿಂಗ್,

- ★ ಅವಲಕ್ಕಿ ಮಶಿನ್ ವ ಅದರ ಬಿಡಿಭಾಗಗಳು
- ★ ಭತ್ತ ಹುರಿಯುವ ಯಂತ್ರ (PADDY ROSTAR)
- ★ ಒಕ್ಕಲುತನದ ಉಪಕರಣಗಳು (M. B. ಪ್ಲೋ, ೯ ಟನ್ ಸ್ಪ್ರಿಂಗ್ ಟಾಯಿಪ್ ಕಲ್ಟಿವೇಟರ್, ಹರಗುವ ಕುಂಟಿ, ಲೇವ್ಹಲರ್ ಮುಂತಾದವುಗಳು) ಮತ್ತು ಅವುಗಳ ಬಿಡಿಭಾಗಗಳು.



ಅವಲಕ್ಕಿ ಮಶೀನ

ತಯಾರಕರು :

Phone: Gokul Road 2239, Old Hubli 2152

ಕರ್ನಾಟಕ ಇಂಜನೀಯರಿಂಗ್ ವರ್ಕ್ಸ

ಹಳೇ-ಹುಬ್ಬಳ್ಳಿ ಪೂಲಿನ ಹತ್ತಿರ, ಹುಬ್ಬಳ್ಳಿ (Karnatak State)

ವಿ.ಸೂ. : ರಾಯಚೂರ, ಬಳ್ಳಾರಿ ಮತ್ತು ಗುಲಬರ್ಗಾ ಜಿಲ್ಲೆಗಳಿಗೆ M/s. ಆನಂದ ಎಂಟರಪ್ರಾಯಿಸಸ್ ಹಂಪಿರೋಡ. ಹೊಸಪೇಟೆ ಇವರನ್ನು ಅಧಿಕೃತ ವಿತರಕರನ್ನಾಗಿ ನೇಮಿಸಿದೇವೆ- ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ.

ನಮ್ಮೆಲ್ಲ ಗ್ರಾಹಕರಿಗೆ
ದೀಪಾವಳಿಯ ಶುಭಾಶಯಗಳು!

ಸ್ಥಾಪನೆ— 1920

ದಿ ಕೆನರಾ ಡಿಸ್ಟ್ರಿಕ್ಟ ಸೆಂಟ್ರಲ್ ಕೋ-ಆಪರೇಟಿವ್ಹ ಬ್ಯಾಂಕ ಲಿಮಿಟೆಡ್

ಪ್ರಧಾನ ಕಚೇರಿ-ಶಿರ್ಶಿ

ಜಿಲ್ಲಾದ್ಯಂತ - 5 ಶಾಖೆಗಳುಳ್ಳ
ಜಿಲ್ಲೆಯ ಜನಪ್ರಿಯ ಹಿರಿಯ
ಸಹಕಾರೀ ಕೇಂದ್ರ ಬ್ಯಾಂಕು

ಠೇವುದಾರರ ಸನ್ಮಿತ್ರ ಹಾಗೂ
ಜನತೆಯ ವಿಶ್ವಾಸಾರ್ಹ ಬ್ಯಾಂಕು

ದುಡಿಯುವ ಭಾಂಡವಲು ರೂ. ೧.00
ಕೋಟಿಗೆ ಮಿಕ್ಕಿದೆ

ಅಧಿಕ ಬಡ್ಡೀತರುವ ನಮ್ಮ ವಿವಿಧ
ಠೇವುಗಳಲ್ಲಿ ನಿಮ್ಮ ಉಳಿತಾಯವನ್ನು
ಠೇವಾಗಿಡಿರಿ.

ಕ್ಯಾಶ ಸರ್ಟಿಫಿಕೇಟುಗಳ ಮೇಲೆ 35% ವರೆಗೆ
ಬಡ್ಡಿ ಸಿಗುತ್ತದೆ.

ನೀವು ತೊಡಗಿಸಿದ ರೂ. 1000-00 ಚಕ್ರ ಬಡ್ಡಿ ಸೇರಿ
80 ತಿಂಗಳಲ್ಲಿ ರೂ. 2000-00ವಾಗಿ ಬೆಳೆಯುತ್ತದೆ
160 ತಿಂಗಳಲ್ಲಿ ರೂ. 4000-00ವಾಗಿ ಬೆಳೆಯುತ್ತದೆ
240 ತಿಂಗಳಲ್ಲಿ ರೂ. 8000-00ವಾಗಿ ಬೆಳೆಯುತ್ತದ

ರೂ. 5000-00 ಕಲ್ಯಾಣ ಸರ್ಟಿಫಿಕೇಟಿನಲ್ಲಿ
ಠೇವಾಗಿರಿಸಿದರೆ —
ಪ್ರತಿ ತಿಂಗಳೂ ರೂ. 42-70 ಬಡ್ಡಿ
ಪಡೆಯಬಹದು.

ಮುದ್ದತ್ತಿ ಠೇವುಗಳ ಮೇಲೆ ಶೇಕಡಾ 10% ವರೆಗೆ
ಅತ್ಯಾಕರ್ಷಕ ಬಡ್ಡಿ ಸಿಗುವದು.

- ವಿವರಗಳಿಗಾಗಿ ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ -
ಉಳಿತಾಯವೇ ನಿಮ್ಮ ಭವಿಷ್ಯದ ರಕ್ಷಾಕವಚ

ನಮ್ಮ ಸಿರಸಿ ಹೆಡ್ ಆಫೀಸಿನಲ್ಲಿ ಮತ್ತು ದಾಂಡೇಲಿ ಶಾಖೆಯಲ್ಲಿ
ಹೊಸದಾಗಿ ಸೇಫ ಡಿಪೋಜಿಟ್ ಲಾಕರುಗಳ ವ್ಯವಸ್ಥೆ ಮಾಡಿದ್ದು
ಗ್ರಾಹಕರು ಇದರ ಪ್ರಯೋಜನ ಪಡೆಯಬಹುದು.

ನೀವು ಠೇವಾಗಿಟ್ಟ ಹಣ ನಮ್ಮ ಜಿಲ್ಲೆಯ ಕೃಷಿ ಹಾಗೂ
ಆರ್ಥಿಕ ಅಭಿವೃದ್ಧಿಗೆ ನೆರವಾಗುವದು.

ಎಸ್. ಪಿ. ಗಾಂವಕರ	ಆರ್. ಎಸ್. ಭಾಗವತ
B-Com-H-D-C- CAIIB-	LLB-
ಕಾರ್ಯದರ್ಶಿ	ಚೇರಮನ

ದೀಪಾವಳಿ ಶುಭಾಶಯಗಳು

ಕಾಮಧೇನು ಕೋ ಆಪ್ ಡೇರಿ ಆ್ಯಂಡ ಫ್ರುಟ್ ಪ್ರೊಸೆಸಿಂಗ್ ಸೊಸೈಟಿ ಲಿ. ಶಿರ್ಶಿ

(ಉ. ಕ.)

ಕರ್ನಾಟಕದ ಸಹಕಾರ ರಂಗದಲ್ಲಿಯ ಪ್ರಖ್ಯಾತ "ಕ್ಯಾನರರು" ಯಾವಾಗಲೂ ಸ್ವಾದಿಷ್ಟ "ಕಾಮಕೋ" ತಯಾರಿಕೆಯ ಪಾಯಿನ್ ಆ್ಯಪಲ್, ಸ್ಲಾಯಿಸ್. ಟಿಟ್‌ಬಿಟ್ಸ 'ಜೂಸ್, ನೆಕ್ಟಾರ್, ಜಾಮ್, ಸ್ಕ್ವ್ಯಾಶ್ ಮತ್ತು ಕ್ರಶ್ ಇವುಗಳನ್ನೇ ಉಪಯೋಗಿಸಿರಿ "ಕ್ಯಾಮ್‌ಕೋ"ದ ಮಾವಿನಹಣ್ಣು ಮತ್ತು ಟೊಮ್ಯಾಟೊ ಸಿದ್ಧವಸ್ತುಗಳನ್ನು ನಿರೀಕ್ಷಿಸಿರಿ. "ಕ್ಯಾಮಕೊ" ಸಿದ್ಧ ವಸ್ತುಗಳು ನಮ್ಮ ಸ್ವಂತದ ಹಣ್ಣಿನ ತೋಟದಿಂದ ಆರಿಸಿತಂದ ಪರಿಶುದ್ಧ ಹಣ್ಣುಗಳಿಂದ ಆರೋಗ್ಯ ವಿಜ್ಞಾನದ ಪ್ರಕಾರ ತಯಾರಿಸಲ್ಪಟ್ಟಿರುತ್ತವೆ. ಮತ್ತ ಎಲ್ಲ ನಮೂನೆಯ ಸ್ಯಾನಿಟರಿ ಡಬ್ಬಿ ಮತ್ತು ಸೀಸೆಗಳಲ್ಲಿ ಪ್ಯಾಕ್ ಮಾಡಲ್ಪಟ್ಟಿರುತ್ತವೆ. "ಕ್ಯಾಮಕೊ" ಸಿದ್ಧ ವಸ್ತುಗಳು ನಿಯಮಿತವಾಗಿ ದೊಡ್ಡ ಪ್ರಮಾಣದಲ್ಲಿ ಬರ್ಲಿನ್‌ಗೆ ರಫ್ತು ಆಗುತ್ತವೆ. ಸೇಲ್ಸ ಡಿಪೋ ಇದ್ದ ಸ್ಥಳ.

ಬ್ಲುಮೂನ್ ಕಾಂಪ್ಲೆಕ್ಸ ಚರ್ಚಸ್ಟ್ರೀಟ, ಬೆಂಗಳೂರು

ವ್ಹಿ. ಎಂ. ಹಗ್ಡೆ	ಎಂ. ಎಸ್. ಭಟ್ ಗುಂಜಗೋಡ
ಎಂ. ಕಾಮ್.	ಎಂ. ಎ. ಎಲ್. ಎಲ್. ಬಿ.
ಸೆಕ್ರೆಟರಿ	ಅಧ್ಯಕ್ಷರು

ದೀಪಾವಳಿಯ ಹಾರ್ದಿಕ ಅಭಿನಂದನೆಗಳು!

ಆಶೀರ್ವಾದ ಇಲೆಕ್ಟ್ರೋನಿಕ್ಸ

8. H. D.M. C. ಬಿಲ್ಡಿಂಗ್ ವ್ಯಾಪಾರ ಓಣಿ,
ಹುಬ್ಬಳ್ಳಿ-೨೦

ನಮ್ಮಲ್ಲಿ ರೇಡಿಯೋ, ಟ್ರಾನ್ಸಿಸ್ಟರ್, ಫ್ಯಾನು ಇಲೆಕ್ಟ್ರಿಕ್ ಅಪ್ಲಾಯಿನ್ಸ್‌ಗಳು ಯೋಗ್ಯ ಬೆಲೆಗೆ ಸಿಗುತ್ತವೆ. ಹಾಗು ಎಲ್ಲ ತರಹದ ರಿಪೇರಿ ಕೆಲಸವನ್ನು ನುರಿತ ಇಂಜನೀಯರರಿಂದ, ವೇಳೆಗೆ ಸರಿಯಾಗಿ ಮಾಡಿಕೊಡುತ್ತೇವೆ.

ನಮ್ಮೆಲ್ಲ ಚಲಚಿತ್ರ ಪ್ರೇಮಿಗಳಿಗೆ ಚಿತ್ರ ನಿರ್ಮಾಪಕರಿಗೆ ಚಿತ್ರ ಪ್ರದರ್ಶಕರಿಗೆ
ದಿವ್ಯ ದೀಪಾವಳಿಯ ಹಾರ್ದಿಕ ಶುಭಾಶಯಗಳು !!

ಕರ್ನಾಟಕದ ನಿಮ್ಮ ನೆಚ್ಚಿನ

ಚಿತ್ರಮಂದಿರಗಳಲ್ಲಿ ತಪ್ಪದೇ ನೋಡಿರಿ

ತನ್ನ ತಂದೆಯ ಕೊಲೆಪಾತಕನನ್ನು ಹುಡುಕಲು ಹೊರಟವನು ಕಳ್ಳಸಾಗಾಣಿಕೆಯ ಅಫೀಮು ಮಾರಾಟಗಾರರ ಕೈಯಲ್ಲಿ ಸಿಕ್ಕು ಪರದಾಡಿದ ರೋಮಾಂಚಕಾರಿ ಸಾಹಸಪೂರ್ಣ ಮೈನವಿರೇಳುವ ಹಿಂದೀ ಚಿತ್ರ.



ಕನ್ನಡ ಕುಲಕೋಟಿಗೆ ದೀಪಾವಳಿಯ ಸವಿನೆನಪಿನ ಅಪೂರ್ವ ಮನರಂಜನೆ



INDEX TO ADVERTISERS

ಪರಿವಿಡಿ

ವ್ಯವಸ್ಥಾಪಕ ಸಂಪಾದಕರು :
ರಂಗನಾಥ ದಿವಾಕರ
ಪ್ರಧಾನ ಸಂಪಾದಕರು :
ಖಾದ್ರಿ ಶಾಮಣ್ಣ
ಸಹಸಂಪಾದಕರು :
ಎಸ್. ವಿ. ಪಾಟೀಲ

ಕರ್ಮವೀರ

ದೀಪಾವಳಿ ಸಂಚಿಕೆ
೧೯೭೫

ನಮ್ಮ ನುಡಿ

"ಕರ್ಮವೀರ" ಹೊಸ ಆಡಳಿತಕ್ಕೆ ಒಳಪಟ್ಟ ಬಳಿಕ ಇದು ಮೊದಲ ದೀಪಾವಳಿ ವಿಶೇಷಾಂಕ. ಇದು ಅಂತಾರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಹೊರಬರುತ್ತಿರುವುದು ಮತ್ತೂ ಒಂದು ವಿಶೇಷ. ಮಹಿಳೆಯ ಏಳಿಗೆ ಕುರಿತು ಮಹಿಳೆಯರೂ, ಮಹನೀಯರೂ ತಮ್ಮ ವಿಚಾರ ಬಿತ್ತರಿಸಿದ್ದಾರೆ. ಉಳಿದಂತೆ ಯಥಾರೀತಿಯ ಬಾಗಿನವೂ ಇದರೊಂದಿಗೆ ಇದೆ.

ನಮ್ಮ ಓದುಗರಲ್ಲಿ ಸಾಕಷ್ಟು ಮಂದಿ ಭಗಿನಿಯರು. ಅವರು ಕಥೆ ಕಾದಂಬರಿ ಮಾತ್ರ ಓದಿ ಮನರಂಜಿಸಿಕೊಂಡರೆ ಸಾಲದು. ವಿಚಾರವನ್ನು ತಿಳಿದುಕೊಳ್ಳಬೇಕು. ತಮಗೆ ಸಂಬಂಧಿಸಿದ ವಿಚಾರಪ್ರವಾಹವನ್ನು ಅವಶ್ಯ ಗುರುತಿಸಿಕೊಳ್ಳಬೇಕು.

ಇಂದಿನ ನಾರಿಗೆ ಬಿಡುಗಡೆಯ ಅಮೃತಗಳಿಗೆ ಸಮೀಪಿಸುತ್ತಿದೆ. ಅದು ಹೊರಗಿನಿಂದ ಬಾರದು. ಆಕೆಯ ತನ್ನತನದ ಅರಿವಿನಿಂದ ಮಾತ್ರವೇ ಅದು ಮೂಡಿ ಬರಬಲ್ಲದು. ನಾರೀ ವಿಮೋಚನೆಯಿಂದ ಕೇವಲ ಆಕೆಯ ಮುಕ್ತಿ ಎಂದು ಮಾತ್ರವೇ ತಿಳಿಯತಕ್ಕದ್ದಲ್ಲ. ಅದರಲ್ಲಿ ಪುರುಷನಿಗೆ ಪಾಶವೀಯತೆ ಯಿಂದಲೂ ಬಿಡುಗಡೆ ಇದೆ.

ಸ್ತ್ರೀಯರ ಬಿಡುಗಡೆಯ ಹೋರಾಟದಲ್ಲಿ ಸಮಾಜದ ಸ್ವಾಸ್ಥ್ಯದ ಪರಮ ಪ್ರಶ್ನೆ ಅಡಗಿದೆ. ಇಂದಿನ ಏರುಪೇರನ್ನು ಸರಿಪಡಿಸುವ ಮಹಾಪ್ರಯತ್ನ ಅದು. ಪಾರ್ಶ್ವವಾಯು ಪೀಡಿತ ಒಂದರ್ಧಕ್ಕೆ ನಡೆಸುವ ಕಾಯಕಲ್ಪ. ಸಮಾಜಕ್ಕೆ ಸಹಜತೆಯನ್ನು ಕುದುರಿಸುವ ಕೆಲಸ.

ನಿಸರ್ಗ ಕಲ್ಪಿಸಿರುವ ಒಂದು ಅಂತರ ಬಿಟ್ಟರೆ ಬೌದ್ಧಿಕವಾಗಿ ಸ್ತ್ರೀ-ಪುರುಷರಲ್ಲಿ ಯಾವ ಭೇದಕ್ಕೂ ಎಡೆ ಇಲ್ಲ. ಸಮಾನತೆ ಎಂದರೆ ಪೈಪೋಟಿಯಲ್ಲ, ಪರಸ್ಪರ ಪೂರಕ ಪ್ರವೃತ್ತಿ, ಪ್ರಕ್ರಿಯೆ. ಗಂಡು ಹೆಣ್ಣು ಎರಡೂ ಸೇರಿದರೆ ಅದು ಬಾಳುವೆ, ಪ್ರಪಂಚ. ಒಂದನ್ನು ಬಿಟ್ಟು ಮತ್ತೊಂದಿಲ್ಲ. ಆದರೆ ಈ ನಿತ್ಯ ಸತ್ಯದ ಮನವರಿಕೆ ಇಂದಿನ ಸಾಮಾಜಿಕ, ಕೌಟುಂಬಿಕ, ಆರ್ಥಿಕ ನಡೆಯಲ್ಲಿ ಮೂಡಿಬರುತ್ತಿಲ್ಲ. ಇದೇ ಮೂಲ ತೊಡಕು.

ನಾರಿ ಇಂದು ಸಮಾಜದ ಅತಿ ಹಿಂದುಳಿದ, ಅವಿಕಸಿತ ವರ್ಗ. ನಾನಾ ರೀತಿ ತುಳಿತಕ್ಕೆ ಸಿಕ್ಕ ಸಮೂಹ. ಸ್ತ್ರೀ ಶಕ್ತಿಯ ಅವತಾರಕ್ಕೆ ಸಮಾನ ಅವಕಾಶ ಸಾಲದು, ವಿಶೇಷ ಅವಕಾಶವೇ ಬೇಕು. ಶತಮಾನಗಳ ದೌರ್ಜನ್ಯದ ಕಲಂಕ ತೊಳೆದುಕೊಳ್ಳುವ ಪ್ರಾಯಶ್ಚಿತ್ತರೂಪದ ಕೆಲಸ ಗಂಡಸಿನಿಂದ ಆಗಬೇಕು. ರಾಜಾ ರಾಮಮೋಹನರಾಯ್, ಮಹರ್ಷಿಕರ್ವೆ, ಮಹಾತ್ಮಾ ಗಾಂಧೀ ಈ ದಾರಿ ತೋರಿದ್ದಾರೆ. ಅದರಲ್ಲಿ ಅಡಿ ಇಡುವುದೇ ಆದ್ಯಕರ್ತವ್ಯ, ಪವಿತ್ರ ಧರ್ಮ.

ಪ್ರಧಾನ ಸಂಪಾದಕ



ಹೆಜ್ಜೆಗೆ ಪ್ರಾರಂಭಿಸುವ ಮುನ್ನ



ನೃತ್ಯದ ಒಂದು ವಿಶೇಷ ಭಂಗಿಯಲ್ಲಿ ಇಂದಿರಾ ಮುತ್ತಣ್ಣ.

ಈ ಸಂಚಿಕೆಯ ರಕ್ಷಾಪುಟದಲ್ಲಿ ರಂಜಿಸಿರುವ

ಕುಮಾರಿ ಇಂದಿರಾ ಮುತ್ತಣ್ಣ

ಎಸ್. ಪಿ. ದೇಸಾಯಿ

ಭರತನಾಟ್ಯದ ಕೆಲವೇ ಪ್ರಸಿದ್ಧ ಕನ್ನಡ ನೃತ್ಯಗಾತಿಯರಲ್ಲಿ ಕುಮಾರಿ ಇಂದಿರಾ ಮುತ್ತಣ್ಣ ಒಬ್ಬರು.

೨೧ರ ತರುಣಿ ಇಂದಿರಾ, ಶ್ರೀಮತಿ ರಮಣಿ ಮುತ್ತಣ್ಣ ಮತ್ತು ಮುಂಬೈ ಟೆಲಿಫೋನ್ಸ ಜನರಲ್ ಮ್ಯಾನೇಜರ ಶ್ರೀ ಎಮ್. ಎಸ್. ಮುತ್ತಣ್ಣ ಅವರ ಆದರ್ಶಪುತ್ರಿ. ತಂದೆ—ತಾಯಿಯರ ಕಲಾಭಿರುಚಿಯೇ ಇಂದಿರಾಳನ್ನು ಈ ಚಿಕ್ಕ ವಯಸ್ಸಿನಲ್ಲಿಯೇ ಪ್ರಸಿದ್ಧಿಗೆ ತರಲು ಅನುವಾಯಿತು.

ನೃತ್ಯದಲ್ಲಿ ಇಂದಿರಾ ಎಷ್ಟು ಪ್ರವೀಣೆಯೋ ಕಾಲೇಜು ಅಭ್ಯಾಸದಲ್ಲಿಯೂ ಅಷ್ಟೇ ಪ್ರತಿಭಾವಂತೆ. ಸದ್ಯ ಮುಂಬೈ ವಿಶ್ವವಿದ್ಯಾಲಯದ ಎಂ. ಎ. (ಇತಿಹಾಸ) ವಿದ್ಯಾರ್ಥಿನಿ. ಇನ್ನೊಂದು ವಿಶೇಷ ವೆಂದರೆ ಕಾಲೇಜು ಅಭ್ಯಾಸಗಳೊಂದಿಗೆ ಗೃಹಕೃತ್ಯ ಅಭ್ಯಾಸಗಳಲ್ಲಿಯೂ ಅವಳಿಗೆ ಆಸಕ್ತಿ. [illegible] ಕುಕರಿ ಕೋರ್ಸ ಮತ್ತು ಹೌಸ ವಾಯಿವ್ಸ ಬೇಕರಿ ಎಂಡ್ ಫುಡ್ ಪ್ರಿಸರ್ವೇಶನ್ ಕೋರ್ಸಗಳನ್ನು ಕಾಲೇಜ ಆಫ್ ಕ್ಯಾಟರಿಂಗ ಟೆಕ್ನಾಲಜಿ ಅಂಡ ಅಪ್ಲೈಡ ನ್ಯೂಟ್ರಿಶನ್ ಮುಂಬೆ ಈ ಸಂಸ್ಥೆಯಿಂದ ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿದ್ದಾಳೆ.

ನೃತ್ಯಕಲೆಯೊಂದಿಗೆ ರೂಪದರ್ಶಿನಿಯಾಗಿ ಛಾಯಾಚಿತ್ರಕ್ಕಾಗಿ ವಿವಿಧ ಭಂಗಿಗಳನ್ನು ಒದಗಿಸುವದು ಅವಳ ಇನ್ನೊಂದು ಹವ್ಯಾಸ.

ಭಾರತ ಸುಂದರಿ

೧೯೭೨ರಲ್ಲಿ ಈವ್ಸ ವೀಕ್ಲಿಯವರು ಏರ್ಪಡಿಸಿದ ಸೌಂದರ್ಯ ಸ್ಪರ್ಧೆಯಲ್ಲಿ ಇಂದಿರಾಗೆ 'ಮಿಸ್ ಇಂಡಿಯಾ' (ಭಾರತ ಸುಂದರಿ) ಪ್ರಶಸ್ತಿ. ಇದೇರೀತಿ 'ನೇವಿ ಬಾಲ್' 'ಮಿಸ್ ಕೊಕಾಕೋಲಾ ಮುಂತಾದ ಸೌಂದರ್ಯ ಸ್ಪರ್ಧೆಗಳಲ್ಲಿ ಆಕೆ ಬಹುಮಾನಿತೆ.

ಟೋಕಿಯೋದಲ್ಲಿ ನಡೆದ 'ಮಿಸ್ ಇಂಟರ್‌ನ್ಯಾಶನಲ್ ಕಾಂಟೆಸ್ಟ'ಗೆ ಸ್ಪರ್ಧಿಸಿದಾಗ ಅವಳಿಗೆ 'ಉತ್ತಮ ವೇಷ ಭೂಷಣ'ಕ್ಕಾಗಿ ಪಾರಿತೋಷಕ.

ಸೌಂದರ್ಯವನ್ನು ನಿಸರ್ಗ ನೀಡುತ್ತದೆ, ಸ್ವಭಾವ ನಮ್ಮ ನಡತೆಯಿಂದ ತಿಳಿಯುತ್ತದೆ. ಇಂದಿರಾ ಸರಳ ಸ್ವಭಾವಿ ನಿಗರ್ವಿ. ಅಂತಲೇ ಕರ್ಮವೀರದ ರಕ್ಷಾಪುಟ ಮುತ್ತಿತರ ವಿಷಯವಾಗಿ ನಾನು ನಾಲ್ಕಾರು ಬಾರಿ ಭೇಟಿಯಾದರೂ ಇಂದಿರಾ ಬೇಸರಿಸಲಿಲ್ಲ. ಸದಾ ನಗುಮೊಗದಿಂದಲೇ ಸಹಕರಿಸಿದಳು.

ಇಂದು ಇಂದಿರಾ ಪರಿಪೂರ್ಣ ಭರತ ನಾಟ್ಯ ಕಲಾವಿದೆ—ಆದರೂ ತಾನು ನೃತ್ಯ ಕಲಿತ, ರಾಜರಾಜೇಶ್ವರಿ ಭರತ ನಾಟ್ಯ ಶಾಲೆಯ, ವಿದ್ಯಾರ್ಥಿನಿಯೆಂದು ಇಂದಿಗೂ ಅಭಿಮಾನ ಪಡುತ್ತಾಳೆ. ಇದು, ಅವಳು ಗುರುಗಳಲ್ಲಿಟ್ಟ ಭಕ್ತಿಯ ಚಿಹ್ನೆ.

ವನಸುಮ—ಭ್ರಮರ ಗೀತ

ವನಸುಮಗಳು: ಕಮಲಿನೀ ಮಧುಪಿಪಾಸೂ ಮಧುಕರ,
ನಮ್ಮೆಡೆಯೂ ನೀ
ಬಯಸಿಹ ಮಧುವಿದೆ ಕೋ ಕೋ ಕೋ
ಚೈತ್ರ ಚೈತ್ರ ಚಾರಣ ಷಟ್ ಚರಣ
ಅಮೃತ ಸಂದೇಶಧರ ಶುಭಕರಣ
ನಿನ್ನ ಝೇಂಕರಣ ತರುತಿಹುದು ಅವುದೋ ಸ್ಮರಣ
ಮಧುಕರ—
—ಕಮಲಿನೀ ಮಧುಪಿಪಾಸೂ ಮಧುಕರ—

ಭ್ರಮರ: ಅಹಾ, ನನ್ನ ಕಮಲವನಕೆ ಬಳಿ ಎಲ್ಲಿ?
ತಡೆಯುತಿಹವು ಕಾಡು ಹೂ ಬಳ್ಳಿ
ಹೋಹೆನೆಂತು ಅತ್ತ ಡೆಗಿವ ತಳ್ಳಿ-
ಅಹಾ ನನ್ನ ಕಮಲವನಕೆ ಬಳಿ ಎಲ್ಲಿ?

ವನಸುಮಗಳು: ಓ ಕಮಲಿನೀ ಮಧುಪಿಪಾಸೂ ಮಧುಕರ
ನಿನ್ನ ಪ್ರೇಮಭರ ಝೇಂಕಾರವತಿ ಮಧುರ—
ನಿನಗೆಮ್ಮ ರಂಗು ಸೇರದೇ ಭೃಂಗ?
ಸಾವೆನ್ನೆ ಆಗದಿರೆ ನಿನಸಂಗ
ತಂಗು ತಂಗು ತುಸ ತಂಗಿ ತುಟಿ ಸವಿದು ಹೋಗು
ಇಂದು ನನಸಾಗಿ ಮುಂದೆಮ್ಮ ಸವಿಯು ಕನಸಾಗು—
ಮಧುಕರ—
—ಕಮಲಿನೀ ಮಧುಪಿಪಾಸೂ ಮಧುಕರ—

ಭ್ರಮರ: ಹಾ ಹಾ ಬಿದ್ದೆ ನಾ ಬಿದ್ದೆ ನಾಣ್ಗೇಡಿ ಹೂಗೇರಿಯೊಳಗೆ
ಎಂತು ಪಾರಾಗಿ ಹೋಗುವೆನು ಹೊರಗೆ—
ಮುಟ್ಟೆ ನಿಮ್ಮ ಚಿಟ್ಟೆಯೊಲಿವ ಹೂಗಳೇ ಬಿಡಿದಾರಿ
ಕಮಲವನದ ಹನಿ ಕುಡಿದು ಹೋಗುತಿದೆ ಹೊತ್ತೇರಿ
ಅಹಾ ಕೂಗುತಿದೆ ಕರೆಯುತಿದೆ ಅರಳಿದರವಿಂದ
ಅಲ್ಲಿನಗೆ ಸ್ವರ್ಣ ಪೀತ ಮಧುರ ಮಕರಂದ
ದಾರಿ ದಾರಿ, ಬಿಡಿದಾರಿ, ನಡೆಗಡ್ಡ ಬರದೆ ಬಿಡಿದಾರಿ
ಕಮಲವನದಿ ಹನಿ ಕುಡಿದು ಹೋಗುತಿದೆ ಹೊತ್ತೇರಿ

ವನಸುಮಗಳು: ಓ ಕಮಲಿನೀ ಮಧುಪಿಪಾಸೂ ಮಧುಕರ
ಎದೆತೆರೆದು ಯಿರಿಯುತಿಹುದು ನಿನ್ನ ಝೇಂಕಾರ
ತಂಗು ತಂಗು ತುಸತಂಗಿ ಸಾಗು ಸವಿಗಾರ
ಓ ಕಮಲಿನೀ ಮಧುಪಿಪಾಸೂ ಮಧುಕರ

ಭ್ರಮರ } ವನಸುಮಗಳು } ನಾಣ್ಗೇಡಿ ವನಸುಮಗಳೇ ಬಿಡಿದಾರಿ
ಕಮಲವನಕೆ ಬಿಡಿದಾರಿ
ಓ ಕಮಲಿನೀ ಮಧುಪಿಪಾಸೂ ಮಧುಕರ
ತಂಗು ತಂಗು ತುಸತಂಗಿ ಸುಖಿಸು ನಮ್ಮ ಸೇರಿ


ಪು. ತಿ. ನ.

ಸಂದರ್ಶಿತರಿಗೆ ಕೇಳಿದ ಪ್ರಶ್ನೆಗಳು

೧) ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲವೆ? ಅವರು ಪುರುಷರಿಂದ ಬಯಸುವದು ಶರಣಾಗತಿಯೋ ಸಮಾನತೆಯೋ? ಅಥವಾ ಮತ್ತೇನು?

೨) ವರದಕ್ಷಿಣೆ, ಕನ್ಯಾಶುಲ್ಕ ಮೊದಲಾದ ಪದ್ಧತಿಗಳನ್ನು ದೂರ ಮಾಡಲು ಸ್ತ್ರೀಯರು ಕೈಕೊಳ್ಳುವ ಕ್ರಮಗಳೇನು? ಅದಕ್ಕೆ ಪುರುಷರ ಪ್ರತಿಕ್ರಿಯೆ ಎಂತಿದೆ?

೩) ಮಹಿಳೆಯರ ಜಾಗೃತಿ ಎಂತು?



ದ. ರಾ. ಬೇಂದ್ರೆ



ಬೆಟಗೇರಿ ಕೃಷ್ಣಶರ್ಮ.

ಸ್ತ್ರೀ ಸ್ವಾತಂತ್ರ್ಯ-ಸಮಾನತೆ,

ಸಂದರ್ಶನ, ನಿರೂಪಣೆ :

ಇದು ಅಂತಾರಾಷ್ಟ್ರೀಯ ಮಹಿಳಾ ವರ್ಷ. ಜಗತ್ತಿನಾದ್ಯಂತ ಸಭೆ ಸಮ್ಮೇಳನ, ಚರ್ಚೆ, ವಿಚಾರಗೋಷ್ಠಿ. ಎಲ್ಲೆಡೆಯೂ ಒಂದೇ ಒಂದು ಪ್ರಶ್ನೆ, ಇಂದಿನ ಮಹಿಳೆ ಸ್ವತಂತ್ರಳೆ? ಮನು ಧರ್ಮಶಾಸ್ತ್ರದಲ್ಲಿ ಹೆಂಗಸಿಗೆ ಸ್ವಾತಂತ್ರ್ಯಸಲ್ಲದು ಎಂಬ ಒಂದು ಮಾತಿದೆ. ಇದು ಅತ್ಯಂತ ವಿವಾದಾಸ್ಪದ. ಇಂದಿನ ಹೆಣ್ಣು ಎಷ್ಟು ಸ್ವತಂತ್ರಳು? ಎಂಬ ಪ್ರಶ್ನೆಯನ್ನು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಪ್ರಖ್ಯಾತರಾದವರಿಗೆ ಎಸೆಯಲಾಯಿತು.

ಬಿಡಬ್ಯಾಡ್ರಿ

ಕನ್ನಡದ ಶ್ರೇಷ್ಠ ಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ತಮ್ಮದೇ ಆದ ವಿಶಿಷ್ಟ ವಿಶ್ಲೇಷಣೆ ನೀಡಿದರು. ಅವರದೇ ಮಾತಿನಲ್ಲಿ ಓದಿ.

ಗಂಡಸರು ಹೆಂಗಸರಿಗೆ ಅನ್ಯಾಯ ಮಾಡಿದ್ದಾರೆ ಎನ್ನುವುದೊಂದು ತಿಳಿವಳಿಕೆ. ಅದಕ್ಕೆ ಕಾರಣ ಮನು ಒಂದು ವಾಕ್ಯ ಬರೆದ. "ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ" ಎಂದು.

ಆ ಕಾಲಕ್ಕೆ ಅದರ ಅರ್ಥ ಏನಿತ್ತೂ ಅಂದ್ರೆ- ಸ್ತ್ರೀ ನೀ ಹಾಳಾಗೂ ಅಂತ ಆಕಿನ್ನ ಬಿಡಬೇಡ್ರಿ ಲೇಽಽಽ ದುಷ್ಟರ ಜಗತ್ತಿನಲ್ಲಿ ಗುಂಡಾಗಳಿರ್‍ತಾರೆ. ಹುಟ್ಟಿದ ಹೆಣ್ಣಮಗಳನ್ನ ತಂದೆ ತಾಯಿ ಕಾಪಾಡಬೇಕು- ಆಮ್ಯಾಲೆ ಗಂಡ ಕಾಯಬೇಕು-ಅನಂತರ ಮಕ್ಕಳು ಕಾಯಬೇಕು. ಸತ್ತು ಹೋಗೂ ಅಂತ ಬಿಡಬ್ಯಾಡ್ರಿ ಆಕಿನ್ನಽಽ ಅಂತ.

"ಅಂದರೆ... ಆಕೆ ತನ್ನ ರಕ್ಷಣೆ ತಾನೇ ಮಾಡಿಕೊಳ್ಳಲಾರಳೂ ಅಂತ... ನಿಮ್ಮ..."

"ಮಹಿಷಾಸುರ ಆ ದೇವಿ ಮೈಮ್ಯಾಲೇ ಬಂದ. ಈ ಕ್ವಾಣ ಸೂ...ಮಕ್ಕಳು ಹೆಣ್ಣಿನ ಮೈಮ್ಯಾಲ ಬರ್‍ತಾರ ಅಂತ ಅದರ ಅರ್ಥ. ಅದೇನೇ ಇರಲಿ-ನಾ ಏನು ಹೇಳ್ತೇನ್ಽಽ ಅಂದರೆ ಹಳೇ ಕಥೀಗೆ ಹೊಸ ಅರ್ಥ ಹಚ್ಚಬ್ಯಾಡ್ರಿ. ಇಂದು ಆ ಮನೂನ ಮಾತುಬೇಡ, ಅದನ್ನು ಬಿಟ್ಟು ಮಾತಾಡೋಣು. ಆಕೀಮ್ಯಾಲೇ ಜವಾಬ್ದಾರಿ ಒಗೀಬ್ಯಾಡ್ರಿ. ನೀ ಬೇಕಿದ್ರ ಬದುಕು-ಇಲ್ಲದಿದ್ದರೆ ಸಾಯಿ ಅನ್ನಬಾರದು. ಹೆಣ್ಣು ಯಾರ ಆಸ್ತಿನೂ ಅಲ್ಲ. ಆಕೆ ಒಂದು ಭೂಮಿ ಇದ್ದ ಹಾಗೆ. ಯಾರು ಯಾವ ಬೀಜ ಚೆಲ್ಲತಾರ ಆ ಬೆಳಿ ಬೆಳಿತದ. ಬರೀ ಸಮ್ಮೇಳನ, ಸಭೆ, ಚರ್ಚೆ ಮಾಡಿದರ ಏನು ಬಂತು? ಅಲ್ಲಲ್ಲೇ ಐದೈದು ಹಿರಿ ಹೆಣ್ಣಮಕ್ಕಳು, ಕಿರಿ ದಂಪತಿಗಳು ಒಟ್ಟಿಗೆ ಕೂತು ಈ ವಿಷಯ ಚರ್ಚಿಸಲಿ."

ಪರಾಧೀನತೆ

ಸನ್ಯಾಸಾಶ್ರಮದಲ್ಲಿ ಸಾರ ಕಾಣದೇ ಗೃಹಸ್ಥಾಶ್ರಮಕ್ಕೇ ಶರಣು ಹೋದ ಬರಹಗಾರ ಆರ್ಯ ಈ ಸ್ವಾತಂತ್ರ್ಯ ಕುರಿತು ಹೇಳುತ್ತಾರೆ-

"ಮಾನವತಾವಾದ ಬೆಳೆದು, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಅದನ್ನು ಒಪ್ಪಿಕೊಂಡ ಯುಗದಲ್ಲಿ ನಾವಿಂದು ಬದುಕಿದ್ದೇವೆ. ಸಹಜವಾಗಿಯೇ ಪ್ರತಿಯೊಬ್ಬ ವ್ಯಕ್ತಿಗೂ ಜನ್ಮತಃ ಸ್ವಾತಂತ್ರ್ಯವಿದೆಯೆಂದು ಸೈದ್ಧಾಂತಿಕವಾಗಿ ಒಪ್ಪಿಕೊಂಡಿದ್ದೇವೆ. ಆದರೆ ಪ್ರತ್ಯಕ್ಷ ಬದುಕಿನಲ್ಲಿ, ನಮ್ಮ ಭಾರತೀಯ ಪರಿಸರದಲ್ಲಿ ಅದನ್ನು ಎಷ್ಟರ ಮಟ್ಟಿಗೆ ತಂದಿದ್ದೇವೆ ಎನ್ನುವುದು ಪ್ರಶ್ನೆ. ನಮ್ಮ ದೇಶದಲ್ಲಿ ಹಳ್ಳಿಗಳು ಬಹುಸಂಖ್ಯೆಯಲ್ಲಿದ್ದು ಅಲ್ಲಿ ಸ್ತ್ರೀಯರನ್ನು ಪುರುಷರು ಯಾವ ರೀತಿಯಾಗಿ ಪುರುಷರ ಅಧೀನರಾಗಿ ಇಟ್ಟದ್ದಾರೆ ಎಂಬುದು ಎಲ್ಲರಿಗೂ ತಿಳಿದದ್ದೇ. ಪಟ್ಟಣಗಳಲ್ಲೂ ಹೆಚ್ಚು ವ್ಯತ್ಯಾಸವಿಲ್ಲ. ಮನೆ ಮತ್ತು ಹೊರಪ್ರಪಂಚವೆಂಬ ವಿಭಾಗವನ್ನು ಮಾಡಿ, ಹೆಣ್ಣು ಮನೆಯೊಳಗಿರಬೇಕು ಎನ್ನುವ ಮನೋಭಾವವನ್ನು ನಮ್ಮ ಧೀಮಂತರು ಎನ್ನಿಸಿಕೊಳ್ಳುವವರಲ್ಲೂ ಕಾಣುತ್ತೇವೆ. ಇದರಿಂದಾಗಿ ಸ್ತ್ರೀಯರ ಸ್ವಾತಂತ್ರ್ಯಕ್ಕೆ ಮತ್ತು ವಿಚಾರ ಅಭಿವ್ಯಕ್ತಿಗೆ ಅವಕಾಶವೇ ಇಲ್ಲದಾಗಿದೆ. ಈ ಪರಾ

ವಲಂಬನೆ ಮುಖ್ಯವಾಗಿ ಕಂಡುಬರುವುದು ಆರ್ಥಿಕ ರಂಗದಲ್ಲಿ. ಕೊನೆಗೆ ಇದು ಭಾವುಕ ಅವಲಂಬನೆಯವರೆಗೂ ಹಬ್ಬುತ್ತದೆ.


ಸಮಸ್ಯೆಯೇ ಇಲ್ಲ

ಸಾಹಿತ್ಯ ಹಾಗೂ ಪತ್ರಿಕಾವೃತ್ತಿಯಲ್ಲಿ ಬಹುಕಾಲ ಶ್ರಮಿಸಿರುವ ಡಾ॥ ಬೆಟಗೇರಿ ಕೃಷ್ಣಶರ್ಮ ಅವರ ದೃಷ್ಟಿಯಲ್ಲಿ ಐತಿಹಾಸಿಕವಾಗಿ ಮಹಿಳೆಯರ ಸ್ವಾತಂತ್ರ್ಯದ ಸಮಸ್ಯೆ ಎಂಬುದೇ ಇರಲಿಲ್ಲ. ಅವರ ಪ್ರಕಾರ:

"ಸ್ತ್ರೀ ಪುರುಷನಿಗೆ ಸಮಾನಳೇ ಆಗಿದ್ದಾಳೆ. ಹೊರಗೆ ಸಂಪತ್ತಿನ ವ್ಯವಸ್ಥೆ ಪುರುಷನ ಹೊಣೆ. ಮನೆಯ ವ್ಯವಸ್ಥೆ ಹೆಣ್ಣಿನದು. ಮನು ಹೇಳಿದ ಮಾತು ಪಾವಿತ್ರ್ಯ ರಕ್ಷಣೆಯ ಉದ್ದೇಶದಿಂದ ಕೂಡಿದ್ದು ಎಂದು ಅವರ ಅಭಿಮತ. ವಂಶಸಂರಕ್ಷಣೆಗಾಗಿ ಪರಿಶುದ್ಧತೆಯ ರಕ್ಷಣೆಗಾಗಿ, ಸ್ತ್ರೀಯರನ್ನು ಕಾಯ್ದುಕೊಳ್ಳಬೇಕು ಎಂಬುದೇ ಅದರ ಇಂಗಿತ. ಸ್ತ್ರೀಯರಿಗೆ ಸ್ವಾತಂತ್ರವೇ ಇಲ್ಲ ಎಂದು ಆತ ಹೇಳಿರಲಾರ. ಅವರನ್ನು ಸರಿಯಾಗಿ ಇಡಬೇಕು ಎಂದಷ್ಟೇ ಅರ್ಥ. ನಾರಿಯರನ್ನು ಪೂಜಿಸುವಲ್ಲಿ ದೇವತೆಗಳು ನಲಿಯುತ್ತಾರೆ ಎಂದು ಅದೇ ಮನು ಹೇಳಿದ್ದಾನಲ್ಲ! ಸ್ತ್ರೀಯ ಮಾನ ಕಾಯುವುದನ್ನು ಪುರುಷರಿಗೆ ಒಪ್ಪಿಸಿದರು. ಇದು ಬಲಹೀನತೆಯ ಲಕ್ಷಣವಲ್ಲ. ಸ್ತ್ರೀ ಒಂದು ದೇವತೆ, ಶಕ್ತಿದೇವತೆ-ಮೂಲದೇವತೆ, ಪುರುಷ ದೇವತೆಗೂ ಸ್ತ್ರೀ ಶಕ್ತಿ ಬೇಕು. ಇಲ್ಲಿ ಸ್ತ್ರೀಯರ ಪರಾಧೀನತೆಯ ಪ್ರಶ್ನೆ ಇಲ್ಲ.



ಚೆನ್ನವೀರ ಕಣವಿ



ರಾಜಗೋಪಾಲಾಚಾರ್ಯ (ಆರ್ಯ)



ಶಿವಶಂಕರ ಕಣಾಜನವರ.

ಐದು ವ್ಯಕ್ತಿ. ಐದು ದೃಷ್ಟಿ

ಸುಶೀಲಾ ಕೊಪ್ಪರ

ಜನಸಾಮಾನ್ಯರಲ್ಲಂತೂ ಇಬ್ಬರೂ ದುಡಿಯುತ್ತಾರೆ. ಆಳುವಿಕೆ ಇಲ್ಲವೇ ಇಲ್ಲ. ಮೇಲ್ತರಗತಿಯ ಜನರಲ್ಲಿ ಮಾತ್ರ ಈ ಸಮಸ್ಯೆ ಉದ್ಭವಿಸುತ್ತದೆ. ಸ್ತ್ರೀಯರನ್ನು ಉಪಭೋಗ್ಯ ವಸ್ತು ಎಂದು ತಿಳಿದರೆ ಇದೆಲ್ಲ ತೊಡಕು. ಸಾಹಿತ್ಯಕರ ಸೌಂದರ್ಯೋಪಾಸನೆಯ ಸನ್ನಿವೇಶದಲ್ಲಿ ಇದೆಲ್ಲ ಹುಟ್ಟಿದೆ."

ವಿರಸ ಇಲ್ಲ

ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಮಧ್ಯವಯಸ್ಕ ಸರಸ ಬರಹಗಾರ ಹಾಗೂ ಕವಿ ಶ್ರೀ ಚೆನ್ನವೀರ ಕಣವಿ ಅವರ ನೋಟದಲ್ಲಿ ಸ್ತ್ರೀ–ಪುರುಷರ ನಡುವೆ ಶಾಶ್ವತ ವಿರಸ ಇಲ್ಲವೇ ಇಲ್ಲ. ಅವರು ಪ್ರತಿಪಾದಿಸುತ್ತಾರೆ–

"ಮಹಿಳೆಗೆ ಸ್ವಾತಂತ್ರ್ಯ ಇದ್ದೇ ಇದೆ. ಒಂದು ವರ್ಷ ಮಾತ್ರ ಮಹಿಳಾವರ್ಷವಲ್ಲ/ಪ್ರತಿ ವರ್ಷವೂ ಮಹಿಳಾವರ್ಷವೆ. ಲಗ್ನವಾದವರೆಲ್ಲ ಈ ಮಾತನ್ನು ಒಪ್ಪಿಯೇ ಒಪ್ಪುತ್ತಾರೆ. ಇಂದಿನ ಸಂದರ್ಭದಲ್ಲಿ ಸ್ವಾತಂತ್ರ್ಯ ಎಂದರೆ ಜ್ಞಾನಾರ್ಜನೆ ಮುಂತಾದ ಕೆಲಸಗಳಿಗೆ ಈಗಿರುವದಕ್ಕಿಂತ ಹೆಚ್ಚು ಅವಕಾಶ ಎಂದರೆ ತಪ್ಪಲ್ಲ. ಸ್ತ್ರೀ ಸಮಾನತೆ ಎಂದರೆ ಶರಣಾಗತಿ ಅಲ್ಲ. ಆರ್ಥಿಕ ಸಮಾನತೆ ಬೇಕು. ವಿಚಾರಗಳ ಭೂಮಿಕೆಯಲ್ಲಿ ಸಮಾನತೆ ಇರಬೇಕು. ಆಕೆಯ ವಿಚಾರಕ್ಕೂ ಬೆಲೆ ಇದೆ ಎನ್ನುವುದನ್ನು ಒಪ್ಪಬೇಕು. ಬೌದ್ಧಿಕ ಮಟ್ಟದಲ್ಲಿ ಪರಸ್ಪರ ಸಾಮರಸ್ಯ ಇರಬೇಕು" ಇವೆಲ್ಲ ಯಾರೂ ಆಕ್ಷೇಪಿಸಲಾಗದ ಅಂಶಗಳು,

ಧಾರವಾಡದ ಆಕಾಶವಾಣಿ ನಿಲಯದ ಕಾರ್ಯಕ್ರಮ ನಿರ್ವಾಹಕ ಶ್ರೀ ಶಿವಶಂಕರ ಕಣಾಜನವರ ಅವರ ಮತದಂತೆ ಭಾರತದ ಸ್ತ್ರೀಗೆ ಎಲ್ಲ ದೇಶಕ್ಕಿಂತ ಹೆಚ್ಚು ಸ್ವಾತಂತ್ರ್ಯವಿದೆ. ಸಮಾನ ಮತಾಧಿಕಾರವಿದೆ. ಪ್ರಧಾನಮಂತ್ರಿ ಆಗುವಷ್ಟು ಅವಕಾಶ ದೊರೆತಿದೆ. ಆದರೆ ದೊರೆತಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳುವ ಸಾಮರ್ಥ್ಯ ಬೇಕಾಗಿದೆ.

× × ×

ಬಲಾತ್ಕಾರ ಬೇಡ, ಸಲ್ಲುವುದು ಸಲ್ಲಲಿ

ವರದಕ್ಷಿಣೆ ಮತ್ತು ಕನ್ಯಾಶುಲ್ಕಗಳ ಪ್ರಸ್ತಾಪ.

ಬೇಂದ್ರೆ ಎನ್ನುತ್ತಾರೆ– ಅಪ್ಪನ ಆಸ್ತಿಯಲ್ಲಿ ವರದಕ್ಷಿಣೆ ಮಗಳಿಗೆ ಕೊಟ್ಟಪಾಲು. ಅಪ್ಪಗೆ ಯಾಕೆ ಉಳಿಸಬೇಕು? ಬಲಾತ್ಕಾರ ಇರಬಾರದು–ಸಲ್ಲಬೇಕಾದದ್ದು ಸಲ್ಲಲೇಬೇಕು.

ಬೆಟಗೇರಿಯವರ ಪ್ರಕಾರ ವರದಕ್ಷಿಣೆ ಪದ್ಧತಿ ಮೊದಲು ಬ್ರಾಹ್ಮಣರಲ್ಲಿ ಮಾತ್ರ ಇತ್ತು. ಯಾವುದೇ ದಾನವೂ ದಕ್ಷಿಣೆ ಸಮೇತ ನಡೆಯುವುದು ಸಂಪ್ರದಾಯ. ಹಾಗೆಯೇ ಕನ್ಯಾದಾನಕ್ಕೂ ಇದೇ ಪದ್ಧತಿ. ಕ್ಷತ್ರಿಯರಲ್ಲಿ ಗೆದ್ದು ತಂದು ಮದುವೆಯಾಗುತ್ತಿದ್ದರು. ಸಾಮಾನ್ಯ ಜನರಲ್ಲಿ ಹೆಣ್ಣಿಗೇ ತೆರ. ಸ್ತ್ರೀಪುರುಷರಿಬ್ಬರೂ ಒಬ್ಬರಿಗೊಬ್ಬರು ಅಗತ್ಯ. ಇಬ್ಬರಿಗೂ ಕಟ್ಟುಪಾಡುಗಳಿದ್ದುವು. ಬಲಾತ್ಕಾರದ ವಸೂಲಿ ತಪ್ಪು.

"ಪ್ರೀತಿಯಿಂದ ಕೊಡಬಹುದು. ಹೊಸ ಸಂಸಾರದ ವ್ಯವಸ್ಥೆಗಾಗಿ" ಇದು ಚೆನ್ನವೀರ ಕಣವಿ ಅವರ ಅಭಿಪ್ರಾಯ. ಆದಕ್ಕಾಗಿ ತಗಾದೆ ಮಾಡುವುದು ತಪ್ಪು. ಬಲಾತ್ಕಾರ ನಡೆದಾಗ ಲಗ್ನ ಮಂಟಪದಲ್ಲೇ ಬೇರೊಬ್ಬ ವರನಿಗೆ ಮಾಲೆ ಬಿದ್ದ ಉದಾಹರಣೆಯೂ ಇದೆ. ಇಂಥವು ಹೆಚ್ಚಬೇಕು.

"ಸ್ತ್ರೀಯರು ಆರ್ಥಿಕವಾಗಿ ಪುರುಷರ ಮೇಲೆ ಅವಲಂಬಿಸಿಕೊಂಡಿರುವುದರಿಂದ ವರದಕ್ಷಿಣೆಯಂಥ ಪದ್ಧತಿಗಳು ಹುಟ್ಟಿ ಉಳಿದಿವೆ. ಸ್ತ್ರೀ ಆರ್ಥಿಕವಾಗಿ ಸ್ವಾವಲಂಬಿ ಆದಾಗ ಇದು ನಶಿಸಿ ಹೋದೀತು" ಎಂಬ ಆಶಾವಾದ ಆರ್ಯರಿಗೆ. ನಮ್ಮಲ್ಲಿನ ಯುವಕ ಯುವತಿಯರು ಬೌದ್ಧಿಕವಾಗಿ ಹೆಚ್ಚು ಸ್ವತಂತ್ರರಾಗಿ ಬೆಳೆಯಬೇಕು. ತಮ್ಮ ಜೀವನ ಸಂಗಾತಿಗಳನ್ನು ಆರಿಸಿಕೊಳ್ಳುವ ಜವಾಬ್ದಾರಿ ತಾವೇ ವಹಿಸಿಕೊಂಡಲ್ಲಿ ದಾಂಪತ್ಯ ವ್ಯವಸ್ಥೆ ಹೆಚ್ಚು ಅರ್ಥಪೂರ್ಣವಾದೀತು. ಕನ್ಯಾವಿಕ್ರಯದಂಥ ಪದ್ಧತಿಯೂ ಇದರಿಂದ ಅಳಿಸೀತು.

ಈ ಪದ್ಧತಿಯ ವಿರುದ್ಧ ಯುವಕ ಯುವತಿಯರು ಸಿಡಿದೇಳಬೇಕೆಂಬ ಆಕ್ರೋಶ ಶಿವಶಂಕರ ಅವರದು.

× × ×

ಗಾಂಧೀ ದೃಷ್ಟಿಯೇ ಸರಿ....

ಮಾತು ಮಹಿಳಾ ಜಾಗೃತಿಯತ್ತ ಹೊರಳಿತು.

ಗಂಡುಹೆಣ್ಣು ಎರಡೂ ಬದಲಾಗಬೇಕು ಎನ್ನುತ್ತಾರೆ ಬೇಂದ್ರೆ. ಯುಗಯುಗದ ದುಃಖಿ ಹೆಣ್ಣಿನ ದುಃಖ, ಹೆಣ್ಣಿನ ಕಡೆಯಿಂದ ಹೆಣ್ಣಿನ ಸಲುವಾಗಿ ಜಾಗೃತಿ ಮೂಡಿಸಬೇಕು.

ಕೃಷ್ಣಶರ್ಮರ ಮಾತಿನಂತೆ ಮಹಾತ್ಮಾ ಗಾಂಧೀಜೀ ದೃಷ್ಟಿಯೇ ಸರಿ. ಸ್ತ್ರೀ ಜಾಗೃತಿ ಅಧಿಕಾರ ಸ್ಥಾಪನೆಗೆ ಅಲ್ಲ–ಅನ್ಯಾಯದ ವಿರುದ್ಧ ಒಂದು ಒಳ್ಳೆಯ ಚಟುವಟಿಕೆ. ಹೆಣ್ಣಿನ ಕೈಯಲ್ಲಿ ಗಂಡೋ–ಗಂಡಿನ ಕೈಯಲ್ಲಿ ಹೆಣ್ಣೋ ಅನ್ನುವ ಪ್ರಶ್ನೆ ಅಲ್ಲ. ಗಂಡಸರ ಚಳವಳಿ ಹೆಂಗಸರ ಚಳವಳಿ ಬೇಕಿಲ್ಲ. ಇಬ್ಬರದೂ ಸಮಸ್ಯೆ ಬೇರೆ ಬೇರೆಯೇ. ಆದರೆ ಇಬ್ಬರೂ ಒಟ್ಟುಗೂಡಿ ವಿಚಾರ ಮಾಡಬೇಕು. ಸ್ತ್ರೀ ಪುರುಷರ ಚಕ್ರಗೋಷ್ಠಿ ನಡೆಯಲಿ. ಶಾಲೀನತೆ ಬೇಕು. ಪರಸ್ಪರ ವಿನಯ ಬೇಕು. ತಾಯಿ, ಅಕ್ಕ, ಅತ್ತಿಗೆ, ಸಹೋದರಿಯರು ಎಂಬ ಭಾವನೆ ಬರಬೇಕು. ನನ್ನೊಬ್ಬಳೆ

–೩೪ನೆಯ ಪುಟಕ್ಕೆ

'ಹೆಣ್ಣು ಬಾಳಿನ ಕಣ್ಣು. ಆಕೆ ಕಣ್ಣೀರ್ಗರೆಯುತ್ತಿದ್ದರೆ ಮನೆ ಮಸಣಸದೃಶ. ಹೆಣ್ಣು ನಕ್ಕರೆ ಮನೆ ಸ್ವರ್ಗಸಮಾನ. ಆಕೆ ಕಣ್ಣೀರು ಹಾಕದಂತೆ ನೋಡಿಕೊಳ್ಳುವುದು ಪುರುಷನ ಕರ್ತವ್ಯ' ಎನ್ನುತ್ತಾರೆ ಮಹರ್ಷಿ ವೇದವ್ಯಾಸರು.

ಗೀತಾ ದೇಸಾಯಿ

ವೇದವ್ಯಾಸರ ದೃಷ್ಟಿಯಲ್ಲಿ ಮಹಿಳೆ

ಪಂಚಮವೇದವೆನಿಸುವ ಮಹಾಭಾರತದಲ್ಲಿ ಮಹರ್ಷಿ ವ್ಯಾಸರು ಸ್ತ್ರೀ-ಸ್ವಭಾವದ ನಾನಾ ಮುಖಗಳನ್ನು ಪ್ರತಿಬಿಂಬಿಸುವ ಅಸಂಖ್ಯ ಮಹಿಳಾ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಮಹಿಳೆಯರ ಬಗೆಗೆ ತಮಗಿದ್ದ ಅಭಿಪ್ರಾಯಗಳನ್ನು ಈ ಪಾತ್ರಗಳ ಮುಖಾಂತರ ಹಾಗು ಅನೇಕ ಉಪಾಖ್ಯಾನಗಳ ಮೂಲಕ ಸ್ಫುಟವಾಗಿ ವ್ಯಕ್ತಪಡಿಸಿದ್ದಾರೆ.

ವೇದಕಾಲದಲ್ಲಿ ಕೌಟುಂಬಿಕ ಜೀವನದಲ್ಲೂ, ಧಾರ್ಮಿಕ ವಿಧಿಗಳಲ್ಲೂ ಪುರುಷನಿಗೆ ಸರಿದೊರೆಯಾದ ಸ್ಥಾನವನ್ನಲಂಕರಿಸಿದ್ದ ಸ್ತ್ರೀ- ಅನಂತರದ ದಾರ್ಶನಿಕರ ಕಣ್ಣುಗಳಿಗೆ ನರಕದ ಹೆಬ್ಬಾಗಿಲಾಗಿಯೂ, ಪುರುಷನ ಮೋಕ್ಷಸಾಧನೆಯ ಮಾರ್ಗದಲ್ಲಿ ಒಂದು ದೊಡ್ಡ ಆತಂಕವಾಗಿಯೂ, ಅವನನ್ನು ಪಾಪಕೂಪಕ್ಕೆ ತಳ್ಳುವ ಮಾಯಾವಿನಿಯಾಗಿಯೂ ಕಂಡು ಬಂದಿದ್ದರೆ ಮಹಾಭಾರತದ ಋಷಿಯ ಕಣ್ಣಿಗೆ ಮಾತ್ರ ಅವಳು ಸಾಕ್ಷಾತ್ ಲಕ್ಷ್ಮೀ ಸ್ವರೂಪಿಣಿಯಾಗಿ ಕಂಗೊಳಿಸುತ್ತಾಳೆ;

"ಶ್ರೇಯಃ ಏತಾ ಸ್ತ್ರಿಯೋ ನಾಮ ಸತ್ಕಾರ್ಯ ಭೂತಿಮಿಚ್ಛತಾ।
ಲಾಲಿತಾನುಗೃಹೀತಾ ಚ ಶ್ರೀ ಸ್ತ್ರೀ ಭವತಿ ಭಾರತ"॥

-ಎಂದಿದ್ದಾರೆ. ಸ್ತ್ರೀಯರಲ್ಲಿ ಒಳ್ಳೆಯವರೂ ಕೆಟ್ಟವರೂ ಇದ್ದಾರೆ;

"ಉಭಯಂ ದೃಶ್ಯತೇ ತಾಸು ಸತತಂ ಸಾಧ್ವಸಾಧುಚ॥
ಸ್ತ್ರೀಯಃ ಸಾಧ್ವ್ಯೋ, ಮಹಾಭಾಗ ಸಂಮತಾ ಲೋಕಮಾತರಃ
ಧಾರಯಂತಿ ಮಹೀಂ ರಾಜನ್ ಇಮಾಂ ಸವನಕಾನನಾಮ್॥"

"ಒಳ್ಳೆಯ ಸ್ತ್ರೀಯರು ಉದಾತ್ತಜೀವಿಗಳು; ಲೋಕಮಾತೆಯರು. ಅರಣ್ಯವನದಿಂದೊಡಗೂಡಿದ ಈ ಭೂಮಿಯನ್ನು ಅವರು ಪಾಲಿಸುತ್ತಾರೆ" ಎಂದು ಅಂಥ ಮಹಾನ್‌ಜೀವಿಗಳನ್ನು ಕೊಂಡಾಡಿದ್ದಾರೆ.

ವೀರಜನನಿ, ರಾಜಪತ್ನಿಯರಾಗಿಯೂ ವಿಧಿವಿಲಾಸದಿಂದ ಅನೇಕ ಕಷ್ಟಪರಂಪರೆಗಳಿಗೆ ಸಿಲುಕಬೇಕಾಗಿ ಬಂದ ಕುಂತಿ, ಗಾಂಧಾರಿ, ದ್ರೌಪದಿಯರ ಉದಾಹರಣೆಗಳನ್ನು ಕಣ್ಣಾರೆ ಕಂಡುದರಿಂದಲೊ ಏನೊ ವ್ಯಾಸರಿಗೆ ಸ್ತ್ರೀಯರ ಬಗ್ಗೆ ಒಂದು ಬಗೆಯ ಮರುಕ, ಕನಿಕರ. ಅಂತೆಯೇ ಹೆಣ್ಣು ಕಣ್ಣೀರು ಹಾಕದಂತೆ ನೋಡಿಕೊಳ್ಳುವದು ಗಂಡನೊಬ್ಬನೇ ಅಲ್ಲ, ಕುಟುಂಬದ ಎಲ್ಲ ಪುರುಷರ ಕರ್ತವ್ಯವೆಂದು ಅವರು ಒತ್ತಿ ಹೇಳಿದ್ದಾರೆ. ತಂದೆ, ಅಣ್ಣ-ತಮ್ಮಂದಿರು, ಮಾವ-ಭಾವ ಹೀಗೆ ಎಲ್ಲರೂ ಅವಳನ್ನು ಪ್ರೀತಿಸಿ ಗೌರವಿಸಬೇಕೆಂದು ವಿಧಿಸಿದ್ದಾರಲ್ಲದೆ ಹೆಣ್ಣುಮಕ್ಕಳೂ, ಸೊಸೆಯರೂ ದುಃಖದಿಂದ ನೊಂದುಕೊಳ್ಳುವ ಮನೆ ಕೊಡಲಿಯಿಂದ ಕಡಿದ ಮರದಂತೆ ಕಂಗೆಡುತ್ತದೆ, ಅಂಥ ಮನೆ ಎಂದಿಗೂ ಏಳ್ಗೆ ಹೊಂದಲಾರದು'ಎಂದು ಎಚ್ಚರಿಸಿದ್ದಾರೆ.

ಮಾತೆ, ಮಡದಿ, ಮಗಳು, ಸೋದರಿಯಾಗಿ ಪುರುಷನ ನಿಕಟ ಸಂಬಂಧದಲ್ಲಿ ಮಹಿಳೆ ಪ್ರವೇಶಿಸುತ್ತಾಳೆ. ಹೆತ್ತು, ಸಾಕಿ-ಸಲಹುವ ಮಾತೆ ಸದಾ ಪೂಜ್ಯಳೇ. "ಮಾತೃಲಾಭೇ ಸನಾಥತ್ವಂ- ಅನಾಥತ್ವಂ ವಿಪರ್ಯಯೇ" -ತಾಯಿಯಿದ್ದ ಮನುಷ್ಯ ಸನಾಥನು, ಅವಳಿಲ್ಲದೆ ಅನಾಥನಾಗುತ್ತಾನೆ-ಎಂದು ಹೇಳಿದ' ವ್ಯಾಸರು "ನಾಸ್ತಿ ಮಾತೃಸಮಾ ಛಾಯಾ, ನಾಸ್ತಿ ಮಾತೃಸಮಾ ಗತಿಃ, ನಾಸ್ತಿ ಮಾತೃಸಮಂ ತ್ರಾಣಂ, ನಾಸ್ತಿ ಮಾತೃ ಸಮಾಪ್ರಿಯಾ"-ಎಂಬ ಶ್ಲೋಕದಲ್ಲಿ ಮಾತೆಯ ಮಹತಿಯನ್ನು ಸಾರಿದ್ದಾರೆ."ಮಕ್ಕಳು ಮೊಮ್ಮಕ್ಕಳಾಗಿದ್ದರೂ ಸಹ ತಾಯಿಯ ಆಸರೆಯಿದ್ದರೆ ನೂರು ವರ್ಷಕ್ಕೆ ಹತ್ತಿರ ಬಂದಂಥ ವ್ಯಕ್ತಿಯೂ ಮೂರು ವರ್ಷದ ಹಸುಳೆಯಂತೆ ವರ್ತಿಸುತ್ತಾನೆ" 'ಎಂದು ಬಹು ಮಾರ್ಮಿಕವಾಗಿ ಹೇಳಿದ್ದಾರಲ್ಲದೆ "ಮನುಷ್ಯ ನಿಜವಾಗಿ ವೃದ್ಧನೂ ದುಃಖಿಯೂ ಆಗುವದು ಮಾತೆಯ ವಿಯೋಗವಾದಾಗಲೇ?" ಎಂದು ವಾಸ್ತವಪೂರ್ಣವಾಗಿ ನುಡಿದಿದ್ದಾರೆ.

ಮದುವೆ ಮಾನವನ ಜೀವನದಲ್ಲಿ ಒಂದು ಮಹತ್ವದ ಘಟ್ಟ. "ಪ್ರಿಯಾ ಚ ಭಾರ್ಯಾ ಪ್ರಿಯವಾದಿನೀ ಚ" ಪ್ರಿಯೆಯೂ ಪ್ರಿಯವಾದಿನಿಯೂ ಆದ ಜೀವನದ ಜೊತೆಗಾರ್ತಿ-"ದೈವಕೃತಃ ಸಖಾ"-ದೇವದತ್ತವಾದ ಸ್ನೇಹಿತೆ. ಇಂಥ ಪತ್ನಿಯ ಸ್ಥಾನ ಪುರುಷನ ಜೀವನದಲ್ಲಿ ಎಷ್ಟು ಮಹತ್ತರವಾದುದು ಎಂಬುದರ ಬಗೆಗೆ ವ್ಯಾಸರು ಮಹಾಭಾರತದಲ್ಲಿ ಸಂದರ್ಭದೊರೆತಾಗಲೆಲ್ಲ ಬೇರೆ ಬೇರೆ ಪಾತ್ರಗಳ ಮುಖಾಂತರ ಹೇಳಿದ್ದಾರೆ."ವೃಕ್ಷಮೂಲೇಽಪಿ ದಯಿತಾ ಯಸ್ಯ ತಿಷ್ಠತಿ ತದ್‌ಗೃಹಮ್। ಪ್ರಾಸಾದೋಽಪಿ ತಯಾ ಹೀನಃ ಕಾಂತಾರ ಇತಿ ನಿಶ್ಚಯಮ್॥" 'ಗಿಡದ ಬುಡದಲ್ಲಿ ನಿಂತಿದ್ದರೂ ಮಡದಿ ಜೊತೆಯಲ್ಲಿದ್ದರೆ ಅದು ಮನೆಯೇ. ಆದರೆ ಅವಳಿಲ್ಲದ ಅರಮನೆಯೂ ಖಂಡಿತ ಅರಣ್ಯದಂತೆ.' ಎಂದು ಅರ್ಥಪೂರ್ಣವಾಗಿ ಹೇಳಿದ್ದಾರೆ. 'ಗೃಹಿಣಿಯಿಲ್ಲದ ಮನೆ ಅಡವಿಗಿಂತ ಕಡೆ' ಎಂಬ ಮಾತನ್ನು ಹತ್ತಾರು ಸಲ ಪುನರುಚ್ಚರಿಸಿದ್ದಾರೆ, "ಯಾರ ಮನೆಯಲ್ಲಿ ಸಾಧ್ವಿಯಾದ ಮೃದುಭಾಷಿಣಿಯಾದ ಹೆಂಡತಿ ಇಲ್ಲವೋ ಅವನು ಕಾಡಿಗೆ ಹೋಗುವದೇ ಲೇಸು. ಏಕೆಂದರೆ ಅವನ ಮನೆಯೂ ಕಾಡಿಗೆ ಸಮಾನವಾಗಿಯೇ ಇರುವದು!" ಎಂದು ಒಂದೆಡೆಗೆ ಉದ್ಗರಿಸಿದ್ದರೆ ಇನ್ನೊಂದೆಡೆಗೆ, "ಮಕ್ಕಳು, ಮೊಮ್ಮಕ್ಕಳು ಸೊಸೆ-ಸೇವಕರು ಹೀಗೆ ಎಲ್ಲರಿಂದ ತುಂಬಿದ್ದರೂ ಹೆಂಡತಿಯಿಲ್ಲದಿದ್ದರೆ ಮನೆಯು ಶೂನ್ಯವೆನಿಸುತ್ತದೆ" ಎಂದು ಭಾವಪೂರ್ಣವಾಗಿ ನುಡಿದಿದ್ದಾರೆ.

ಪತ್ನಿ-ಪತಿಯ ಅಧೀನಳಲ್ಲ; ಅವನ ಬಾಳಿನ ಸಂಗಾತಿ ಎಂಬುದನ್ನು ಮಹರ್ಷಿಗಳು ಈ ಶ್ಲೋಕದಲ್ಲಿ ಬಹು ಮಾರ್ಮಿಕವಾಗಿ ಹೇಳಿದ್ದಾರೆ;

"ನಾಸ್ತಿ ಭಾರ್ಯಾ ಸಮಂ ಮಿತ್ರಂ ನರಸ್ಯ ಆರ್ತಸ್ಯ ಭೇಷಜಮ್।
ನಾಸ್ತಿ ಭಾರ್ಯಾ ಸಮೋ ಬಂಧುಃ ನಾಸ್ತಿ ಭಾರ್ಯಾ ಸಮಾ ಗತಿಃ॥"

-ಮನುಷ್ಯನಿಗೆ ಹೆಂಡತಿಯಂಥ ಗೆಳೆಯನಿಲ್ಲ. ರೋಗಗ್ರಸ್ತನಾದಾಗ ಅವಳಂಥ ಔಷಧಿಯಿಲ್ಲ. ಅವಳಿಗೆ ಸಮನಾದ ಬಂಧುವಿಲ್ಲ. ಅವಳಂಥ ಆಶ್ರಯ ಮತ್ತೊಂದಿಲ್ಲ.

ಸಮಾನತೆಯ ಈ ಯುಗದಲ್ಲೂ ಅವರ ಈ ಅಭಿಪ್ರಾಯಗಳು ಸರ್ವಸಮ್ಮತವಾಗದಿರವು!

ಮಹಾಭಾರತದಲ್ಲಿ ರಾಜಧರ್ಮದಂತೆಯೇ ಗೃಹಸ್ಥಧರ್ಮವೂ ವರ್ಣಿತವಾಗಿದೆಯಷ್ಟೇ. ಅದರಲ್ಲಿ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಹೆಣ್ಣಿನ ವಿಷಯಕ್ಕೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆಂದು ವ್ಯಾಸರು ವಿಧಿಸಿದ್ದಾರೆ. ದಮಯಂತಿಯ ಸೇವಕಿಯಾದ ಕೇಶಿಯು ಬಹಳ ಸಲ ನಳನ ಬಳಿಗೆ ಬಂದಾಗ ನಳರಾಜನು "ತರುಣಿಯಾದ ನೀನು ಮೇಲಿಂದ ಮೇಲೆ ನನ್ನ ಹತ್ತಿರ ಬಂದರೆ ನಿನ್ನ ಮರ್ಯಾದೆಗೆ ಕುಂದು" ಎಂದು ನಯವಾಗಿ ಅವಳನ್ನು ತಿರುಗಿ ಕಳಿಸುವದನ್ನೂ, ತಾನಾಗಿ ಒಲಿದು ಬಂದ ಊರ್ವಶಿಯನ್ನು ಅರ್ಜುನ ಅವಳ ಕ್ಷಮೆ ಬೇಡಿ ನಿರಾಕರಿಸುವದನ್ನು ನೋಡಿದರೆ ಹೆಣ್ಣು ಅಪ್ಸರೆಯಾಗಿರಲಿ ಆಳಾಗಿರಲಿ ಅವಳ ಶೀಲವನ್ನು ಕಾಪಾಡುವದು ಸಜ್ಜನರ ಕರ್ತವ್ಯ ಎಂಬ ವ್ಯಾಸರ ಅಭಿಪ್ರಾಯ ಸ್ಪಷ್ಟವಾಗುತ್ತದೆ.

ಭಾರತೀಯ ಮಹಿಳೆಯ ಹಿರಿಮೆ ಅವಳ ಪಾತಿವ್ರತ್ಯದಲ್ಲಿದೆಯೆಂದು ಅನಾದಿಕಾಲದಿಂದಲೂ ನಮ್ಮ ಧರ್ಮಗ್ರಂಥಗಳು ಸಾರುತ್ತ ಬಂದಿವೆ. ವ್ಯಾಸರೂ ಪತಿವ್ರತಾ ಮಹಿಮೆಯನ್ನು ಸಾರುತ್ತ,

ದಮಯಂತಿ, ದ್ರೌಪದಿಯರಂಥ ರಾಜಪುತ್ರಿಯರ ಉದಾಹರಣೆಗಳಿಂದಲ್ಲದೆ, ಪತಿಸೇವೆಯಲ್ಲಿ ನಿರತಳಾಗಿದ್ದ ಒಬ್ಬ ಸಾಮಾನ್ಯ ಬ್ರಾಹ್ಮಣ ಸ್ತ್ರೀಯೂ ಪಾತಿವ್ರತ್ಯದ ಸಾಮರ್ಥ್ಯದಿಂದ ಗರ್ವಿಷ್ಠನಾದ ಕೌಶಿಕನಿಗೆ ಹೇಗೆ ಬುದ್ಧಿ ಕಲಿಸಿದಳೆಂಬುದನ್ನು 'ಧರ್ಮವ್ಯಾಧ' ಉಪಾಖ್ಯಾನದಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ.

ದಾಂಪತ್ಯಜೀವನದಲ್ಲಿ ಏಕನಿಷ್ಠೆ ಸತಿಗಷ್ಟೇ ಸೀಮಿತವಾಗಿಲ್ಲ; ಅದು ಪತಿಯಲ್ಲೂ ಇರಬೇಕೆಂಬ ಅಭಿಪ್ರಾಯವನ್ನು ವ್ಯಾಸರು 'ರುರು-ಪ್ರಮದ್ವರಾ' ಉಪಖ್ಯಾನದಲ್ಲಿ ಪ್ರತಿಪಾದಿಸಿ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಸಾವಿತ್ರಿ ಕಾಲಯಮನನ್ನೂ ಗೆದ್ದು ಪತಿಯನ್ನು ಬದುಕಿಸಿದ್ದರೆ, ರುರು—ತಾನು ಮೆಚ್ಚಿ ಮದುವೆಯಾದ ಪ್ರಮದ್ವರೆ ವಿವಾಹದ ದಿನವೇ ದುರ್ದೈವದಿಂದ ಹಾವು ಕಚ್ಚಿ ನಿಧನಳಾದಾಗ ತನ್ನ ತಪಸ್ಸಿನ ಬಲದಿಂದ ತನ್ನ ಅರ್ಧ ಆಯುಸ್ಸನ್ನು ಧಾರೆಯರೆದು ಹೆಂಡತಿಯನ್ನು ಬದುಕಿಸಿಕೊಳ್ಳುತ್ತಾನೆ. ಇಂಥ ಪತ್ನೀನಿಷ್ಠೆ ಆಧುನಿಕ ಯುಗದಲ್ಲೂ ಅಪರೂಪವೇ ಅಲ್ಲವೇ?

ಪತಿ-ಪತ್ನಿಯರೀರ್ವರೂ ಒಬ್ಬರಿಗೊಬ್ಬರು ಬಂಧುಗಳು, ಸ್ನೇಹಿತರು, ಸಹಾಯಕರು ಎಂಬ ವ್ಯಾಸರ ಆಶಯವನ್ನು ಎಲ್ಲರೂ ಒಪ್ಪಬಹುದಾದರೂ ಅವರ ಕೆಲ ಅಭಿಪ್ರಾಯಗಳು ಆಧುನಿಕ ಮನೋಧರ್ಮಕ್ಕೆ ಸರಿಹೋಗಲಿಕ್ಕಿಲ್ಲ. ಉದಾಹರಣೆಗೆ ಅವರು ಒಂದು ಕಡೆಗೆ, "ಹೆಂಡತಿಯಿಂದ ಪೋಷಿಸಲ್ಪಡುವ ಹಾಗು ರಕ್ಷಿಸಲ್ಪಡುವಂಥವನು ಕನಿಕರಕ್ಕೆ ಪಾತ್ರನಾಗುತ್ತಾನೆ" ಎಂದಿದ್ದಾರೆ. ಸ್ತ್ರೀ ವಿಮೋಚನಾ ಚಳುವಳಿಯ ಈ ದಿನಗಳಲ್ಲಿ ಇದು ಅಷ್ಟು ಹಿತವೆನಿಸಲಾರದು! ಕುಟುಂಬವನ್ನು ಪೋಷಿಸುವ ವ್ಯಕ್ತಿ ಹೆಣ್ಣಾದರೇನು, ಗಂಡಾದರೇನು ಎಂಬುದು ಆಧುನಿಕ ವಿಚಾರ ಸರಣಿಯಿರುವದಾದರೂ ಈಗಲೂ ತನ್ನ ಕಾರ್ಯಶಕ್ತಿಯನ್ನು ಪಯೋಗಿಸದೆ ಹೆಂಡತಿಯ ಗಳಿಕೆಯ ಮೇಲೆ ಜೀವನ ಸಾಗಿಸುವ ವ್ಯಕ್ತಿಯನ್ನು ಸಮಾಜ ಅನುಕಂಪದಿಂದಲೇ ನೋಡುವದಿಲ್ಲವೇ?

ಅವರ ಇನ್ನೊಂದು ಶ್ಲೋಕ-"ಪತಿರ್ಹಿ ದೇವೋ ನಾರೀಣಾಂ, ಪತಿರ್ಬಂಧುಃ, ಪತಿರ್ಗತಿಃ। ಪತ್ಯಾ ಸಮಾಗತಿರ್ನಾಸ್ತಿ ದೈವತಂ ವಾ ಯಥಾ ಪತಿಃ॥" ಎಂದಿದೆ. ಇದರಲ್ಲಿ 'ಸತಿಗೆ ಪತಿಯೇ ದೈವ' ಎಂಬ ಮಾತನ್ನು ಸಮಾನತೆಯ ಈ ಯುಗದಲ್ಲಿ ಎಲ್ಲರೂ ಒಪ್ಪಲಿಕ್ಕಿಲ್ಲ. ಆದರೆ 'ಶ್ರಿಯಃ ಏತಾ ಸ್ತ್ರೀಯೋ ನಾಮ. ನಾಸ್ತಿ ಭಾರ್ಯಾ ಸಮಾ ಗತಿಃ', 'ಸ್ತ್ರೀಯೊ ಯತ್ರ ಚ ಪೂಜ್ಯಂತೇ ರಮಂತೇ ತತ್ರ ದೇವತಾಃ' ಇವೇ ಮುಂತಾದ ಮಾತುಗಳಲ್ಲಿ ವ್ಯಾಸರು ಸ್ತ್ರೀಯರನ್ನು ದೈವತ್ವಕ್ಕೇರಿಸಿರುವದು ಧ್ವನಿತವಾಗುವದಿಲ್ಲವೇ? ಆದುದರಿಂದ ಸಂಸಾರದಲ್ಲಿ ಪತ್ನಿ ಲಕ್ಷ್ಮಿಯಾಗುವದಾದರೆ ಪತಿಯೇಕೆ ನಾರಾಯಣನಾಗಬಾರದು? ಗಂಡ ಹೆಂಡತಿಯನ್ನು ಲಕ್ಷ್ಮಿಯೆಂದು ಪೂಜಿಸುವಂತೆಯೇ ಹೆಂಡತಿ ಗಂಡನನ್ನು ನಾರಾಯಣನೆಂದು ಪೂಜಿಸುವದರಲ್ಲಿ ತಪ್ಪೇನು? ಒಟ್ಟಿನಲ್ಲಿ ಗೃಹಜೀವನ ಸುಖಮಯವಾಗಬೇಕಾದರೆ ಸತಿ-ಪತಿಯರಲ್ಲಿ ಪರಸ್ಪರರ ಬಗ್ಗೆ ಸೌಹಾರ್ದ ಆದರ-ಅಭಿಮಾನಗಳಿರಬೇಕೆಂದು ವ್ಯಾಸರ ಅಭಿಪ್ರಾಯವೇ ಹೊರತು ಅದರಲ್ಲಿ ಶ್ರೇಷ್ಠ-ಕನಿಷ್ಠ ಎಂಬ ವೃಥಾವಾದಕ್ಕೆ ಅವಕಾಶ ತೋರುವದಿಲ್ಲ.

ವ್ಯಾಸರದೇ ಆದ ಮತ್ತೊಂದು ಶ್ಲೋಕ "ಪಿತಾ ರಕ್ಷತಿ ಕೌಮಾರ್ಯೇ, ಭರ್ತಾ ರಕ್ಷತಿ ಯೌವನೇ। ಪುತ್ರಾಶ್ಚ ಸ್ಥಾವಿರೇ ಭಾವೇ. ನ ಸ್ತ್ರೀ ಸ್ವಾತಂತ್ರ್ಯಮರ್ಹತಿ॥" ಎಂಬುದೂ ಸಹ ಸಾಕಷ್ಟು ವಿವಾದಕ್ಕೆಡೆಮಾಡಿಕೊಟ್ಟಿದೆ. ಆದರೆ ಹಿರಿಯರಾದ ಶ್ರೀ ಶಾಸ್ತ್ರಿಯವರು ಹೇಳುವಂತೆ "ಇಲ್ಲಿ ಸ್ವಾತಂತ್ರ್ಯ ಎಂಬ ಶಬ್ದದಲ್ಲಿ ಅಧೀನತೆಯ ಭಾವ ಉಕ್ತವಾಗಿರದೆ ಹೆಣ್ಣು-ಕೌಮಾರ್ಯ, ತಾರುಣ್ಯ, ವೃದ್ಧಾಪ್ಯ-ಈ ಯಾವುದೇ ಅವಸ್ಥೆಯಲ್ಲಿ ತನ್ನ ಪಾಡನ್ನು ತಾನು ನೋಡಿಕೊಳ್ಳಲು ಬಿಡಬಾರದು". ಎಂಬ ಅಭಿಪ್ರಾಯ ಹೆಚ್ಚು ಸಮಂಜಸವೆನಿಸುತ್ತದೆ. ನೈಸರ್ಗಿಕ ಕಾರಣದಿಂದ ಅಸಹಾಯಳಾದ ಹೆಣ್ಣು ಯಾರ ರಕ್ಷಣೆಯಿಲ್ಲದೆ ಒಂಟಿಯಾಗಿ ಜೀವನವನ್ನೆದುರಿಸುವದು ಯಾವ ಕಾಲಕ್ಕೂ(ಈಗಲೂ) ಅಷ್ಟು ಸುಲಭವಲ್ಲ. ಈ ಅರ್ಥದಲ್ಲೇ ವ್ಯಾಸರು 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಹೇಳಿರಬಹುದಾಗಿ ತೋರುತ್ತದೆ. ಅಲ್ಲದೆ ಅವರು ಬರೆದ ಮಹಾಭಾರತದಲ್ಲಿ ಅನೇಕ ಸಂದರ್ಭಗಳಲ್ಲಿ ಸ್ತ್ರೀಯರು ತಮ್ಮ ಸ್ವತಂತ್ರ ವ್ಯಕ್ತಿತ್ವ, ಬುದ್ಧಿಮತ್ತೆಯನ್ನು ಪ್ರದರ್ಶಿಸಿದ್ದಾರೆ. ರಾಜಕಾರಣದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದಾರೆ. ಅನ್ಯಾಯದ ವಿರುದ್ಧ ಧೈರ್ಯವಾಗಿ ಪ್ರತಿಭಟಿಸಿದ್ದಾರೆ. ಪತಿಗೆ ಸಲಹೆಗಾರರಾಗಿದ್ದಾರೆ. ಒಂದೆರಡು ಉದಾಹರಣೆಗಳನ್ನು ನೋಡಬಹುದು. ಕೃಷ್ಣನು ಸಂಧಾನಕ್ಕೆ ಬಂದಾಗ ಧೃತರಾಷ್ಟ್ರನು ಈ ವಿಷಯದಲ್ಲಿ ಪತ್ನಿಯ ಸಲಹೆ ಪಡೆಯಲು ವಿದುರನಿಗೆ 'ಮಹಾಪ್ರಾಜ್ಞಾಂ, ದೂರದರ್ಶಿನೀಂ' ಗಾಂಧಾರಿಯನ್ನು ಕರೆದು ತಾ ಎಂದು ಹೇಳುತ್ತಾನೆ. ದೂರದರ್ಶಿನಿಯಾದ ಗಾಂಧಾರಿ ಮಗನೆಂದರೆ ಮಿತಿಯಿಲ್ಲದ ಪ್ರೀತಿ ತೋರಿ ಅವನು ದುರಹಂಕಾರಿಯಾಗುವಂತೆ ಮಾಡಿದ ಪತಿಯನ್ನು ನಿಃಸಂಕೋಚವಾಗಿ ದೂರಿ ತನ್ನ ಸೂಚನೆಗಳನ್ನು ಮುಂದಿಡುತ್ತಾಳೆ. ಖಂಡಿತವಾದಿಯಾದ ದ್ರೌಪದಿಯಂತೂ ಅನ್ಯಾಯಕ್ಕೆ ಎಂದಿಗೂ ತಲೆಬಾಗಿದವಳಲ್ಲ. ವಿದುಲಾ ಎಂಬ ವೀರಮಾತೆ ಸಿಂಧುದೇಶದ ಅರಸನೊಡನೆ ಸೋತು ಯುದ್ಧಕ್ಕೆ ಹಿಂಜರಿಯುತ್ತಿದ್ದ ತನ್ನ ಮಗನಿಗೆ-ಶ್ರೀ ಕೃಷ್ಣನು ಅರ್ಜುನನ್ನು ಯುದ್ಧಕ್ಕೆ ಪ್ರೇರೇಪಿಸಿದಂತೆ- ಕ್ಷಾತ್ರ ಧರ್ಮದ ತಿರುಳನ್ನು ಅವನಿಗೆ ಬೋಧಿಸಿ ಅವನನ್ನು ಯುದ್ಧಕ್ಕೆ ಪ್ರಚೋದಿಸುತ್ತಾಳೆ. ಈ ಎಲ್ಲ ನಿದರ್ಶನಗಳು ಅಂದಿನ ಮಹಿಳೆಗೆ ಸಾಕಷ್ಟು ಸ್ವಾತಂತ್ರ್ಯ, ಸ್ವತಂತ್ರ ವ್ಯಕ್ತಿತ್ವವಿತ್ತೆಂಬುದನ್ನು ಪುಷ್ಟೀಕರಿಸುವದಿಲ್ಲವೇ? ಅಂದಿನ ಹೆಣ್ಣುಮಕ್ಕಳು ಅನಿವಾರ್ಯ ಪ್ರಸಂಗದಲ್ಲಿಯೇ ಆಗಲಿ ನಿಯೋಗ ಪದ್ಧತಿಯಿಂದ ಮಕ್ಕಳನ್ನು ಪಡೆಯುವ ಸಂಗತಿಯಂತೂ ಇಂದಿನ ವೈಜ್ಞಾನಿಕ ಯುಗದಲ್ಲೂ ಬೆರಗುಗೊಳಿಸುತ್ತದೆ!

ಹಾಗೆ ನೋಡಿದರೆ ರಾಮಾಯಣ ಕಾಲಕ್ಕಿಂತಲೂ ಮಹಾಭಾರತದ ಸ್ತ್ರೀಯರು ಹೆಚ್ಚಿನ ಸ್ವಾತಂತ್ರ್ಯವನ್ನನುಭವಿಸಿದ್ದಾಗಿ ಕಂಡುಬರುತ್ತದೆ. ರಾಮಾಯಣದ ಸೀತೆ ರಾಮನನ್ನು ಮೌನವಾಗಿ ಕಾಡಿಗೆ ಹಿಂಬಾಲಿಸಿದ್ದರೆ ಮಹಾಭಾರತದ ದ್ರೌಪದಿ ಪತಿಯೊಡನೆ ಅವನು ಹೆಂಡತಿಯನ್ನು ಪಣವಾಗಿಟ್ಟು ಜೂಜಾಡಿದುದು ಸರಿಯಲ್ಲ ಎಂದು ವಾದಿಸುತ್ತಾಳೆ. ಅನೇಕ ಸಂದರ್ಭಗಳಲ್ಲಿ ಧರ್ಮರಾಜನ ಅತಿ ಕ್ಷಮಾಗುಣವನ್ನು ಹಳಿಯುತ್ತಾಳೆ. "ಧರ್ಮೋ ರಕ್ಷತಿ ರಕ್ಷಿತಃ" ಎನ್ನುವರಾದರೂ "ಅದು ನಿನ್ನನ್ನೇಕೆ ರಕ್ಷಿಸುತ್ತಿಲ್ಲ." ಎಂದು ಪ್ರಶ್ನಿಸುತ್ತಾಳೆ. ರಾಮಾಯಣದಲ್ಲಿ ರಾವಣನ ಮನೆಯಲ್ಲಿದ್ದು ಬಂದುದಕ್ಕಾಗಿ ಸೀತೆಗೆ 'ಅಗ್ನಿ-ಪ್ರವೇಶ'ದಿಂದ ಶುದ್ಧಿ ಮಾಡುವದಾದರೆ ಮಹಾಭಾರತದಲ್ಲಿ ಜಯದ್ರಥನು ದ್ರೌಪದಿಯನ್ನು ಅಪಹರಿಸಿಕೊಂಡು ಹೋಗಿದ್ದರೂ ಪಾಂಡವರು ಅವನನ್ನು ಸೋಲಿಸಿ ದ್ರೌಪದಿಯನ್ನು 'ಶುದ್ಧಿ'ಗೆ ಗುರಿಪಡಿಸದೆ ಸ್ವೀಕರಿಸುತ್ತಾರೆ. ಹೀಗೆ ವ್ಯಾಸರು ಹೆಣ್ಣನ್ನು ವಿಶಾಲ ದೃಷ್ಟಿಕೋನದಿಂದ ನೋಡಿದುದು ಗಮನಕ್ಕೆ ಬಾರದೆ ಇರದು.

ವೇದಕಾಲದಲ್ಲಿ ಪುರುಷನಂತೆಯೇ ಸ್ತ್ರೀಯೂ ಸಂಸಾರದಲ್ಲಿದ್ದುಕೊಂಡು ಪತ್ನಿತ್ವ, ಮಾತೃತ್ವಗಳ ಜವಾಬ್ದಾರಿಗಳನ್ನು ಪೂರೈಸಿ, ಆತ್ಮೋನ್ನತಿಯನ್ನು ಸಾಧಿಸಿ ಜೀವನದ ಪರಮಗುರಿಯಾದ ಮೋಕ್ಷವನ್ನು ಪಡೆಯಬಹುದಾಗಿತ್ತು. ಆದರೆ ತದನಂತರದ ಕಾಲದಲ್ಲಿ ಪ್ರಪಂಚತ್ಯಾಗ ಮಾಡಿ ಪರಲೋಕಚಿಂತನೆಗಾಗಿ ತಪಸ್ಸನ್ನಾಚರಿಸಿದಾಗಲೇ ಮೋಕ್ಷಪ್ರಾಪ್ತಿ ಎಂಬ ವಿಚಾರ ತತ್ವವೇತ್ತರಲ್ಲಿ ಪ್ರಚುರವಾಗತೊಡಗಿತು. ಪುರುಷನನ್ನು ಸಂಸಾರದತ್ತ ಎಳೆಯಲು ಸ್ತ್ರೀಯೇ ಕಾರಣವಾಗುವ ಭಯದಿಂದ ಅವಳನ್ನು ದೂರವಿರಿಸುವದಕ್ಕಾಗಿ ಹೆಣ್ಣೇ ಮಾನವನ ದುಃಖಗಳಿಗೆಲ್ಲ ಮೂಲ ಎಂಬ ಭಾವನೆ ಬೇರೂರತೊಡಗಿತ್ತು. ಹೀಗಾಗಿ ಕ್ರಮೇಣ ಮಹಿಳೆಯ ಸಾಮಾಜಿಕ ಸ್ಥಾನಮಾನಗಳು ಕುಂದುತ್ತ ನಡೆದವು. ಇಂಥ ಸಂದಿಗ್ಧ ಕಾಲದಲ್ಲಿ ಅವತರಿಸಿದ ಮಹರ್ಷಿ ವೇದವ್ಯಾಸರು ಮಹಿಳೆ—ದೇಶದ ಸಾಮಾಜಿಕ, ರಾಜಕೀಯ ಹಾಗೂ ಕೌಟುಂಬಿಕ ಜೀವನದ ಅವಿಭಾಜ್ಯ ಅಂಗವೆಂಬುದನ್ನು ತಮ್ಮ ಮಹಾಕಾವ್ಯದಲ್ಲಿ ತೋರಿಸಿಕೊಟ್ಟು ಅವಳಿಗೆ ಸಲ್ಲಬೇಕಾದ ಸ್ಥಾನವನ್ನು ದೊರಕಿಸಿಕೊಟ್ಟರಲ್ಲದೆ ಅವಳ ಕಾರ್ಯಶಕ್ತಿಯ ಪರಿಚಯ ಮಾಡಿಕೊಟ್ಟರು. ಅಂಥ ಮಹಾನುಭಾವರನ್ನು ಭಾರತೀಯ ಮಹಿಳೆ ಕೃತಜ್ಞತೆಯಿಂದ ಸ್ಮರಿಸಬೇಕು. ●

ಸ್ತ್ರೀ ಸ್ವಾತಂತ್ರ್ಯ ಸಮಾನತೆ

(೨೧ನೆಯ ಪುಟದಿಂದ)

ಸುಖವೇ ಸಾಕು ಎಂದಲ್ಲ. ಏನು ಬೇಕು ಏನು ಬೇಡ ಇದನ್ನು ಇಬ್ಬರೂ ಯೋಚಿಸಬೇಕು. ಅದಕ್ಕೆ ಗಾಂಧೀ ಮಾರ್ಗವೇ ದಾರಿ. ಅದೇ ಸರಿ.

ಮಹಿಳೆಯರ ಜಾಗೃತಿ ಎಲ್ಲ ದೃಷ್ಟಿಯಿಂದ ಆಗಬೇಕು ಚೆನ್ನವೀರ ಕಣವಿಯವರಿಗೆ. ಆರ್ಥಿಕವೇ ದೊಡ್ಡದಲ್ಲ. ತನ್ನತನದ ಅರಿವು ಸ್ಥಾನಬಲದ ಅರಿವು ತನ ಶಕ್ತಿಯ ಅರಿವು ಮಹಿಳೆಗೆ ಆಗಬೇಕು. ಅದನ್ನು ಕುಟುಂಬದ ಒಳಿತಿಗೆ ಬಳಸಬೇಕು. ಆಕೆಯ ಮನಸ್ಸಿನ ಒಲವನ್ನು ಸರಿಯಾಗಿ ಅರ್ಥಮಾಡಿಕೊಂಡು ಪ್ರೋತ್ಸಾಹಕೊಡಬೇಕು. ಇದಕ್ಕಾಗಿ ಪುರುಷರಿಗೂ ಶಿಕ್ಷಣದ ಅವಶ್ಯಕತೆ ಇದೆ. ಪುರುಷ ಸಭೆಯನ್ನೇ ಆಕ್ರಮಿಸಿ ಅಗ್ರಪಟ್ಟ ವಹಿಸಲಿ. ಮೊನ್ನೆ ಮೆಕ್ಸಿಕೊದಲ್ಲಿ ನಡೆದಂತೆ ಮೂರ್ಖತನದಲ್ಲಿ ಸಮಾನತೆ ಬೇಡ.

ಸಾಂಸ್ಕೃತಿಕ ರಾಜಕೀಯ ಸ್ವಾತಂತ್ರ್ಯ ಆರ್ಥಿಕ ವ್ಯವಸ್ಥೆಯನ್ನೇ ಅವಲಂಭಿಸಿರುವದರಿಂದ ಸ್ವಾವಲಂಬನೆಯಿಂದಲೇ ಮಹಿಳೆಯರ ಜಾಗೃತಿ ಸಾಧ್ಯ. ಇದು ಆರ್ಯರ ಪ್ರಬಲ ನಂಬಿಕೆ. ಇದನ್ನೆ ಶ್ರೀ ಶಿವಶಂಕರ್ ಅನುಮೋದಿಸಿದರು.

ಸ್ತ್ರೀಯರ ಸಮಸ್ಯೆಯೇ ಬೇರೆ— ಪುರುಷರ ಸಮಸ್ಯೆಯೇ ಬೇರೆ ಎಂಬುದಿಲ್ಲ. ಮಹಿಳೆಯರ ಪ್ರಶ್ನೆ ಪುರುಷರಿಗೂ ಸಂಬಂಧ ಪಟ್ಟಿದೆ. ಇಬ್ಬರೂ ಕೂಡಿ ಪರಿಹಾರ ಹುಡುಕಬೇಕು. ಇದು ಮಾನವೀಯ ಸಮಸ್ಯೆ. ಇದಕ್ಕೆ ಮಾನವೀಯ ಪರಿಹಾರವೇ ಬೇಕು, ಎಲ್ಲರ ಒಮ್ಮತ ಇತ್ತು. ★

ಅಸಾಮಾನ್ಯೆ ಎನಿಸಿದ ಸಾಮಾನ್ಯ ಸ್ತ್ರೀ-ಕುಂತಿ

ಮಹಾಭಾರತದ ಸ್ಮರಣೀಯ ಪಾತ್ರ ಎಂದೆನಿಸುವ ಕುಂತಿ ಅಸಾಮಾನ್ಯ ಎಂದೇ ಪರಿಚಿತ. ಆದರೆ ಆಕೆಯಲ್ಲೂ ಸಾಮಾನ್ಯ ಸ್ತ್ರೀಯಂತೆ ಆಶೆ, ಲೋಭ, ಸ್ವಾರ್ಥ, ಅಪರಾಧ ಮುಚ್ಚಿಡುವ ಮನೋಭಾವಗಳು ಮನೆಮಾಡಿಕೊಂಡಿದ್ದುವು ಎಂಬುದು ಎಷ್ಟು ಜನರಿಗೆ ಗೊತ್ತು?

ಅನುಪಮಾ ನಿರಂಜನ

ಮಹಾಭಾರತದ ಸ್ಮರಣೀಯ ಪಾತ್ರ-ಕುಂತಿ. ಸಾಮಾನ್ಯ ಸ್ತ್ರೀಯ ರಾಗ—ದ್ವೇಷಗಳನ್ನು ತೋರುತ್ತ ಬಾಳಿದ, ಅಸಾಮಾನ್ಯೆ ಈಕೆ. ಕಥೆಯ ಆರಂಭದಿಂದ ಅಂತ್ಯದವರೆಗೆ ವಿವಿಧ ಸನ್ನಿವೇಶಗಳಲ್ಲಿ ಕುಂತಿ ಬೆಳೆಯುವುದನ್ನು ತೊಳಲುವುದನ್ನು, ಧೀಮಂತಿಕೆಯಿಂದ ಎದ್ದು ನಿಲ್ಲುವುದನ್ನು ದುಃಖದಿಂದ ನಲುಗುವುದನ್ನು, ರೋಷ-ಪ್ರತೀಕಾರಗಳಿಂದ ಕುದಿಯುವುದನ್ನು, ವೃದ್ಧಾಪ್ಯದಿಂದ ಕುಸಿಯುವುದನ್ನು ನಾವು ಕಾಣುತ್ತೇವೆ. ಈ ಪಾತ್ರ ಮೀಟುವ ಸ್ವರ ದುಃಖದ್ದು. ಮಹಾಭಾರತ ಕಥೆಯ ಓದುಗರಿಗೆ ಕುಂತಿ ದುಃಖಪಡುವುದಕ್ಕಾಗಿಯೇ ಹುಟ್ಟಿದಳೋ ಎನಿಸುತ್ತದೆ.

ಕುಂತಿ ದೊರೆ ಶೂರಸೇನನ ಮಗಳು. ಇವಳ ಮೊದಲ ಹೆಸರು ಪೃಥೆ ಎಂದು. ಹುಡುಗಿ ಅಷ್ಟೇನೂ ಚೆಲುವೆಯಲ್ಲ. ಆದರೆ ದೃಢಮೈಕಟ್ಟುಳ್ಳವಳು. ಸ್ನೇಹಿತನಾದ ಕುಂತೀಭೋಜನಿಗೆ ಮಕ್ಕಳಿಲ್ಲವೆಂದು, ಶೂರಸೇನ ಕುಂತಿಯನ್ನು ಅವನಿಗೆ ಸಾಕುಮಗಳಾಗಿ ದಾನ ಮಾಡಿದ. ಕುಂತಿಭೋಜನ ಅರಮನೆಗೆ ದುರ್ವಾಸ ಮುನಿಗಳು ಬಂದರು. ಅವರ ಸೇವೆಗೆಂದು ರಾಜ ಕುಂತಿಯನ್ನು ನಿಯಮಿಸಿದ. ಸೇವೆಯೆಂದರೆ, ಆ ಮುನಿಯ ಊಟ ಉಪಚಾರಗಳು, ಪೂಜೆಗೆ ಸಹಾಯ ಮಾಡುವುದರ ಜೊತೆಗೆ, ಆತನ ಸಖಿಯೂ ಆಗುವುದು. ಕುಂತಿಯ ಸೇವೆಗೆ ಸುಪ್ರೀತನಾದ ದುರ್ವಾಸ ಅವಳಿಗೆ ಐದು ಮಂತ್ರಗಳನ್ನು ಉಪದೇಶಿಸಿ, "ನೀನು ಯಾವ ದೇವತೆಯಿಂದಲಾದರೂ ಮಕ್ಕಳನ್ನು ಪಡೆಯಬಹುದು". ಎಂದು ಹೇಳಿದ.

ಕುತೂಹಲ ಭೀತಿ

ಎಳೆಯ ವಯಸ್ಸಿನ, ಕುಂತಿ ಕುತೂಹಲದಿಂದ ಒಂದು ಮಂತ್ರ ಉಚ್ಚರಿಸಿದಾಗ ಸೂರ್ಯದೇವನಿಂದ ಆವಳಿಗೊಂದು ಮಗುವಾಯಿತು. ಅವನೇ ಕರ್ಣ. ಮಂತ್ರ ನುಡಿದೊಡನೆ ಮಗುವಾಗುವ ಸನ್ನಿವೇಶ ವೈಜ್ಞಾನಿಕ ಕಲ್ಪನೆಗೆ ನಿಲುಕಲಾರದ್ದು. ಕುಂತಿ ಒಂದು ವರ್ಷಕಾಲ ಮುನಿಗಳ ಸೇವೆ ಮಾಡಿದಳು ಎಂಬುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಅಷ್ಟು ದಿನ ಅವಳು ತನ್ನ ಸಖೀಜನರಿಂದಲೂ ದೂರವಾಗಿದ್ದಳು. ಆದುದರಿಂದ ಈ ಅವಧಿಯಲ್ಲಿ ಕುಂತಿ ಎಲ್ಲ ಹೆಂಗಸರಂತೆಯೇ ಮಗುವನ್ನು ಹೊತ್ತು ಹೆತ್ತಳು ಎಂಬುದು ಹೆಚ್ಚು ನಂಬುಗೆಗೆ ಅರ್ಹವಾಗುತ್ತದೆ. ಹೆಣ್ಣಿಗೆ ಎಷ್ಟೋ ವಿನಾಯಿತಿಗಳನ್ನು ಕೊಟ್ಟಿದ್ದ ಆ ಕಾಲದಲ್ಲೂ ಅವಿವಾಹಿತ ಕನ್ಯೆಗೆ ಮಗುವಾದಾಗ ಸಮಾಜದ ಹೆದರಿಕೆ ತಪ್ಪಿದ್ದಲ್ಲ. ಆದುದರಿಂದ ಕುಂತಿ ಅಪವಾದ ಹೊರಲು ಅಂಜಿ ಮಗುವನ್ನು, ಅಶ್ವನದಿಯಲ್ಲಿ ತೇಲಿಬಿಟ್ಟಳು. ಈ ಗುಟ್ಟು ಕುಂತಿಯ ಜೀವಮಾನದ ದೊಡ್ಡ ದುರಂತ. ಕರ್ಣ ಹುಟ್ಟಿದಾಗಿನಿಂದ ಸಾಯುವವರೆಗೂ ಅವನ ವಿಷಯ ಅವಳಿಗೆ ಭೀತಿ, ದುಃಖ ತುಂಬಿದ್ದುವು.

ಕ್ಷತ್ರಿಯ ಕನ್ಯೆಯ ತೇಜಸ್ಸು, ಧೀಮಂತಿಕೆ, ಆತ್ಮಾಭಿಮಾನ ಕುಂತಿಯಲ್ಲಿ ತುಂಬಿ ತುಳುಕುತ್ತಿದ್ದುವು. ಅವಳು ಪಾಂಡುವನ್ನು ವರಿಸಿ ಹಸ್ತಿನಾವತಿಗೆ ರಾಣಿಯಾಗಿ ಬಂದಾಗ ಅವಳ ಈ ಲಕ್ಷಣಗಳು ಎಲ್ಲರನ್ನೂ ಮೆಚ್ಚಿಸಿದುವು. ಪಾಂಡು ಯುದ್ಧಗಳಲ್ಲಿ ಹೇರಳ ಧನಕನಕಗಳನ್ನು ಸೂರೆಗೈದು ಬರುವ ವೀರನಾದರೂ ತನಗೆ ಪುತ್ರಸಂತಾನ ನೀಡುವ ಸಾಮರ್ಥ್ಯವಿಲ್ಲದವ ಎಂದು ತಿಳಿದಾಗ ಕುಂತಿಯ ದುಃಖಕ್ಕೆ ನಾಂದಿ. ತನ್ನಿಂದ ಮಕ್ಕಳಿಲ್ಲೆಂದು ಪಾಂಡು ಮಾದ್ರಿಯನ್ನು ವಿವಾಹವಾಗುವನೆಂಬ ಸುದ್ದಿ ಬಂದಾಗ, ಕುಂತಿ ತನ್ನ ಮಂತ್ರಪ್ರಭಾವದಿಂದ ಯಾಕೆ ಮಕ್ಕಳನ್ನು ಪಡೆಯಲಿಲ್ಲವೊ? ಪಾಂಡು ಸುಂದರಿ ಮಾದ್ರಿಯನ್ನು ವಿವಾಹವಾದಾಗ ಕುಂತಿಗೆ ಸಹಜವಾಗಿಯೇ ಈರ್ಷ್ಯೆ. ಆದರೆ ಅವಳಿಗೂ ಪಾಂಡುವಿನಿಂದ ಮಕ್ಕಳಾಗದಾಗ ಸಮಾಧಾನ.

ಇಂಥ ಒಂದು ಪರಿಸ್ಥಿತಿಯಲ್ಲಿ ಪಾಂಡು ರಾಜ್ಯವನ್ನು ಧೃತರಾಷ್ಟ್ರನಿಗೆ ಒಪ್ಪಿಸಿ ಹಿಮಾಲಯದ ತಪ್ಪಲಿನ ಕಾಡಿಗೆ ಹೋಗಲು ನಿರ್ಧರಿಸುತ್ತಾನೆ, ತನ ರಾಣಿಯರೊಂದಿಗೆ. ತನ ಷಂಡತನದ ವಿಷಯ ಪಾಂಡುವಿಗೆ ಗೊತ್ತಿದ್ದಿರಬೇಕು. ಆತ ಕಾಡಿನಲ್ಲಿ ಉಳಿದುದರ ಮುಖ್ಯಕಾರಣ, ಸತ್ಪಾತ್ರರಿಂದ ತನ್ನ ರಾಣಿಯರಿಗೆ ಮಕ್ಕಳಾಗಬೇಕು, ಎಂಬ ಅಭಿಲಾಷೆ. ಹಸ್ತಿನಾವತಿಯಲ್ಲಾದರೆ, ಆ ಮಕ್ಕಳ ತಂದೆ ಯಾರೆಂದು ಎಲ್ಲರಿಗೂ ಗೊತ್ತಾಗಬಹುದು. ಕಾಡಿನಲ್ಲಿ ಆ ಹೆದರಿಕೆಯಿಲ್ಲ.

ಪಾಂಡು ಅರಣ್ಯದಲ್ಲಿ ನೆಲೆಸಿದ ಬಳಿಕ ಒಂದು ದಿನ ಕುಂತಿಯನ್ನು ಕರೆದು,

"ಕುಂತಿ, ಸಂತಾನವಿಲ್ಲದವರಿಗೆ ಸ್ವರ್ಗವಿಲ್ಲ. ಆಪದ್ಧರ್ಮವಾಗಿ ಉತ್ತಮರಿಂದ ಸಂತಾನ ಪಡೆಯುವುದು ಶಾಸ್ತ್ರಸಮ್ಮತ. ನೀನು ಯಾವನಾದರೂ ತಪಸ್ವಿಯಿಂದ ಪುತ್ರವತಿಯಾಗು" ಎಂದು ಸೂಚಿಸಿದ. ಆಗಿನ ಕಾಲದಲ್ಲಿ ಇಂಥ ನಿಯೋಗ ಪದ್ಧತಿ ಅಪರೂಪವಲ್ಲ. ವೇದವ್ಯಾಸರಿಂದ ವಿಚಿತ್ರವೀರ್ಯನ ವಿಧವೆಯರು ಪಾಂಡು, ಧೃತರಾಷ್ಟ್ರ, ವಿದುರರನ್ನು ಪಡೆದಿದ್ದರು, ಅಂದರೆ ಆ ಕಾಲದಲ್ಲಿ ಹೆಣ್ಣು ಇಂದಿನ ಹೆಣ್ಣಿನಷ್ಟು ಗಂಡಸಿಗೆ ಅಧೀನಳಾಗಿರಲಿಲ್ಲ ಅನಿಸುತ್ತದೆ. ವಿವಾಹದ ಹೊರಗಿನ ಸಂಬಂಧ ಮಕ್ಕಳನ್ನು ಪಡೆಯುವುದಕ್ಕೆ ಮಾತ್ರ ಸೀಮಿತವಾಗಿತ್ತು ಎಂಬುದು ಉಲ್ಲೇಖನಾರ್ಹ.

ಮಂತ್ರಗಳಿಂದ ಮಕ್ಕಳು?

ಈ ಸಮಯದಲ್ಲಿ ಕುಂತಿ ತನಗೆ ದುರ್ವಾಸ ಮುನಿಗಳು ಅನುಗ್ರಹಿಸಿದ ಮಂತ್ರದ ವಿಷಯವನ್ನು ಪಾಂಡುವಿಗೆ ಹೇಳುತ್ತಾಳೆ. ವಿವಾಹಪೂರ್ವದಲ್ಲಿ ಮಂತ್ರಶಕ್ತಿಯ ಪ್ರಭಾವದಿಂದ ಮಾತ್ರ ಕರ್ಣ ಹುಟ್ಟಿದ್ದಿದ್ದರೆ ಕುಂತಿ ಆ ವಿಷಯವನ್ನು ಪಾಂಡುವಿಗೆ ಈಗ ಹೇಳುವುದರಲ್ಲಿ ಯಾವ ಬಾಧಕವೂ ಇರಲಿಲ್ಲ. ಹಾಗೆ ಹೇಳಿದ್ದರೆ ಕರ್ಣ ಪಾಂಡುವಿನ ನ್ಯಾಯಬದ್ಧ ಮಗನಾಗುತ್ತಿದ್ದ. ಆದರೆ ಕುಂತಿ ತನ್ನ ಕನ್ಯಾತ್ವಕ್ಕೆ ಆಘಾತದಂತಿರುವ ಆ ಸುದ್ದಿಯನ್ನು ಹೇಳಲು ಹಿಂಜರಿದಳು.

ಮಹಾಭಾರತದಲ್ಲಿ ಚಿತ್ರಿತವಾಗಿರುವಂತೆ ಕುಂತಿ ತಾಯಿಯಾದ ಬಗೆ ಅಸಹಜವೆನಿಸುತ್ತದೆ. ಕನ್ಯೆಯಾಗಿದ್ದಾಗ ಸೂರ್ಯದೇವನನ್ನು ಕುರಿತು ಮಂತ್ರ ಪಠಿಸಿದಾಗ, ಮಗು ತಕ್ಷಣ ಎದುರಿಗೆ ಗೋಚರಿಸುತ್ತದೆ. ಆದರೆ ಮುಂದೆ ಕಾಡಿನಲ್ಲಿ ನವಮಾಸ ತುಂಬಿ ಮಕ್ಕಳನ್ನು ಹಡೆಯುತ್ತಾಳೆ. ಈ ಸಂದರ್ಭಗಳು ಪರಸ್ಪರ ಆಭಾಸಕಾರಿ.

ಕುಮಾರವ್ಯಾಸ ಭಾರತದಲ್ಲಿ ಕುಂತಿ ಯಮಧರ್ಮರಾಯನನ್ನು ಪ್ರಾರ್ಥಿಸಿದ ಅನಂತರದ ಸನ್ನಿವೇಶ ಹೀಗೆ ಚಿತ್ರಿತವಾಗಿದೆ.

ಸತಿಯ ಸಮ್ಮುಖನಾಗಿ ದೈವ
ಸ್ವತನು ನುಡಿದನಿದೇಕೆ ನಮ್ಮ
ಕ ತಿಗೆ ಬರಿಸಿದೆಯೆನಲು ಲಜ್ಜಾವನತೆ
ಮುಖಿಯಾಗಿ

ಸುತನ ಕರುಣಿಪುದೆನಲು ಭಯಪರಿ
ವಿತತ ವಿಮಲಸ್ವೇದಜಲ ಕಂ-
ಪಿತೆಯ ಮುಟ್ಟಿ ತಥಾಸ್ತು ವೆನುತ ಕೃತಾಂತ
ಬೀಳ್ಕೊಂಡ

ಧಾರುಣೀಪತಿ ಕೇಳು ಕುಂತೀ
ನಾರಿಗಾದುದು ಗರ್ಭ ಹರುಷದ
ಭಾರದಲಿ ತಗ್ಗಿದಳು ನವಪೂರ್ಣಮಾಸದಲಿ

ಚಾರುತರ ನಕ್ಷತ್ರ ಶುಭದಿನ
ವಾರಲಗ್ನದೊಳಿಂದು ಕುಲ
ವಿಸ್ತಾರಕನು ಸುಕುಮಾರನವತರಿಸಿದನು ಧರಣಿಯಲಿ

ಯಮಧರ್ಮ ಕುಂತಿಯನ್ನು ಮುಟ್ಟಿದನೆಂಬ ಮಾತ್ರಕ್ಕೆ ಆಕೆ ಗರ್ಭವತಿಯಾದಳು ಎಂಬುದು ನಂಬಲ ಸಾಧ್ಯವಾದ ಸಂಗತಿ. ವೈಜ್ಞಾನಿಕವಾಗಿ ಇದಕ್ಕೆ ವಿವರಣೆ ಇಲ್ಲ. ಬಹುಶಃ ಕುಂತಿ ಬೇರೆ ಬೇರೆ ತಪಸ್ವಿಗಳಿಂದ ಗರ್ಭವತಿಯಾಗಿರಬಹುದು. ಆದರೆ ರಾಜಕುಮಾರರಿಗೆ ದೇವತೆಗಳೇ ತಂದೆಯರಾಗಬೇಕು ಎಂಬ ಹೆಗ್ಗಳಿಕೆ ಮಂತ್ರಸೃಷ್ಟಿಗೆ ಮೂಲವಾಗಿರಬೇಕು. ಅಂತೂ ಕುಂತಿ ಮೂರು ಮಕ್ಕಳ ತಾಯಿಯಾಗುತ್ತಾಳೆ. ಆದರೆ ಪಾಂಡುವಿಗೆ ಮಕ್ಕಳ ಆಸೆ ಹಿಂಗದೆ ಸುಂದರನಾದ ಇನ್ನೊಬ್ಬ ಮಗನನ್ನು ಕೋರುತ್ತಾನೆ. ಆಗ ಕುಂತಿ ಈ ಬೇಡಿಕೆಯನ್ನು ನಿರಾಕರಿಸುತ್ತಾಳೆ. "ಮೂರು ಮಕ್ಕಳಿಗಿಂತ ಹೆಚ್ಚಾಗಿ ಯಾವ ಆಪದ್ಧರ್ಮವೂ ಒಪ್ಪುವುದಿಲ್ಲ. ಇನು ಮಕ್ಕಳನು ಪಡೆದರೆ ನಾನು ಸಂಯಮಹೀನೆ, ಸ್ವೇಚ್ಛಾಚಾರಿಣಿ ಎನಿಸಿಕೊಂಡೇನು!" ಎನ್ನುತ್ತಾಳೆ. ಈ ಮಾತುಗಳಲ್ಲಿ ಕುಂತಿಯ ದಿಟ್ಟತನ ಹಾಗೂ ಆರೋಗ್ಯಪ್ರಜ್ಞೆ ವ್ಯಕ್ತವಾಗುತ್ತದೆ.

ಅಕ್ಕ-ತಂಗಿ

ಆಗ ಮಾದ್ರಿ ಪಾಂಡುವನ್ನು ಬೇಡಿ ಕುಂತಿಯಿಂದ ಒಂದು ಮಂತ್ರ ಪಡೆದು ತಾನೂ ಇಬ್ಬರು ಮಕ್ಕಳಿಗೆ ಜನ್ಮವೀಯುತ್ತಾಳೆ. ಬಳಿಕ ಅವಳು ಮತ್ತೊಂದು ಮಂತ್ರಕ್ಕಾಗಿ ಬೇಡಿದಾಗ ಕುಂತಿ,

"ಮಾದ್ರಿಗೆ ಮಂತ್ರ ಹೇಳಿಕೊಟ್ಟ ನಾನು ಮೂರ್ಖೆ. ಒಂದು ಮಂತ್ರದಿಂದ ಇಬ್ಬರು ಮಕ್ಕಳನ್ನು ಪಡೆದ ಇವಳು ಬಲು ಜಾಣೆ. ಇನ್ನೊಂದು ಮಂತ್ರ ಹೇಳಿಕೊಟ್ಟರೆ ಇವಳು ಇನ್ನೆಷ್ಟು ಮಕ್ಕಳನ್ನು ಪಡೆಯುವಳೋ ದೇವರಿಗೇ ಗೊತ್ತು!"–ಎಂದು ವ್ಯಂಗ್ಯ ನುಡಿಯಾಡುತ್ತಾಳೆ. ಕುಂತಿ ಎಷ್ಟಾದರೂ ಹೆಣ್ಣಲ್ಲವೆ?

ಈ ಪರಿಸ್ಥಿತಿಯಲ್ಲಿ ಕುಂತಿಗೆ, ತಾವು ಕಾಡಿಗೆ ಬಂದ ಕೆಲಸವಾಯಿತು. ಇನ್ನು ಮಕ್ಕಳೊಂದಿಗೆ ಹಸ್ತಿನಾವತಿಗೆ ಹಿಂತಿರುಗಿ ಸುಖವಾಗಿ ರಾಜ್ಯಭಾರ ಮಾಡಿಕೊಂಡಿರಬಹುದು ಎಂದು ತೋಚುತ್ತದೆ–

ಈ ಸಮಯದಲ್ಲಿ ಪಾಂಡು ಕಾಡಿನಲ್ಲಿ ಒಂಟಿಯಾಗಿ ಸಿಕ್ಕ ಮಾದ್ರಿಯನ್ನು ಕೂಡಿ ಆ ಘಳಿಗೆ ಋಷಿಶಾಪದಂತೆ ಸತ್ತ: ರೋಗಗ್ರಸ್ತನಾಗಿದ್ದ ಪಾಂಡು ಕೂಡುವಿಕೆಯ ಉದ್ವೇಗದಲ್ಲಿ ಹೃದಯಾಘಾತಕ್ಕೆ ತುತ್ತಾಗಿರಬಹುದು ಎಂಬುದು ಹೆಚ್ಚು ಸುಸಂಬದ್ಧ ತರ್ಕ.

ಆಗ ಮಾದ್ರಿ ಗಾಬರಿಯಿಂದ ಕುಂತಿ ಮತ್ತು ಮಕ್ಕಳು ಹತ್ತಿರದಲ್ಲಿಯೇ ಬರುತ್ತಿರುವುದನ್ನು ಗಮನಿಸಿ "ಕುಂತೀ ಬೇಗ ಬಾ. ನೀನೊಬ್ಬಳೇ ಬಾ. ಮಕ್ಕಳನ್ನು ದೂರವಿರಿಸು", ಎಂದು ಕೂಗಿಕೊಂಡಾಗ ಕುಂತಿ ಏನಾಗಿದೆಯೆಂಬುದನು ಊಹಿಸಿದ್ದಳು.

"ಸರ್ವನಾಶಮಾಡಿದೆ. ಇಷ್ಟು ದಿನ ನಾನು ಪಾಂಡುವನ್ನು ಕಾಪಾಡಿದೆ. ಅವನನ್ನು ನೀನು ಯಾಕೆ ಪ್ರಚೋದಿಸಿದೆ?" ಎಂದು ಕುಂತಿ ಅಂಥ ದುರ್ಭರ ಸನ್ನಿವೇಶದಲ್ಲೂ ಕೋಪ ಅಸೂಯೆಗಳಿಂದಲೇ ಪ್ರಶ್ನಿಸುತ್ತಾಳೆ. ಗಂಡ ಸತ್ತ ಮೇಲೆ ವೈಧವ್ಯದ ಬದುಕುಬೇಡ ಎಂದುಕೊಂಡ ಕುಂತಿ, "ನಾನು ಪಾಂಡುವಿನ ಜೊತೆ ಸಾಯುತ್ತೇನೆ. ನೀನು ಮಕ್ಕಳನ್ನು ನೋಡಿಕೋ", ಎಂದು ಮಾದ್ರಿಗೆ ಹೇಳುತ್ತಾಳೆ. ಮಾದ್ರಿ ವೈಧವ್ಯದ ಜೀವನಕ್ಕಿಂತಲೂ ಸುಲಭವಾದ ಸಹಗಮನದ ದಾರಿಯನ್ನು ಆಯ್ದುಕೊಳ್ಳುತ್ತಾಳೆ. ಆದರೆ ಕುಂತಿ ಅನಾಥ ಮಕ್ಕಳೊಂದಿಗೆ ಸವೆಸಬೇಕಾದ ದಾರಿ ಬಹು ದುರ್ಗಮವಾಗಿತ್ತು. ತನ್ನ ಮಕ್ಕಳು ಸಾಲದೆಂಬಂತೆ ಮಾದ್ರಿಯ ಮಕ್ಕಳ ಹೊಣೆ ಬೇರೆ. ಸವತಿಯ ಮಕ್ಕಳನ್ನೂ ಅನನ್ಯ ಪ್ರೀತಿಯಿಂದ ಬೆಳಸಿದ ಹೆಗ್ಗಳಿಕೆ ಕುಂತಿಗೆ ಸಲ್ಲುತ್ತದೆ.

ಕುಂತಿ ಹಸ್ತಿನಾಪುರಕ್ಕೆ ಬರುತ್ತಾಳೆ. ರಾಣಿಯಾಗಿಯಲ್ಲ-ನಿರ್ಗತಿಕ ವಿಧವೆಯಾಗಿ. ಆದರೆ ಅವಳಿಗೊಂದು ವಿಶ್ವಾಸ. ಭೀಷ್ಮನಿರುವವರೆಗೆ ತನ್ನ ಮಕ್ಕಳಿಗೆ ಅನ್ಯಾಯವಾಗುವುದಿಲ್ಲ ಎಂದು. ಕೌರವ–ಪಾಂಡವರು ಬೆಳೆಯುತ್ತ ಯಾವಾಗಲೂ ಜಗಳ. ಭೀಮನದೇ ಸದಾ ಮೇಲುಗೈ. ಅದನ್ನು ಕಂಡು ಕುಂತಿಗೆ ಹೆಮ್ಮೆಯಾದರೂ ಮುಂದೇನಾಗುವುದೋ ಎಂಬ ಅಳುಕು ಬಾಧಿಸದೆ ಬಿಡದು. ಧರ್ಮರಾಜನು ಸ್ಫುರದ್ರೂಪಿ ಯುವಕನಾಗಿ ಬೆಳೆಯುತ್ತಿದ್ದ ಹಾಗೆ–ಅವನ ನಡವಳಿಕೆ, ಬುದ್ಧಿವಂತಿಕೆ, ನ್ಯಾಯವಿವೇಚನೆ ಇವು ಹಸ್ತಿನಾಪುರದ ಜನರನ್ನು ಮೆಚ್ಚಿಸಿ, ಇವನೇ ರಾಜನಾಗುತ್ತಾನೆ ಎಂದು ಗುಸುಗುಸು ನುಡಿದಾಗ, ಕುಂತಿಗೆ ತನ್ನ ಮಗನಿಗೆ ರಾಜ್ಯ ಸಿಕ್ಕಿಯೇ ಬಿಟ್ಟಿತು ಎಂಬಷ್ಟು ಹರುಷ. ಆದರೆ ಅನಂತರ ಅರಗಿನ ಮನೆಗೆ ಗಡೀಪಾರಾಗಿ ಸದಾ ಸಾವಿನ ನೆರಳಲ್ಲಿ ಬದುಕಿರುವಾಗ, ಕುಂತಿ ಹಗಲಿರುಳು ಕಣ್ಣಲ್ಲಿ ಕಣ್ಣಿಟ್ಟು ಮಕ್ಕಳನು ಕಾಪಾಡುತ್ತಾಳೆ. ಪಾಂಡವರು ಅರಗಿನ ಮನೆಗೆ ಬೆಂಕಿಯಿಟ್ಟು ಕಾಡಿನಲ್ಲಿ ಹರದಾರಿಗಟ್ಟಲೆ ನಡೆದು ಆಯಾಸವಾಗಿ ಕುಂತಿ ನೆಲದ ಮೇಲೆ ಮಲಗಿ ನಿದ್ದೆ ಮಾಡಿದಾಗ ಭೀಮ, "ಹಂಸತೂಲಿಕಾತಲ್ಪದಲ್ಲಿ ಮಲಗಿರಬೇಕಾದ ತಾಯಿ ಕಲ್ಲುಮುಳ್ಳುಗಳಿರುವ ನೆಲದ ಮೇಲೆ ಮಲಗಿರುವಳಲ್ಲಾ!" ಎಂದು ಪ್ರಲಾಪಿಸುತ್ತಾನೆ. ಕುಂತಿಗೆ ಮಾತ್ರ ಗಾಢನಿದ್ರೆ. ಕಾಡಿನವಾಸ ಅವಳಿಗೆ ಹೊಸತಲ್ಲ. ಕಷ್ಟ ಅನುಭವಿಸಲಿಕ್ಕೆಂದೇ ಹುಟ್ಟಿದವಳು ಕುಂತಿ.

ಕುಶಲ ರಾಜಕಾರಣಿ

ಭೀಮ ಹಿಡಿಂಬೆಯನ್ನು ಮದುವೆಯಾಗುವಂತೆ ಕುಂತಿ ಪ್ರೋತ್ಸಾಹಿಸಿದಳು. ಹಿಡಿಂಬೆ ರಾಕ್ಷಸಿ ಎಂದು ವರ್ಣಿತವಾಗಿದ್ದರೂ ವಾಸ್ತವವಾಗಿ ಅವಳು ಅನಾರ್ಯಳಾದ ಕಾಡು ಸ್ತ್ರೀ ಇರಬೇಕು. ರಾಜ್ಯವಿಲ್ಲದೆ ಕಷ್ಟದಲ್ಲಿರುವ ತಮಗೆ ಯಾರಿಂದಲಾದರೂ ನೆರವು ಸಿಕ್ಕಿದರೆ ಸಾಕು, ಎಂಬ ಚಿಂತೆಯಲ್ಲಿದ್ದ ಕುಂತಿಗೆ, ಹಿಡಿಂಬೆಯ ಬೇಡಿಕೆ ಹರುಷ ತಂದಿತ್ತು. ಆಕೆ ಭೀಮನನ್ನು ಪ್ರೋತ್ಸಾಹಿಸಿದ ಮುಖ್ಯ ಕಾರಣ, ಹಿಡಿಂಬೆಯ ಸಂಬಂಧದಿಂದ ತಮ್ಮ ಬಲವೃದ್ಧಿಯಾಗುವುದೆಂಬ ನಂಬಿಕೆಯೇ. ಈ ದೃಷ್ಟಿಯಿಂದ ನೋಡಿದಾಗ, ಕುಂತಿ ರಾಜಕಾರಣಿಗಳಿಗಿಂತ ಕುಶಲಮತಿ ಎನಿಸುತ್ತದೆ.

ಬಕಾಸುರನನ್ನು ಕೊಲ್ಲಲು ಭೀಮನಿಗೆ ಪ್ರಚೋದನೆ ನೀಡಿದವಳೂ ಕುಂತಿಯೇ. ತನಗೆ ಕಡುಬಡತನವಿದ್ದರೂ ಇನ್ನೊಬ್ಬರಿಗೆ ಒಳಿತುಮಾಡುವ ಹಂಬಲ ಅವಳಿಗೆ. ಅಂತೆಯೇ ಅವಳು ಏಕಚಕ್ರದಲ್ಲಿ ತಾವಿದ್ದ ಮನೆಯ ಬ್ರಾಹ್ಮಣನಿಗೆ "ಸಾಕಲಾರೆನು ಮಗನನಾತನ, ನೂಕುವೆನು ನಿಮ್ಮಸುರನೂಟಕೆ, ಸಾಕು ತನಗುಳಿದವರು," ಎಂದು ತೋರಿಕೆಯ ಮಾತನಾಡುತ್ತಾಳೆ. ಆದರೆ ಭೀಮ ಬಕಾಸುರನನ್ನು ಕೊಂದೇ ಬರುವನೆಂಬ ಆತ್ಮವಿಶ್ವಾಸ ಅವಳಿಗಿದೆ.

ಮುಂದೆ, ಪಾಂಡವರು ದ್ರೌಪದಿಯನ್ನು ಗೆದ್ದು ತಂದು ಮನೆಬಾಗಿಲಿನಲ್ಲಿ ನಿಂತು, "ಅಮ್ಮಾ, ನಾವೇನು ತಂದಿದೀವಿ ನೋಡು". ಎಂದಾಗ ಕುಂತಿ ಒಳಗಿನಿಂದಲೇ "ಮಕ್ಕಳೇ, ಏನು ತಂದಿದೀರೋ ಅದನ್ನು ಸಮವಾಗಿ ಹಂಚಿಕೊಳ್ಳಿ!" ಎಂದು ಉತ್ತರವಿತ್ತಳೆಂದು ಭಾರತದಲ್ಲಿದೆ. ತಾಯಿಯ ಮಾತು ಗುರುವಿನ ಮಾತಿಗಿಂತ ಹೆಚ್ಚು ಎಂದು ಪಾಂಡವರು ಭಾವಿಸಿದರು

ಆದರೆ ಆ ಮಾತನ್ನು ಕುಂತಿ, ಬಾಯಿ ತಪ್ಪಿ ಹೇಳಿದಳು ಎನ್ನುವುದಕ್ಕಿಂತ ಉದ್ದೇಶಪೂರ್ಣವಾಗಿಯೇ ಹೇಳಿದಳು ಎನ್ನುವುದು ಅರ್ಥಪೂರ್ಣ. ಯಾಕೆಂದರೆ ದ್ರೌಪದಿಯಿಂದಾಗಿ ಕುಂತಿ ಮತ್ತು ಮಾದ್ರಿಯರ ಮಕ್ಕಳು ಒಡೆಯಲಾರದ ಬಂಧನಕ್ಕೆ ಒಳಗಾದರು. ಯಾರೇ ಆಗಲಿ ಎಂದೂ ಆ ಐದು ಜನರನ್ನು ಬೇರ್ಪಡಿಸಲು ಸಾಧ್ಯವಾಗಲಿಲ್ಲ.

ಮದುವೆಯಾದ ದಿನವೇ ದ್ರೌಪದಿಗೆ ಕುಂತಿ ಪಾಂಡವರ ಜವಾಬ್ದಾರಿ ವಹಿಸಿದ್ದಳು. ದ್ರುಪದರಾಜನ ಬೆಂಬಲದಿಂದಾಗಿ ತನ್ನ ಮಕಳಿಗೆ ಮತ್ತೆ ರಾಜ್ಯ ಸಿಗುತ್ತದೆ ಎಂದು ಕುಂತಿ ದೃಢವಾಗಿ ನಂಬಿದ್ದಳು. ಮುಂದೆಯಾದರೂ ಸುಖವಾಗಿ ಶಾಂತವಾಗಿ ಬದುಕಬೇಕೆಂಬ ಅವಳ ಆಸೆ. ಇಂದ್ರಪ್ರಸ್ಥಕ್ಕೆ ಬಂದು ಕೆಲವು ವರ್ಷ ರಾಜ್ಯಭಾರ ಮಾಡಿದ ಬಳಿಕ ಧರ್ಮರಾಯ ಜೂಜಾಡಿ ರಾಜ್ಯಕಳೆದುಕೊಳ್ಳುತ್ತಾನೆ. ಈ ವೇಳೆಗೆ ಕುಂತಿಯ ಜೀವನದಲ್ಲಿ ವೃದ್ಧಾಪ್ಯ ಕಾಲಿರಿಸಿತ್ತು. ಮಕ್ಕಳನ್ನು ಕಾಡಿಗೆ ಹಿಂಬಾಲಿಸಲು ಸಾಧ್ಯವಿಲ್ಲದೆ. ವಿದುರನ ಮನೆಯಲ್ಲಿ ಹಂಗಿಗೆ ಒಳಗಾಗಿ ಅವಳು ಬಾಳುತ್ತಾಳೆ.

ನತದೃಷ್ಟ ಹೆಣ್ಣು

ಪಾಂಡವರು ವನವಾಸಕೆ ಹೋದ ಮೇಲೆ ಹಸ್ತಿನಾವತಿಯಲ್ಲಿ ಕುಂತಿ ಅನುಭವಿಸಿದ ನರಕ ಯಾತನೆ ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿದೆ. ಕುಂತಿ ಶತ್ರುಗಳ ಮಧ್ಯೆ ಬಾಳಿ ಅವರ ಸಿರಿಯನ್ನೂ, ಸಂತೋಷ ಸಂಭ್ರಮಗಳನ್ನೂ ಕಂಡು, ಈ ಸಡಗರ ತನ್ನ ಮಕ್ಕಳಿಗೆ ಇಲ್ಲವಲ್ಲ ಎಂದು ಸಂಕಟಪಡುತ್ತಾಳೆ. ಕೌರವರ ಅನ್ನ ತಿಂದು ಬದುಕಿದರೂ ಅವರ ಬಗ್ಗೆ ಆಕೆಗೆ ತಿರಸ್ಕಾರ, ದ್ವೇಷ, ರೋಷಗಳಿದ್ದುವೆಂಬುದು ಸರ್ವವಿದಿತ. ಕೃಷ್ಣ ದೌತ್ಯಕ್ಕೆ ಬಂದಾಗ ಅವನ ಮುಂದ ಕಣ್ಣೀರು ಸುರಿಸುತ್ತಾ ತಾನು ಚಿಕ್ಕಂದಿನಿಂದ ಅನುಭವಿಸಿದ ಕಷ್ಟವನ್ನು ವರ್ಣಿಸುತ್ತಾಳೆ; "ರಾಜನ ಮಗಳಾಗಿ ಹುಟ್ಟಿ ಮಹಾರಾಜನ ಕೈಹಿಡಿದರೂ ಪಾಂಡುವಿನ ಅಚಾತುರ್ಯದ ವರ್ತನೆಯಿಂದಾಗಿ ರಾಣಿ ಪಟ್ಟ ಕಳೆದುಕೊಂಡೆ. ರಾಜನ ತಾಯಿಯಾದರೂ ಮಗನ ಜೂಜಾಟದಿಂದಾಗಿ ಅದನ್ನು ಕಳೆದುಕೊಂಡೆ. ಶಾಂತಿ ಸಂಧಾನದಿಂದ ಕ್ಷತ್ರಿಯರಲ್ಲಿ ತಿರಸ್ಕಾರ, ಅವಹೇಳನ ಹೊರತು ಬೇರೇನೂ ಸಿಗದು. ಮಕ್ಕಳು ಯಾರಿಗೂ ಬಗ್ಗಬಾರದು".

ಇವು ಕ್ಷತ್ರಿಯ ಸ್ತ್ರೀಗೆ ಉಚಿತವಾದ ಮಾತು ಕುಂತಿಯ ಧೈರ್ಯ, ಗಡಸುತನ, ಪ್ರತೀಕಾರದ ಮನೋಭಾವ ಇವೆಲ್ಲ ಈ ಮಾತುಗಳಲ್ಲಿ ಪ್ರತಿಫಲಿತವಾಗಿವೆ.

ಧರ್ಮರಾಜನಿಗೆ–"ನಿನ್ನ ವರ್ತನೆಯಿಂದ ನೀನು ಧರ್ಮವನ್ನೇ ನಾಶಮಾಡುತ್ತಿದ್ದೀ. ಬ್ರಹ್ಮನ ಎದೆಯಿಂದ ಹುಟ್ಟಿದ ಕ್ಷತ್ರಿಯರು ಹೇಡಿಗಳಾಗಬಾರದು. ತಮ್ಮ ಬಾಹುಬಲದಿಂದ ಎಲ್ಲರನ್ನೂ ಜಯಿಸಿ ಪ್ರಜೆಗಳನ್ನು ಕಾಪಾಡಬೇಕು. ಯಾವ ರಾಜ ಈ ಧರ್ಮವನ್ನು ಮರೆಯುತ್ತಾನೋ ಅವನು ನರಕಕ್ಕೆ ಹೋಗುತ್ತಾನೆ. ನ್ಯಾಯವಾಗಿ ನಿನಗೆ ಸಲ್ಲಬೇಕಾದ್ದನ್ನು ಪಡೆ. ನೀನು ಬದುಕಿರುವಾಗ ನಾನು ಹೆರರ ಅನ್ನ ತಿಂದು ಬದುಕಬೇಕಾದ್ದಕ್ಕಿಂತ ಅವಮಾನಕರವಾದ್ದು ಇನ್ನಾವುದೂ ಇಲ್ಲ."

ಭೀಮ, ಅರ್ಜುನರಿಗೆ– "ನಿಮ್ಮ ತಾಯಿಯ ಆಸೆಯನ್ನು ಪೂರೈಸಲು ಇದು ಸಕಾಲ; ಯುದ್ಧ ಮಾಡಿ ಗೆದ್ದು ನಿಮ್ಮಣ್ಣನನ್ನು ರಾಜನನ್ನಾಗಿ ಮಾಡಿ.

ದ್ರೌಪದಿಗೆ– "ನಿನಗಾದ ಅವಮಾನಕ್ಕೆ ಪ್ರತೀಕಾರವಾಗಲೇಬೇಕು. ನೀನು ಕ್ಷತ್ರಿಯ ಕುಲದಲ್ಲಿ ಹುಟ್ಟಿದ ಕನ್ಯೆ ಎಂಬುದನ್ನು ಮರೆಯಬೇಡ."

ಕುಂತಿ ಅಬಲೆಯಲ್ಲ, ಸಬಲೆ ಎಂಬುದು ಈ ಮಾತುಗಳಿಂದ ಸ್ಪಷ್ಟ. ಚಾಟಿಯಲ್ಲಿ ಹೊಡೆದಂಥ ಮಾತುಗಳು. ಉದ್ದೇಶ ಒಂದೇ; ಯುದ್ಧಕ್ಕೆ ಪ್ರಚೋದನೆ, ಸೇಡು ತೀರಿಸಿಕೊಳ್ಳುವ ಆಸೆ. ತಾನು ಮತ್ತೆ ರಾಜಮಾತೆಯಾಗಿ ಮೆರೆಯಬೇಕೆಂಬ ಬಯಕೆ.

ನೀನು ತಾಯಿಯೆ ?

ಆದರೆ ಕುಂತಿಗೆ ಒಂದೇ ಚಿಂತೆ. ವೀರಾಗ್ರಣಿ ಕರ್ಣ, ದುರ್ಯೋಧನನ ಕಡೆ ಇರುವವರೆಗೆ ಪಾಂಡವರಿಗೆ ಕೇಡು ತಪ್ಪಿದ್ದಲ್ಲ ಎಂದು. ಹೇಗಾದರೂ ಅವನನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವ ಹಂಬಲ ಅವಳದು. ಕರ್ಣ ತಮ್ಮ ಕಡೆಗೆ ಬಂದರೆ ಕೌರವರನು ಅನಾಯಾಸವಾಗಿ ಗೆಲ್ಲಬಹುದೆಂದು ಅವಳ ತರ್ಕ. ಕರ್ಣ ಹುಟ್ಟಿದಾಗಿನಿಂದ ತನ್ನ ಜನ್ಮರಹಸ್ಯ ತಿಳಿಯದೆ ಬೆಳೆದವನು. ಅವನಿಗೆ ಈ ಗುಟ್ಟು ಹೇಳುವುದರ ಮೂಲಕ ಆ ತನ್ನ ಮಗನೂ ಬದುಕಿ ಉಳಿದು ಪಾಂಡವರ ಹಿರಿಯಣ್ಣನಾಗಿ, ಮಹಾರಾಜನಾಗಿ, ರಾಜ್ಯವಾಳಲಿ ಎಂದು ಕುಂತಿ ಆಸೆಪಡುತ್ತಾಳೆ.

ಕರ್ಣ ಅನ್ನುತ್ತಾನೆ– "ಹುಟ್ಟಿದ ಕೂಡಲೇ ನನ್ನ ನದಿಗೆ ಎಸೆದ ನೀನು ತಾಯಿಯೆ ? ಈಗ ನನ್ನ ಮಗ ಅಂತ ಕರೆದು ಏನು ಪ್ರಯೋಜನ? ಕ್ಷತ್ರಿಯ ಸಂಸ್ಕಾರಗಳಿಲ್ಲದೆ ನಾನು ಬೆಳೆಯುವಂತೆ ಮಾಡಿದ ನಿನಗಿಂತ ಹೆಚ್ಚಿನ ಶತ್ರುಗಳಿಲ್ಲ. ನಿನ್ನ ಸ್ವಂತ ಉಪಯೋಗಕ್ಕೋಸ್ಕರ ಈಗ ಬಂದಿದ್ದೀ. ರಾಜನಾಗುವ ಲೋಭದಿಂದ ನನ್ನನ್ನು ನಂಬಿದ ದುರ್ಯೋಧನನ ಕೈಬಿಡಲಾರೆ. ಅರ್ಜುನನ್ನು ಬಿಟ್ಟು ಬೇರೆ ಪಾಂಡವರನ್ನು ನಾನು ಕೊಲ್ಲೋದಿಲ್ಲ. ಆದ್ದರಿಂದ ನಾನು ಅಥವಾ ಅರ್ಜುನ, ಇಬ್ಬರಲ್ಲಿ ಯಾರು ಸತ್ತರೂ ನಿನಗೆ ಐದು ಮಕ್ಕಳು ಇದ್ದೇ ಇರುತ್ತಾರೆ".

ಆ ಮಾತುಗಳನ್ನು ಕೇಳಿ ಕುಂತಿ ಕಣ್ಣೀರು ಸುರಿಸುತ್ತಾಳೆ. ತಾನು ಮಾಡಿದ ಪಾಪಕಾರ್ಯಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತು ಎಂದು ಆ ಕ್ಷಣ ಆಕೆಗೆ ಅನಿಸಿರಬೇಕು.

ಮಹಾಭಾರತ ಯುದ್ಧ ಮುಗಿದು ಶವಗಳಿಗೆ ಅಂತಿಮಸಂಸ್ಕಾರ ಮಾಡುವ ಸಂದರ್ಭದಲ್ಲಿ ಕುಂತಿ ಕರ್ಣನ ವಿಷಯವನ್ನು ಧರ್ಮರಾಜನಿಗೆ ಹೇಳುತ್ತಾಳೆ. "ಕ್ಷತ್ರಿಯ ಸಂಸ್ಕಾರವಿಲ್ಲದೆ ನಾನು ಬೆಳೆಯುವಂತೆ ಮಾಡಿದೆ", ಎಂದು ಕರ್ಣ ಹೇಳಿದ ಮಾತನ್ನು ಅವಳು ಎಂದೂ ಮರೆಯುವಂತಿರಲಿಲ್ಲ. ಸತ್ತ ಮೇಲೆ ಸರಿಯಾದ ಸಂಸ್ಕಾರ ಮಾಡಿದರೆ ಸ್ವರ್ಗ ಸೇರುವರು, ಎಂಬ ನಂಬಿಕೆ ಅವಳದು. ಕರ್ಣ ಬದುಕಿರುವವರೆಗೆ ತಾಯಿಯಾಗಿ ಅವನಿಗೆ ತಾನು ಏನೂ ಮಾಡಲಾರದೆ ಹೋದೆ, ಎಂಬ ಕೊರಗಿತ್ತು. ಆದ್ದರಿಂದ ಅವನು ಸತ್ತ ಬಳಿಕ ಸೂಕ್ತ ಕರ್ಮಗಳನ್ನಾದರೂ ಮಾಡಿಸಿ, ಕರ್ತವ್ಯ ಮುಗಿಸಬೇಕು ಎಂಬ ಹಂಬಲ ಕುಂತಿಗೆ ಇದ್ದ ಹಾಗೆ ಕಾಣುತ್ತದೆ.

ಈ ವಿಷಯ ತಿಳಿದಾಗ ಧರ್ಮರಾಯ ಹೇಳುತ್ತಾನೆ: "ನಿನ್ನ ಗುಟ್ಟು ನಮ್ಮನ್ನೆಲ್ಲಾ ನಾಶಮಾಡಿತು. ನೀನೇ ಮಹಾಭಾರತ ಯುದ್ಧಕ್ಕೆ ಮೂಲ. ನೀನು ಕರ್ಣ ನಮ್ಮವನೆಂದು ಆಗಲೇ ಹೇಳಿದ್ದಿದ್ದರೆ, ಈ ಯುದ್ಧವೇ ಇರುತ್ತಿರಲಿಲ್ಲ.!"

ತನಗೆ ಅತ್ಯಂತ ಪ್ರಿಯನಾದ ಮಗನಿಂದ ಇಂಥ ನಿಂದನಾವಾಕ್ಯಗಳನ್ನು ಕೇಳಿದ ಕುಂತಿಯು ಮನಸ್ಸು ಛಿದ್ರಛಿದ್ರ. ತಾನು ಮತ್ತು ತನ್ನ ಗುಟ್ಟು ಮಹಾ ಭಾರತ ಯುದ್ಧಕ್ಕೆ ಮೂಲವಾಯಿತು. ಎಂಬ ಕೊರಗು ಪಾತ್ರ ಅವಳನ್ನು ಕಡೆಯುವರೆಗೂ ಬಾಧಿಸುತ್ತದೆ.

ಹಿರಿಯರ ದುಃಖಕ್ಕೆ ಮೂಲ

ಮುಂದೆ ಧರ್ಮರಾಯ ರಾಜನಾಗಿ ಹದಿನೈದು ವರ್ಷ ರಾಜ್ಯವಾಳಿದ. ಹಣ, ಕೀರ್ತಿ ಯಶಸ್ಸು ಎಲ್ಲವೂ ಕುಂತಿಯ ಮುಂದೆ ರಾಶಿರಾಶಿ. ಅವುಗಳಿಗಾಗಿ ಆಸೆ ಪಟ್ಟ ಅವಳು ಇನ್ನೂ ಅನೇಕ ವರ್ಷಗಳು ಈ ಇಹದ ಸುಖಗಳನ್ನು ಸವಿಯುತ್ತಾ ಇರಬಹುದಾಗಿತ್ತು. ಆದರೆ ಕ್ರಮೇಣ ಅವಳ ಮನಸ್ಸು ಪಾರಮಾರ್ಥಿಕ ದತ್ತ ಸರಿಯುತ್ತಿತ್ತು. ಇದರಲ್ಲಿ ವಿಶೇಷವೇನೂ ಇಲ್ಲ. ವೃದ್ಧಾಪ್ಯದಲ್ಲಿ ಇಂಥ ಮನಃಸ್ಥಿತಿ ಬಹು ಸಾಮಾನ್ಯ. ಆದ್ದರಿಂದಲೇ ಧೃತರಾಷ್ಟ್ರ, ಗಾಂಧಾರಿಯರು ಕಾಡಿಗೆ ಹೊರಟಾಗ ಅವರ ಜೊತೆ ತಾನೂ ನಡೆಯುತ್ತಾ "ಈ ಹಿರಿಯರ ದುಃಖಕ್ಕೆ ನಾನೇ ಮೂಲವಾದೆ. ಇವರ ಶುಶ್ರೂಷೆಯಲ್ಲಿ ದೇಹ ಸವೆಸಿ ಸದ್ಗತಿ ಕಂಡುಕೊಳ್ಳುತ್ತೇನೆ", ಎನ್ನುತ್ತಾಳೆ.

ಆಗ ಧರ್ಮರಾಯ, "ನಮ್ಮನ್ನು ಯುದ್ಧಕ್ಕೆ ಪ್ರಚೋದಿಸುವವಳೂ ನೀನೇ. ನಿನ್ನ ಮಾತು ಗೌರವಿಸಲೆಂದು ನಾವು ಯುದ್ಧಮಾಡಿ ರಾಜ್ಯ ಗೆದ್ದೆವು. ಈಗ ನಮ್ಮನ್ನು ಬಿಟ್ಟು ಹೋಗುತೀನಿ ಎನ್ನುತ್ತೀಯಲ್ಲ. ನಿನ್ನ ಕ್ಷತ್ರಿಯ ಧರ್ಮ ಎಲ್ಲಿಹೋಯ್ತು?" ಎಂದು ಪ್ರಶ್ನಿಸುತ್ತಾನೆ. ಉಳಿದ ಪಾಂಡವರೂ ಅದೇ ಮಾತಾಡುತ್ತಾರೆ.

ಆಗ ಕುಂತಿ ಅನ್ನುತ್ತಾಳೆ: "ನೀನು ಹೇಳೋದೆಲ್ಲ ನಿಜ. ನೀನು ಹತಾಶನಾಗಿದ್ದಾಗ ಮೇಲೆಬ್ಬಿಸೋದು ನನ್ನ ಕರ್ತವ್ಯವಾಗಿತ್ತು. ನೀನು ರಾಜ್ಯ ಕಳಕೊಂಡಿದ್ದೆ. ಎಲ್ಲರೂ ನಿನ್ನ ಅಪಹಾಸ್ಯ ಮಾಡ್ತಾ ಇದ್ರು. ಪಾಂಡುವಿನ ಮಕ್ಕಳಿಗೆ ಅಪಕೀರ್ತಿ ಬರಬಾರದೆಂದು ನಿಮ್ಮನು ಪ್ರಚೋದಿಸಿದೆ. ನಾನೂ ಮತ್ತು ನನ್ನ ಸೊಸೆ ದ್ರೌಪದಿ ಮತ್ತೂ ಅಪಮಾನಿತರಾಗಬಾರದೆಂದು ನಿನ್ನ ಎಚ್ಚರಿಸಿದೆ. ನಾನು ಬೇಕಾದಷ್ಟು ರಾಜ್ಯಸುಖ ಅನುಭವಿಸಿದೇನೆ. ಈ ಬದುಕು ಇನ್ನು ಸಾಕು ಅನಿಸ್ತಿದೆ. ಸ್ವರ್ಗ ಸೇರೋಕೆ ಮುಂಚೆ ಈ ಪ್ರಪಂಚದಿಂದ ದೂರವಾಗಿ ಹಿರಿಯರ ಸೇವೆ ಮಾಡುತೀನಿ."

ರಾಜರಾದ ಪಾಂಡವರಿಗೆ ಇನ್ನು ತನ್ನ ರಕ್ಷೆಯ ಅಗತ್ಯವಿಲ್ಲ ಎಂದು ಕುಂತಿಗೆ ತೋರಿರಬೇಕು. ಕಣ್ಣು ಕಾಣದ [illegible] ತಾನು ಸೇವೆ ಮಾಡಿ [illegible] ಕಳೆದುಕೊಳ್ಳಬೇಕು. ಎಂಬ ಅನಿಸಿಕೆ ಅವಳಿಗಾಗಿರಬೇಕು. ದ್ವೇಷ, ಅಸೂಯೆ, ಪ್ರತೀಕಾರಗಳನ್ನೆಲ್ಲಾ ಮರೆತು ಸಮಚಿತ್ತದಿಂದ, ಕುಂತಿ ವೃದ್ಧಾಪ್ಯವನ್ನು ಬರಮಾಡಿಕೊಳ್ಳುತ್ತಾಳೆ.

ಕಾಡಿಗೆ ಹೊರಟ ಕುಂತಿ ಮುಂದೆ, ಅವಳ ಕೈ ಹಿಡಿದ ಗಾಂಧಾರಿ ಹಿಂದೆ, ಗಾಂಧಾರಿಯ ಹೆಗಲ ಮೇಲೆ ಕೈ ಹಾಕಿ ನಡೆಯುತ್ತಿದ್ದ ಅಂಧ ಧೃತರಾಷ್ಟ್ರ ಕಡೆಯಲ್ಲಿ. ಈ ಮೆರವಣಿಗೆ ಕರುಳು ಹಿಂಡಿಸುವಂಥಾದ್ದು.

ಕುಂತಿ ಕಾಡಿನಲ್ಲಿ ಹಿರಿಯರ ಸೇವೆ ಮಾಡಿ ತನ್ನ ಸಂಕಟಗಳನ್ನೆಲ್ಲಾ ಮರೆಯುತ್ತಾಳೆ. ಅವಳ ಮನಸ್ಸು ಶುದ್ಧವಾಗುತ್ತದೆ. ಕಾಳ್ಗಿಚ್ಚು ಹಬ್ಬಿದಾಗ ಕುಂತಿಯೂ ಧೃತರಾಷ್ಟ್ರ, ಗಾಂಧಾರಿಯರ ಜೊತೆ ಯೋಗಮುದ್ರೆಯಲ್ಲಿ ಕುಳಿತು, ಬೆಂಕಿಯನ್ನು ಅರ್ಥಾತ್ ಸಾವನ್ನು ಸ್ಥಿತಪ್ರಜ್ಞಳಂತೆ ಇದಿರುಗೊಳ್ಳುತ್ತಾಳೆ.

ಇಡೀ ಜೀವಮಾನದಲ್ಲಿ ಸುಖಕ್ಕಿಂತ ಕಷ್ಟವೇ ಹೆಚ್ಚಾದರೂ, ಎಂದೂ ಯಾರಿಗೂ ಬಾಗದೆ, ಧೈರ್ಯದಿಂದ ತನ್ನ ಮಕ್ಕಳನ್ನು ಬೆಳೆಸಿ, ಕಡೆಗೆ ಪ್ರಾಯಶ್ಚಿತ್ತದಿಂದ ಪರಿಶುದ್ಧಳಾಗಿ ಸಾವನ್ನಪ್ಪಿದ ಕುಂತಿ, ಮಹಾಭಾರತದ ಒಂದು ಸ್ಮರಣೀಯ ಪಾತ್ರ. ●

ಅಂತಾರಾಷ್ಟ್ರೀಯ ಮಹಿಳಾವರುಷ ಸಾಧನೆಗಳೇನು?

ವಿಶ್ವದ ಜನಸಂಖ್ಯೆಯಲ್ಲಿ ಅರ್ಧಭಾಗವೆನಿಸಿದ ಮಹಿಳೆಯರ ಸ್ಥಿತಿ ಉತ್ತಮವಾಗಬೇಕು. ಅವಳೂ ಮನುಷ್ಯಳಂತೆ ಬಾಳುವ, ಮಾನವೀಯ ವಾತಾವರಣ ನಿರ್ಮಾಣವಾಗಬೇಕು.

ಚಿ. ಸ. ಮಂಗಳಾ

ಇನ್ನೇನು ಇನ್ನೆರಡೇ ತಿಂಗಳು ಮುಗಿಯುತ್ತದೆ ಮಹಿಳಾ ವರುಷ. ಸದ್ಯ ಮುಗಿಯಿತಲ್ಲ ಎನ್ನುವವರು ಹಲವರು. ಮುಗಿದೇ ಹೋಯಿತಲ್ಲ ಎನ್ನುವವರು ಹಲವರು. ಆದರೆ ಇಂಥದೊಂದು ವರ್ಷ ಬಂದಿತೆಂಬುದನ್ನಾಗಲಿ ಮುಗಿಯಿತೆಂಬುದನ್ನಾಗಲಿ ಅರಿಯದವರು ಲಕ್ಷೋಪಲಕ್ಷ.

ಈ ಲಕ್ಷೋಪಲಕ್ಷಗಳ ಗತಿಸ್ಥಿತಿ ಏನು? ಜನವರಿ ೧ರಿಂದ ಇಲ್ಲಿನವರೆಗೆ ಎಷ್ಟರಮಟ್ಟಿಗೆ ಈ ಸ್ಥಿತಿಗತಿ ಬದಲಾಗಿರಲು ಸಾಧ್ಯ? ಈ ಸಾಧ್ಯ ಅಸಾಧ್ಯತೆಗಳ ಬಗ್ಗೆ ಯೋಚಿಸಿದಾಗ ಮಾತ್ರ ಈ ವರುಷದ ಸಾಧನೆಯ ಬಗೆಗೆ ಕಲ್ಪನೆ ಸಾಧ್ಯ.

ಇನ್ನು ಯಾವುದೇ ಘೋಷಿತ ವರುಷಕ್ಕೂ ಸಿಗದಷ್ಟು ಪ್ರಚಾರ ಬಂಬಲ ಈ ವರುಷಕ್ಕೆ ಸಿಕ್ಕಿತು. ಇನ್ನು ಯಾವುದೇ ವರುಷದಲ್ಲೂ ನಡೆದಿರಲಾರದಷ್ಟು ಸಭೆ ಸಮಾರಂಭ ಸಮ್ಮೇಳನ ಸನ್ಮಾನಗಳು ಈ ವರುಷದಲ್ಲಿ ಈ ವರುಷದ ಹೆಸರು ಹೊತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ, ರಾಷ್ಟ್ರೀಯ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ಕೊನೆಗೆ ಕೇರಿ ಕೇರಿ ಮಟ್ಟದಲ್ಲೂ ನಡೆದವು. ಇನ್ನೂ ನಡೆಯುತ್ತಿವೆ. ವರುಷದ ಕೊನೆಯವರೆಗೂ ನಡೆಯುತ್ತಲೂ ಇರುತ್ತವೆ.

ಈ ವರುಷಕ್ಕಾಗಿ ಯುನೆಸ್ಕೊ ವಿಶ್ವದ ಮುಂದಿಟ್ಟ ಸಲಹೆ ಸೂಚನೆಗಳು, ಮೆಕ್ಸಿಕೋದಲ್ಲಿ ನಡೆದ ವಿಶ್ವ ಮಹಿಳಾ ಸಮ್ಮೇಳನ, ಬರ್ಲಿನ್‌ನಲ್ಲಿ ನಡೆದ ಸಮ್ಮೇಳನ, ಭಾರತದಲ್ಲಿ ನಡೆದ ಸಮ್ಮೇಳನ, ಇವುಗಳೆಲ್ಲದರ ಫಲಶ್ರುತಿ ಏನು? ಏನೂ ಇಲ್ಲವೇ ಇಲ್ಲ. ಎಲ್ಲಾ ಬರಿಯ ಸೋಗು ಎನ್ನುವ ಜನರೂ ಇದ್ದಾರೆ. ಬಹಳ ಮಂದಿಯೇ ಇದ್ದಾರೆ. ಪ್ರತಿಷ್ಠಿತರ ಪ್ರತಿಷ್ಠೆ ಇನ್ನಷ್ಟು ಹೆಚ್ಚಿತು. ಖರ್ಚಿಗೆ ಇನ್ನಷ್ಟು ಖರ್ಚು ಸೇರಿತು. ಈ ಟೀಕೆ ಸಾಮಾನ್ಯ.

ಈ ಎಲ್ಲ ಟೀಕೆಗಳೂ ನಿರಾಧಾರವಾದುವೆಂದು ನಾನು ಹೇಳಲಾರೆ. ಅನೇಕ ಸಮ್ಮೇಳನ-ಸಮಾರಂಭಗಳು ಅಷ್ಟರಲ್ಲೇ ಮುಕ್ತಾಯವಾಗಿವೆ. ಇವುಗಳಿಗಾಗಿ ತಕ್ಕ ಮಟ್ಟಿನ ಖರ್ಚೂ ಆಗಿದೆ. ಇವುಗಳ ಪ್ರಾತಿನಿಧ್ಯ ಬಹುತೇಕ ಬಲ್ಲವರಿಗೆ ಉಳ್ಳವರಿಗೆ ಮಾತ್ರ ಸೇರಿದೆ. ಇವೆಲ್ಲವೂ ನಿಜ.

ಅಂತರಾಳದ ಅಳಲು

ಆದರೆ ಇದು ಮಹಿಳಾ ವರ್ಷಕ್ಕೆ ಮಾತ್ರ ಅನ್ವಯಿಸುವ ಸತ್ಯವಲ್ಲ. ಜೀವನದ ಹಲವಾರು ಗತಿ ಸ್ಥಿತಿಗಳ ಬಗೆಗೇ ಈ ಮಾತು ಸತ್ಯ.

ಇನ್ನು ಮಹಿಳಾ ವರ್ಷ ಆಚರಿಸುವ ಅಗತ್ಯ ಏನಿತ್ತು? ಇದೆ ಎನಿಸಿಯೇ ಯುನೆಸ್ಕೊ ಈ ವರುಷದ ಸೂಚನೆ ಸೂತ್ರಗಳನ್ನು ವಿಶ್ವದ ಮುಂದಿಟ್ಟಿತು. ಇದರ ಮುಖ್ಯ ಉದ್ದೇಶವಾದರೂ ಇಷ್ಟೇ. ವಿಶ್ವದ ಜನಸಂಖ್ಯೆಯಲ್ಲಿ ಅರ್ಧ ಭಾಗವೆನಿಸಿದ ಮಹಿಳೆಯರ ಸ್ಥಿತಿ ಉತ್ತಮವಾಗಬೇಕು. ಅವಳೂ ಮನುಷ್ಯಳಂತೆ ಬಾಳುವ ಮಾನವೀಯ ವಾತಾವರಣ ಕಲ್ಪಿತವಾಗಬೇಕು.

ಇಂದಿಗೂ ಅನೇಕ ಮನೆಗಳಲ್ಲಿ ಹೆಣ್ಣನ್ನು ಕಸಕ್ಕಿಂತ ಕಡೆಯಾಗಿ ಕಾಣುವ ಪರಿಸ್ಥಿತಿಯ ಅರಿವು ಇರುವವರು ಮಾತ್ರ ಮಹಿಳಾ ವರ್ಷದ ಅಗತ್ಯವನ್ನು ಅರಿಯಲು ಸಾಧ್ಯ.

ಇಂದು ಮಹಿಳೆ ಮುನ್ನಡೆದಿಲ್ಲವೆ? ಮಹಿಳೆ ರಾಜ್ಯವನ್ನಲ್ಲ ರಾಷ್ಟ್ರವನ್ನೇ ಆಳುತ್ತಿಲ್ಲವೆ? ಮಹಿಳೆ ಎಲ್ಲ ರಂಗಗಳಲ್ಲೂ ವಿರಾಜಿಸುತ್ತಿಲ್ಲವೆ? ಇಂತಹ ಪ್ರಶ್ನೆಗಳನ್ನು ಕೇಳುವ ಜನ, ಮಹಿಳಾ ವರ್ಷದ ಅಂತರಾಳದ ಅಳಲನ್ನು ತಿಳಿಯಲಾರರು.

ವಿಶ್ವದ ಪ್ರಜಾಸಂಖ್ಯೆಯ ಸುಮಾರು ಅರ್ಧದಷ್ಟಿರುವ ಮಹಿಳೆಯರಲ್ಲಿ ಎಷ್ಟು ಪ್ರಧಾನಿಗಳಿದ್ದಾರೆ? ಎಷ್ಟು ವೈದ್ಯರಿದ್ದಾರೆ? ಎಷ್ಟು ತಂತ್ರಜ್ಞರಿದ್ದಾರೆ? ವಿಜ್ಞಾನಿಗಳಿದ್ದಾರೆ?......ಲೆಕ್ಕ ಹಾಕಿದಾಗಲೇ ಗೊತ್ತಿತ್ತು ಮಹಿಳೆ ಎಷ್ಟು ಮುಂದುವರಿದಿದ್ದಾಳೆ ಎನ್ನುವುದು.

ನಗರಗಳಲ್ಲಿ ಕಾಣುವ ಕಣ್ಣುಕುಕ್ಕುವ ವೈವಿಧ್ಯ, ಸ್ವಾತಂತ್ರ್ಯ ಮಹಿಳೆ ಮುನ್ನಡೆದಿದ್ದಾಳೆ ಎನ್ನುವುದಕ್ಕೆ ಸೂಚಕವಲ್ಲ.

ಇದೀಗ ಅವಕಾಶಗಳು ಹೆಚ್ಚುತ್ತಿವೆ ನಿಜ. ಆದರೆ ಮಹಿಳೆಯರನ್ನು ಆವರಿಸಿರುವ ಅಜ್ಞಾನ, ಅನಕ್ಷರತೆ, ಅನಾರೋಗ್ಯ, ಅಪ್ರಬುದ್ಧತೆ ಇಂಥವನ್ನು ಹೋಗಲಾಡಿಸಲು ಶಕ್ಯವಾಗುವ ಅರಿವು ಮೂಡಿಸಲು ಎಷ್ಟು ಮಹಿಳಾ ವರ್ಷಗಳೇ ಆದರೂ ಸಾಲವು.

ಮಹಿಳೆ ಸ್ವಾವಲಂಬಿಯಾಗಿ, ಸ್ವತಂತ್ರ ಬುದ್ಧಿಜೀವಿಯಾಗಿ ಸರ್ವಾಂಗಪೂರಿತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತೆ ಮಾಡುವುದೇ ಮಹಿಳಾ ವರ್ಷದ ಮೂಲೋದ್ದೇಶ.

ಈ ಉದ್ದೇಶ ವಿಫಲ ಯತ್ನವಾಗಿಲ್ಲ. ಮಹಿಳಾ ವರ್ಷದ ಕೂಗು ಗ್ರಾಮಾಂತರ ಪ್ರದೇಶಗಳ ಜನರನ್ನು ಮುಟ್ಟದೆ ಇರಬಹುದು, ಮುಟ್ಟಿಲ್ಲವೆಂದೇ ಇಟ್ಟುಕೊಳ್ಳೋಣ. ನಗರಗಳ ಕೊಳಚೆ ಪ್ರದೇಶದ ಜನರನು ಕಟ್ಟಿಲ್ಲವೆಂದು ನಂಬೋಣ.

ಆದರೆ ಈ ವರುಷದಲ್ಲಿ ಈಗೀಗ ಎಚ್ಚೆತ್ತುಕೊಳ್ಳುತ್ತಿರುವ ಮಹಿಳಾ ವೃಂದದಲ್ಲಿ ಹೊಸದೊಂದು ಜಾಗೃತಿ ಮೂಡಿ ಬರಲು ಸಾಧ್ಯವಾಗಿದೆಯೆಂದು ನನ್ನ ನಂಬಿಕೆ. ಈ ಅರಿವು, ಜಾಗೃತಿ ವ್ಯಾಪಕವಾಗಿಲ್ಲ, ತೀವ್ರವಾಗಿಲ್ಲ, ಆಳವಾಗಿಲ್ಲ ಎನ್ನುವುದು ನಿಜವಾದರೂ ಅರಿವು ಮೂಡಲು ಆರಂಭವಾಗಿದೆ ಎನ್ನುವ ಮಾತಂತೂ ಸತ್ಯ. ಉದಾಹರಣೆಗೆ:

ಸಮಾನ ದುಡಿಮೆಗೆ ಸಮಾನ ವೇತನ ಎಂಬುದನ್ನು ಈ ವರ್ಷ ಚರ್ಚಿಸಿದಷ್ಟು ವಿಪುಲವಾಗಿ ಹಿಂದೆಂದೂ ಚರ್ಚಿಸಿರಲಿಲ್ಲ. ಅಷ್ಟೇ ಅಲ್ಲ, ಇದರಿಂದಾಗಿ ಅನೇಕ ಕಡೆಗಳಲ್ಲಿ ಗಂಡಸರಿಗೂ ಹೆಂಗಸರಿಗೂ ಒಂದೇ ವೇತನ ಕೊಡಲು ಆರಂಭವಾಗಿದೆ. ಇದು ತೀರಾ ನಿರ್ಲಕ್ಷಿಸುವಂಥ ನಿರ್ಧಾರವಲ್ಲ.

ಪ್ಲಾಂಟೇಷನ್ ತೋಟಗಳಲ್ಲಿ ಕೆಲಸ ಮಾಡುವ ತೋಟಗಾರರಿಗೆ ಅದರಲ್ಲೂ ನಮ್ಮ ರಾಜ್ಯದ ತೋಟಗಾರಿಕೆ ಇಲಾಖೆಯಲ್ಲಿ ಇನ್ನು ಮೇಲೆ ಸಮಾನ ವೇತನ.

ಈ ನಿರ್ಧಾರ ಪ್ರಕಟವಾದ ಕೂಡಲೇ ಸಮಾರಂಭಕ್ಕೆಂದು ಸೇರಿದ್ದ ತೋಟದ ಕೆಲಸದಾಳುಗಳ ಸಂತೋಷ ಕಣ್ಣೀರಾಗಿ ಉಕ್ಕಿ ಹರಿದಿದ್ದನ್ನು ನಾನೇ ಪ್ರತ್ಯಕ್ಷ ಕಂಡೆ.

ಮಹಿಳಾ ವರ್ಷವೇನೆಂದು ಅವರಿಗೆ ತಿಳಿಯದೆ ಇರಬಹುದು. ಆದರೆ ಇದರ ನಿಮಿತ್ತ ಹಲವಾರು ಸಂಘ ಸಂಸ್ಥೆಗಳು, ಸರ್ಕಾರಗಳು ಕೈಗೊಳ್ಳುತ್ತಿರುವ ನಿರ್ಧಾರಗಳಿಂದ ಇಂದಲ್ಲ ನಾಳೆ ಹಲವಾರು ಹೆಣ್ಣುಮಕ್ಕಳ ಬಾಳು ಬಂಗಾರವಾಗದಿದ್ದರೂ ತೀರ ಬರಡಾಗಿರುವುದಿಲ್ಲ.

ಇನ್ನೂ ಒಂದು ಉದಾಹರಣೆ:

ಆಸಕ್ತಿ ಅಪಾರ

ಬ್ಯಾಂಕುಗಳಿಂದ ಮಹಿಳೆಯರಿಗಾಗಿ ವಿಶೇಷ ಉದ್ಯೋಗ ಸೌಲಭ್ಯಗಳ, ಉಳಿತಾಯ ಸೌಲಭ್ಯಗಳ ನೀಡಿಕೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಮಹಿಳೆಯರು ಈ ಸೌಲಭ್ಯ ಪಡೆಯಲು ಮುಂದೆ ಬಂದಿದ್ದಾರೆ.

ಕೆಲವು ತಿಂಗಳ ಹಿಂದೆ ನಾನೊಂದು ಸಮಾರಂಭಕ್ಕೆ ಹೋಗಿದ್ದೆ. ಗ್ರಾಮಾಂತರ ಪ್ರದೇಶದಲ್ಲಿ ನಡೆದ ಧಾರ್ಮಿಕ ಸಮಾರಂಭ. ಅನಕ್ಷರಸ್ಥ ಮಹಿಳೆಯರು ಮೂರುಸಾವಿರಕ್ಕೂ ಹೆಚ್ಚು ಬಂದು ಸೇರಿದ್ದರು. ಮಹಿಳಾ ವರ್ಷದ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ಆದರೆ ಈ ವರುಷದಲ್ಲಿ ರಾಷ್ಟ್ರದ ಹಲವಾರು ಬ್ಯಾಂಕುಗಳು ನೀಡಿರುವ

ವಿಶೇಷ ಸೌಕರ್ಯದ ಬಗ್ಗೆ ಹೇಳಿದ ಕೂಡಲೇ ಅವರಲ್ಲಿ ಮೂಡಿದ ಆಸಕ್ತಿ ಅಪಾರ.

ಮಹಿಳೆ ಸ್ವಾವಲಂಬಿಯಾಗಬೇಕು. ಅವಳಿಗೂ ಆರ್ಥಿಕ ಸ್ವಾತಂತ್ರ್ಯ ಇರಬೇಕು ಎನ್ನುವುದು ಮಹಿಳಾ ವರ್ಷದ ಮೂಲೋದ್ದೇಶಗಳಲ್ಲಿ ಒಂದಾದರೆ ಈ ದಿಸೆಯಲ್ಲಿ ಸಾಕಷ್ಟು ಪ್ರಯತ್ನಗಳು ಈ ವರುಷದಲ್ಲಾಗಿವೆ. ಇದು ಒಂದು ಸಾಧನೆಯೆಂದೇ ಹೇಳಬೇಕು.

ಇನ್ನು ವರದಕ್ಷಿಣೆ, ವರೋಪಚಾರ ಮೊದಲಾದ ಪದ್ಧತಿಗಳಂತೂ ಹೆಣ್ಣುಮಕ್ಕಳನ್ನು ಹೆತ್ತವರಿಗೆ ಹೊರಲಾರದ ಹೊರೆ. ಈ ವರುಷದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಅಷ್ಟೇ ಅಲ್ಲ ಹೆಣ್ಣು ಮಕ್ಕಳೂ ಗಂಡುಹುಡುಗರೂ ದಿಟ್ಟತನದ ಹೆಜ್ಜೆಯಿಟ್ಟಿದ್ದಾರೆ. ಮದುವೆ ಇಲ್ಲದಿದ್ದರೂ ಚಿಂತೆಯಿಲ್ಲ. ವರದಕ್ಷಿಣೆ ಕೊಡುವುದಿಲ್ಲ ಎನ್ನುವ ಮನೋಭಾವ ಮೂಡುತ್ತಿದೆ. ಈ ಮನೋಭಾವ ಬೆಳೆಯಲು ಮಹಿಳಾ ವರ್ಷದಲ್ಲಿ ಸಾಕಷ್ಟು ಪ್ರಚಾರ ನಡೆಯುತ್ತಿದೆ. ಹಲವೆಡೆ ಇದು ಕ್ರಾಂತಿರೂಪವನ್ನೇ ತಾಳಿದೆ. ಈ ವರುಷದ ಇನ್ನೊಂದು ಸಾಧನೆ ಇದು ಎನ್ನಬಹುದು.

ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಏರ್ಪಾಟುಗಳೂ ಆಗಲಿವೆ. ಮಹಿಳೆಯರಿಗಾಗಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿನಿಯರಿಗಾಗಿ ವಸತಿಗೃಹಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾಗಲಿವೆ. ನಮ್ಮ ರಾಜ್ಯದಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಒಂದು ಪ್ರತ್ಯೇಕ ಖಾತೆಯೇ ಆರಂಭವಾಗಿದೆ.

ಮಹಿಳೆಯರ ಬರಹವೆಲ್ಲಾ ಬರೀ ಕಣ್ಣೀರಿನ ಕೋಡಿ, ಸತ್ವಹೀನ ಬರವಣಿಗೆ, ಎನ್ನುವ ಟೀಕೆಯನ್ನು ಅಸತ್ಯವಾಗಿಸಿ ಅನೇಕ ಮಹಿಳೆಯರ ವಿಚಾರಾತ್ಮಕ ಬರಹಗಳು ಕರ್ನಾಟಕದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಹಿಳೆಯರಿಗಾಗಿ ನಡೆಸಿದ ಲೇಖನಸ್ಪರ್ಧೆ, ಅದರ ಫಲಶ್ರುತಿ ಮಹಿಳಾವರ್ಷದ ಸಾಧನೆಗಳಲ್ಲೊಂದು ಎಂಬುದು ನಿರ್ವಿವಾದ.

ಜಾಗೃತಿ

ಮೊದಲು ಕೇಳಿದ ಪ್ರಶ್ನೆಯನ್ನೇ ಮತ್ತೆ ಕೇಳೋಣವೆ? ಈ ವರುಷದ ಸಾಧನೆಯೇನು? ನಾನು ಕಾಣುತ್ತಿರುವಂತೆ ಮಹಿಳೆಯರಲ್ಲಿ ಮೂಡುತ್ತಿರುವ ಜಾಗೃತಿ. ನಾನು ಮೊದಲೇ ಹೇಳಿದಂತೆ ಎಲ್ಲ ಮಹಿಳೆಯರೂ ಈ ವರುಷದಲ್ಲಿ 'ಧಿಡೀರ್' ಎಂದು ಜಾಗೃತರಾದರೆಂದಲ್ಲ. ಇದು ಸಾಧ್ಯವೂ ಅಲ್ಲ. ಶತ ಶತಮಾನಗಳ ಬೌದ್ಧಿಕ ದಾಸ್ಯದಿಂದ ಬಿಡುಗಡೆ ಹೊಂದಲು ಮಹಿಳೆಗೆ ಇನ್ನೂ ಹಲವಾರು ಶತಮಾನಗಳು ಹಿಡಿದೀತು. ಅಬಲೆ ಅಬಲೆಯೆಂದೇ ನಂಬಿರುವ ಮಹಿಳೆ ತಾನೂ ಸಬಲಳೆಂದೂ, ಸ್ವಾವಲಂಬಿಯಾಗಲು ಸಾಧ್ಯವೆಂದೂ ನಂಬಲು ಶತಮಾನಗಳೇ ಉರುಳಿಯಾವು.

ಆದರೆ ಈ ವರುಷದಲ್ಲಿ ಹಿಂದಿನ ವರುಷಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿಶ್ವದ ಅನೇಕ ಕಡೆಗಳಲ್ಲಿ ಮಹಿಳೆಯರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಪರಸ್ಪರ ಸೇರಿ ಚರ್ಚಿಸಿದ್ದಾರೆ. ತಮ್ಮ ಸ್ಥಿತಿಗತಿಗಳನ್ನು ಕುರಿತು ವಿಚಾರ ಮಾಡಿದ್ದಾರೆ. ತಮ್ಮನ್ನು ತಾವೇ ಅರಿಯಲು ಪ್ರಯತ್ನಿಸಿದ್ದಾರೆ. ರಾಷ್ಟ್ರದ ಆಗುಹೋಗುಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ತಮಗೆ ಸಂಬಂಧಿಸಿದ ಸಾಮಾಜಿಕ ಸಮಸ್ಯೆಗಳಿಗೆ ತಾವೇ ಪರಿಹಾರವನ್ನು ಕಂಡು ಹಿಡಿಯಲು ಉದ್ದೇಶಿಸಿದ್ದಾರೆ.

ಒಟ್ಟಿನಲ್ಲಿ ಮಹಿಳೆಯ ಆತ್ಮಬಲ ಬೆಳೆಯಲು ಅವಳು ಸಾಮರಸ್ಯದ ಸಮಾನತೆಯ ಔಚಿತ್ಯವನ್ನು ಅರಿಯಲು ಈ ವರುಷ ಖಂಡಿತವಾಗಿಯೂ ನಾಂದಿ ಹಾಡಿದೆ. ಮಹಿಳೆ ಕಾರ್ಯೋನ್ಮುಖಳಾಗಲು ಈ ವರುಷ ಒಂದು ಸಂಕೇತ ಮಾತ್ರ.

ಯಾವ ಪ್ರಯತ್ನವೂ ಪವಾಡದಂತೆ ನಡೆಯಲು ಸಾಧ್ಯವಿಲ್ಲ. ಆದರೆ ಹಲವಾರು ಪ್ರಯತ್ನಗಳು ಎಲ್ಲಿಯಾದರೂ ಯಾರಿಂದಲಾದರೂ ಆರಂಭವಾಗಬೇಕು. ಬಾಲ್ಯವಿವಾಹ, ಸತಿ ಇವನ್ನು ಹೋಗಲಾಡಿಸಲು ಪ್ರಯತ್ನ ಆರಂಭವಾದದ್ದು ಯಾವಾಗ? ಇನ್ನೂ ಇವು ಸಂಪೂರ್ಣ ಹೋಗಿಲ್ಲ. ಆದರೂ ಅಂದಿದ್ದಷ್ಟು ಈಗಿಲ್ಲ. ಪ್ರಯತ್ನ ಮುಂದುವರೆದರೆ ಈಗಿರುವಷ್ಟು ಮುಂದಿರುವುದಿಲ್ಲ.

ಅಂತಾರಾಷ್ಟ್ರೀಯ ಮಹಿಳಾ ವರ್ಷ ಸೋಗಲ್ಲ ಇದೊಂದು ಸ್ತುತ್ಯ ಸಮಾಜಸುಧಾರಕ ಪ್ರಯತ್ನ. ಆದರೆ ಈ ಸಾಧನ ಪಥದ ಯಶಸ್ಸು ಇಲ್ಲಿಯ ಸಾಧಕರ ಸರ್ವೋದಯ ತತ್ವದ ಅನುಷ್ಠಾನ, ಸಮರ್ಪಣ ಮನೋಭಾವ, ಸೇವಾಪ್ರಜ್ಞೆ ಇವನ್ನೇ ಅವಲಂಬಿಸಿದೆ. ●

ನಿನ್ನೆ-ನಾಳೆಗಳ ಇಕ್ಕಟ್ಟಿನಲ್ಲಿ ಸಿಕ್ಕ "ನಾನು"

ಸುಶೀಲಾ ಕೊಪ್ಪರ

ಈ ನಮ್ಮ ಅಜ್ಜಿ, ತಾಯಿ ಮತ್ತು ಮಗಳನ್ನು ಕಂಡು ಇಂದಿನ "ನಾನು" ತ್ರಿಶಂಕು ಸ್ಥಿತಿಯಲ್ಲಿದ್ದೇನೆ. ಮಗಳಂತೆ ಕೇಶ ಶೃಂಗಾರ, ತಾಯಿಯಂತೆ ಸೀರೆ-ಕುಪ್ಪಸ, ಅಜ್ಜಿಯಂತೆ ವಿಚಾರ ನನ್ನದು. ನನ್ನ ಮಗಳ ಕೆಚ್ಚು, ಧೈರ್ಯಬೇಕು, ತಾಯಿಯ ಹೊಂದಾಣಿಕೆ ಬೇಕು, ಅಜ್ಜಿಯ ತಾಳ್ಮೆಯೂ ಅದರಲ್ಲಿ ಸೇರಿಬೇಕು. ಅಜ್ಜಿ ತುಳಿದ ಮುಳ್ಳುದಾರಿ ಬೇಡ.

ತಲೆಮಾರು ಎಂದು ಯೋಚಿಸಿದಾಗ ನೂರು ವರ್ಷದ ಒಂದು ಬದುಕು ಕಣ್ಣ ಮುಂದೆ ನಿಲ್ಲುತ್ತದೆ. ಆದರೂ ನಲವತ್ತು ವರ್ಷದ ಒಂದು ವ್ಯಕ್ತಿ ಐದು ತಲೆಮಾರುಗಳನ್ನು ನೋಡುವುದು ಸಾಧ್ಯವಿದೆ. ಬಾಳು ನೂರು ವರ್ಷದ್ದೆಂದು ಪರಿಗಣಿಸಿದರೂ ಇಪ್ಪತ್ತು ಇಪ್ಪತ್ತೈದು ವರ್ಷಕ್ಕೊಂದು 'ತಲೆ'ಯನ್ನು ನಾವು ನೋಡುತ್ತೇವೆ. ಹುಟ್ಟಿದಾಕ್ಷಣವೇ ಮಗು ಕಡಿಮೆ ಎಂದರೆ ಮೂರನೆಯ ತಲೆಮಾರಿನದಾಗುತ್ತದೆ. ಕೆಲವೊಂದು ಮಕ್ಕಳಿಗೆ ಅಜ್ಜಿಯ ತಾಯಿಯನ್ನು ಕಾಣುವ ಭಾಗ್ಯವೂ ಇದ್ದಲ್ಲಿ ಇನ್ನು ಒಂದು ಪೀಳಿಗೆ ಮುಂದಕ್ಕೆ ಸರಿಯುತ್ತದೆ. ಅಜ್ಜಿಯ ಲಾಲನೆ, ತಾಯಿಯ ಪಾಲನೆಯಲ್ಲಿ ಬೆಳೆದ ಈ ಕಡೆಯ ಕುಡಿ ಮುಂದೆ ಇಪ್ಪತ್ತೈದು ವರ್ಷದಲ್ಲಿ ತಾಯಿ ಅಥವಾ ತಂದೆಯ ಸ್ಥಾನಕ್ಕೆ ಏರಿದಾಗ ಅದು ಮಧ್ಯದ ಪೀಳಿಗೆಯಾಗುತ್ತದೆ. ಈ ತಲೆ ಹೀಗಾಗಿದ್ದರೆ 'ತಲೆ'ಗಳು ಬೇಗ ಬೇಗ 'ಮಾರು'ಗಳಾಗುತ್ತವೆ.

ಸುಮಾರು ನಲವತ್ತರ ಮಧ್ಯ ವಯಸ್ಸಿನ ಮಹಿಳೆ ತನ್ನ ಅಜ್ಜಿ, ತಾಯಿ, ಮತ್ತು ಮಗಳ ಪೀಳಿಗೆಯನ್ನು ಕಣ್ಣಾರೆ ಕಾಣುತ್ತಾಳೆ. ಈ ನಾಲ್ಕು ತಲೆಮಾರಿನಲ್ಲಿ ಆಕೆ ಕಂಡ ಬದಲಾವಣೆ ಏನು? ವೈಯಕ್ತಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ ಜೀವನದಲ್ಲಿ ಏನು ಪರಿವರ್ತನೆ ಆಗಿದೆ? ಆಗಿದ್ದರೆ ಅವು ಯಾವ ತರಹದ್ದು? ಮತ್ತು ಎಷ್ಟರ ಮಟ್ಟಿಗೆ? ಎಂದು ಈ ಅಂತಾರಾಷ್ಟ್ರೀಯ ಮಹಿಳಾವರ್ಷದಲ್ಲಿ ಚರ್ಚೆ ಮಾಡಿ ವಿಷಯವನ್ನು ಅಗೆದು, ಬಗೆದು, ಹಸಿಮಾಡಿ, ಸುಧಾರಿತ ಗೊಬ್ಬರ ಹಾಕಿದಲ್ಲಿ ಹೊಸ ಪೀಳಿಗೆಯ ಹೆಮ್ಮರವೊಂದು ಸುಂದರವಾಗಿ ಬೆಳೆದೀತು.

ಅಜ್ಜಿಯ ಚಿತ್ರವೊಂದನ್ನು ನಾವು ನೆನೆದರೆ ವೃದ್ಧಾಪ್ಯದಲ್ಲಿ ಜೀವನವನ್ನು ಸವೆಸಿ ಸುಣ್ಣಾದ ತೆಳು ಶರೀರ, ಆಕೆ ಸುತ್ತಿದ್ದು ಮಾಸಲು ಸೀರೆ-ಕುಪ್ಪಸ, ಬೆಳ್ಳಿಯ ಕೂದಲಿನ ಬೆಳ್ಳುಳ್ಳಿಯಷ್ಟೊಂದು ಗಂಟು. ಕೈಯಲ್ಲಿ ಸದಾಕಾಲಕ್ಕೂ ಏನಾದರೊಂದು ಕೆಲಸ. ಅನುಭವದ ವಾಣಿಯನ್ನು ಹೊರಗೆಡಹುವ ಬೊಚ್ಚಬಾಯಿ, ವಂಶದ ಹೆಚ್ಚಳವನ್ನು ಕಂಡಾಗ ಹಿಗ್ಗಿ ಹಿರೇಕಾಯಿಯಾಗುತ್ತದೆ. ನೋವು ನಲಿವುಗಳನ್ನು ಅರಗಿಸಿಕೊಂಡ ಬತ್ತಿದ ಕಣ್ಣುಗಳು ಕಾಂತಿಹೀನವಾದರೂ ತೀಕ್ಷ್ಣತೆಯನ್ನು ಉಳಿಸಿಕೊಂಡಿರುತ್ತವೆ. 'ಸಾಕಪ್ಪಾ ಈ ಬದುಕು'-ಎಂದು ಸಾವಿರ ಸಲ ಹೇಳಿದರೂ ಮಗನ ಪೀಳಿಗೆಯಿಂದ ಮರಿಮಗ ಹುಟ್ಟಿ ತನ್ನ ತಲೆಯ ಮೇಲೆ ಬಂಗಾರದ ಹೂ ಹಾರಿಸುವುದನ್ನು ಕಾಣ ಬಯಸುತ್ತದೆ ಈ ಅಜ್ಜಿ.

ದುಂಡಾದ ಮುಖ, ಹಣೆಯ ಮೇಲೆ ಹುಣ್ಣಿಮೆ ಚಂದ್ರನನ್ನು ಹೋಲುವ ಕುಂಕುಮದ ಬೊಟ್ಟು, ಕಪ್ಪಗಿನ ಕೂದಲಿಗೆ ಬೆಳ್ಳಿ ಅಂಚು. ಬಟಾಟೆಯಷ್ಟು ತುರುಬಿಗೆ ಚಿಕ್ಕಚೌರಿಯ ಪೂರಕ. ಅದರ ಮೇಲೆ ಸೌಭಾಗ್ಯ ಸಂಕೇತಕ್ಕಾಗಿ ಯಾವುದೋ ಹೂವಿನ ಕುಚ್ಚು. ಈ ಸುಮಂಗಲೆ ಏನು ಉಟ್ಟರೂ ತೊಟ್ಟರೂ ಲಕ್ಷಣ. ಪತಿಯ ಸೌಲಭ್ಯದತ್ತ ಗಮನ, ಮಕ್ಕಳ ಭವಿಷ್ಯದ್ದೇ ಯೋಚನೆ. ತಿಂಡಿ-ಊಟಗಳ ಯೋಜನೆ, ಹಬ್ಬ ಹರಿದಿನಗಳ ಮುಂದಾಲೋಚನೆ. ಮನೆಯಲ್ಲಿಯ ಹಿರಿಯರು ಮತ್ತು ಮಕ್ಕಳ ನಡುವಿನ ಸೇತುವೆಯಾದ ಈಕೆಗೆ 'ತಾನು' "ತನ್ನದು' ಎಂಬ ಅರಿವಿಲ್ಲದೇ ಎಲ್ಲವನ್ನೂ ತನ್ನದಾಗಿ ಭಾವಿಸಿ ದುಡಿಯುತ್ತಿರುತ್ತಾಳೆ. ಈಕೆ ಮನೆಗೆ ಮಹಾಲಕ್ಷ್ಮಿ-ಮಕ್ಕಳಿಗೆ ಸರಸ್ವತಿ-ಪತಿಗೆ ಪಾರ್ವತಿ.

ಕುಟುಂಬ ಯೋಜನೆ ಈಕೆಯ ಕಾಲಕ್ಕೇ ಕಾಲಿಟ್ಟಿದೆ. ಆದರೆ ಚರ್ಚೆಗೆ ಅವಕಾಶವಿಲ್ಲ. ಹೆಚ್ಚಿನವರಿಗೆ ಹೆಚ್ಚಿನ ತಿಳುವಳಿಕೆ ಇಲ್ಲ. ಆಸ್ತಿ ಇದ್ದವರಿಗೂ ಸೌಲಭ್ಯ ಕಡಿಮೆ. ಕಡಿಮೆ ಮಕ್ಕಳ ಕುಟುಂಬಕ್ಕೆ ಸಂಪದಭಿವೃದ್ಧಿ ಇದೆ. ಆರೋಗ್ಯದತ್ತ ಗಮನ ಹೆಚ್ಚುತ್ತಿದೆ. ಜವಾಬ್ದಾರಿ ಪತಿಯ ಮಾವ ಮರ್ಯಾದೆ ಮುಟ್ಟ ಕಳಗಿಳಿದಿದೆ. ಆದರೆ ಬಿಟ್ಟು ಹೋಗುವ ಮಾತಿಗೆ ಮನ್ನಣೆ ಇಲ್ಲ.

ಪರಿವರ್ತನೆ

ಇನ್ನು ಮಗಳು-ಕುಂಕುಮ ಹಣೆಯ ಮೇಲೆ ಇದ್ದರೆ ರೂಪಾಯಿ ಅಗಲಕ್ಕೂ ಇರಬಹುದು-ಇಲ್ಲದೆಯೂ ಇರಬಹುದು. ಕೆಲವೊಮ್ಮೆ ಚಿತ್ರ ವಿಚಿತ್ರ ನಕ್ಷೆಗಳೂ ಅಲ್ಲಿ ಮೂಡಬಹುದು. ಕುಂಕುಮ ಕೆಂಪು ಬಣ್ಣದ್ದೇ ಆಗಿರಬೇಕೆಂಬ ನಿಯಮವಿಲ್ಲ. ಹಸಿರು, ನೀಲಿ- ಏನಾದರೂ ಸೀರೆಗೆ ಒಪ್ಪುವ ಬಣ್ಣವಾದರೆ ಆಯಿತು. ಈ ಅಲಂಕಾರಕ್ಕೆ ಸೌಭಾಗ್ಯದ ಮುದ್ರೆ ಇಲ್ಲ. ಕೂದಲಿನ ಅಲಂಕಾರ 'ಕಾಗೆಯ ಗೂಡು' ಆಗಿರಬಹುದು ಇಲ್ಲವೇ ಇಷ್ಟಾನುಸಾರವಾಗಿ ಕತ್ತರಿಸಿ ಹರಡಿರಬಹುದು. ಚಿಕ್ಕ ದೊಡ್ಡ ಸುರುಳಿಗಳು ವಿವಿಧಾಕಾರದಲ್ಲಿ ವಿಜೃಂಭಿಸಬಹುದು. ಹೂವನ್ನು ಇದೇ ರೀತಿ ಮುಡಿಯಬೇಕೆಂಬ ಕಟ್ಟಳೆ ಇಲ್ಲ. ಮಾರುದ್ದ ಮಲ್ಲಿಗೆಯೂ ಆದೀತು- ಒಂಟಿ ಗುಲಾಬಿಯೂ ನಡೆದೀತು. ಅದಕ್ಕೆ ಬದಲು ಮಣಿ-ಮುತ್ತುಗಳ ಮಾಲೆ ಕೇಶವನ್ನು ಅಲಂಕರಿಸಬಹುದು.

ಭೂಷಣದಂತೆಯೇ ವೇಷದಲ್ಲಿಯೂ ವೈವಿಧ್ಯ ಮಗಳಲ್ಲಿದೆ. ಒಮ್ಮೆ ಧರ್ಮಾವರ ಅಥವಾ ಧಾರವಾಡದ ಸೀರೆ ಕುಪ್ಪಸದಲ್ಲಿ ಸಾಂಪ್ರದಾಯಿಕ ಹಳೇ ಮುತ್ತೈದೆಯನ್ನು ಮೀರಿಸುವ ಅಪ್ಪಟ ಸಾದಾ ಸುಂದರಿಯಾಗಿ ಕಾಣಿಸಿಕೊಂಡರೆ ಇನ್ನೊಮ್ಮೆ ಬೆಲ್ ಬಾಟಮ್, ಮ್ಯಾಕ್ಸಿಗಳಲ್ಲಿ ಬೊಂಬೆಯಂತೆ ಶೋಭಿಸಬಹುದು. ಮತ್ತೊಮ್ಮೆ ನೈಲಾನ್/ಶಿಫಾನ್, ಜಾರ್ಜೆಟ್‌ಗಳಲ್ಲಿ ಶಿಲಾಬಾಲಿಕೆಯಂತೆ ಕಣ್ಣು ಕೋರೈಸುವ ಈಕೆಗೆ ತಾನು ಏನು ಮಾಡಿದರೂ ಚೆನ್ನ ಎಂಬ ನಂಬಿಕೆ. ತನ್ನ ಶರೀರದ ಮೇಲೆ ತನ್ನದೇ ಮನಸು-ಜೊತೆಗೆ ಮತ್ತೊಬ್ಬರದನ್ನೂ ಸೆಳೆಯುವ ಚಪಲ.

ಆಸಕ್ತಿ-ನಿರಾಸಕ್ತಿ

ಕಾಲು ನೆಲದ ಮೇಲೆ, ದೃಷ್ಟಿ ಆಕಾಶದತ್ತ. ಭವಿಷ್ಯವನ್ನು ಭವ್ಯವಾಗಿಸಿಕೊಳ್ಳಲು ಮದುವೆಗೆ ವಯಸ್ಸು ಮೀರಿದರೂ ಚಿಂತೆಯಿಲ್ಲ. ಪ್ರಪಂಚವನ್ನೇ ಗೆಲ್ಲುವ ಹಂಬಲ-ಎಲ್ಲದರಲ್ಲಿಯೂ ಆಸಕ್ತಿ-ಕಾರ್ಯದಲ್ಲಿ ನಿರಾಸಕ್ತಿ! ಅಜ್ಜಿಗೆ ಅರ್ಥವಾಗದ ಈಕೆಯ ನಡೆ-ನುಡಿ ತಾಯಿಗೆ ಆತಂಕ. ತಂದೆಗೆ ಹೆಮ್ಮೆ ಕೆಲವೊಮ್ಮೆ ನಿರ್ಲಿಪ್ತತೆ. ಸಮಾಜಕ್ಕೊಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಈಕೆ.

ಹೊತ್ತು ಮುಳುಗುವ ಮುನ್ನ ಮನೆಯ ಯಾವುದೋ ಮೂಲೆಯಲ್ಲಿ ಮಲಗಿ ಬೆಳಕುಕಾಣುವ ಮೊದಲು ಎದ್ದು, ಹೇಳಿದ ಕೆಲಸ ಮಾಡಿ, ಹಾಕಿದ್ದು ಉಂಡು, ದೊಡ್ಡವರಾದ ಮೇಲೆ ಮದುವೆ ಸಮಾರಂಭವನ್ನು ಮರೆತುಹೋಗುವ ವಯಸ್ಸಿನಲ್ಲಿ ಹಿರಿಯರು ತಂದ ವರನೊಂದಿಗೆ ಮದುವೆಯಾಗಿ, ತಿಳುವಳಿಕೆ ಬಂದನಂತರ ಕಷ್ಟವೋ-ನಷ್ಟವೋ ತನ್ನ ಗಂಡನೇ ಸರ್ವಸ್ವ ಆತನೇ ಮೋಕ್ಷಕ್ಕೆ ದಾರಿ ಎಂದು ಭಾವಿಸಿದವಳು ಈ ಅಜ್ಜಿ. ಆಕೆಯ ಗಂಡ ಮುದುಕನಿರಬಹುದು, ಕುಡುಕನಿರಬಹುದು, ಸ್ತ್ರೀಲೋಲುಪನಾಗಿರಬಹುದು, ನಪುಂಸಕನಿರಬಹುದು. ದುಡಿಯದೇ ಮೂಲೆಯಲ್ಲಿ ಬಿದ್ದಿರಬಹುದು. ವರುಷಕ್ಕೊಂದು ಮಗುವನ್ನು ವರುಷ ವರುಷವೂ ಹೆರುವಂತೆ ಮಾಡಿರ

ಬಹುದು. ಆದರೊ ಈ ಅಜ್ಜಿ ತನ್ನ ತಾರುಣ್ಯವನ್ನೆಲ್ಲ ಗಂಧದ ಕೊರಡಿನಂತೆ ತೇದಿದ್ದಾಳೆ- ಕೆಲವೊಮ್ಮೆ ಸದ್ದಾಗಿರಬಹುದು, ಮತ್ತೊಮ್ಮೆ ಒಟಗುಟ್ಟಿರಬಹುದು– ಆದರೆ ಪ್ರತಿಭಟನೆ ಮಾತ್ರ ಮಾಡಿಲ್ಲ. 'ಸಹನೆಯ ಸಾಕಾರ' ಎಂದು ಆಕೆಯನ್ನು ಹೊಗಳಿದರೂ ಅದರ ಹಿನ್ನೆಲೆ ಆಕೆಗೆ ಗೊತ್ತು. ಪ್ರತಿಭಟಿಸುವ ಶಕ್ತಿ ಇರಲಿಲ್ಲವೆಂದಲ್ಲ. ಪ್ರತಿಭಟಿಸಿದರೆ ಆಗುವ ಪರಿಣಾಮದ ಅರಿವಿತ್ತು. ಅಸಹಾಯಕತೆ ಮೂರ್ತಿವತ್ತಾಗಿ ಆಕೆಯಲ್ಲಿ ಮನೆ ಮಾಡಿತ್ತು. ಪರಿಸ್ಥಿತಿಯನ್ನು, ಪರಿಸರದ ಚಕ್ರದಲ್ಲಿ ಸಿಲುಕಿ ಅಜ್ಜಿ–ಬಜ್ಜಿಯಾಗಿದ್ದಳು. ಹನ್ನೆರಡು ಮಕ್ಕಳ ಹೊಟ್ಟೆ ತುಂಬಿಸಿ, ಹಳೇ ಬಟ್ಟೆಯಿಂದ ಸಿದ್ಧಪಡಿಸಿದ ಹಾಸಿಗೆ ಮಾಡಿ, ಅವರನ್ನು ಸಾಲಾಗಿ ಮಲಗಿಸಿ ಅದರ ಅಂಚಿನಲ್ಲಿ ಮಲಗಿದ ಈಕೆಗೆ ವಿದ್ಯುತ್ ತಗಲಿದಂತೆ ಕಾಲಿಗೆ ಏನೋ ತಗುಲಿ ಎಚ್ಚರವಾಗುತ್ತದೆ. ಆಕಸ್ಮಿಕವಾಗಿ ನಿದ್ದೆಯಿಂದ ಎದ್ದ ಈಕೆಯ ದೇವರು' ನೀರಡಿಕೆ ಇಲ್ಲದಿದ್ದರೂ ನೀರಿನ ನೆಪದಿಂದ ಅಲ್ಲಿಗೆ ಬಂದು ಕಾಲಬೆರಳನ್ನು ತನ್ನ ಕಾಲಿನಿಂದ ಒತ್ತಿರುತ್ತಾನೆ. ಈ ಪತಿಪರಾಯಣೆ ಸೂತ್ರದ ಬೊಂಬೆಯಂತೆ ಆತನನ್ನು ಹಿಂಬಾಲಿಸುತ್ತಾಳೆ– ಕಾರಣ 'ಬಯಕೆ' ಅಲ್ಲ. ತಾನು ಹೋಗದಿದ್ದರೆ ಆತ ಅಲ್ಲಿಯೇ ಇದ್ದಾನು–ಮಕ್ಕಳು ಎಚ್ಚರಗೊಂಡರೆ... ಆಕೆಗೆ ಭಯ–ಆತಂಕ–ಅಸಹಾಯಕತೆ.

ಧನ್ಯೆ !

ಹಗಲಿನಲ್ಲಿ ಈಕೆ ಪತಿಯೊಡನೆ ನೇರವಾಗಿ ಮಾತನಾಡಿಲ್ಲ. ಪ್ರಸಂಗಕ್ಕೆ ಮಕ್ಕಳು ಈಕೆಗೆ ಮಧ್ಯವರ್ತಿಗಳು. ಕೈಹಿಡಿದವ ಒಳ್ಳೆಯವನಾಗಿದ್ದರೆ ಆಕೆ ಪಡುವ ಕಷ್ಟಕ್ಕೆ ತ್ಯಾಗಕ್ಕೆ ಕೃತಜ್ಞನಿರುತ್ತಾನೆ. ಆಕೆಯೇ ತನ್ನ ಬಾಳಬೆಳಕು'ಎಂದುಕೊಂಡಿರುತ್ತಾನೆ. ಮಾತಿನಲ್ಲಿ ಇಲ್ಲದಿದ್ದರೂ ಕೃತಿಯಲ್ಲಿ ಅದನ್ನು ವ್ಯಕ್ತಪಡಿಸುತ್ತಾನೆ. ಇಂಥ ಪತಿಯನ್ನು ಪಡೆದ ತಾನು ಧನ್ಯಳೆಂದು ಈಕೆ ಭಾವಿಸುತ್ತಾಳೆ. ಪ್ರಪಂಚದಲ್ಲಿ ತನಗೆ, ಇನ್ನೇನೂ ಬೇಕಿಲ್ಲ ಎಂದುಕೊಳ್ಳುತ್ತಾಳೆ. ಪೂರ್ವಜನ್ಮದ ಪೂಜಾಫಲ ಈ ಜನ್ಮಕ್ಕೆ ದೊರೆತಿದೆ ಎಂದು ಪರಮಾತ್ಮನಿಗೆ ಧನ್ಯವಾದ ಅರ್ಪಿಸುತ್ತಾಳೆ. ಮುಂದಿನ ಜನ್ಮಕ್ಕೆ ಬುತ್ತಿಯಾಗಿ ಈ ಪತಿಯ ಸೇವೆಯೇ ಬಾಳಗುರಿ ಎಂದುಕೊಂಡು ಜೀವನ ಮಾರ್ಗಕ್ರಮಿಸುತ್ತಾಳೆ. ಆತ ಸತ್ತು ಹೋದಾಗ ಜೀವನ ವ್ಯರ್ಥವೆಂದು ದುಃಖಿಸುತ್ತಾಳೆ. ಪುಣ್ಯವಂತರನ್ನು ದೇವರು ಬೇಗ ಕರೆಸಿಕೊಳುತ್ತಾನೆ ಎಂದು ಸಮಾಧಾನ ಪಡೆಯುತ್ತಾಳೆ.

ಕುಟುಂಬದ. ಆರ್ಥಿಕ ಆಧಾರಸ್ತಂಭವಾದ ಆತ ಉರುಳಿ ಬಿದ್ದಾಗ ಮನೆ ಒಡೆದು ಹೋಗುತ್ತದೆ. ಇದ್ದು ಬಿದ್ದುದನ್ನು ಕಂಡವರು ಬಾಚಿಕೊಳ್ಳಲು ಯತ್ನಿಸುತ್ತಾರೆ. ಬಲವಂತದಿಂದ ಆಕೆಯ ಹೆಬ್ಬೆರಳನ್ನು ಯಾವುದೋ ಆಸ್ತಿಯ ಹಕ್ಕಿನ ಕಾಗದದ ಮೇಲೆ ಮೂಡಿಸಿಕೊಳ್ಳುತ್ತಾರೆ. ಎಷ್ಟೋ ಸಲ ಈ ಕೃತ್ಯಕ್ಕೆ ಪ್ರೀತಿಯ–ಸ್ನೇಹದ ಮುಲಾಮಿರುತ್ತದೆ. ಈಕೆಯ ಅಜ್ಞಾನ ಕಷ್ಟ ಬಂದಾಗ 'ಕರ್ಮ' ಎಂದು ಹಲಬುತ್ತದೆ. ಪರಂಪರಾಗತವಾಗಿ ಬಂದ ಕಸೂತಿ, ರಂಗೋಲಿ, ಹಾಡು, ಹಸೆ, ಒಗಟು ಇವು ಈಕೆ ಹಿತ್ತಿಲು ಮನೆಯಲ್ಲಿ ಗಳಿಸಿ, ಬೆಳೆಸಿ, ಉಳಿಸಿಕೊಂಡು ಬಂದ ಕಲೆ,

ನನ್ನ ರಂಗಿ



ನನ್ನ ರಂಗಿಯು ಬಣ್ಣ ನಾರಿಂಗದಂತೆ.
ನಡೆಯಲಿ ರಸಬಾಳೆ, ಬಹಳ ಗುಣವಂತೆ.
ಹುಚ್ಚು ಹಿಡಿಸುವ ಹಾಗೆ ಅವಳ
ನಡೆ ರೀತಿ.
ಇಂದ್ರ ದೇವನಿಗಿಲ್ಲ ಇಂಥ ಸಂಗಾತಿ.

–ದಿನಕರ ದೇಸಾಯಿ

ಪ್ರಜ್ಞಾವಂತೆ

ಈ ಅಜ್ಜಿಯ ಮಗಳು–ನಮ್ಮ ತಾಯಿ. ಈಕೆಗಿಂತ ಸ್ವಲ್ಪ ಸುದೈವಿ. ತನ್ನ ಕಷ್ಟ ತನ್ನ ಮಗಳಿಗೆ ಬರಬಾರದೆಂದು ಎನ್ನುವ ಆಕಾಂಕ್ಷೆ ಅಜ್ಜಿಯದು. ಆದರೆ ಪರಿಹಾರಕ್ಕೆ ದಾರಿ ಗೊತ್ತಿಲ್ಲ. ವಿಚಾರಕ್ಕೆ ಸ್ವಾತಂತ್ರ್ಯವೂ ಇಲ್ಲ. ಆರ್ಥಿಕ ಪರಿಸ್ಥಿತಿ ಒಂದೇ ಅಲ್ಲ–ಸಾಮಾಜಿಕ ಪರಿಸ್ಥಿತಿಯೂ ಆಕೆಯ ಆಶೆಗೆ ಅಡ್ಡಿ. ಈ ತಾಯಿಯ ಕಾಲದ ಸುದೈವವೋ ಅನ್ನುವ ಹಾಗೆ ನಮ್ಮ ದೇಶದಲ್ಲಿ ಮಹಾತ್ಮಾ ಗಾಂಧೀ ಅವರಂಥ ಮಹಾನ್ ವ್ಯಕ್ತಿಗಳು ಈಕೆಯ ಓಳಿಗೆಗೆ ಮಾರ್ಗದರ್ಶಕರಾದರು. ಆಕೆಯಲ್ಲಿಯ ಶಕ್ತಿಯನ್ನು ಪ್ರಯೋಗಿಸಿ ಉದಾಹರಣೆ ತೋರಿಸಿದರು. ಆತ್ಮಬಲದ ಮೇಲೆ ಪುರುಷಶಕ್ತಿಯನ್ನು ಗೆಲ್ಲಬಹುದೆಂಬುದನ್ನು ತೋರಿಸಿಕೊಟ್ಟರು. ರಾಜಾರಾಮ ಮೋಹನ್‌ರಾಯ್, ಮಹರ್ಷಿಕರ್ವೆ, ಮಹಾತ್ಮಾ ಫುಲೆ, ಆಗರಕರ್ ಮುಂತಾದ ಸಮಾಜ ಸುಧಾರಕರು. ಶಿಕ್ಷಣತಜ್ಞರು ಈಕೆಯ ವಿದ್ಯಾಭ್ಯಾಸಕ್ಕೆ ಯೋಜನೆ ಯೋಚಿಸಿದರು. ಶಿಕ್ಷಣವಿಲ್ಲದೆ ಆಕೆ ಆರ್ಥಿಕವಾಗಿ ಸ್ವಾವಲಂಬಿಯಾಗಲಾರಳು. ಸ್ವಾವಲಂಬಿಯಾಗದೇ ಅನ್ಯಾಯವನ್ನು ಎದುರಿಸಲಾರಳು ಆಕೆ ಸುಶಿಕ್ಷಿತಳಾದರೆ ಒಂದು ಕುಟುಂಬ ಶಿಕ್ಷಣ ಪಡೆದಂತೆ ಎಂಬ ವಾದ ಪ್ರಬಲವಾಯಿತು. ಇದರ ಫಲ ಹೆಚ್ಚಿನ ಮಹಿಳೆಯರಿಗೆ ಸಿಕ್ಕದಿದ್ದರೂ ಅನೇಕರಿಗೆ ದೊರೆಯಿತು. ಅಸಂಖ್ಯರಿಗೆ ಅಕ್ಷರಾಭ್ಯಾಸವಾಯಿತು. ಅರಿಯದೇ ತಾನು ಹೆಬ್ಬೆರಳು ಒತ್ತಿದಂತೆ ತನ್ನ ಮಗಳು ಅನ್ಯಾಯಕೆ ಬಲಿಯಾಗದಿರಲಿ ಎಂಬ ಉದ್ದೇಶ ಈಕೆಯ ಅಕ್ಷರಾಭ್ಯಾಸಕ್ಕೆ ಅಡ್ಡಿ ಬರಲಿಲ್ಲ.

ಅಕ್ಷರಸ್ಥೆಯಾದ ಈ ತಾಯಿ ಸುಶಿಕ್ಷಿತಳು ಎಂದು ಹೇಳಲಾಗದಿದ್ದರೂ, ಸರಿ, ತಪ್ಪುಗಳನ್ನು ಕಂಡು ಹಿಡಿಯುವಷ್ಟು ಪ್ರಜ್ಞಾವಂತೆಯಾದಳು. ಎರಡನೆಯ ಮಹಾಯುದ್ಧದ ಕಾಲ ಈಕೆಯ ಓಳಿಗೆಗೆ ಬಿಸಿ ತಟ್ಟಿಸಿತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಅದರ ರುಚಿ ನೋಡಿ ಸವಿಯುವಷ್ಟು ಓದು ಈಕೆಗಿಲ್ಲದ್ದರಿಂದ ಅಸ್ವಾತಂತ್ರ್ಯದ ಅರಿವೂ ಮೂಡಲಿಲ್ಲ. ಭಾಷಾಪತ್ರಿಕೆ ಈಕೆಯ ಕಾಲಕ್ಕೆ ಮನೆ ಮೆಟ್ಟಲೇರಿತು. ತಾನು ಓದದಿದ್ದರೂ ಗಂಡ–ಮಕ್ಕಳು ಓದಿದ್ದು ಕಿವಿಗೆ ಬಿತ್ತು. ಈ ಓದಿದವರಿಗೆ ಹೆಚ್ಚಿನ ತಿಳುವಳಿಕೆ ಇದೆ ಎಂದು ಹೆಮ್ಮೆಪಟ್ಟಳು. ತಾನು ಬುದ್ಧಿಯಲ್ಲಿ ಅವರಿಗಿಂತ ಕಡಿಮೆ ಎಂದು ಭಾವಿಸಿದಳು. ಪ್ರಯತ್ನಪಟ್ಟರೆ ತಾನೂ ಅವರ ಮಟ್ಟಕ್ಕೆ ಏರಬಹುದು ಎಂಬ ಅರಿವು ಆಕೆಗೆ ಬರಲಿಲ್ಲ. ಅರಿವಿದ್ದವರು ಅಲ್ಲಲ್ಲಿ ಇದ್ದರೂ ಅವರ ಸಂಖ್ಯೆ ಬೆರಳ ಮೇಲೆ ಎಣಿಸುವಷ್ಟು.

ತನಗೆ ದೊರಕದ್ದು ತನ್ನ ಮಕ್ಕಳಿಗೆ ಸಿಕ್ಕಲಿ ಎಂಬ ಸಹಜ ಬಯಕೆ ಈ ತಾಯಿಯದು. ಗಂಡಿನಂತೆಯೇ ಹೆಣ್ಣಿಗೂ ಶಿಕ್ಷಣ ಸೌಲಭ್ಯ ದೊರಕತೊಡಗಿತು. ಓದಿದ ಹೆಣ್ಣಿಗೆ ಮದುವೆ ಮಾರ್ಕೆಟ್‌ನಲ್ಲಿ ಬೆಲೆ ಏರಿತು. ಇತರ ಕಲೆಗಳೂ ಈ ಶಿಕ್ಷಣಕ್ಕೆ ಜೊತೆಯಾಗಿದ್ದರೆ 'ವಸ್ತು'ವಿನ ಮೆರುಗು ಇನ್ನೂ ಹೆಚ್ಚಾಯಿತು.

ಛಲ

ಹೀಗೆ ಹಂತಹಂತವಾಗಿ ಹರಿದು ಬಂದ ಶಿಕ್ಷಣ ಮಗಳು ದೊರಕಿಸಿಕೊಂಡಳು. ಆ ನಿಮಿತ್ತ ಹೊರಪ್ರಪಂಚವನ್ನು ಸ್ವಲ್ಪ ಮಟ್ಟಿಗೆ ನೋಡಿದರೂ ಅದರಲ್ಲಿ ಸಮರಸವಾಗುವ ಅವಕಾಶ ಇನ್ನೂ ಸಿಕ್ಕಿಲ್ಲ ಇದಕ್ಕೆ ಕಾರಣ ತಲೆಮಾರುಗಳು ಕಳೆದರೂ ಅಕ್ಷರ ಶಿಕ್ಷಣಸಿಕ್ಕೀತೇ ಹೊರತು ಸಾಮಾಜಿಕ ನ್ಯಾಯ ದೊರಕಲಿಲ್ಲ. ತನ್ನ ಓದಿನಿಂದ ಕಂಡ ಪ್ರಪಂಚದಲ್ಲಿ ತಾನೆಲ್ಲಿದ್ದೇನೆ ಎಂಬ ಅರಿವು ಈಕೆಗೆ ಹೆಚ್ಚಾಗಿ ಆಗತೊಡಗಿತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಹುಟ್ಟಿದ ಈಕೆಗೆ ವೈಜ್ಞಾನಿಕ, ಔದ್ಯಮಿಕ ಬೆಳವಣಿಗೆಯನ್ನು ನೋಡುವ ಅವಕಾಶ ಸಿಕ್ಕಿದೆ. ಈ ಯುಗದಲ್ಲಿ ದೈಹಿಕ ಶಕ್ತಿಗಿಂತ ಬೌದ್ಧಿಕ ಶಕ್ತಿಯ ಅಗತ್ಯವನ್ನು ಈಕೆ ಮನಗಂಡಿದ್ದಾಳೆ. ಅದಕ್ಕಾಗಿಯೇ ಪುರುಷ ಮಾಡಿದ್ದನ್ನೆಲ್ಲ ತಾನು ಮಾಡಿ ತೋರಿಸುವೆನೆಂಬ ಛಲದಿಂದ ಮುನ್ನಡೆಯುತ್ತಿದ್ದಾಳೆ. ಈ ಹೊಸ ಹುಮ್ಮಸ್ಸಿನಲ್ಲಿ ಮುನ್ನುಗ್ಗುತ್ತಿರುವ ಈಕೆ ಅನೇಕ ಸಲ ಎಡವಿದ್ದಾಳೆ–ಎಡವುತ್ತಲೂ ಇದ್ದಾಳೆ. ಪುರುಷ ಮಾಡಿದ್ದನ್ನೇ ಮಾಡುತ್ತ ಅಥವಾ ಆತನಿಗೆ ಸಾಟಿಯಾಗಿ ನಿಲ್ಲುವ ಈಕೆಯ ಪ್ರಯತ್ನದಲ್ಲಿ 'ಹೆಣ್ತನ' ಅಳಿಸಿ ಹೋಗುವ ಹೆದರಿಕೆ ಈಕೆಯ ಪಾಲಕರಿಗೆ ಉಂಟಾಗಿದೆ. ನಿತ್ಯ ಬದಲಾಗುವ ರಾಜಕೀಯ ಬಣ್ಣಗಳಲ್ಲಿ ಕಳಾಹೀನರಾದ ತನ್ನ ಬಂಧುಗಳನ್ನು, ತಂದೆ ತಾಯಿಗಳನ್ನು ಕಂಡು ಈಕೆ ಉದ್ವೇಗಗೊಳ್ಳುತ್ತಾಳೆ. ಪರಂಪರಾಗತವಾದ ಮೂಢನಂಬಿಕೆಗಳಿಗೆ ಸಂಪ್ರದಾಯಶರಣ

– ೩೭ನೆಯ ಪುಟಕ್ಕೆ

ಸ್ತ್ರೀಯ ಬಗ್ಗೆ ಪುರುಷ ಎಂದಿಗೂ ಔದಾರ ತಾಳಿಲ್ಲ, ಈ ವಿಚಾರ ಇತಿಹಾಸದಿಂದ ವಿದಿತ. ಪೌರ್ವಾತ್ಯ ರಾಷ್ಟ್ರಗಳಲ್ಲಿ ಸ್ತ್ರೀಯನ್ನು ಅತಿ ತುಚ್ಛವಾಗಿ ಕಂಡಿದ್ದರೆ ಪಾಶ್ಚಿಮಾತ್ಯರು ಅವರಿಗಿಂತ ಒಂದು ಹೆಜ್ಜೆ ಮುಂದು ಎಂದು ಕೆಲ ಸಮೀಕ್ಷಕರ ಅಭಿಮತ. ಆದರೆ ಕಾಲ ಬದಲಾದಂತೆ ಸಾಮಾಜಿಕ ರೂಢಿಗಳಲ್ಲಿ ಬದಲಾವಣೆ ಬಂದು, ಇಂದು ಸ್ತ್ರೀಪುರುಷ ನಷ್ಟೇ ಸಮಾನಳಾಗಿದ್ದಾಳೆ.

ಬಂಧನದಿಂದ ಬಿಡುಗಡೆಯತ್ತ......

ಡಾ|| ಸರೋಜಿನಿ ಶಿಂತ್ರಿ


ಸ್ತ್ರೀಯನು ಪುರುಷ ಕಂಡ ರೀತಿ ಅನೇಕ ಮತ್ತು ವಿವಿಧ.. ಆಕೆಯನು ಮೋಹಿಸಿದ್ದಾನೆ, ವಂದಿಸಿದ್ದಾನೆ, ಪೂಜಿಸಿದ್ದಾನೆ, ನಿಂದಿಸಿದ್ದಾನೆ, ಅಂತೆಯೇ ತೆಗಳಿಯೂ ತೆಗಳಿದ್ದಾನೆ. ಆಕೆಯನ್ನು ಅರ್ಥಮಾಡಿಕೊಳ್ಳಲು ಅಸಮರ್ಥರಾದವರಿಗೆ ಆಕೆಯೊಂದು ಒಡೆಯಲಾರದ ಒಗಟು. ಆಕೆಯೊಂದಿಗೆ ಸರಿಯಾಗಿ ವರ್ತಿಸದವರಿಗೆ ಆಕೆಯೊಂದು ಬಿಡಿಸಲಾರದ ಸಮಸ್ಯೆ. ಒಲಿದರೆ ಆಕೆ ನಾರಿ; ಮುನಿದರೆ ಮಾರಿ. ಆಂಗ್ಲ ಕವಿ ಅಲೆಕ್ಸಾಂಡರ ಪೋಪ **Woman at best is a contradiction still** ಎಂದು ಉದ್ಗರಿಸಿದ್ದಾನೆ. ಇನ್ನೊಬ್ಬ ವ್ಯಂಗ ಕವಿ ಈಕೆಯ ಸೃಷ್ಟಿಯೆಂದರೇನೇ ನಿಸರ್ಗವೆಸಗಿದ ಒಂದು ಕೌತುಕಪೂರ್ಣವಾದ ಅಪರಾಧವೆಂದಿದ್ದಾನೆ. ಕೌತುಕಪೂರ್ಣವಾದ ಅಪರಾಧವೆನುವದಕ್ಕಿಂತಲೂ ಅಪೇಕ್ಷಣೀಯವಾದ ತಪು ಎಂದೇ ಹೇಳಬೇಕು. ಆ ತಪಿಗೆ ಯಾರ ಒಪ್ಪಿಗೆಯಿಲ್ಲ? ಅದೇನೇ ಇರಲಿ, ಕಾಲಾಂತರದಲ್ಲಿ ಆಕೆ ನಡೆದು ಬಂದ ದಾರಿ ಸುಗಮವಾದದ್ದಿಲ್ಲವೆಂದು ಯಾವ ಸದ್ವಿವೇಕಿಯೂ ಒಪ್ಪಬೇಕಾದ ವಿಷಯ. ಪೌರ್ವಾತ್ಯರು ಸ್ತ್ರೀಯನ್ನು ನೋಡಿಕೊಂಡ ಬಗೆ ಕಠೋರವಾದುದು ಎಂಬ ಅಪಾದನೆ ಮೇಲಿಂದ ಮೇಲೆ ಕೇಳಿಬರುತ್ತಿದೆ. ಅದು ಪೂರ್ಣ ಸತ್ಯವಲ್ಲ, ಪಾಶ್ಚಿಮಾತ್ಯರಾದರೂ ಆಕೆಯ ವಿಷಯದಲ್ಲಿ ಉದಾರ ಮನೋಭಾವನೆಯನು ತಳೆದಿರಲಿಲ್ಲವೆಂಬುದು ಕೂಲಂಕಷವಾಗಿ ಅಭ್ಯಸಿಸಿದಾಗ ಕಂಡು ಬರುತ್ತದೆ.

ಅನೇಕ ಯೋಧರಿಗೆ, ಪ್ರವಾದಿಗಳಿಗೆ,ತತ್ತ್ವಜ್ಞಾನಿಗಳಿಗೆ, ಕಲಾವಿದರಿಗೆ ಜನ್ಮವಿತ್ತ ಗ್ರೀಕ ದೇಶ ಮತ್ತು ಗ್ರೀಕ ಸಂಸ್ಕೃತಿಗಳು ಅವರಿಗೆ ಸರಿಸಮವಾಗಿ ನಿಲಬಲ್ಲ ಒಬ್ಬ ಸ್ತ್ರೀಗೂ ಜನ್ಮವೀಯಲಿಲ್ಲವೆಂಬುದನ್ನು ಅವಲೋಕಿಸುವಾಗ ಖೇದವೆನಿಸುತ್ತದೆ. ಗ್ರೀಕ ಸಾಹಿತ್ಯ ಚಿತ್ರಿಸಿದ ರಂಜನೀಯ ಪಾತ್ರಗಳಾದ ಆಂಟಿಗನಿ, ಇಫಿಜೇನಿಯಾ ಮತ್ತು ಇಲೆಕ್ಟ್ರಾ ಮುಂತಾದವರು ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದರೆ ಇವರು ಯಾರನ್ನೂ ಯಾವುದರಲ್ಲಿಯೂ ಮೀರಿಸಬಲ್ಲವರಾಗಿದ್ದರೆಂಬ ಭಾವನೆಯನ್ನು ಹುಟ್ಟಿಸುತ್ತಾರೆ. ಆ್ಯಂಟಿಗನಿ ಧೈರ್ಯದಲ್ಲಿ ಮತ್ತು ಸ್ವತಂತ್ರ ವಿಚಾರದಲ್ಲಿ ಯಾರಿಗೆ ಕಡಿಮೆ? ಆತ್ಮವೊಪ್ಪದ ರಾಜಾಜ್ಞೆಯನ್ನು ರಾಜನಿಷ್ಠೆಗೆ ಒಳಗಾಗಿ ಪಾಲಿಸಬೇಕೋ ಅಥವಾ ಅದನ್ನು ತಿರಸ್ಕರಿಸಿ ವ್ಯಕ್ತಿಸ್ವಾತಂತ್ರ್ಯವನ್ನು ಎತ್ತಿ ಹಿಡಿಯಬೇಕೋ ಎಂಬ ಕ್ಲಿಷ್ಟವಾದ ಪ್ರಶ್ನೆಗಳಿಗೆ ಆಕೆ ತನ್ನ ಕೃತಿಯಿಂದ ಉತ್ತರ ನೀಡುತ್ತಾಳೆ. ಗ್ರೀಕರು ತಮ್ಮ ಸ್ತ್ರೀಯರನ್ನು ಮನೆಯಲ್ಲಿಯೇ ಗುಲಾಮರಂತೆ ಇಟ್ಟಿದ್ದರೆಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. ಕೋರೆಂಕೋದಲ್ಲಿ ನಡೆದ ಭೀಕರ ಯುದ್ಧದ ಪರಿಣಾಮವನ್ನು ಅರಿಯಲು ಮುಂಬಾಗಿಲಿನ ಹೊಸ್ತಿಲದವರೆಗೆ ಬಂದ ತಾಯಂದಿರು ಹೆಂಡಂದಿರು ಮತ್ತು ಅಕ್ಕ ತಂಗಿಯರನು ಗ್ರೀಕರು ಕೆಂಗಣ್ಣಿನಿಂದ ನೋಡಿದರಂತೆ! ಹಾಗೆ ಬಯಲಿಗೆ ಬರುವುದು ಸ್ತ್ರೀತ್ವಕ್ಕೆ ಅಪಚಾರವೆಸಗಿದಂತೆ ಎಂಬುದು ಅವರ ಭಾವನೆಯಾಗಿತ್ತು! ಇಂತಹ ಮಡಿವಂತಿಕೆಯನು ಆಚರಿಸುತ್ತಿದ್ದ ಪುರುಷರು ಆಗಿನ ಸಮಾಜದಲ್ಲಿ ಸಾಕಷ್ಟು ಸಿಕುತ್ತಿದ್ದ ಗಣಿಕೆಯರೊಂದಿಗೆ ರಮಿಸುತ್ತಿದ್ದರು. ಈ ಗಣಿಕೆಯರಿಗೆ ನಮ್ಮ ದೇಶದಲ್ಲಿಯಂತೆಯೇ ಯಾವ ಕಟ್ಟುನಿಟ್ಟುಗಳೂ ಅನ್ವಯಿಸುತ್ತಿರಲಿಲ್ಲ. ಕಲೆಗಳಲ್ಲಿ ಪರಿಣತಿಯನ್ನು ಹೊಂದಿದ ಇವರು ತಮ್ಮ ಚೆಲ್ವಿಕೆ ಮತ್ತು ಬುದ್ಧಿವಂತಿಕೆಯಿಂದ ಆ ಗ್ರೀಕ ಪುರುಷಶ್ರೇಷ್ಠರನ್ನು ತಮ್ಮೆಡೆಗೆ ಆಕರ್ಷಿಸುತ್ತಿದ್ದರು. ಒಲಿಂಪಿಯಾದಲ್ಲಿ ನಡೆಯುತ್ತಿದ್ದ ಆಟಪಾಟಗಳನ್ನು ನೋಡಲು ಗರತಿಯರಿಗೆ ಅವಕಾಶವಿದ್ದಿರಲಿಲ್ಲ. ಆದರೆ ಈ ಗಣಿಕೆಯರಿಗೆ ಎಲ್ಲಿಯೂ ಮುಕ್ತದ್ವಾರ. ಗ್ರೀಕ ವಿಚಾರವಾದಿಗಳು ಈ ತಾರತಮ ಭಾವವನ್ನು ಅರಿಯದಿರಲಿಲ್ಲ. ಪ್ಲೇಟೋ ಪುರುಷ-ಸ್ತ್ರೀಯರ ನಡುವೆ ಇರುವ ಭೇದ ಕುಲ್ಲಕವಾದುದು, ಅವರಿಗೂ ಶಿಕ್ಷಣದ ಸೌಲಭ್ಯಗಳು ದೊರಯಬೇಕು ಎಂದು ಪ್ರತಿಪಾದಿಸಿದಾನೆ. ಪುರುಷಶ್ರೇಷ್ಠರಿಗೆ ಜನ್ಮವಿತ್ತ ತಾಯಂದಿರನೇ ಕಡೆಗಣಿಸಿದ ತಪು, ಗ್ರೀಕ ಸಂಸ್ಕೃತಿಯು ಬಿದ್ದುಹೋಗಲು ಕಾರಣೀಭೂತವಾದ ಅನೇಕ ಅಂಶಗಳಲ್ಲೊಂದಾಗಿರಬಹುದೇ ಎಂದೆನಿಸುತ್ತದೆ.

ರೋಮನ್ನರಾದರೂ ಸ್ತ್ರೀಯರ ವಿಷಯದಲ್ಲಿ ಉದಾರಭಾವನೆಯನು ತಳೆದಿರಲಿಲ್ಲ. ಅವರು ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರು. ಆಶ್ಚರ್ಯವೆಂದರೆ ಅವರ ದೃಷ್ಟಿಯಲ್ಲಿ ಪುರುಷರಷ್ಟೇ ಸ್ವಾತಂತ್ರ್ಯ ಮತ್ತು ಅಧಿಕಾರಗಳನು ಅನುಭವಿಸಲು ಯೋಗ್ಯರಾದ ಪ್ರಜೆಗಳು! ಸ್ತ್ರೀಯರ ಅಲ್ಲ. ಕಾನೂನಿನ ದೃಷ್ಟಿಯಲ್ಲಿ ಸ್ತ್ರೀಯರ ಮತ್ತು ಗುಲಾಮರ ಸ್ಥಾನಮಾನಗಳಲ್ಲಿ ಭೇದವಿರಲಿಲ್ಲ.

ಮಧ್ಯಯುಗದ ಸಮಾಜವು ಸ್ತ್ರೀಯ ವಿಷಯದಲ್ಲಿ ಪರಸ್ಪರ ವಿರೋಧೀ ವಿಚಾರಗಳನು ತಳೆದಿತ್ತೆಂದೇ ಹೇಳಬೇಕು. ಒಂದು ಕಡೆಗೆ ಆಕೆಯನ್ನು ಹಳಿಯುವ ಧರ್ಮಾಧಿಕಾರಿಗಳು, ಇನ್ನೊಂದು ಕಡೆಗೆ ಆಕೆ ಈ ಭೂಮಿಯ ಮೇಲಿನ ದೇವತೆಯೇನೋ ಎಂಬಂತೆ ಭಾವಿಸಿ ಆಕೆಯನ್ನು ಪೂಜಿಸುವ ಸರದಾರರು. ಈಕೆಯ ಪ್ರಚೋದನೆಯಿಂದಲೇ ಆ್ಯಡಮನು ಜ್ಞಾನದ ಫಲವನ್ನು ತಿಂದು ದೇವರ ಸಿಟ್ಟಿಗೆ ತುತ್ತಾದ, ಆದ್ದರಿಂದ ಮಾನವ ಕುಲದ ಅಧಃಪತನಕೆ ಈಕೆಯೇ ಕಾರಣಳು ಎಂಬ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡಿದ್ದ ಆ ಬ್ರಹ್ಮಚಾರೀ ಧರ್ಮಾಧಿಕಾರಿಗಳು ಸಮಯ ಸಿಕ್ಕಾಗಲೆಲ್ಲ ಈಕೆಯನ್ನು ತೆಗಳಿದ್ದೇ ತೆಗಳಿದ್ದು. ಸರದಾರರೋ, ತಮ್ಮ ವರ್ಗಕ್ಕೆ ಸೇರಿದ ಸ್ತ್ರೀಯರನು ಆದರದಿಂದ ಕಾಣುತ್ತಿದ್ದರೇ ವಿನಾಃ ಕೆಳವರ್ಗದವರನ್ನಲ್ಲ. ಇಲ್ಲದ ದೈವೀ ಗುಣಗಳನು ಆಕೆಯಲ್ಲಿ ಕಂಡುಕೊಂಡು ಆಕೆಯನ್ನು ಓಲೈಸುವದು ಎಷ್ಟು ಅಸಮಂಜಸವೋ ಅಷ್ಟೇ ಆಕೆಯ ವಿಷಯದಲ್ಲಿ ಸಲ್ಲದ ಅಭಿಪ್ರಾಯಗಳನ್ನು ಇಟ್ಟುಕೊಂಡು ಆಕೆಯನು ತೆಗಳುವುದೂ ಆಗಿದೆ. ಸರದಾರರ ನಯ–ವಿನಯ ದಾಕ್ಷಿಣ್ಯಗಳ ಪ್ರದರ್ಶನ ಒಂದು ಕಡೆಗೆ, ಮಾತು ಕೇಳದ ಹೆಂಡಂದಿರನ್ನು ಅಮಾನುಷ ರೀತಿಯಲ್ಲಿ ಹೊಡೆಯುವುದು ಇನ್ನೊಂದು ಕಡೆಗೆ, ಮಧ್ಯಯುಗ ಸ್ತ್ರೀಯರ ವಿಷಯದಲ್ಲಿ ದೃಷ್ಟಿ ತಳೆದ ಕೋನಗಳು ವಿಚಿತ್ರವೆಂದೇ ಹೇಳಬೇಕು.

ನಂತರದ ಪುನರುಜ್ಜೀವನ ಕಾಲದಲ್ಲಿ (**The Age of Renaissance**) ಸ್ತ್ರೀಯರ ಹಕ್ಕು ಬಾಧ್ಯತೆಗಳಿಗೆ ಯಾವುದೇ ಪುರಸ್ಕಾರ ಸಿಕ್ಕಲಿಲ್ಲವೆಂಬುದೇನೋ ನಿಜ, ಆದರೆ ಆಕೆಯನ್ನು ನೋಡುವ ದೃಷ್ಟಿಯಲ್ಲಿ ಗಣನೀಯವಾದ ಸುಧಾರಣೆಯಾದುದನ್ನು ನಾವು ಕಾಣುತ್ತೇವೆ. ಪ್ರೊಟೆಸ್ಟಂಟ್ ಧರ್ಮದ ಉದಯದೊಂದಿಗೆ ಧರ್ಮಾಧಿಕಾರಿಗಳು ತಳೆದಿದ್ದ ಸಂಕುಚಿತ ದೃಷ್ಟಿ, ಅದರ ಜೊತೆಗೆ ಸರದಾರರು ಇಟ್ಟುಕೊಂಡಿದ ಭ್ರಾಮಕ ವಿಚಾರಗಳು ಮಾಯವಾದವು. ಸ್ತ್ರೀಯರನು ವಸ್ತುನಿಷ್ಠವಾಗಿ ಕಂಡು, ಕಂಡದನ್ನು ಕಂಡಂತೆ ಸಾಹಿತ್ಯದಲ್ಲಿ ಚಿತ್ರಿಸಿದವನು ಆ ಕಾಲದ ನಾಟಕಕಾರ ಶೇಕ್ಸಪಿಯರ. ಹ್ಯಾಮ್ಲೆಟ ನಾಟಕದಲ್ಲಿ ಬರುವ, "ಹೆಣ್ಣೇ, ಚಂಚಲೆಯೆಂಬುದು ನಿನ್ನ ಎರಡನೆಯ ಹೆಸರು," ಎಂಬ ಮಾತನ್ನು ಅನೇಕ ಸಲ ಉದಹರಿಸಿ, ಇದು ಅನಂತ ಕಾಲವೂ ಸತ್ಯವಾದ ವಿಷಯ ಎಂದು ಹೇಳುವವರಿಗೆ ಕೊರತೆಯಿಲ್ಲ. ಅದೇ ಶೇಕ್ಸಪಿಯರ ಟ್ರಾಯಲಸ್ ಮತ್ತು ಕ್ರಿಸ್ಸಿಡಾ ನಾಟಕದಲ್ಲಿ ಟ್ರಾಯಲಸ್‌ನ ಮುಖಾಂತರ ಹೇಳಿಸಿದ ಮಾತುಗಳ ಅರಿವು ಈ ಪಂಡಿತರಿಗೆ ಇರಲಿಕ್ಕಿಲ್ಲ. ಆ ಸಂದರ್ಭ ಹೀಗಿದೆ. ತನ್ನ ಪ್ರೇಯಸಿ ಕ್ರಿಸ್ಸಿಡಾ ಗ್ರೀಕರ ಶಿಬಿರದಲ್ಲಿ ಇನ್ನೊಬ್ಬ ಪ್ರಿಯಕರನೊಂದಿಗೆ ವಿನೋದಿಸುವುದನ್ನು ಸ್ವತಃ ಟ್ರಾಯಲಸ್ ಮತ್ತು ಅವನ ಗೆಳೆಯ ನೋಡುತ್ತಾರೆ. ಸಿಟ್ಟಿಗೆದ್ದ ಗೆಳೆಯ ಸ್ತ್ರೀಯರೆಂದರೇ ಹೀಗೆ ಎಂದು ತೆಗಳಿದಾಗ ಟ್ರಾಯ


ಒಲುಮೆಯ ಒಸಗೆ,
ಉಡುಗೊರೆಯ ಬೆಸುಗೆ-
ಸ್ಟೇಟ್ ಬ್ಯಾಂಕ್
GIFT CHEQUE
ON DEMAND PAY TO
STATE BANK
ಸ್ಟೇಟ್ ಬ್ಯಾಂಕ್
SBI-80 KAN

ಲಸ್ "ನಮ್ಮೆಲ್ಲರಿಗೆ ತಾಯಿಂದಿರಿದ್ದಾರೆಂಬುದನ್ನು ಮರೆಯಬೇಡ. ಒಬ್ಬ ಕ್ರಿಸ್ಸಿಡಾಳ ಸಲುವಾಗಿ ಇಡೀ ಸ್ತ್ರೀಕುಲವನ್ನೇ ಹೀಗಳೆಯುವುದು ಯೋಗ್ಯವಾದೀತೇ?" ಎಂದು ಸಮಾಧಾನ ಹೇಳುತ್ತಾನೆ. ಈ ಸಂಗತಿ ಶೇಕ್ಸಪೀಯರ ಮತ್ತು ಆತನ ಸಮಕಾಲೀನರು ಸ್ತ್ರೀಯ ವಿಷಯದಲ್ಲಿ ತಳೆದ ಮನೋಭಾವನೆಯ ಮೇಲೆ ಬೆಳಕನು ಚೆಲ್ಲುತ್ತದೆ.

ಅನೇಕ ರಾಣಿಯರನ್ನು ಪಟ್ಟಗಟ್ಟಿದ ಇಂಗ್ಲಂಡು ತನ್ನ ಸ್ತ್ರೀಯರಿಗೆ ರಾಜಕೀಯ ರಂಗದಲ್ಲಿಯಾಗಲೀ ಸಾಮಾಜಿಕ ರಂಗದಲ್ಲಿಯಾಗಲೀ ನ್ಯಾಯವಾದ ಸ್ಥಾನಗಳನ್ನು ಕಲ್ಪಿಸಿಕೊಡಲಿಲ್ಲ. ಹದಿನೆಂಟನೆಯ ಮತ್ತು ಹತ್ತೊಂಭತ್ತನೇ ಶತಮಾನಗಳಲ್ಲಿ ಇಂಗ್ಲಂಡಿನಲ್ಲಿಯ ಪರಿಸ್ಥಿತಿಯೇ ಯುರೋಪಿನಲ್ಲಿಯೂ ಇತ್ತು. ಆಕೆಯ ಸೌಂದರ್ಯಕ್ಕೆ ಮರುಷರು ಮಾರುಹೋದರೇ ವಿನಾ ಆಕೆಗೂ ತಮ್ಮಂತೆಯೇ ವ್ಯಕ್ತಿತ್ವವಿದೆಯೆಂಬುದನು ಮನ್ನಿಸಲು ಆಸಕ್ತಿಯನ್ನು ತೋರಲಿಲ್ಲ. ಎಲ್ಲರ ದೃಷ್ಟಿಯನ್ನು ಈ ವಿಷಯದ ಕಡೆಗೆ ಸೆಳೆಯಲು ಕೂಗೆಬ್ಬಿಸಿದ ಪ್ರಥಮ ಮಹಿಳೆ ಮೇರಿ ವೂಲಸ್ಟನ್ ಕ್ರಾಫ್ಟ್ ೧೭೯೨ರಲ್ಲಿ ಪ್ರಕಟಗೊಂಡ ಆಕೆಯ ಮಸ್ತಕ **A Vindication of the Rights of Women** ಯುರೋಪಿನಲ್ಲಿ ಮುಂದೆ ಕೆಲ ಕಾಲದಲ್ಲಿಯೇ ಪ್ರಾರಂಭವಾಗಲಿದ್ದ ಸ್ತ್ರೀಯ ವಿಮೋಚನಾ ಆಂದೋಲನದ ದಿಕ್‌ಸೂಚಿಯಂತೆ ಇದೆ. ಪಾಶ್ಚಿಮಾತ್ಯ ಮಹಿಳೆ ನಮ್ಮ ದೇಶದ ಮಹಿಳೆಗಿಂತ ರಾಜಕೀಯ ಮತ್ತು ಆರ್ಥಿಕ ಹಕ್ಕು ಭಾಧ್ಯತೆಗಳನು ಪಡೆಯಲು ಹೆಚ್ಚು ಪರದಾಡಬೇಕಾಯಿತೆಂಬ ವಿಷಯವನು ನಾವಿಲಿ ಗಮನಿಸಬೇಕು. ಪ್ರಜಾಪ್ರಭುತ್ವದ ಮಹಾತಾಯಿಯೆಂದು ಕರೆಯಿಸಿಕೊಳುವ ಇಂಗ್ಲಂಡ ದೇಶ House of Lords ದಲ್ಲಿ ಕೇವಲ ಹತ್ತು ವರುಷಗಳ ಹಿಂದೆ ಸ್ತ್ರೀಯರಿಗೆ ಸ್ಥಾನಗಳನು ಕಲ್ಪಿಸಿಕೊಟ್ಟಿದೆ.

ಈ ದೃಷ್ಟಿಯಲ್ಲಿ ನಮ್ಮ ದೇಶದ ಮಹಿಳೆಯರು ಭಾಗ್ಯಶಾಲಿಗಳೇ. ರಾಜಕೀಯ ಪಕ್ಷಗಳಿಗಾಗಿ ಅವರು ಹೋರಾಡುವ ಪ್ರಸಂಗವೇ ಒದಗಿಬರಲಿಲ್ಲ. ಇದರರ್ಥ ನಮ್ಮ ದೇಶವು ಸ್ತ್ರೀಯರ ವಿಷಯದಲ್ಲಿ ಯಾವಾಗಲೂ ಉದಾರ ಭಾವನೆಯನು ತಳೆದಿದೆಯೆಂದು ತಿಳಿಯುವುದು ಶುದ್ಧ ತಪು. ಇಲ್ಲಿ ಪ್ರಚಲಿತವಿದ್ದ ಸತೀ ಪದ್ಧತಿ ಮಾನವ ಸಂಸ್ಕೃತಿಗೇ ಕಲಂಕ. ವೇದೋಪನಿಷತ್ತುಗಳ ಕಾಲದಲ್ಲಿ ಸ್ತ್ರೀಯರಿಗೆ ಸಾಕಷ್ಟು ವಿದ್ಯಾಭ್ಯಾಸದ ಸೌಲಭ್ಯಗಳಿದ್ದವೆಂದೂ ಅವರು ಧಾರ್ಮಿಕ ಮತ್ತು ಬೌದ್ಧಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರೆಂದೂ ನಂಬಲು ಸಾಕಷ್ಟು ಪುರಾವೆಗಳಿವೆ. ಆದರೆ ಎಲ್ಲ ಮರುಷರ ನಾಲಿಗೆಯ ಮೇಲೆ ಕುಣಿಯುವ ನುಡಿಗಳೆಂದರೆ "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಎಂಬುದೇ. ಅದರ ಜೊತೆಗೆ ಸ್ತ್ರೀಯರನ್ನು ಸಮಾಧಾನ ಮಾಡಲೋಸುಗವೋ ಏನೋ, "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಂದೂ ಹೇಳುವುದುಂಟು. ಸ್ತ್ರೀಯರನ್ನು ದೇವತೆಗಳೆಂದು ಪೂಜಿಸಲು ಮರುಷರು ಮುಂದಾಗುವಂತೆ ಅವರನ್ನು ತಮಗೆ ಸರಿಸಮಾನರೆಂದು ಗಣಿಸಲು ಮುಂದಾಗುವರೇ? ರಾಜಕೀಯ, ಧಾರ್ಮಿಕ ಮತ್ತು ಇನ್ನಿತರ ಕಾರಣಗಳಿಂದಾಗಿ ಕಾಲಾಂತರದಲ್ಲಿ ಆಕೆಯ ಚಟುವಟಿಕೆಗಳನ್ನು ಮನೆಯ ನಾಲ್ಕು ಗೋಡೆಗಳಿಗೇ ಪರಿಮಿತಗೊಳಿಸಲಾಯಿತು. ಬರಬರುತ್ತ ಆಕೆ ಅಲ್ಲಿಯೇ ಕೊಳೆಯಲು ಯೋಗ್ಯವೆಂಬ ಭಾವನೆಯೂ ಬೇರೂರತೊಡಗಿತು. ಅಂತಹ ಪರಿಸ್ಥಿತಿಯಲ್ಲಿ ಗಣಿಕೆಯರ ಹಾವಳಿಯೂ ಹೆಚ್ಚಿದ್ದರಲ್ಲಿ ಆಶ್ಚರ್ಯವೇನಿಲ್ಲ. ಮೊದಲು ಬೌದ್ಧರು, ಜೈನರು ನಂತರ ೧೨ನೇ ಶತಮಾನದಲ್ಲಿ ವೀರಶೈವರು ಆಕೆಯ ಸ್ಥಾನಮಾನಗಳನ್ನು ಹೆಚ್ಚಿಸಲು ಪ್ರಯತ್ನಿಸಿ ವಿಫಲರಾದರೆಂಬುದು ನಿಜ. ವೀರಶೈವರು ಎತ್ತಿ ಹಿಡಿದ ತತ್ತ್ವಪ್ರಣಾಲಿ "ಹೆಣ್ಣೂ ತನ್ನ ಮೋಕ್ಷವನ್ನು ತಾನೇ ಪಡೆದುಕೊಳಬಲ್ಲಳು" ಬಹುದಿನ ಬೆಳಗಲಿಲ್ಲವೆಂಬುದನ್ನೂ ನಾವು ಗಮನಿಸಬೇಕು. ಇಂತಹ ಕರಾಳ ಕಾಲದಲ್ಲಿಯೂ ಅನೇಕ ಸ್ತ್ರೀಯರು ಮಿಂಚಿ ಹೋದುದನು ನಾವು ಕಾಣುತ್ತೇವೆ. ಅಕ್ಕಮಹಾದೇವಿ, ಮೀರಾಬಾಯಿ, ಲಲ್ಲೇಶ್ವರಿ, ಕಿತ್ತೂರ ರಾಣಿ ಚೆನ್ನಮ್ಮ, ಝಾಂಸಿ ರಾಣಿ ಲಕ್ಷ್ಮೀಬಾಯಿ, ಅಹಲ್ಯಾಬಾಯಿ ಇತ್ಯಾದಿ–ಇವರುಗಳು ತಮ್ಮ ಮಹತ್ಸಾಧನೆಗಳಿಂದ, ಬೌದ್ಧಿಕ ಶಕ್ತಿ, ಧೈರ್ಯ ಮತ್ತು ನೈಪುಣ್ಯತೆಗಳು ಬರೀ ಮರುಷರ ಸ್ವತ್ತು ಅಲವೆಂಬುದನು ತೋರಿಸಿಕೊಟ್ಟಿದ್ದಾರೆ.

ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿಯೇ ಜಗತ್ತಿನಾದ್ಯಂತ ಸ್ತ್ರೀಯರ ಸ್ಥಾನಮಾನಗಳ ಸುಧಾರಣೆಗಾಗಿ ಆಂದೋಲನಗಳು ನಡೆದವು. ನಮ್ಮ ದೇಶದಲ್ಲಿ ಇಂತಹ ಆಂದೋಲನಗಳು ಪ್ರಾರಂಭವಾದದ್ದು ರಾಜಾರಾಮ ಮೋಹನರಾಯ ಮತ್ತು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ. ಸ್ತ್ರೀ ವಿಮೋಚನಾ ಚಳುವಳಿ ಮೊದಲು ಯುರೋಪಿನಲ್ಲಿ ಪ್ರಾರಂಭವಾಗಿ ನಂತರ ಅದು ಅಮೇರಿಕೆಗೂ ಹಬ್ಬಿತು. ತತ್ಪರಿಣಾಮವಾಗಿ ಈಗ ಸ್ತ್ರೀಯರು ಪ್ರತಿಯೊಂದು ರಂಗದಲ್ಲಿಯೂ ಕಂಡು ಬರುತ್ತಿದ್ದಾರೆ. ಉದ್ಯೋಗ ನಿರತ ಮಹಿಳೆ ತಮಗೊಂದು ಸವಾಲು ತಮಗೆ ಪ್ರತಿಸ್ಪರ್ಧಿ ಎಂದು ತಿಳಿಯುತ್ತಿದ್ದವರೇ, ಬದಲಾದ ಪರಿಸ್ಥಿತಿಗೆ ತಮ್ಮನು ಮಾರ್ಪಡಿಸಿಕೊಂಡು ಈಗಿನ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ಆಕೆಯೂ ಕುಟುಂಬದ ಆಧಾರವೆಂದು ಮನಗಂಡಿದ್ದಾರೆ. ಮಹಿಳಾ ಡಾಕ್ಟರರ, ಶಿಕ್ಷಕಿಯರ, ಇಂಜಿನಿಯರರ, ಆಡಳಿತಗಾರರ ಮತ್ತು ರಾಜಕಾರಣಿಗಳ ಸಂಖ್ಯೆ ಜಗತ್ತಿನಾದ್ಯಂತ ದಿನೇ ದಿನೇ ಬೆಳೆಯತೊಡಗಿದೆ. ವೇತನದಲ್ಲಿ, ಸೇವಾನಿಯಮಗಳಲ್ಲಿ ಪುರುಷ–ಸ್ತ್ರೀಯರ ನಡುವೆ ಮಾಡಲಾಗುತ್ತಿದ್ದ ತಾರತಮ್ಯಗಳನ್ನು ಕಾಯ್ದೆ ಮೂಲಕ ತೆಗೆದು ಹಾಕಲಾಗುತ್ತಿದೆ. ಆಕೆಯ ದಿಗಂತ ವಿಸ್ತರಿಸುತ್ತಿದೆ. ಮಹಿಳೆಯರು ಎಲ್ಲಿಯೇ ಇರಲಿ, ಎಂತೇ ಇರಲಿ ಅವರಿಗೆ ಕಾಡುವ ಸಮಸ್ಯೆಗಳು ಏಕಪ್ರಕಾರದವು. ಮಹಿಳಾ ವಿಮೋಚನಾ ಆಂದೋಲನಗಳ ಧ್ಯೇಯ ಬೇಡಿಕೆ ಮತ್ತು ಉದ್ದೇಶಗಳಾದರೂ ಒಂದೇ! ಸ್ತ್ರೀಯ ವ್ಯಕ್ತಿತ್ವಕ್ಕೆ ಮನ್ನಣೆ ದೊರಕಬೇಕು. ನಿಸರ್ಗವು ಆಕೆಯ ಮೇಲೆ ಕೆಲವು ಹೊಣೆಗಳನ್ನು ಹೇರಿದೆಯೆಂಬುದು ನಿಜ. ಆದರೆ ಅದನ್ನೇ ಮುಂದೆ ಮಾಡಿ ಆಕೆಯ ಕಾರ್ಯಕ್ಷೇತ್ರವನ್ನು ಪರಿಮಿತಿಗೊಳಿಸಲಾಗದು, ಆಕೆಯನ್ನು ದೇವತೆಯೆಂದು ಪೂಜಿಸುವುದೂ ಬೇಡ. ಬರೀ ಸುಂದರಿಯೆಂದು ಓಲೈಸುವುದೂ ಬೇಡ. ವಸ್ತುನಿಷ್ಠೆಯಿಂದ ಆಕೆಯನ್ನು ಮನ್ನಿಸಿ ಆಕೆಗೆ ಪ್ರತಿರಂಗಗಳಲ್ಲಿಯೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈ ಬೇಡಿಕೆಗಳನ್ನು ಮನ್ನಿಸುವುದರಲ್ಲಿಯೇ ಸ್ತ್ರೀ ಪುರುಷರೀರ್ವರ ಅಭ್ಯುದಯ ಅಡಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ●

ನಿನ್ನೆ ನಾಳೆಗಳ ಇರುಕಿನಲ್ಲಿ ಸಿಕ್ಕ 'ನಾನು'

(೩೪ ನೆಯ ಪುಟದಿಂದ)

ತೆಗೆ ಬೆನ್ನು ತಿರುಗಿಸಿದ್ದಾಳೆ, ಪ್ರತಿಭಟನೆಗೆ ಪ್ರಯತ್ನಿಸುತ್ತಿದ್ದಾಳೆ. ಮುನ್ನುಗ್ಗಲು ಶಕ್ತಿ ಸಾಲದಾದಾಗ ಸಮಭಾವನೆ ಹೊಂದಿದ ಬಲಶಾಲಿ ಮರುಷನೇ ಈಕೆಗೆ ಆಸರೆಯಾಗುತ್ತಾನೆ. ಕೆಲವೇಳೆ ಆಕೆಯ ದೌರ್ಬಲ್ಯದ ದುರುಪಯೋಗವೂ ಆಗುತ್ತದೆ. ಈಕೆ ಅದಕ್ಕೆ ಬೆದರಿಲ್ಲ. ಇದು ತೀರಾ ಸಹಜ ಎನ್ನುವ ನಡೆ–ನುಡಿ. ಕೆಳಗೆ ಬಿದ್ದಾಗ ಬಟ್ಟೆಗೆ ತಗಲುವ ಧೂಳು ಕೊಡವಿಕೊಂಡು ಎದ್ದು ಮುಂದೆ ಸಾಗುವ ಧೋರಣೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಈಕೆ ಸ್ಪರ್ಧಿ. ದೇಶವಿದೇಶಗಳಲ್ಲಿ ಈ ಹೊಸ ಭಾರತೀಯ ನಾರೀಮಣಿ ಕಂಡುಬರುತ್ತಿದ್ದಾಳೆ. ಈಕೆಯೇ ನಮ್ಮ ದೇಶದ ಪ್ರತಿನಿಧಿ. ಮುಂದಿನ ಪೀಳಿಗೆಗೆ ಕೊಡಬೇಕಾದ ಸಿಧಿಯೂ ಈಕೆಯ ಬಳಿಯಲ್ಲೇ.

ಈ ನಮ್ಮ ಅಜ್ಜಿ, ತಾಯಿ, ಮತ್ತು ಮಗಳನ್ನು ಕಂಡ ಇಂದಿನ 'ನಾನು' ತ್ರಿಶಂಕು ಸ್ಥಿತಿಯಲ್ಲಿದ್ದೇನೆ. ಮಗಳಂತೆ ಕೇಶಶೃಂಗಾರ. ತಾಯಿಯಂತೆ ಸೀರೆ ಕುಪ್ಪಸ, ಅಜ್ಜಿಯಂತೆ ವಿಚಾರ ನನ್ನದು. ನನಗೆ ನನ್ನ ಮಗಳ ಕೆಚ್ಚು ಧೈರ್ಯ ಬೇಕು. ತಾಯಿಯ ಹೊಂದಾಣಿಕೆ ಬೇಕು ಅಜ್ಜಿಯ ತಾಳ್ಮೆಯೂ ಅದರಲ್ಲಿ ಸೇರಿರಬೇಕು ಅಜ್ಜಿ ತುಳಿದ ಮುಳ್ಳು ದಾರಿ ನನಗೆ ಬೇಡ ನನ್ನ ತಾಯಿ ಅದೇ ದಾರಿಯಲ್ಲಿ ನಡೆದಳು. ಆದರೆ ಅಲ್ಲಿ ಬಿದ್ದ ಮುಳ್ಳು ಕಲ್ಲುಗಳನ್ನು ಎತ್ತುವ ಶಕ್ತಿ ಆಕೆಗಿರಲಿಲ್ಲ. ದಾಟಿಕೊಂಡು ಬಂದಳು. ತರಚು–ಪರಚುಗಳಿಗೆ ಪರಂಪರೆ ಔಷಧಿಯನ್ನೇ ಬಳಿದಳು

ಈ ಮುಳ್ಳು ದಾರಿ ಮಗಳಿಗೆ ಇಷ್ಟವಿಲ್ಲ. ಆಕೆ ಬೇರೊಂದು ದಾರಿಯಿಂದ ಹೊರಟಿದ್ದಾಳೆ. ಈ ಹೊಸ ಹಾದಿಯಲ್ಲಿ ಆಕೆಗೆ ಬೇಕಿದ್ದುದು ಸಿಕ್ಕಿದೆಯೋ–ಸಿಕ್ಕುವುದೋ ಹೇಳಲಾರೆ. ಸಭೆ-ಸಮ್ಮೇಳನ- ಆಕ್ರೋಶಗಳನ್ನು ಕೇಳಿದಾಗ–ನೋಡಿದಾಗ ಸಿಕ್ಕಿಲ್ಲ ಎಂದು ಅರ್ಥವಾಗುತ್ತದೆ. ಹಳ್ಳಿಯ ಹೆಣ್ಣುಮಕ್ಕಳು ಇದರಲ್ಲಿ ಸೇರಿಲ್ಲ. ಅವರಿಗೂ ನನ್ನ ಮಗಳೇ ದಾರಿ ತೋರಿಸುವ ಹವ್ಯಾಸದಲ್ಲಿದ್ದಾಳೆ. ದಾರಿ ತಪ್ಪಿದರೆ ಗೊಂಡಾರಣ್ಯದಲ್ಲಿ ಸಿಕ್ಕ ಜೀ[illegible] [illegible] ನನಗೆ, ನಕ್ಷತ್ರಕ್ಕೆ ಕೈಚಾಚಿದಾಗ ಪರಂಪರೆಯ ಅಡಿಪಾಯ ಎಲ್ಲಿ ಕುಸಿದೀತೋ ಎಂಬ ಶಂಕೆ. ಜೀವನದ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತವೆ– ಆಗಲೇಬೇಕು. ಸತ್ವ ಉಳಿಯಬೇಕು. ಬಂದದಾರಿಯಲ್ಲಿ ನಾನು ಹಿಂತಿರುಗಿ ಹೋಗಲಾರೆ–ಗೊತ್ತಿರದ ಮಂಜು ಮುಸುಕಿದ ಅಸ್ಪಷ್ಟ ದಾರಿಯಲ್ಲಿ ಮುನ್ನುಗ್ಗಲು ಮನಸ್ಸು ಅಳುಕುತ್ತದೆ. ಕವಲು ದಾರಿಯಲ್ಲಿ ನಿಂತಿದ್ದೇನೆ ನಾನು ಹಿಂದೆ–ಮುಂದೆ ನೋಡುತ್ತ. ★



ಈ ಮಹಿಳಾ ವರ್ಷವನ್ನು
ರಾಕ್ಷಸನಾಮ ಸಂವತ್ಸರದಲ್ಲೇ
ಏಕೆ ಆಚರಿಸುತ್ತಿದ್ದಾರೆಂದು
ನನಗೀಗ ಅರ್ಥವಾಯಿತು.



'ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ'
ಎಂದು ಬರೆದ ಈ ಮನುಸ್ಮೃತಿಯ
ಪ್ರತಿಗಳನ್ನೆಲ್ಲ ಹೋಳಿ ಮಾಡದೇ
ಮಹಿಳಾ ವರ್ಷ ಪೂರ್ಣವಾಗದು!

ಮಹಿಳಾನಾಮ



'ಈ ವರ್ಷದಿಂದ ಮಕ್ಕಳಿಗೆ
ಎದೆಹಾಲು ಉಣಿಸೋದನ್ನು
ನಿಲ್ಲಿಸಿಬಿಡಬೇಕು. ಏಕಂದರೆ
ಅದರಿಂದ ನಮ್ಮ ದೇಹ
ಸೌಂದರ್ಯ ಹಾಳಾಗುತ್ತದೆ.



ಮಹಿಳಾ ವರ್ಷದ ಅಂಗವಾಗಿ ಜೇಲು-
ಗಳಲ್ಲಿ ಮಹಿಳಾ ಕೈದಿಗಳ ಶಿಕ್ಷೆ ಕಡಿಮೆ
ಮಾಡಿ ಬಿಡುಗಡೆಗೊಳಿಸಿದರಂತೆ ಕಣೇ.
ನಾವಿನ್ನು ಹೆದರಿಕೆ ಇಲ್ಲದೇ ನಮ್ಮ ಈ
ಕಾಯಕ ಮುಂದುವರಿಸಬಹುದು.



ಈ ನೀಚ ಗಂಡಸರು ಹೆಣ್ಣು ಮಕ್ಕಳನ್ನು
ಬೆತ್ತಲೆ ನಿಲ್ಲಿಸಿ ಚಿತ್ರ ಬರೆಯುತ್ತಾರಲ್ಲ.
ನಾವೇಕೆ ಕಡಿಮೆಯಾಗಬೇಕು?
ನಾವೂ ಗಂಡಸರನ್ನು ಬೆತ್ತಲೆ ನಿಲ್ಲಿಸಿ
ಚಿತ್ರ ಬರೆಯೋಣ.



ಈ ಗಂಡಸರು ಧೂರ್ತರು!
ಮುಂದೆ ಎಲ್ಲ ಕೆಲಸ ತಮಗೇ
ಮಾಡಬೇಕಾಗುತ್ತದೆಂದು
ತಿಳಿದೇ ಈ ಧಿಡೀರ್ ಯಂತ್ರ-
ಗಳನ್ನೆಲ್ಲ ತಯಾರಿಸಿದ್ದಾರೆ.

ಸಂವತ್ಸರೇ...



'ಸ್ತ್ರೀ ಸ್ವಭಾವತಃ ಶಾಂತಿಪ್ರಿಯಳು'
ಎಂಬ ಭಾಷಣ ಸ್ಪರ್ಧೆಯಲ್ಲಿ ನನಗೆ
ಈ ಬೆಳ್ಳಿಯ ಢಾಲು ಬಹುಮಾನ-
ವಾಗಿ ದೊರೆತದ್ದು ಮನೇಲಿ ಎಷ್ಟು
ಉಪಯೋಗವಾಗಿದೆ ಅಂತೀರಾ?



ನೀವು ಬರೆದ ವ್ಯಂಗ್ಯಚಿತ್ರ-
ಗಳನ್ನೆಲ್ಲ ನನಗೆ ತೋರಿಸದೇ
ಪತ್ರಿಕೆಗಳಿಗೆ ಕಳಿಸಕೂಡದು
ಎಂದು ವಿಧಿಸಿದ ಆಜ್ಞೆಯನ್ನು
ಉಲ್ಲಂಘಿಸಿದ್ದೀರಲ್ಲ...

ಕುಪಿತ

ಎದುರಿನ ಕಿಟಕಿಯಿಂದ ನಗುವಿನ ಅಲೆಗಳು ಅವಳ ಕಿವಿಗಪ್ಪಳಿಸಿದಾಗ ಆ ಹೆಣ್ಣು ಎಷ್ಟು ಪುಣ್ಯ ಮಾಡಿರಬೇಕು ಎಂದು ಕುಸಿದು ಹಲ, ಕುದಿತ. ಅಂತೆಯೆ ಯಾವುದರಲ್ಲೂ ಅಷ್ಟು ಮನಸ್ಸಿಲ್ಲ. ಆದರೆ ಸತ್ಯ ಸಂಗತಿ ತಿಳಿದಾಗ ಆಕೆ ಬಿಕ್ಕಳಿಸತೊಡಗಿದಳು.

ಗೀತಾ ಕುಲಕರ್ಣಿ



ಹಣೆಯಲ್ಲಿ ಇಳಿದು ಬಂದ ಬೆವರನ್ನು ಸೆರಗಿನಿಂದ ಒತ್ತಿಕೊಂಡು ಅವಳು ಉಗಿಯಾಡೊ 'ಕಾಫಿ ಕಪ್ಪು ತಂಟಗಿಟ್ಟು ಒಂದು ಗುಟುಕು ಹೀರುತ್ತಾಳೆ. ಬೆಳಗಿನಿಂದ್ಲೂ ನಿಂತು ಕಾಲು ಸೋಲುತ್ತಿದೆ ಎಂದು ಎಚ್ಚರ ಮೂಡಿದ್ದು ಕಾಫಿ ಒಣಗಿದ ಗಂಟಲಲ್ಲಿ ಇಳಿದ ಮೇಲೆ. ಕಣ್ಣಿನ ಒಂದು ಹೆಜ್ಜೆಯ ದೂರದಲ್ಲಿ ಡೈನಿಂಗ ಟೇಬಲ್, ಅದಕ್ಕೆ ಸುತ್ತುವರಿಸಿ ಇರಿಸಿದ್ದ ಒಪ್ಪವಾದ ಕುರ್ಚಿ. ಅರಳಿ ನಿಂತ ಹೂದಾನಿ ಟೇಬಲ್ಲಿನ ಮಧ್ಯ ಕಾಣುತ್ತದೆ. ಅದೇ ಅರ್ಧಗಂಟೆ ಮೊದಲು ತೋಟದಿಂದ ಕೈಯ್ಯಾರೆ ಕೊಯ್ದು ಆ ಹೂ ಅವಳೇ ಅಲ್ಲಿರಿಸಿದ್ದು. ಅದರ ಬಳಿ ಹೋಗಬೇಕೆಂದು ತೋರಿದರೂ ಅವಳಿಗೆ ಅದೂ ಒಂದು ಬಂಧನ ಎನಿಸುತ್ತದೆ. ತಾನು ಒರಗಿ ನಿಂತ ಕಿಟಕಿಯನ್ನು ಬಿಟ್ಟು ಅದಕ್ಕೆ ತಾಗಿ ಇರಿಸಿದ ಸ್ಟೂಲಿನ ಮೇಲೆ ಕೂತಾಗ ಕಾಲುಗಳ ನರಗಳು ಸಡಿಲುಬಿಟ್ಟ ಹಾಗೆ ಏನೋ ಖುಶಿಯಾಗಿ ಇನ್ನೊಂದು ಗುಟುಕು ಕಾಫಿ ಕುಡಿದದ್ದು. ಇವತ್ತು ದಿನಕ್ಕಿಂತ ಗೆಲುವಾಗಿರ

ಬಹುದಲ್ಲ ಎನಿಸುತ್ತದೆ....ಕಣ್ಣುಗಳು ಸುತ್ತಲಿನ ಹಸುರು...ಎದುರು ಕಾಣುವ ಗುಡ್ಡ...ದೂರದಲಿ ಗುಂಪಾಗಿರುವ ಮನೆಗಳನ್ನು ನೋಡುತ್ತಿರುವಾಗಲೇ ನಗುವಿನ ಖೊಕ್, ಖೊಕ್ ಅಲೆಗಳು ಅವಳ ಕಿವಿಗಪ್ಪಳಿಸಿ ತುಂಬಿದ್ದ ಕಾಫಿಯ ಹನಿಗಳು ಪಟ ಪಟ ಜಾರಿ ಅವಳೆದೆಯ ಸೀರೆಯಲ್ಲಿ ಬಿದ್ದಾಗ ಅವಳು ನಗುತ್ತಲೇ ಅವಸರವಸರವಾಗಿ ಸೆರಗಿನಲ್ಲಿ ಒರಸಿಕೊಂಡು ತಟ್ಟನೆ ಪಕ್ಕದ ಮನೆಯ ಕಿಟಕಿ ನೋಡುತ್ತಾಳೆ.

ಅಲ್ಲಿಂದ ಬರುವ ನಗುವಿಗೆ ತಾನೂ ನಗುತ್ತೇನಲ್ಲಾ? ಎಂದುಕೊಂಡಾಗ ಹಣೆಯಲ್ಲಿ, ಮುಖದಲ್ಲಿ ಬೆವರಿಳಿದು ಬರುತ್ತಿರುವುದು ಅವಳ ಗಮನಕ್ಕೆ ಬರುತ್ತದೆ. ಇಷ್ಟು ಬೇಗ ದಣಿದು ಬಿಟ್ಟೆನಲ್ಲಾ ಎಂದು ಯೋಚನೆಯಲ್ಲಿ ಮತ್ತೆ ತುಟಿಗೆ ಕಪ್ಪು ತಾಗಿಸುವಂತೆ "ಇನ್ನಷ್ಟು ಹುಳಿ, ಉಪ್ಪು ಕೊಟ್ಟು ಬಿಡಿ. ಮತ್ತೆ ನೀವು ಪಾತ್ರ ಚಂದಾಗಲೇ ಇಲ್ಲ ಎಂದು ಗೊಣಗೋದು ಬೇಡ" ಎಂದು ಕೆಲಸದವಳು ಬೂದಿ ಕೈಯನ್ನು ಅವಳ ಮುಂದೆ ಚಾಚಿ ನಿಂತಾಗ –ಎರಡು ಕೆನ್ನೆಗೆ ಬಾರಿಸಿ "ಥೂ ಹಾಳಾದವಳೇ ಹೋಗಾಚೆ...ಕೊಳೆ...ವಾಸನೆ ಬೇಡಾಂತ ಇಲ್ಲಿ ಬಂದು ಕೂತ್ರೆ...ಮುಸುರೇನೇ ನನ್ನ ಮುಖಕ್ಕೆ ಹಿಡಿಯೋ ಹಾಗೆ ಕೈ ಮುಂದೆ ಚಾಚ್ತೀಯಲ್ಲ?" ಎಂದು ಸಿಟ್ಟು ಉಕ್ಕುತ್ತದೆ....ಅದು ಮತ್ತೆ ಅಲ್ಲೇ ಕರಗಿ, ಪಿಟ್ಟೆಂದು ಒಂದೂ ಮಾತು ಆಡದೆ ಅವಳು ಸರ ಸರ ಎದ್ದು ದಿನಕ್ಕಿಂತಲೂ ಸ್ವಲ್ಪ ಹೆಚ್ಚೇ ಹುಳಿ, ಉಪ್ಪು ಸಾಸರಿನಲ್ಲಿ ಹಾಕಿ ಕೆಲಸದವಳೆದುರು ಇಟ್ಟು ಬಿರಬಿರನೆ ಮತ್ತೆ ಕಿಟಕಿಯ ಬಳಿ ಬಂದು ಸ್ಟೂಲಿನಲ್ಲಿ ಕೂತು ಒಂದು ಕ್ಷಣ ಬುದ್ಧನ ತಾಳ್ಮೆ ತನಗೇಕಿಲ್ಲ? ಎಂದು ತನ್ನಲ್ಲೇ ಪ್ರಶ್ನಿಸಿಕೊಳ್ಳುತ್ತಾಳೆ.

ಕಾಫಿ ಕಪ್ಪು ಮತ್ತೆ ತುಟಿಗಿರಿಸಿದಾಗ ಅದು ಉದ್ವೇಗ ಕಳೆದುಕೊಂಡು ಶಾಂತಿ ಪಾಠ ಹೇಳಿತ್ತು. ಕಹಿ ಮದ್ದು ಕುಡಿದ ಹಾಗೆ ಗಟ ಗಟ ಕುಡಿದು ಕಿಟಕಿಯಲ್ಲಿ ಇಟ್ಟುಬಿಟ್ಟಳು.

ಕೆಲಸದವಳು ನಡುವೆ ಬಾರದಿದ್ದರೆ...ಬಿಸಿ ಕಾಫಿ ಇವತ್ತಾದರೂ ಖಂಡಿತ ಕುಡಿಯುತ್ತೇನೆ ಅಂದುಕೊಂಡಿದ್ದಳು. ದಿನವೂ ಒಂದಲ್ಲ ಒಂದು ನೆಪ. ಮನೆಯಲ್ಲಿ ಅವಳ ಮೇಲೆ ಅಧಿಕಾರ ಚಲಾಯಿಸಲು ಅತ್ತೆ ಮಾವ ಯಾರೂ ಇಲ್ಲ. ಆದ್ರೂ ಅವಳಿಗೆ ಯಾವುದಕ್ಕೂ ಸ್ವಾತಂತ್ರ್ಯವಿಲ್ಲವೇನೋ ಎಂದು ದಿನ ದಿನಕ್ಕೂ ಎನಿಸತೊಡಗಿದೆ.

ಈ ಕೆಲಸದವಳಿಗೆ ನೂರು ಸಾರಿ ಹೇಳಿದ್ದಾಳೆ. ನಡುವೆ ಅದು ಇದು ಕೇಳಬೇಡ. ಆದ್ರೂ ಅವಳದ್ದು ನಾಯಿ ಬಾಲ. ಓಟೆಯಲ್ಲಿ ಹಾಕಿದ ಬುದ್ಧಿ. ಅದಕ್ಕೇಂತ್ಲೆ ಸ್ಟಿಲ್ ಪಾತ್ರೆಗೆ ಬೇಕಾಗೊ ವಿಮ್, ತಾಮ್ರದ ಪಾತ್ರೆಗಾಗಿ ಹುಳಿ ಉಪ್ಪು ಕೊಟ್ಟು—ಚಹಾ, ಮಿಕ್ಕಿದ ಉಪ್ಪಿಟ್ಟನ್ನೆಲ್ಲ ಅವಳ ತಟ್ಟೆಯಲ್ಲಿ ಸುರಿದಾಗ "ಯಾಕ್ರಮ್ಮಾ ಎಲ್ಲಾ ನಂಗೇ ಹಾಕಿಬಿಟ್ರಲ್ಲಾ? ನಿಮ್ಗೆ ?" ಎಂದಾಗ "ಏನೂ ಬೇಡಾಗಿದೆ...ಇಷ್ಟು ಕಾಫಿ ಕುಡ್ದು ಒಂದು ಕ್ಷಣ ಹಾಗೆ ಒರಗಿಕೋಬೇಕಾಗಿದೆ. ಇವರ ಈ ಮಕ್ಕಳ ಸರ್ಕಸ್ಸಿನಲ್ಲಿ ಕುಣಿದು ಕಾಲು ಸೋತು ಬಿಟ್ಟಿದೆ. " ಎಂದಾಗ "ಹೋಗ್ರಮ್ಮಾ ಹೋಗಿ ನಾನೇನೂ ನಿಮ್ಮ ಸುದ್ದಿಗೆ ಬರೋದಿಲ್ಲ...ಎರಡು ಮುತ್ತಿನಂಥ ಮಕ್ಳು. ಬಂಗಾರಿನಂಥ ರಾಯರ ಕೆಲಸಕ್ಕೆ ಹೀಗೆ ಸೋತು ಬಿಟ್ರೆ...ನನ್ನ ಹರಿದು ತಿನ್ನೋ ಹರಾಮಿ ಎಂಟು ಮಕ್ಳು...ಕುಡ್ದು ದನಕ್ಕ ಬಡಿಯೋ ಹಾಗಿರೋ ನನ್ನ ಗಂಡಾ ಏನ್ನೋ ದೇವ್ರಕ್ಕಿ ನೀವೇನಂತಿರೋ" ಎಂದು ಕಲ್ಲುಗುಂಡಿನ ಹಾಗೆ ನೆಲ ಅದುರಿಸಿ, ಉಪ್ಪಿಟ್ಟಿನ ತಟ್ಟೆ ಎತ್ತಿಕೊಂಡು ಹೋಗಿದ್ದಳು ಗಂಗೂ. ಅಷ್ಟೆಲ್ಲ ತಿಂದು ಕೊಟ್ಟ ಹುಳಿ ಉಪ್ಪು ಮುಗಿಸಿ ಇನ್ನು ಬರೋದಿಲ್ಲ ಎಂದ ಗಂಗೂ ಅವಳಿಗೆ ಕುಡಿಸಿದ್ದು ಮತ್ತೆ ತಣ್ಣಗಿನ ಕಾಫಿನೇ!

ಮತ್ತೆ ಕಿಲಕಿಲಿ ನಗು–ಗಡಸು ದನಿಯ ಗಹಗಹಿಸಿ ನಗುವ ನಗು ಅವಳನ್ನು ಕಿಟಕಿಯ ಬಳಿ ಎಳೆದು ತಂದಿತು. ಗಾಳಿಗೆ ಕಿಟಕಿ ಪರದೆ ಆಚೆ ಈಚೆ ತೂರಾಡಿದಂತೆ, ಸೀರೆಯ ನಿರಿಗೆ, ಬೂಟು ಪ್ಯಾಂಟಿನ ಕಾಲುಗಳು ಕಾಣುತ್ತವೆ. ಕೂತಲ್ಲೇ ಇಷ್ಟು ನಗುತ್ತಾರಲ್ಲ? ಎಂದುಕೊಂಡಳು ಅವಳು. ಮತ್ತೆ ಬಿದ್ದು ಬಿದ್ದು ನಗುವ ಸದ್ದಿಗೆ ಅವಳೂ ಕಿಟಕಿಯ ಸರಳು ಹಿಡಿದು ನಗುತ್ತಿದ್ದಾಳೆ. ಅಲ್ಲಿ ನಗು ನಿಂತಾಗ ಇವಳ ನಗುವೂ ನಿಂತು ಈವರೆಗೆ ತಾನು ನಕ್ಕದ್ದೇಕೆ? ಎಂದು ಪ್ರಶ್ನಿಸಿಕೊಂಡಳು...ಇದೇನು ಹುಚ್ಚೇ ತನಗೆ? ತಾನೇಕೆ ನಗಬೇಕಿತ್ತು? ಕಿವಿಗೆ ಗಡಿಯಾರದ ಢಣ್, ಢಣ್ ಗಂಟೆ ಕೇಳುತ್ತದೆ. ಬೆಚ್ಚಿಬಿದ್ದ ಅವಳು ತಟ್ಟನೆ ಅನಾಹುತವಾದಂತೆ ಒಳಕ್ಕೋಡುತ್ತಾಳೆ.

ಗ್ಯಾಸಿನಲ್ಲಿಟ್ಟ ಅನ್ನ ಹೊತ್ತಿರಬೇಕು. ವಾಸನೆ ಗಮ್ ಅಂತ ಮೂಗಿಗೆ ಬಡಿಯಿತು. ಕೆಳಗಿರಿಸಿದ್ದ ಹಾಲಿನ ಮುಚ್ಚಳ ಆಚೆ ಸರಿಸಿ ಪಂಡಿತ್, ಮನೆಯ ಸುಟ್ಟ ಮುಸುಡಿನ ಬೆಕ್ಕು ಕುಡಿದು ಹೋದದ್ದು ಖಂಡಿತ ಎಂದವಳಿಗೆ ಗೊತ್ತು. ಒಂದು ಕ್ಷಣ ಮೈಮರೆತು ಇಟ್ಟು ಹೋದರೂ ಯಾವ ಮಾಯೆಯಲ್ಲಿ ಬಂದು ಕುಡಿದು ಹೋಗುತ್ತದೋ? ಹಾಲು ಕಪಾಟಿನಲ್ಲಿರಿಸಿ, ಗಾಬರಿಯಲ್ಲಿ ಅನ್ನ ಕೆಳಕ್ಕಿಟ್ಟು, ಇನ್ನೊಂದು ಪಾತ್ರೆಗೆ ಅನ್ನ ತೆಗೆದಿರಿಸಿದಾಗಲೇ ಅವಳಿಗೆ ಮಧ್ಯಾಹ್ನ "ಉಂಟು ನಿನ್ನ ಮಂಗಳಾರತಿ" ಎಂದು ವಾಸನೆ ಮೂಗು ತಿವಿಯಿತು,



ನಾನು ಸಾಲ ವಸೂಲಿಗೆ ಹೋದ್ರೆ, ಎಲ್ಲರೂ ತಂತಮ್ಮ ಹೆಂಡಂದಿರನ್ನೇ ಬಾಗಿಲಿಗೆ ನಿಲ್ಲಿಸಿ ನನ್ನನ್ನು ಹೆದರಿಸಿ ಓಡಿಸಿಬಿಡ್ತಾರೆ. ನೀನೇ ಹೋಗಿ ವಸೂಲು ಮಾಡಿಕೊಂಡು ಬಂದು ಬಿಡೇ.

ಗಡಿಬಿಡಿಯಲ್ಲಿ ತರಕಾರಿ ಹೆಚ್ಚಿ–ಒಗ್ಗರಣೆಯಲ್ಲಿ ಸುರಿಯುವ ಅವಸರದಲ್ಲಿ ಎಣ್ಣೆ ಮುಂಗೈಗೆ ಸಿಡಿದು, ನೋವು ಅಲ್ಲೇ ಅದುಮಿಟ್ಟು ಉಳಿದ ಕೆಲಸ ಮುಗಿಸಬೇಕು...ಎರಡು ಗಂಟೆ ಕಿಟಕಿಯ ಬದಿಯಲ್ಲಿ ನಿಂತದ್ದು ಒಂದು ಕ್ಷಣದಲ್ಲೇ ಹೋದಂತೆ ಆದದ್ದು ಹೇಗೆ? ಎಂದು ನೋವಿನ ಮುಂಗೈಯಲ್ಲಿ ಬೆರಳಾಡಿಸುತ್ತ ಯೋಚಿಸಿ, ಏನೋ ನೆನೆದು ನಗು ಬಂದಾಗ ಈಗ ಪಕ್ಕದ ಮನೆಯಲ್ಲಿ ನಗು ನಿಂತಿರಬಹುದೇ? ಎಂದು ಕಿಟಕಿಯ ಬಳಿ ಗೋಡೆ ನಿಂತಾಗ ಆ ನಗು ಮಾತು ಕಿವಿಯಲ್ಲಿ ತುಂಬಿಕೊಂಡಿತು.

ಈಗ ಅವಳಿಗೆ ನಗು ಬರಲಿಲ್ಲ. ಅಸೂಯೆ ತಲೆ ಎತ್ತಿತು.

ಹೀಗೇ ಕೂತಿರಬೇಕಾದ್ರೆ ಈ ಹೆಣ್ಣು ಎಷ್ಟು ಪುಣ್ಯ ಮಾಡಿರಬೇಕು? ತಾನು ಬೆಳಗ್ಗಿನಲ್ಲಿ ಎದ್ದು ಕ್ಷಣದ ಪುರುಸೊತ್ತು ಇಲ್ಲದೆ ಎರಡು ಕೈಗಳಲ್ಲಿ ನಾಲ್ಕು ಕೈಗಳ ಕೆಲಸ ಮಾಡಿಯೂ ಎಲ್ಲರ ಧುಸು ಮುಸು ಮೈ ಮೇಲೆ ಎರಚಿಸಿಕೊಂಡು ತಿನ್ನು ಎನ್ನುವವರಿಲ್ಲದ ಅನಾಥೆಯ ಹಾಗೆ ತಣ್ಣನ ಕಾಫಿ ಗುಟುಕುರಿಸಿ, ಎರವಲು ನಗು ನಕ್ಕದ್ದಕ್ಕೆ–ಕಣ್ಣು ತುಂಬುವ ಹಾಗೆ ಕುದಿಯುವ ಎಣ್ಣೆ ಸಿಡಿದು ಮುಂಗೈಯಲ್ಲಿ ಕಾಣುವ ಸುಟ್ಟಬೊಕ್ಕೆ!

"ಸರಿಯಾಗಿ ಅಡಿಗೆ ಮಾಡೋದಕ್ಕೂ ಬರೋದಿಲ್ಲ. ಒಂದಿನಾ ಬೆರಳು ಗಾಯ, ಇನ್ನೊಂದು ದಿವ ಎಣ್ಣೆ ಸಿಡಿದು ಬೊಕ್ಕೆ ಬರ್ತು, ಇದಕ್ಕೆ ಉಪ್ಪು ಹೆಚ್ಚು, ಅದಕ್ಕೆ ಹುಳಿಯೇ ಮರೆತುಬಿಟ್ಟದ್ದಿ" ಎಂದು ಮೂದಲಿಸಿ "ನನ್ನ ಫ್ರೆಂಡ ಸೋಮನಾಥನ ಮಿಸೆಸ್ ಎಂಥ ಅಡಿಗೆ ಮಾಡ್ತಾಳೆ. ಅದನ್ನಾ ದಿನಾ ತಿನ್ನೋ ಅವನು ಎಷ್ಟು ಲಕ್ಕಿ?" ಎಂದು ಗಂಡ ಹೇಳಿ ಅವಳನ್ನು ರೊಚ್ಚಿಗೆಬ್ಬಿಸಿದಾಗ ಮಾತು ನಿಂತು ಜಗಳ. ಅಳು. ಊಟ ಬಿಟ್ಟು ಹೋಗಿ ಒಂದೆರಡು ದಿನದಲ್ಲಿ ಅದೇ ಊಟ ಸೋಮನಾಥನ ಹೆಂಡ್ತಿಯ ಅಡಿಗೆಯನ್ನೂ ಮೀರಿಸಿದೆ ಎಂದು ಹೊಟೇಲಿನಲ್ಲಿ ಭರ್ಜರಿ ತಿಂಡಿ, ಹಾಗೆ ಪಿಕ್ಚರ್ ಮುಗಿಸಿ ಮನೆ ಸೇರೋದು. ಅವಳು ಹೀಗೆ ಯೋಚಿಸಿ ಕುಟಿಯಲ್ಲಿ ಬಂದ ಮುಗುಳ್ನಗೆಯನ್ನು ಬೆರಳಿಂದ ಮುಟ್ಟಿ ಖಚಿತಪಡಿಸಿ ಎದುರಿನ ಕನ್ನಡಿಯಲ್ಲಿ ಮುಖ ಕಂಡಾಗ "ಇನ್ನೂ ಸ್ನಾನ ಮಾಡಿಲ್ಲ...ಈ ಕೂದಲು...ನನ್ನ ಅವತಾರ ನೋಡಿದ್ರೆ"

"ಮನೇಲಿ ನೀನೊಬ್ಳೆ ಒಂದಿಷ್ಟು ಅಡಿಗೆ ಮಾಡಿ, ನಿನ್ನ ಕ್ಲೀನಾಗಿ ಇಟ್ಟುಕೊಳ್ಳೋದಕ್ಕೆ ಬರೋದಿಲ್ವೆ?" ಎಂದ್ರೆ ಎಂಥ ನಾಚಿಕೆ...ನಿಜವಾಗ್ಲೂ ಇಷ್ಟು ಹೊತ್ತು ಕಿಟಕಿ ಹತ್ರ ನಿಲ್ಲಬಾರದಿತ್ತು, ಎಂದು ಸ್ನಾನದ ಬಟ್ಟೆಗಳನ್ನು ಹೆಗಲ ಮೇಲೆ ಹಾಕಿ ಬಾತ್ ರೂಮ್ ಬಾಗಿಲು ಹಾಕಿಕೊಂಡು ಅರ್ಧ ಬಕೆಟ್ ನೀರಲ್ಲಿ ಸ್ನಾನದ ಶಾಸ್ತ್ರ ಮುಗಿಸಿ, ಹಣೆಗೆ, ತಲೆಯಲ್ಲಿ ಒಂದಿಷ್ಟು ಹಣಿಗೆ ಓಡಾಡಿಸಿ. ಪೌಡರ್ ಮುಖಕ್ಕೆ ಒರೆಸಿಕೊಳ್ಳುವಾಗಲೇ ಅವಳ ಅವಸರಕ್ಕೆ ಮುಖದಲ್ಲಿ ಬೆವರುಹನಿ ಒಡೆಯುತ್ತದೆ.

ತಟ್ಟೆ ಇಟ್ಟು ಹೊರಬಾಗಿಲು, ಒಳಬಾಗಿಲು ಓಡಾಡುತ್ತಾಳೆ. · ದಾರಿಯಲ್ಲಿ ನೆಟ್ಟಿದ್ದ ಕಣ್ಣುಗಳು ದಣಿದುಕೊಳ್ಳುತ್ತದಲ್ಲಾ ಎಂದುಕೊಳ್ಳುತ್ತಿರುವಂತೆ ಹೊಟ್ಟೆ ಹಸಿವೆಯಲ್ಲಿ ಚುರ್ರಗುಟ್ಟುತ್ತದೆ. ಬೇಸರದಲ್ಲಿ ಮತ್ತೆ ಕಿಟಕಿಯ ಬಳಿ ಬಂದು ನಿಂತರೂ ಅವಳ ಕಿವಿಯಲ್ಲಿ ನಗು ಕೇಳಿದಂತಾಗಿ ಇಣುಕಿದಾಗ ಸರಿದ

ಪರದೆಯ ಆಚೆ ಸೀರೆ ನೆರಿಗೆ. ಬೂಟ್ಸ್ ಕಾಣೋದಿಲ್ಲ. ಮತ್ತೆ ನಗು? ಇದು ತನ್ನ ಭ್ರಮೆ ಎಂದುಕೊಂಡಾಗ ಹೊರಗೆ ಕಾಲ್‌ಬೆಲ್ ಕಿರುಚಿಕೊಂಡಿತು.

ಬಾಗಿಲು ತೆರೆದು "ಇಷ್ಟು ತಡ ಮಾಡಿದ್ದು ಯಾಕೆ?" ಎಂದು ಕೇಳುವ ಸನ್ನಾಹದಲ್ಲಿ ತಲೆ ಎತ್ತಿದರೆ ಪ್ಯೂನ್ ಕಾಗದ ಕೈಗಿಟ್ಟು ಮುಖ ನೋಡುತ್ತ ನಿಂತಿದ್ದ.

"ಊಟಕ್ಕೆ ಕಾಯಬೇಡ. ಮೇಲಿನ ಆಫೀಸರ್ ಬಂದಿದ್ದಾರೆ. ಅವರೊಟ್ಟಿಗೆ ಟೂರಿಗೆ ಹೋಗಿ ಎರಡು ದಿನಗಳಲ್ಲಿ ಬರ್ತೀನಿ...ಬ್ರೀಫ್‌ಕೇಸ್‌ನಲ್ಲಿ ಬಟ್ಟೆ ಕಳುಹಿಸು......ಸಿಹಿ ಬಂದ ಮೇಲೆ"

ಮುಖ ಸಿಂಡರಿಸಿಕೊಂಡೇ ಅವಳು ಬೀರುವಿನಲ್ಲಿ ಇದ್ದ ಬಟ್ಟೆಗಳನ್ನು ತುಂಬಿಸಿಕೊಟ್ಟು ಬಂದಿದ್ದ ಸಿಟ್ಟನ್ನೆ ಬಾಗಿಲ ಮೇಲೆ ತೀರಿಸಿ ತಟ್ಟೆಯಲ್ಲಿಟ್ಟು ಅನ್ನ ಬಡಿಸಿ. ಪಲ್ಯ ಚಟ್ನಿ ಯಾವುದರ ಮುಚ್ಚಳವನ್ನೂ ತೆರೆಯದೆ ತೊವ್ವೆ, ಅನ್ನದ ಮೇಲೆ ಸುರಿದು ಬಾಯಿಗಿಟ್ಟಾಗ ಸುಟ್ಟ ವಾಸನೆ ಗಮ್ ಎಂದು ಮೂಗು ಬಡಿಯಿತು. ಇವೊತ್ತು ಬಾರದಿದ್ದದ್ದೆ ಒಳಿತಾಯಿತಲ್ಲಾ ಎಂದು ಒಂದು ಕ್ಷಣ ಎನಿಸಿದರೂ ...ಇಷ್ಟು ತಣ್ಣಗಿನ ಊಟ ಅವಳಿಗೆ ಇಷ್ಟವಿಲ್ಲ ಎಂದು ಗೊತ್ತು. ಆಫೀಸಿನಿಂದ ಬಂದು ಕೈ ಕಾಲು ತೊಳೆಯುವಾಗ ಮತ್ತೆಲ್ಲ ಅಡಿಗೆ ಬಿಸಿ ಮಾಡಿ ಟೇಬಲ್ಲಿಗೆ ತರುವಾಗ ಅಡಿಗೆ ಘಮ ಘಮ ಕೋಣೆಯಲ್ಲಿ ತುಂಬಿಕೊಳ್ಳಬೇಕು. ಇಬ್ಬರೂ ಎದುರು ಬದುರಾಗಿ ಕೂತು ಊಟ ಮಾಡುವಾಗ ಮಾತೆಲ್ಲ ತನ್ನ ಪಾಲಿಗೆ. "ಅಲ್ಲಿ ಮಾತಾಡಿ ಮಾತಾಡಿ" ಎಂದು ಹೇಳಿದ್ದಕ್ಕೆ "ಸುಮ್ನೆ ಊಟ ಮಾಡು. ಆಫೀಸಿನ ದುಡಿತನದಲ್ಲಿ ಬೇಜಾರು...ಇಲ್ಲಿ ನಿನ್ನದೊಂದು ರಾಗ" ಎಂದು ತನ್ನನ್ನೇ ಎರಡು ಬೈದು ಊಟ ಮಾಡಿದರೂ ಆ ಊಟದಲ್ಲಿ ಅವಳಿಗೆ ತುಂಬ ಸ್ವಾರಸ್ಯ ಕಾಣುತ್ತದೆ. ಇವೊತ್ತು ತೀರಾ ಬೋರ್ ಆಗುತ್ತಿದೆಯಲ್ಲಾ ಎಂದು ಹಸಿದ ಹೊಟ್ಟೆಯ ಸಂಕಟ ತಾಳಲಾರದೆ ಎರಡು ತುತ್ತು ಬಾಯಲ್ಲಿ ಹಾಕಿಕೊಳ್ಳುವಾಗ್ಲೇ ವಾಕ್ ಅಂತ ವಾಕರಿಕೆ ಬಂತು. ಅಷ್ಟಕ್ಕೆ ತಟ್ಟೆ ಎತ್ತಿಟ್ಟು ಲೋಟಾಕ್ಕೆ ಹಾಲು ಹಾಕಿ ಕುಡಿದಳು.

ಇನ್ನು ದಾರಿ ನೋಡುವ ಕೆಲಸವಿಲ್ಲ...ಹಾಗೆ ಉರಿಯುತ್ತಿದ್ದ ಕಣ್ಣು ಎರಡು ಘಳಿಗೆ ವಿಶ್ರಾಂತಿ ಕೊಟ್ಟರೆ ಆದೀತಲ್ಲ? ಎಂದು ಕಾಟನಲ್ಲಿ ಉರುಳಿದಳು. ಹಾಗೇ ಜೊಂಪು...ಬಾಗಿಲು ತಟ್ಟದಂತೆ ಕೇಳಿಯೂ ಕೇಳದವಳಂತೆ ಕಾಲ ಬಳಿ ಇದ್ದ ಥದ್ದರ್ ಮೈ ಮೇಲೆ ಎಳೆದು ಮಲಗಿದಳು.

ಕಿಟಿಕಿಯಲ್ಲೇ "ಅಮ್ಮಾ ಬಾಗಿಲು ಬಡಿದು ಸಾಕಾಗಿ ಹೋಯ್ತು. ಶಾಸ್ತ್ರಿ ಅಮ್ಮ ಬೇಗ ಬಾ ಊರಿಂದ ಜನ ಬಂದಿದ್ದಾರೆ ಅಂದಿದ್ರು...ಈಗ ಬಂದ್ರೆ...ಇನ್ನೂ ಊಟ ಆಗಿಲ್ಲ...ಎರಡು ಗಂಟೆ ಬಿಟ್ಟು ಬಾ ಅಂದ್ರು ಇನ್ನು ಮನಿಗೆ ಹೋಗಿಬರಬೇಕಂದ್ರೆ...ಹತ್ತಿರ ಮನೇನಾ ನಂದು? ಇಲ್ಲಿ ಮಾಡಿ ಹೋಗ್ತೇನೆ ಅಂತ ಬಂದ್ರೆ... ನೀವು ರಾತ್ರಿ ಮಲ್ಕೊಂಡ ಹಾಗೆ ಬೆಚ್ಚಗೆ ಹೊತ್ಕೊಂಡು ಮಲಗಿ ಬಿಟ್ರಲ್ಲವ್ವಾ?" ಎಂದು ಹಲ್ಲು ಕಿರಿದು ನಿಂತ ಗಂಗೂಗೆ ಗುದ್ದಿ ಮುಖ ಬಾಯಿಸಿ ಬಿಡುವ ಮನಸ್ಸಾಗಿತ್ತು ಅವಳಿಗೆ. ಹೊದಿಕೆ ಸರಿಸಿ ಬಾಗಿಲು ತೆರೆಯುತ್ತ "ನೀನೂ ಪಂಡಿತರ ಮನೆಯ ಬೆಕ್ಕೂ ಒಂದೇ ಜಾತಿ...ಬೇಸರನೂ ಇಲ್ಲ ನಾಚಿಕೆನೂ ಇಲ್ಲ... ಎಷ್ಟು ಹೇಳಿದ್ರೂ ಬುದ್ಧಿಗೆ ತಿಳಿಯೋದೂ ಇಲ್ಲ... ಒಟ್ಟಾರೆ ನಂಗೆ, ನಿಂಗೆ ಯಾವ ಬ್ರಹ್ಮಗಂಟು ಹಾಕಿದ್ದಾನೋ ? ಹಣ ಬೇಕಾದ್ರೆ, ಬಟ್ಟೆ ಬೇಕಾದ್ರೆ, ಹಸಿವಯಾದ್ರೆ, ಇಲ್ಲಿ ಕೈ ಚಾಚ್ತಿ...ಕೆಲಸ ಬೇರೆ ಮನೇಲಿ...ಒಂದಿಷ್ಟು ಕಣ್ಣು ಮುಚ್ಕೋಣ ಎಂದ್ರೆ ಹಾಜರ್"

ಮುಸುರೆ ಪಾತ್ರೆ ಆಗಲೇ ಗಂಗೂ ಹೊರಗೆ ಹಾಕಿ ತೊಳೆಯುವುದನ್ನೂ ಪ್ರಾರಂಭಿಸಿದ್ದು ಅವಳು ನೋಡುತ್ತಾಳೆ. ತನ್ನ ಮಾತೆಲ್ಲ ಗಂಗೂಳ ಬೆನ್ನನ್ನೂ ತಟ್ಟದೆ ಹೋದ ಅವಳ ತನ್ಮಯತೆ ತೊಳೆಯುತ್ತಿರುವ ಪಾತ್ರೆಯಲ್ಲಿ ಕಾಣುವಾಗ ಮತ್ತೆ ಕಿಟಕಿಯಿಂದ ನಗು ತೂರಿ ಬಂದು ಕಿವಿಗೆ ಬಿತ್ತು.

ಅವಳು ಉತ್ಸಾಹದಿಂದ ಕಿಟಕಿಯ ಬಳಿಗೋಡಿದಳು. ಕಾರು ಬಂದು ನಿಂತಿದೆಯಲ್ಲ? ಹೆಣ್ಣಿನ ದನಿ ಒಂದೇ ಅಲ್ಲ ಇನ್ನೂ ಒಬ್ಬಿಬ್ಬರು ಇದ್ದ ಹಾಗಿದೆ. ತುಂಬ ಸಂತೋಷದಲ್ಲಿ ಮಾತು ಮಾತಿಗೂ ನಗು ಚಿಮ್ಮುತ್ತಲೇ ಇದೆ.

ಅವಳು. ಗಂಗೂ ಪಾತ್ರೆ ತಿಕ್ಕುವಲ್ಲಿ ಒಂದು ಒಗೆಯುವ ಎತ್ತರದ ಕಲ್ಲಿನ ಮೇಲೆ ಕೂತಳು. ಅವರ ನಗು ಅವಳ ತುಟಿಯನ್ನು ಸ್ಪರ್ಶಿಸಿ ಹೋಗಿತ್ತು. ಅದೇ ನೆನಪಿನಲ್ಲಿ.

"ಏ ಗಂಗೂ ನಿನ್ನ ಗಂಡ ಭಾಳ ಪ್ರೀತಿ ಮಾಡ್ತಾನೇನೂ? ನಿಂಗೆ ಅವನು ಬರಿ ಹೊಡೆದದ್ದೇ ನೆನಪೇನೋ? ಏನು...ಕದ್ದು ತಂದು ರಾತ್ರಿ ಗುಟ್ಟಿನಲ್ಲಿ ತಿನ್ನಿಸಿದ್ದು ನೆನಪಿಲ್ವೆ?" ಎನ್ನುತ್ತಾಳೆ.

ಗಂಗೂ ತೊಳೆದಿಟ್ಟ ಪಾತ್ರೆ ಬಟ್ಟೆಯಲ್ಲಿ ಒರೆಸಿ ಲಕಲಕ [illegible]ವಾಗ ತನ್ನತ್ತ ನೋಡೋದು ಕಾಣುತ್ತದೆ. ಅವಳು ಗಂಗೂನ ದಪ್ಪ ಕಪ್ಪು ತುಟಿನ್ನ ಆತುರದಲ್ಲಿ ನೋಡುತ್ತಾಳೆ. ಗಂಗೂ ನಾಚಿಕೆಯಲ್ಲಿ ನಗುವಾಗ ತಾನು ಆ ಸಂಸಾರದ ಬಗ್ಗೆ ಕೇಳಿ ಬಿದ್ದು ಬಿದ್ದು ನಗಬೇಕು.

"ಯಾಕೆ ಅನುಮಾನ ಮಾಡ್ತಿ? ನಾಚಿಕೆ ಆಗ್ತದಾ ಹೇಳು...ಗಂಡನ್ನ ಬೈಯೋದು ನಿನ್ನ ನಾಲಗೆ ರಾಮ ರಾಮ ಇದ್ದ ಹಾಗೆ...ಒಂದಿನಾ ಅವನನ್ನು ಹೊಗಳಿದ್ದು ನಾ ಕಾಣೆ...ಈಗ ಕದ್ದು ಪ್ರೀತಿ ಮಾಡಿದ್ದು ಹೇಳು ಗಂಗೂ..."

ನಗು ಕಾಣಬೇಕೆಂದಿದ್ದ ಗಂಗೂನ ಕಣ್ಣಾಲೆಗಳು ತುಂಬಿಕೊಂಡಾಗ ಈ ಕಲ್ಲು ಮನಸ್ಸಿನಲ್ಲೂ ನೀರಿನ ಸೆಲೆ ಒಡೆಯಿತಲ್ಲಾ ಎಂದು ಅವಳು ಯೋಚನೆಯಲ್ಲಿ ಬಿದ್ದಾಗ ಗಂಗೂ ಹೇಳಿದ್ದು ಕೇಳುತ್ತದೆ.

"ಯಾಕ್ರವ್ವಾ ನನ್ನ ಕೆಣಕ್ತೀರಿ? ಈ ಹಾಳು ಹೊಟ್ಟೆ ಈ ದರಿದ್ರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಳನ್ನ ಸಾಕೋದಕ್ಕೆ ಕಂಡವರಗೆಲ್ಲ ಸೆರಗು ಹಾಸಿ ಬದುಕಿದ್ದೇನೆ...ಏನು ಸುಖ ಸುರಿದುಕೊಳ್ಳಲೀ ಅಂತ ಆ ದೇವರ ನೆನಪು ಮಾಡ್ತೀರಾ? ನೀವು ದೇವರಿಗೆ ಕೈಮುಗಿದಾಗೆಲ್ಲಾ ನಂಗೆ ಆ ದೇವರ ಪಟಾ ಆಚೆ ಎಸಿ ಬೇಕೂ ಅಂತ ಸಿಟ್ಟು ಬರ್ತದೆ. ದೇವರು ನಿಮಗೆಲ್ಲ ಸುಖ ಕೊಟ್ಟಿದ್ದಾನೆ. ಆದಕ್ಕೆ ಅವನಿಗೆ ದೀಪ ಇಟ್ಟು ಕೈ ಮುಗಿತೀರಿ. ನಾನು ದೇವರಿದ್ದಲ್ಲಿ ಕಣ್ಣು ಹಾಕೋದಿಲ್ಲ. ಆ ದೇವರೆಲ್ಲ ನಿಮ್ಮಂಥವರಿಗೆ ನೀವು ಕೊಟ್ಟ ಅನ್ನ ಊಟ ಮಾಡ್ತೇನೆ. ಆನಂತರ ಕೊಟ್ಟದ್ದನ್ನ ಮಕ್ಳಿಗೆ ಕೊಡ್ತೇನೆ" ಗಂಗೂ ಅಳ್ತಾಳೆ...ಅವಳಿಗೂ ಬುದ್ಧಿ ಇದೆ...ಬರೀ ಕಲ್ಲಲ್ಲ ಅವಳು... ಹೇಳುವ ಮಾತುಗಳಿವೆ...ಆದರೆ ಕೇಳೋ ದಿಕ್ಕಿಲ್ಲ...

ಒಗೆಯೋ ಕಲ್ಲಲ್ಲಿ ಕೂತ ಅವಳು ಹಾಗೆ ಉಸಿರು ಬಿಗಿ ಹಿಡಿದು ಅಳು ತಡೆದಾಗ...ಗಂಗೂ ಪಾತ್ರೆ ಎತ್ತಿಕೊಂಡು "ಒಳಗೆ ಬನ್ರಮ್ಮಾ...ಈ ಬಿಸಲಲ್ಲಿ ಯಾಕೆ ಕೂತ್ರಿ? ನನ್ನ ಕಥೆ ನೀವು ಕೇಳಬಾರ್ದು... ನಾನು ಹೇಳ್ಬಾರ್ದು. ನನ್ನ ತಾಯಿನೂ ಹೀಗೆ ಬದುಕಿದ್ದು, ನಾನೂ ಹೀಗೆ...ಇನ್ನು ನನ್ನ ಮಕ್ಳೂ ಹೀಗೆ... ನೀವು ಬಾಗಿಲು ಹಾಕಿ ಗಡದ್ ನಿದ್ದೆ ಮಾಡ್ರಿ. ರಾಯರು ಬರ್ಲಿಲ್ಲಾ ಅಂತಾ ಕಾಣತ್ತೆ. ಆದಕ್ಕೇ ಮುಖ ಸಣ್ಣಗಾಗಿದೆ"

ಈಗ ಗಂಗೂನ್ನ ಅವಳೇ ನಿಲ್ಲಿಸಿಕೊಳ್ಳುತ್ತಾಳೆ. ಒಂದು ಕ್ಷಣದಲ್ಲೇ ಗ್ಯಾಸ ಹೊತ್ತಿಸಿ ಬಿಸಿ ಚಹಾ ಗಂಗೂಗೆ ಕೊಟ್ಟಾಗ "ಯಾಕ್ರಮ್ಮಾ ಇದೆಲ್ಲಾ" ಅವಳು ಒಂದೂ ಮಾತು ಆಡೋದಿಲ್ಲ. ಹೊರಗೆ ಅಳಲಾರದ ಅವಳು ಒಳಗೇ ಅಳುತ್ತಾಳೆ.

ಗಂಗೂ ಹೊರಟಾಗ "ನೀನು ಹೇಗೂ ಠಾಲ್ ಬಾಗಿನ ಹತ್ತಿರ ಹೋಗುತ್ತಿ ವಿಭಾ ಅಮ್ಮನಿಗಷ್ಟು ಮನೆಗೆ ಬಂದು ಹೋಗೋದಕ್ಕೆ ಹೇಳು. ಹೂಂ... ಮರೆಯಬೇಡ" ಎಂದು ಎರಡೆರಡು ಬಾರಿ ಎಚ್ಚರಿಸಿ ಕಳುಹಿಸಿದ್ದಳು. ಗಂಗೂ ಹೋದರೂ ಮತ್ತೆ ಮತ್ತೆ ಅವಳದೇ ಮಾತುಗಳು ಕೇಳುತ್ತದೆ. ಮನೆಯಲ್ಲಿ ಎಲ್ಲ ಕಡೆಯಲ್ಲಿ ಮರೆಯಾಬೇಕೆಂದು ತಿರುಗಿದರೂ ಮತ್ತೆ ಅದೇ ಮಾತು... "ಕಂಡವರಿಗೆ ಸೆರಗು ಹಾಸಿ ಮಕ್ಕಳನ್ನು ಬೆಳೆಸಿದ್ದೇನೆ... ದೇವರು ನಿಮ್ಮಂಥವರಿಗೆ " ಈಗ ಅವಳು ಕಿಟಕಿಯ ಬಳಿ ಬಂದು ನಿಂತದ್ದು ಆ ಕಿವಿಗೆ ಕೇಳುವ ನಗುವಿನಿಂದ ಗೊತ್ತಾಗುತ್ತದೆ.

ಸಿಟ್ಟು ಬರುತ್ತದೆ, ನಗುತ್ತಿದ್ದ ಅವರ ಬಾಯನ್ನು

ಹಗಲಿನ ಬ್ರಹ್ಮಚಾರಿ



ಇವನಾರು ಗೊತ್ತೆ?
ಹಗಲಿನ ಬ್ರಹ್ಮಚಾರಿ.
ಪ್ರತಿ ದಿವಸವೂ ರಾತ್ರೆ
ಹೊತ್ತಿಗೆ ಪರಾರಿ
ಒಂದು ದಿನ ಶಾಮು ಭಟ್ಟರು
ಮಾಡಿ ಶೋಧ
ಹುಡುಕಿ ತೆಗೆದರು ಇವನ
ಕಾವಿಯ ಅಗಾಧ.

-ದಿನಕರ ದೇಸಾಯಿ

ಮುಚ್ಚಿ ಬಿಡಬೇಕು. ಕೇಳಿ ಕೇಳಿ ತಲೆ ಹಿಡಿಯುತ್ತಿದೆಯಲ್ಲಾ? ಎಂದುಕೊಂಡೆ ಕಿಟಕಿ ಜೋರಾಗಿ ಹಾಕಿ ರೇಡಿಯೋ ಟ್ಯೂನ್ ಮಾಡಿದಳು. ಆಶಾ ಭೋಸಲೆ... ಕ್ಯಾಬರೆ ಡಾನ್ಸಿಗೆ ಧನಿಗೂಡಿಸುತ್ತಿದ್ದಾಳೆ... ಥೂ ಹೇಸಿಗೆ.. ಈ ದೃಶ್ಯಕ್ಕೆ ಅವಳು ಕಣ್ಣು ಮುಚ್ಚಿ ಕೂತಾಗ ಅವಳ ರಾಜ್ ತೋಳು ಚಿವುಟಿ "ಕಣ್‌ಬಿಟ್ಟು ನೋಡು ನೀನೂ ಹೀಗೆ ಕುಣಿಯುತ್ತೀಯಾ ರಾತ್ರಿ?" ಎಂದು ಕೇಳಿದ್ದ. ತಟ್ಟನೆ ರೇಡಿಯೋ ಆಫ್ ಮಾಡಿ ಕಾಟಿನಲ್ಲಿ ಉಫ ಎಂದು ಬಿದ್ದುಕೊಂಡಳು. ಅವಳಿಗೆ ತನ್ನ ಬಾಲ್ಯ ಹತ್ತು ವರ್ಷದ ಹುಡುಗಿ ಫ್ರಾಕ್ ಹಾಕಿಕೊಂಡು ಸ್ಕೂಲಿಗೆ ಹೋಗುತ್ತಿದ್ದ ನೆನಪಾಯಿತು. ಮಗ್ಗುಲಾಗಿ ಮಲಗಿದಾಗ ನಗುಬಂತು. ಸ್ಕೂಲಿನಿಂದ ಬಂದು ಲಗುಬಗೆಯಲ್ಲಿ ಟಿಫೀನು ಮುಗಿಸಿ. ಅಕ್ಕಂದಿರ ಕಣ್ಣು ತಪ್ಪಿಸಿ ಮನೆಯ ಎಡಗಡೆಯ ದೊಡ್ಡ ಕಿಟಕಿಯ ಸರಳು ಹಿಡಿದು ಕೂತರೆ ಸರಿಯಾಗಿ ಆರುಗಂಟೆಗೆ ಎತ್ತರದ ಸಾದುಗಪ್ಪಿನ ಗಂಡು ಎಡಗೈಯಲ್ಲಿ ಸಿಗರೇಟು, ಉಂಗುರದ ಬೆರಳಲ್ಲಿ ಜಗಿ ಜಗಿ ಮಿನುಗುವ ಉಂಗುರ, ಕಣ್ಣಿಗಿದ್ದ ಕನ್ನಡಕ, ಒಪ್ಪವಾದ ಕ್ರಾಫ್. ಗಂಭೀರವಾದ ನಡಿಗೆ... ಏಕಾಂಗಿಯಾಗಿ ಹೊರಡುವ ಆ ವ್ಯಕ್ತಿ, ಅವಳನ್ನು ಬಹುವಾಗಿ ಆಕರ್ಷಿಸಿದ್ದ.

ಸರಳು ಭದ್ರವಾಗಿ ಹಿಡಿದು—ಆತ ತನ್ನ ಗಂಡ. ಆಫೀಸಿನಿಂದ ಅವನು ಬರುವುದು, ಕೋಪದಲ್ಲಿ ಬೈದಂತೆ, ಮತ್ತೆ ರಮಿಸಿದಂತೆ ಮನೆಯಲ್ಲಿ ಮಕ್ಕಳು, ಅವನು ತಾನು, ಸಂಸಾರದ ಹೊಣೆ ಹೊತ್ತು, ಕೀಲಿ ಕೈಯಲ್ಲಿ ಸೊಂಟಕ್ಕೆ ಸಿಕ್ಕಿಸಿ ಒಯ್ಯಾರೆಯಲ್ಲಿ ತಾನು ಆಚೆ ಈಚೆ ತಿರುಗಿದ್ದು, ಅವನು ಸಿಗರೇಟಿನ ಹೊಗೆಯನ್ನು ಬಾಯಿಂದ ಬಿಟ್ಟು ತನ್ನತ್ತ ನೋಡಿದ್ದು ಹೀಗೆ ಒಂದು ವರ್ಷ ಪ್ರತಿ ದಿನ ಅವಳು ಸರಳುಗಳ ಮಧ್ಯೆ ಮುಖ ಇಟ್ಟು ಕಾದು ಯೋಚಿಸಿದ್ದು...ಮತ್ತೆ ಅದು ಎಲ್ಲಿ ಕೊನೆಗೊಂಡಿತೋ ಅವಳಿಗೆ ನೆನಪಿಲ್ಲ.

ಆದರೂ ಆಗಾಗ ನೆನಪಾದಾಗ ಅವಳಿಗೆ ಇನ್ನೂ ನಾಚಿಕೆಯಾಗುತ್ತದೆ. ಚಿಕ್ಕಂದಿನಲ್ಲಿ ಎಂಥ ಹುಚ್ಚುತನದು? ಈಗ ಅದನ್ನು ಮೀರಿಸುವ ತನ್ನವನು-ಪುಟ್ಟ ಮಕ್ಕಳಿಬ್ಬರು!

ಎಲ್ಲ ಇದೆ ಆದರೆ ಶೀರ ಗಂಭೀರ... ಮಾತೇ ಇಲ್ಲ. ಸ್ವಲ್ಪ ಮಾತು ಹೆಚ್ಚಾಗಿದ್ದರೆ ತಾನು ಇನ್ನಷ್ಟು ಸುಖಿಯಾಗಿರುತ್ತಿದ್ದೆನಲ್ಲಾ ಎನ್ನುವ ಕೊರಗು ಮಾತ್ರ ಇದೆ ಎಂದು ತಲೆದಿಂಬಿನಲ್ಲಿ ಮುಖ ಹುದುಗಿಸಿದಾಗ ಅನಿಸಿತ್ತು.

ಎರಡು ಕ್ಷಣಕ್ಕೆ ಮತ್ತೇಕೋ ಎದ್ದು ಕೂತಳು. ಯಾಕೋ ಮನಸ್ಸು ತುಂಬ ಅಸ್ತವ್ಯಸ್ತವಾಗಿದೆಯಲ್ಲಾ? ಜೀವನದಲ್ಲಿ ಏನು ಬೇಕೋ ಎಲ್ಲ ಇದೆ... ಆದರೂ ತುಂಬಿದ ಕೊಡಕ್ಕೆ ಎಲ್ಲೋ ಒಂದು ತೂತಾದಂತೆ ಮನಸ್ಸಿನ ಮೂಲೆಯಲ್ಲಿ ತೂತು ಕೊರೆಯುತ್ತಿದೆ. ಏನೋ ಎಂದುಕೊಂಡಳು. ಓ... ವಿಭಾ ಬಂದು ಬಿಟ್ಟರೆ. ಎದ್ದು ಮುಖ ತೊಳೆದು ಸ್ನೋ ಪಾವಡರನ್ನು ಎದುರಿಟ್ಟುಕೊಂಡು ಅಲಂಕಾರ ಮುಗಿಸಿ, ಭಾಗಿಲು ತೆರೆಯಲು ಹೆಜ್ಜೆ ಇಡುವ ಮೊದಲು ಕಿಟಕಿಯ ಬಳಿ ಒಮ್ಮೆ ಹೋಗಿ ಬಂದರೆ?

ಮತ್ತೆ ಅದೇ ನಗು. ಚಪ್ಪಾಳೆ ತಟ್ಟಿ ನಗುತ್ತಿದ್ದಾರಲ್ಲಾ?' ಕಿಟಕಿಯಿಂದ ಕಂಡ ಸೀರೆಯ ನೆರಿಗೆ... ಇದೂ ಹೊಸ ಸೀರೆ... ಈ ಗಿಳಿ ಹಸಿರು ನಡುವೆ ಗೊಂಚಲು ಹಾಕಿ ಹೂ ಎಷ್ಟು ಚಂದ ಇರಬೇಕು? ಇಂಥ ಸೀರೆ ತನ್ನಲ್ಲಿಲ್ಲ ತುಂಬ ಬೆಲೆ ಇರಬೇಕು... ದಿನದ ಉಪಯೋಗಕ್ಕೆ ಇಂಥ ಸೀರೆ ಉಡುವ ಅವಳು ಎಷ್ಟು ಚೆನ್ನಾಗಿ ಕಾಣುತ್ತಿರಬೇಕು?—ಒಂದು ಕ್ಷಣ ಬಟ್ಟೆ ಕೊಡುವುದಕ್ಕೆ ತಡವಾದರೆ, ಊಟದಲ್ಲಿ ಹೆಚ್ಚು ಕಮ್ಮಿಯಾದರೆ, ತಿಳಿಸದೆ ವಿಭಾನೊಟ್ಟಿಗೆ ಇಲ್ಲವೆ ಆರತಿಯೊಟ್ಟಿಗೆ ಸಿನೇಮಾಕ್ಕೆ ಹೋದದ್ದಕ್ಕೆ ಮಾತೇ ಬಿಟ್ಟದ್ದು... ಈ ಹೆಣ್ಣಿನ ದಿನವೆಲ್ಲ ಕೂತಲ್ಲೆ. ಇಂದ್ರ ಸುಖಕೊಟ್ಟು ಕಾಪಾಡುವ ಆತ ತನ್ನವನಾಗಿದ್ದರೆ... ತಾನೂ- ಕಾಲ್‌ಬೆಲ್ ಬಾರಿಸಿದಾಗ ಅವಳು ಚಂಗನೆ ಹಾರಿ ಬಾಗಿಲ ಬಳಿಗೋಡಿ ಅಷ್ಟೇ ಆತುರದಲ್ಲಿ ತೆರೆಯುತ್ತಾಳೆ.

"ವಿಭಾ ಬಂದು ಬಿಟ್ಟೆಯಾ? ನೀನೆಲ್ಲಿ ಬರೋದಿಲ್ವೋ ಎಂತಿದ್ದೆ. ನಿನಗೇನಪ್ಪ, ಮನೆಗೆಲಸದ ಜವಾಬ್ದಾರಿ ಇಲ್ಲಾ, ಅತ್ತೆ ನಿನಗೆ ಕೂತಲ್ಲೇ ಬಡಿಸಿ ಕೊಡುತ್ತಾರೆ. ಗಂಡನ್ನ ನೋಡಿಕೊಳ್ಳುವ ಕೆಲ್ಸಾನೂ, ಒಬ್ಬನೇ ಮಗಾ ಎಂತ ನಿನ್ನ ಅತ್ತೆನೇ ಮಾಡ್ತಾರೆ... ಒಂಟಿಬಾಳಿನ ನನ್ನ ಗೋಳು ನಿನಗೆ ಹ್ಯಾಗೆ ಗೊತ್ತಾಗಬೇಕು" ಉಸುರು ಬಿಡದೆ ಅವಳು ಹೇಳುತ್ತಲೇ ವಿಭಾನ್ನ ಒಳಗೆ ಕರೆತರುತ್ತಾಳೆ. ವಿಭಾ ಖುರ್ಚಿಯಲ್ಲಿ ಮೈಚೆಲ್ಲಿ "ನಿನ್ನಂಥ ಅತೃಪ್ತಿಯ ಹೆಣ್ಣನ್ನು ಎಲ್ಲೂ ಕಂಡಿಲ್ಲ, ಜಯಾ. ಅಂಗೈಯಲ್ಲಿಟ್ಟು ಗಿಳಿ ಸಾಕಿದಂತೆ ಸಾಕೋ ಗೋಪಣ್ಣಾ ಜೋಡು ನಕ್ಷತ್ರಗಳ ಹಾಗೆ ಬಿಂದೂ, ನಂದೂ... ಇನ್ನೇನು ಬೇಕು?"

"ಆದ್ರೆ," ಆದ್ರೆ ಏನು? "ಗೋಪಣ್ಣಾ ಮನೆ

ಬಂದಾಗಲೆಲ್ಲ ನಿನ್ನ ಅಡಿಗೆದೇ ತಾರೀಫೆ... ಸ್ವಲ್ಪ ಮಾತು ಕಡಿಮೆ ಹುಡುಗ... ಹೂಂ ಹೋಗ್ಲಿ ಬಿಡು ಕರೆಸಿದ್ದು ಯಾಕೆ? ಗೋಪಣ್ಣಗೆ ಟೂರಾ?" ಅವಳು ತಲೆ ಅಲ್ಲಾಡಿಸುತ್ತಾಳೆ.

"ಓ ಅದಕ್ಕೆ ಪಾಪ ರಾಣಿ ಸಾಹೇಬರು ಬಾಡಿದ ಹೂವಾಗಿರೋದು" ವಿಭಾ ತಟ್ಟನೆ ಏನೋ ನೆನಪಾದವಳಂತೆ "ಏ ಜಯಾ ಮೊನ್ನೆ ಪಿಕ್ಚರಿನಲ್ಲಿ ಒಂದು ತಮಾಷೆಯಾಯ್ತು" ಎನ್ನುತ್ತಿದ್ದಾಗಲೆ ಅವಳು ವಿಭಾನ ಕೈಹಿಡಿದು ಡೈನಿಂಗ ರೂಮಿನ ಕಿಟಕಿಯ ಹತ್ತಿರ ನಿಲ್ಲಲು, "ಹೇಳು ಏನಾಗಿತ್ತು ತಮಾಷೆ? ಅಂಥ ಗಮ್ಮತ್ತಿನ ಸುದ್ದಿಯಾ?" ಎನ್ನುತ್ತಾಳೆ.

ವಿಭಾ ಹೇಳಿ ಹೊಟ್ಟೆ ಹಿಡಿದು ನಗುತ್ತಿದ್ದಾಗ ಅವಳೂ ಬಿದ್ದು ಬಿದ್ದು ನಗುತ್ತಾಳೆ. ಅವಳಿಗೆ ಏನೋ ಒಂದು ಬಗೆಯ ಖುಷಿಯಾಗ್ತದೆ... ತನಗೂ ಆಚೆ ಮನೆಯ ಹೆಣ್ಣಿನ ಹಾಗೆ ನಗಲು ಬರುತ್ತದೆ. ಈ ಮನೆಯ ನಗುವೂ ಗಾಳಿಯೊಟ್ಟಿಗೆ ಸೇರಿ ಆ ಹೆಣ್ಣಿನ ಕಿವಿಗೂ ಬೀಳುತ್ತದೆ. "ಹೇಗಿದೆ ತಮಾಷೆ?" ವಿಭಾ ಕೇಳುತ್ತಿದ್ದರೂ ಅವಳಿಗೆ ಇತ್ತಲಿನ ಪ್ರಜ್ಞೆ ಇದ್ದಂತೆ ಕಾಣೋದಿಲ್ಲ. "ಏ ಹುಚ್ಚಿ... ಇಷ್ಟ್ಯಾಕೆ ನಗುತ್ತೀಯಾ? ನಿಲ್ಲಿಸು... ಹೆಚ್ಚು ನಗಬಾರದು ಮತ್ತೆ ಅಳಬೇಕಾಗುತ್ತದೆ..."

ಜಯಾ ಸೆರಗಿನಿಂದ ಬಾಯಿ ಮುಚ್ಚಿಕೊಳ್ಳುತ್ತಾಳೆ. ಮತ್ತೆ ನಗು, ಮಾತು, ಹಾಸ್ಯ ಕೋಣೆ ಕೋಣೆ ತುಂಬಿಕೊಳ್ಳುತ್ತದೆ.

"ನಾನಿನ್ನು ಬರ್ತೇನೆ, ಅತ್ತೆ ಬೇಗ ಬಾ ಎಂದ್ರು" ವಿಭಾ ಅವಳ ಬೆನ್ನು ತಟ್ಟಿ ಹೊರಟು ನಿಂತಾಗ ಅವಳು ವಿಭಾಳ ಹೆಗಲನ್ನು ಎರಡೂ ಕೈಗಳಿಂದ ಹಿಡಿದು "ನೀನಿದ್ರೆ ನಂಗೆ ಹೊತ್ತು ಹೋದದ್ದೇ ತಿಳಿಯಲಿಲ್ಲ. ಹೊಟ್ಟೆಯಲ್ಲಿ ಹಸಿವೆ ಕೂಗಿದ್ರೂ ತಿನ್ನೋದಕ್ಕೆ ಮನಸ್ಸೆ ಬರ್ಲಿಲ್ಲ. ನೀನಿದ್ದೆ, ಅದಕ್ಕೆ ತಿಂಡಿ ರುಚಿಯಾಯ್ತು... ನಾಳೆಯೂ ಬಂದು ಹೋಗು ದುಹಾರಾಯ್ತು."

ಅವಳು ಅಂಗಲಾಚಿ ಕೇಳುತ್ತಿದ್ದಾಳೆ. ವಿಭಾ ಅವಳ ಕೆನ್ನೆಗೊಂದು ಏಟು ಕೊಟ್ಟು "ಮೂಕ ಗೋಪಣ್ಣ ನಿನ್ನತ್ರ ಮಾತಾಡೋದಿಲ್ಲ ಅಂತಿ... ಟೂರಿಗೆ ಹೋದ್ರೆ ನಿನಗ್ಯಾಕೆ ಬೇಜಾರು. ಹೇಗೂ ಅಭ್ಯಾಸ ಇರಬೇಕಲ್ಲ ಒಬ್ಬಳೇ ಇದ್ದು? ಇವೊತ್ತು ಏನೋ ಅರ್ಜಂಟ ಕೆಲ್ಸ ಇರಬೇಕು ಪಾಪ ಅಂತಾ ಓಡಿ ಬಂದೆ... ನಾಲ್ಕು ದಿನ ಬಿಟ್ಟು ಬರ್ತೇನೆ... ನಾಳೆ ಮತ್ತೆ ಬಂದ್ರೆ ನಿನ್ನಣ್ಣ, ನೀನೂ ಜಯಾನ ಮನೆಯಲ್ಲೇ ಬೀಡಾರ ಮಾಡಿ ಬಿಡು ಅಂತಾರೆ.ಯಾಕೆ ನನ್ನ ಸಾಕ್ತಿಯೇನು?" ನಗುನಗುತ್ತಲೇ ವಿಭಾ ಮೊಂಡು ಜಡೆ ಬೆನ್ನಲ್ಲಿ ಪಟ ಪಟ ಬಡಿದು ಹೋಗುವಾಗ ತನ್ನಲ್ಲಿ ನಗುತ್ತಿದ್ದ ನಗುವನ್ನು ವಿಭಾ ಕಸಿದು ಹೋಗುತ್ತಿದ್ದಾಳಲ್ಲಾ ಎನಿಸಿತು.

ಮನೆಯೊಳಗೆ ಬಂದಾಗ ಮತ್ತೆ ಕಿಟಕಿಯಿಂದ ತೂರಿ ಬಂತು ನಗು!

ಬಿಂದೂ, ನಂದೂ ಇಸ್ತ್ರಿಮಾಡಿದ ಯುನಿಫಾರ್ಮ್ ಧೂಳು ತುಂಬಿಸಿ ಬಾಡಿದ ಮುಖದಲ್ಲಿ ಈಗ ಬರುತ್ತಾರಲ್ಲಾ ಎಂದು ಮತ್ತೆ ಗ್ಯಾಸಿನೆದುರು ಬಂದು ನಿಂತಳು. ಪ್ಲೇಟು ಟೇಬಲ್‌ನಲ್ಲಿರಿಸಿ ಓವಲ್‌ಟಿನ್‌ಗೆ ತಯಾರಿ ಮಾಡಿದಳು.

"ಮಮ್ಮಿ ನಾವ್ ಬಂದೆವು... ನಾವು ಬರುವೆವು ಭೀಕರ..." ಒಳಗೆ ಬರುತ್ತಲೆ ಬಿಂದೂ,ನಂದೂ ಬೂಟ್ ಅಪ್ಪಳಿಸಿ, ಆಚೆ ಈಚೆ ಬಿಸಾಡಿ ಮಮ್ಮಿ ಎಂದು ಅವಳ ಕಾಲುಗಳನ್ನು ತೊಡರಿದಾಗ ಅವಳಿಗೆ ದೇಹದಲ್ಲಿ ಲವಲವಿಕೆ ಎನಿಸುತ್ತದೆ. ಕಣ್ಣೆದುರು ಚಲ್ಲಾಪಿಲ್ಲಿಯಾಗಿ ಬಿಸಾಡಿದ್ದ ಶೂ, ಬ್ಯಾಗ್ ಎತ್ತಿ ಅದರ ಸ್ಥಳದಲ್ಲಿ ಇರಿಸುವಾಗ, ದಿನಾಲು ಗಳಿಗೆ ಹೇಳಿದಂತೆ ಈ ಮಕ್ಕಳಿಗೆ ಹೇಳಿದ್ದು ನೆನಪಾಗುತ್ತದೆ. "ಬಿಂದೂ, ನಂದೂ ನೀವು ಜಾಣ ಮಕ್ಕಳಲ್ವ ? ಸ್ಕೂಲಿನಿಂದ ಬಂದು ಶೂ, ನಿಮ್ಮ ಬ್ಯಾಗ್ ಸರಿಯಾದ ಸ್ಥಳದಲ್ಲಿಟ್ಟು ಕೈಕಾಲು ತೊಳೆದು ಡೈನಿಂಗ ಟೇಬಲಲ್ಲಿ ಬಂದು ಕೂತಕೊ ಬೇಕು" ಎಂದು ಅವಳು ಹಾಗೆ ಹೇಳುತ್ತಲೇ ಇರಬೇಕು... ಇವ್ರು ಒಂದು ದಿನಾ ಅದನ್ನು ಪಾಲಿಸಿದ್ದು ಮಾತ್ರ ಎಂದೂ ಇಲ್ಲ.. "ನಿನ್ನ ಕೊಂಡಾಟದಲ್ಲಿ ಇಬ್ರ ಬುದ್ಧಿನೂ ಹಾಳು ಮಾಡಿ ಬಿಟ್ಟೆ. ಎರಡು ಬಿಗಿದ್ರೆ ಭೂತ ಕೂಡ ಓಡಿ ಹೋಗ್ತದಂತೆ." ಬಿಂದೂನ ಪಪ್ಪಾ ಹೇಳುತಿದ್ರೆ ಅವಳು ಓರೆಗಣ್ಣಲ್ಲಿ ನೋಡಿ ಹಾಗೆ ನೆಲ ನೋಡುತ್ತಾಳೆ.

"ಮಮ್ಮಿ ಇವತ್ತು ಟೀಚರ್ ತುಂಬ ಒಳ್ಳೆ ಕಥೆ ಹೇಳಿದ್ರು ನಂಗೆ ಇನ್ನೊಮ್ಮೆ ಕೇಳ್ಬೇಕಾಗಿದೆ. ನೀ ಹೇಳಮ್ಮ ಅಂದ್ರೆ ನಾನು ತಿಂಡಿ ತಿನ್ನೋದು."

ತಿಂಡಿ ಪ್ಲೇಟು ಸ್ವಲ್ಪ ಆಚೆ ಸರಿಸಿ ಬಿಂದು ಸತ್ಯಾಗ್ರಹದ ತಯಾರಿ ಮಾಡುವಾಗಲೇ ನಂದೂ ತನ್ನ ಪ್ಲೇಟೂ ಅಕ್ಕನ ಪ್ಲೇಟನೊಟ್ಟಿಗೇ ಇಟ್ಟು ಅವಳ ಮುಖ ನೋಡುತ್ತಾನೆ. ಕಣ್ಣುಗಳಲ್ಲಿ ತುಂಟತನ ಇಣಿಕಿ ನೋಡುತ್ತದೆ. ಅವಳಿಗೆ ನಗು ಬರುತ್ತದೆ... ತುಟಿ ಬಿಚ್ಚಿ ನಗು ಬರದೆ ಒಳಗೇ ಕುಣಿದಾಗ ಹೊರಗೆ ಉಕ್ಕಿ ಬರಬಾರದೇ ಎಂದುಕೊಳ್ಳುತ್ತಾಳೆ.

"ಯಾವುದು? ಯಾವ ಕಥೆ?" ಬಿಂದು ಅರಳುಗಣ್ಣನ್ನು ಇನ್ನಷ್ಟು ಅರಳಿಸಿ

"ಮಮ್ಮಿ ಸಿಂಡ್ರೆಲ್ಲಾ!" ಅವಳು ಎರಡು ಕ್ಷಣ ಕಣ್ಣು ಮುಚ್ಚಿ ಮತ್ತೆ ಬಿಂದೂನ್ನ ತುಂಬಿದ ಗಲ್ಲಕ್ಕೆ ಮುತ್ತಿಟ್ಟು

"ಈಗ ಬೇಡ ಮಗೂ... ನಾಳೆ ಹೇಳ್ತೇನೆ... ನಿಂಗೆ ತ್ರೀ ಬೇರ್ಸ್... ಇಲ್ಲಾ ದಿ ಎಂಪರರ್ಸ್ ನ್ಯೂ ಕ್ಲೋಥ್ಸ ಹೇಳ್ಲಾ?"

"ಊಂ... ಹೂ... ನಂಗೆ ಸಿಂಡ್ರೆಲ್ಲಾನೆ ಬೇಕು"

ನಂದೂ ಅವಳ ಸೊಂಟಕ್ಕೆ ಜೋತು ಬಿದ್ದು "ಮಮ್ಮಿ ನಂಗೂ ಸಿಂಡ್ರೆಲ್ಲಾನೇ ಬೇಕು... ಇಲ್ಲಾಂದ್ರೆ ತಿಂಡೀನೆ ತಿನ್ನೋಲ್ಲ..." ಇನ್ನೇನು ಮಕ್ಳು ಅಳಬಹುದು ಎನ್ನುವ ಅನುಮಾನ ಬರೋ ಮೊದಲೆ ಅವಳು ತಿಂಡಿಯ ಪ್ಲೇಟು ಮಕ್ಕಳೆದುರಿಟ್ಟು "ಹೇಳ್ತೇನೆ ನೀವು ತಿಂಡಿ ತಿನ್ನಿ... ಓವಲ್‌ಟೀನ್ ತಣ್ಣಗಾಗುತ್ತದೆ," ಎಂದು ಸಿಂಡ್ರೆಲ್ಲಾ ಕಥೆ ಶುರು ಮಾಡುತ್ತಾಳೆ.

ತಿಂಡಿ ಬಾಯಿಗಿಟ್ಟು ಸಿಂಡ್ರೆಲ್ಲಾಳಿಗಾಗಿ ಅಳುವ ಮಕ್ಕಳೊಟ್ಟಿಗೆ ತಾನೂ ಕಣ್ಣೊರಸಿಕೊಳ್ಳುತ್ತಾಳೆ... ರಾತ್ರಿಯಲ್ಲಿ ಅದೇ ನೋವಿನಲ್ಲಿ ಅವಳು ಏಡುವ ಎಚ್ಚರಗೊಂಡು ಒಬ್ಬರನ್ನೊಬ್ಬರು ತಬ್ಬಿ ಮಲಗಿದ ಮಕ್ಕಳನ್ನು ಇನ್ನಷ್ಟು ಹತ್ತಿರಕ್ಕೆ ಎಳೆದು ಮಲಗಿದರೂ ಅವಳಿಗೆ ಈ ಮೌನ ಅಸಹನೀಯ.

ಕಿಟಕಿಯಿಂದ ಹಗಲಿನಲ್ಲೆಲ್ಲ ತೂರಿ ಬರುತ್ತಿದ್ದ ನಗುವಿನ ದನಿಯನ್ನು ಮತ್ತೆ ಮತ್ತೆ ಕೇಳಿದಂತಾಗುತ್ತದೆ.

ಬೆಳಗ್ಗಿನ್ನೂ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಾಗಲೇ ಬಾಗಿಲು ತಟ್ಟಿದ್ದು ಕೇಳಿ ದಿನದ ಬೇಸರದ ಬದಲು ಈ ಮೌನ ಮುರಿಯಲು ಗಂಗೂ ಬಂದದ್ದೇ ಸರಿ ಎಂದುಕೊಂಡು, ಮಲಗಿದ್ದ ನಂದೂಗೆ ಮುದ್ದಿಟ್ಟು ಕಾಟನಿಂದಿಳಿದು ಬಾಗಿಲು ತೆರೆದು ಬೆನ್ನು ತಿರುಗಿಸುವಂತೆ ಗಂಗೂ "ಅಮ್ಮಾವ್ರೆ... ಕೇಳಿದ್ರಾ ಪಕ್ಕದ ಮನೆ ಇವತ್ತು ಖಾಲಿ ಮಾಡ್ತಾರಂತೆ" ಎಂದಾಗ ಅವಳು ಅಚ್ಚರಿಯಲ್ಲಿ ಬಾಯಿತರೆದು ಗಂಗೂನ ಕಣ್ಣಲೆ ಕೇಳ್ತಾಳೆ "ಏನು?"

"ಹೂಂ... ನಂಗೂ ಗೊತ್ತಿರ್ಲಿಲ್ಲ ನಿನ್ನೆ ಇಲ್ಲಿಂದ ಹೋಗೋವಾಗ ಆ ಮನೆ ಕೆಲಸದವನು ನನ್ನನ್ನು ಕರೆದು ಹಳೆ ಬಟ್ಟೆ, ಒಂದಿಷ್ಟು ತರಕಾರಿ, ಅಕ್ಕಿ ಬೇಳೆ ಕೊಟ್ಟು... ಹೇಳಿದಾ..."

ಅವಳು ನಡುವೆ ಬಾಯಿ ಹಾಕಿ "ಮತ್ತೆ ಅವರೆಲ್ಲ ಅಷ್ಟು ನಗುತ್ತಾರಲ್ಲಾ ಯಾಕೆ ಅಂತ ಕೇಳಬೇಕಿತ್ತು" ಎನ್ನುವುದಕ್ಕೆ ತುಟಿ ತೆರೆಯುವಾಗಲೇ... ಗಂಗೂನ ಮುಖ ಬಾಡಿದ್ದು ಕಾಣುತ್ತದೆ. "ಅಮಾವ್ರೇ ಆಯಮ್ಮನ ಕಥೆ ಕೇಳಿದ್ರೆ ಕರಳು ಕಿತ್ತಿ ಬರ್ತದೆ. ಯಾರಿಗೂ ಬರಬಾರದಮ್ಮ ಆ ದುಃಖ... ನನ್ನಂಥ ಪರದೇಸಿಗೂ ಅಂಥ ಕಷ್ಟ ಬಂದಿಲ್ಲ."

ಅವಳು ಗೋಡೆಗೆ ಬೆನ್ನು ಕೊಟ್ಟು ನಿಲ್ಲುತ್ತಾಳೆ. "ಆ ಯಮ್ಮನ ಗಂಡ ಮಿಲಿಟರಿ ಆಫೀಸರ್ ದೂರದೇಸದಲ್ಲಿ ಇದ್ದಾರಂತೆ. ಮಕ್ಳು ಅಲ್ಲೇ ಇದ್ದಾರೆ. ಆರು ತಿಂಗ್ಳ ಹಿಂದೆ ಕಾರ್ ಆಕ್ಸಿಡೆಂಟಲ್ಲಿ ಯಮ್ಮನ ಎರಡೂ ಕಾಲು ಹೋಯ್ತು... ಆಸ್ಪತ್ರೆಯಿಂದ ಮನೆಗೆ ಬಂದು ಅಲ್ಲಿ ಮಕ್ಳು, ಗಂಡ, ಕೆಲಸದ ಜನ ಮನೆಯಲ್ಲಿ ತಿರುಗಾಡೋದು ನೋಡಿದ ಕೂಡ್ಲೆ ದುಃಖದಿಂದ ಎಚ್ಚರ ತಪ್ಪಿ ಬೀಳ್ತಿದ್ಲಂತೆ... ಅದಕ್ಕೆ ಇಲ್ಲಿ ಹವಾಬದಲಾವಣೆ ಆಯ್ತು ನೋವೂ ಮರೆತಾಂಗೆ ಆಯ್ತು ಅಂತ ಒಂದಿಬ್ರು ಸಂಬಂಧಿಕರು ಆಳು ಕಾಳು, ಕಾರು ಎಲ್ಲಾ ಕರ್ಕೊಂಡು ಒಂದು ಮನೆ ಹಿಡಿದದ್ದು. ಅವರನ್ನು ಖುಶಿಯಲ್ಲಿ ಇರಿಸೋದಕ್ಕೆ ದಿನಾ ಜನಾ ಬರೋದು. ಕೂತಲ್ಲೇ ಹೊತ್ತು ಹೋಗಬೇಕಲ್ಲಾ. ಇಸ್ಪೀಟು, ರಿಕಾರ್ಡು ಅದು, ಇದೂ ಅಂತ ಇಡೀ ದಿನ ಆ ಯಮ್ಮನ್ನ ನಗಿಸಿ ಖುಶಿ... ಪಡಿಸೋದು, ಅಲ್ಲಿ ಸಾಹೇಬ್ರಿಗೆ ಮಕ್ಳಿಗೆ ಇವರನ್ನು ಬಿಟ್ಟಿರೋದಕ್ಕೂ ಕಷ್ಟ ಇಲ್ಲಿ ಇವರಿಗೂ ಅಷ್ಟೆ..."

ಅವಳು ಗೋಡೆಗೊರಗಿ ನಿಂತಾಗ ಮುಖ ಕಪ್ಪಿಟ್ಟಿತ್ತು. ಕಿಟಕಿ ಸರಳುಗಳ ನಡುವೆ ಅವಳು ಕಾಣುತ್ತಿದ್ದ ದಿನಕ್ಕೊಂದು ಬಗೆಯ ಸೀರೆ... ಆ ನಗು ಚಪ್ಪಾಳೆ ತಟ್ಟಿ ಆಡುವ ಮಾತುಗಳು...! ಎರಡೂ ಕೈಗಳನ್ನ ಹೃದಯಕ್ಕೆ ಗಟ್ಟಿಯಾಗಿ ಒತ್ತಿಕೊಂಡು ಮೆಲ್ಲನೆ ಬಿಕ್ಕಳಿಸಿದಳು ಅವಳು.

ಕಾದಂಬರಿಕಾರ ಚದುರಂಗರು

ಸಂದರ್ಶನ:

ಅಶೋಕ ಕುಲಕರ್ಣಿ

ಚಿರಪರಿಚಿತ ಸಾಹಿತಿ ಚದುರಂಗರ ವ್ಯಕ್ತಿತ್ವಕ್ಕೆ ಹಲವಾರು ಮುಖಗಳು. ಅವರು ಕಾದಂಬರಿಕಾರರು. ಚಲಚಿತ್ರ ನಿರ್ದೇಶಕರು. ಅಸಂಗತ ನಾಟಕದ ಕರ್ತೃ. ಯಾವುದೇ ಸಮಸ್ಯೆಗೆ ತುಡಿಯುವ ಚಿಂತನಕಾರರು. ಬದುಕನ್ನು ಅನುಭವದ ವಿವಿಧ ಮುಖಗಳಿಂದ ನೋಡಿದ ಅವರ ವಿಚಾರಗಳೇ ಈ ಸಂದರ್ಶನದ ಪ್ರತಿಫಲ.

ಶಾಂತ ಹಾಗೂ ಗಂಭೀರ ಮುಖಮುದ್ರೆಯಿಂದ ಎಂಥಾದ ಕಷ್ಟ ಸಂಕಟಗಳಲ್ಲೂ ಭಾಗಿಯಾಗಲು ತಯಾರಾಗುವ ಈ ವ್ಯಕ್ತಿ ನಿಜಕ್ಕೂ ಕುತೂಹಲಕಾರಿ. ಯಾರಾದರೂ ಸಹಾಯ ಯಾಚಿಸಿ ಅವರ ಬಾಗಿಲಿಗೆ ಬಂದರೆ, ಅವರೆಂದೂ ಹಿಂಜರಿಯದ ವ್ಯಕ್ತಿ. ಉಳಿದ ಸಾಹಿತಿಗಳು ಮನೆಗೆ ಬಂದು ತಮ್ಮ ಕಥೆ ಕವನ ಓದಿದಾಗಲೂ ಶಾಂತವಾಗಿ ಕೇಳಿಸಿಕೊಂಡು ಹಿರಿ ಕಿರಿಯರೆಂಬ ಬೇದ ಭಾವ ಮಾಡದೇ ತಮ್ಮ ನಿರ್ಭಿಡೆಯ ವಿಮರ್ಶೆ ಕೊಡುತ್ತಾರೆ. ಚದುರಂಗರು ಬರೆದಿರುವ ಸಾಹಿತ್ಯಕ್ಕಿಂತ ಅವರು ಬದುಕಿರುವ ಬದುಕು, ದೊಡ್ಡ ಸಾಹಿತ್ಯ. ಚದುರಂಗರು ಜೀವನದಲ್ಲಿ ನೊಂದವರು, ಕಷ್ಟಪಟ್ಟವರು. ಆದರೂ ಇವರಿಗಿರುವ ಜೀವನದ ಬಗೆಗಿನ ಪ್ರೀತಿ ಹಾಗೂ ಅದರಲ್ಲಿ ಭಾಗಿಯಾಗಿರುವುದು ಅವರಿಗಿರುವ ನೋವುಗಳನ್ನು ಮರೆಯುವಂತೆ ಮಾಡಿದೆ.

"ಬಣ್ಣದ ಬೊಂಬೆ ಹಾಗೂ ಇತರ ಕತೆಗಳು," "ಮೀನದ ಹೆಜ್ಜೆ" ಮುಂತಾದ ಸಣ್ಣ ಕತೆಗಳ ಸಂಗ್ರಹ "ಸರ್ವಮಂಗಳಾ" ಹಾಗೂ "ಉಯ್ಯಾಲೆ"ಯಂಥ ಜೀವನದ್ರವ್ಯವಿರುವ ಕಾದಂಬರಿಗಳನ್ನು ರಚಿಸಿರುವ ಚದುರಂಗರ ಸಾಹಿತ್ಯಕ ಬೆಳವಣಿಗೆ ಅವರ ಜೀವನದಷ್ಟೇ ಕುತೂಹಲಕಾರಿಯಾಗಿದೆ. ಅವರು ತಮ್ಮ ಸಾಹಿತ್ಯಕ ಜೀವನದಲ್ಲಿ ಬಹಳ ವರುಷಗಳ ಮೌನದ ನಂತರ "ಇಲಿ ಬೋನು" ಎಂಬ ಅಸಂಗತ ನಾಟಕ ಬರೆದಿದ್ದಾರೆ. ಇದು ನಿಜವಾಗಿಯೂ ಅವರ ಸಾಹಿತ್ಯ ಜೀವನದಲ್ಲಿಯ ಹೊಸತಿರುವನ್ನು ಸೂಚಿಸುತ್ತದೆ.

ಸಾಹಿತ್ಯದಷ್ಟೇ ಚಲನಚಿತ್ರ ಮಾಧ್ಯಮ ಕೂಡ ಇವರಿಗೆ ಹತ್ತಿರವಾದದ್ದು. "ಸರ್ವಮಂಗಳಾ" ಚಲನಚಿತ್ರದ ನಿರ್ದೇಶಕರಾಗಿ, ಕನ್ನಡ ಚಲನಚಿತ್ರಕ್ಕೆ ಹೊಸತನ ತಂದುಕೊಟ್ಟ ಕೆಲವೇ ನಿರ್ದೇಶಕರಲ್ಲಿ ಚದುರಂಗರೂ ಒಬ್ಬರು. ಇಂಥವರು ಸಬ್ಸಿಡಿ ಹಾಗೂ ಅವಾರ್ಡ ಕಮಿಟಿಗಳಲ್ಲಿರುವುದು ಕನ್ನಡ ಚಲನಚಿತ್ರದ ದೃಷ್ಟಿಯಿಂದ ಆರೋಗ್ಯಕರವಾಗಿದೆ. ಕನ್ನಡ ಸಾಹಿತ್ಯ ಅಕ್ಯಾಡೆಮಿಯ ಸದಸ್ಯರಾಗಿರುವ ಇವರು ಸಧ್ಯದಲ್ಲೇ ಕೇರಳ ಆಂಧ್ರ ಹಾಗೂ ಮಹಾರಾಷ್ಟ್ರಕ್ಕೆ ಭೆಟ್ಟಿಕೊಟ್ಟು, ಅಲ್ಲಿಯ ಸಾಹಿತ್ಯ ಅಕ್ಯಾಡೆಮಿಯ ಪರಿಚಯದ ವರದಿಯೊಂದನ್ನು ಬರೆಯುವವರಿದ್ದಾರೆ. ಚದುರಂಗರ ಹೆಸರು ಕನ್ನಡ ಸಾಹಿತ್ಯದಲ್ಲಿ ಕೊನೆಯ ವರೆಗೂ ಉಳಿಯುವಂಥದು.

ಪ್ರಶ್ನೆ:—ಚದುರಂಗರೆ, "ಉಯ್ಯಾಲೆ" ಕಾದಂಬರಿಯನ್ನು ಬರೆದ ನಂತರ ದೀರ್ಘ ಕಾಲದ ವರೆಗೆ ನೀವು ಸಾಹಿತ್ಯ ರಚನೆಗೆ ತೊಡಗದಿರುವುದಕ್ಕೆ ಕಾರಣವೇನು?

ಉತ್ತರ:– ನಿಮ್ಮ ಈ ಪ್ರಶ್ನೆ ನನ್ನ ಅನೇಕ ಸಾಹಿತಿ ಮಿತ್ರರನ್ನು ಬಹು ಕಾಲದಿಂದಲೂ ಬಾಧಿಸಿ



ಶ್ರೀ ಚದುರಂಗರು.


ಕುವಂಥದು. ತೀರಾ ವೈಯಕ್ತಿಕವಾದ್ದರಿಂದ ಸ್ಪಷ್ಟವಾಗಿ ಉತ್ತರಿಸಲು ಕಠಿಣವಾದದ್ದು. ಆದರೂ ಪ್ರಯತ್ನ ಮಾಡುತ್ತೇನೆ.

"ಸರ್ವ ಮಂಗಳಾ" ಕಾದಂಬರಿ ಬರೆದ ನಂತರ ನನ್ನ ಬದುಕಿಗೆ ಒಂದು ತಿರುವು ಬಂತು. ನಾನು ಮೈಸೂರು ನಗರವನ್ನು ಬಿಟ್ಟು ನನ್ನ ಹಳ್ಳಿಗೆ ಹೋಗಿ ನೆಲಸಬೇಕಾಯಿತು. ಸುಮಾರು ಎಂಟು ವರ್ಷ. ಆಗೊಮ್ಮೆ ನನ್ನ ಬರವಣಿಗೆಯಲ್ಲಿ ಭರವಸೆ ಇಟ್ಟಿದ್ದ ನನ್ನ ಕವಿ ಮಿತ್ರ ಗೋಪಾಲಕೃಷ್ಣ ಅಡಿಗರು "ಪಾಂಡವರು ಹನ್ನೆರಡು ವರ್ಷ ವನವಾಸ ಹೋದರು. ನಿಮ್ಮ ವನವಾಸ ಕೇವಲ ಎಂಟೇ ವರ್ಷ ಆಯಿತಲ್ಲ" ಎಂದು ವ್ಯಸನ ತುಂಬಿದ ದನಿಯಲ್ಲಿ ಪರಿಹಾಸ್ಯ ಮಾಡಿದರು. ಇನ್ನೊಂದು ಸಲ ಮೈಸೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ (ಶಿವರಾಮ ಕಾರಂತರ ಅಧ್ಯಕ್ಷತೆ)ಬಂದಿದ್ದಾಗ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಗುಂಪೊಂದು ಹಸ್ತಾಕ್ಷರ ಬೇಡಿ ನನ್ನಲ್ಲಿ ಬಂತು. ನಾನು ಜೇಬಿನಿಂದ ಫೌಂಟನ್ ಪೆನ್ ತೆಗೆದು ಬರೆಯಲು ಹೋದೆ. ಅದರಲ್ಲಿ ಶಾಯಿ ಇರಲಿಲ್ಲ. ಆಗ ನನ್ನ ಪಕ್ಕದಲ್ಲೇ ನಿಂತಿದ್ದ ಇನ್ನೊಬ್ಬ ಸಾಹಿತಿ ಮಿತ್ರರು ತಮ್ಮ ಫೌಂಟನ್ ಪೆನ್ ತೆಗೆದು ನನ್ನ ಕೈಗಿಡುತ್ತ ನಾನು ಬರೆಯುತ್ತಿಲ್ಲವಲ್ಲ ಎನ್ನುವ ನೋವಿನಿಂದ ಚದುರಂಗರ ಪೆನ್ನಿನಲ್ಲಿ ಶಾಯಿಯೇ ಇಲ್ಲ. ಅವರನ್ಯಾಕೆ ಆಟೋಗ್ರಾಫ್ ಕೇಳ್ತಾ ಇದೀರಿ, It is useless ಎಂದರು. ಹಾಗಾದರೂ ಚುಚ್ಚಿ ನನ್ನಿಂದ ಒಂದು ಕಾದಂಬರಿ ಬರೆಸಬೇಕೆಂದು ಅವರ ಅಪೇಕ್ಷೆ. ಆದರೆ ಎಷ್ಟು ಚುಚ್ಚಿದರೂ ಮತ್ತೊಂದು ಕೃತಿ ರಚಿಸಲು ನನ್ನಿಂದ ಆಗಂತೂ ಸಾಧ್ಯವಾಗಲಿಲ್ಲ. ಸಂಕ್ಷಿಪ್ತಗೊಳಿಸಿ ಹೇಳಬೇಕೆಂದರೆ ಕಾರಣವಿಷ್ಟೇ. ಅಲ್ಪ ಸ್ವಲ್ಪ ತೊಂದರೆಯಾದರೆ ಆ ತೊಂದರೆಯೇ ಸಾಹಿತ್ಯ ರಚನೆಗೆ ಪ್ರೇರಕವಾಗಬಹುದು. ಆದರೆ ಮೇಲೇಳಲಾರದ ಹಾಗೆ ಭಾರ ಬಿದ್ದರೆ ಸಾಹಿತ್ಯ ರಚನೆ ದುಸ್ತರವಲ್ಲವೆ? ಅವು ನನ್ನ ಸಾಹಿತ್ಯ ಬದುಕಿನ ಕತ್ತಲು ದಿನಗಳು. ಆರ್ಥಿಕವಾಗಿ, ಸಾಮಾಜಿಕವಾಗಿ, ದಿನ ನಿತ್ಯದ ಹೊಯ್ದಾಟ ಆ ಸುಳಿಯಿಂದ ಬಿಡಿಸಿಕೊಂಡು ಮೇಲೆದ್ದು, ಬರೆಯುವ ವ್ಯವಸಾಯದಲ್ಲಿ ತೊಡಗಲು ಪರಿಸ್ಥಿತಿ ಅವಕಾಶ ಕೊಡಲಿಲ್ಲ. ಆ ಸ್ಥಿತಿಯಲ್ಲೇ ಹೇಗೋ "ಉಯ್ಯಾಲೆ" ಕಾದಂಬರಿ ಬರೆದೆ. ವಿಚಿತ್ರವೆಂದರೆ ಪಟ್ಟಣದಲ್ಲಿದ್ದಾಗ ಹಳ್ಳಿ ಜೀವನದ ಬಗ್ಗೆ ಒಂದು ಕಾದಂಬರಿ (ಸರ್ವ ಮಂಗಳಾ) ಬರೆದೆ. ಹಳ್ಳಿಗೆ ಹೋದ ಮೇಲೆ ನಗರ ಜೀವನಕ್ಕೆ ಸಂಬಂಧಪಟ್ಟ "ಉಯ್ಯಾಲೆ" ಕಾದಂಬರಿ ಬರೆದೆ. ಈ ಎರಡನೆ ಕಾದಂಬರಿ ನನಗೆ ನೆಮ್ಮದಿ ತರಲಿಲ್ಲ. ಹಳ್ಳಿಯ ಬದುಕಿನ ದಟ್ಟ ಅನುಭವವನ್ನು ಅನೇಕ ಕಡೆ ಮಿಂಚುವ "ಸರ್ವಮಂಗಳಾ" ಕೂಡ ಅಷ್ಟು ವಾಸ್ತವ ನೆಲೆಗಟ್ಟಿನ ಮೇಲೆ ನಿಂತಿದ್ದರೂ ಸಹ "ದೇವದಾಸ್" ಮಾದರಿಯ "ರೋಮ್ಯಾಂಟಿಕ್" ಲೇಪ ಅದಕ್ಕೆ ಮೆತ್ತಿಕೊಂಡಿದ್ದು ಅದರಿಂದಲೂ ಪೂರ್ಣ ಸಮಾಧಾನ ನನಗೆ ಸಿಗಲಿಲ್ಲ. (ಪೂರ್ಣಚಂದ್ರ ತೇಜಸ್ವಿಯವರು "ಏನೇ ದೋಷಗಳಿದ್ದರೂ ಜೀವದ್ರವ್ಯ – Protoplasm – ಇರುವ ಕಾದಂಬರಿ ಇದನ್ನು ಗಣನೆಗೆ ತೆಗೆದುಕೊಳ್ಳದೆ ಇರೋದು ಸಾಧ್ಯವೇ ಇಲ್ಲ" ಎಂದರೂ ಸಹ!) ಹಳ್ಳಿಯಲ್ಲಿ ಎಂಟು ವರ್ಷ ನನಗಾದ ವಿಶಿಷ್ಟ ಅನುಭವಗಳು ಸಾಹಿತ್ಯ ರೂಪದಲ್ಲಿ ನನ್ನಿಂದ ಹೊರ ಬರಲು ಪ್ರಯತ್ನಿಸುತ್ತಿದ್ದರೂ ಆ ಅನುಭವಗಳಿಗೆ ತೀರ ಸಮೀಪವಾಗಿದ್ದುದರಿಂದ ಅಲ್ಲದೆ ಮತ್ತೆ ಮತ್ತೆ ಹೊಸ ಅನುಭವಗಳು ಆಗುತ್ತಲೇ ಇದ್ದುದರಿಂದ ಆಗಲೂ ನನ್ನ ಲೇಖನಿ ಜಡ್ಡು ಕಟ್ಟಿ ಸುಮಾರು ಕಾಲ ತಟಸ್ಥವಾಯಿತು.

ಪ್ರಶ್ನೆ: ಈ ಅನುಭವಗಳು ನಮ್ಮ ಬದುಕಿನ ಬಗೆಗೆ ನಿಮಗಿದ್ದ ಧೋರಣೆಗಳನ್ನು ಬದಲಾಯಿಸುವಲ್ಲಿ ಸಹಾಯ ಮಾಡಿದವೆ?

ಉತ್ತರ: ನಾನು ಆಗಲೆ ಹೇಳಿದೆನಲ್ಲ. ನನಗಾದ ಅನುಭವಗಳು ಸರಳವಾಗಿರಲಿಲ್ಲ. ಅವು "ಸರ್ವ ಮಂಗಳಾ" ಮತ್ತು "ಉಯ್ಯಾಲೆ" ಕಾದಂಬರಿಗಳನ್ನು ಬರೆಯುವ ಪೂರ್ವದ ಅನುಭವಗಳಿಗಿಂತ ಭಿನ್ನವೂ ಜಟಿಲವೂ ಆಗಿದ್ದವು. ಈ ಹಸಿ ಅನುಭವಗಳು ಅಲ್ಲಿಯ ತನಕ ನನ್ನೊಳಗೆ ಬೆಚ್ಚಗಿದ್ದ ಧೋರಣೆಗಳನ್ನು ಸಂಪೂರ್ಣವಾಗಿ ಬದಲಿಸಿ ಸಾಹಿತ್ಯದ ಹೊಸ ದಿಗಂತಗಳನ್ನು ನನ್ನ ಮುಂದೆ ತೆರೆದು ನಿಲ್ಲಿಸಿದವು.

ಕನ್ನು ಉಳಿಯುವಂಥವನು. ಉದಾಹರಣೆಗೆ ವಾಲ್ಮೀಕಿ, ವ್ಯಾಸ, ಷೇಕ್ಸ್‌ಪಿಯರ್ ಇತ್ಯಾದಿ. ಇತ್ತೀಚಿನ ಸಾಹಿತ್ಯದಲ್ಲೂ ಕೆಲವು ದಕ್ಷ ಲೇಖಕರು ಇದ್ದೇ ಇರುವರಲ್ಲ? ಕನ್ನಡ ಕಾವ್ಯ ಹಾಗೂ ಗದ್ಯದ ಸ್ವರೂಪವೇ ಇದರಿಂದ ಬದಲಾಗಿದೆಯಲ್ಲ? ಆದರೆ ಇತ್ತೀಚಿನ ಕೆಲವು ಕೃತಿಗಳಲ್ಲಿ ಅನುಭವವೇ ಪೊಟಾ ಆಗಿ ಅದರಲ್ಲೇ ಹಲವು ಬಿರುಕುಗಳು ಕಾಣಿಸಿರುವುದುಂಟು. ಇಂಥ ಸಂದರ್ಭಗಳಲ್ಲಿ ಲೇಖಕ ಮನಸ್ಸಿನ ಎಲ್ಲ ಕಿಟಕಿಗಳನ್ನೂ ತೆರೆದಿಟ್ಟು ವಿಮರ್ಶೆಗೆ ಮೈಯೊಡ್ಡುವುದು ಒಳ್ಳೆಯದು. ಇತರ ಕೃತಿಗಳನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ವಿಮರ್ಶಿಸುವ ನಾನು ನನ್ನ ಕೃತಿಯಲ್ಲಿನ ದೋಷಗಳಿಗೆ ಯಾರಾದರೂ ಬೆರಳು ಮಾಡಿದಾಗ ಮುಳ್ಳುಹಂದಿಯಂತೆ ಕುಪಿತಗೊಂಡು ಮುಳ್ಳು ಕೆದರಬಾರದಲ್ಲವೆ? ಈ ಮಾತನ್ನು ನನ್ನ [illegible] ಸಹ ಹೇಳಿಕೊಳ್ಳುತ್ತಿದ್ದೇನೆ.



ಚದುರಂಗರೊಂದಿಗೆ ಸಂದರ್ಶಕರು.

ಅನುಭವದ ಪ್ರತಿಬಿಂಬ

ಪ್ರಶ್ನೆ: ಬದುಕಿನ ಈ ಹಸಿಯಾದ ದಟ್ಟ ಅನುಭವವನ್ನು ಹೊಂದಿದ ನಿಮಗೆ ನಮ್ಮ ಇತ್ತೀಚಿನ ಸಾಹಿತ್ಯದಲ್ಲಿ ಮೂಡಿ ಬರುತ್ತಿರುವ ಬದುಕಿನ ಬಗೆಗೆ ಏನನ್ನಿಸುತ್ತದೆ?

ಉತ್ತರ: ಎಲ್ಲ ಕಾಲದಲ್ಲೂ ಉತ್ತಮ ಮತ್ತು ಅಷ್ಟು ಉತ್ತಮವಲ್ಲದ ಹಾಗೂ ಕೀಳು ಸಾಹಿತ್ಯ ರಚನೆ ನಡೆದೇ ಇದೆ. ಹಿಂದೆ, ಇಂದು, ಮುಂದೆ ಎನ್ನುವ ಮಾ[illegible]. ಇಂದಿನವನು ನಾಳೆ ಹಿಂದಿನವನಾಗುವುದಿಲ್ಲವೆ? ಸಮರ್ಥನಾದ ಲೇಖಕ ಎಲ್ಲ ಕಾಲ

ಪ್ರಶ್ನೆ: "ಸರ್ವ ಮಂಗಳಾ", "ಉಯ್ಯಾಲೆ"ಗಳಂಥ ಸಾಂಪ್ರದಾಯಿಕ ಕೃತಿಗಳನ್ನು ರಚಿಸಿದ ನೀವು ದೀರ್ಘ ಕಾಲದ ಮೌನದ ನಂತರ "ಇಲಿ ಬೋನು"ನಂಥ ಅಸಂಗತ ನಾಟಕ ಪ್ರಕಾರಕ್ಕೆ ಕೈ ಹಾಕಿದಿರಿ. ಇದು ಲೇಖಕರಾಗಿ ನಿಮ್ಮ ಒಟ್ಟು ಧೋರಣೆಯಲ್ಲೇ ಆದ ಬದಲಾವಣೆಯನ್ನು ಸೂಚಿಸುತ್ತದೆ. ಈ ಬದಲಾವಣೆ ಚಲಾವಣೆಯಲ್ಲಿರುವ ಸಾಹಿತ್ಯ ಪ್ರಕಾರವನ್ನು ನೋಡಿ ಬಂದದ್ದೂ ಅಥವಾ ನಿಮ್ಮ ಅಂತರಿಕ ಅವಶ್ಯಕತೆಯಾಗಿ ಬಂದದ್ದೂ?

ಉತ್ತರ: "ಇಲಿ ಬೋನು" ಬರೆಯುವ ಕಾಲಕ್ಕೆ ನನ್ನಲ್ಲಿ ಮಹತ್ತರ ಬದಲಾವಣೆಯಾಗಿತ್ತು. ಮೊತ

ಬಿಟ್ಟ ಹಾವಿನಂಥ ಬದಲಾವಣೆ. ಮೇಲಿಂದ ಮೇಲೆ ಆದ ಹಸಿ ಹಸಿ ಅನುಭವಗಳು ನಾನು ನಡೆದು ಬಂದ ದಾರಿಯಿಂದ ವಿಭಿನ್ನವಾದ ದಾರಿಯುತ್ತ ಹೊರಳಲು ಸಕಲ ಸಿದ್ಧತೆಗಳನ್ನೂ ಮಾಡಿದಂತಿತ್ತು. ಮತ್ತೆ ನಾನು ಆ ಹಾದಿ ಹಿಡಿಯಲು ಇದ್ದ ಕೊಂಡಿಗಳೆಲ್ಲ ಕಳಚಿದ್ದವು. ಆದರೆ ನನ್ನ ಹೊಸ ಸಾಹಿತ್ಯ ಎಂಥದಾಗಿರಬೇಕು. ಯಾವ ದಿಕ್ಕಿನಲ್ಲಿ ನಡೆಯಬೇಕು ಎನ್ನುವುದರ ಬಗ್ಗೆ ನನ್ನ ಮನಸ್ಸು ಇನ್ನೂ ಒಂದು ನಿಲುಗಡೆಗೆ ಬಂದಿರಲಿಲ್ಲ. ಆ ಹೊತ್ತಿನಲ್ಲಿ ಕರುಳು ಕಿತ್ತು ಬರುವ ಶಿಶುವಿನಂತೆ "ಇಲಿಬೋನು" ನಾಟಕ ಹೊರ ಬಂದಿರಬೇಕು. ಜೊತೆಗೆ ಆಗ ನಾನು ಓದುತ್ತಿದ್ದ ಅಸಂಗತ ನಾಟಕಗಳ ಪ್ರಭಾವವೂ ನಿಸ್ಸಂದೇಹವಾಗಿ ಕೆಲಸ ಮಾಡಿರಲೇಬೇಕು. ಕೊನೆಯದಾಗಿ ಆ ದಿನ ನನ್ನ ಹೆಂಡತಿಗೂ ನನಗೂ ಯಾವುದೋ ಚಿಲ್ಲರೆ ವಿಚಾರಕ್ಕಾಗಿ ಮನೆಯಲ್ಲಿ ಕಲಹ. ಅಂದಿನ ಆ ಕಲಹ ಆಕೆಯ ಅವಿವೇಕದ ಪರಮಾವಧಿ ಎಂದು ನನಗನ್ನಿಸಿ (ಆಕೆಗೂ ನನ್ನ ಬಗ್ಗೆ ಹಾಗೆಯೇ ಅನ್ನಿಸಿರಬೇಕು) ನನ್ನ ಮನಸ್ಸು ರೋಸಿತು. ಇದು 'ಗಂಡ ಹೆಂಡಿರ ಜಗಳ ಉಂಡು ಮಲಗೋ ವರೆಗೆ' ಅಂಥದಲ್ಲ ಎಂದು ಆ ಗಳಿಗೆಯಲ್ಲಿ ನನ್ನ ಮನಸ್ಸು ಚೀರುತ್ತಿತ್ತು. ಅದಕ್ಕೆ ತಕ್ಕಂತೆ ಧೋ ಧೋ ಎನ್ನುವಂತೆ ಮಳೆ ಸುರಿಯಲಾರಂಭಿಸಿತು. ಮಗ ಕಾಲೇಜಗೆ ಹೋಗಿದ್ದ. ಆಕೆ ಅಲ್ಲಿಂತ್ತಾ ಹಾಸಿಗೆಯಲ್ಲಿ ಜೋರಾಗಿ ಬಿದ್ದಿದ್ದವಳು ನನ್ನದೇ ತಪ್ಪಾಯಿತೆಂದೂ. ಕ್ಷಮಿಸಬೇಕೆಂದೂ ಪರಿ ಪರಿಯಲ್ಲಿ ಅಂಗಲಾಚಿದರೂ ಪ್ರಸನ್ನಳಾಗಲಿಲ್ಲ. ಅಳು ನಿಲ್ಲಲಿಲ್ಲ. ನನ್ನ ಮನಸ್ಸು ಕಡು ಬೇಸರ, ನಿರಾಸೆ ಏಕಾಕಿತನದ ಮುದ್ದೆಯಾಗಿ ಕುದಿಯಿತು. ಅಂಥ ಸನ್ನಿವೇಶದಲ್ಲಿ "ಇಲಿ ಬೋನು" ಬರೆದೆ ಅಷ್ಟೆ. ಆದರೆ ಅದು ನನ್ನ ಸಹಜ ಸ್ಥಿತಿ ಎಂದು ಹೇಳಲಾರೆ.

ತರುಣರ ಬಗ್ಗೆ ಭರವಸೆ

ಪ್ರಶ್ನೆ: ಸಧ್ಯ ವಾಸ್ತವಿಕವಾಗಿ ಜೀವನ ಚಿತ್ರಿಸುವ ಕಾದಂಬರಿಗಳಿಗೆ ಪ್ರಗತಿಶೀಲ ಚಳುವಳಿಯ ಕಾಲಕ್ಕೆ ಇದ್ದ ಮಹತ್ವ ಇಲ್ಲ. ಇದು ವಾಸ್ತವಿಕ ಜೀವನದ ಅನುಭವ ನಮ್ಮ ಲೇಖಕರಿಗೆ ಇಲ್ಲದಿರುವುದರಿಂದ ಹುಟ್ಟಿದ ವಾದವೋ ಅಥವಾ ಅನವಶ್ಯಕವಾದದ್ದನ್ನು ಕಲಿಯಲ್ಲಿ ಕೈ ಬಿಡಲು ಹೋಗಿ ಏಸ್ಕೇಟುಗಳಾದ ರೂಪಬಿಜ್ಞ ಕಲಾಕಾರರಿಂದ ಹುಟ್ಟಿದ ವಾದವೋ?

ಉತ್ತರ: ವಾಸ್ತವಿಕ ಜೀವನ ಚಿತ್ರಿಸುವ ಕಾದಂಬರಿಗಳಿಗೆ ಹಿಂದೆ ಇದ್ದ ಮಹತ್ವ ಈಗ ಇಲ್ಲ ಅಂತ ಹೇಗೆ ಹೇಳ್ತೀರಿ? ಗ್ರಾಮಾಯಣ, ಮಲೆಗಳಲ್ಲಿ ಮದುಮಗಳು, ಇತ್ಯಾದಿ ಕಾದಂಬರಿಗಳು ಇಲ್ಲವೆ. ಅದೇ ಪರಂಪರೆಯಲ್ಲಿ ಅವು ಇನ್ನೂ ಸತ್ವಯುತವಾಗಿ ಬಾಗಿಲ್ಲವೆ? ಆದರೆ ಕೆಲವು ಲೇಖಕರಲ್ಲಿ ಅನುಭವ ದಾರಿದ್ರ್ಯವಿದೆ, ಅಂತ ಒಪ್ಪಬಹುದೇನೊ. ಕೆಲವರು ನೀವು ಹೇಳುವಂತೆ ಏಸ್ಥೇಟುಗಳೂ ಆಗುತ್ತಿರುವಂತೆ ಕಾಣುತ್ತಿದೆ. ಆದರೆ Naturalism ಮತ್ತು Realism ಇವೆರಡರ ನಡುವೆ ಇರುವ ಭಿನ್ನತೆಯನ್ನು ನಾವು ಗಮನಿಸುವುದೊಳ್ಳೆಯದು. ಮೊದಲನೆಯ ಗುಂಪಿಗೆ ಸೇರಿದ ಕೃತಿಗಳು ವಸ್ತುಸ್ಥಿತಿಯನ್ನು ಹೆಚ್ಚು ಕಡಿಮೆ ಫೋಟೋಗ್ರಾಫ್ ತೆಗೆದ ರೀತಿಯಲ್ಲಿ ಪ್ರಕಟಿಸುತ್ತವೆ. ವಸ್ತು ನಿಷ್ಠವಾಗಿ ಇರುವಂತೆಯೇ ವಸ್ತು ಸ್ಥಿತಿಯ ಅಂತರ್ಯಕ್ಕೆ ಕನ್ನಡಿ ಹಿಡಿಯುವುದು ಎರಡನೆಯ ರೀತಿ. ಎಮಿಲಿ ಜೋಲಾ, ಅವರ 'ನಾನಾ' ಮೊದಲನೆಯ ಗುಂಪಿಗೆ ಕೊಡಬಹುದಾದ ಒಂದು ಉದಾಹರಣೆಯಾದರೆ ಟಾಲ್‌ಸ್ಟಾಯ್ ಅವರ 'ವಾರ್ ಅಂಡ್ ಪೀಸ್' ಎರಡನೆಯದಕ್ಕೆ ಒಂದು ಉತ್ತಮ ಉದಾಹರಣೆ. ನಮ್ಮ ಹೊಸ ಪೀಳಿಗೆ ಬರಹಗಾರರಲ್ಲಿ ಕೆಲವರಾದರೂ ವಸ್ತುನಿಷ್ಠವಾಗಿ, ಬರೆಯುತ್ತ ಮೂಲದಲ್ಲಿ ಅಡಗಿದ್ದ ಸತ್ಯದ ಮೇಲೆ 'ಕ್ಷ' ಕಿರಣ ಚೆಲ್ಲುವುದರಲ್ಲಿ ಯಶಸ್ವಿಯಾಗಿದ್ದಾರೆ. ಎನ್ನಬಹುದು. ಪರಂಪರೆಯ ಹೆಗಲೇರಿ ಕುಳಿತಿರುವುದರಿಂದ ಇಂದಿನ ಲೇಖಕರು ಹಿಂದಿನ ತಲೆಮಾರಿನವರಿಗಿಂತ ಭಾಷಾ ಪ್ರಯೋಗದಲ್ಲಿ ಸಮಸ್ಯೆಯ ತಿರುಳನ್ನು ಒಳ ಹೊಕ್ಕು ನೋಡುವಲ್ಲಿ ತುಂಬ ಮುಂದುವರಿದಿದ್ದಾರೆ ಅಂತ ನನಗನಿಸುತ್ತದೆ. ಈ ದೃಷ್ಟಿಯಿಂದ ನಮ್ಮ ತರುಣ ಲೇಖಕರ ಕೈಯಲ್ಲಿ ಕನ್ನಡ ಸಾಹಿತ್ಯಕ್ಕೆ ಉಜ್ವಲ ಭವಿಷ್ಯವಿದೆ ಅಂತಲೂ ಅನ್ನಿಸುತ್ತದೆ. ಆದರೆ ಸಾಹಿತ್ಯವನ್ನು ವಯಸ್ಸಿನಿಂದ ಅಳೆಯುವುದು ತಕ್ಕುದಲ್ಲ. ಮಾನಸಿಕ ತಾರುಣ್ಯವೇ ಮುಖ್ಯ. ಸಾಹಿತಿ ಮುದುಕನಾಗಿರಲಿ ಅಥವಾ ತರುಣನಿರಲಿ, ಈ ಮಾನಸಿಕ ತಾರುಣ್ಯದಿಂದಲೇ ಒಂದು ಶ್ರೇಷ್ಠ ಕೃತಿ ಹೊರ ಬರುತ್ತದೆ. ಉದಾಹರಣೆಗೆ ಸರ್ವಾಂಟಿಸ್‌ನ ೬೦ನೇ ವಯಸ್ಸಿಗಿಂತ ಮುನ್ನ ಹಾಗೂ ನಂತರದ ಸಾಹಿತ್ಯ ಕಳಪೆಯಾಗಿದ್ದೂ ಕೂಡ ಆತ ತನ್ನ ೬೦ ನೇ ವಯಸ್ಸಿನಲ್ಲಿ ಬರೆದ 'ಡಾನ್ ಕ್ವಿಕ್ಸೋಟ್' ಜಗತ್ ಸಾಹಿತ್ಯದಲ್ಲಿ ಮೇರು ಕೃತಿಯಾಯಿತು. ಹಾಗೆಯೇ ನಮ್ಮವರೇ ಆದ ಜಿ. ಬಿ. ಜೋಶಿ ತಮ್ಮ ೭೫ನೇ ವಯಸ್ಸಿನಲ್ಲಿ "ಸತ್ತವರ ನೆರಳು" ನಾಟಕ ಬರೆದಿರುವುದೂ ಒಂದು ವಿಶೇಷವೇ.

ಪ್ರಶ್ನೆ: ನೀವು "ಸರ್ವಮಂಗಳಾ" ದಂಥ ಚಲನಚಿತ್ರದ ನಿರ್ದೇಶಕರಾಗಿ ಸಬ್ಸಿಡಿ ಕಮಿಟಿ, ಅವಾರ್ಡ್ ಕಮಿಟಿಗಳ ಸದಸ್ಯರಾಗಿ ಚಲನಚಿತ್ರರಂಗದಲ್ಲಿ ಕೆಲಸ ಮಾಡಿದ್ದೀರಿ. ಮಾಡುತ್ತಿದ್ದೀರಿ. ಈ ಮಾಧ್ಯಮದಲ್ಲಿ ಸಾಹಿತ್ಯ ಮಾಧ್ಯಮಕ್ಕಿಂತ ಹೆಚ್ಚಿನದನ್ನು ಸಾಧಿಸುವ ಸಾಧ್ಯತೆ ಇದೆ ಎಂದು ನಿಮಗನ್ನಿಸಿದೆಯೆ?

ಉತ್ತರ: ಸಾಹಿತ್ಯ ನಿರ್ಮಾಣದಲ್ಲಿ ತೊಡಗುವಾಗ ನಾನಾಯಿತು, ನನ್ನ ಲೇಖನಿಯಾಯಿತು. ಆಗ ನಾನು ಸ್ವಯಂಭೂ; ಸರ್ವಶಕ್ತ. ಬೇರೆ ಯಾರ ನೆರವಿನ ಅಗತ್ಯವೂ ನನಗಿರುವುದಿಲ್ಲ. ಚಲನಚಿತ್ರ ಮಾಧ್ಯಮ ಹಾಗಲ್ಲ. ಛಾಯಾಗ್ರಾಹಕ, ಶಬ್ದಗ್ರಾಹಕ, ಸಂಸ್ಕರಣ ತಜ್ಞ, ಇತ್ಯಾದಿ ಹಲವು ಮಂದಿ ತಂತ್ರಜ್ಞರನ್ನು ಅಲ್ಲಿ ಅವಲಂಬಿಸಬೇಕಾಗುತ್ತದೆ. ಆದರೂ ಚಲನಚಿತ್ರ ಮಾಧ್ಯಮ ಅತ್ಯಂತ ಆಕರ್ಷಣೀಯ. ಅಲ್ಲೂ ಕೂಡ ಸಂವೇದನಾಶೀಲ ಕೃತಿಗಳನ್ನು ಸೃಷ್ಟಿಸಬಹುದು. ಇಂಗ್‌ಮಾರ್‌ಬರ್ಗ್‌ಮನ್ನನ 'ಸೆವೆಂತ್ ಸೀಲ್' ಕುರೊಸಾವಾನ 'ರೋಶೊಮಾನ್' ಇಂಥ ಚಿತ್ರಗಳನ್ನು ನೋಡಿದ ಬಳಿಕ ಈ ಮಾಧ್ಯಮದಲ್ಲಿ ಏನೇನು ಸಾಧಿಸಬಹುದೆಂದು ವಿಸ್ಮಯಪಡುವಂತಾಗುತ್ತದೆ. ಆದರೂ ನಾನು ಮೊದಲೇ ಹೇಳಿದಂತೆ ಸಾಹಿತ್ಯದಲ್ಲೆ ನನ್ನ ಒಲವು ಹೆಚ್ಚು. ಅಲ್ಲಿ ಯಾರ ನೆರವೂ ಇಲ್ಲದೆ ಮನಸ್ಸು ಯಾವ ಎತ್ತರಕ್ಕಾದರೂ ಏರಿ, ಯಾವ ಆಳಕ್ಕಾದರೂ ಮುಳುಗಿ, ಯಾವ ವಿಸ್ತಾರಕ್ಕಾದರೂ ಹರಡಿ ಸೃಷ್ಟಿ ಕಾರ್ಯದಲ್ಲಿ ತೊಡಗಬಹುದು. ಆದ್ದರಿಂದ ಸಾಹಿತ್ಯ ಮಾಧ್ಯಮಕ್ಕಿಂತ ಹೆಚ್ಚಿನದನ್ನು ಸಾಧಿಸುವ ಸಾಧ್ಯತೆ ಚಲನಚಿತ್ರ ಮಾಧ್ಯಮಕ್ಕಿಲ್ಲವೆಂದೇ ನನ್ನ ಭಾವನೆ. ಅಲ್ಲದೆ ಒಂದು ಸಾಹಿತ್ಯ ಕೃತಿ ಒಂದು ಚಲನಚಿತ್ರ ಕೃತಿಗಿಂತ ಹೆಚ್ಚು ಆಯುಷ್ಯ ಪಡೆದಿರುತ್ತದಲ್ಲವೆ?

ಪ್ರಶ್ನೆ: ನಮ್ಮ ಚಲನಚಿತ್ರ ನಿಜವಾಗಿಯೂ ಕಲೆಯ ಅಭಿವ್ಯಕ್ತಿಯ ಮಾಧ್ಯಮವಾಗಬೇಕಾದರೆ ಏನು ಉಪಾಯಗಳನ್ನು ಕೈಗೊಳ್ಳಬೇಕು?

ಉತ್ತರ: ಬಹಳ ದೊಡ್ಡ ಪ್ರಶ್ನೆ. ಆದರೂ ಸರಳ ಮಾಡಿ ಹೀಗೆ ಉತ್ತರಿಸಬಹುದು. ಒಂದು ಚಲನಚಿತ್ರ ಮುಖ್ಯವಾಗಿ ನಿರ್ದೇಶಕನ ಅಭಿವ್ಯಕ್ತಿಯ ಮಾಧ್ಯಮ. ಅವನಿಗೆ ಬಾಕ್ಸ್ ಆಫೀಸ್ ಇತ್ಯಾದಿ ಯಾವ ತೊಡರುಗಳೂ ಇರಬಾರದು. ಆಗ ಅವನು ತಯಾರಿಸಿದ ಚಿತ್ರಕ್ಕೆ ಅವನ ಸ್ವಂತ ರುಜುವಿದ್ದು ಅವನ ಕನಸನ್ನು ಪ್ರತಿ Frame ನಲ್ಲಿಯೂ ಬೆಳಗುವಂತಾಗುತ್ತದೆ. ಪ್ರತಿಭಾವಂತ ನಿರ್ದೇಶಕನಿಗೆ ಚಲನಚಿತ್ರ ನಿರ್ಮಾಣದಲ್ಲಿ ಸಂಪೂರ್ಣ ಸ್ವಾತಂತ್ರ್ಯ ದೊರೆತಾಗ ಮಾತ್ರ ನಮ್ಮ ಚಲನಚಿತ್ರ ನಿಜವಾಗಿಯೂ ಕಲೆಯ ಅಭಿವ್ಯಕ್ತಿಯ ಮಾಧ್ಯಮವಾಗುತ್ತದೆ.

ಪ್ರಶ್ನೆ: ಬದುಕಿನಲ್ಲಿ ಕಲೆ, ಸಾಹಿತ್ಯಗಳನ್ನು ಬಿಟ್ಟು ನೀವು ಗುರುತಿಸುವ ದೊಡ್ಡ ಮೌಲ್ಯ ಯಾವುದು?

ಉತ್ತರ: ಸ್ನೇಹ, ಮಾನವೀಯ ಸಂಬಂಧ. ಅಂತಃಕರಣ, ಬಾಳಿನಲ್ಲಿ ನೊಂದವರನ್ನು ಕಂಡಾಗ ಮಿಡಿಯುವ ಹೃದಯವಂತಿಕೆ, ಅನುಕಂಪ ಅಂಥವರಿಗಾಗಿ ಅವರ ಸಾಂತ್ವನಕ್ಕಾಗಿ ಯಥಾಶಕ್ತಿ ದುಡಿಯುವ ಕ್ರಿಯಾಶೀಲತೆ. ಆದರೆ ಈ ನನ್ನ ಧೋರಣೆಯಿಂದಾಗಿ ನನ್ನ ಸಾಹಿತ್ಯನಿರ್ಮಾಣಕ್ಕೆ ಪದೇ ಪದೇ ಧಕ್ಕೆಯಾಗಿದೆ ಎನ್ನುವುದನ್ನು ನಾನು ಮರೆತಿಲ್ಲ.

ಪ್ರಶ್ನೆ: ನಿಮ್ಮ ಧೋರಣೆಗಳು ಬದಲಾದಂತೆ ದೇವರಲ್ಲಿಯೂ ನಿಮ್ಮ ನಂಬಿಕೆ ಬದಲಾಗಿದೆಯೆ?

ಉತ್ತರ: ಹೌದು ಸ್ಪಷ್ಟವಾಗಿ ಬದಲಾಗಿದೆ. ಬ್ರಾಡಲಾ, ಇಂಗರ್‌ಸಾಲ್, ರಸೆಲ್‌ರಂಥವರನ್ನು ಓದಿದ ಮೇಲಂತೂ ದೇವತ್ವದಲ್ಲಿ ನಂಬಿಕೆ ಮಾಯವಾಗಿದೆ. ಆದರೂ ಬಾಲ್ಯದಿಂದ ಮೈಗೂಡಿಬಂದಿರುವ ದೈವ ಭಕ್ತಿ ಒಮ್ಮೊಮ್ಮೆ ನನಗರಿವಿಲ್ಲದಂತೆಯೇ ಕಲ್ಲುದೇವರಿಗೆ ಯಾಂತ್ರಿಕವಾಗಿ ಕೈ ಮುಗಿಯುವಂತೆ ಮಾಡಿದೆ. ಆಗ ಒಳಗೊಳಗೇ ನಕ್ಕಿದ್ದೇನೆ. ರೂಢಿ ನಮ್ಮನ್ನು ಎಂಥ ಗುಲಾಮರನ್ನಾಗಿ ಮಾಡುತ್ತದೆ, ಅಲ್ಲವೆ?

ಪ್ರಶ್ನೆ: ಸದ್ಯ ಸಾಹಿತ್ಯದಲ್ಲಿ ನೀವು ರಚಿಸಬೇಕೆಂದಿರುವ ಕೃತಿ ಎಂಥದು?

ಉತ್ತರ: ಖಂಡಿತವಾಗಿಯೂ ಉತ್ತರಿಸಲಾಗದಂಥ ಪ್ರಶ್ನೆಯನ್ನು ಕೇಳಿಬಿಟ್ಟಿರಿ. ಗರ್ಭಿಣಿಯಾದ ಹೆಂಗಸನ್ನು 'ನೀನು ಹೆರಲಿರುವುದು ಗಂಡೊ ಹೆಣ್ಣೊ' ...ಎಂದು ಕೇಳಿದ ಹಾಗಾಯಿತು. ಸೃಷ್ಟಿ ಕಾರ್ಯ ಯಾವಾಗಲೂ ರಹಸ್ಯವಾಗಿ ನಾಲ್ಕು ಗೋಡೆಯ ನಡುವೆ, ಏಕಾಂತದಲ್ಲಿ ನಡೆಯುವಂಥದು. ಎಲ್ಲ ಕತ್ತಲೆಯ ವ್ಯಾಪಾರ. ಗರ್ಭಧಾರಣೆಯೇನೋ ಆಗಿದೆ. ಕೃತಿ ಎಂಥದು ಎನ್ನುವ ಬಗ್ಗೆ ನಾನು ಏನೂ ಹೇಳಲೂ ಅಸಮರ್ಥನಾಗಿದ್ದೇನೆ. ಕೂಸು ಹುಟ್ಟಿದ ನಂತರ ಹೇಗೂ ನಿಮಗೆ ತಿಳಿದೇ ತಿಳಿಯುವುದಲ್ಲ?

ಪರಸ್ಥಳ

*ಈಶ್ವರಚಂದ್ರ

ಸ್ವಂತೂರು ಬಿಟ್ಟು, ಪರಸ್ಥಳಕ್ಕೆ ಹೋದರೆ
ನಾವು ಪರದಾಡಬೇಕಾಗುತ್ತೆ.... ಸಹಜವೆ....
ಆದರೆ ಈ ಪರದಾಟ ತಪ್ಪಿಸಲು
ಅಪರಿಚಿತರ ಸಹಾಯ ಕೇಳಿದಿರೋ ಪರದಾಟಕ್ಕೆ
ಗರಿ ಮೂಡುತ್ತವೆ....ಆ ಪರದಾಟದ ಪರಿ
ಅಷ್ಟಿಷ್ಟೇ? ಹೋಗಲಿ, ನಾವೆಲ್ಲ 'ಪರ'ಸ್ಥಳದವರೇ ಅಲ್ಲವೆ?

ಸ್ವಲ್ಪ ಮಧ್ಯವಯಸ್ಸು ದಾಟಿದವರು ಹೊಸದಾಗಿ ಪರಿಚಯಮಾಡಿಕೊಂಡಾಗ ಸಾಮಾನ್ಯವಾಗಿ ಒಂದು ಪ್ರಶ್ನೆ ಹುಟ್ಟುತ್ತದೆ. 'ತಮ್ಮ ಸ್ವಂತ ಸ್ಥಳ ಯಾವುದೋ?' ಈ ಪ್ರಶ್ನೆಗೆ ಉತ್ತರಗಳು ನಾನಾ ಬಗೆ. ಕೆಲವರು 'ಇದೇ' ಅನ್ನಬಹುದು. ಇನ್ನು ಕೆಲವರು 'ಅಯ್ಯೋ ನಮ್ಮ ಸ್ಥಳ ಬಾಣಗೆರೆ ಅಂತ. ಆದ್ರೆ ಅದು ಎಲ್ಲಿದೇಂತ ನಾನೇ ನೋಡಿಲ್ಲ. ನಮ್ಮ ಅಜ್ಜ ಚಿಕ್ಕಂದಿನಲ್ಲಿ ಅಲ್ಲಿದ್ದರಂತೆ. ಆಮೇಲೆ ಕೆಲಸದ ಮೇಲೆ ಇಲ್ಲಿಗೆ ಬಂದರು. ಇಲ್ಲೇ ನೆಲೆಸಿಬಿಟ್ಟರು. ಆದರೂ ನನ್ನ ಇನಿಷಿಯಲ್ಸ್‌ನಲ್ಲಿ 'ಬಿ' ಅಂಟಿಕೊಂಡುಬಿಟ್ಟಿದೆ. ಅದಕ್ಕೇ ಯಾರಾದರೂ ಕೇಳಿದರೆ ಇದೇ ಸ್ವಂತ ಸ್ಥಳ ಅಂದು ಬಿಡ್ತೀನಿ' ಎನ್ನುತ್ತಾರೆ. ಅಷ್ಟಲ್ಲದೇ ಏನು? ನಾವು ಸದ್ಯಕ್ಕೆ ಎಲ್ಲಿ ನೆಲಸಿರುತ್ತೇವೋ ಅದೇ ಸ್ವಂತ ಸ್ಥಳ. ಖಾಯಂ ಉದ್ಯೋಗದವರಿಗೆ ಇಂಥ ಒಂದು ಸ್ವಂತ ಸ್ಥಳ ಇರಬಹುದು. ಆದರೆ ವರ್ಗಪೀಡಿತರಿಗೆ ಸ್ವಂತ ಸ್ಥಳ ಎಂದು ಹೇಳಿಕೊಳ್ಳುವುದಕ್ಕೆ ಒಂದೂರೆ? ಒಂದು ಸ್ವಂತ ಸ್ಥಳದಲ್ಲಿ ಗಟ್ಟಿಯಾಗಿ ನೆಲೆಯೂರಿದೆವು ಎಂದು ಖಚಿತವಾದರೆ ಮನೆ–ಮಾರು ಮಾಡುವ ಯೋಚನೆ. ವರ್ಗಪೀಡಿತರು 'ಜಂಗಮ'ರು; ಅವರು 'ಸ್ಥಾವರ' ಆಸ್ತಿಗಳನ್ನು ಎಲ್ಲಿ ಮಾಡಬೇಕು? ನಿವೃತ್ತಿಯಾದ ಮೇಲೆ ಇಂಥ ಒಂದು ಊರಿನಲ್ಲಿ ಇರಬೇಕು ಎಂದು ಮೊದಲೇ ನಿರ್ಧರಿಸಿ ಅಲ್ಲಿ ಮನೆಮಾರು ಮಾಡಿಕೊಳ್ಳಬಹುದೇನೋ. ಅಂತೂ ನಿವೃತ್ತಿಯಾಗುವವರೆಗೆ ಅವರಿಗೆ ಸ್ವಂತ ಸ್ಥಳವಿಲ್ಲ. ಈ ಪ್ರಪಂಚದಿಂದಲೇ ನಿವೃತ್ತರಾಗಿ 'ಪರ' ಸ್ಥಳಕ್ಕೆ ಎಲ್ಲರೂ ಹೋಗುವಾಗ ಸ್ವಂತ ಸ್ಥಳದ ಯೋಚನೆ ಯಾಕೆ ಬೇಕು ಎಂದು ಅಧ್ಯಾತ್ಮವಾದಿಗಳು ಕೇಳಬಹುದು. ಅದೂ ನಿಜ. ವ್ಯಾಪಕವಾದ ಅರ್ಥದಲ್ಲಿ 'ಪರ'ವೇ ನಿಜವಾದ ಸ್ವಂತ ಸ್ಥಳ. ಎಲ್ಲರೂ ಅಂತಿಮವಾಗಿ ಅಲ್ಲಿಗೇ ತಾನೇ ಹೋಗುವುದು? ಜೀವನಚಕ್ರಕ್ಕೆ ಬಿದ್ದವರು ಹುಟ್ಟು ಸಾವುಗಳಿಂದ ಮತ್ತೆ ಮತ್ತೆ 'ಇಹ'ಕ್ಕೆ ಬರಬೇಕು. ಜೀವನ್ಮುಕ್ತರಾದವರು 'ಪರ'ವನ್ನೇ ಸ್ವಂತ ಸ್ಥಳ ಅಂದಕೊಳ್ಳಬಹುದು. ಅಂದುಕೊಳ್ಳಲಿ. ನಾವೆಲ್ಲಾ ಲೌಕಿಕರು. ಲೌ ಮಾಡುವವರು, ಬದುಕನ್ನ. ನಾವು ಇಹದಲ್ಲೇ ಒಂದು ಸ್ವಂತಸ್ಥಳ ಕಂಡುಕೊಳ್ಳುವುದರಲ್ಲಿ ಖುಷಿ ಪಡುವವರು.



ಪರಸ್ಥಳದ ವಿಷಯ ಹೇಳಲು ಹೊರಟು ಸ್ವಂತ ಸ್ಥಳದಲ್ಲೇ ಸುತ್ತಾಡಿದ್ದಾಯಿತು. ಅದರಿಂದ ಒಂದು ಅನುಕೂಲವೇ ಆಯಿತು. ಸ್ವಂತ ಸ್ಥಳ ಎಂದರೇನು ಎಂದು ಖಾತ್ರಿಮಾಡಿಕೊಂಡು ಬಿಟ್ಟರೆ ಉಳಿದದ್ದೆಲ್ಲಾ ಪರಸ್ಥಳವಾಗಿಬಿಟ್ಟಿತಲ್ಲ? ನಮ್ಮ ಪೂರ್ವಜರು ಎಲ್ಲಿಂದ ಬಂದರೇನಂತೆ? ಅದರ ವಿಷಯ ಹೆಚ್ಚು ದೂರ ಯೋಚಿಸಿದರೆ ಸುಖವಿಲ್ಲ. ಏಕೆಂದರೆ ಬರುಬರುತ್ತಾ ಮರದ ಕೊಂಬೆಯೇ ನಮ್ಮ 'ಸ್ವಂತ ಸ್ಥಳ' ಎಂದು ಒಪ್ಪಿಕೊಳ್ಳಬೇಕಾಗಿ ಬರಬಹುದು. ಕೋತಿಗಳಿಗೆ ಕೊಂಬೆಗಳೇ ಆವಾಸಸ್ಥಾನವಲ್ಲವೆ! ನಮ್ಮ ಪೂರ್ವಜರನ್ನು ಕೊಂಬೆಯ ಮೇಲೇ ಬಿಡಿ. ನಾವು ಸದ್ಯಕ್ಕೆ ಎಲ್ಲೋ ಒಂದು ಕಡೆ ನೆಲಸಿದ್ದೇವೆ. ವ್ಯಾವಹಾರಿಕ ಕಾರಣಗಳಿಂದ ಅದನ್ನೆ ಸ್ವಂತ ಸ್ಥಳ ಅನ್ನೋಣ. ಸರಿ ಉಳಿದದ್ದೆಲ್ಲಾ ಪರಸ್ಥಳ.

ಎಲಾ! ಒಂದು ಸಣ್ಣ ತಪ್ಪಾಯಿತು. ಸ್ವಂತ ಸ್ಥಳದ ವ್ಯಾಖ್ಯೆ ಮಾಡಿದಂತೆ ಪರಸ್ಥಳದ್ದೂ ಮಾಡದಿದ್ದರೆ ಮಾವನ ಊರು ಬೇರೆಯಾಗಿದ್ದು ಅದನ್ನೂ ಪರಸ್ಥಳ ಅನ್ನಬಹುದೆ? ಮಾವನ ಮನೆ ಪರಸ್ಥಳವಲ್ಲ. ಆದರೆ ಸ್ವಂತಸ್ಥಳವೂ ಅಲ್ಲ ಅಂದ ಮೇಲೆ ಅದೊಂದು ಅ-ಪರ-ಸ್ವಂತ–ಸ್ಥಳ. ಬೇರೆ ಊರಿನಲ್ಲಿ ನಿಮ್ಮ ಅಣ್ಣ ಇದ್ದಾರೆ. ಅದು ನಿಮಗೆ ಪರಸ್ಥಳವೋ? ಸ್ನೇಹಿತರಿರುವ ಊರು, ನೆಂಟರಿರುವ ಊರು ಪರಸ್ಥಳವೋ? ಇವನ್ನೆಲ್ಲಾ ಪರಸ್ಥಳ ಎಂದು ಹೇಗೆ ಕರೆಯುವುದಕ್ಕಾಗುತ್ತದೆ? ಹೇಗೂ ಅಣ್ಣನ ಮನೆಗೆ ತಾನೇ ಹೋಗುವುದು ಅಂತ ಪಂಚೆ ಹೊದಿಕೆಗಳಿರಲಿ, ಷೇವಿಂಗ್ ಸೆಟ್ ಬಿಟ್ಟು ಹೋದರೂ ತೊಂದರೆಯಾಗುವದಿಲ್ಲ. ಅಂದಮೇಲೆ ನೆಂಟರೂ ಇರಬಾರದು, ಇಷ್ಟರೂ ಇರಬಾರದು ಅದು ಪರಸ್ಥಳ. ಆದರೆ ಚೆನ್ನಾಗಿ ಪರಿಚಯವಿರುವ ಊರು ಪರಸ್ಥಳವೋ? ಆ ಊರಿಗೆ ಆಗಾಗ ಹೋಗಿಬರುತ್ತಿರುತ್ತೇವೆ. ಅಲ್ಲಿ ಬಸ್ ನಿಲ್ದಾಣ, ರೈಲು ನಿಲ್ದಾಣ, ವಸತಿಗೃಹ, ಭೋಜನ ವೈವಿಧ್ಯ, ಜನಜೀವನ ಎಲ್ಲಾ ತಕ್ಕಮಟ್ಟಿಗೆ ಗೊತ್ತು. ಆ ಊರಲ್ಲಿ ಎಲ್ಲಿ ಇಳಿಯಬೇಕು ಎಲ್ಲಿ ಹತ್ತಬೇಕು, ಯಾವ ಕಚೇರಿ ಎಲ್ಲಿದೆ ಮುಂತಾದ್ದೆಲ್ಲಾ ಗೊತ್ತು. ಹಾಗಿದ್ದರೂ ಅದನ್ನು ಪರಸ್ಥಳ ಅನ್ನಬಹುದೋ? ಹೇಗಾದೀತು? ಹಾಗನ್ನಲು ಮನಸ್ಸೊಪ್ಪುವುದಿಲ್ಲ. ಅದು ಸ್ವಂತ ಸ್ಥಳವಲ್ಲ, ಪರಸ್ಥಳವೂ ಅಲ್ಲ. ಹಾಗಾದರೆ ಪರಿಚಿತ 'ಸ್ಥಳ, ಹ್ಞಾ ಈಗ ಸಿಕ್ಕಿತು. ಪರಸ್ಥಳದ ಗುಟ್ಟು! ಯಾವುದು ಅಪರಿಚಿತ ಸ್ಥಳವೋ ಅದೇ ಪರಸ್ಥಳ.

ಪರಸ್ಥಳಕ್ಕೆ ಹೋದಾಗ ಆ ಊರಿನಲ್ಲಿ ಎಷ್ಟು ಕಡೆ ಬಸ್ಸು ನಿಲ್ದಾಣಗಳಿವೆಯೋ ಗೊತ್ತಿಲ್ಲದಿರುವುದರಿಂದ ಎಲ್ಲಿ ಇಳಿಯಬೇಕೋ ಗೊತ್ತಾಗುವುದಿಲ್ಲ. ಒಳ್ಳೆಯ ಹೋಟೆಲು ಯಾವುದು ತಿಳಿಯದು. ಜನ ಎಂಥವರು ಗೊತ್ತಿಲ್ಲ. ಅವರು ನೆಲದ ಮೇಲೆ ನಡೆಯುತ್ತಾರೋ, ಆಕಾಶದಲ್ಲಿ ಹಾರಾಡುತ್ತಾರೋ ಗೊತ್ತಿಲ್ಲ. ಯಾಕೆ, ಪರಸ್ಥಳದಲ್ಲಿ ಪೂರ್ವ ಯಾವುದು ಪಶ್ಚಿಮ ಯಾವುದು ಗೊತ್ತಾಗುವುದಿಲ್ಲ. ಒಂದು ಸಲ ಪರಸ್ಥಳದಲ್ಲಿ ರಾತ್ರಿ ಒಬ್ಬನಿಗೆ ಇಬ್ಬರು ಸ್ಥಳವಂದಿಗ ಕುಡುಕರು ಗಂಟು ಬಿದ್ದರು. ಅಲ್ಲಿ ಅವರಲ್ಲಿ ಒಬ್ಬ ಪೂರ್ವ ಎನ್ನುತ್ತಿದ್ದ ದಿಕ್ಕನ್ನೇ ಇನ್ನೊಬ್ಬ ಪಶ್ಚಿಮ ಎನ್ನುತ್ತಿದ್ದ. ಪರಸ್ಥಳದವನನ್ನು ನ್ಯಾಯ ಕೇಳಿದರು. "ಅಯ್ಯೋ ನಾನು ಪರಸ್ಥಳದವನು. ನಿಮ್ಮೂರಿನಲ್ಲಿ ಪೂರ್ವ ಯಾವ ಕಡೆಗೆ ಬರುತ್ತದೋ ನನಗೆ ಗೊತ್ತಿಲ್ಲ" ಎಂದ ಆತ. ಇದು ಹಳೆಯ ಕಥೆ ಹಳೆಯದಾದರೇನು? ನೀತಿ ನಿತ್ಯನೂತನ.

ಮೊದಲ ಸಲ ಹೋದಾಗ ಮಾತ್ರ ಹೊಸ ಊರು ಪರಸ್ಥಳ. ಒಂದು ಸಲ ಹೋಗಿ ಬಂದರೆ ಪರಸ್ಥಳ ಪರಿಚಿತ ಸ್ಥಳವಾಗಿ ಬಿಡುತ್ತದೆ. ಒಂದು ಭೇಟಿಗೆ ತಮ್ಮ ಪರಿಚಯವನ್ನು ಪೂರ್ತಿ ಬಿಟ್ಟುಕೊಡದ ದೊಡ್ಡ ನಗರಗಳು ಮುಂದಿನ ಭೇಟಿಯಲ್ಲಾದರೂ ಪರಿಚಿತವಾದಾವು.

ಮೊದಲಸಲ ಪರಸ್ಥಳಕ್ಕೆ ಹೋಗುವಾಗ ನಮಗೆ ಎಲ್ಲಿಲ್ಲದ ಆತಂಕ. ರೈಲಿನಲ್ಲಿ ನಿದ್ದೆ ಮಾಡುತ್ತಾ ಎಲ್ಲಿ ಆ ಸ್ಥಳ ದಾಟಿ ಇನ್ನೂ ಮುಂದಕ್ಕೆ ಹೋಗಿ ಬಿಡುತ್ತೇವೋ ಎಂದು ಗಾಬರಿ. ಪಕ್ಕದಲ್ಲಿ ಕೂತವರ ನೆರವು ಪಡೆಯುತ್ತೇವೆ. ಆ ಊರಿಗೆ ಹೋಗಿ ಬಂದವರು ಯಾರಾದರೂ ಇದ್ದರೆ ಅವರಿಂದ ಸಾಕಷ್ಟು ವಿವರಗಳನ್ನು ಸಂಗ್ರಹಿಸುತ್ತೇವೆ. ಸ್ವಂತ ಸ್ಥಳದಲ್ಲಿ ಇರುವುದಕ್ಕಿಂತ ಎರಡು ಪಟ್ಟು ಜಾಗ್ರತವಾಗಿ ಇರಲು ಪ್ರಯತ್ನಿಸುತ್ತೇವೆ. ಹೆಚ್ಚು ಹಣ ಒಯ್ದಿದ್ದರೆ ಸ್ವಲ್ಪ ಮಾತ್ರ ಮೇಲು ಜೇಬಿನಲ್ಲಿಟ್ಟುಕೊಂಡು ಉಳಿದದ್ದನ್ನೆಲ್ಲಾ ಒಳ–ಒಳಜೇಬಿನಲ್ಲಿ ಭದ್ರವಾಗಿಡುತ್ತೇವೆ. ಹೆಚ್ಚೇಕೆ, ನಾವು ಮಾಮೂಲಿ 'ನಾವ' ಗಿಂತ ಹೆಚ್ಚು ಜಾಣರಾಗಿರುತ್ತೇವೆ.

ಆದರೆ ಎಲ್ಲರೂ ನಮ್ಮ ಹಾಗೆ ಎಲ್ಲಿರುತ್ತಾರೆ? "ನಮ್ಮೂರ ರಂಗ ಪರವೂರ ಮಂಗ" ಎಂಬ ಗಾದೆಯೇ ಇದೆಯಲ್ಲ! ಪರಸ್ಥಳದಲ್ಲಿ ಕೆಲವು ಕಿಲಾಡಿಯಾದ ಸ್ಥಳವಂದಿಗರಿರುತ್ತಾರೆ. ಹೊಸಬರು ಯಾರಾದರೂ ಆ ಊರಿಗೆ ಬಂದರೆ, ಅವರು ಬಸ್ಸಿನಿಂದ ಇಳಿಯುತ್ತಿದ್ದ ಹಾಗೇ ಇವರಿಗೆ ಗೊತ್ತಾಗಿ ಬಿಡುತ್ತದೆ. 'ನಾವು ಪರಸ್ಥಳದವರು' ಎಂದೇನೂ ಅವರು ಫಲಕ ಹಾಕಿಕೊಂಡಿರುವುದಿಲ್ಲ. ಆದರೆ ಹೇಗೋ ಗೊತ್ತಾಗಿ ಬಿಡುತ್ತದೆ. ಅವರ ಉಡುಪಿನ ಹೊಲಿಗೆಯ ರೀತಿ, ಅವರ ಪ್ಯಾಂಟಿನ ಕೆಳಭಾಗ ಅಗಲ, ಅವರ ಗಂಟು ಮೂಟೆಗಳ ವೈವಿಧ್ಯ ಅವರು ನಡೆದಾಡುವ ರೀತಿ, ಏಕೆ, ಅವರು ಬಸ್ಸಿನಿಂದ ಇಳಿಯುತ್ತಿದ್ದ ಹಾಗೇ ಸುತ್ತಮುತ್ತ ನೋಡುವ ನೋಟವೂ ಸಾಕು ಅವರು ಪರಸ್ಥಳದವರೆಂದು ಗೊತ್ತಾಗಿಬಿಡುತ್ತದೆ. ರೂಮು ಬೇಕೆ

ಕೆಲಸ ಕೊಡಿಸಬೇಕೆ, ಹಣದ್ವಿಗುಣ ಮಾಡಿಕೊಡಬೇಕೆ, ಬೀದಿಯಲ್ಲಿ ಸಿಗುವ ಚಿನ್ನದ ಸರದಲ್ಲಿ ಪಾಲು ಬೇಕೆ– ಎಷ್ಟೊಂದು ಉಪಚಾರ ಪರಸ್ಥಳದವರಿಗೆ! ಪರಸ್ಥಳದವರನ್ನು ಜಟಕಾಸಾಬಿ ಇರಲಿ ಅವನ ಕುದುರೆಯೂ ಗುರುತು ಹಿಡಿದುಬಿಡುತ್ತದೆ. ಪರಸ್ಥಳದವರಿಗೆ ಜಟಕಾ, ರಿಕ್ಷಾಗಳಲ್ಲಿ ಒಂದು ಮೈಲಿ ಹತ್ತು ಮೈಲಿಯಾಗುತ್ತದೆ. ದರವೂ ಅಷ್ಟೆ.

ಪರಸ್ಥಳದಲ್ಲಿ ದಾರಿತಪ್ಪಬಾರದು. ತಪ್ಪಿದರೂ ಎಲ್ಲಿಂದ ಬಂದಿದ್ದೇವೆ ಎಲ್ಲಿಗೆ ಹೋಗುತ್ತಿದ್ದೇವೆ ಎಂದಾದರೂ ಗೊತ್ತಿರಬೇಕು. ಎಂಥೆಂಥಾ ಮಹಾ ಜ್ಞಾನಿಗಳೇ ಇದನ್ನು ಅರ್ಥಮಾಡಿಕೊಳ್ಳಲು ತಿಪ್ಪರಲಾಗ ಹಾಕಬೇಕಾಯಿತು. ಇನ್ನು ನಮ್ಮ ಪಾಡೇನು? ಪರಸ್ಥಳದಲ್ಲಿ ನಾವೇ ದಾರಿ ತಪ್ಪಿ ಪರದಾಡುತ್ತಿರುವಾಗ ಯಾರಾದರೊಬ್ಬರು ಎದುರಾಗಿ 'ಮಾರ್ಕೆಟ್ಟಿಗೆ ಹೋಗುವ ದಾರಿ ಯಾವುದು?' ಎಂದು ಕೇಳುತ್ತಾರೆ. 'ಏನೋ ಗೊತ್ತಿಲ್ಲ. ನಾನು ಪರಸ್ಥಳ' ಎನ್ನಬೇಕಾಗುತ್ತದೆ.

ನೀವು ಪರಸ್ಥಳಕ್ಕೆ ಹೊರಟಿರಿ ಎಂದಕೂಡಲೆ ಪಕ್ಕದಮನೆಯವರು ಬರುತ್ತಾರೆ: "ಅಲ್ಲೇ ನಮ್ಮ ಮಗಳ ಮನೆ ಇದೆ. ಸ್ವಲ್ಪ ಉಪ್ಪಿನಕಾಯಿ ಕೊಡ್ತೀನಿ ಕೊಡ್ತೀರಾ?" ಎನ್ನುತ್ತಾರೆ. ಸ್ವಲ್ಪ ಅನುಮಾನಿಸಿದರೆ "ನಮ್ಮ ಹುಡುಗಿಗೆ ಮಾವಿನಕಾಯಿ ಉಪ್ಪಿನಕಾಯಿ ಅಂದ್ರೆ ತುಂಬ ಆಸೆ...?" ಎಂದು ರಾಗ ಎಳೆಯುತ್ತಾರೆ. ಸರಿ, ನಾನು ಇದೇ ಮೊದಲನೇ ಸಲ ಊರಿಗೆ ಹೋಗ್ತಿರೋದು. ಮನೆ ಹ್ಯಾಗೆ ಹುಡುಕಲಿ?" ಎಂದರೆ "ಅಯ್ಯೋ ತುಂಬ ಸುಲಭ ಇವ್ರೆ. ರಾಮದೇವರ ದೇವಸ್ಥಾನ ಯಾವುದೂಂತ ಕೇಳಿ ಯಾರು ಬೇಕಾದ್ರೂ ಹೇಳ್ತಾರೆ. ಅದರ ಎದುರಿಗೇ ಒಂದು ರಸ್ತೆ. ಅದರಲ್ಲಿ ನೆಟ್ಟಗೆ ಹೋಗಿ, ಎರಡನೆ ರಸ್ತೆಯಲ್ಲಿ ಎಡಕ್ಕೆ ತಿರುಗಿ ಮೂರನೇ ರಸ್ತೆಯಲ್ಲಿ ಬಲಕ್ಕೆ ತಿರುಗಿದರೆ ಮೂರನೆಯದೇ ನಮ್ಮ ಮಗಳ ಮನೆ. ಮನೇ ಮುಂದೇ ಜೋಡಿ ತೆಂಗಿನಮರ ಇದೆ" ಎನ್ನುತ್ತಾರೆ. ನೀವು ದಾಕ್ಷಿಣ್ಯಕ್ಕೆ ಒಪ್ಪಿಕೊಳ್ಳುತ್ತೀರಿ. ಇನ್ನೊಂದು ದೃಶ್ಯ: ಪರಸ್ಥಳದಲ್ಲಿ ಉಪ್ಪಿನಕಾಯಿ ಶೀಷೆ ಹಿಡಿದುಕೊಂಡು ನೀವು ಅಲೆದಾಡುತ್ತಿದ್ದೀರಿ. ಜೋಡಿ ತೆಂಗಿನಮರ ಕಾಣುತ್ತದೆ ಆದರೆ ನೀವು ಹತ್ತಿರ ಹತ್ತಿರ ಹೋದಂತೆಲ್ಲಾ ಅವು ದೂರ ದೂರ ಹೋಗುತ್ತವೆ. ಆಮೇಲೆ ನೋಡಿದರೆ ಅವರು ವಾಕಿಂಗ್ ಹೊರಟ ಉದ್ದನೆಯ ದಂಪತಿಗಳು! ರಾಮದೇವರ ದೇವಸ್ಥಾನದ ಮುಂದಿನ ರಸ್ತೆಗೆ ಬಂದಿದ್ದೀರಿ. ನೆಟ್ಟಗೆ ಹೋಗಿ ಎರಡನೆಯ ರಸ್ತೆಯ ಬಲಗಡೆ ತಿರುಗಿ, ಮೂರನೇ ರಸ್ತೆಯಲ್ಲಿ ಎಡಕ್ಕೆ ತಿರುಗಿದ್ದೀರಿ. ಎರಡು ಮನೆ ದಾಟಿದ ಮೇಲೆ ಅಲ್ಲಿ ಮೂರನೆಯದು ಖಾಲಿ ಸೈಟು. ಮನೆ ಖಾಲಿ ಮಾಡಿ ಸೈಟು ಮಾಡಿಟ್ಟು ಹೋಗಿದ್ದಾರಲ್ಲ ಎಂದು ನಿಮಗೆ ಆಶ್ಚರ್ಯ. ಮುಂದಿನ ಸಾಲಿನಲ್ಲಿ ಎಲ್ಲಿ ನೋಡಿದರೂ ಫೈಪೋಟಿಗೆ ಬೆಳೆಸಿದ್ದಾರೋ ಎನ್ನುವ ಹಾಗೆ ಜೋಡಿ ತೆಂಗಿನಮರಗಳೇ. ಸರಿ ನಿಮಗೆ ಹೋಟೆಲೂಟ ರುಚಿಸುವುದಿಲ್ಲ–ಉಪ್ಪಿನಕಾಯಿ ನೆಂಜಿಕೊಂಡು ಬಿಡುತ್ತೀರಿ.

ಪರಸ್ಥಳದಲ್ಲಿ ಹಣ ಕಳೆದುಕೊಂಡರೆ ಭಾರೀ ಪೀಕಲಾಟ. ಅಲ್ಲಿ ಗುರುತಿನವರು ಒಬ್ಬರೂ ಇರುವುದಿಲ್ಲ–ಪರಸ್ಥಳ ತಾನೆ? 'ಸಾರ್ ದುಡ್ಡು ಕಳೆದುಹೋಯ್ತು... ಊರಿಗೆ ಹೋಗಬೇಕು. ಬಸ್‌ಛಾರ್ಜಿಗೆ ದುಡ್ಡಿಲ್ಲ. ಸ್ವಲ್ಪ ಸಹಾಯಮಾಡಿ' ಎಂದು ಸ್ವಂತ ಸ್ಥಳದಲ್ಲಿ ಯಾರಾದರೂ ನಮ್ಮನ್ನು ಕೇಳಿದರೆ ಅದು 'ಉದರ ನಿಮಿತ್ತ ಕಟ್ಟಿದ ವೇಷ' ಎಂದುಕೊಂಡು ಸಹಾಯಮಾಡದೆ ಮುಂದೆ ಹೋಗುತ್ತೇವೆ. ಆದುದರಿಂದ ನಾವೇ ಹಾಗೆ ಮಾಡುವುದಕೂ ಆಗುವುದಿಲ್ಲ. ಏನು ಮಾಡಬೇಕು? ಉಂಗುರವನ್ನೋ, ವಾಚನ್ನೋ ಗಿರವಿ ಇಟ್ಟು ಸ್ವಂತಸ್ಥಳಕ್ಕೆ ಗಾಡಿಬಿಡಬೇಕು. ಇಲ್ಲಾ, ಇಳಿದು ಕೊಂಡಿದ್ದ ಹೋಟೆಲು ಒಡೆಯನಿಗೆ ಪರಿಸ್ಥಿತಿ ವಿವರಿಸಿ ಸ್ವಂತಸ್ಥಳದಿಂದ ಟೆಲಿಗ್ರಾಂ ಮನಿಯಾರ್ಡರ್ ಬರುವವರೆಗೆ ಊಟ-ವಸತಿ ಖಾತರಿ ಮಾಡಿಕೊಳ್ಳಬೇಕು.

ಪರಸ್ಥಳದಲ್ಲಿ ನಡುರಾತ್ರಿ ಇದ್ದಕ್ಕಿದ್ದಂತೆಯೇ ಎಚ್ಚರವಾದಾಗ ಎಲ್ಲಿದ್ದೇವೆಂದೇ ಒಂದು ಕ್ಷಣ ಗೊತ್ತಾಗುವುದಿಲ್ಲ. ಮಾಮೂಲಿನ ಹಾಗೆ ಸ್ವಂತಸ್ಥಳದಲ್ಲೇ ಇದ್ದೇವೆ ಅಂದುಕೊಂಡು ಬಿಡುತ್ತೇವೆ. ಆಮೇಲೆ ನಿಧಾನವಾಗಿ ಹೊಸಪರಿಸ್ಥಿತಿಯ ನೆನಪಾಗುತ್ತದೆ. ಈಗ ಹೊರಗೆ ಹೋಗಬೇಕಾದರೆ, ಎಲ್ಲಿ ತಗ್ಗು, ಎಲ್ಲಿ ಎತ್ತರ, ಎಲ್ಲಿ ಮೆಟ್ಟಿಲು, ಎಲ್ಲಿ ಗೋಡೆ ಗೊತ್ತಾಗುವುದಿಲ್ಲ. ರಾಜಸೂಯ ಯಾಗದಲ್ಲಿ ದುರ್ಯೋಧನ ಭಂಗಪಟ್ಟಂತಾಗುತ್ತದೆ. ದುರ್ಯೋಧನನಿಗೂ ಅದು ಪರಸ್ಥಳವಾಗಿತ್ತಲ್ಲವೆ?

ಸ್ವಂತಸ್ಥಳದಲ್ಲಿ ಇರುವುದಕ್ಕಿಂತ ಭಿನ್ನವಾಗಿ ಪರಸ್ಥಳದಲ್ಲಿ ಜನ ನಡೆದುಕೊಳ್ಳುವುದುಂಟು. ಅಲ್ಲಿ ತಮ್ಮನ್ನು ಯಾರಾದರೂ ಗುರುತಿಸುವವರು ನೋಡುವುದಿಲ್ಲ ಎಂದು ಅವರಿಗೆ ಧೈರ್ಯ. ಪರಸ್ಥಳ ಅವರ ಸ್ವಚ್ಛಂದತೆಯ ವಿಕಾಸಕ್ಕೆ ಅವಕಾಶ ಮಾಡಿಕೊಡುತ್ತದೆ. ಸ್ವಂತಸ್ಥಳದಲ್ಲಿ ಸಭ್ಯರಾಗಿರುವರು ಪರಸ್ಥಳಕ್ಕೆ ಹೋದಾಗ ಕಿಲಾಡಿತನ ತೋರಿಸಬಹುದು. ಬೀದಿಯಲ್ಲಿ ಹೋಗುವ ಹುಡುಗಿಯರನ್ನು ಚುಡಾಯಿಸಲೂ ಧೈರ್ಯವಹಿಸಬಹುದು. ಒಂದು ಪಕ್ಷ ಮುಖಭಂಗವಾದರೂ ಪರಸ್ಥಳ ತಾನೆ? ತಮ್ಮವರಾರಿಗೂ ಗೊತ್ತಾಗುವುದಿಲ್ಲವಲ್ಲ? ಪ್ರಾಯಶಃ ಈ ಧೋರಣೆಯಿಂದಲೇ ಏನೋ ಪರದೇಶದಲ್ಲಿನ ಭಾರತೀಯ ವಿದ್ಯಾರ್ಥಿಗಳಿಗೆ ಅಪಖ್ಯಾತಿ ಬಂದಿರುವುದು.

ಪರಸ್ಥಳದಲ್ಲಿ ಆಕಸ್ಮಿಕವಾಗಿ ಪರಿಚಿತರನ್ನು ಕಂಡರೆ ಎಂಥ ಆನಂದ! ಎಲ್ಲರೂ ಅಪರಿಚಿತರೇ ಆಗಿರುವಾಗ ಒಂದು ಪರಿಚಿತ ಮುಖ ಇಂಥ ಸುಖ ಕೊಡುತ್ತದೆ. ಕನ್ನಡೇತರ ಪ್ರದೇಶಕ್ಕೆ ಹೋಗಿದ್ದಾಗ ಕನ್ನಡ ಬಲ್ಲವರೊಬ್ಬರ ಭೇಟಿಯಾದರೆ ಇದೇ ಸುಖ. ಇದನ್ನು ಅನುಭವಿಸಿಯೇ ಅರಿಯಬೇಕು. ಪರಸ್ಥಳದಲ್ಲಿ ಪರಿಚಿತರ ದರ್ಶನವಾದಾಗ ಕೆಲವೊಮ್ಮೆ ತಬ್ಬಿಬ್ಬಾಗುವುದೂ ಉಂಟು. ಪರಸ್ಥಳದ ಒಂದು ಅಪ್ರಖ್ಯಾತ ರಸ್ತೆಯಲ್ಲಿ ಪರಿಚಿತರೊಬ್ಬರ ಕಣ್ಣಿಗೆ ಸಿಕ್ಕಿಬಿದ್ದರೆ, ಕದ್ದು ಸಿಗರೇಟು ಸೇದುವಾಗ ತಂದೆಯ ದೃಷ್ಟಿಗೆ ಬಿದ್ದಹಾಗಾಗುತ್ತದೆ.

ಪರಸ್ಥಳಕ್ಕೆ ತನ್ನದೇ ಆದ ಎಷ್ಟೋ ವಿಚಿತ್ರ ವಿಶಿಷ್ಟಗಳಿರುತ್ತವೆ. ಅದು ಗೊತ್ತಿಲ್ಲದೆ ಹೊಸಬರು ನಗೆಪಾಟಲಿಗೆ ಈಡಾಗುವುದೂ ಉಂಟು. ಬೆಂಗಳೂರಿನಲ್ಲಿ ರೂಟ್ ನಂ. ೮ಕ್ಕೆ ಹೋಗುವುದೆಂದರೆ ಹುಚ್ಚಾಸ್ಪತ್ರೆಗೆ ಹೋಗುವುದು. ಇನ್ನೊಂದು ಊರಿನಲ್ಲಿ ಇನ್ನೊಂದು ದಾರಿ ಸ್ಮಶಾನದ್ದು. ಮತ್ತೊಂದು ಊರಿನಲ್ಲಿ ಒಂದು ರಸ್ತೆ ವೇಶ್ಯೆಯರ ಆವಾಸಸ್ಥಾನ. ಹೀಗೆ ಹಲವು ಬಗೆ. ಗೊತ್ತಿಲ್ಲದೆ ಅಲ್ಲಿಗೆ ಹೋಗಬೇಕೆಂದಾಗ ನಗೆಪಾಟಲಿಗೀಡಾಗಬಹುದು. ಎಚ್ಚರಿಕೆ.

ಇನ್ನೊಬ್ಬರ ಅತಿಥಿಯಾಗಿ ಆಹ್ವಾನದ ಮೇರೆಗೆ ಪರಸ್ಥಳಕ್ಕೆ ಹೋದಾಗ ಹೆಚ್ಚಿನ ತೊಂದರೆ ಇಲ್ಲ. ಅವರ ಮಾರ್ಗದರ್ಶನದಲ್ಲಿ ಎಲ್ಲ ಸುಗಮ. ಆದರೆ ಈ ಮಾರ್ಗದರ್ಶಿಗಳು ಅತಿವಾಚಾಳಿಗಳಾಗಿದ್ದು ಕಂಡದ್ದನ್ನೆಲ್ಲಾ ವಿವರಿಸುವ ಚಪಲಕ್ಕೆ ಬಲಿಯಾಗಿದ್ದರೆ ಬಂತು ಗ್ರಹಚಾರ. ಅವರಿಗೋ ಅತಿಥಿಗಳಿಗೆ ವಿವರಿಸಿ ಹೇಳುವ ವಿಶೇಷ ಉತ್ಸಾಹ. "ಇದು ಆಸ್ಪತ್ರೆ, ಅದು ಚರ್ಚು, ಇಲ್ಲಿ ರಸ್ತೆ ರೈಲು; ಅಲ್ಲಿ ಮಹಡಿ ಬಸ್ಸು, ಅದು ರಿಕ್ಷಾ" ಎಂದರೆ ನಿಮಗೆ ಶಿಕ್ಷೆಯೇ! ಹಾಗೆಂದು ಅವರನ್ನು ಬಿಟ್ಟು ಒಬ್ಬರೇ ಹೊರಟರೆ ಮತ್ತೂ ಕಷ್ಟವೇ!

ಒಂದು ಸಂಗತಿ ನೆನಪಾಗುತ್ತದೆ: ಹಳ್ಳಿಗಳಲ್ಲಿ ದೇವಸ್ಥಾನ, ಮಂಟಪಗಳಲ್ಲಿ ಸಂಜೆಯಾಯಿತೆಂದರೆ ಬೇರೆ ಊರಿನ ಜನ ಬಂದವರು ಬೀಡುಬಿಟ್ಟು, ಮೂರು ಕಲ್ಲುಹೂಡಿ ಒಲೆ ಹಚ್ಚಿ ಅಡಿಗೆಗಿಡುತ್ತಾರೆ. ಬೆಂಕಿಯ ಜ್ವಾಲೆಯ ಅರೆಬರೆ ಬೆಳಕಿನಲ್ಲಿ ಅವರು ನಿಗೂಢವಾಗಿ ಕಾಣುತ್ತಾರೆ. ಸ್ಥಳವಂದಿಗರು ಯಾರಾದರೂ ಅವರನ್ನು ನೋಡಿದರೆ ದೂರದಿಂದಲೇ "ಯಾರದೂ?" ಎಂದು ಕೂಗುತ್ತಾರೆ. "ನಾವು ಸ್ವಾಮಿ, ಪರಸ್ಥಳದವರು" ಎಂದು ಉತ್ತರಬರುತ್ತದೆ.

ನಾವೆಲ್ಲ ಪರಸ್ಥಳದವರೇ ಅಲ್ಲವೆ? ●

ಎಲ್ಲಿ ನೀ ಹೋಗಿದ್ದೆ?



ಎಲ್ಲಿ ನೀ ಹೋಗಿದ್ದೆ? ಗಹನ ಗಂಭೀರೆ
ಮುಖ ಸ್ವಲ್ಪ ನೋಡೋಣ,
ಸನಿಯಕ್ಕೆ ಬಾರೆ.
ಬಿಸಿಲ್ಲಿ ತಿರುಗಿದೆಯೆ?
ತುಟಿ ತುಂಬ ಬೆವರು.
ಬೇಕಷ್ಟು ಜನರುಂಟು ಹೆಸರು
ಇಡುವವರೆ.

ದಿನಕರ ದೇಸಾಯಿ

ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕಿದ್ದ ಸುಜಾತಾ ಕರ್ತವ್ಯದಲ್ಲಿ ಮನದಳಲು ಮರೆಯುತ್ತಿದ್ದಳು. ಮಾಲೀಕನ ಕೆಂಗಣ್ಣ ನೋಟ-ಗಿರಾಕಿಗಳ ಕಟುಟೀಕೆಗಳಲ್ಲೂ ಸುಜಾತ ಅನಿತಾಳ ಆತ್ಮೀಯತೆಯನ್ನೂ, ಕೆಲ ಮರೆಯಲಾಗದ ಅನುಭವವನ್ನು ಪಡೆದಳು.

ಶಾಂತಾದೇವಿ ಕಣವಿ



ಹೊರಗಿನ ಬಿಸಿಲಿನ ಪ್ರಖರತೆಯಿಂದಾಗಿ ಅಂಗಡಿಯ ಮೆಟ್ಟಲೇರಿ ಒಳಗೆ ಹೆಜ್ಜೆಯಿಟ್ಟೊಡನೆಯೆ ಸುಜಾತಾಳಿಗೆ ಏನೂ ಕಾಣದೆ ಕಣ್ಣು ಕತ್ತಲಿಟ್ಟಿತ್ತು. ಒಂದು ಕ್ಷಣ ಸುಮ್ಮನೆ ನಿಂತು ಕಣ್ಣ ಮೇಲೆ ಕೈಯಾಡಿಸಿಕೊಂಡಳು. ಹಾಲಿನಲ್ಲಿಯ ನಿಯಾನ್ ದೀಪಗಳು ಝಗಝಗಿಸಿದವು. ಅವುಗಳ ಪ್ರಕಾಶದಲ್ಲಿ ಕಾಜಿನ ಕಪಾಟುಗಳೂ, ನಿಲುವುಗನ್ನಡಿಗಳೂ, ಬಣ್ಣ ಬಣ್ಣದ ಅರಿವೆಯ ಥಾನುಗಳೂ, ಮಾಯಾಲೋಕದಿಂದ ಪ್ರತ್ಯಕ್ಷವಾದಂತೆ ಕಂಡವು. ಇಳಿಬಿಟ್ಟ ಸೀರೆಗಳಲ್ಲಿ ಅಪ್ಸರೆಯರು ಅಂತರಿಕ್ಷದಲ್ಲಿ ತೇಲಾಡುತ್ತಿದ್ದಂತೆ ತೋರಿದರು. ಅವಳ ಕಣ್ಣುಗಳು ಹಾಲಿನ ಪ್ರದಕ್ಷಿಣೆ ಹಾಕಿ ಕೌಂಟ



ಸರ್ವರಿಗೂ ದೀಪಾವಳಿಯ ಹಾರ್ದಿಕ ಶುಭಾಶಯಗಳು !!



ಕಿನ ಬಳಿ ಬಂದಾಗ ತಟ್ಟನೆ ನಿಂತಳು. ಗಾಬರಿಯಿಂದ ಮುಂಗೈ ನೋಡಿಕೊಂಡಳು. ಹೌದು, ಇಪತ್ತು ಮತ್ತೆ ಹತ್ತು ನಿಮಿಷ ಲೇಟಾಗಿತ್ತು. ಹೀಗಾಗುತ್ತಿರುವುದು ಇದು ಮೂರನೆಯ ಸಲವೆಂಬುದನ್ನು ಮಾಲೀಕನ ದೃಷ್ಟಿ ತನಗೆ ಸೂಚನೆ ಕೊಡುವಂತಿತ್ತು.

ಅಂಗಡಿಗೆ ಬರುವಾಗ ಮೂರು ಸಲ ತಡವಾಗಿ ಬಂದರೆ ಆ ತಿಂಗಳ ಸಂಬಳದಲ್ಲಿ ಐದು ರೂಪಾಯಿ ಖೋತಾ ಎನ್ನುವುದನ್ನು ಅನಿತಾ ಮೊದಲೇ ತಿಳಿಸಿದ್ದರಿಂದಲೇ ಸುಜಾತಾ ಗಾಬರಿಯಾದದ್ದು. ಬರುವ ನೂರೈವತ್ತರಲ್ಲಿ ಐದು ರೂಪಾಯಿ ಕಡಿಮೆಯಾಗುವದು ಅವಳ ಮಟ್ಟಿಗೆ ಸಂತೋಷದ ಮಾತೇನಲ್ಲ. ಅನಿತಾಳ ಮಾತು ಬೇರೆ. ಅವಳ ತಂದೆ, ಅಣ್ಣ ಸಂಪಾದಿಸುವವರಿದ್ದೂ ಕೇವಲ ತನ್ನ ಶೋಕೀಗಾಗಿ ಪಾಕೆಟ್ ಮನಿಗಾಗಿ ಬಟ್ಟೆ ಅಂಗಡಿಯಲ್ಲಿ ಸೇಲ್ಸ ಗರ್ಲ್ ಆಗಿರುವ ಸಿಂಧಿ ಹುಡುಗಿಯವಳು. ನೋಡುವವರ ಕಣ್ಣಿಗೆ ಎದ್ದು ಕಾಣುವಂತೆ ಆಕರ್ಷಕ ಉಡುಪು ಧರಿಸಿ, ಗಿರಾಕಿಗಳೊಡನೆ ಸಲಿಗೆಯಿಂದ ಚಾಲಾಕಿನಿಂದ ಮಾತನಾಡಿ ಹೆಚ್ಚು ವ್ಯಾಪಾರ ಗಿಟ್ಟಿಸುತ್ತ ತನ್ನ ವೃತ್ತಿಯಲ್ಲಿ ಪಳಗಿದ್ದಳು ಅನಿತಾ. ಮಾಲಿಕನೊಡನೆಯೂ ಕುಲು ಕುಲು ನಗುತ್ತ, ಮೈ ಕುಲುಕಿಸುತ್ತ ಮಾತನಾಡುವ ಅನಿತಾಳನ್ನು ಕಂಡರೆ ಸುಜಾತಾಳಿಗೆ ಅಷ್ಟಕ್ಕಷ್ಟೇ. ಅದೇಕೆ ಒಂದು ಬಗೆಯ ತಿರಸ್ಕಾರವೂ ಮೂಡಿತ್ತು. ಆದರೆ ಅಂಗಡಿ ಕೆಲಸಕ್ಕೆ ಹಾಜರಾದ ದಿನವೇ ಮಾಲೀಕ ಹೇಳಿಬಿಟ್ಟಿದ್ದ.

"ಅನಿತಾ ನಮ್ಮ ಅಂಗಡೀಗೆ ಬಂದು ಬಹಾಳ ದಿನಸಾತು. ಆಕೀ ಹಾಂಗ ಕೆಲಸಾ ಮಾಡೂದು ನೀನೂ ಕಲೀಬೇಕು. ಗಿರಾಕಿಗಳನ್ನ ಚಂದಾಗಿ ಮಾತಾಡಿಸಿ ಚುರುಕಾಗಿ ವ್ಯಾಪಾರ ಮಾಡಬೇಕು. ಒಂದಕ್ಕೆರಡು ಮಾಲು ಖರ್ಚು ಮಾಡಬೇಕು. ಅಂದರ ನಮಗ ಲಾಭ ಆಗ್ತದ. ನೀನೂ ಛೊಲೋ ಕೆಲಸಾ ಮಾಡಿದರ ಮೂರು ತಿಂಗಳಿಗೊಮ್ಮೆ ೧೦ ರೂ. ಪಗಾರಾ ಏರಸ್ತೇನಿ" ಎಂದು.

ಅಂದ ಮೇಲೆ ಅನಿತಾಳ ಮೊರೆಹೋಗಲೇಬೇಕು ಎನ್ನಿಸಿತ್ತು ಸುಜಾತಾಳಿಗೆ. ಕೂಡಿ ಕೆಲಸ ಮಾಡುವ ಹೆಣ್ಣುಮಕ್ಕಳೆಂದರೆ ತಾವಿಬ್ಬರೇ. ಏನು ತಿಳಿಯಬೇಕಾದರೂ ಅವಳನ್ನೇ ಕೇಳಬೇಕು. ಮೊದಲು ಅನಿತಾ ಸೋಗು ಮಾಡುವ ಬಣ್ಣದ ಗೊಂಬೆ ಎಂದು ಕೊಂಡಿದ್ದಳು ತಾನು. ಆದರೆ ಅವಳ ಸ್ವಭಾವ ತಿಳಿಯುತ್ತ ಹೋದಂತೆ ತನ್ನ ಬಗ್ಗೆ ಅವಳಿಗಿದ್ದ ಪ್ರೀತಿ. ಅನುಕಂಪ ಹೆಚ್ಚುತ್ತ ಹೋದ ಹಾಗೆ ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಸಮೀಪದ ಒಡನಾಟದಿಂದಲೇ ಮನುಷ್ಯ ಸ್ವಭಾವ ತಿಳಿಯುವದು ಸಾಧ್ಯವೇ ಹೊರತು ಬಾಹ್ಯ ರೂಪದಿಂದಲ್ಲ ಎನ್ನುವ ಸತ್ಯ ತನಗೆ ಈಗ ತಿಳಿದಿದೆ. ಮಲ-ತಂಗಿಯರಲ್ಲಿ ಪ್ರೀತಿಯ ಗಂಧ ಕಾಣದ ತನಗೆ-ಬಹುಶಃ ಹಾಗೆ ಅವರು ತನ್ನನ್ನು ದ್ವೇಷಿಸುವುದಕ್ಕೆ ಚಿಕ್ಕಮ್ಮನೇ ಕಾರಣವಿರಬಹುದು. ಅನಿತಾ ಅಕ್ಕನಂತೆ ಕಂಡಿದ್ದಳು.........

ತಡವರಿಸುತ್ತ ಬೇಗ ಬೇಗ ಒಳಗಿನ ಕೋಣೆಗೆ ಹೋಗಿ ತನ್ನ ಕೊಡೆ, ಪರ್ಸು ಎಲ್ಲ ಒಂದೆಡೆ ಇಟ್ಟು ಮುಖ ತೊಳೆದು, ಪೌಡರ ಲೇಪಿಸಿ, ತುಟಿಗಳಿಗೆ ಕಂಡೂ ಕಾಣದಂತೆ ರಂಗು ಬಳಿದು-ಇದೆಲ್ಲ ಅನಿತಾನೇ ಕಲಿಸಿದ್ದು, ಬಿಸಿಲಿನಿಂದ ಬರಲಿ, ಮಳೆಯಲ್ಲಿ ತೋಯಿಸಿಕೊಂಡಿರಲಿ, ಮನೆಯಿಂದ ಅಂಗಡಿಗೆ ಬಂದ ಮೇಲೆ ಮತ್ತೊಮ್ಮೆ ಸಿಂಗಾರವಾಗಲೇಬೇಕು-ಅಲ್ಲಿಯೇ ಕಪಾಟಿನಲ್ಲಿ ಮಡಿಸಿಟ್ಟ ನಾಜೂಕಿನ ಸೀರೆಯೊಂದನ್ನು ತೆಗೆದು ಅದನ್ನೂ ಸಂಬಳದಲ್ಲಿ ಹತ್ತು ರೂಪಾಯಿಯಂತೆ ಪ್ರತಿ ತಿಂಗಳೂ ಕೊಡುವ ಕರಾರಿನ-ಮೇಲೆ ಅನಿತಾನೇ ಕೊಡಿಸಿದ್ದಳು. ನಿರಿಗೆ ಹಿಡಿದು, ನೀಟಾಗಿ ಉಟ್ಟು, ಪಿನ್ನು ಚುಚ್ಚಿ ಭುಜದ ಮೇಲಿನ ಸೆರಗು ಹಾಗೆಯೇ ಇಳಿಬಿಟ್ಟು ಮತ್ತೆ ಮತ್ತೆ ಕನ್ನಡಿ ನೋಡಿಕೊಂಡು ಹೊರ ಬಂದಾಗ-

ಮಾಲೀಕ ಫೋನಿನಲ್ಲಿ ಮಾತನಾಡುತ್ತಿದ್ದುದರಿಂದ ಅವನ ಮುಖಭಾವ ಸರಿಯಾಗಿ ಕಾಣದೆ ಕಳವಳಪಟ್ಟು ಅನಿತಾಳ ಬಳಿ ಹೋದಳು.

"ಸುಜೀ ಬಸ್ಸು ಸಿಗಲಿಲ್ಲೇನು?" ಅನಿತಾ ಅರಿವೆಯ ಥಾನು ಕಪಾಟಿನಿಂದ ಎತ್ತಿಕೊಳ್ಳುತ್ತ ಪಿಸುಗುಟ್ಟಿದಳು.

"ಬಸ್ಸಿನ್ಯಾಗs ಬಂದೆ. ಆದರೂ ತಡಾ ಆತು ನೋಡು" ಸುಜಾತಾಳ ಗಾಬರಿಯ ದನಿಯಿಂದ ಅವಳ ಸಂಕಟವನ್ನು ಅರ್ಥ ಮಾಡಿಕೊಂಡ ಅನಿತಾ ಅವಳ ಕೈ ಅದುಮಿ ಹೇಳಿದಳು. "Don't worry Be cheerful. ನಗನಗ್ತಾ ಮಾತಾಡಿ, ಚೆನ್ನಾಗಿ ವ್ಯಾಪಾರ ಮಾಡು. ಮಾಲು ಖರ್ಚಾದರೆ ಸಾಕು ಮಾಲೀಕ ಖುಷಿಯಾಗ್ತಾನ."

ನಗಬೇಕು. ಹೌದು!! ಒಳಗೊಳಗೇ ಜೀವ ತಳಮಳಿಸ್ತಾ ಇದ್ದರೂ ಹೊರಗೆ ನಗುವಿನ ಮುಖವಾಡ ಹಾಕಬೇಕು. ಹೀಗೆ ಜೋಲು ಮೋರೆ ಹಾಕಿಕೊಂಡು ನಿಂತಿದ್ದರೆ ತನ್ನನ್ನು ಯಾರು ನೋಡ್ತಾರೆ? ಮಾತಾಡಿಸ್ತಾರೆ? ಛೇ ಛೇ ಹೀಗಲ್ಲ. ನಗುವನ್ನು ಕಣ್ಣುಗಳಲ್ಲಿ, ತುಟಿಗಳಲ್ಲಿ ತುಂಬಿಕೊಂಡು ಉತ್ಸಾಹದಿಂದ ತಾನೇ ಅಂಗಡಿಗೆ ಬಂದವರನ್ನು "ಬರ್ರಿ ಒಳಗ ಬರ್ರಿ" ಎಂದು ಆದರಿಸಬೇಕು. "ತಮಗೆ ಏನು ಬೇಕು?" ಅಂತ ವಿಚಾರಿಸಬೇಕು.

"ಅಂಗಿಯ ಅರಿವೆ? ಲಂಗದ ಬಟ್ಟೆ? ಬ್ಲೌಜ ಪೀಸ, ಚೋಲಿ ಪೀಸ. ಕೊನೆಗೆ ಕಟ್‌ಪೀಸ? ಸೀರೆಗಳಲ್ಲಿ ಯಾವದು ಕೊಡಲಿ? ಹ್ಯಾಂಡಲೂಮ ಸೀರೇನಾ ಫುಲ್‌ವಾಯಿಲ್, ಹಾಫ್‌ಫುಲ್‌ವಾಯಿಲ್; ಬಾಂಬೆ ಡಾಯಿಂಗ? ಅಥವಾ ಗಾರ್ಡನ್ ವಾಯಿಲ್, ವೂಲಿ, ಚಿನಾನ್ ಯಾವದು ಬೇಕು? ಬೇಕಾದಷ್ಟು ಡಿಝೈಯಿನ್ಸ, ಕಲರ್ಸ ಎಲ್ಲಾ ತರದ್ದೂ ಸಿಗ್ತದ. ನಿಮಗ ಬೇಕಾದ್ದು ಆರಿಸಿಕೊಳ್ರಿ. ಹಳೀ ತರದ್ದು ಬೇಕಾದರ ಇಳಕಲ್. ಶಾಪುರ ಸೀರೇನೂ ಅವ. ಕಾಂಜೀವರಂ, ಧರ್ಮಾವರಂ, ಮೊಳಕಾಲ್ಮೂರು ಸೀರೆ ಭಾಳ ಚೆನ್ನಾಗಿರ್ತಾವ. ರೊಕ್ಕ ಹೆಚ್ಚಾದರೂ ಅಡ್ಡಿಯಿಲ್ಲ. ತಾಳಿಕೆ ಬಾಳಿಕೆ ಬರ್ತಾವ. ಹತ್ತು ವರ್ಷ ಒಗದು ಉಟ್ಟರೂ ಬಣ್ಣ ಕಡಿಮಿ ಆಗೂದಿಲ್ಲ. ಹರಿಯೂದಿಲ್ಲ. ನಮ್ಮ ಅಂಗಡಿ ಮಾಲು ಅಂತಿಂಥಾವ್ದಲ್ಲ. ಬಹಾಳ ಖಾತ್ರೀದು. ಒಮ್ಮೆ ತೊಗೊಂಡು ನೋಡಿದರ ನಿಮಗೂ ಗೊತ್ತಾಗ್ತದ. ಕಲರ್ ಹೋದರ ವಾಪಸ್ ತೊಗೊಂಡು ಬರ್ರಿ...

ಹೀಗೇ ನಾನಾ ತರದ ಮಾತುಗಳನ್ನು ಖರ್ಚು ಮಾಡಿದಾಗ ಎಲ್ಲವನ್ನೂ ನೋಡಿ, ರೇಟು ಕೇಳಿ, ಬಿಚ್ಚಿಸಿ ನೋಡಿ "ಅಯ್ಯ ಸೀರೆಗೆ ರೊಕ್ಕ ಭಾಳಾತು" ಎಂದೋ "ನಮಗ ಬೇಕಾದಂಥ ಡಿಝಾಯಿನ್ ಇಲ್ಲಾ, ಬಣ್ಣ ಇಲ್ಲಾ" ಅಥವಾ "ನಮ್ಮ ಮನಸ್ಸಿಗೆ ಬರಲಿಲ್ಲಾ" ಎಂದೋ ಏನೂ ಕೊಳ್ಳದೇ ಹೋದವರು ಎಷ್ಟೋ ಜನ. ಚಿಕ್ಕವರು, ದೊಡ್ಡವರು, ಹಳ್ಳಿಯ ಹೆಂಗಸರು, ಕಾಲೇಜು ತರುಣಿಯರು, ಮುದುಕರು. ಗೃಹಸ್ಥರು, ಬಂದು ಹೋಗುವವರು ಅಸಂಖ್ಯಾತರು. ಇನ್ನು ಯುವಕರು ವ್ಯಾಪಾರ ಮಾಡಲಿ ಅಥವಾ ಬಿಡಲಿ ಯಾವದೋ ವಸ್ತು ಪ್ರದರ್ಶನದಲ್ಲಿ ಹೊಕ್ಕಂತೆ ಹಾಲಿನ ತುಂಬ ತಿರುಗಾಡಿ, ಬಾಗಿಲ ಹತ್ತಿರ ಕಣ್ಣು ಕುಕ್ಕುವ ಸೀರೆಗಳನ್ನುಟ್ಟು, ಎದೆಯೇರಿಸಿ ನಿಂತ ಬಣ್ಣದ ಬೊಂಬೆಗಳನ್ನು ಅಂಗಡಿಯ ಒಳಗೆ ನಿಂತ ಎರಡು ಸಜೀವ ಬೊಂಬೆಗಳ ಚೆಲುವನ್ನೂ, ದೇಹದ ಉಬ್ಬು-ತಗ್ಗುಗಳನ್ನು ಕಣ್‌ದಣಿಯೆ ನೋಡಿ, ಸುಮ್ಮ ಸುಮ್ಮನೆ ಅದರ ಬೆಲೆ, ಇದರ ಕ್ವಾಲಿಟಿ ವಿಚಾರಿಸಿದಂತೆ ಮಾಡಿ ನಿಲುವುಗನ್ನಡಿಗಳಲ್ಲಿ ತಮ್ಮ ಪ್ರತಿ ರೂಪಗಳನ್ನು ನೋಡಿಕೊಳ್ಳುತ್ತ, ಭುಜ ಹಾರಿಸುತ್ತ, ಕ್ರಾಪ್ ತಿದ್ದಿಕೊಳ್ಳುತ್ತ ಹೊರಗೆ ಹೊರಟು ಬಿಡುವವರೇ ಬಹಳಷ್ಟು ಜನ.

ಗಿರಾಕಿಗಳಲ್ಲಿ ಹೆಚ್ಚಿನವರು ಕೌಂಟರಿನತ್ತ ಹೋಗದೆ ಹೊರಗೇ ಹೊರಟಾಗ ಮಾಲೀಕನ ಮುಖ ಕೆಂಪಾಗುವದು, ಕುಳಿತ ಕುರ್ಚಿಯಲ್ಲಿಯೇ ಅತ್ತಿತ್ತ ಮಿಸುಕಾಡುವನು, ಗೊಣಗುಟ್ಟುವನು, ಥಾನುಗಳನ್ನೆಲ್ಲ ಸುತ್ತಿ, ಮಡಿಸಿ, ಮತ್ತೆ ಕಪಾಟಿನಲ್ಲಿಟ್ಟು, ಸೀರೆಗಳ ಮಡಿಕೆ ಹಾಕಿ, ಒಂದರ ಮೇಲೊಂದು ಪೇರಿಸಿ, ಅವುಗಳ ಜಾಗಕ್ಕೆ ಮುಟ್ಟಿಸುವಾಗ, ಮತ್ತೆ ಮಗುದೊಬ್ಬ ಗಿರಾಕಿ ಹಾಜರು. ಇಷ್ಟು ಹೊತ್ತಿನ ವ್ಯಾಯಾಮದಿಂದ ಮೈ ಕೈ ನೋವಾಗಿ, ನಿಂತು ನಿಂತು ಕಾಲು ಸೋಲುತ್ತಿರುವಾಗಲೂ ಶರೀರದ ಆಯಾಸವನ್ನೇನೂ ತೋರಿಸಿಕೊಳ್ಳದೆ ತುಟಿಗಳಿಗೆ ಅಂಟಿಸಿಕೊಂಡ ನಗುವನ್ನು ಬಿಚ್ಚುತ್ತಾ ಮತ್ತೆ...

"ಓ ಬರ್ರಿ, ಏನು ಬೇಕು ನಿಮಗ?" ಎನ್ನುವ ನಾಟಕ ಪ್ರಾರಂಭ.

ತಾನು ಅಂಗಡಿಗೆ ಬಂದು ಎರಡು ತಾಸು ಕಳೆದರೂ ಏನೂ ವ್ಯಾಪಾರವಾಗದಿದ್ದುದಕ್ಕೆ ಸುಜಾತಾ ಭಯದಿಂದಿದ್ದಳು. ಬಹಳ ಮಾತನಾಡಿದ್ದರಿಂದ ಗಾಬರಿಯಿಂದ ಗಂಟಲು ಒಣಗುತ್ತಿತ್ತು. ವಿದ್ಯುಚ್ಛಕ್ತಿಯ ಅಭಾವದಿಂದ ಫ್ಯಾನೂ ಯಾವತ್ತೂ ತಿರುಗಿಸುವಂತಿವಂತಿರಲಿಲ್ಲ, ಮೈ ಬೆವರುತ್ತಿತ್ತು. ಶೂನ್ಯದೃಷ್ಟಿಯಿಂದ ಅಂಗಡಿಯ ಮೆಟ್ಟಿಲುಗಳನ್ನೇ ದಿಟ್ಟಿಸುತ್ತಿದ್ದಳು. ಅನಿತಾ ಅವಳ ಭುಜ ಒತ್ತಿ ಒಳಗಿನ ಕೋಣೆಗೆ ಬರಲು ಸನ್ನೆ ಮಾಡಿದಾಗ ಅವಳನ್ನು ಹಿಂಬಾಲಿಸಿದಳು. ಚಹದ ಕಪ್ಪನ್ನೆತ್ತಿಕೊಡುತ್ತ ಅನಿತಾ ಕೇಳಿದಳು.

"ನಿನ್ನೆ ಸಿನಿಮಾಕ್ಕ ಹೋಗಿದ್ದೇನು?" ಸುಜಾತಾ ಇಲ್ಲವೆಂದು ತಲೆ ಅಡಿಸಿದಳು.

"ಯಾಕ ಹೋಗಲಿಲ್ಲಾ. ಎಷ್ಟ ಛಂದ ಅದ ಅಂತ ನಾ ಹೇಳಿದ್ದಿಲ್ಲಾ?"

"ಚಿಕ್ಕಮ್ಮ ಒಪ್ಪಲಿಲ್ಲಾ. ಇಲ್ಲದ ಚೈನೀ ಕಲೀ ಬ್ಯಾಡಾ ಅಂದ್ಲು."

"ನನ್ನ ರೊಕ್ಕದಾಗ ಹೋಗ್ತೇನಿ ಅಂತ ನೀ ಹೇಳಬೇಕು"

"ನಾ ಹೇಳಿದೆ. ಆದರ ನಾ ದುಡದದ್ದು ನನ್ನ ಹೊಟ್ಟೆಗೇ ಸಾಲೂದಿಲ್ಲಂತೆ."

"ನೀನು ಪಗಾರ ಎಲ್ಲಾ ಒಯ್ದು ಆಕೀ ಕೈಯಾಗ ಕೊಡತೀಯಲ್ಲಾ"

"ಹೌದು, ಬಸ್ಸಿಗೆ, ಚಹಾಕ್ಕ, ಸೀರಿ ಕಂತಿನ ರೊಕ್ಕಾ ಬಿಟ್ಟು ಉಳಿದದ್ದೆಲ್ಲಾ ಕೊಡ್ತೇನಿ."

"ಹೌದ್ಹೌದು ನನಗೂ ಗೊತ್ತದ. ನಾಲ್ಕ ಸಾರೆ ಬಂದರ ಬಸ್ಸಿನ ಚಾರ್ಜ ಭಾಳ ಆಗ್ತದ ಅಂತ್ಹೇಳಿ ಎರಡ ಸಾರೆ ನಡಕೊಂs ಅಂಗಡೀಗೆ ಬರ್ತೇದಿ."

"ನಾ ಎಷ್ಟು ಕಷ್ಟಪಟ್ಟರೂ ಬೆಲೀನ ಇಲ್ಲಾ ಅನಿತಾ. ನಾ ಭಾಳ ದುರ್ದೈವಿ ...... ಹುಟ್ಟಿದ ಕೂಡಲೆ ಅವ್ವನ್ನ ಕಳಕೊಂಡೆ. ಹೋದ

ವರ್ಷ ಅಪ್ಪನ್ನೂ ಕಳಕೊಂಡೆ. ನನ್ನವರು ಯಾರೂ ಇಲ್ಲ ನನಗ. " ಸುಜಾತಾ ಬಿಕ್ಕಿದಳು. ಅನಿತಾ ಸ್ನೇಹದಿಂದ ಅವಳ ಭುಜದ ಸುತ್ತ ಕೈ ಹಾಕಿ ಕನ್ನಡಿಯ ಮುಂದೆ ನಿಲ್ಲಿಸಿ,

"ನೋಡು ಅಲ್ಲಿ. ಯಾರೂ ಇಲ್ಲಾ ಅಂತ ಯಾಕ ಅಂತೀ?" ಎಂದಾಗ ತಲೆಯೆತ್ತಿದ ಸುಜಾತಾಳ ಕೆನ್ನೆಗೆ ತುಟಿ ಸೋಂಕಿಸಿ ಕಿಸಕ್ಕನೆ ನಕ್ಕು,

"ನಾಚಬ್ಯಾಡಾ. ಹುಚ್ಚೀ ನಿನ್ನಷ್ಟು ಛಂದ ಇದ್ದರ ನಾನು ಈ ಜಗತ್ತs ಗೆಲ್ಲತಿದ್ದೆ. ಗೊತ್ತದೇನು?"

"ಹೋಗs ಹುಚ್ಚರಾಂಗ ಮಾತಾಡಬ್ಯಾಡಾ"

"ಹುಚ್ಚಿ ನಾ ಅಲ್ಲ ನೀನು. Poor fellow. ನೀನು ಎಷ್ಟು ಆಕರ್ಷಕ ಅದೀ. ನಿನ್ನ ಕಣ್ಣಿನ ಹೊಳಪು ಮುಂಗುರುಳು, ತುಟಿ, ಮೂಗು ಎಲ್ಲಾ ಒಂದಕ್ಕಿಂತಾ ಒಂದು ಛಂದ ಅದಾವ ನಿನಗ ಅದರ ಮಹತ್ವ ಗೊತ್ತಿಲ್ಲ."

"ಥೂ ನಿನ ಮತ್ತ ಸುರು ಮಾಡಿದಿ ನಿನ್ನ ಲೆಕ್ಚರು. ನಡೀ ಇನ್ನ. ಹತ್ತು ನಿಮಿಷ ಆಗಿ ಹೋತು. ಹೊರಗ ಹೋಗೂಣು" ಚಹದ ಕಪ್ಪನ್ನು ಮಾಣಿಯ ಕೈಯಲ್ಲಿ ಇಟ್ಟು ನಿರಿಗೆ ಸರಿ ಮಾಡಿಕೊಂಡಳು ಸುಜಾತಾ.

"ಉಹೂಂ, ಹಾಂಗಲ್ಲ. ನಿಲ್ಲು" ಎಂದು ಮತ್ತೆ ಅವಳ ಕುರುಳು ತಿದ್ದಿ ಸ್ವಲ್ಪ ಪೌಡರ ಸವರಿ, ನೀಳವಾದ ಜಡೆ ಎಳೆದು ಎದೆಯ ಮೇಲಿಂದ ಮುಂದೆ ಹಾಕಿ "ನಡೀ ಇನ್ನ" ಎಂದಳು.

ಇಬ್ಬರೂ ತಮ್ಮ ಸ್ಥಾನಕ್ಕೆ ಬಂದಾಗ ಅನಿತಾ ಏನೋ ಗುಟ್ಟು ಹೇಳುವವಳಂತೆ "ಆ ಡಾಲೀಗೆ ಉಡಿಸಿದಂಥಾ ಭರ್ಜರಿ ಸೀರೆ ನೀನು ಉಟ್ಟುಕೊಂಡರ ಕಾಜಿನ ಕಪಾಟಿನಾಗs ನಿನ್ನ ನಿಲ್ಲಿಸಬೇಕಾಗ್ತದ ನೋಡು" ಎಂದು ಕಿವಿಯಲ್ಲಿ ಪಿಸುಗುಟ್ಟಿದಳು.

"ಹುಶ್" ಎಂದು ಹುಸಿಮುನಿಸು ತೋರಿದ ಸುಜಾತಾ ಅವಳನ್ನು ತಳ್ಳಿ ಇತ್ತ ತಿರುಗಿದಳು. ಯೋಚನೆಗಳ ಸರಮಾಲೆ ಅವಳನ್ನು ಸುತ್ತುವರಿಯತೊಡಗಿತು. ಅನಿತಾ ಹೇಳೋವಷ್ಟು ತಾನು ಚೆಲುವೆಯಲ್ಲ. ಅವಳು ಇದ್ದುದರಲ್ಲಿಯೇ ಉಪ್ಪು, ಖಾರ, ಬೆರೆಸಿ, ವರ್ಣಿಸಿ ಹೇಳಿ ತನ್ನನ್ನೂ ಸಂತೋಷಗೊಳಿಸ್ತಾಳೆ. ತನ್ನ ಮರುಳುಗಾಡಿನಂಥ ಜೀವನದಲ್ಲೊಂದು ಓಯಸಿಸ್ ಆಕೆ. ಎಷ್ಟು ಉತ್ಸಾಹ, ನಗು ತುಂಬಿ ತುಳುಕುತ್ತದೆ. ಚೇತನದ ಚಿಲುಮೆ. ಅವಳು ಹೀಗಿರುವದು ಮನೆಯ ಸಂತೃಪ್ತಿಯ ವಾತಾವರಣದಿಂದ ಮಾತ್ರವಲ್ಲ, ಅದು ಅವಳ ಗುಣಧರ್ಮವೂ ಹೌದು. ಅವಳ ಈ ಗುಣ ತುಂಬ ಪ್ರಬಲವಾಗಿರೋದರಿಂದ ಅದು ಸುತ್ತ ಮುತ್ತಲಿನ ಜನರ ಮೇಲೂ ಪರಿಣಾಮ ಬೀರುತ್ತದೆ. ಅವಳ ಹತ್ತಿರ ಬಂದವರಾರೂ ನಗದೇ ಹೋಗುವಂತಿಲ್ಲ. ಹೊಸದಾಗಿ ಮದುವೆಯಾದ ದಂಪತಿಗಳು ತಮ್ಮ ಅಂಗಡಿಗೆ ಬಂದಾಗ ಅವರ ಜೊತೆಗೆ ತೀರ ಪರಿಚಿತಳಂತೆ ಆತ್ಮೀಯಳಾಗಿ, ತಮಾಷೆಯಾಗಿ, ಮಾತನಾಡಿ. ಕೇವಲ ಬ್ಲೌಜ ಪೀಸ ಕೊಳ್ಳಲು ಬಂದವರನ್ನು ಸೀರೆ, ಬೆಡ್‌ಶೀಟು, ಟವೆಲ್ ಕೊಳ್ಳುವಂತೆ ಮಾಡಿದ್ದು ನೋಡಿ, ಬೆರಗುಗೊಂಡಿದ್ದಳು. ತಾನು ಮಾಡುವದು ಕೇವಲ ಮಾರುವ ಉದ್ಯೋಗ. ಮಾಲು ಮಾರಾಟವಾಗದಿದ್ದರೂ ತನಗೆ ಸಂಬಳ ಬಂದೇ ಬರುತ್ತದೆ ಎನ್ನುವ ಉದಾಸೀನ ಮನೋಭಾವನೆ ಅವಳಲ್ಲಿಲ್ಲ. ಮಾಲಕನಿಗೆ ಲಾಭ ಮಾಡಿಕೊಡುವದು ತನ್ನ ಕರ್ತವ್ಯ ಎಂದು ತಿಳಿದು ಅದನ್ನು ಚೊಕ್ಕವಾಗಿ ಪಾಲಿಸುತ್ತಾಳೆ. ಸಹೋದ್ಯೋಗಿಗಳೊಡನೆ, ಅಪರಿಚಿತ ಪುರುಷರೊಡನೆ ಮನಸಸ್ಸು ಬಿಚ್ಚಿ ಮಾತನಾಡಿ ಸ್ನೇಹಿತೆಯಂತೆ ನಡೆದುಕೊಳ್ಳುತ್ತಾಳೆ. ಆ ಸ್ನೇಹಕ್ಕೂ ಒಂದು ರೇಖೆ ಇರುತ್ತದೆ. ಅದನ್ನು ದಾಟಿ ಮುಂದೆ ಹೋಗುವುದಿಲ್ಲ ಎನ್ನುವದು ತಿಳಿದಾಗಲೇ ಅನಿತಾಳ ಬಗ್ಗೆ ತನಗೆ ಪ್ರೀತಿ ಗೌರವ ಹೆಚ್ಚಾಗಿತ್ತು.

ತನ್ನ ಸ್ತ್ರೀತ್ವದ ಗೌರವವನ್ನು ಕಾಯ್ದುಕೊಂಡೂ ಎಲ್ಲರೊಡನೆ ಒಂದು ಮಿತಿಯಲ್ಲಿ ಪ್ರೀತಿಯಿಂದ, ಸಲುಗೆಯಿಂದ ಇರುವದು ಸಾಧ್ಯವಿದೆ ಎನ್ನುವದಕ್ಕೆ ಅನಿತಾ ತನಗೆ ಮಾದರಿಯಾಗಿ ತೋರಿದ್ದಳು. ಅಂದ ಮೇಲೆ ತಾನೇಕೆ ತನ್ನ ಗಾಂಭೀರ್ಯದ ಕೋಟೆಯನ್ನು ಭೇದಿಸಿ ಹೊರಗೆ ಬಯಲಿಗೆ ಬಂದು ಜೀವನದ ಚೆಲುವನ್ನು ಸಿಹಿಯನ್ನೂ ಸವಿಯಬಾರದು? ಮನಸ್ಸು ಮಾಡಿದರೆ ತಾನೂ ಅನಿತಾಳ ಹಾಗಿರಲು ಸಾಧ್ಯ. ಹಾಗಾದರೆ ಈ ಗಾಬರಿ, ಕಳವಳ ಇಲ್ಲವಾಗಬಹುದು ಅಥವಾ ಸ್ವಲ್ಪ ಕಡಿಮೆಯಾಗಬಹುದು. ಕೊನೆಯ ಪಕ್ಷ ಅಂಗಡಿಯಲ್ಲಿ ಇರುವಷ್ಟು ಹೊತ್ತಾದರೂ ಮನೆಯ ಜನರನ್ನೂ ಅಲ್ಲಿಯ ಬೇಸರದ ವಾತಾವರಣವನ್ನೂ ತನ್ನ ಭವಿಷ್ಯದ ಸಮಸ್ಯೆಗಳನ್ನೂ ಮರೆತು ಲವಲವಿಕೆಯಿಂದ ಇರಬಹುದು.

ಕೋರ್ಟಿನಲಿ

ಕೋರ್ಟಿನಲಿ ವ್ಯಾಜ್ಯ ನಡೆಯಿತು
ವರುಷ ಹತ್ತು,
ಅಷ್ಟರಲಿ ಪ್ರತಿವಾದಿ ಹೋಗಿದ್ದ ಸತ್ತು.
ಅವನ ಮಕ್ಕಳ ಕಾಲದಲಿ ಫೈಸಲಾಗಿ
ಇಬ್ಬರೂ ಕುಡಿಯಬೇಕಾಯ್ತಂತೆ ರಾಗಿ.

-ದಿನಕರ ದೇಸಾಯಿ

ಹೌದು, ತಾನು ಯಾಕೆ ಇಂದಿನಿಂದಲೇ ಅಷ್ಟೇ ಅಲ್ಲ ಈಗಲೇ ಪ್ರಯತ್ನಿಸಬಾರದು? ಎಂದು ಮನಸ್ಸಿನಲ್ಲೇ ಯೋಚಿಸಿಕೊಳ್ಳುತ್ತ, ನಗುತ್ತ, ಅಂಗಡಿಯೊಳಗೆ ಬಂದ ದಂಪತಿಗಳನ್ನು ಸ್ವಾಗತಿಸಿದಳು. ಅವರೊಡನೆ ಏಳೆಂಟು ವರುಷದ ಹುಡುಗಿಯೊಂದಿತ್ತು. ಅವಳಿಗಾಗಿ ಲಂಗದ ಅರಿವೆ ತೆಗೆಯಲು ಹೇಳಿದರು. ಬೇರೆ ಬೇರೆ ವಿಧದ ಬಣ್ಣದ ಅರಿವೆಯ ಥಾನುಗಳನ್ನು ಅವರ ಮುಂದೆ ಹರಡಿದಾಗ ಪುಟ್ಟ ಹುಡುಗಿ-

"ಅಪ್ಪಾs ನನಗ ಇದs ಇರಲಿ" ಎಂದಳು ಕೆಂಪು ಮಿಶ್ರಿತ ಹಳದಿಯ ವಾಶ್ ಆ್ಯಂಡ ವೇರ ಅರಿವೆ ತೋರಿಸುತ್ತ.

"ಹ್ಯಾಂಗ್ರೀ ಇದು?"

"ಒಂದು ಮೀಟರಿಗೆ ಎಂಟು ರೂಪಾಯಿ ಇಪ್ಪತ್ತು ಪೈಸಾ. ಈಕಿಗೆ ಎರಡು ಮೀಟರು ಸಾಕು ನೋಡ್ರಿ" ಎಂದಳು ಸುಜಾತಾ.

"ತುಟ್ಟಿ ಭಾಳ ಆಗ್ತದರೀ. ಬ್ಯಾರೆ ಯಾವ್ದರೆ ನೋಡರಿ!" ತಾಯಿ ಕಡ್ಡಿ ಮುರಿದಂತೆ ನಿರ್ಧಾರದಿಂದ ನುಡಿದಳು. ಹುಡುಗಿ ತಾಯಿಯತ್ತ ಹೊರಳಿ ಕೂಡ ನೋಡದೇ ಅಪ್ಪನಿಗೇ ಜೋತು ಬಿದ್ದಳು ತನಗೆ ಅದೇ ಬೇಕು ಎನ್ನುತ್ತ. ತಂದೆ ಹೆಂಡತಿಯ ಮುಖ ನೋಡುತ್ತ ವಿಚಾರದಲ್ಲಿ ಬಿದ್ದಿದ್ದರು.

"ರೊಕ್ಕ ಭಾಳ ಅನಿಸಿದ್ರೂ ಈ ಅರಿವಿ ತಾಳಿಕಿ ಬರ್ತದ. ನೋಡಲಿಕ್ಕೆ ಛಂದನೂ ಅದ. ವರ್ಷದ ತನಕಾ ಒಗದ ಉಟ್ಟರೂ ಹರಿಯೂದಿಲ್ಲ. ಚೀಪ ಅರಿವಿ ಆರಿಸಿದ್ರ ಲಗೂನ ಹರೀತಾವ. ಪಾಪ ಮಗಳು ಆಸೇ ಮಾಡತಾಳ ಇದನ್ನs ತೊಗೊಳ್ರಿ." ಎಂದು ಸುಜಾತಾ ಒತ್ತಾಯಿಸಿದಾಗ ತಂದೆ ಮಗಳು ಗೆದ್ದಿದ್ದರು. ತಾಯಿ ದುಮು ದುಮು ಉರಿಯುತ್ತಲೇ ಅಂಗಡಿಯ ಕಟ್ಟೆ ಇಳಿದಿದ್ದಳು. ಅವರು ಕಣ್ಮರೆಯಾಗಿ ಹೋದರೂ ಸುಜಾತಾಳ ಮನದಲ್ಲಿ ಮೂಡಿದ ಚಿತ್ರ ಮಾಸಿರಲಿಲ್ಲ. ತಾನು ಚಿಕ್ಕವಳಿದ್ದಾಗ ತಂದೆ–ಮಲ ತಾಯಿಯರೊಡನೆ ಪೇಟೆಗೆ ಬಂದಾಗಲೆಲ್ಲ ಇದೇ ರೀತಿಯಲ್ಲಿ ನಡೆಯುತ್ತಿದ್ದಿತು. ಪ್ರತಿ ಸಲ ತನಗೆ ಸೀರೆ ಕೊಳ್ಳುವಾಗ ಫೀಜು ಕೊಡುವಾಗ ತಾಯಿ ಬೈಯ್ಯುವಳು, ತಂದೆಯೊಡನೆ ಜಗಳವಾಡುವಳು. ಆದರೂ ಅವಳನ್ನು ಲೆಕ್ಕಿಸದೆ ತಂದೆ ತನ್ನನ್ನು ತಮ್ಮಿಂದ ಸಾಧ್ಯವಿದ್ದಷ್ಟು ಸುಖವಾಗಿಯೇ ಪಾಲಿಸಿದರೆನ್ನಬೇಕು. ಅವರನ್ನು ನೋಡುತ್ತ ತಾನು ತನ್ನ ಮನದ ಅಳಲನ್ನು ಮರೆತು ನಕ್ಕಿದ್ದಳು. ಆದರೆ ಈಗ–? ಬಾಡಿ ಹೋಗುತ್ತಿದ್ದ ನಗುವನ್ನು ಎಳೆದು ತಂದು ತುಟಿಯ ಮೇಲೆ ಅರಳಿಸಿದಳು ಸುಜಾತಾ.

ಅವಳಿಂದ ಆಕರ್ಷಿಸಲ್ಪಟ್ಟವರಂತೆ ಆ ದಂಪತಿಗಳಿಬ್ಬರೂ ಅವಳಿದ್ದಲ್ಲಿಗೇ ಬಂದರು. ಇಂದು ಹೆಚ್ಚಿನ ವ್ಯಾಪಾರ ಸುಜಾತಾನೇ ಮಾಡಲಿ ಎಂದು ಅನಿತಾ ತಾನೇ ಹಿಂದೆ ಸರಿದಿದ್ದಳು.

"ತಮಗೇನು ಬೇಕು?" ಕಂಠ ತುಂಬಾ ಮಧುರವಾಗಿತ್ತು.

ಗಂಡ ಒಂದು ಕ್ಷಣ ಸುಜಾತಾಳನ್ನೇ ನಿಟ್ಟಿಸಿದ. ಹೌದು, ಅವೇ ಕಣ್ಣುಗಳು, ತುಟಿ, ಮುಂಗುರುಳು ಎಲ್ಲವೂ. ತಾನು ತಪ್ಪಿರುವದು ಸಾಧ್ಯವೇ ಇಲ್ಲ. ಹೆಂಡತಿಯತ್ತ ಬೆರಳು ತೋರಿಸಿದ.

"ಅವಳಿಗೆ ಸೀರೆ ತೋರಿಸ್ರಿ. ಶೀಲಾs ನೀನs ಆರಿಸು ನಾ ಕೂತಿರ್ತೀನಿ" ಅವನು ಎದುರಿಗಿದ್ದ ಸೋಫಾಕ್ಕೆ ಒರಗಿ ಸಿಗರೇಟು ಹಚ್ಚಿ ಕಾಲು ಚಾಚಿದ. ಸುಜಾತಾ ಕಷ್ಟದಿಂದ ಅವನಲ್ಲಿ ನಟ್ಟಿದ್ದ ಕಣ್ಣು ಕಿತ್ತು ಶ್ರೀಮತಿಯತ್ತ ತಿರುಗಿ ಕೇಳಿದಳು.

"ನಿಮಗ ಎಂಥಾ ಸೀರಿ ತೋರಸ್ಲಿ?"

ಹೆಂಡತಿ ಮಾತನಾಡುವ ಮೊದಲು ಕಿವಿ ಮೂಗು, ಕತ್ತಿನ ಆಭರಣಗಳನ್ನು ಚಕಚಕಿಸಿದಳು. ಬಂಗಾರದ ಬಳೆಗಳು, ತುಂಬಿದ್ದ ಕೈಯನ್ನು ವ್ಯಾನಿಟಿ ಬ್ಯಾಗಿನ ಮೇಲೆ ಆಡಿಸುತ್ತ ಅಸಡ್ಡೆಯಿಂದ ನುಡಿದಳು,

"ಅದನ್ನೇನು ಕೇಳೋದು. ಲೇಟೆಸ್ಟ ಫಾಷನ್ನಿನ್ನು ಎಲ್ಲಾ ತಗೀರಿ"

ಸರಿ–ಆಯಿತು. ಒಂದೊಂದಾಗಿ ಎಲ್ಲ ತರದ ಸೀರೆಗಳನ್ನೂ ತೋರಿಸಿದಳು. ಒಂದಕ್ಕೆ ಬಣ್ಣ ಚೆನ್ನಾಗಿಲ್ಲ, ಇನ್ನೊಂದಕ್ಕೆ ಸೀರೆ ಚೆನ್ನಾಗಿಲ್ಲ ಮತ್ತೊಂದು ತುಂಬಾ ತೆಳುವು, ಕ್ವಾಲಿಟಿ ಚೆನ್ನಾಗಿಲ್ಲ, ಬಾರ್ಡರ ದೊಡ್ಡದಾಯಿತು, ಡಿಝಾಯಿನ್ ಗಾಡಿ ಆಯಿತು. ಈ ಒಡಲಿಗೆ ಇಂಥಾ ಅಂಚು ಇರಬಾರದಿತ್ತು. ಸೆರಗು ಇನ್ನಷ್ಟು ದೊಡ್ಡದಾಗಿರಬೇಕಾಗಿತ್ತು, ಬುಟ್ಟಾ ಸಣ್ಣವು, ಪನ್ನಾ ಕಡಿಮೆ, ಇತ್ಯಾದಿ. ಟೇಬಲ್ ಮೇಲಿನ ರಾಶಿ ಏರುತ್ತ ಹೋಯಿತು. ಕಪಾಟುಗಳು ಖಾಲಿಯಾಗುತ್ತ ಬಂದವು. ಕೆಲವು ಸೀರೆಗಳು ಮಡಿಕೆ ಹಾಕಿದಾಗ ಬೇರೆ ಕಾಣುತ್ತದೆ; ಉಟ್ಟಾಗ ಇನ್ನೂ ಚೆನ್ನಾಗಿ

ಕಾಣುತ್ತದೆ ಎನ್ನುವುದನ್ನು ತೋರಿಸಲು ತಾನೇ ಬಿಚ್ಚಿ, ಮೈ ಮೇಲೆ ಸೆರಗು ಹೊದ್ದು ತೋರಿಸಿದಳು. ಹೊಸ ಸೀರೆ ಸೆರಗು ಹೊತ್ತು ನಿಲುವುಗನ್ನಡಿಯತ್ತ ನೋಡಿದಾಗ ಕಂಡುದ್ದು ಸೋಫಾದ ಮೇಲೆ ಕುಳಿತು ತನ್ನನ್ನೇ ನಿಟ್ಟಿಸುತ್ತಿದ್ದ ಗಂಡನ ಮುಖವನ್ನು. ಸುಜಾತಾ ಕೆಂಪೇರಿದಳು. ಆ ಕಣ್ಣುಗಳನ್ನು ತಪ್ಪಿಸಲು ಇತ್ತ ತಿರುಗಿದಳು. ಕೈಗೆ ಸಿಕ್ಕ ಸೀರೆಯೊಂದನ್ನು ತೆಗೆದು ಬಿಚ್ಚತೊಡಗಿದಳು. ಅದರ ವರ್ಣನೆ ಮಾಡಬೇಕೆಂದರೆ ಗಂಟಲಿನಿಂದೀಚೆಗೆ ದನಿಯೇ ಬರಲೊಲ್ಲದು. ಕೈಗಳು ನಡುಗುತ್ತಿದ್ದವು. ಗಂಟಲು ಒಣಗಿ ಹಣೆಯ ಮೇಲೆ ಬೆವರು ಮೂಡಿತು. ಮನಸ್ಸಿನಲ್ಲೇನೋ ಭೋರ್ಗರೆತ. ...ಹೃದಯದ ಡವ ಡವ ತನ್ನ ಕಿವಿಗೇ ಕೇಳುವಷ್ಟು ಜೋರಾಗುತ್ತಿತ್ತು ಕ್ಷಣ ಕ್ಷಣಕ್ಕೆ.

ಅವರು ತನ್ನ ಗುರುತು ಹಿಡಿದಿರಬಹುದು. ಅದಕ್ಕೇ ಹಾಗೆ ನೋಡುತ್ತಿದ್ದಾರೆ. ಕನ್ಯಾ ಪರೀಕ್ಷೆಗೆಂದು ಎರಡು ಸಲ ಮನೆಗೆ ಬಂದು—ಮನಸ್ಸಿಗೂ ಬಂದವರನ್ನು ತಾನು ಇಷ್ಟು ಬೇಗ ಮರೆಯಲು ಸಾಧ್ಯವೇ? ತಮ್ಮಿಬ್ಬರ ಬಯಕೆಯಂತೆ ಮದುವೆಯಾಗಿದ್ದರೆ ಇಷ್ಟೊತ್ತಿಗೆ ತಾನೇ ಅವಳ ಸ್ಥಾನವಲ್ಲಿರುತ್ತಿದ್ದಳು. ಅವರ ತಂದೆ ಕೇಳಿದಷ್ಟು ವರದಕ್ಷಿಣೆ ತನ್ನ ತಂದೆ ಕೊಟ್ಟಿದ್ದರೆ ...ರೆ. ಅದೆಲ್ಲಾ ರೇರಾಜ್ಯ. ಜಗತ್ತಿನಲಿ ಎಲ್ಲದಕ್ಕೂ ಬೆಲೆಯಿದೆ. ಬಡವರ ಮನೆಯ ಹುಡುಗಿಯ ಹೃದಯದ ಭಾವನೆಗಳಿಗೆ ಮಾತ್ರ ಬೆಲೆಯಿಲ್ಲ.

"ಓಃ ಮೈ ಗಾಡ್ ! ಇನ್ನೂ ಮುಗೀಲಿಲ್ಲೇನು ? ಮುಕ್ಕಾಲು ತಾಸಾತು. ಹಾಂಗs ವ್ಯಾಳ್ಯೆ ಕಳೀತಿ. ಆರಿಸಲ್ಲಾ ಯಾವ್ದರೆ ಒಂದು" ಗಂಡ ಹತ್ತಿರ ಬಂದ. ಅವನ ಸೆಂಟಿನ ಪರಿಮಳ ಸುಜಾತಾಳಲ್ಲಿ ಕಚಗುಳಿಯಿಟ್ಟಿತು. ದೇವರೇ ಇಷ್ಟು ಹತ್ತಿರ ಬಂತಾಗ ಅವರ ದೃಷ್ಟಿ ಎದುರಿಸಲಾರೆ ತಾನು ಎಂದುಕೊಳ್ಳುತ್ತ-

"ಈ ಸೀರಿ ನೋಡ್ರಿ. ನಿಮಗ ಸೇರಿತೇನು? ಸೆರಗು, ಬಣ್ಣ, ಬಾರ್ಡರ ಎಲ್ಲಾ ಛಂದ ಅದ. ನಿಮಗ ಒಪ್ತದ. ಎಲ್ಲೆ ಸೆರಗು ಹೊತ್ತು ಕನ್ನಡಿಯೊಳಗ ನೋಡ್ರಿ" ತನ್ನ ಲಕ್ಷ್ಯವನ್ನು ಪೂರ್ತಿ ಹೆಂಡತಿಯತ್ತ ಕೇಂದ್ರೀಕರಿಸಿದಳು. ಅದೂ ಅವಳ ಮನಸ್ಸಿಗೆ ಬರಲಿಲ್ಲ. ಮುಖ ಮುದುಡಿಸಿದ ಅವಳನ್ನು ನೋಡಿ ಹತಾಶಳಾದ ಸುಜಾತಾ ತಾಳ್ಮೆ ಕಳೆದುಕೊಂಡಳು. ಟೇಬಲ್ಲಿಗೆ ಹತ್ತಿರದಲ್ಲಿ ನಿಂತ ಗಂಡನ ಮುಖ ನೋಡದೆ,

"ಸ್ವಲ್ಪ ಬೊಜ್ಜು ಕಡಿಮೆ ಆಗಿದ್ದರ ಹೆಚ್ಚು ಛಂದ ಕಾಣತಿತ್ತು" ಎಂದಳು ಸುಜಾತಾ ತೀರ ಕೆಳ ದನಿಯಲ್ಲಿ. ಪಿಸು ನುಡಿದಿದ್ದರೂ ಹಾವಿನ ಕಿವಿಯ ಹೆಂಡತಿಗೆ ಮಾತು ಕೇಳಿಸಿತ್ತು. ಅವಳು ಕಾಲು ಅಪ್ಪಳಿಸುತ್ತ, ಸಿಟ್ಟಿನಿಂದ ಮಾಲಿಕನ ಹತ್ತಿರ ಹೋಗಿ ದೂರು ಕೊಟ್ಟಳು. ಮಾಲಿಕ "ಸುಜಾತಾ ಬಾ ಇಲ್ಲೆ" ಎಂದಾಗ ಅವಳಿಗೆ ತನ್ನ ತಪ್ಪಿನ ಅರಿವಾಯಿತು. ಅನಿತಾಳತ್ತ ನೋಡಿದಳು. ಅನಿತಾ 'ಹೋಗು' ಎನ್ನುವಂತೆ ಗೋಣು ಹಾಕಿ ಧೈರ್ಯ ಕೊಟ್ಟಳು.

"ಗಿರಾಕಿಗಳನ್ನ ಯಾವಾಗಲೂ ಆದರಿಸಬೇಕು: ಅಪಮಾನಾ ಮಾಡಬಾರ್ದು. ತಪ್ಪಾತು ಅಂತ ಕೇಳಿಕೋ ಅವರನ್ನ"

ಒಂದು ಕ್ಷಣ ಸುಮ್ಮನಿದ್ದ ಸುಜಾತಾ ಈ ಹೆಂಡತಿಯ ಗಂಡ ಎಲ್ಲಿ ಎಂದು ನೋಡಿದಳು. ಅವನು ಅಂಗಡಿಯ ಹೊರ ಬಾಗಿಲ ಹತ್ತಿರ ಕಿಸೆಯಲ್ಲಿ ಕೈ ಹಾಕಿ ನಿಂತು ರಸ್ತೆಯಲ್ಲಿಯ ವಾಹನಗಳ ಓಡಾಟದಲ್ಲೇ ತಲ್ಲೀನನಾಗಿದ್ದ. ಹೊರಗಿನ ಗದ್ದಲಕ್ಕಿಂತ ಹೆಚ್ಚಿನ ಘನ ಘೋರ ಸಂಗ್ರಾಮ ಅವನ ಮನದಲ್ಲಿ ನಡೆಯುತ್ತಿದ್ದುದು ಸುಜಾತಾಳಿಗೆ ಅರ್ಥವಾಯಿತು. ಸುಜಾತಾ ತನ್ನದಲ್ಲದ ಧ್ವನಿಯಲ್ಲಿ,

"ನಂದು ತಪ್ಪಾತು. ಮರತ ಬಿಡ್ರಿ" ಎಂದಳು. ಗಂಡ ಕೂಡಲೆ ಒಳಗೆ ಬಂದು ಟೇಬಲ್ಲಿನ ರಾಶಿಯಲ್ಲಿಯ ಒಂದು ಸೀರೆ ತೆಗೆದು ಸುಜಾತಾಳ ಕೈಗೆ ಕೊಟ್ಟು ಪ್ಯಾಕ್ ಮಾಡಿ ಕೊಡಲು ಹೇಳಿದ. ಅವಳು ಅದನ್ನು ಕಟ್ಟುತ್ತಿದ್ದಾಗ ಹೆಂಡತಿಯತ್ತ ಹೊರಳಿ "ಶೀಲಾ ಹೋಗಿ ಬಿಲ್ಲು ಕೊಟ್ಟು ಬಾ" ಎಂದ. ಅವಳತ್ತ ಹೋದೊಡನೆ "ಸುಜಾತಾ ರಿಯಲಿ ಆಯ್ ಎಮ್ ಸಾರಿ ನಿಮ್ಮ ಮನಸ್ಸು ನೋಯಿಸಿದ್ದಕ್ಕಾಗಿ ಕ್ಷಮಾ ಕೇಳ್ತೇನಿ" ಎಂದ. ಸುಜಾತಾ ಮಧುರವಾಗಿ ನಕ್ಕಳು. ಅಷ್ಟೇ. ಪಾವಟಿಗೆ ಇಳಿಯುವಾಗ ಕಂಡೂ ಕಾಣದಂತೆ ಹೊರಳಿ ಅವಳತ್ತ ನೋಡಿ 'ಹೊರಡಲಾ' ಎನ್ನುವಂತೆ ಅಪ್ಪಣೆ ಕೇಳಿದ. ಸುಜಾತಾ ಕಣ್ಣುಗಳಿಂದಲೇ ಒಪ್ಪಿಗೆ ಕೊಟ್ಟಳು.

ತನ್ನ ರೂಪ ನಗು, ಮಾತು ಎಲ್ಲವನ್ನೂ ಮಾರಿದರೂ ಬೆಲೆ ಸಿಗುತ್ತಿದ್ದುದು ಮಾಲೀಕನಿಗೆ. ತನಗೇನೂ ಇಲ್ಲ. ಆದರೆ ಇಂದು ಅಪಾರ ನಿಧಿ ಸಿಕ್ಕಷ್ಟು ಸಂತೋಷವಾಗಿತ್ತು ಅವಳಿಗೆ ತಾನು ಗೌರವಿಸಿದ್ದ ಒಬ್ಬ ವ್ಯಕ್ತಿ ತನ್ನ ವ್ಯಥೆಯನ್ನು ನೋವನ್ನು ಅರ್ಥ ಮಾಡಿಕೊಂಡಿದ್ದಾನೆ. ತನಗೆ ಎಷ್ಟೊಂದು ಹತ್ತಿರದವನಾಗಿದ್ದಾನೆ. ಆದರೆ ತುಂಬ ದೂರವೂ ಆಗಿದ್ದಾನೆ. ಅರಿಯದೆ ಅವಳಿಂದ ನಿಟ್ಟುಸಿರು ಹೊರ ಬಂದಿತು.

●

ಭಾಷಾ ಭಯಂಕರ

ಸುನೀತಿ ಕೃಷ್ಣಸ್ವಾಮಿ

ಫಿಫ್ತ ಫಾರ್ಮ್ ಡಿಗ್ರೀಧರ ನಮ್ಮನೆಯಾಳು ಮಲ್ಲೇಶಿ. ಇಂಗ್ಲೀಷನ್ನು ತನಗೆ ಬೇಕಾದ್ದಾಗೆ ಬಗ್ಗಿಸಿಕೊಳ್ಳುವ ತಾಕತ್ತಿದೆ ಅವನಿಗೆ. ನಮಗೋ ಆತನ ಮಾತು ಮಾತಿಗೂ ಹೊಟ್ಟೆಹುಣ್ಣಾಗಿಸೋ ನಗೆ.

ಇದೊಂದು ರೋಗ ಅಂತೀನಿ. ಅಲ್ಲಾ, ಬರದೇ ಇರೋ ಭಾಷೇನ ತಪ್ಪು ತಪ್ಪೇ ಆಡಿ ಯಾಕೆ 'ಮರ್ಡರ್' ಮಾಡ್ಬೇಕು ಅಂತ ನಂಗಂತೂ ಗೊತ್ತಾಗೊಲ್ಲ. ಅಂತಾ ಚೆನ್ನಾಗಿ ಕನ್ನಡ ಮಾತಾಡೋದು ಬರೋವಾಗ ಈ ಪರಭಾಷಾ ವ್ಯಾಮೋಹ ಇನ್ನೂ ಯಾಕೆ ಅಂತ?

ಈ ರೋಗಕ್ಕೆ ಬಲಿಯಾದವರಲ್ಲಿ ನಮ್ಮ ಮನೆ ಆಳು ಮಲ್ಲೇಶೀನೂ ಒಬ್ಬ (ಹಿಂದೆ ನಮ್ಮ ಮನೆ ಆಳಾಗಿದ್ದ. ಈಗ ನಮ್ಮ ಮನೆಯವರು ಕೇಂದ್ರ ಸರ್ಕಾರದ ನೌಕರಿ ಕೊಡಿಸಿದ ಫಲವಾಗಿ ೪೦೦ ರೂಪಾಯಿ ತರುವ ಸಂಬಳಗಾರ) ಮಲ್ಲೇಶಿ ಇಂಗ್ಲೀಷ್ ಮಾತಾಡುವ ಉದ್ದೇಶ ಏನೂಂದ್ರೆ ಇಷ್ಟು ಸಂಬಳ ತಂದ ಮೇಲೆ ಇಂಗ್ಲೀಷ್ ಬೆರೆಸಲೇ ಬೇಕು. ಇಲ್ಲದಿದ್ರೆ ಅವನ ಘನತೆ ಗೌರವಕ್ಕೆ ಕುಂದು ಅಂತ ನಂಬಿದ್ದಾನೆ. ಆದರೆ ಐದನೇ ಕ್ಲಾಸಿನ ಡಿಗ್ರಿ ಇರುವ ಮಲ್ಲೇಶಿಯ ಇಂಗ್ಲೀಷ್ ಬೆರಕೆ ಈಗಿನ ರೇಷನ್ ಸಾಮಾನಿನಲ್ಲಿ ಸಿಗುವ ಹರಳಿನಂತೆ ಬಲು ಅಹಿತ ಹಾಗೂ ಕೇಳಲು ಕರ್ಣಕಠೋರ. ಅವನು ಶುದ್ಧ 'ಬೋರ್' ಅಂತ ನಮ್ಮ ಮನೆಯವರುಗಳೆಲ್ಲಾ ಅವನನ್ನು ತಪ್ಪಿಸಿಕೊಂಡು ನನ್ನನ್ನ ಮಾತ್ರ ಬಿಟ್ಟು ಹೋಗುತ್ತಾರೆ. ಏನೋ ಚಿಕ್ಕ ವಯಸ್ಸಿನಿಂದ ನಮ್ಮ ಮನೆಯಲ್ಲಿ ಇದ್ದವ ಅಂತ ನಂಗೂ ಅವನ ಮೇಲೆ ಮಮತೆ. ಆದರೆ ಅವನು ಇಂಗ್ಲೀಷ್ ಶುರು ಮಾಡಿದಾಗ ಮಾತ್ರ ಒಂದು ಕಡೆ ನಗು ಒಂದು ಕಡೆ ಬೇಸರ. ಬೇಸರವೇಕೆ ಅಂದ್ರೆ ಇವನಿಗ್ಯಾಕೆ ಈ ಜಂಭ? ಬರದಿದ್ದರೂ ತಪ್ಪೇ ಆಡುವ ಛಲ ಯಾಕೆ ಅಂತ ಬೇಜಾರು. ನಾನು ಬೇಜಾರುಪಟ್ಟುಕೊಂಡ್ರೂ ಅವನ 'ಬಾಸ್' ಇವನ 'Carrot' (character) ನೋಡಿ ಪ್ರಮೋಷನ್‌ಗೆ ಶಿಫಾರಸ್ಸು ಮಾಡಿದ್ದಾರಂತೆ. ಈ ತಿಂಗ್ಳೇ ಬಡ್ತಿ ಆಗ್ಬೇಕಿತ್ತಂತೆ. ಆದ್ರೆ ಬೋರ್ಡ ಮೀಟಿಂಗು "ಪೋಸ್ಟ್‌ಮನ್" ಆಯ್ತಂತೆ. (ಗಾಬರಿ ಬೀಳ್ಬೇಡಿ ಅವನ ಅರ್ಥ postpone) ಪಾಪ ! ತುಂಬಾ ಒಳ್ಳೇ ಶಿಷ್ಟಾಚಾರ ಅವನದು. ನನ್ನ ಮಗನ್ನ ನೋಡಿದ ಕೂಡ್ಲೇ How is you ? ಅಂತಾನೆ. ನಿಜ. ಒಬ್ಬರನ್ನೇ ಉದ್ದೇಶಿಸುವಾಗ verb ಯಾಕೆ plural ಹಾಕಿ waste ಮಾಡ್ಬೇಕು ಅಂತ ಅವನ ಅಂದಾಜಿರಬಹುದು.



ಮೊನ್ನೆ ಸೋಮನಾಥಪುರದ ಗುಡಿಯ ಶಿಲಾಕೆತ್ತನೆಯನ್ನು ನೋಡಿ ಬಂದವನೇ ವರದಿ ಒಪ್ಪಿಸಿದ. "ಅಬ್ಬಬ್ಬಬ್ಬ ! ಅದೇನು "ಆರ್ಕಿಟಿಕ್ಕು" ತುಂಬಾ Horrible ಆಗಿದೇಮ್ಮಾ ! ನೀವೂ ಒಂದ್ಸಲ ಆ Tempest ನ ನೋಡ್ಲೇಬೇಕಮ್ಮಾ. ಅದೇನು Style ಉ ! ಅವತ್ತು ಕಲ್ಕತ್ತಾ ನಿಂದ ವಿಪರೀತ Bengalians ಬಂದಿದ್ರಮ್ಮಾ. ನನ್ನ ಜೊತೆ ನಮ್ಮ office typister ಸಹ ಬಂದಿದ್ನಮ್ಮಾ. ಇಬ್ರೂ ಲಾರ್ಡರ್ ತರಹ(Lords) ಮಜ ಮಾಡ್ಕೊಂಡು ಬಂದ್ವಿ. ನಮ್ಮ ಡಿಪಾರ್ಟಮೆಂಟ್ ಕ್ಲಾರ್ಕೂ (Clerk) ಬರ್ಬೇಕೂಂತ ಇದ್ರು. ಆದ್ರೆ ಅವರ್ಗೆ ವಿಪರೀತ Bed Pressure ಜಾಸ್ತಿ ಆಗೋಯ್ತು. ಅದ್ಕೆ ನಾವೇ ಹೋಗಿ ಬಂದ್ವು.'

ತಡೆಯಲಾರದ ನಗು ತಡೆದುಕೊಂಡು ಮಲ್ಲೇಶೀನ ಕಾಫಿ ತಿಂಡಿ ಕೊಟ್ಟು ಸಾಗ್ಸಿದ್ದಾಯ್ತು. ಅವನ ಇಂಗ್ಲೀಷ್ ಬಿರುಸು ಬರೀತಾ ಹೋದ್ರೆ ದೀಪಾವಳಿ ಸಂಚಿಕೆ ಪೂರ್ತಿ ಬರೆಯಬಹುದು. ಆದ್ರೆ ನಂಗೆ ಸಂಪಾದಕರ Scissors cut ಭಯ.

●

ಸ್ವೊತ್ತು...?

ಹೆಂಡತಿ ಗಂಡನ ಸೊತ್ತು !
ಹೆಂಡತಿಯು ಸೊತ್ತಲ್ಲ ಗಂಡನದು !!
ಆದರೆ ಗಂಡನು ಹೆಂಡತಿಯ ಸೊತ್ತಾಗನೆ?
ಹೆಣ್ಣು ಮಾತ್ರ ಗಂಡನ ಸೊತ್ತಾಗಿ ಬಾಳಬೇಕೆ??



ಕೃಷ್ಣಮೂರ್ತಿ ಪುರಾಣಿಕ

"ನನ್ನ ಬಣ್ಣ ಕಪ್ಪು; ಸಾಮಾನ್ಯವಾಗಿ ಎತ್ತರವಾಗಿರುವ ಹುಡಿಗೆಯರಕಿಂತ ಬಹಳಷ್ಟು ಕಡಿಮೆ ನನ್ನ ಎತ್ತರದ ಆಳತೆ. ಗಿಡ್ಡಿಯೆಂದೇ ಹೇಳಬಹುದು. ನಾನು ಶ್ರೀಮಂತಳೂ ಅಲ್ಲ; ನನ್ನ ತಂದೆ ಶಿಕ್ಷಕರು. ಹತ್ತು ಮಕ್ಕಳನ್ನು ಪಡೆದ ಭಾಗ್ಯವಂತರು. ಅಂದ ಬಳಿಕ ನಮ್ಮ ಬಡತನದ ಕಲ್ಪನೆ ನಿಮಗೆ ಬಂದಿರಬೇಕು. ನನ್ನ ಮೂಗು ತುಸು ಚಪ್ಪಟೆಯಾಗಿ ಕಿವಿಗಳು ಚಿಕ್ಕವಾಗಿ ಕಣ್ಣುಗಳು ಕಿರಿದಾಗಿದ್ದುದರಿಂದ ನಾನೇ ನನ್ನ ಮುಖವನ್ನು ಕನ್ನಡಿಯಲ್ಲಿ ನೋಡುತ್ತಿರಲಿಲ್ಲ. ಈ ಮುಖದ ಬಗ್ಗೆ ನನಗೆ ಯಾವ ಪ್ರೀತಿಯೂ ಇರಲಿಲ್ಲ. ಅಂದ ಬಳಿಕ ನನ್ನನ್ನು ನೋಡಿದ ಗಂಡು ಪ್ರೀತಿಸುವದಂತೂ ಸಾಧ್ಯವಿರಲಿಲ್ಲ. ಆದರೂ ನನ್ನ ಮದುವೆ ಆಯಿತು. ಇದೊಂದು ನನ್ನ ಪಾಲಿಗೆ ಪವಾಡ, ಅಚ್ಚರಿಯೊಳಚ್ಚರಿ, ನನ್ನನ್ನು

ಒಲಿದು (?) ಬಂದ ಗಂಡು ಸ್ಫುರದ್ರೂಪಿ. ಸುಂದರ ಬಣ್ಣ ಕೆಂಪು, ಸಧೃಡ ದೇಹ. ಅಚ್ಚುಕಟ್ಟಾಗಿ ಸೂಟು ಪ್ಯಾಂಟುಗಳನ್ನು ಧರಿಸಿ ಟಾಯ್ ಗಂಟನ್ನು ಸರಿಸುತ್ತ ನಿಂತ ಈ ಕಾಮಣ್ಣನು ಆಯ್.ಎ.ಎಸ್. ತರುಣ ಅಧಿಕಾರಿಯಂತೆಯೇ ಕಾಣುತ್ತಿದ್ದನು. ಇಂಥವರು ನನ್ನನ್ನು ಮದುವೆಯಾಗಲು ಒಪ್ಪಿರುವದೆಂದು ತಿಳಿದು ಬಂದಾಗ ನನಗೆ ವಿಶ್ವಾಸವಾಗಲಿಲ್ಲ. ಯಾರನ್ನೋ ತಪ್ಪಿ ನೋಡಿ ಒಪ್ಪಿದಾಗ ನಾನು ಗುರಿಯಾಗಿರಬಹುದೇ ಎಂದೂ ಯೋಚಿಸಿದೆ. ಆದರೆ ಹಾಗಾಗಿರಲಿಲ್ಲ.

ನನ್ನ ತಂದೆ ತಾಯಿಗೆ ಸಂತೋಷವಾಯಿತು. ಹಾಗೆ ಕೇಳಿದರೆ ಅವರಲ್ಲಿ ನನ್ನನ್ನು ಹೊತ್ತು ಹಾಕುವ ಮನಸ್ಸೂ ಇರಲಿಲ್ಲ. ನಾನು ಆಗಲೆ ಮೂರು ನೂರು ರೂಪಾಯಿಗಳನ್ನು ತರುವ ಉದ್ಯೋಗಸ್ಥ ಮಹಿಳೆಯಾಗಿದ್ದೆ. ತಾನಾಗಿಯೇ ಬಂದ ಈ ಸುದೈವೀ ಪ್ರಸಂಗವನ್ನು ಅವರು ಒಪ್ಪಿಕೊಳ್ಳದಿದ್ದರೆ ಸಾಮಾಜಿಕ ಮನ್ನಣೆ ಕಡಿಮೆಯಾಗುತ್ತಿತ್ತೆಂದು ಹೆದರಿಕೆಯೂ ಇರಬಹುದು. ನನ್ನ ಮದುವೆಯನ್ನು ಬೆಳಗಾವಿ ಮಾರುತೀ ಗಲ್ಲಿಯ ಪ್ರಾಣದೇವರ ಮುಂದೆ ಮಾಡುವ ಸಿದ್ಧತೆ ನಡೆಸಿದರು. ಆದರೆ ನನಗೆ ಈ ಮದುವೆ ನೆರವೇರಬಹುದೆಂಬ ವಿಶ್ವಾಸವಿರಲಿಲ್ಲ. ಅವರು ನನ್ನ ಮುಖವನ್ನು ಮತ್ತೆ ನೋಡಬಾರದೆಂದು ಮುಖ ತಪ್ಪಿಸತೊಡಗಿದೆ. ನಾನು, ಆಗಲೆ ನನ್ನ ಸ್ವಭಾವದಿಂದ ಬಹಳಷ್ಟು ಜನರಿಗೆ ಬೇಕಾದವಳಾಗಿದ್ದರಿಂದ ಮದುವೆಯ ಮಂಟಪ ಕಿಕ್ಕಿರಿದು ತುಂಬಿತು. ಆಗಲೂ ನನ್ನ ಎದೆ ಡವಡವ ಹೊಡೆದುಕೊಳ್ಳುತ್ತಿತ್ತು. ನನ್ನ ಪತಿದೇವರು ಮಾತ್ರ ಕುಲು ಕುಲು ನಗುತ್ತಿದ್ದರು. ಬಣ್ಣದ ಗಂಡುಗೊಂಬೆಯ ಪಕ್ಕಕ್ಕೆ ಸಾಲಿಗ್ರಾಮ ಬಣ್ಣದ ಚೀನೀ ಹೆಣ್ಣುಗೊಂಬೆ ನಿಂತಂತಿತ್ತು, ನಮ್ಮ ಜೋಡಿ. 'ಮದುವೆಯ ಲಿಸ್ಟ್' ಸ್ವರ್ಗಲೋಕದಲ್ಲಿಯೇ ಸಿದ್ಧವಾಗುತ್ತದೆ' ಎಂಬ ಮಾತು ನನ್ನ ವಿಷಯದಲ್ಲಿ ಅಕ್ಷರಶಃ ನಿಜವಾಗಿತ್ತು. ಮಂಗಲಾಕ್ಷತೆಗಳು ಬಿದ್ದಾಗ ಹಾಯಾಗಿ ಉಸಿರಾಡಿಸಿ ಪತಿದೇವರ ಮುಖ ನೋಡಿದೆ. ಅವರು ತುಂಬಾ ಉಲ್ಲಸಿತರಾಗಿದ್ದರು. "ನೀನು ಗೆದ್ದೆ ರಂಭಾ!" ಎಂದು ತಂದೆ ಕಣ್ಣೀರು ಮಂಗಲಾಕ್ಷತೆ ಹಾಕಿದಾಗ ನನಗೂ ಜೀವನದಲ್ಲಿ ಗೆದ್ದ ಹೆಮ್ಮೆಯಾಯಿತು. ನನಗೂ ನಗುವಂತಾಯಿತು."

ಮಾರುತೀ ಮಂದಿರದ ಕಲ್ಯಾಣ ಮಂಟಪಕ್ಕೆ ಬಂದವರೆಲ್ಲ ಕುತೂಹಲಿಗಳಾಗಿಯೇ ಬಂದಿದ್ದರು. ರಂಭಾನ ಗೆಳತಿಯರು, ಬಳಗದವರು, ಇಂಥ ಹೆಣ್ಣಿನ ಕೈಹಿಡಿದ ಮಹಾನುಭಾವನನ್ನು ನೋಡುವ ತವಕದಿಂದಲೇ ಬಂದಿದ್ದರು. ಈ ಮದನವಿಗ್ರಹವನ್ನು ನೋಡಿ ಅವರು ಅಚ್ಚರಿಯಿಂದ ಬೆರಳು ಕಚ್ಚಿಕೊಂಡರು. 'ನೀನು ಸುಮಧುರ ಸುವಾಸಿತ ಮಲ್ಲಿಗೆ ಹೂಗಳನ್ನೇ ದೇವರಿಗೆ ಅರ್ಪಿಸಿದ್ದೆ ರಂಭಾ! ಇಂಥ ಸ್ಫುರದ್ರೂಪಿ ದೊರಕೊಂಡ. ಹೃತ್ಪೂರ್ವಕ ಅಭಿನಂದನೆಗಳು' ಎಂದಾಗ ಬಹಳಷ್ಟು ಕನ್ನೆಯರಲ್ಲಿ ರಂಭೆಯ ಬಗೆ ಮತ್ಸರಭಾವನೆ ಮೂಡಿತ್ತೆನ್ನಬಹುದು. ಗಂಡಿನ ಬಳಗದವರು ಮಾತ್ರ ಮೂಗುಮುರಿದರು. 'ಇದು ಹೇಗೆ ಹೀಗಾಯಿತು. ಈ ಮನುಷ್ಯ ಕಣ್ಣು ಮುಚ್ಚಿ ಕನ್ಯಾ ಪರೀಕ್ಷೆ ಮಾಡಿ ಒಪ್ಪಿದನೆ?' ಎನ್ನುವ ಮನೋಭಾವದಲ್ಲಿ ಅವರೆಲ್ಲ ಕ್ವಿನಾಯಿನ್ ತಿಂದ ಮುಖದವರಾದರು. ಕೈಹಿಡಿದರೆ ಮಾಸುವ ಬಣ್ಣದಹುಡಿಗೆಯರನ್ನು ಬಳಗದವರು ತಂದಾಗ ಈ ಮದನ ಅವರನ್ನು ನಿರಾಕರಿಸಿದ್ದ. ಅವಳ ನಡಿಗೆ ಹೀಗೆ. ಅವಳ ಮೂಗು ಹೀಗಿರಬಾರದಾಗಿತ್ತು. ಅವಳ ಸೊಂಟ ದಪ್ಪ, ಕಿವಿ ಹರವು ಹೀಗೆ ಏನಾದರೂ ಒಂದು ನೆವ ಮಾಡಿ ಅವರನ್ನು ತ್ಯಜಿಸುತ್ತಿದ್ದ ಈ ಗಂಡು 'ಗಿಡ್ಡ ದೇಹದ ಗಂಟು ಮೂಗಿನ ಕರಿಯ ಕಬ್ಬಿಣದ ಹೆಣ್ಣು ಗೊಂಬೆಯನ್ನೆಂತು ಕೈ ಹಿಡಿದ?' ಎಂಬುದು ಅವರಲ್ಲಿ ಹಲವರ ಸಮಸ್ಯೆಯಾಯಿತು. 'ಅವನ ಕರ್ಮ' ಗಂಟು ಹಾಕಿಸಿದೆ ಏನು ಮಾಡುವುದೆಂದು ಅತ್ತ ಅಕ್ಕನೂ ಇದ್ದಳು.

ಚಾಣಾಕ್ಷಳಾದ ಯುವತಿಯೊಬ್ಬಳು, ಸಮಾಜ ಕಾರ್ಯಕರ್ತೆಯೇ ಇರಬೇಕು. ಅವಳು 'ಅಂತೂ ಮದನ ಕೆಲಸ ಸಾಧಿಸಿಕೊಂಡ!' ಎಂದಾಗ 'ಅಂದರೇನೆ?' ಎಂದು ಇನ್ನೊಬ್ಬಳು ಕೇಳಿದಾಗ, 'ಅವನು ಮದುವೆಯಾದದ್ದು ರಂಭೆಯನ್ನಲ್ಲ ಗೆಳತಿ ಅವಳ ಸಂಬಳವನ್ನು!' 'ಮದುವೆ ನಿಲ್ಲುವ ಹೆಣ್ಣೇ ಇದು?' ಎಂದು ಅಬ್ಬರದ ನಗೆಯಲ್ಲಿಯೇ ನುಡಿದಳು.

ಮದನನ ಆಪ್ತಮಿತ್ರನೊಬ್ಬನು ಅವನ ಹೆಂಡತಿಯ ಈ ರೂಪವನ್ನು ನೋಡಲಾರದೆ ಕೋಣೆಯ ಒಳಗೆ ಬಂದು "ಈ ಹೆಣ್ಣನ್ನು ಮಾಡಿಕೊಳ್ಳಲು ಎಂಥ ತಪಸ್ಸು ಮಾಡಿದ್ದೆಯೋ ಮಾರಾಯಾ? ನಿನ್ನ ಧ್ಯಾನ ದೇವತೆ ತಾಟಕಿಯೇ? ಶೂರ್ಪನಖಿಯೇ? ಇರಬೇಕು. ಅವಳು ಪ್ರತ್ಯಕ್ಷಳಾಗಿದ್ದಾಳೆ. ಕಣ್ಣಿದ್ದ ಗಂಡು ಕಂಡು ಕೈ ಹಿಡಿಯುವ ಹೆಣ್ಣೇ ಇದು?" ಎಂದು ಸಲಿಗೆಯ ಮಾತನ್ನಾಡಿದಾಗ ಮದನನು ನಗುತ್ತಲೇ ಹೇಳಿದ ಮಾತುಗಳನ್ನು ಅವನ ಮಾತುಗಳಲ್ಲಿಯೇ ಕೇಳಬೇಕು.

"ನನ್ನ ಭದ್ರಾಕೃತಿ ತಂದೆಯ ವರಪ್ರಸಾದ. ಬಣ್ಣ ತಾಯಿಯದು. ಒಬ್ಬ ಚನ್ನಿಗರಾಯ: ಇನ್ನೊಬ್ಬಳು ಚೆಲುವೆ. ಮದನನಾದ ನನ್ನ ಅವತಾರವಾಯಿತು. ರೂಪ, ಸೌಂದರ್ಯ ದೇಹಸೌಷ್ಟವವನ್ನು ದಯಪಾಲಿಸಿದವರು ಬುದ್ಧಿಯನ್ನು ಮಾತ್ರ ತಾವೇ ಉಳಿಸಿಕೊಂಡಂತೆ ತೋರುತ್ತದೆ. ನನಗೆ ಎಸ್.ಎಸ್.ಎಲ್.ಸಿ, ಪಾಸಾಗಲು ನಾಲ್ಕು ಯಾತ್ರೆಗಳನ್ನು ಮಾಡಬೇಕಾಯಿತು. ಮುಂದೆ ಕಲಿಯುವದಂತೂ ಸಾಧ್ಯವಿರಲಿಲ್ಲ. ತಂದೆಯ ಮಾತು, ವಿಚಿತ್ರವಾಯಿತು. ನನ್ನ ತಾಯಿ ಅಕಸ್ಮಾತ್ ತೀರಿಕೊಂಡ ಕೂಡಲೆ ಬೇರೆ ಲಗ್ನವಾಗಿ ನನಗೆ ಮನೆಯ ಹೊರಗೆ ಹೋಗುವ ಹಸಿರು ಬಾವುಟವನ್ನೆ ತೋರಿಸಿದನು. ನಾನು ಬದುಕಬೇಕು. ಹೇಗಾದರೂ ಬದುಕಬೇಕು. ಒಂದು ಖಾಸಗೀ ವ್ಯವಹಾರದಲ್ಲಿ ನೂರು ರೂಪಾಯಿಯ ಸಂಬಳ ದೊರೆಯತೊಡಗಿತು. ಇದರಿಂದ ಏನಾಗಬೇಕು?

"ಒಳ್ಳೆಯ ಜೀವನ ಸಾಗಿಸಬೇಕು: ಸಂಸಾರ ಹೂಡಿ ತಂದೆ ಮಾಡಿದ ಕೇಡಿನ ಸೇಡನ್ನು ತೀರಿಸಿಕೊಳ್ಳಬೇಕೆಂಬ ಮನೋಭಾವವೂ ಮೂಡಿತು. ನನ್ನ ಗೆಳೆಯರಲ್ಲಿ ನನ್ನ ಅಭಿಮಾನಿಗಳು ನನ್ನನ್ನು 'ವರ'ನ ಯಾದಿಯಲ್ಲಿ ಸೇರಿಸಿದರು.

"ಮದುವೆಯಾಗುವ ಹೆಣ್ಣಿನ ಬಗ್ಗೆ ನನ್ನಲ್ಲಿ ಕೆಲವು ವಿಚಾರಗಳು ಸ್ಪಷ್ಟವಾಗಿ ಮೂಡಿದ್ದವು. ರೂಪಸಿಯರಾದ ಹುಡಿಗೆಯರು ಬೇಗನೆ ಹೆಂಡತಿಯರಾಗಿ ಹೋಗುವದರಿಂದ ನೌಕರಿ ಮಾಡುವ ಹುಡಿಗೆಯರಿಗೆ ಅಂತಹ ರೂಪವಿರುವದಿಲ್ಲವೆಂದು ಮನಗಂಡ ನಾನು ರೂಪಕ್ಕೆ ಗೌಣಸ್ಥಾನವನ್ನು ಕೊಡಲು ನಿರ್ಧರಿಸಿದೆ.

"ಗಂಡನ ಸೊತ್ತು ಹೆಂಡತಿಯಾಗಿ ಅವಳದೆಲ್ಲ ನನ್ನದಾಗಿ ಇಬ್ಬರೂ ಹಾಯಾಗಿ ಬಾಳುವೆ ಮಾಡುವಂತಿರಬೇಕೆಂದು ನಿಶ್ಚಯಿಸಿದೆ. ರೂಪವಿದ್ದ ನೌಕರಿ ಹೆಣ್ಣುಗಳ ಬಗ್ಗೆ ನನಗೆ ಹೆದರಿಕೆ ಅನ್ನಿಸಹತ್ತಿತು. ಆದುದರಿಂದ ಸಂಶಯಾತೀತ ಹುಡಿಗೆಯ ಕೈಹಿಡಿಯಬೇಕೆಂದು ನಿಶ್ಚಯಿಸಿದೆ.

"ರಂಭಾ ನನ್ನ ತತ್ವಗಳ ಸಾಕಾರ ಮೂರ್ತಿಯೇ ಮೂರ್ತೀಭವಿಸಿದಂತೆ ನನ್ನ ಮನಸ್ಸು ಹೇಳಿದ್ದರಿಂದ ನಾನು ಇವಳನ್ನು ಮದುವೆಯಾಗಿ ಸಂಭ್ರಮದ ಸಂಸಾರ ಮಾಡಬೇಕೆಂದು ನಿಶ್ಚಯಿಸಿದೆ. ನಾನು ಗಳಿಸುವ ತಿಂಗಳ ಸಂಬಳವನ್ನು ಅವಳು ಒಂದು ವಾರದಲ್ಲಿಯೇ ಗಳಿಸುತ್ತಿದ್ದಳು. ಇದನ್ನು ತಿಳಿದುಕೊಂಡೇ ಗಂಡನ ಸೊತ್ತು ಹೆಂಡತಿಗೆ, ಹೆಂಡತಿಯ ಸೊತ್ತು ಗಂಡನಿಗೆ ಎರಡೂ, ಮೊತ್ತ ನಮ್ಮಿಬ್ಬರಿಗೆ. ಎರಡು ದೇಹ ಒಂದು ಜೀವವಾಗಿರಲು ಬಾಳು ಭವ್ಯವಾದೀತು ಎಂದು ಯೋಚಿಸಿದೆ. ರಂಭಾನ ಬಣ್ಣ ಕಪ್ಪಿದ್ದರೇನಾಯಿತು? ಅವಳು ತರುವ ಹಣದ ಬಣ್ಣವನ್ನು ನಾನು ಮೆಚ್ಚಿದೆ. ಅವಳ ಹೃದಯದ ಗೋಜಿಗೆ ನಾನೇಕೆ ಹೋಗಲಿ?

"ಈ ನೆಂಟಸ್ತನ ಕೂಡಿಸಿದ ನನ್ನ ಸಂಬಂಧಿಕರಲ್ಲಿ ಹಿರಿಯರೊಬ್ಬರು ವ್ಯವಹಾರ ಕುಶಲರೇ ಇದ್ದರು. ಆ ದಿನ ಅವರ ಮನೆಗೆ ಈ ರಂಭಾ ಊಟಕ್ಕೆ ಬಂದಿದ್ದಳು. ಏನಾದರೂ ನೆವ ಮಾಡಿ ಊಟದ ಹೊತ್ತಿಗೆ ಒಬ್ಬರ ಮನೆಗೆ ಬಂದು ಹರಟೆ ಹೊಡೆದು ಒಂದು ಹೊತ್ತನ್ನು ದಾಟಿಸುವದೊಂದು ಅವಳ ಮಿತವ್ಯಯದ ಪದ್ಧತಿಯಾಗಿತ್ತು. ಆ ದಿನ ನನ್ನನ್ನು ಬೇಕೆಂದೇ ಕರೆದು ರಂಭಾನನ್ನು ನನ್ನ ದೃಷ್ಟಿಗೆ ಹಾಕಿದರು. ನನಗೆ ಕುರೂಪದ ಬಗ್ಗೆ ವಿಶೇಷ ಅನಾದರವಿರಲಿಲ್ಲ. ಆದರೆ ರಂಭಾನನ್ನು ನೋಡಿದ ಕೂಡಲೇ ಅವಳಲ್ಲಿ ಕುರೂಪ ಅಂಗಾಂಗಗಳಲ್ಲಿ ಹೆಪ್ಪುಗಟ್ಟಿರುವಂತೆ ಕಂಡಿತು. ಅವಳು ನಕ್ಕಾಗ ನನಗೆ ಅವಳ ಹಲ್ಲುಗಳು ಕಾಣಲೇ ಇಲ್ಲ. ಶಾಮಚ್ಛಾಯೆಯಲ್ಲಿ ಅವು ತಮ್ಮ ಅಸ್ತಿತ್ವವನ್ನೇ ಬೇರ್ಪಡಿಸಿಕೊಂಡಂತೆ ತೋರಿತು. ನಾನು ಹೌಹಾರಿ ಹಿರಿಯರನ್ನು ನೋಡಿದೆ. ಅವರು ನಗುತ್ತ ಹೇಳಿದರು,

"ಇನ್ನೆರಡು ತಿಂಗಳಲ್ಲಿ ಇವಳು 'ಗೆಜೆಟೆಡ್' ಅಧಿಕಾರಿಯಾಗುತ್ತಾಳೋ ಮಗನೆ! ನಿನ್ನ ರೊಟ್ಟಿ ತುಪ್ಪದಲ್ಲಿ ಬೀಳುತ್ತದೆ".

"ಆದರೆ ಕಾಕಾ ಇವಳು..."

"ಹೆಣ್ಣು ಇದ್ದಾಳಲ್ಲೋ. ತೀರಿ ಹೋಯಿತು. ಹೆಣ್ಣನ್ನು ಬಣ್ಣನೋಡಿ ಅಳೆಯುತ್ತಾರೇನು ಹುಚ್ಚಾ! ನಿನಗೂ ಒಳ್ಳೇ ಬಣ್ಣವಿದೆ. ರೂಪವಿದೆ. ಏನು ಸುಡಬೇಕು? ಮನುಷ್ಯನ ಬಣ್ಣ ಹಣದಿಂದ ನಿರ್ಣಯವಾಗುತ್ತದೋ ತಮ್ಮ! ನಾನು ಹೇಳಿದಂತೆ ಕೇಳು." ಎಂದಾಗ ನನ್ನ ಅನೇಕ ತತ್ವಗಳನ್ನು ಈ ಹುಡಿಗೆ ಮೂರ್ತೀಭವಿಸಿದ್ದಾಳೆ ಅನ್ನಿಸಿತು.

"ಹೆಂಡತಿ ಹೇಗಿದ್ದರೇನು? ಕೂಡಿಕೊಂಡು ಸಂಸಾರ ಮಾಡಿದರಾಯಿತು. ಈ ಮದುವೆಯಿಂದ ನನ್ನ ಅನೇಕ ಆರ್ಥಿಕ ಪ್ರಶ್ನೆಗಳು ದೂರವಾಗುವದರಿಂದ ನಾನು ಒಪ್ಪಿದೆ ಮಾರಾಯಾ! ನಿನ್ನ ಬಣ್ಣ ಬಣ್ಣದ ನಾಜೂಕು ಬೀಸಣಿಕೆಯಿಂದ ಏನು ಪ್ರಯೋಜನವಿದೆ ಹೇಳು? ಹಾಗೆ ಕೇಳಿದರೆ ಅವಳೇ ನಿನಗೆ ತಲೆಭಾರ. ಸ್ನೋ ಪೌಡರದಿಂದ ನಾಜೂಕಿನ ತನಿವರೆಗೆ ನಿನ್ನ ಜೇಬಿಗೇ ಕತ್ತರಿ...ಅಲ್ಲವೇನೋ?"

ಮದನರಾಯನ ಮಾತಿನಿಂದ ಅವನ ಗೆಳೆಯನಿಗೆ ಸಮಾಧಾನವಾಗದಿದ್ದರೂ ಈ ಮನುಷ್ಯ ಕಣ್ಣು ಮುಚ್ಚಿ ಮದುವೆಯಾಗಿಲ್ಲವೆಂದು ತಿಳಿಯಿತು. ಈ ಸಂಸಾರ ಹೊಂದಾಣಿಕೆಯಾಗಿ ನಡೆದರಾಯಿತು, ಎಂದು ಮದುವೆಯ ಊಟ ಮಾಡಿ ನಡೆದು ಬಿಟ್ಟನು.

ಕೈ ತುಂಬ ಸಂಬಳ ತರುವ ರಂಭಾ ಗಂಡನೊಡನೆ ಭರ್ಜರಿಯಾಗಿಯೇ ಸಂಸಾರ ಹೂಡಿದಳು. 'ಮಧುಚಂದ್ರ'ವನ್ನು ಮೈಸೂರು, ವೃಂದಾವನದಲ್ಲಿ ಆಚರಿಸಿ ಹಳೆಬೀಡು, ಬೇಲೂರು ಶಿಲಾಬಾಲಿಕೆಯರ ಸನ್ನಿಧಾನದಲ್ಲಿ ಜೀವಮಧುವನ್ನು ಸ್ವೀಕರಿಸಿ ಬೆಳಗಾವಿಗೆ ಬಂದಾಗ ರಂಭಾನ ಒಂದು ಸಾವಿರ ರೂಪಾಯಿಗಳು ಖರ್ಚಾಗಿದ್ದವು. ಆದರೂ ರಂಭಾನ್ನಲ್ಲಿ ತೃಪ್ತಿ ನೆಲಸಿತ್ತು. ಇಂಥ ಸುಲಕ್ಷಣ ಗಂಡನನ್ನು ಪಡೆದ ಧನ್ಯತೆ ಅವಳದಾಗಿತ್ತು. ಆ ಸುಂದರ ಮುಖದಲ್ಲಿ ಅವಳು ತನ್ನ ಜೀವನ ಸಾರ್ಥಕವೆಂದು ತಿಳಿದು ಅವನ ಗಳಿಕೆಯ ಬಗ್ಗೆ ವಿಶೇಷ ತಲೆಯಲ್ಲಿ ಹಾಕಿಕೊಳ್ಳಲಿಲ್ಲ. ಅವನು ಮಾತಿನಲ್ಲಿ ರಸಿಕನಾಗಿದ್ದು ಯಾವಾಗಲೂ ಹಸನ್ಮುಖನಾಗಿದ್ದನು.

"ಅಲ್ಲ ರಂಭಾ! ನಿನ್ನ ಹೆಸರನ್ನು ಬದಲು ಮಾಡುವದು ಯೋಗ್ಯವೆನ್ನಿಸುತ್ತದೆ ನೋಡು. ನಿನ್ನನ್ನು ರಂಭಾ ಎಂದು ಕರೆದ ಕೂಡಲೆ ಜನ ನಗುತ್ತಾರೆ. ಹೇಗೂ ನಿನಗೆ ಅತ್ತೆ ಮನೆ ಹೆಸರಿಡಬೇಕಲ್ಲ."

ಆ ದಿನ ಮದನ ಮಾತು ತೆಗೆದನು.

"ಏನು ಹೆಸರಿಡಬೇಕೆನ್ನುವಿರಿ?"

"ಶ್ಯಾಮಲಾ ಎಂಬ ಹೆಸರು ಯಥಾರ್ಥವಾಗದಿದ್ದರೂ ತುಸು ಹತ್ತಿರ ಬರುತ್ತದೆ. ಕಪ್ಪವ್ವ, ಕರಿಯವ್ವ, ಎನ್ನುವದಕ್ಕಿಂತ ಶ್ಯಾಮಲಾ ಗಂಭೀರವಾದ ಹೆಸರು."

"ನಾನು ಅಷ್ಟು ಕಪ್ಪು ಇದ್ದೇನೇನರಿ?"

"ಇಲ್ಲ... ಇಲ್ಲ... ನೀನು ಕಪ್ಪಿನಷ್ಟೇ ಕರ‍್ರಗೆ ಇಲ್ಲ..."

"ಸಾಕು ಬಿಡಿರಿ. ಶ್ಯಾಮಲಾ ಹೆಸರು ಇರಲಿ... ಮತ್ತೆ ನಿಮ್ಮ ಹೆಸರೂ ಬದಲಿಯಾಗಲಿ."

"ನಾನು ಗಂಡನಲ್ಲವೇನು?"

"ಹೌದಲ್ಲ! ಮದುವೆಯಾದ ಕೂಡಲೆ ಹೆಣ್ಣಿನ ಹೆಸರು ಬದಲು. ಗಂಡು ಮಾತ್ರ ಗುಂಡಕಲ್ಲು..."

"ಮತ್ತೆ? ಹೆಣ್ಣಿಗೆ ಮದುವೆಯಾದ ಕೂಡಲೆ ಮಂಗಳಸೂತ್ರ ಬಿಗಿಯುತ್ತಾರೆ. ಆದರೆ ಗಂಡಿಗೆ ಏನು ಬಿಗಿಯುತ್ತಾರೆ ಹೇಳು? ಗಂಡು ಗಂಡೇ, ಹೆಣ್ಣು ಹೆಣ್ಣೇ?"

"ಯಾವ ಯುಗದಲ್ಲಿದ್ದೀರಿ ನೀವು?"

"ಅಂತಾರಾಷ್ಟ್ರೀಯ ಮಹಿಳಾ ಯುಗದಲ್ಲಿ ಮಾತಾಡುತ್ತಿದ್ದೇನೆಯೆ?"

"ಅಂತಾರಾಷ್ಟ್ರೀಯ ಮಹಾನೀಯರ ವರ್ಷವೂ ಬಂದೀತು."

"ಅಂದ ಹಾಗೆ ಶ್ಯಾಮಲಾ ನೀನು ಕರ‍್ರಗಿದ್ದರೂ ಕೆಂಪು ಕೆಂಪು ಮಾತಾಡುತ್ತೀ. ಜಾಣೆ ನೀನು; ಕೋಣ ನಾನು."

"ನನ್ನನ್ನು ಏಕೆ ಬಯ್ಯುತ್ತೀರಿ ನೀವು?"

"ಜಾಣೆ ಎಂದರೆ ನಿನ್ನ ಪಾಲಿಗೆ ಬೈಗುಳವೇನು?"

"ನೀವು ಕೋಣವೆಂದಿರಲ್ಲ. ನೀವು ಕೋಣವಾದ ಬಳಿಕ ನಾನು ಕೋಣನ ಹೆಂಡತಿ..."

"ಎಮ್ಮೆ...! ಅದರ ವರ್ಣವೂ ಶ್ಯಾಮ... ಶ್ಯಾಮಲಾ!"

ಇಂಥ ರಸವತ್ತಾದ ಮಾತುಗಳಲ್ಲಿ ದಾಂಪತ್ಯ ಅರಳಿತು. ಹಾಗೆಯೇ ಹತ್ತು ವರುಷ ಕಳೆದವು.

ಈ ಹತ್ತು ವರುಷಗಳಲ್ಲಿ ಶ್ಯಾಮಲಾ ಗಂಡು ಸೌಂದರ್ಯದ ಬೆಲೆ ಕಂಡಳು.

ಇನ್ನಾರ ನೆನೆಯಲಿ?



ನೋಡುವ ಕಣ್ಣಲಿ ನೆನೆವ ಮನದಲಿ
ಮುಟ್ಟಿ ಆನಂದಿಸುವ ಆಶೆಯಲಿ
ಎಲ್ಲೆಲ್ಲೂ ನೀನೇ ತುಂಬಿರುವಾಗ
ಇನ್ನಾರ ನೋಡಲಿ! ಇನ್ನಾರ ನೆನೆಯಲಿ!

-ಸಂಚಾಕ್ಷರಿ ಹಿರೇಮಠ

"ಶ್ಯಾಮಲಾ! ನಿನ್ನ ಬ್ಯಾಂಕ್ ಬುಕ್ಕದಲ್ಲಿ ಐದು ಸಾವಿರ ರೂಪಾಯಿಗಳಿದ್ದವಲ್ಲ. ಈಗ ಒಂದೇ ಸಾವಿರ... ಏಕೆ?"

"ತಮ್ಮನಿಗೆ ಕಳಿಸಿದೆ. ಅಪ್ಪನಿಗೆ ಕಳಿಸಿದೆ. ಇನ್ನೊಬ್ಬ ತಮ್ಮನಿಗೆ ಕಳಿಸಿದೆ, ತಾಯಿಗೆ ಬಂಗಾರದ ಬಳೆ ಮಾಡಿಸಿದೆ."

"ಯಾರನ್ನು ಕೇಳಿ ಈ ಕೆಲಸ ಮಾಡಿದೆ?"

"ಆ ಹಣ ನನ್ನದೇ ಇತ್ತಲ್ಲ."

"ನಿನ್ನದೆಂದರೆ ಏನು ನಿನ್ನ ತಲೆ. ನೀನು ನನ್ನ ಸೊತ್ತಾದ ಬಳಿಕ ನಿನ್ನದೆಲ್ಲವೂ ನನ್ನ ಸೊತ್ತು."

"ನನ್ನ ಸ್ವಂತ ಗಳಿಕೆಯದು."

"ಮೂಢೆ! ನೀನು ನನ್ನಲ್ಲಿ ಕರಗಿ ಹೋದ ಬಳಿಕ ನಿನ್ನ 'ಸ್ವಂತ'ವೆಂದರೇನೆ? ನಿನ್ನ ಬಳಗದವರಿಗೆ ಹಣ ಕೊಡಲು ನೀನೇನು ಕುಬೇರನ ಮಡದಿ ಅಲ್ಲ. ಹಾಗಾದರೆ ನನ್ನ ಅಪ್ಪನಿಗೂ ಕಳಿಸು. ನನ್ನ ತಮ್ಮನಿಗೂ ಕಳಿಸು..."

"ನಿಮ್ಮ ಸಂಬಳದಿಂದ ಕಳಿಸಲು ನಾನೇಕೆ ಬೇಡವೆನ್ನಲಿ?"

"ನಾನು ಬೇರೆ ನೀನು ಬೇರೆಯಲ್ಲ. ನಾವಿಬ್ಬರೂ ಒಂದೇ ಒಂದು. ಅಂದರೆ ಎಲ್ಲವೂ ನಾನೇ ತಿಳಿಯಿತೇನು? ಇನ್ನು ಮೇಲೆ ನಿಮ್ಮವರ ಸಲುವಾಗಿ ಹಣ ಖರ್ಚು ಮಾಡಿದರೆ ನೋಡಿಕೊ? ನಿಮ್ಮ ಅಪ್ಪನಿಗೆ ಮನಿಆರ್ಡರ್ ಮಾಡಲು ನಿನ್ನ ಮದುವೆಯಾದೆನೇನು?"

"ಮದುವೆಯಾದ ಕೂಡಲೆ ನನ್ನ ವ್ಯಕ್ತಿತ್ವ ನಷ್ಟವಾಯಿತೇನು?"

"ಹೆಚ್ಚು ಮಾತಾಡಿದರೆ ಹಲ್ಲು ಮುರಿಸಿಕೊಳ್ಳುತ್ತೀ?"

ಇಂಥ ಅಸಹ್ಯ ಮಾತುಗಳು ಬರತೊಡಗಿದಂದಿನಿಂದ ನಾನು ಕಕ್ಕಾಬಿಕ್ಕಿಯಾಗತೊಡಗಿದೆ. ಮಾತು ಮಾತಿಗೆ "ನಿನ್ನಂಥ ಅರಿಷ್ಟ ಕುರೂಪಿಯನ್ನು ಮಾಡಿಕೊಂಡ ಕೃತಜ್ಞತೆ ಬೇಡವೇನು? ಅಡ್ಡ ಬೆಳೆದ ಗಿಡ್ಡಿ ನೀನು ಕರೀ ಮುಸುಡಿಯುವಳು" ಅಂದು ಮೋರೆ ತಿವಿಯತೊಡಗಿದರು.

ಈ ಗಂಡಿನ ಬಣ್ಣ ಬಯಲಾಗತೊಡಗಿತು. ಆದರೇನು ಮಾಡುವದು? ನನ್ನ ಕಚೇರಿಯಲ್ಲಿ ನಾನು ದರ್ಪದ ಅಧಿಕಾರಿಣಿಯಾಗಿದ್ದೆ. ಮನೆಯಲ್ಲಿ ಈ ಸ್ಫುರದ್ರೂಪಿ ಗಂಡನೆಂಬ ಮುಂಡನ ಕೈಯಲ್ಲಿ ಸಿಕ್ಕು ಇಲಿಮರಿಯಾಗಿದ್ದೆ.

ನನಗೊಮ್ಮೆ ಸಿಟ್ಟು ಬಂದಾಗ ಅವರ ಗಳಿಕೆಯ ವಿಚಾರ ಕೇಳಿದೆ. 'ನನ್ನದೂ ನಿನ್ನದೂ ಕೂಡಿ ಆರುನೂರಾ ಐವತ್ತು ಆಗಬಹುದು'ಎಂದರು. "ಅಂದರೆ ನಿಮ್ಮಗಳಿಕೆ ಕೇವಲ ಒಂದು ನೂರಾ ಐವತ್ತೇ ಏನು? ಬೇರೆ ನೌಕರಿ ಸಾಧ್ಯವಿಲ್ಲವೇನು? ನನ್ನ ಕಚೇರಿಯ ಕೊನೆಯ ಪೇದೆಗೆ ನಿಮ್ಮಕಿಂತ ಹೆಚ್ಚು ಸಿಗುತ್ತದೆ."

"ಇರಬಹುದು. ನಾನು ನಿನ್ನ ಗಂಡ ಪೇದೆ."

"ಹೀಗಾದರೆ ಸಂಸಾರ ಹೇಗೆ ನಡೆದೀತು?"

"ಅಂದರೆ ನೀನು ಬೇರೆ ಗಂಡನನ್ನು, ಕೈತುಂಬ ಸಂಬಳ ತರುವವನನ್ನು ನೋಡಿಕೊಳ್ಳಬೇಕೆಂದು ಮಾಡಿರುವಿಯೇನು? ನೀನೊಂದು ಹೆಣ್ಣು ಕತ್ತೆ ಯಾವ ಗಂಡು ಕತ್ತೆಯೂ ನಿನ್ನ ಕಡೆಗೆ ಹಿಂಗಾಲು ಎತ್ತಲಾರದು".

"ಅಸಹ್ಯ ಮಾತು."

"ಅಸಹ್ಯ ಮುಸುಡಿಯವಳಿಗೆ ಸುಂದರ ಗಂಡನ ಮಾತು ಅಸಹ್ಯವೇ ಅಲ್ಲವೇನು? ನಾನು ನಿನಗೆ ಕೊನೆಯ ಸಾರಿ ಹೇಳುತ್ತೇನೆ. ನನ್ನ ಗಳಿಕೆಯ ಬಗ್ಗೆ ಕೇಳಬೇಡ."

"ಇದು ನಡೆಯುವ ಮಾತಲ್ಲ."

"ಹಾಗಾದರೆ ಎದ್ದು ಹೋಗುತ್ತೇನೆ."

"ಅದಕ್ಕೆ ನನ್ನ ಪರವಾನಿಗೆ ಬೇಕೇನು? ಹೋಗುವವರ ಕಾಲು ಹೊರಗೆಯೇ ಅವಶ್ಯವಾಗಿ..."

"ನನ್ನನು ಕಳಿಸಿ ನೀನು..."

"ನಾನು ಹೆಣ್ಣು ಕತ್ತೆ ಯಾವ ಗಂಡುಕತ್ತೆಯೂ ನನ್ನ ಕಡೆಗೆ ಹಿಂಗಾಲು ಹಾರಿಸಲಾರದು. ಅದನ್ನು ಮಾಡಿದ ಒಂದು ಕತ್ತೆ ಈಗ ಹೊರ ಹೊರಟಿದೆ..."

"ಆಂ? ಆಂ?"

ಎಂದು ನನ್ನ ಕಪಾಳಿಗೆ ಎರಡು ಕೊಟ್ಟು ನನ್ನ ಸುಂದರಪುರುಷನು ಹೊರಬಿದ್ದು ಹೋಗಿಬಿಟ್ಟನು. ಅವರೊಂದು ಪಾಠ ಕಲಿಯಲೆಂದು ನಾನು ಮತ್ತೆ ಕರೆಯಲಿಲ್ಲ. ಶೋಧಿಸಲಿಲ್ಲ.

"ಎತ್ತು ಎರಗೆ ಎಳೆದರೆ ಕೋಣ ಕೆರೆಗೆ ಎಳೆಯಿತು" ಎಂಬಂತೆ ಈ ದಂಪತಿಗಳ ಬಾಳು ಇಷ್ಟೋ ದಿನ ಕೀಲದ ರಥದಂತೆ ಹೊಯ್ದಾಡತೊಡಗಿತು. ಗಂಡನ ರೂಪಕ್ಕೆ ಮರುಳಾದ ರಂಭೆ ಗಂಡು ಕಾಣದ ಹೆಣ್ಣಿನಂತೆ ಹೆಂಡತಿಯಾದಳು. ಹೆಂಡತಿಯ ಸಂಬಳದಲ್ಲಿಯೇ ತಾನು ಮೋಜು ಮಾಡಬಹುದೆಂಬ ನಂಬಿಕೆಯಲ್ಲಿ ಕುರೂಪಿಯನ್ನು ಮದುವೆಯಾದ ಗಂಡು ಅದು ಐದು ಪೇರಾಗಲು ಎದ್ದು ಹೋಯಿತು.

"ನನ್ನ ಸೊತ್ತು ನಿನ್ನ ಸೊತ್ತು" ಎಂದ ಇವರಿಗೆ ಜೀವನ ಯಾರು ಸೊತ್ತು ತಿಳಿಯಬೇಕಾಗಿತ್ತು.

ಹೆಂಡತಿ ಗರ್ಭಿಣಿ ಇರುವಾಗಲೂ ಹೊರಬಿದ್ದು ಹೋದ ಗಂಡನ ರೂಪ ಸುಂದರವೆಂದು ಹೇಗೆ ಹೇಳುವದು? ಪಾಪ! ರಂಭಾ!

"ನಾನು ಪ್ರತಿಯಾಗಿ ಅವರ ಕೆನ್ನೆ ಬಾಯಿಸಬೇಕಾಗಿತ್ತು. ಅಷ್ಟರಲ್ಲಿ ಗಂಡನೆಂಬ ಗಂಡುಕೋಣ ಹೋಗಿ ಬಿಟ್ಟಿತ್ತು. ಬಡಿಯುವ ಅಧಿಕಾರ ಗಂಡಿಗೆ ಮಾತ್ರ ಇರುವದೇನು? ಬಯ್ಯುವ ಬಾಯಿ ಗಂಡಿಗೆ ಮಾತ್ರ ಮೀಸಲೇನು? ನನ್ನದೆಲ್ಲವೂ ತನ್ನದು; ತನ್ನದು ಮಾತ್ರ ನನ್ನದಲ್ಲ. ಸಂಬಳದ ಸುಲಿಗೆಗಾಗಿ ನಾನು; ನನ್ನ ಹಣದಿಂದ ಹೊರಗೆ ಮೋಜು ಮಾಡುವ ಇವರು ನನ್ನ ಪತಿ ಹೇಗಾದರು? ಮಾಂಗಲ್ಯ ಬಿಗಿದ ಕೂಡಲೆ ದಾಂಪತ್ಯ ಬಂಧನ ಬಿಗಿ ಹೇಗಾದೀತು? ಅನಕೂಲಕ್ಕೊಬ್ಬ ಹೆಂಡತಿಯಾಗಿ ನಾನು ಬಾಳಬೇಕೆ? ಉದ್ಯೋಗಸ್ಥ ಮಹಿಳೆಯಾದ ಹೆಣ್ಣಿಗೆ ವ್ಯಕ್ತಿತ್ವವೇ ಇಲ್ಲವೆ? ಛಿ!

ಮನೆಯಲ್ಲಿಯ ಬಂಗಾರವೆಲ್ಲ ಮಾಯವಾಗಿದೆ. ಮದುವೆಯಾದ ಹೊಸದರಲ್ಲಿ ಅವರ ಹೆಸರಿನಿಂದ ಕೊಂಡ ಹತ್ತು ಸಾವಿರ ರೂಪಾಯಿಗಳ ಪ್ಲಾಟ ಮಾರಾಟ ಮಾಡಿ ಈಗ ಮೋಜು ಮಾಡತೊಡಗಿದ್ದಾರೆ. ನಾನು ಪೋಲೀಸು ಕಂಪ್ಲೆಂಟ ಕೊಟ್ಟು ಅವರನ್ನು ಹಿಡಿದು ತರಿಸಬೇಕು. ವಂಚನೆಯ ಅಪವಾದ ಹೊರಿಸಿ ಜೇಲಿಗೆ ಕಳಿಸಬೇಕು. ನನ್ನ ಸೊತ್ತನ್ನು ಕಬಳಿಸಿದವರು ಯಾರಾದರೇನು? ಗಂಡನಾದರೇನು? ಗಂಡನು ಕಾನೂನು ಬಾಹಿರವೇನಲ್ಲವಲ್ಲ.'

ದೇವರೆ! ಎರಡು ವರುಷ ಕಳೆದರೂ ಈ ಗಂಡನೆನ್ನುವ ಪ್ರಾಣಿ ಮಾಯವಾಗಿದೆ. ಅವನ ಸೊತ್ತು ಮುದ್ದಾಗಿ ಮನೆ ತುಂಬ ಆಡತೊಡಗಿದೆ. ಇದು ವಿಚಿತ್ರ! ರಂಭಾ ಎರಡು ವರುಷದಿಂದಲೂ ಒಂಟಿಯಾಗಿಯೇ ಇದ್ದಾಳೆ. ಗಂಡನು ಅಲ್ಲಲ್ಲಿ ಸುಳಿಯುತ್ತಿರುವದು ಅವಳಿಗೆ ಗೊತ್ತು; ಆದರೆ ಆ ಸುಂದರ ಮುಖ ಕಂಡು ಈ ಕುರೂಪಿಗೆ ಅಸಹ್ಯವಾಗತೊಡಗಿದೆ. ಅವನನ್ನು ಕರೆಸುವ ಗೋಜಿಗೆ ಹೋಗಿಲ್ಲ.

ಆ ದಿನ ಸುಲಕ್ಷಣಾ ಪಡಸಾಲೆಯಲ್ಲಿ ಆಡುತ್ತಿತ್ತು. ತಂದೆಯ ಸ್ವರೂಪ. ತಾಯಿಯದೇನೂ ಇಲ್ಲವೆಂಬಂತೆ ಚೆಲುವಿಕೆ.

ಬಿರುಗಾಳಿಯಂತೆ ಮದನರಾಯ ಬಂದು ನಿಂತನು. ರಂಭಾ ಕಣ್ಣೆತ್ತಿ ನೋಡಿ. ಹುಬ್ಬು ಗಂಟಿಕ್ಕಿದ್ದಳು. ಕೂಡಲೆ ಹತ್ತಿರದ ಫೋನ ಡಾಯಲ್ ತಿರುಗಿಸುತ್ತ ಅವನಿಗೆ ಹೇಳಿದಳು "ನೀವು ಕೂಡಲೆ ಹೊರಬೀಳದಿದ್ದರೆ ಸನಿಯದ ಪೋಲೀಸ್ ಠಾಣ್ಯಕ್ಕೆ ಫೋನು ಮಾಡುತ್ತೇನೆ."

"ನನಗೆ ನನ್ನ ಸೊತ್ತನ್ನು ಕೊಡು, ಹೋಗಿಬಿಡುತ್ತೇನೆ".

"ಯಾವುದು ನಿನ್ನ ಸೊತ್ತು?"

"ಸುಲಕ್ಷಣಾ""

"ಅದು ನಿನ್ನ ಸೊತ್ತೇ?"

"ಅಲ್ಲವೆಂದು ಹೇಳು. ಯಾಕಂದರೆ ಈ ವಿಷಯದಲ್ಲಿ ತಾಯಿಯ ಅಭಿಪ್ರಾಯವೇ ಅಧಿಕೃತ".

"ಥೂ!" ಎನ್ನುತ್ತ ರಂಭಾ ಮಗಳು ಸುಲಕ್ಷಣಾಳನ್ನು ಸಾವರಿಸಿ ಅಪ್ಪಿ ಹಿಡಿದುಕೊಂಡಳು.

"ಈ ಸೊತ್ತು ಯಾರದೇ ಇರಲಿ. ಏನು ಕೊಡುತ್ತೀ ಹೇಳು. ಬಿಟ್ಟು ಹೋಗುತ್ತೇನೆ. ಸರಿಯಾದ ಧಾರಣೆ ಹೇಳು".

ರಂಭಾ ಅವನನ್ನು ಕಕ್ಕರಿಸಿ ನೋಡಿದಳು "ಇದು ಬಹುಶಃ ಹೀಗೆಯೇ ಇರಬೇಕೆಂದು ನನಗೆ ಅನ್ನಿಸಿತ್ತು. ಭವಿಷ್ಯ ಚಿಂತನೆಯಲ್ಲಿ ನನ್ನ ಹೆಣ್ಣುತನ ಭುಗಿಲೆಂದಿತು. ಗಂಡನು ಹೆಣ್ಣಿನ ಸೊತ್ತಾಗದೆ ಹೆಣ್ಣು ಮಾತ್ರ ಗಂಡಿನ ಸೊತ್ತಾಗಿಯೇ ಬಾಳು ಎಳೆಯಬೇಕೆಂದು ಬಂದು ಈ ಗಂಡು ಪ್ರಾಣಿಯನ್ನು ನೋಡಿ ಹೃದಯ ಪ್ರತಿಭಟಿಸಿತು."

ಸುಲಕ್ಷಣಾ ಗಾಬರಿಯಾಗಿ ಆ ಕಡೆಗೆ ಕೈಮಾಡಿತು. ರಂಭಾ ಅವಳನ್ನು ಇನ್ನಷ್ಟು ಅಪ್ಪಿಕೊಳ್ಳುತ್ತ

"ನೀನು ನನ್ನ ಸೊತ್ತು ಮಗಳೆ!"

ಎಂದ ಮಾತುಗಳನ್ನು ಕೇಳಿ ಮದನರಾಯನು,

"ಆದರೆ ನಿನ್ನ ಅವ್ವ ನನ್ನ ಸೊತ್ತು ಮಗಳೆ?"

ಎಂದು ಅಸಹ್ಯವಾಗಿ ನಕ್ಕನು.

ಫೋನು ಕರೆಗಂಟೆ ಇನ್ನೊಂದು ತುದಿಗೆ ಟಣಟಣಿಸಿತು. ●

ಹಾ ದೇವಾ! ನಿನಗೇನು ಕೊಡಲಿ?

ಬೀchi

ತಿರುಪತಿ ತಿಮ್ಮಪ್ಪ ತಲೆಗೂದಲು ಬೇಡುತ್ತಾನೆ. ಸುಂಕ್ಲಮ್ಮ ಮೂಸೆ ಕೇಳುತ್ತಾಳೆ! ಶ್ರೀರಾಮಚಂದ್ರ ಬಂಗಾರದ ಕಣ್ಣು ಕೇಳುತ್ತಾನೆ. ಹನುಮಪ್ಪನಿಗೆ ಬೆಳ್ಳಿಯ ಕೈ ಮಾಡಿಸಬೇಕಂತೆ! ಜಡ್ಡಿಗೊಂದೊಂದು ಪರಿಹಾರ ಕೇಳಬೇಕೆ? ಆ ದೇವರು....



"ಕೂದಲು ದಟ್ಟಾಗಿ ಬೆಳೆಯೋದಿಲ್ಲ. ಈ ಹುಡಿಗೀ ತಲೀನೆ ಕಲ್ಲು ತಲೆ"

ನನ್ನ ಹೆಂಡತಿಯು ಬಾಯಿಂದ ಈ ಮಾತು ಬಂತು. ನನ್ನ ಬರವಣಿಗೆ ಆ ಕೂಡಲೆ ರಜೆ ಪಡೆಯಿತು. ನನ್ನ ತಲೆ ಎತ್ತೆತ್ತಲೊ ಓಡಲಾರಂಭಿಸಿತು.

ತಲೆಗಳಲ್ಲಿ ಕಲ್ಲುತಲೆ. ಮಂಣಾಂತಲೆ. ಮರಳು ತಲೆ ಎಂದಿರುತ್ತವೆಯೇ? ತಲೆಯ ಡಾಕ್ಟರೇ ಹೇಳಬೇಕು ಈ ಪ್ರಶ್ನೆಗೆ ಉತ್ತರವನ್ನು. ಅವರಿಗಾದರೂ ಗೊತ್ತಿದ್ದರೆ. ಐವತ್ತು ವರ್ಷ ಹಿಂದಕ್ಕೆ ಜಿಗಿಯಿತು ನನ್ನ ತಲೆ. ಆಗಾಗ ವೆಲ್ಸ್‌ನ ಟೈಮ್ ಮಶೀನ್‌ನಲ್ಲಿ ಕುಳಿತು ಹಿಂದು ಮುಂದು ಹಾರಾಡುವ ಚಟ ನನ್ನ ತಲೆಗೆ. ಈ ಮಧ್ಯೆಯಂತೂ ಇದು ಇನ್ನೂ ಹೆಚ್ಚಾಗಿದೆ–ವೃದ್ಧಾಪ್ಯದ ಲಕ್ಷಣವೇ?

ರಶಿಯಾದಲ್ಲಿ ಅರವತ್ತೆರಡು ವೃದ್ಧಾಪ್ಯವಲ್ಲ. ಅದು ಕೇವಲ ಅರವತ್ತೆರಡು ಮಾತ್ರ. ನೂರಿಪ್ಪತ್ತು ವರ್ಷಗಳು ಜನರು ಹಾಯಾಗಿ ಬದುಕುವ ದೇಶದಲ್ಲಿ ಹಾಗಿರಬಹುದು. ಆದರೆ ಮೂವತ್ತೈದೇ ಆಯುಷ್ಯದ ಸರಾಸರಿ ಪ್ರಮಾಣವಾಗಿರುವ ನಮ್ಮ ದೇಶದಲ್ಲಿ ಅರವತ್ತೆರಡು ಅತಿ ಉದ್ದ ಅಲ್ಲವೇ' ಇರಲಿ ಬಿಡಿ, ವಿಷಯಾಂತರ ಮಾಡುವುದು ಬೇಡ. ಸದ್ಯದ ಮಾತಿಗೆ ಬರೋಣ.

"ನಿನ್ನ ತಲಿಯಾಗೆ ಏನು ಬುದ್ಧಿ ಅದೋ. ಅಥವಾ ಮಣ್ಣು ಅದೋ?"

ಎಂದೊಬ್ಬ ಮಾಸ್ತರರು ನನ್ನನ್ನು ಕೇಳಿದ್ದರು. ಅರ್ಧ ಶತಮಾನದ ಹಿಂದೆ. ಈಗವರು ಇಲ್ಲವಲ್ಲಾ? ನಾನೀಗ ತಲೆ ಕೆರೆಯಬೇಕಾಯಿತು. ಇದ್ದಿದ್ದರೆ ಅವರೂ ತಲೆ ಕೆರೆಯುತ್ತಿದ್ದರು. ಮೊಮ್ಮಗಳಿಗೆ ಜಡೆ ಹಾಕುತ್ತ ಕುಳಿತಾಗ ನನ್ನ ಮಡದಿ ನುಡಿದ ಈ ಏಕೈಕ ವಾಕ್ಯ ಏನೆಲ್ಲ ಘಟನೆಗಳಿಗೆ ಕಾರಣವಾಯಿತು. ನನ್ನ ಬಡತಲೆ ಇಷ್ಟೆಲ್ಲವನ್ನು ನಿರೀಕ್ಷಿಸಲು ಹೇಗೆ ತಾನೆ ಸಾಧ್ಯ?

ಬರವಣಿಗೆ ಹೇಗೂ ಕೆಟ್ಟಿತು ಹೆಂಡತಿಯೊಡನೆ ಮಾತಿಗೆ ಬಂದೆ.

"ಮಕ್ಕಳಿಗೆ ಒಂದು ಸಲವಾದರೂ ಹುಟ್ಟು ಕೂದಲು ತೆಗೆಸಬೇಕು. ಆರೋಗ್ಯಕ್ಕೂ ಒಳ್ಳೆಯದು, ಕೂದಲೂ ಚೆನ್ನಾಗಿ ಬರುತ್ತವೆ."

"ಛಿ! ಹೆಣ್ಣು ಹುಡಿಗೀಗೆ..."

ಅತ್ತೆಯ ಮಾತು ಅರ್ಥವಾಗಿತ್ತು. ಸೊಸೆ ಮಧ್ಯೆ ಬಾಯಿ ತೆರೆದು.

"ತಿರುಪತಿಗೆ ಹೋಗಿ ದೇವರಿಗೆ ಅವಳ ಕೂದಲು ಕೊಡಬೇಕಮ್ಮಾ. ನಾನು ಹರಕೆ ಹೇಳಿಕೊಂಡಿದ್ದೆ."

ವಿಷಾದಕ್ಕಿಂತಲೂ ಹೆಚ್ಚು ಆಶ್ಚರ್ಯವಾಯಿತು ನನಗೆ. ಐವತ್ತು ದಾಟಿದ ಮುದಿಕಿಯಕಿಂತಲೂ ಇಪ್ಪತ್ತೈದು ದಾಟದ ಹುಡಿಗೆ ಹೆಚ್ಚು ಹಿಂದು ಇದ್ದಾಳೆ! ನಮ್ಮ ಮನೆಯಲ್ಲಿ ಗಡಿಯಾರ ಹಿಂದು ನಡೆಯುತ್ತಿದೆಯೆ?

ನನಗೆ ದೇವರಿಲ್ಲ ನಿಜ. ಅದರಲ್ಲೂ ಕೂದಲು ಬೇಡುವ ದೇವರು ಆ ದೇವರಾಣೆಯಾಗಿಯೂ ಇಲ್ಲ. ಇದು ನನ್ನ ಖಚಿತ ಅಭಿಪ್ರಾಯ. ಆದರೆ ಇನ್ನೊಬ್ಬರ ತಲೆಯ ಮೇಲೆ ನನ್ನ ಅಭಿಪ್ರಾಯಗಳನ್ನು ಹೇರುವ ಅಧಿಕಾರ ನನಗಿದೆಯೆ? ಹೇಳುವ ಹಕ್ಕು ಮಾತ್ರ, ಇದೆ ಹೇರುವ ಅಧಿಕಾರ ಇಲ್ಲವೆಂಬುದು ನನಗೆ ಗೊತ್ತ

"ಆ ತಿರುಪತಿ ತಿಮ್ಮಪ್ಪನಿಗೆ ಒಂದು ಹೊಸ ಹೆಸರು ಕೊಟ್ಟೀನಮ್ಮಾ ನಾನು" ಎಂದಂದೆ. ಅಚ್ಚರಿಯಿಂದ ಕೇಳಿದಳು ನನ್ನ ಸೊಸೆ.

"ಏನಪ್ಪಾ ಅದು?"

"ಹೇರ್ ಡಿಸ್ಪಾಯರ್ ಗಾಡ್"

ಮನಸ್ಸಿಗೆ ಏನನಿಸಿತೋ ಪಾಪ!

"ಛೀ ಹಾಗನಬಾರದಪ್ಪಾ, ದೇವರಿಗೆ. ಕಣ್ಣು ಕಳೀತಾನೆ"

ಹರಿಯುವವರೆಗೂ ಜಗ್ಗಬಾರದು ಎಂದು ಸುಮ್ಮನಾದೆ ಇದರ ಪರಿಣಾಮ! ಎಲ್ಲರೂ ತಿರುಪತಿಗೆ ಹೋದರು. ಬೆಟ್ಟದ ಮೇಲಿರುವ ಎತ್ತರದ ತಿರುಪತಿ ವೆಂಕಟರಮಣ ಸ್ವಾಮಿಗೆ ನನ್ನ ಮೊಮ್ಮಗಳ ಕೂದಲು, ಉಗುರು ಮತ್ತು ಅವಳು ಅಳುವಾಗ ಮೂಗಿನಿಂದ ಬಿದ್ದುದನ್ನು ಕೊಟ್ಟು ಬಂದರು.

ನಗಬೇಕೋ ಅಳಬೇಕೋ, ಆ ರೋಮಪ್ರಿಯ ದೇವರಿಗೇ ಗೊತ್ತು. ಇದ್ದುದರಲ್ಲಿಯೇ ನನಗೊಂದು ಸಮಾಧಾನ–ನನ್ನ ಮೊಮ್ಮಗಳ ಕೂದಲಾದರೂ ಪರದೇಶಕ್ಕೆ ಹೋಯಿತಲ್ಲಾ? ಫಾರಿನ್ ಎಕ್ಸ್‌ಚೇಂಜ್‌ನಿಂದ ನನ್ನ ದೇಶಕ್ಕೂ ಲಾಭ. 'ಬಾಲ್ ಗಯಾತೋ ಬಾಲ್ ಗಯಾ, ಬಾಲಾಜೀಕೂ ಬಾಲ್ ದೇವ್' ಎಂದುಕೊಂಡು ಸುಮ್ಮನಾದೆ.

ನನ್ನ ಮಿತ್ರರೊಬ್ಬರಿಗೆ ಮೂರುತಿಂಗಳಿಂದ ಕಣ್ಣು ಬಾಧೆ, ಪಾಪ! ಓದುವಾಗ ಕಣ್ಣಲ್ಲಿ ನೀರು ಸೋರುತ್ತದೆ. ಗೋಳನ್ನು ಹೇಳಿಕೊಂಡರು ಒಂದು ದಿನ.

"ಯಾವುದಾದರೂ ಶೋಕರಸಪ್ರಧಾನವಾದ ಕಾವ್ಯವನ್ನು ಓದಿದ್ದಿರಾ? ಕಣ್ಣಲ್ಲೇಕೆ ನೀರು ಬಂತು?"

ಎಂದು ಕೇಳಿದೆ. ಅವರ ಉತ್ತರಕ್ಕೂ ಕಾಯದೆ ಹಾಗೆಯೇ ಮುಂದುವರಿಸಿದೆ.

"ನಾವು ಮೊದಲು ನಗಲು ಕಲಿಯಬೇಕು ಸ್ವಾಮಿ! ನಗುವೇ ಪುಣ್ಯ. ಅಳುವೇ ಪಾಪ. ಕ್ರೈಸ್ತನನ್ನು ಯಾಕೆ ಸಿಲುಬೆಗೆ ಏರಿಸಿದರು ಗೊತ್ತೆ?"

"ಯಾಕೆ?"

"ಒಂದು ಬಾರಿಯೂ ನಗಲಿಲ್ಲ ಆ ಪ್ರಾಣಿ"

ಈ ಮಾತನ್ನು ಕೇಳಿ ನಕ್ಕರು ನನ್ನ ಮಿತ್ರರು. ಅನಂತರ ವಿವರಿಸಿದರು ತಮ್ಮ ತೊಂದರೆಯನ್ನು.

"ದಿನಪತ್ರಿಕೆಯನ್ನು ಓದಿದರೂ ಕಣ್ಣಲ್ಲಿ ನೀರು ಸುರಿಯುತ್ತದೆ."

"ಹೌದು, ಈ ಮಧ್ಯೆ ನನಗೂ ಹಾಗೆಯೇ ಆಗುತ್ತಿದೆ. ಏನಿದೆ ಪತ್ರಿಕೆಯಲ್ಲಿ? ಎಂಭತ್ತೆರಡು ವರ್ಷದ ಮುದುಕ ಬಸ್ಸು ಏರುವಾಗ ಬಿದ್ದು ಸತ್ತ ಎಂಬ ಸುದ್ದಿಯನ್ನು ಓದಲು ಇಪ್ಪತ್ತು ಪೈಸೆ ಕೊಟ್ಟೆನಲ್ಲಾ ಎಂದು ದುಃಖವಾಗಿ ನನ್ನ ಕಣ್ಣಲ್ಲೂ ನೀರು ಬರುತ್ತದೆ" ಎಂದು ಹೇಳಿದೆ. ಹಿಂದೆಯೇ ಕೇಳಿದೆ.

"ನಿಮ್ಮ ವಯಸ್ಸೆಷ್ಟು?"

"ನಲವತ್ತು?"

"ಆಯಿತಲ್ಲಾ ಚಾಲೀಸ್, ಕಣ್ಣು ಪರೀಕ್ಷೆ ಮಾಡಿಸಿ ಕನ್ನಡಕ ತೆಗೆದುಕೊಳ್ಳಿ"

ಅದೇಕೋ ಈ ಸೂಚನೆ ಅವರಿಗಷ್ಟಾಗಿ ಮೆಚ್ಚುಗೆಯಾಗಲಿಲ್ಲ. ತಮ್ಮ ಮನದಲ್ಲಿದ್ದುದನ್ನು ಮೆತ್ತಗೆ ಹೊರಗೆಡವಿದರು.

"ದೇವರಿಗೆ ಚಿನ್ನದ ಕಣ್ಣು ಮಾಡಿಸಿ ಕೊಡುತ್ತೇನೆ ಎಂದು ಬೇಡಿಕೊಂಡಿದ್ದೇನೆ"

"ಯಾವ ದೇವರಿಗೆ?"

"ನಾನೇನೋ ಶ್ರೀರಾಮ ದೇವರಿಗೆ ಮಾಡಿ ಕೊಡಬೇಕು ಎಂದು ಸಂಕಲ್ಪ ಮಾಡಿಕೊಂಡಿದ್ದೆ. ಆದರೆ ನನ್ನ ಹೆಂಡತಿ ಒಂದೆ ಹಟ ಹಿಡಿದಿದ್ದಾಳೆ. ರಾಮದೇವರಿಗೆ ಬೇಡ, ಹನುಮಪ್ಪನಿಗೇ ಮಾಡಿಸಿಕೊಡಿ ಎಂದು."

ಅರ್ಥವಾಯಿತಲ್ಲಾ. ಇವರಕ್ಕಿಂತಲೂ ಇವರ ಹೆಂಡತಿ ಜಾಣೆ ಎಂಬುದು? ರಾಮನಿಗಾದರೆ ಎರಡು ಕಣ್ಣು ಮಾಡಿಸಿಕೊಡಬೇಕು. ಆತನ ಭಟನಾದ ಹನುಮಂತನಿಗೆ ಒಂದೇ ಕಣ್ಣು. ದಡ್ಡತನದಲ್ಲಿಯೇ ಜಾಣತನ? ಹಾಳು ಮಾಡುವದರಲ್ಲಿಯೂ ಉಳಿತಾಯ?

"ನಿಮ್ಮ ಹೆಂಡತಿಯ ಸೂಚನೆಯೇ ಸರಿ. ಹಾಗೆಯೇ ಮಾಡಿಬಿಡಿ." ಎಂದು ಹೇಳಿ ಹೊತ್ತು ಹಾಕಿದೆ.

× × ×

ನಮ್ಮ ಮನೆ ಕೆಲಸದ ಹುಡುಗನಿಗೆ ಒಳ್ಳೆಯ ಯೌವನ, ಚಿಗುರು ಮೀಸೆ ಬರುತ್ತಿವೆ ದಪ್ಪನಾಗಿ. ಆದರೆ ಅದೇನೋ ವಿಚಿತ್ರ ರೋಗ. ಅದರ ಹೆಸರು ಗೊತ್ತು, ನೆನಪಿಲ್ಲ. ಸುಂದರವಾದ ಮೀಸೆಯ ಮಧ್ಯೆ ಒಂದು ತೇಪೆ. ಅಲ್ಲಿ ಕೂದಲೇ ಬೆಳೆಯುತ್ತಿಲ್ಲ. ಹುಡುಗ ಲಕ್ಷಣವಾಗಿದ್ದಾನೆ. ಮುಖ ಮಾತ್ರ ಅಸಹ್ಯ, ಈ ಒಂದು ಲೋಪದಿಂದ.

"ಇಲ್ಲಿ ಬಾ ಬರಮಾ!"

ಮುಂದು ಬಂದು ನಿಂತ. ಮತ್ತೊಮ್ಮೆ ಮುಖ ನೋಡಿದೆ. ಹೇಳಿದೆ.

"ಒಂದು ಕಾಗದ ಕೊಡುತ್ತೇನೆ. ಡಾಕ್ಟರ ಬಳಿ ಹೋಗು. ಮೀಸೆಯ ಕೂದಲು ಉದರುವುದಕ್ಕೆ ಔಷಧಿ ಕೊಡುತ್ತಾರೆ. ಅದನ್ನು ಹಚ್ಚಿಕೊ..."

ನನ್ನ ಮಾತು ಮುಗಿದಿಲ್ಲ, ಅಡ್ಡಡ್ಡ ತಲೆಯಾಡಿಸಿ ತನ್ನ ಗಹನವಾದ ಅಭಿಪ್ರಾಯವನ್ನು ಹೇಳಲಾರಂಭಿಸಿದ.

"ಇದು ದಾಕ್ದಾರಿಂದ ಹೋಗೋದಲ್ಲಪಾ! ಅಕ್ಕಿದೇವು ಬ್ಯಾಡ ಅಂದ್ರು, ನನ್ನಾಯಿ..."

"ಮತ್ತೆ?" ಎಂದು ಕೇಳಿ ಮುಖ ನೋಡಿದೆ.

"ಸುಂಕ್ಲಮ್ಮಂಗೆ ಒಂದು ಜತೆ ಬೆಳ್ಳಿ ಮೀಸೆ ಮಾಡಿಸಿ ಕೊಡತೀನಿ ಅಂತ ಬೇಡಿಕೊಂಡಿದಾಳೆ. ಅದಕ್ಕೇ ದೇವರಿಗೆ ಮೀಸಿ ಕೊಡತೀವಿ ಈ ಸೋಮಾರ"

ಹೆಣ್ಣು ದೇವರಿಗೆ ಮೀಸೆ? ಮೌಢ್ಯಕ್ಕೆ ಮದ್ದು ಇದೆಯೆ? ಮದ್ದು ಇಲ್ಲದ ರೋಗಕ್ಕೆ ಗುದ್ದು ಕೊಡುವುದೇ ಒಳ್ಳೆಯದು. ನನ್ನ ಮಡದಿ. ಮಕ್ಕಳ ಮೇಲೆಯೇ ನನ್ನ ಮಾತು ಜಾರಿ ಆಗುತ್ತಿಲ್ಲ. ಆಳಿನ ಮೇಲೆ ಏಕೆ ಎಂದು ಸುಮ್ಮನಾದೆ.

ಈಗ ನೀವು ನಮ್ಮ ಬರಮನ ಮುಖ ನೋಡಬೇಕು–ಬೆಳ್ಳಿ ಹೋಯಿತು. ಮೀಸೆ ಬರಲಿಲ್ಲ. ಆದರೂ ಅವನು ರೋಷ ಬಂದಾಗ ತಪ್ಪದೆ ಕೈ ಹಾಕುತ್ತಾನೆ. ಆ ಇಲ್ಲದ ಮೀಸೆಯ ಮೇಲೆ.

× × ×

ಅನಂತಾಚಾರಿ ನನಗೆ ಗೊತ್ತಿಲ್ಲವೆ? ನನ್ನ ಮುಂದು ಹುಟ್ಟಿದ–ಅಲ್ಲ–ಬೆಳೆದ ಹುಡುಗ. ಖಾಕಿ ಚಡ್ಡಿ ತೊಟ್ಟು ಶಾಲೆಗೆ ಹೋಗುತ್ತಿದ್ದ. ಚೆನ್ನಾಗಿ ನೆನಪಿದೆ. ಅವನಿಗೆ ಕ್ಯಾನ್ಸರ್: ಸುದ್ದಿ ಕೇಳಿದೊಡನೆ ಎದೆ ಝಲ್ಲೆಂದಿತು.

ಸಿಗರೇಟು ಸೇದಿದರೆ ಕ್ಯಾನ್ಸರ್ ಆಗುತ್ತದೆ ಎಂದರು. ಐವತ್ತೈದು ವರ್ಷಗಳು ಸಿಗರೇಟು ಸೇದಿ ಈ ಮಧ್ಯೆ ಬೀಡಿ ಹಿಡಿದಿದ್ದೇನೆ. ಸಿಗರೇಟಿನಕಿಂತಲೂ ಬೀಡಿಯೇ ಹೆಚ್ಚು ಅಪಾಯಕಾರಿ ಎಂಬ ಅಪಸ್ವರ ಎದ್ದಿದೆ ಈ ಮಧ್ಯ. ಮತ್ತೆ ಸಿಗರೇಟನ್ನೇ ಆರಂಭಿಸಲೇ ಎಂಬ ಯೋಚನೆ ಬಂತು ತಲೆಯಲ್ಲಿ. ಹಿಂದೆಯೇ ಪತ್ರಿಕೆ

ಯಲ್ಲಿ ಇನ್ನೊಂದು ವಾರ್ತೆ. ನನಗೆ ಸಂತೋಷದ ವಾರ್ತೆ. ಹೊಗೆಸೊಪ್ಪು ಸೇದುವುದಕ್ಕೂ ಕ್ಯಾನ್ಸರ್‌ಗೂ ಏನೂ ಸಂಬಂಧವಿಲ್ಲ. ದಿನಕ್ಕೊಂದು ಅಭಿಪ್ರಾಯ.

ಅದೆಲ್ಲವೂ ಏನೇ ಇರಲಿ, ಅನಂತಾಚಾರಿಗೆ ಕ್ಯಾನ್ಸರ್ ಹೇಗೆ ಬಂತು? ಸಿಗರೇಟು ಸೇದಿಲ್ಲ, ಮಾತ್ರವಲ್ಲ ಅದನ್ನು ಕೈಯಿಂದಲೂ ಮುಟ್ಟಿಲ್ಲ. ಮಡಿ ಪ್ರಾಣಿ ಪಾಪ!

"ಗಂಟಲು ಕ್ಯಾನ್ಸರ್ ಅಲ್ಲಂತೆ, ರಟ್ಟೆಗೆ ಕ್ಯಾನ್ಸರ್ ಆಗಿದೆಯಂತೆ" ಎಂದವಾರೋ ಹೇಳಿದರು. ಒಳ್ಳೇಯದೇ ಆಯಿತು, ಕೈಯನ್ನು ಕತ್ತರಿಸಿ ಬಿಸಾಡಿದರೆ ಬದುಕುತ್ತಾನೆ ಎಂದು ನೇರವಾಗಿ ಅನಂತಾಚಾರಿಗೇ ಹೇಳಿದೆ.

ನಾನೊಬ್ಬನೇ ಅಲ್ಲ ಈ ಮಾತನ್ನು ಹೇಳಿದುದು. ಸನಿಯದ ಬಂಧುಗಳಿಂದಲೂ ಹೇಳಿಸಿದೆ, ಒತ್ತಾಯ ಮಾಡಿಸಿದೆ. ಏನಂದ ಅನಂತಾಚಾರಿ ಈ ಮಾತಿಗೆ?

"ಛಿ! ದೇವರು ನನಗೆ ಎರಡು ಕೈ ಕೊಟ್ಟು ಕಳಿಸಿದ ಈ ಲೋಕಕ್ಕೆ. ನಾನು ಮರಳಿ ಹೋಗುವಾಗ ಅವನ್ನಾತನಿಗೆ ಒಪ್ಪಿಸಬೇಡವೆ ? ಒಂದು ಕೈ ಇಲ್ಲದಲೆ ಹೇಗೆ ಹೋಗಲಿ?"

ಇದಕ್ಕೇನಿದೆ ಜವಾಬು? ಇದರ ಮೇಲೆ ಅನಂತಾಚಾರಿಯ ಪ್ರಲಾಪ.

"ಲಕ್ಷ್ಮೀನೃಸಿಂಹ ಸಾಲಿಗ್ರಾಮವನ್ನು ಪೂಜೆ ಮಾಡಿದ ಕೈ ನನ್ನದು. ಇದನ್ನು ಕತ್ತರಿಸುವುದೆಂದರೇನು? ದೇವರಿಗೇ ಅಪಚಾರ?"

ಇದು ಆಚಾರ್ಯರ ದೇವರು!

ಕಡೆಗೂ ಅನಂತಾಚಾರಿ ಕೈಯನ್ನು ಕತ್ತರಿಸಿಕೊಳ್ಳಲಿಲ್ಲ. ಇದಕ್ಕೆ ಇನ್ನೊಂದೂ ಬಲವಾದ ಕಾರಣವಿತ್ತು: ರಾತ್ರಿ ಸ್ವಪ್ನದಲ್ಲಿ ಬಯಲು ಹನುಮಪ್ಪ ಕಾಣಿಸಿಕೊಂಡು ಆತನೇ ಖುದ್ದು ಹೇಳಿದನಂತೆ. ಏನೆಂದು?

"ಅನಂತಾ, ಅವರಿವರ ಮಾತನ್ನು ಕೇಳಿ ಕೈಯನ್ನು ಕತ್ತರಿಸಿಕೊಳ್ಳಬೇಡ. ನೀನು ನನ್ನ ಭಕ್ತ. ನನಗೊಂದು ಬೆಳ್ಳಿಯ ಕೈಯನ್ನು ಮಾಡಿಸಿಕೊಡು. ಸಾಕು. ನಿನ್ನ ಕ್ಯಾನ್ಸರ್ ಹೇಳದೆ ಕೇಳದೆ ಓಡಿ ಹೋಗುತ್ತದೆ."

ಆರಡಿ ಎತ್ತರದ ಹನುಮಪ್ಪನಿಗೆ ಮೂರಡಿ ಉದ್ದದ ಬೆಳ್ಳಿ ಕೈ ಮಾಡಿಸಿ ಕೊಟ್ಟ ಅನಂತಾಚಾರಿ. ಫಲಿತಾಂಶ? ಅನಂತಾಚಾರಿ ಹನುಮಪ್ಪನಿಗೆ ಕೈಕೊಟ್ಟ. ಹನುಮಪ್ಪನೂ ಆತನಿಗೆ ಕೈಕೊಟ್ಟ. ಮುಖ್ಯ ಪ್ರಾಣನ ಪರಮ ಭಕ್ತನಾದ ಅನಂತಾಚಾರಿಯ ಪಂಚಪ್ರಾಣಗಳು ಹಾರಿ ಹೋದುವು. ಪಾಪ!

× × ×

ಒಂದು ರಾತ್ರಿ ಇದ್ದಕ್ಕಿದ್ದಂತೆ ನನ್ನ ಎಡ ಕಾಲು ಕೊರಡಾಯಿತು. ಬಾತಿದೆ, ಎತ್ತಲೂ ಬಾರದು, ಮಗನೇ ಡಾಕ್ಟರು, ಮಿತ್ರರೂ ಡಾಕ್ಟರುಗಳಿದ್ದಾರೆ. ಈ ಎಲ್ಲರೂ ಸೇರಿ ನನಗೆ ಮಾಡಿದ ಉಪಕಾರವೇನು ಸಾಮಾನ್ಯವಾದುದೇ? ರೋಗವನ್ನು ಹೆಸರಿಸಿದರು–ಆರ್ಥರೈಟಿಸ್ ಎಂದರು. ಔಷಧಿ? ಇದಕ್ಕೆ ಯಾವ ಡಾಕ್ಟರಲ್ಲಿಯೂ ಔಷಧಿ ಇಲ್ಲವಂತೆ. ಮೆಡಿಕಲ್ ಜರ್ನಲ್‌ನಲ್ಲಿ ಒಬ್ಬ ಡಾಕ್ಟರಮ್ಮ ಬರೆದುದನ್ನು ಓದಿದೆ–ಈ ರೋಗ ಬಂದವರು ದೇವರಲ್ಲಿ ಪ್ರಾರ್ಥನೆ ಮಾಡಬೇಕಂತೆ. ಇಷ್ಟು ಹೇಳಲು ಈ ಮಹಾ ಮಹಿಳೆ ಎಂ. ಬಿ. ಬಿ. ಎಸ್. ಓದಿದಳೇ? ಮೂಢರನ್ನು ಕ್ಷಮಿಸಬೇಕು, ಕ್ಷಮಿಸಿದೆ.

ನನ್ನ ಗೆಳೆಯರಾದ ಬ್ರಹ್ಮಪ್ಪ ಒಂದು ದಿನ ಮನೆಗೆ ಬಂದರು. ಹರಟುತ್ತ ಕುಳಿತಾಗ ಏತಕ್ಕೋ ಎದ್ದು ಓಡಾಡಿದೆ. ಕುಂಟುವುದನ್ನು ಗಮನಿಸಿದ ಬ್ರಹ್ಮಪ್ಪ ಕೇಳಿದರು.

"ಏನಾಗಿದೆ ನಿಮಗೆ? ಕುಂಟುತ್ತೀರಲ್ಲಾ?"

"ಆರ್ಥರೈಟಿಸ್ ಅಂತೆ. ಅದಕ್ಕಾವ ಔಷಧಿಯೂ ಇಲ್ಲವಂತೆ."

ಇದನ್ನು ಕೇಳಿದ ಬ್ರಹ್ಮಪ್ಪ ಸುಮ್ಮನಾದರೇ?

"ನೀವು ಒಂದು ಕೆಲಸ ಮಾಡಿ. ಈ ಆರ್ಥರೈಟಿಸ್ ಹೇಳದೆ ಕೇಳದೆ ಓಡಿ ಹೋಗುತ್ತದೆ..."

ಅದೆಷ್ಟು ಸಂತೋಷವೋ ನನಗೆ ಗುಣವಾಗದೆಂದು ಎಲ್ಲಾ ಡಾಕ್ಟರುಗಳೂ ಹೇಳಿದ್ದಾರೆ. ಬ್ರಹ್ಮಪ್ಪನ ಚೂಟಿ ಔಷಧಿಯಿಂದ ಗುಣವಾಗುವುದಾದರೆ ಬೇಡ ಅನ್ನಲೇ?

"ನಮ್ಮ ಗೋವಿಂದೇಶ್ವರನಿಗೆ ಒಂದು ಬೆಳ್ಳಿಯ ಕಾಲು!" ಐವತ್ತು, ಅರವತ್ತು ಅಡಿ ಎತ್ತರ ನಿಂತಿದ್ದಾನೆ ಆ ಪುಣ್ಯಾತ್ಮ. ಆತನ ಕಾಲು ಎಷ್ಟು ಉದ್ದವಿದೆ? ಆ ಜಯಂಟ್‌ಗೆ ಬೆಳ್ಳಿಯ ಕಾಲು!

"ಬ್ರಹ್ಮಪ್ಪಾ! ನನ್ನ ಕುಂಟ ಕಾಲೇ ನನಗಿರಲಿ"

ಇಂದಿಗೂ ಇದೆ ಆರ್ಥರೈಟಿಸ್, ಕುಂಟುತ್ತಲೇ ಸಾಗಿದ್ದೇನೆ ಯಾವ ದೇವರ ಸಹಾಯವೂ ಇಲ್ಲದೆ. ಆದರೆ...


ಈ ಮಧ್ಯೆ ನನಗೆ ಹೊಸದೊಂದು ಕಾಯಿಲೆ ಸುರುವಾಗಿದೆ. ಹೇಳಿಕೊಳ್ಳುವುದಕ್ಕೆ ಹೇಸಿಗೆ, ಸಹಿಸಲು ಅಸಾಧ್ಯ. ಕಡೆಗೂ ಡಾಕ್ಟರ (ಲೇಡಿ ಡಾಕ್ಟರ್ ಅಲ್ಲ) ಬಳಿ ಹೋದೆ. ಪರೀಕ್ಷೆ ಮಾಡಿದರು, "ಪೈಲ್ಸ್" ಅಂದರು.

ಹಾ ದೇವಾ! ನಿನಗೇನು ಕೊಡಲಿ? ●

ವರ್ಷ ಭವಿಷ್ಯ

ಜ್ಯೋತಿಷಿ :
ಎಸ್. ಕೆ. ಜೋಗಳೇಕರ
ಜ್ಯೋತಿಷ್ಯ ಕಾರ್ಯಾಲಯ :
ರವಿವಾರಪೇಟೆ, ಧಾರವಾಡ-೧
ದೂರವಾಣಿ : ೬೭೭೮

ವಿಕ್ರಮ ಸಂವತ್ಸರ ೨೦೩೨ ರ ಭವಿಷ್ಯ, ಅರ್ಥಾತ್ ಶ್ರೀಮನ್ನೃಪ ಶಾಲಿವಾಹನ ಶಕೆ ೧೮೯೭ ನೆಯ ರಾಕ್ಷಸ ಸಂವತ್ಸರದ ಕಾರ್ತಿಕ ಶುದ್ಧಪ್ರತಿಪದೆಯಿಂದ ೧೮೯೮ ನೆಯ ನಲನಾಮ ಸಂವತ್ಸರದ ಆಶ್ವೀನಬಹುಳ ಅಮಾವಾಸ್ಯೆಯ ವರೆಗೆ ಅಂದರೆ ಕ್ರಿಸ್ತಶಕೆ ೧೯೭೫ ನೆಯ ನವಂಬರ ೪ ರಿಂದ ೧೯೭೬ ನೆಯ ಅಕ್ಟೋಬರ ೨೪ ರ ವರೆಗೆ ಅರ್ಥಾತ್ ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗಿನ ವರ್ಷಭವಿಷ್ಯ.



ಮೇಷ

ಈ ರಾಶಿಯವರಿಗೆ ಕಳೆದ ವರುಷದ ತೊಂದರೆಗಳು ಕಡಿಮೆ ಆಗುವವಾದರೂ ಉದ್ಯೋಗದಲ್ಲಿ ಅಸ್ಥಿರತೆ ವರುಷವಿಡೀ ಇರುವುದು.

ಈ ರಾಶಿಯವರಿಗೆ ಕಳೆದ ವರುಷದಿಂದ ಅಶುಭ ದಾಯಕನಾಗಿದ್ದ ಹನ್ನೆರಡನೆಯ ಗುರು ಇದೇ ಫೆಬ್ರುವರಿ ೨೫ರಿಂದ ಜನ್ಮಸ್ಥನಾಗಿ (ಒಂದನೆಯವನಾಗಿ) ಬರುವದರಿಂದ ಅವನ ಅಶುಭ ಫಲ ಕಡಿಮೆಯಾದರೂ ಶುಭಫಲವನ್ನು ಮಾತ್ರ ಆತ ನೀಡದೆ ಮಧ್ಯಮ ಫಲದಾಯಕನಾಗಿರುವನು, ಕಳೆದ ವರುಷದಿಂದಿದ್ದ ಎಂಟನೆಯ ರಾಹುವಿನ ಅನಿಷ್ಟತೆಯು ಈ ವರುಷವಿರುವದಿಲ್ಲ. ಕಳೆದ ವರುಷ ಆಗಮಿಸಿದ ನಾಲ್ಕನೆಯ ಶನಿಯ ಅಶುಭ ಫಲವು ವರುಷವಿಡೀ ಇರುವದು. ಆದರೆ ಕಳೆದ ವರುಷ ನಿಮ್ಮ ಜೀವನದ ಮೇಲೆ ಎರಗಿದ್ದ ಕಪ್ಪುಮೋಡಗಳು ಚದುರುವವು. ಇದೂ ಅಲ್ಲದೆ ಅಶ್ವಿನೀ ನಕ್ಷತ್ರದ ಮೇಷ ರಾಶಿಯವರಿಗೆ ಶುಭಫಲಗಳು ಹೆಚ್ಚು ದೊರೆತರೆ ಭರಣೀ ನಕ್ಷತ್ರದ ಮೊದಲಿನ ಎರಡು ಚರಣದವರಿಗೆ ಮಿಶ್ರ ಫಲವೂ, ಭರಣಿಯ ಕೊನೆಯ ಎರಡು ಚರಣದ ಹಾಗೂ ಕೃತ್ತಿಕಾ ನಕ್ಷತ್ರದ ಮೇಷ ರಾಶಿಯವರಿಗೆ ಈ ವರುಷವಿಡೀ ಅತ್ಯಂತ ತಾಪದಾಯಕವೂ ಜೀವನದ ಎಲ್ಲ ದೃಷ್ಟಿಯಿಂದ ಪ್ರತಿಕೂಲವೂ ಆಗಿರುವದರಿಂದ ಕಷ್ಟಕಾರ್ಪಣ್ಯ ತಪ್ಪಿದ್ದಲ್ಲ. ಅದಕ್ಕಾಗಿ ವಿಘ್ನೇಶ್ವರನನ್ನು ಭಕ್ತಿಯಿಂದ ಪೂಜಿಸಿರಿ. ಶನಿ ಗುರುಗಳ ಜಪಮಾಡಿ, ತೊಂದರೆಗಳು ಕಡಿಮೆಯಾಗುವವು.

ಆರೋಗ್ಯವು ಈ ವರ್ಷ ಈ ರಾಶಿಯವರಿಗೆ ಕಳೆದ ವರುಷದಷ್ಟು ತೊಂದರೆದಾಯಕವಾಗಿರದೆ ಕ್ರಮಶಃ ಸುಧಾರಿಸುವುದಾದರೂ ನವ್ಹೆಂಬರ್ ೧೫ರಿಂದ ಡಿಸೆಂಬರ್ ೧೫, ಮಾರ್ಚ ೧೫ ರಿಂದ ಮೇ ೧೫ ಮತ್ತು ಜುಲೈ ೧೫ ರಿಂದ ಅಗಸ್ಟ ೧೫ ರವರೆಗಿನ ನಾಲ್ಕು ತಿಂಗಳ ಕಾಲದಲ್ಲಿ ಆರೋಗ್ಯ ಕೆಡುವುದಲ್ಲದೇ ಅಪಘಾತದ ಭಯವೂ ಉಂಟು; ಆದರೆ ಇನ್ನುಳಿದ ಎಂಟು ತಿಂಗಳ ಕಾಲ ಉತ್ತಮವಿದೆ. ಆರ್ಥಿಕ ದೃಷ್ಟಿಯಿಂದ ಹೇಳಿಕೊಳ್ಳುವಷ್ಟು ಪ್ರಗತಿದಾಯಕವಾಗಿಲ್ಲವಾದರೂ ಕಳೆದ ವರುಷದಂತೆ ಸಾಲಗಾರರ ಕಾಟ ಅವಮಾನದ ಪ್ರಸಂಗ ಮೊದಲಾದ ಅಹಿತಕರ ಘಟನೆಗಳು ಜರುಗಲಾರವು. ಡಿಸೆಂಬರ್ ೧೬ರಿಂದ ಮಾರ್ಚ್ ೧೫, ಜೂನ ೧೫ ರಿಂದ ಜುಲೈ ೧೫, ಸಪ್ಟೆಂಬರ್ ೧೫ ರಿಂದ ಅಕ್ಟೋಬರ್ ೧೭ರವರೆಗಿನ ಈ ಐದು ತಿಂಗಳ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವದಲ್ಲದೆ ಆಕಸ್ಮಿಕ ಧನಲಾಭವೂ ಆಗಿ ಆರ್ಥಿಕ ಸ್ಥಿತಿ ಹಿಡಿತದಲ್ಲಿ ಇರುವದು. ಆದರೆ ನವ್ಹೆಂಬರ ೧೫ರಿಂದ ಡಿಸೆಂಬರ ೧೫, ಮಾರ್ಚ ೧೫ರಿಂದ ಎಪ್ರಿಲ್ ೧೪, ಜುಲೈ ೧೬ರಿಂದ ನವ್ಹೆಂಬರ್ ೧೪ರ ವರೆಗಿನ ಅವಧಿಯಲ್ಲಿ ಆರ್ಥಿಕ ಸ್ಥಿತಿ ಗಂಭೀರ ಸ್ವರೂಪ ತಾಳುವುದು. ಆದಾಯಕ್ಕಿಂತ ವೆಚ್ಚ ವಿಪರೀತ ಹೆಚ್ಚಿ ಆಯವ್ಯಯ ಬಾಯಿಗೂಡಿಸಲು ಸೆಣಸಬೇಕಾಗುವದಲ್ಲದೆ ಸತ್ವಪರೀಕ್ಷೆಯಾಗುವದು. ಆದರೂ ಖಂಡಿತವಾಗಿ ಪಾರಾಗುವಿರಿ. ವಾದ-ಸ್ಪರ್ಧೆ, ವ್ಯಾಜ್ಯ ಮೊದಲಾದ ಕಾರ್ಯಗಳಿಗೆ ಈ ವರುಷ ಪ್ರಗತಿದಾಯಕವಾಗಿಲ್ಲ. ಸಂಧಾನ ಮನೋಭಾವನೆಯಿಂದ ವರ್ತಿಸಿದಲ್ಲಿ ಹೆಚ್ಚು ಪ್ರಯೋಜನ. ದಾವೆ, ಖಟ್ಲೆಗಳು ಅನಿವಾರ್ಯವಿದ್ದಲ್ಲಿ ದಾಖಲು ಮಾಡಿ ಮುದ್ದತ್ತು ಪಡೆಯುತ್ತ ಹೋಗುವದೇ ಹಿತಕರವು. ನಿಖರವಾಗಿ ಹೇಳಬೇಕೆಂದರೆ ಫೌಜದಾರಿ ಮೊಕದ್ದಮೆಗಳಿಗೆ ಪೂರ್ವಾರ್ಧವೂ, ನೌಕರಿ ಹಾಗೂ ರಾಜಕೀಯ ಮೊಕದ್ದಮೆಗಳಿಗೆ ವರುಷದ ಮಧ್ಯಕಾಲವೂ, ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧವೂ ಅನುಕೂಲವಾಗಿರುವದು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ ಬಹು ವಿಚಿತ್ರವಾಗಿದೆ. ಹನ್ನೆರಡು ವರುಷಕ್ಕೊಮ್ಮೆ ಬರುವ ಜನ್ಮಸ್ಥ ಗುರುವಿನಿಂದಾಗಿ ನೌಕರಿಯಲ್ಲಿ ಸ್ಥಿರತೆ ಇರದು. ಖಾತೆ ಸಂಸ್ಥೆ, ದಫ್ತರ ಹುದ್ದೆಗಳು ಮೇಲಿಂದ ಮೇಲೆ ಬದಲಾಗುತ್ತವೆ. ಸಾಮಾನ್ಯವಾಗಿ ನೌಕರದಾರರಿಗೆ ಮೂರು ವರುಷಕ್ಕೊಮ್ಮೆ ಬದಲಿಯಾಗುವದಾದರೆ ಈ ವರುಷ ಜನ್ಮಸ್ಥ ಗುರುವಿನಿಂದಾಗಿ ಮೂರು ಸಾರೆ ಬದಲಿಯಾಗುತ್ತದೆ. ವರುಷವಿಡೀ ಅಲೆದಾಟವೇ ಇರುತ್ತದೆಂದು ಹೇಳಬೇಕು. ಈ ವರುಷದ ಇನ್ನೊಂದು ವೈಶಿಷ್ಟ್ಯವೆಂದರೆ ಆಫೀಸಿಯೇಟಿಂಗ ಆಗಿ ಹಂಗಾಮಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವ ಪ್ರಸಂಗಗಳು ಬರುತ್ತವೆ. ಆದರೆ ಈ ವ್ಯವಸ್ಥೆಯು ಅಶ್ವಿನಿ ನಕ್ಷತ್ರದ ಮೇಷ ರಾಶಿಯವರಿಗೆ ಅನುಕೂಲವೂ ಶುಭವೂ ಆಗಿರುವದು. ಅಂದರೆ ಅನುಕೂಲ ಜಾಗೆಗೆ ಬದಲಿ ಆಗುವ ಸಂಭವ; ಆದರೆ ಭರಣೀ, ಕೃತ್ತಿಕಾ, ನಕ್ಷತ್ರದ ಮೇಷ ರಾಶಿಯವರಿಗೆ ಬೇಡವಾದ ಸ್ಥಳಕ್ಕೆ ಬದಲಿಯಾಗುವದು. ನಿರುದ್ಯೋಗಿಗಳಿಗೆ ಈ ವರುಷ ಆಶಾದಾಯಕವಾಗಿದೆ. ಒಂದು ಸ್ವಾರಸ್ಯಕರ ವಿಷಯವೆಂದರೆ ಅನೇಕ ಕಡೆಗಳಿಂದ ಸಂದರ್ಶನಕ್ಕೆ ಕರೆ ಹಾಗೂ ನೇಮಣೂಕಿಯ ಆಜ್ಞೆಗಳು ಬರುತ್ತವೆ. ಆದರೆ ಯಾವ ನೌಕರಿ ಯಾವ ಹುದ್ದೆ ಯಾವ ಖಾತೆ ಹಿಡಿದರೆ ಸರಿಹೋದೀತು ಎಂಬ ಚಿಂತೆ ವರುಷಾಂತ್ಯದವರೆಗೂ ಇರುವದು. ಹಂಗಾಮಿ ನೌಕರದಾರರಿಗೆ ಈ ವರುಷ ಸಹ, ನೌಕರಿಯಲ್ಲಿ ಸ್ಥಿರತೆ ಇರುವುದಿಲ್ಲ. ಡಿಸೆಂಬರ ೧೬ ರಿಂದ ಮಾರ್ಚ ೧೫, ಜೂನ ೧೫ರಿಂದ ಜುಲೈ ೧೫, ಅಗಸ್ಟ ೧೫ರಿಂದ ಅಕ್ಟೋಬರ ೧೭ರವರೆಗಿನ ಈ ಆರು ತಿಂಗಳ ಕಾಲ ಈ ರಾಶಿಯ ನೌಕರ ವರ್ಗದವರಿಗೆ ಅನುಕೂಲವಾಗಿದ್ದು ಈ ಅವಧಿಯಲ್ಲಿ ನೌಕರಿಯಲ್ಲಿ ಬಡತಿ. ಅನುಕೂಲ ಜಾಗೆಗೆ ಬದಲಿ, ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಮೊದಲಾದ ಶುಭಫಲಗಳು ದೊರೆಯುವವು. ಆದರೆ ನವ್ಹೆಂಬರ ೧೫ರಿಂದ ಡಿಸೆಂಬರ ೧೫, ಮಾರ್ಚ ೧೬ ರಿಂದ ಮೇ ೧೪, ಜುಲೈ ೧೬ರಿಂದ ಅಗಸ್ಟ ೧೪ರವರೆಗಿನ ಈ ನಾಲ್ಕು ತಿಂಗಳ ಕಾಲ ತೀರ ಪ್ರತಿಕೂಲವಿದ್ದು, ಈ ಅವಧಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿ. ವರಿಷ್ಠರ ಅಸಹಕಾರ ಮುಂತಾದ ಅಹಿತಕರ ಘಟನೆಗಳು ಜರಗುವವು. ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಶ್ರಮಜೀವಿ ಗಿರಣಿ-ಕಾರಖಾನೆಯ ಕಾರ್ಮಿಕ ವರ್ಗದವರಿಗೆಲ್ಲ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಅವರ ಅನೇಕ ಬೇಡಿಕೆಗಳು ಈಡೇರುವವು. ಬೇಡಿಕೆಗಳಿಗಾಗಿ ಒತ್ತಾಯ ಮಾಡದೆ ರಾಜಿ. ಸಂಧಾನ ಮನೋಭಾವನೆ ಅನುಸರಿಸಿರಿ. ಜನೇವರಿ ೧೪ರಿಂದ ಮಾರ್ಚ ೧೫, ಮೇ ೧೫ರಿಂದ ಜುಲೈ ೧೫, ಅಗಸ್ಟ ೧೫ರಿಂದ

ಅಕ್ಟೋಬರ ೧೭ರವರೆಗಿನ, ಈ ಐದು ತಿಂಗಳ ಕಾಲ ಯಶೋದಾಯಕವಾಗಿದೆ.

ಈ ರಾಶಿಯ ಡಾಕ್ಟರ, ವಕೀಲ, ನ್ಯಾಯಾಧೀಶ, ಅಧ್ಯಾಪಕ, ಕಲಾವಿದ, ಪತ್ರಿಕೋದ್ಯಮಿ ಮೊದಲಾದ ಬುದ್ಧಿಜೀವಿಗಳಿಗೆ ಕಳೆದ ವರುಷಕ್ಕಿಂತ ಈ ವರುಷ ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದೆಯಾದರೂ ಉದ್ಯೋಗದಲ್ಲಿ ಸ್ಥಿರತೆ ಇರದೆ ಬದಲಾವಣೆಯುಂಟು. ಡಿಶೆಂಬರ ೧೫ರಿಂದ ಮಾರ್ಚ ೧೫, ಜೂನ ೧೫ರಿಂದ ಜುಲೈ ೧೪, ಹಾಗೂ ಅಗಸ್ಟ ೧೫ರಿಂದ ಅಕ್ಟೋಬರ ೧೭ರವರೆಗಿನ ಈ ಆರುತಿಂಗಳು ಕಾಲ ಅನುಕೂಲವಿದ್ದು ಉದ್ಯೋಗದಲ್ಲಿ ಪ್ರಗತಿ, ಮನ್ನಣೆ, ಪ್ರಶಸ್ತಿ, ಪದಕಗಳು ಲಭಿಸುವವು. ವಾಹನ ಸೌಖ್ಯ, ವಿದೇಶ ಪರ್ಯಟನಗಳಂಥ ಶುಭಘಟನೆಗಳು ಜರಗುವವು. ಈ ರಾಶಿಯ ಕೃಷಿಕರಿಗೆ ಪೂರ್ವಾರ್ಧದ ಮೂರುತಿಂಗಳು ಹಾಗೂ ಉತ್ತರಾರ್ಧದ ಮೂರುತಿಂಗಳು ಪ್ರಗತಿದಾಯಕವಿದ್ದು ಕಳೆದ ವರುಷ ಕುಂಠಿತವಾಗಿದ್ದ ಬೇಸಾಯ ಮತ್ತೆ ಪ್ರಾರಂಭವಾಗಿ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲವೆಲ್ಲ ತೀರಿ ಹೊಸದಾಗಿ ಹೊಲ ಮನೆ ದನಕರುಗಳು ಪಂಪಸೆಟ್ಟ ಮೊದಲಾದ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಖರೀದಿ ಮಾಡಬಹುದಾಗಿದೆ. ಆದರೆ ವರುಷದ ಮಧ್ಯದ ಆರು ತಿಂಗಳ ಕಾಲದಲ್ಲಿ ಕಳ್ಳಕಾಕರ ಹಾವಳಿ, ದನಕರುಗಳಿಗೆ ಬೇನೆ, ಸಾಲದ ತಗಾದೆ ಮೊದಲಾದ ಪ್ರತಿಕೂಲ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಬೇಸಾಯವನ್ನು ಮುಂದುವರಿಸುವುದೇ ದುಸ್ಸಾಧ್ಯವಾಗುತ್ತದೆ. ಗಿರಣಿ ಕಾರಖಾನೆ ಚಾಳ, ಸಿನೆಮಾ ಹೋಟೆಲಗಳ ಮಾಲಕ ವರ್ಗ ಹಾಗು ಸ್ವತಂತ್ರ ವ್ಯಾಪಾರೋದ್ಯಮಿಗಳಿಗೆ ವರುಷದ ಪೂರ್ವಾರ್ಧವು ಪ್ರಗತಿದಾಯಕವಾಗಿದ್ದರೆ ಉತ್ತರಾರ್ಧವು ತಾಪದಾಯಕವಾಗಿದೆ. ಸರಕಾರದ ನಿಬಂಧನೆ, ನೌಕರರ ಸಮಸ್ಯೆಗಳನ್ನು ಎದುರಿಸಬೇಕಾಗುವುದು.

ಈ ರಾಶಿಯ ವಧೂವರರಿಗೆ ಈ ವರ್ಷ ಕಂಕಣಬಲ ಕೂಡಿ ಬಂದಿರುವದಲ್ಲದೆ ಡಿಶೆಂಬರ ೧೫ರಿಂದ ಮಾರ್ಚ ೧೫, ಏಪ್ರಿಲ್ ೧೨ರಿಂದ ಜುಲೈ ೧೫ರವರೆಗಿನ, ಈ ಆರು ತಿಂಗಳುಗಳ ಕಾಲದಲ್ಲಿ ವಿವಾಹ ಜರುಗಲಿದೆ. ವಿವಾಹಿತ ಸ್ತ್ರೀ ಪುರುಷರಿಗೆ ಈ ವರುಷ ಪ್ರಗತಿದಾಯಕವಿದ್ದು ತಪ್ಪು ತಿಳುವಳಿಕೆಯಿಂದ ಕಲುಷಿತಗೊಂಡಿದ್ದ ಮನೆಯ ವಾತಾವರಣ ತಿಳಿಯಾಗಿ ಪರಸ್ಪರರಲ್ಲಿ ಪ್ರೀತಿ ವಿಶ್ವಾಸ ಕುದುರುವುದು, ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದಲ್ಲದೆ ಜನೇವರಿ ೧೪ರಿಂದ ಮಾರ್ಚ ೧೫, ಹಾಗೂ ಏಪ್ರಿಲ್ ೧೨ರಿಂದ ಜುಲೈ ೧೫ರವರೆಗಿನ ಈ ಐದು ತಿಂಗಳ ಕಾಲದಲ್ಲಿ ಬೆಲೆಯುಳ್ಳ ವಸ್ತುಒಡವೆಗಳನು ಖರೀದಿಸುವ, ನೂತನ ಗೃಹಪ್ರವೇಶ, ತೀರ್ಥಯಾತ್ರಾ ಸಂದರ್ಶನ ಮೊದಲಾದ ಶುಭ ಘಟನೆಗಳು ಜರಗುವವು. ಈ ರಾಶಿಯ ಗರ್ಭಿಣಿಯರ ಹೆರಿಗೆಯು ಡಿಶೆಂಬರ ೧೫ರಿಂದ ಮಾರ್ಚ ೧೫, ಮೇ ೧೫ ರಿಂದ ಜುಲೈ ೧೫, ಅಗಸ್ಟ ೧೫ರಿಂದ ಅಕ್ಟೋಬರ ೧೭ರವರೆಗಿನ ಈ ಏಳು ತಿಂಗಳಲ್ಲಿ ಆದರೆ ಸುಲಭ ಪ್ರಸೂತಿ ಆಗುವುದು. ಆದರೆ ನವಂಬರ ೧೫ರಿಂದ ಡಿಶೆಂಬರ ೧೫, ಮಾರ್ಚ ೧೫ರಿಂದ ಮೇ ೧೪, ಜುಲೈ ೧೫ರಿಂದ ಅಗಸ್ಟ ೧೪ರವರೆಗಿನ ಅವಧಿಯಲ್ಲಿ ಪ್ರಸೂತಿಯಾದರೆ ತೊಂದರೆಯಾಗುವದಲ್ಲದೆ ಶಸ್ತ್ರಕ್ರಿಯೆ ಅನಿವಾರ್ಯವಾಗುವದು.

ಈ ರಾಶಿಯ ರಾಜಕೀಯ, ಸಾಮಾಜಿಕ, ಕಾರ್ಯಕರ್ತರಿಗೆ ಈ ವರುಷ ಹೇಳಿಕೊಳ್ಳುವಷ್ಟು ಪ್ರಗತಿದಾಯಕವಾಗಿರುವದಿಲ್ಲ. ಆದರೂ ಕಳೆದ ವರುಷದಷ್ಟು ತೊಂದರೆದಾಯಕವಾಗಿಲ್ಲ. ಸಂಘಸಂಸ್ಥೆಗಳ ಪದಾಧಿಕಾರ ಹಾಗೂ ಅಧಿಕಾರ ಸ್ಥಾನಕ್ಕಾಗಿ ಹೆಣಗಬೇಕಾಗುತ್ತದೆ. ಅತ್ಯಲ್ಪ ಮತದಿಂದ ಅಧಿಕಾರ ಪಡೆದರೂ ಅದನ್ನು ಉಳಿಸಿಕೊಳ್ಳಲು ಶ್ರಮಿಸಬೇಕಾಗುತ್ತದೆ. ಕಳೆದುಕೊಂಡ ಜನಪ್ರಿಯತೆ ಮತ್ತೆ ಪಡೆಯಬಹುದು. ಶತ್ರುಗಳು ಮಿತ್ರರಂತೆ ತೋರಿದರೂ ಸಂಪೂರ್ಣ ಸಹಕಾರ ದೊರೆಯದು. ಈ ವರುಷ ಜರುಗಬಹುದಾದ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಜಯ ಖಂಡಿತ; ಆದರೆ ಚುನಾವಣೆಯಲ್ಲಿ ನಿಕರದ ಹೋರಾಟವನ್ನು ಎದುರಿಸಬೇಕಾಗುತ್ತದೆ. ಇನ್ನೊಂದು ವೈಶಿಷ್ಟವೆಂದರೆ ತಮ್ಮ ಮೂಲಕ್ಷೇತ್ರವನ್ನು ಬಿಟ್ಟು ಬೇರೆ ಕ್ಷೇತ್ರದಿಂದ ಸ್ಪರ್ಧಿಸಬೇಕಾಗಬಹುದು. ಪೂರ್ವಾರ್ಧವು ಪ್ರೋತ್ಸಾಹದಾಯಕವಾಗಿದ್ದು ಉತ್ತರಾರ್ಧವು ನಿರಾಶೆಯದಾಗಿದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಕಳೆದ ವರುಷ ಅರ್ಧಕ್ಕೆ ನಿಂತ ಶಿಕ್ಷಣ ಈ ವರುಷ ಮತ್ತೆ ಮುಂದುವರೆಯುವದು. ವಿದ್ಯಾರ್ಥಿಗಳ ಜೀವನದಲ್ಲಿಯ ಈ ವರುಷದ ಒಂದು ವೈಶಿಷ್ಟ್ಯವೆಂದರೆ ಶಾಲೆ, ಕಾಲೇಜು, ಅಥವಾ ವಿಷಯಗಳನ್ನು ಅನಿವಾರ್ಯವಾಗಿ ಬದಲಿಸಬೇಕಾಗುತ್ತದೆ. ಡಿಶೆಂಬರ ೧೫ರಿಂದ ಮಾರ್ಚ ೧೫, ಏಪ್ರಿಲ್ ೧೨ ರಿಂದ ಜುಲೈ ೧೫, ಅಗಸ್ಟ ೧೫ರಿಂದ ಅಕ್ಟೋಬರ ೧೭ರ ಅವಧಿಯಲ್ಲಿ ಜರುಗಲಿರುವ ಪರೀಕ್ಷೆಗಳಿಗೆ ಕಟ್ಟಿದ ವಿದ್ಯಾರ್ಥಿಗಳು ದರ್ಜೆ, ಶ್ರೇಣಿ ಪಡೆದು ತೇರ್ಗಡೆಯಾಗುವರಲ್ಲದೆ ಪ್ರಶಸ್ತಿ, ಪದಕ, ಶಿಷ್ಯವೇತನಗಳನ್ನು ಪಡೆಯುವರು. ಅಲ್ಲದೇ ಸಂಶೋಧನೆಗಾಗಿ ಇಲ್ಲವೇ ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶ ಸಂಚಾರವನ್ನು ಕೈಕೊಳ್ಳುವ ಯೋಗವಿದೆ. ಆದರೆ ನವ್ಹೆಂಬರ ೧೫ರಿಂದ ಡಿಶೆಂಬರ ೧೫, ಮಾರ್ಚ, ೧೫ರಿಂದ ಏಪ್ರಿಲ್ ೧೨, ಜುಲೈ ೧೫ರಿಂದ ಅಗಸ್ಟ ೧೪ರಅವಧಿಯಲ್ಲಿ ಜರುಗಲಿರುವ ಪರೀಕ್ಷೆಗೆ ಕಟ್ಟುವವರು ತೇರ್ಗಡೆಯಾಗಲು ಹೆಣಗಬೇಕಾಗುವದು.



ವೃಷಭ

ಈ ವರುಷ ಈ ರಾಶಿಯುವರಿಗೆ ಆರೋಗ್ಯ, ಉದ್ಯೋಗ, ಆರ್ಥಿಕ ದೃಷ್ಟಿಯಿಂದ ತೃಪ್ತಿಕರವಿದ್ದರೆ ಕೌಟುಂಬಿಕ ದೃಷ್ಟಿಯಿಂದ ತಾಪದಾಯಕವಿದೆ. ಬುದ್ಧಿಜೀವಿಗಳಿಗೆ ಪ್ರತಿಕೂಲವಿದ್ದರೆ, ತಾಂತ್ರಿಕ ಕೆಲಸಗಾರರಿಗೆ ಪ್ರಗತಿದಾಯಕ.

ಈ ವರುಷದ ನಿಮ್ಮ ಗ್ರಹಗತಿಯನ್ನು ಅವಲೋಕಿಸಲಾಗಿ ಮಿಶ್ರಫಲವಿದೆ. ಏಕೆಂದರೆ ಮೂರನೆಯ ಶನಿಯು ವರುಷವಿಡೀ ಶುಭಫಲ ಕೊಡುವನಾದರೆ ಕಳೆದ ವರ್ಷದಿಂದ ಹನ್ನೊಂದನೆಯುವನಾಗಿರುವ ಗುರು ಈ ವರುಷದ ಫೆಬ್ರುವರಿ ೨೫ರಂದು ಹನ್ನೆರಡನೆಯುನಾಗಲಿದ್ದು ವರುಷಾಂತ್ಯದವರೆಗೂ ತೊಂದರೆ ಕೊಡುವನು. ಆದರೆ ಮೃಗಶಿರಾದ ವೃಷಭರಾಶಿಯುವರಿಗೆ ಹನ್ನೊಂದನೆಯ ಗುರು ಹಾಗು ಎಂಟನೆಯ ರಾಹುವಿನ ಶುಭಫಲ ವರುಷವಿಡೀ ಇರುವದು. ಆರೋಗ್ಯ ವರುಷದ ಮುಕ್ಕಾಲು ಅವಧಿಯುವರೆಗೆ ಉತ್ತಮವಿದ್ದೂ ಡಿಶೆಂಬರ ೧೫ರಿಂದ ಜನೇವರಿ ೧೫, ಏಪ್ರಿಲ್ ೧೨ರಿಂದ ಜೂನ ೧೫, ಅಗಸ್ಟ ೧೫ರಿಂದ ಸಪ್ಟೆಂಬರ್ ೧೭ರವರೆಗಿನ ಅವಧಿಯಲ್ಲಿ ಅಲ್ಪ ಸ್ವಲ್ಪ ಶಾರೀರಿಕ ಪೀಡೆ ಉಂಟಾಗಬಹುದಾಗಿದೆ. ಆರ್ಥಿಕದೃಷ್ಟಿಯಿಂದ ಸುದೈವಿಗಳಾಗಿದ್ದು ವರುಷವಿಡೀ ಆರ್ಥಿಕಸ್ಥಿತಿ ತೃಪ್ತಿಕರವಿರುವದು, ಅದರಲ್ಲಿಯೂ ನವ್ಹೆಂಬರ ೪ರಿಂದ

ಡಿಶೆಂಬರ ೧೫, ಜನೇವರಿ ೧೪ರಿಂದ ಎಪ್ರಿಲ್ ೧೨ರ ವರೆಗಿನ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವುದಲ್ಲದೆ ದತ್ತಕ, ವಾರಸಾ, ಸಟ್ಟಾ, ಲಾಟರಿ, ಬಹುಮಾನ, ಬಕ್ಷೀಸ್,ಕಮೀಶನ್ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭದ ಯೋಗವಿದೆ. ಕಳೆದ ಅನೇಕ ವರುಷಗಳಿಂದ ಅರ್ಧಕ್ಕೆ ನಿಂತ ಕಾರ್ಯಗಳು ಈ ವರುಷದ ಪೂರ್ವಾರ್ಧದಲ್ಲಿ ಈಡೇರುವವು. ವಾದ ಸ್ಪರ್ಧೆಗಳಲ್ಲಿ ಜಯಲಕ್ಷ್ಮಿಯು ನಿಮ್ಮ ಕೊರಳಿಗೆ ಮಾಲೆ ಹಾಕುವಳು. ಅದರಲ್ಲಿಯೂ ದಿವಾಣಿ, ರಾಜಕೀಯ ಹಾಗು ನೌಕರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಪೂರ್ವಾರ್ಧದಲ್ಲಿಯೂ ಫೌಜದಾರಿ ವ್ಯಾಜ್ಯಗಳಿಗೆ ಉತ್ತರಾರ್ಧದಲ್ಲಿಯೂ ಯಶಸ್ಸು ಲಭಿಸುವುದು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ, ಪೂರ್ವಾರ್ಧವು ಪ್ರಗತಿದಾಯಕವಾಗಿದ್ದು ಅದರಲ್ಲಿಯೂ ನವ್ಹೆಂಬರ ೪ ರಿಂದ ಡಿಶೆಂಬರ ೧೫, ಜನೇವರಿ ೧೪ರಿಂದ ಎಪ್ರಿಲ್ ೧೨ ರ ವರೆಗಿನ ಕಾಲವು ಅತ್ಯಂತ ಶುಭದಾಯಕವಿದೆ. ಈ ಅವಧಿಯಲ್ಲಿ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ, ಹಂಗಾಮಿ ನೌಕರರಿಗೆ ಕಾಯಂ ಆಗುವಿಕೆ, ಬಹುದಿನಗಳಿಂದ ನೌಕರಿಗಾಗಿ ಬೇಟಿ ಆಡುತ್ತಿದ್ದ ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ ಮೊದಲಾದ ಶುಭ ಹಾಗೂ ಅನುಕೂಲಕರ ಘಟನೆಗಳು ಜರಗುವವು. ಆದರೆ ಉತ್ತರಾರ್ಧವು ತೀರ ತಾಪದಾಯಕವಾಗಿದ್ದು, ಅದರಲ್ಲಿಯೂ ಎಪ್ರಿಲ್ ೧೨ರಿಂದ ಜೂನ್ ೧೫, ಅಗಸ್ಟ ೧೫ರಿಂದ ಸಪ್ಟೆಂಬರ್ ೧೬ರ ವರೆಗಿನ ಅವಧಿಯು ಹೆಚ್ಚು ತೊಂದರೆದಾಯಕವಾಗಿದೆ. ಅನಪೇಕ್ಷಿತ ಸ್ಥಳಕ್ಕೆ ಬದಲಿ. ವರಿಷ್ಠರ ಅಸಹನೀಯ ಕಿರುಕಳವನ್ನು ಎದುರಿಸಬೇಕಾಗುತ್ತದೆ. ಬಾಹ್ಯ ಹಾಗೂ ಪ್ರವಾಸಿ ಕೆಲಸಗಾರರ, ತಾಂತ್ರಿಕ ಕೆಲಸಗಾರ, ಗಿರಣಿ–ಕಾರಖಾನೆಯ ಕಾರ್ಮಿಕವರ್ಗ, ಕೃಷಿ ಕಾರ್ಮಿಕ, ಹಾಗು ಶ್ರಮಜೀವಿಗಳಿಗೆಲ್ಲ ಈ ವರುಷ ಉತ್ತೇಜನಕರವಾಗಿದೆ. ಆದರೆ ಕರಣಿಕ, ಅಧ್ಯಾಪಕ, ಪತ್ರಿಕೋದ್ಯಮಿ, ಸಾಹಿತಿ, ಕಲಾವಿದ, ಡಾಕ್ಟರ ವಕೀಲ, ನ್ಯಾಯಾಧೀಶ, ಮೊದಲಾದ ಬುದ್ಧಿಜೀವಿಗಳಿಗೆ ಈ ವರುಷ ಪ್ರತಿಕೂಲವಿದೆ. ಪೂರ್ವಾರ್ಧ ಪ್ರಗತಿದಾಯಕವಿದ್ದು ಉತ್ತರಾರ್ಧ ತೀರ ತಾಪದಾಯಕವಿದೆ. ಅದರಲ್ಲಿಯೂ ನವ್ಹೆಂಬರ ೪ ರಿಂದ ಎಪ್ರಿಲ್ ೧೨ರ ವರೆಗಿನ ಅವಧಿಯಲ್ಲಿ ಅವರ ಅನೇಕ ಬೇಡಿಕೆಗಳು ಈಡೇರಲಿವೆಯಲ್ಲದೆ ಪ್ರಶಸ್ತಿ, ಪದಕ, ಪರದೇಶ ಪರ್ಯಟನ, ವಾಹನ ಸೌಖ್ಯ, ಸ್ಥಾವರಾಸ್ತಿಯ ಸಂಪಾದನೆ, ಮಾನ ಸನ್ಮಾನ ಮೊದಲಾದ ಶುಭಘಟನೆಗಳು ಜರುಗುವವು. ಉತ್ತರಾರ್ಧದಲ್ಲಿ ಹಣಕಾಸಿನ ಮುಗ್ಗಟ್ಟು ಹಾಗು ಸರಕಾರದ ನಿಬಂಧನೆ ಮತ್ತು ಕೌಟುಂಬಿಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಏಜೆಂಟ, ಗಿರಣಿ, ಟಾಕೀಜ. ಚಾಳ, ಕಾರಖಾನೆ ಹೋಟೆಲುಗಳ ಮಾಲಕ ವರ್ಗದವರಿಗೆಲ್ಲ ಪೂರ್ವಾರ್ಧ ಪ್ರಗತಿದಾಯಕವಾದರೆ ಉತ್ತರಾರ್ಧ ತೀರ ಪ್ರತಿಕೂಲವಿದೆ. ಉದ್ಯೋಗ, ಆರ್ಥಿಕದೃಷ್ಟಿಯಿಂದ ಪ್ರಗತಿದಾಯಕವಿದೆಯಾದರೂ ನೌಕರರ ಸಮಸ್ಯೆಗಳು ಸರಕಾರದ ನಿರ್ಬಂಧನೆಗಳನ್ನು ಎದುರಿಸಬೇಕಾಗುತ್ತದೆ. ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವುದು ಹಿತಕರ.


ಈ ರಾಶಿಯ ಕೃಷಿಕರಿಗೆ ಉತ್ತೇಜನಕರವಾಗಿದ್ದು ಕಳೆದ ವರುಷ ಅರ್ಧಕ್ಕೆ ನಿಂತ ಕಾರ್ಯಗಳೆಲ್ಲ ಈ ವರುಷ ಪೂರ್ತಿಯಾಗುವವು. ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಆರ್ಥಿಕಸ್ಥಿತಿಯು ಚೇತರಿಸುವದು. ಒತ್ತಿ ಹಾಕಿದ ಭೂಮಿ, ಮನೆಗಳನ್ನು ಬಿಡಿಸಿಕೊಳ್ಳುವರು. ಬೇಸಾಯಕ್ಕೆ ಬೇಕಾದ ಉಪಕರಣಗಳು ಹಾಗೂ ದನಕರುಗಳನ್ನು ಕೊಳ್ಳುವರು.

ಈ ರಾಶಿಯ ವಧೂವರರಿಗೆ ಕಂಕಣಬಲ ಕೂಡಿಬಂದಿದ್ದು, ಅದರಲ್ಲಿಯೂ ನವ್ಹೆಂಬರ ೪ ರಿಂದ ಎಪ್ರಿಲ್ ೧೨ರ ನಡುವಣ ಅವಧಿಯಲ್ಲಿ ವಿವಾಹ ಜರುಗಿ ಗೃಹಸ್ಥಾಶ್ರಮಿಗಳಾಗುವರು. ವಿವಾಹಿತ ಸ್ತ್ರೀ-ಪುರುಷರಿಗೆ ಹನ್ನೆರಡನೆಯ ಗುರುವಿನಿಂದಾಗಿ ಈ ವರುಷ ನಿರಾಶೆಯುದಾಗಿದೆ. ಅದರಲ್ಲಿಯೂ ಉತ್ತರಾರ್ಧವಂತೂ ತೀವ್ರ ತೊಂದರೆಯದು. ಅಪ್ತೇಷ್ಟರಲ್ಲಿ ಭಿನ್ನಾಭಿಪ್ರಾಯ, ತಪ್ಪುತಿಳುವಳಿಕೆ, ಚಾಡಿಯ ಪ್ರಭಾವದಿಂದಾಗಿ ನಂದನವನದಂತಿರುವ ದಾಂಪತ್ಯ ಜೀವನ ಕಲುಷಿತಗೊಳ್ಳುವದು. ಪ್ರತಿದಿನದ ಗೃಹ ಕಲಹದಿಂದಾಗಿ ಮನಸ್ಸಿಗೆ ನೆಮ್ಮದಿ ಇರದು. ಏಕತ್ರ ಕುಟುಂಬ ಒಡೆಯುವದು. ಪೂರ್ವಾರ್ಧವು ಪ್ರಗತಿದಾಯಕವಿದ್ದು ಅದರಲ್ಲಿಯೂ ಹನ್ನೊಂದನೆಯ ಗುರು ಇರುವವರೆಗಿನ ಅವಧಿಯು ತೀರ ಉತ್ತೇಜನಕರವಿದೆ. ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ಸ್ಥಾವರ ಇಸ್ಟೇಟ ಸಂಪಾದನೆ, ವಾಹನ ಸೌಖ್ಯ, ನೂತನ ಗೃಹಪ್ರವೇಶ, ತೀರ್ಥಯಾತ್ರಾ ಸಂದರ್ಶನ. ಮೊದಲಾದ ಶುಭಘಟನೆಗಳು ಜರಗುವವು. ಮಿಕ್ಕ ಎಂಟುತಿಂಗಳ ಕಾಲ ಕೌಟುಂಬಿಕ ಅಸಂತೋಷ ಹೆಚ್ಚಿ ಗೃಹಕಲಹ ಪರಾಕಾಷ್ಠೆ ಮುಟ್ಟುತ್ತದೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ಪೂರ್ವಾರ್ಧದಲ್ಲಾದರೆ ಸುಖಪ್ರಸವ, ಹೆರಿಗೆಯು ಉತ್ತರಾರ್ಧದಲ್ಲಿ ಆದರೆ ತೊಂದರೆಯಾಗುವದಲ್ಲದೆ ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಹನ್ನೆರಡನೆಯ ಗುರುವಿನಿಂದಾಗಿ ಈ ವರುಷ ನಿರುತ್ಸಾಹದಾಯಕವಾಗಿರುವದು. ಪ್ರಾಮಾಣಿಕ ಬುದ್ಧಿವಂತರೆಂದು ಕೀರ್ತಿ ಪಡೆದ ನಿಮ್ಮನ್ನು ಜನರು ತಿರಸ್ಕಾರ ದೃಷ್ಟಿಯಿಂದ ಕಾಣುವರು., ಬದಲಾದ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಬೇಕಲ್ಲದೆ ನಿರಾಶೆ ಸಲ್ಲದು. ನವ್ಹೆಂಬರ ೪ ರಿಂದ ಡಿಶೆಂಬರ ೧೫ ಹಾಗು ಜನೇವರಿ ೧೪ರಿಂದ ಎಪ್ರಿಲ್ ೧೨ರ ವರೆಗಿನ ಕಾಲ ಅನುಕೂಲಕರವಾಗಿದ್ದು . ಈ ಅವಧಿಯಲ್ಲಿ ಜರುಗಲಿರುವ ಯಾವುದೇ ಚುನಾವಣೆಗೆ ಸ್ಪರ್ಧಿಸಿದಲ್ಲಿ ಖಂಡಿತವಾಗಿಯೂ ಆಯ್ಕೆಯಾಗಿ ಸ್ಥಾನಮಾನ, ಅಧಿಕಾರ ಪಡೆಯಬಹುದಾಗಿದೆ. ಆದರೆ ಎಪ್ರಿಲ್ ೧೨ ರಿಂದ ವರುಷಾಂತ್ಯದ ವರೆಗಿನ ಕಾಲ ತೀರ ಪ್ರತಿಕೂಲವಿದ್ದು ಮಿತ್ರರು ಶತ್ರುಗಳಾಗಿ ಅವಿಶ್ವಾಸ ವ್ಯಕ್ತಪಡಿಸುವದರಿಂದ ಅಧಿಕಾರದಿಂದ ಕೆಳಗಿಳಿಯಬೇಕಾಗುವದು. ಮಿಥ್ಯಾಪವಾದಕ್ಕೆ ಗುರಿಯಾಗಿ ಅವಮಾನಿತರಾಗಬೇಕಾಗುವದಲ್ಲದೆ ಈ ಸಮಯದಲ್ಲಿ ಚುನಾವಣೆಗಳು ಜರುಗಿದರೆ ಭಾಗ ವಹಿಸದಿರುವದು ಹಿತಕರವು.

ಈ ರಾಶಿಯ ವಿದ್ಯಾರ್ಥಿಗಳಿಗೆ ಹನ್ನೆರಡನೆಯ ಗುರು ನಿರುತ್ಸಾಹದಾಯಕನಾಗಿರುವನು. ನವ್ಹೆಂಬರ ೪ರಿಂದ ಎಪ್ರಿಲ್ ೧೨ರ ಒಳಗೆ ಜರುಗಲಿರುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ಉತ್ತೀರ್ಣರಾಗುವರು. ಶ್ರೇಣಿದರ್ಜೆಗಳನ್ನು ಹೊಂದಿ ಪ್ರಶಸ್ತಿಪದಕಗಳನ್ನು ಪಡೆಯುವರಲ್ಲದೆ ಶಿಷ್ಯವೃತ್ತಿ ಪಡೆದು ಸಂಶೋಧನೆ ಇಲ್ಲವೆ ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಯಾತ್ರೆಯನ್ನು ಕೈಕೊಳ್ಳಬಹುದಾಗಿದೆ. ಆದರೆ ೧೨ ಎಪ್ರಿಲ್‌ದಿಂದ ವರ್ಷಾಂತ್ಯದ

ವರೆಗೆ ಜರುಗಲಿರುವ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳ ಫಲಿತಾಂಶವು ಸಂಶಯಾಸ್ಪದ. ಕಳೆದ ವರುಷ ದೊರೆತ ವಿದ್ಯಾರ್ಥಿವೇತನಕ್ಕೆ ಎರವಾಗಬೇಕಾಗುವದಲ್ಲದೆ ಶಿಕ್ಷಣ ಮುಂದುವರಿಸುವದು ದುಸ್ಸಾಧ್ಯವಾಗುವದು.



ಮಿಥುನ

ಬರಲಿರುವ ಹನ್ನೊಂದನೆಯ ಗುರು ಹಾಗೂ ಸಾಡೇಸಾತಿಯ ಪ್ರಭಾವ ಕಡಿಮೆ ಆಗಿರುವ ಈ ರಾಶಿಯವರಿಗೆ ಈ ವರುಷವು ಯಶೋದಾಯಕವೂ ಸುಖಪ್ರದವೂ ಆಗಿರುವದು.

ಕಳೆದ ಏಳೂವರೆ ವರುಷ ಇದ್ದ ಸಾಡೇಸಾತಿಯ ಅನಿಷ್ಟ ಪ್ರಭಾವ ಈ ರಾಶಿಯವರಿಗೆ ಕಡಿಮೆ ಆಗುವದು. ಆದರಲ್ಲಿಯೂ ಮೃಗಶಿರಾ ಹಾಗು ಆರಿದ್ರಾ ನಕ್ಷತ್ರದ ಮೊದಲೆರಡು ಚರಣದ ಮಿಥುನ ರಾಶಿಯವರು ಈ ವರುಷ ಮುಕ್ತರಾಗಿ ಮೂರನೆಯ ಶನಿಯ ಶುಭಫಲವನ್ನು ಪಡೆಯುವರು. ಇದೇ ಫೆಬ್ರುವರಿ ೨೫ರಿಂದ ಬರಲಿರುವ ಹನ್ನೊಂದನೆಯ ಗುರುವಿನ ಶುಭಫಲವಂತೂ ವರುಷಾಂತ್ಯದವರೆಗೆ ಇರುವುದು. ಎರಡು ಪ್ರಬಲ ಗ್ರಹಗಳ ಅನುಗ್ರಹಕ್ಕೆ ಪಾತ್ರರಾದ ಈ ರಾಶಿಯವರಿಗೆ ಈ ವರುಷವು ಅವರ ಜೀವನದಲ್ಲಿಯೇ ಅತ್ಯಂತ ಮಹತ್ವದ ಹಾಗು ಶುಭದ ವರುಷವೆಂದು ಹೇಳಬಹುದು. ಕಳೆದ ಅನೇಕ ವರುಷಗಳಿಂದ ಅರ್ಧಕ್ಕೆ ನಿಂತ ಕಾರ್ಯಗಳೆಲ್ಲವೂ ಈ ವರುಷ ನೆರವೇರುವದರಿಂದ ಮನಸ್ಸು ಪ್ರಸನ್ನವಾಗುವದು. ಆರೋಗ್ಯ ವರುಷದ ಮುಕ್ಕಾಲು ಅವಧಿಯ ವರೆಗೆ ಉತ್ತಮವಿದ್ದಾಗ್ಯೂ ಜನೇವರಿ ೧೪ರಿಂದ ಫೆಬ್ರುವರಿ ೧೨, ಮೇ ೧೫ ರಿಂದ ಜೂನ ೧೫, ಸಪ್ಟೆಂಬರ ೧೬ ರಿಂದ ಅಕ್ಟೋಬರ ೧೬ರ ವರೆಗಿನ ಈ ಮೂರು ತಿಂಗಳ ಕಾಲದಲ್ಲಿ ಕಿಂಚಿತ್ ಶಾರೀರಿಕ ಪೀಡೆ ಉಂಟಾಗಬಹುದಾಗಿದೆ. ಆರ್ಥಿಕ ಸ್ಥಿತಿಯು ವರುಷವಿಡೀ ತೃಪ್ತಿಕರವಿರುವದು. ಆದರಲ್ಲಿಯೂ ನವ್ಹೆಂಬರ ೪ ರಿಂದ ಡಿಶೆಂಬರ ೧೫, ಫೆಬ್ರುವರಿ ೧೨ ರಿಂದ ಮೇ ೧೫, ಅಗಸ್ಟ ೧೫ರಿಂದ ಸೆಪ್ಟೆಂಬರ ೧೬ರ ವರೆಗಿನ ಅವಧಿಯಲ್ಲಿ ದತ್ತಕ, ವಾರಸಾ, ಬಕ್ಷೀಸ್ ಬಹುಮಾನ, ಲಾಟರಿ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭವಾಗುವದರಿಂದ ಹಿಂದಿನ ಸಾಲಸೂಲಗಳೆಲ್ಲ ತೀರಿಹೋಗುವವು. ವಾದ ಸ್ಪರ್ಧೆ, ಕೋರ್ಟು ಕಚೇರಿಗಳ ಕೆಲಸಗಳಲ್ಲಿ ಖಂಡಿತವಾಗಿಯೂ ಜಯಲಕ್ಷ್ಮಿ ನಿಮ್ಮ ಕೊರಳಿಗೆ ಮಾಲೆ ಹಾಕುವದರಲ್ಲಿ ಸಂದೇಹವಿಲ್ಲ. ಆದರಲ್ಲಿಯೂ ಫೌಜದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧವೂ ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧವೂ ರಾಜಕೀಯ ಹಾಗೂ ನೌಕರರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಮಧ್ಯಕಾಲದಲ್ಲಿಯೂ ಯಶಸ್ಸು ಲಭಿಸುವುದು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ ಅತ್ಯಂತ ಶುಭದಾಯಕವಿದೆ. ಕಳೆದ ಅನೇಕ ವರುಷಗಳಿಂದ ನೌಕರಿಯ ಬೇಟೆಯಾಡುತ್ತಿದ್ದ ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವದು. ಆದರಲ್ಲಿಯೂ ನವ್ಹೆಂಬರ ೪ರಿಂದ ಜನೇವರಿ ೧೩, ಫೆಬ್ರುವರಿ ೧೨ ರಿಂದ ಮೇ ೧೫, ಅಗಸ್ಟ ೧೫ ರಿಂದ ಸಪ್ಟೆಂಬರ ೧೬ರ ವರೆಗಿನ ಅವಧಿಯು ಅತ್ಯಂತ ಶುಭಪ್ರದವಿದೆ. ಈ ಕಾಲದಲ್ಲಿ ಬಡತಿ, ಎರಡು ಕಚೇರಿಗಳ ಕಾರ್ಯಭಾರಮಾಡುವ ಸುಸಂಧಿ, ಖಾತೆಯಲ್ಲಿ ಗಣ್ಯವಕ್ತಿಗಳೆಂದು ಮನ್ನಣೆ ಪಡೆಯುವಿಕೆ, ಅನುಕೂಲ ಜಾಗೆಗೆ ಬದಲಿ, ಹಂಗಾಮಿ ನೌಕರರಿಗೆ ನೌಕರಿಯಲ್ಲಿ ಕಾಯಂ ಆಗುವಿಕೆ, ಮೊದಲಾದ ಶುಭ ಘಟನೆಗಳು ಜರುಗುವವು. ಈ ರಾಶಿಯ ಗಿರಣಿ ಕಾರಖಾನೆಯ ಕಾರ್ಮಿಕರು, ಬಾಹ್ಯ ಹಾಗೂ ಪ್ರವಾಸಿ ಕೆಲಸಗಾರರು, ತಾಂತ್ರಿಕ ವರ್ಗದವರಿಗೆಲ್ಲ ಅವರ ಅನೇಕ ಬೇಡಿಕೆಗಳು ಈಡೇರುವವು. ನಿರೀಕ್ಷೆಗಿಂತ ಹೆಚ್ಚು ಬೋನಸ್, ಒಂದೆರಡು ಅಧಿಕ ಇನಕ್ರಿಮೆಂಟ ಸಿಗಬಹುದಾಗಿದೆ. ಮುಂಬರುವ ಹನ್ನೊಂದನೆಯ ಶುಭ ಗುರುವಿನಿಂದಾಗಿ ಈ ರಾಶಿಯ ಅಧ್ಯಾಪಕ, ಕಲಾವಿದ, ಪತ್ರಿಕೋದ್ಯಮಿ, ವಕೀಲ ಡಾಕ್ಟರ, ಮೊದಲಾದ ಬುದ್ಧಿಜೀವಿಗಳಿಗೆ ಈ ವರುಷ ಅತ್ಯಂತ ಶುಭ ಹಾಗೂ ಯಶಸ್ವಿನ ವರುಷವಾಗಿದೆ. ಅವರು ಬಹುದಿನಗಳ ಆಶೆ ಆಕಾಂಕ್ಷೆಗಳು ಈಡೇರುವವಲ್ಲದೆ ಸಮಾಜದಲ್ಲಿ ಮಾನ ಸನ್ಮಾನಗಳು ದೊರೆಯುವವು. ಸರಕಾರ, ಸಂಘಸಂಸ್ಥೆಗಳಿಂದ ಪ್ರಶಸ್ತಿ ಪದಕ, ಮನ್ನಣೆ–ಪುರಸ್ಕಾರಗಳು ಲಭಿಸುವವು. ದ್ರವ್ಯಾನುಕೂಲ, ವಾಹನ ಸೌಖ್ಯ, ಸ್ಥಾವರ ಇಸ್ಟೇಟಿ ಸಂಪಾದನೆ, ಪರದೇಶ ಪರ್ಯಟನ, ಮೊದಲಾದ ಶುಭ ಹಾಗೂ ಮಹತ್ವದ ಘಟನೆಗಳು ಜರುಗುವವು. ಮೃಗಶಿರಾ ಹಾಗೂ ಆರಿದ್ರಾ ನಕ್ಷತ್ರದವರಿಗೆ ನೂರಕ್ಕೆ ನೂರರಷ್ಟು ಶುಭ ಫಲದೊರೆತರೆ ಪುನರ್ವಸು ನಕ್ಷತ್ರದ ಮಿಥುನ ರಾಶಿಯವರಿಗೆ ನೂರಕ್ಕೆ ಐವತ್ತರಷ್ಟು ಶುಭ ಫಲದೊರೆಯಬಹುದಾಗಿದೆ. ಆದರಲ್ಲಿಯೂ ನವ್ಹೆಂಬರ ೪ ರಿಂದ ಡಿಶೆಂಬರ ೧೫ರ ಫೆಬ್ರುವರಿ ೧೨ ರಿಂದ ಮೇ ೧೪ರ ಅಗಸ್ಟ ೧೫ರಿಂದ ಸಪ್ಟೆಂಬರ ೧೬ರ ವರೆಗಿನ ಅವಧಿಯಲ್ಲಿ ಹೆಚ್ಚು ಶುಭಫಲ ದೊರೆಯಬಹುದಾಗಿದೆ.


ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ ಕಮೀಶನ್ ಏಜೆಂಟ, ಹಂಚಿಕೆದಾರ ಚಿತ್ರ, ಟಾಕೀಜ, ಗಿರಣಿ, ಕಾರಖಾನೆ, ಹೋಟೇಲ ಮೊದಲಾದವುಗಳ ಮಾಲಕವರ್ಗದವರಿಗೆಲ್ಲ ಬರಲಿರುವ ಹನ್ನೊಂದನೆಯ ಗುರು ಶುಭ ಹಾಗು ಅನುಕೂಲಕರನಾಗಿರುವನು. ಉದ್ಯೋಗದಲ್ಲಿ ಪ್ರಗತಿ ಸಾಧಿಸುವದು. ಹೊಸ ಶಾಖೆಗಳನ್ನು ತೆರೆಯಬಹುದಾಗಿದೆಯಲ್ಲದೆ ಈಗಿರುವ ಉದ್ಯೋಗದ ವಿಸ್ತರಣೆಯಾಗುವದು. ಸರಕಾರ ಹಾಗು ಅಧಿಕಾರಿಗಳಿಂದ ಸಹಾಯ ಸಹಕಾರ ಸಾಕಷ್ಟು ಲಭಿಸುವದು. ನೌಕರವರ್ಗದವರ ಸಮಸ್ಯೆ ಉದ್ಭವಿಸುವುದಿಲ್ಲ. ಯಂತ್ರ ಮಶೀನರಿಗಳ ತೊಂದರೆ ಉದ್ಭವಿಸದೆ ಉತ್ಪಾದನೆ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ. ಈ ರಾಶಿಯ ಬೇಸಾಯಗಾರರಿಗೆ ಈ ವರುಷ ಶುಭ ಹಾಗೂ ಅನುಕೂಲಕರವಾಗಿದೆ. ನಿರೀಕ್ಷೆಗಿಂತ ಅಧಿಕ ಫಸಲು ಬರುವದು. ಆದರಲ್ಲಿಯೂ ಹಿಂಗಾರಿ ಬೆಳೆ ಹೆಚ್ಚು ಬರುವದರಿಂದ ದ್ರವ್ಯಾನುಕೂಲತೆಯಾಗಿ ಹಿಂದಿನ ವರುಷ ಮಾಡಿದ ಸಾಲವೆಲ್ಲ ತೀರಿಹೋಗಿ ಹೊಸದಾಗಿ ಹೊಲ ಮನೆ, ದನಕರುಗಳನ್ನು ಕೊಳ್ಳುವದಲ್ಲದೆ ಟ್ರ್ಯಾಕ್ಟರ, ಟ್ರಕ್, ಪಂಪಸೆಟ್ಟ ಮೊದಲಾದ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳಬಹುದಾಗಿದೆ.

ಬರಲಿರುವ ಹನ್ನೊಂದನೆಯ ಗುರುವಿನ ಮೂಲಕ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣಬಲ ಕೂಡಿ ಬರುವದಲ್ಲದೆ ವಿವಾಹ ಅನಾಯಾಸವಾಗಿ ಸಾಂಗವಾಗುವದು. ನವ್ಹೆಂಬರ ೪ ರಿಂದ ಮೇ ೧೫ರ ಒಳಗೆ ಬಲವತ್ತರ ವಿವಾಹಯೋಗವಿದೆ. ವಿವಾಹಿತ ಸ್ತ್ರೀ ಪುರುಷರಿಗೆ ಈ ವರುಷ ಪ್ರೋತ್ಸಾಹದಾಯಕವಾಗಿದ್ದು ಸ್ಥಾವರಾಸ್ತಿಯ ಸಂಪಾದನೆ, ತೀರ್ಥಯಾತ್ರಾ ಸಂದರ್ಶನ, ಚಲಿಯು

ಆಭರಣ-ಕೊಳ್ಳುವ, ವಾಹನಸೌಖ್ಯ ನೂತನ ಗೃಹಪ್ರವೇಶ, ಮೊದಲಾದ ಶುಭಘಟನೆಗಳು ಜರುಗುವವಲ್ಲದೆ ತಪ್ಪು ತಿಳುವಳಿಕೆಯಿಂದ ಒಡೆದು ಹೋಗಿದ್ದ ಕುಟುಂಬ ಮತ್ತೆ ಒಂದುಗೂಡುವದು. ಆಪ್ತೇಷ್ಟರು ಹಾಗು ನೆರೆಹೊರೆಯವರೊಂದಿಗೆ ಸ್ನೇಹ ವಿಶ್ವಾಸ ಬೆಳೆಯುವದು. ಈ ರಾಶಿಯ ಗರ್ಭಿಣಿಯರಿಗೆ ಹನ್ನೊಂದನೆಯ ಗುರುವಿನ ಮೂಲಕ ಹೆರಿಗೆಯು ಸುಖಪ್ರದವಾಗುವುದಲ್ಲದೆ ಗಂಡುಸಂತಾನದ ಯೋಗ ವುಂಟು.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯ ಕರ್ತರಿಗೆ ಈ ವರುಷ ಅತ್ಯಂತ ಶುಭದಾಯಕವಾಗಿದ್ದು ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಆವರು ಸಂಘಸಂಸ್ಥೆಗಳ ಪದಾಧಿಕಾರಿಗಳಾಗುವರು. ಸ್ಥಾನ-ಮಾನ ಅಧಿಕಾರ ಪಡೆಯುವರಲ್ಲದೆ ಜಿಲ್ಲೆಯ, ರಾಜ್ಯದ ಹಾಗು ರಾಷ್ಟ್ರಮಟ್ಟದ ಗಣ್ಯ ವ್ಯಕ್ತಿಗಳಾಗುವದರಲ್ಲಿ ಸಂದೇಹವಿಲ್ಲ. ಶತ್ರುಗಳು ಮಿತ್ರರಾಗುವರು. ಈ ವರುಷ ಜರುಗಬಹುದಾದ ಯಾವದೇ ಚುನಾವಣೆ ಯಲ್ಲಿ ಸ್ಪರ್ಧಿಸಿದಲ್ಲಿ ಅತ್ಯಧಿಕ ಬಹುಮತದಿಂದ ಆಯ್ಕೆ ಯಾಗಬಹುದು. ಅವಿರೋಧ ಆಯ್ಕೆಯ ಯೋಗವೂ ಉಂಟು.

ಈ ರಾಶಿಯ ವಿದ್ಯಾರ್ಥಿಗಳಿಗೆ, ಹನ್ನೊಂದನೆಯ ಗುರು ಪ್ರೋತ್ಸಾಹದಾಯಕನಾಗಿರುವನು. ಕುಂಠಿತ ವಾಗಿದ್ದ ಶಿಕ್ಷಣ ಮತ್ತೆ ಮುಂದುವರಿಯುವದಲ್ಲದೆ ಶಿಷ್ಯವೃತ್ತಿ ವಿದ್ಯಾರ್ಥಿ ವೇತನ ಕೂಡ ಲಭಿಸುವುದು. ಹೆಚ್ಚಿನ ಶಿಕ್ಷಣ ಇಲ್ಲವೆ ಸಂಶೋಧನೆಗಾಗಿ ವಿದೇಶ ಪ್ರವಾಸ ಕೈಕೊಳ್ಳಬೇಕಾಗುವದು. ಫೆಬ್ರುವರಿ ೧೨ ರಿಂದ ಮೇ ೧೫, ಅಗಸ್ಟ ೧೫ರಿಂದ ಸಪ್ಟೆಂಬರದಲ್ಲಿ ಜರುಗುವ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ದರ್ಜೆ, ಶ್ರೇಣಿ, ಪ್ರಶಸ್ತಿ ಪದಕ ಪಡೆಯುವರು, ನವ್ಹೆಂಬರ ೪ರಿಂದ ಜನೇವರಿ ೧೪, ಜೂನ ೧೫ರಿಂದ ಅಗಸ್ಟ ೧೫ರವರೆಗೆ ಜರಗುವ ಪರೀಕ್ಷೆಗೆ ಕಟ್ಟುವವರು ಸಾಮಾನ್ಯ ತರಗತಿಯಲ್ಲಿ ತೇರ್ಗಡೆಯಾಗುವರು. ಆದರೆ ಜನೇವರಿ ೧೮ರಿಂದ ಫೆಬ್ರುವರಿ ೧೧ ಹಾಗೂ ಸಪ್ಟೆಂಬರ್ ೧೭ರಿಂದ ಅಕ್ಟೋಬರ್ ೧೭ರವರೆಗೆ ಜರುಗಲಿರುವ ಪರೀಕ್ಷೆಗೆ ಕಟ್ಟುವವರು ತೇರ್ಗಡೆಯಾಗಲು ಬಹಳ ಪರಿಶ್ರಮ ಪಡಬೇಕಾಗುವುದು.



ಕರ್ಕ

ಈ ರಾಶಿಯ ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಈ ವರುಷ ಯಾವ ಹೆಚ್ಚಿನ ಮಹತ್ವದ ಶುಭಾಶುಭ ಫಲಗಳು ದೊರೆಯದೆ ಯಥಾಸ್ಥಿತಿಯೇ ಮುಂದುವರೆಯುವದು.

ಈ ರಾಶಿಯವರಿಗೆ ಕಳೆದ ವರುಷದಿಂದ ಪ್ರಾರಂಭವಾದ ಜನ್ಮಸ್ಥ ಶನಿಯು ಈ ವರುಷವೂ ಮುಂದುವರೆಯುವನು. ಪುನರ್ವಸು ಪುಷ್ಯದ ಮೊದಲಿನ ಎರಡು ಚರಣದ ಕರ್ಕರಾಶಿಯವರೆಗೆ ಜನ್ಮಸ್ಥ ಶನಿಯ ಪ್ರಖರತೆ ಇರದು. ಪುಷ್ಯದ ಕೊನೆಯ ಎರಡು ಚರಣ ಹಾಗು ಆಶ್ಲೇಷದವರಿಗೂ ಜನ್ಮಸ್ಥ ಶನಿಯ ಪ್ರಖರತೆ ಹಾಗೇ ಇರುವುದು. ಅದಕ್ಕಾಗಿ ಶನಿ ಜಪ, ಮಾರುತಿಯ ದರ್ಶನ ಮಾಡಿರಿ, ತೊಂದರೆ ಕಡಿಮೆ ಯಾಗುವವು. ಕಳೆದ ವರುಷದಿಂದ ಒಂಭತ್ತನೆಯವನಾಗಿ ಶುಭಫಲವನ್ನು ಕೊಡುತ್ತಿದ್ದ ಗುರು ಇದೇ ಫೆಬ್ರುವರಿ ೨೫ರಿಂದ ಹತ್ತನೆಯವನಾಗಲಿದ್ದು ಶುಭಫಲವನ್ನು ಕೊಡದಿದ್ದರೂ ಅಶುಭ ಫಲವನ್ನು ಕೊಡಲಾರ. ಆದರೆ ಆಶ್ಲೇಷಾ ನಕ್ಷತ್ರದ ಕರ್ಕರಾಶಿಯವರಿಗೆ ಒಂಭತ್ತನೆಯ ಗುರುವಿನ ಶುಭ ಫಲದೊರೆತರೆ ಪುನರ್ವಸು, ಪುಷ್ಯ ನಕ್ಷತ್ರದ ಕರ್ಕ ರಾಶಿಯವರಿಗೆ ಹತ್ತನೆಯ ಗುರುವಿನ ಫಲವು ದೊರೆಯುತ್ತದೆ. ಕಳೆದ ವರುಷದಿಂದ ಪ್ರಾರಂಭವಾದ ಅನಿಷ್ಟ ರಾಹು ಈ ವರುಷ ಕೂಡ ನಾಲ್ಕನೆಯವನಾಗಿಯೇ ಮುಂದುವರೆಯುತ್ತಾನೆ. ಗ್ರಹಗತಿ ಹೀಗಿರುವದರಿಂದ ಯಾವ ಹೆಚ್ಚಿನ ಏರಿಳಿತವಿರದೇ ಯಥಾಸ್ಥಿತಿ ಮುಂದುವರಿಯುವದು. ಆರೋಗ್ಯದ ದೃಷ್ಟಿಯಿಂದ ಹೇಳಿಕೊಳ್ಳುವಷ್ಟು ಸುಧಾರಣೆ ಇಲ್ಲದಿದ್ದರೂ ಕಳೆದ ವರುಷವಿದ್ದಷ್ಟು ಪ್ರಖರತೆ ಇರುವದಿಲ್ಲ. ಆದರೂ ನವ್ಹೆಂಬರ ೪ ರಿಂದ ಡಿಶೆಂಬರ ೧೫, ಜನೇವರಿ ೧೪ರಿಂದ ಮಾರ್ಚ ೧೫ ಹಾಗೂ ಜೂನ ೧೫ ರಿಂದ ಆಗಸ್ಟ ೧೫ರವರೆಗಿನ ಅವಧಿಯಲ್ಲಿ ಶಾರೀರಿಕ ಪೀಡೆ ಹೆಚ್ಚುವದಲ್ಲದೇ ಅಪಘಾತದ ಭಯವುಂಟು. ಶತ್ರುಗಳ ಪೀಡೆ ಹೆಚ್ಚಿ ರೋಗ ಉಲ್ಬಣಿಸಬಹುದಾಗಿದೆ. ಅಂತೆಯೇ ಈ ಅವಧಿಯಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕು. ಚಾಲಕ ವರ್ಗದವರು ಯಾಂತ್ರಿಕ ಕೆಲಸಗಾರರು ಈ ಕಾಲದಲ್ಲಿ ಮುಂಜಾಗ್ರತೆ ವಹಿಸುವದು ಒಳ್ಳೆಯದು. ಆರ್ಥಿಕ ದೃಷ್ಟಿಯಿಂದ ಈ ವರುಷ ಮಿಶ್ರ ಫಲವಿದೆ. ಡಿಶೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ ರಿಂದ ಜೂನ ೧೫ ಹಾಗು ಸಪ್ಟೆಂಬರ ೧೫ರಿಂದ ಅಕ್ಟೋಬರ ೧೭ರ ವರಗಿನ ಈ ಐದುತಿಂಗಳ ಕಾಲ ಹಣಕಾಸಿನ ದೃಷ್ಟಿಯಿಂದ ಅನುಕೂಲವಿದ್ದು ಈ ಅವಧಿಯಲ್ಲಿ ನಿರೀಕ್ಷಿಸಿದೆಡೆಯಿಂದ ಸಾಕಷ್ಟು ಹಣ ಬರುವದರಿಂದ ಹಣಕಾಸಿನ ಸ್ಥಿತಿ ಹಿಡಿತದಲ್ಲಿರುವದಲ್ಲದೆ ಕಳೆದ ವರುಷ ಅರ್ಧಕ್ಕೆ ನಿಂತ ಕಾರ್ಯ ಈ ಅವಧಿಯಲ್ಲಿ ಪೂರ್ತಿಯಾಗುವದು, ಆದರೆ ಜನೇವರಿ ೧೪ರಿಂದ ಮಾರ್ಚ ೧೪ ಹಾಗೂ ಜೂನ ೧೫ರಿಂದ ಸಪ್ಟೆಂಬರ ೧೫ರವರೆಗಿನ ಅವಧಿಯು ತೀರ ಪ್ರತಿಕೂಲವಾಗಿದ್ದು ಬರತಕ್ಕ ಹಣ ಸಮಯಕ್ಕೆ ಬರದೆ ಕೊಡತಕ್ಕ ಹಣಕ್ಕಾಗಿ ತೊಂದರೆಯಾಗುವದು. ಆರ್ಥಿಕ ತಾಪತ್ರಯ ಪರಾಕಾಷ್ಠಕ್ಕೆ ತಲುಪುವುದಲ್ಲದೇ ಸಾಲಗಾರರಿಂದ ಅವಮಾನಿತರಾಗಬೇಕಾಗುವದು. ಹಾಗು ಮನೆಯಲ್ಲಿ ಜರುಗಲಿರುವ ಮಂಗಲಕಾರ್ಯಕ್ಕಾಗಿ ಹೊಸ ಸಾಲಕ್ಕೆ ಮೊರೆಹೋಗುವ ಪ್ರಸಂಗವೂ ಇದೇ ಸಮಯದಲ್ಲಿ ಬರಬಹುದಾಗಿದೆ. ವಾದ, ಸ್ಪರ್ಧೆ, ಕೋರ್ಟು ಕಚೇರಿಯ ಕಾರ್ಯದಲ್ಲಿ ಸಂಧಾನ ಮನೋಭಾವನೆಯಿಂದ ಲಾಭ ತಟ್ಟುತ್ತದೆ. ನ್ಯಾಯನಿರ್ಣಯ ಪೂರ್ವಾರ್ಧದಲ್ಲಿ ನಡೆದರೆ ಹಾನಿಯಾಗದಿದ್ದರೂ ಲಾಭವಿಲ್ಲ; ಆದರೆ ಶೀರ್ಮಾನ ಉತ್ತರಾರ್ಧದಲ್ಲಿ ಜರುಗಿದರೆ ಹಾನಿಯಾಗುವದು.

ಈ ರಾಶಿಯ ನೌಕರ ವರ್ಗ ಹಾಗು ನಿರುದ್ಯೋಗಿಗಳಿಗೆ ಈ ವರುಷ ಹೇಳಿಕೊಳ್ಳುವಷ್ಟು ಪ್ರೋತ್ಸಾಹದಾಯಕವಾಗಿರುವದಿಲ್ಲ. ಆದಾಗ್ಯೂ ಡಿಶೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಜೂನ೧೫ ಹಾಗು ಅಗಸ್ಟ ೧೫ರಿಂದ ಅಕ್ಟೋಬರ ೧೭ರವರೆಗಿನ ಈ ಆರುತಿಂಗಳಕಾಲ ಇದ್ದುದರಲ್ಲಿಯೇ ಶುಭವೂ ಅನುಕೂಲವೂ ಆಗಿರುವದರಿಂದ ಈ ಅವಧಿಯಲ್ಲಿ ಬಡತಿ, ಅನುಕೂಲ ಜಾಗೆಗೆ ಬದಲೀ ವರಿಷ್ಠರ ಸಹಕಾರ, ನಿರುದ್ಯೋಗಿಗಳಿಗೆ ಬಹುಪ್ರಯಾಸದಿಂದ ನೌಕರಿ ಲಭಿಸುವಿಕೆ, ಇವೇ ಮೊದಲಾದ ಶುಭಘಟನೆಗಳು ಜರುಗುವವು. ಜನೇವರಿ ೧೪ರಿಂದ ಮಾರ್ಚ ೧೪, ಜೂನ ೧೫ರಿಂದ ಅಗಸ್ಟ ೧೪ರವರೆಗೆ ಈ ನಾಲ್ಕು ತಿಂಗಳಕಾಲ ಈ ರಾಶಿಯ ನೌಕರವರ್ಗದವರಿಗೆ ತೀರ ಪ್ರತಿಕೂಲವಾಗಿದೆ. ಈ ಕಾಲದಲ್ಲಿ ಬೇಡವಾದ ಸ್ಥಳಕ್ಕೆ ಬದಲಿ, ಹಿಂಬಡತಿ, ವರಿಷ್ಠರ ಕಿರುಕಳದಿಂದಾಗಿ ನೌಕರಿಗೆ ತಿಲಾಂಜಲಿನ್ನೀಯುವಷ್ಟರ ಮಟ್ಟಿಗೆ ಅಸಹನಿಯವಾಗುತ್ತದೆ. ತಾಳಿದವ ಬಾಳಬಲ್ಲ ಎಂಬುದನ್ನು ಮಾತ್ರ ಮರೆಯಕೂಡದು. ಈ ರಾಶಿಯ ಬಾಹ್ಯ ಹಾಗೂ ಸಂಚಾರಿ ಕೆಲಸಗಾರರು, ತಾಂತ್ರಿಕ ಕೆಲಸಗಾರರು, ಗಿರಣಿ ಕಾರಖಾನೆಗಳ ಕಾರ್ಮಿಕ ವರ್ಗದವರಿಗೆಲ್ಲ ಈ ವರುಷ ಪ್ರೋತ್ಸಾಹದಾಯಕವಾಗಿಲ್ಲವಾದರೂ ಪೂರ್ವಾರ್ಧವು ಇದ್ದುದರಲ್ಲಿಯೇ ಅನುಕೂಲವಾಗಿದ್ದು ಅವರ ಕೆಲ ಬೇಡಿಕೆಗಳು ಈಡೇರುವವು. ಎಲ್ಲ ಬೇಡಿಕೆಗಳಿಗಾಗಿ ಒತ್ತಾಯಮಾಡಿ ಎಲ್ಲವನ್ನೂ ಕಳೆದುಕೊಳ್ಳುವದಕ್ಕಿಂತ ರಾಜೀ ಮನೋಭಾವನೆಯಿಂದ ಕೆಲವಾದರೂ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದು.

ಈ ರಾಶಿಯ ಸಾಹಿತಿ, ಲೇಖಕ,, ಕಲಾವಿದ, ಪತ್ರಿಕೋದ್ಯಮಿ, ಅಧ್ಯಾಪಕ, ಡಾಕ್ಟರ, ವಕೀಲ ಮೊದಲಾದ ಬುದ್ಧಿಜೀವಿಗಳಿಗೆ ಈ ವರುಷ ಮಿಶ್ರ ಫಲವಿದೆ. ಪುನರ್ವಸು ಪುಷ್ಯ ನಕ್ಷತ್ರದ ಕರ್ಕ ರಾಶಿಯವರಿಗೆ ಪೂರ್ವಾರ್ಧವು ಪ್ರಗತಿದಾಯಕವಾ

ಎನ್ನ ಪ್ರಾಣವೇ!



ಎನ್ನ ಮನ ಬುದ್ಧಿ ಚಿತ್ತ ಎಲ್ಲದರತುಂಬ
ತುಂಬಿ ಇಂಬಿಲ್ಲದಂತೆ ಇರುವವಳೇ!

ಇಷ್ಟು ಹತ್ತಿರವಿದ್ದೂ ದೂರಿರುವ ನಿನ್ನ
ನಾನು ಏನೆಂದು ಕರೆಯಲಿ ಎನ್ನ
ಪ್ರಾಣವೇ!

-ಪಂಚಾಕ್ಷರಿ ಹಿರೇಮಠ


ದರೆ ಆಶ್ಲೇಷಾ ನಕ್ಷತ್ರದವರಿಗೆ ಮಧ್ಯದ ಕಾಲವು ಪ್ರಗತಿದಾಯಕವಾಗಿದೆ. ಈ ಕಾಲದಲ್ಲಿ ಉದ್ಯೋಗದಲ್ಲಿ ಪ್ರಗತಿ ಸ್ಥಿರತೆ ಮನ್ನಣೆ ದೊರೆಯುವದಲ್ಲದೆ ದ್ರವ್ಯಾನುಕೂಲತೆಯೂ ಆಗುವದು. ಆದರೆ ಉತ್ತರಾರ್ಧವು ತೀರ ತೊಂದರೆಯದು. ಆದರಲ್ಲಿಯೂ ಜೂನ, ಜುಲೈ, ಆಗಸ್ಟ ಈ ತಿಂಗಳುಗಳಲ್ಲಿ ಉದ್ಯೋಗದಲ್ಲಿ ತೊಂದರೆ ಹಾಗು ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗುವುದು. ಈ ರಾಶಿಯ ಕೃಷಿಕ ವರ್ಗದವರಿಗೆ ಈ ವರುಷದ ಮುಂಗಾರು ಬೆಳೆ ನಿರೀಕ್ಷೆಗಿಂತ ಹೆಚ್ಚು ಬಂದು ಆರ್ಥಿಕ ಸ್ಥಿತಿ ಚೇತರಿಸಿ ಹೊಸ ಜಾಗೆ, ಮನೆ ದನಕರುಗಳು ಬೇಸಾಯದ ಉಪಕರಣಗಳನ್ನು ಕೊಳ್ಳುವ ಇಲ್ಲವೇ ನವೀಕರಿಸುವ ಸಾಧ್ಯತೆ ಉಂಟು; ಆದರೆ ಹಿಂಗಾರಿ ಬೆಳೆ ಕೈ ಕೊಡುವದರಿಂದ ಲೆಕ್ಕ ಸಂಪೂರ್ಣ ತಪ್ಪುತ್ತದೆ. ಆದರಲ್ಲಿಯೂ ಜೂನ ೧೫ ರಿಂದ ಸಪ್ಟೆಂಬರ ೧೫ ರವರೆಗಿನ ಕಾಲ ತೀರ ತಾಪದಾಯಕವಿದ್ದು ಸಾಲಗಾರರ ಕಾಟ. ಹೊಸ ಸಾಲಕ್ಕಾಗಿ ಪರದಾಟ, ಹೊಲ ಮನೆ ಒತ್ತಿ ಹಾಕಿ ಋಣ ಮುಕ್ತರಾಗುವ ಸನ್ನಿವೇಶ ಪ್ರಾಪ್ತವಾಗುತ್ತದೆ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಲೋಕಕಮೀಶನ್ ಏಜೆಂಟ, ಹಂಚಿಕೆದಾರ ಗಿರಣಿ, ಕಾರಖಾನೆ, ಟಾಕೀಜ, ಚಾಳ, ಹೋಟೇಲಗಳ ಮಾಲಕವರ್ಗದವರಿಗೆ ಈ ವರುಷ ಪ್ರೋತ್ಸಾಹದಾಯಕವಾಗಿರುವದಿಲ್ಲ. ಇದ್ದುದರಲ್ಲಿಯೇ ನವ್ಹೆಂಬರ ೪ ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಜೂನ ೧೫ರವರೆಗಿನ ಕಾಲವು ಅನುಕೂಲವಿದ್ದು ಉದ್ಯೋಗದಲ್ಲಿ ಪ್ರಗತಿ ಸಾಧಿಸಿ ಆರ್ಥಿಕ ಸ್ಥಿತಿ ಚೇತರಿಸುತ್ತದೆ. ಆದರೆ ಜನೇವರಿ ೧೪ ರಿಂದ ಮಾರ್ಚ ೧೪ ಮತ್ತು ಜೂನ ೧೫ರಿಂದ ಸಪ್ಟೆಂಬರ ೧೬ರ ವರೆಗಿನ ಕಾಲ ತೀರ ಪ್ರತಿಕೂಲವಾಗಿದ್ದು ಈ ಅವಧಿಯಲ್ಲಿ ಉದ್ಯೋಗದಲ್ಲಿ ಹಿನ್ನಡೆ. ಆರ್ಥಿಕ ಮುಗ್ಗಟ್ಟು, ನೌಕರರ ಸಮಸ್ಯೆ ಹಾಗು ಸರಕಾರದ ನಿಬಂಧನೆಗಳನ್ನೆದುರಿಸಬೇಕಾಗುವುದು.

ಈ ರಾಶಿಯ ವಧೂವರರಿಗೆ ಈ ವರುಷ ಕಂಕಣ ಬಲ ಕೂಡಿ ಬಂದಿದೆ. ಆದರಲ್ಲಿಯೂ ಪುನರ್ವಸು, ಪುಷ್ಯ ನಕ್ಷತ್ರದ ಪೂರ್ವಾರ್ಧ, ಆಶ್ಲೇಷಾದ ಕರ್ಕ ರಾಶಿಯವರಿಗೆ ಉತ್ತರಾರ್ಧದಲ್ಲಿಯೂ ವಿವಾಹ ಜರುಗಿ ಗೃಹಸ್ಥಾಶ್ರಮದ ಆನಂದಮಯ ಜೀವನದಲ್ಲಿ ಓಲಾಡುವರು. ವಿವಾಹಿತ ಸ್ತ್ರೀಪುರುಷರಿಗೆಲ್ಲ ಮಿಶ್ರ ಫಲವಿದೆ. ಡಿಶೆಂಬರ ೧೫ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫, ಸಪ್ಟೆಂಬರ ೧೬ರಿಂದ ಅಕ್ಟೋಬರ ೧೬ರವರೆಗೆ ಕಾಲ ಪ್ರಗತಿದಾಯಕವಿದ್ದು ಬೆಲೆಯುಳ್ಳ ವಸ್ತು ಒಡವೆಗಳನ್ನು ಕೊಳ್ಳುವ ನೂತನ. ಗೃಹಪ್ರವೇಶ, ತೀರ್ಥಯಾತ್ರಾ ಸಂದರ್ಶನ, ಮೊದಲಾದ ಶುಭ ಘಟನೆಗಳು ಜರುಗಿದರೆ ನವಂಬರ ೪ರಿಂದ ಡಿಶೆಂಬರ ೧೫, ಫೆಬ್ರುವರಿ ೧೨ರಿಂದ ಮಾರ್ಚ ೧೫, ಹಾಗೂ ಜೂನ ೧೫ರಿಂದ ಸಪ್ಟೆಂಬರ ೧೫ ರ ವರೆಗಿನ ಕಾಲವು ತೀರ ಪ್ರತಿಕೂಲವಿದ್ದು ಈ ಕಾಲದಲ್ಲಿ ಆರ್ಥಿಕ ಮುಗ್ಗಟ್ಟು, ಗೃಹಕಲಹ, ಅನಾರೋಗ್ಯಗಳಿಂದಾಗಿ ಮನಸ್ಸಿನ ನೆಮ್ಮದಿ ಉಳಿಯದು. ಈ ರಾಶಿಯ ಗರ್ಭಿಣಿಯರ ಹೆರಿಗೆಯು ಸುಖಪ್ರದವಾಗುವದು. ಫೆಬ್ರುವರಿ ೧೨ರಿಂದ ಮಾರ್ಚ ೧೫ ಹಾಗು ಜೂನ ೧೫ರಿಂದ ಆಗಸ್ಟ ೧೫ರವರೆಗಿನ ಈ ಮೂರುತಿಂಗಳ ಕಾಲದಲ್ಲಿ ಹೆರಿಗೆಯಾದರೆ ತೊಂದರೆಯಾಗಬಹುದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ನವಂಬರ ೪ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಜೂನ ೧೫ ಹಾಗು ಆಗಸ್ಟ ೧೫ರಿಂದ ಅಕ್ಟೋಬರ ೧೬ರವರೆಗಿನ ಅವಧಿ ಶುಭವೂ ಅನುಕೂಲವೂ ಆಗಿದ್ದು ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಸ್ಥಾನಮಾನ ಅಧಿಕಾರ ಪಡೆಯುವರು. ಇದೇ ಸಮಯದಲ್ಲಿ ಚುನಾವಣೆ ನಡೆದಲ್ಲಿ ಆಯ್ಕೆ ನಿಶ್ಚಿತ, ಆದರೆ ನಿಖರದ ಸ್ಪರ್ಧೆ ನಡೆಯುವದು. ಆದರೆ ಫೆಬ್ರುವರಿ ೧೨ರಿಂದ ಮಾರ್ಚ ೧೪, ಜೂನ ೧೫ರಿಂದ ಆಗಸ್ಟ ೧೫ರವರೆಗಿನ ಕಾಲ ತೀರ ಪ್ರತಿಕೂಲವಿದ್ದು ಮಿತ್ರರೇ ಶತ್ರುಗಳಾಗುವರು. ಅವಿಶ್ವಾಸ ಸೂಚನೆಗಳಿಗೆ ಗುರಿಯಾಗಿ ಸ್ಥಾನ ಮಾನ ಅಧಿಕಾರಕ್ಕೆ ಚ್ಯುತಿ ಬರುತ್ತದೆ. ಇದೇ ಸಮಯದಲ್ಲಿ ಚುನಾವಣೆ ಜರುಗಿದರೆ ಸ್ಪರ್ಧಿಸದಿರುವುದೇ ಹಿತಕರ.

ಈ ರಾಶಿಯ ವಿದ್ಯಾರ್ಥಿಗಳಿಗೆ ಈ ವರುಷ ಕುಂಠಿತವಾಗಿದ್ದ ಶಿಕ್ಷಣ ಮುಂದುವರಿಯುವುದು. ಡಿಶೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಜೂನ ೧೫ರ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಶ್ರೇಣಿ, ದರ್ಜೆ ಪಡೆದು ತೇರ್ಗಡೆ ಆಗಿ ವಿದ್ಯಾರ್ಥಿವೇತನ, ಶಿಷ್ಯವೃತ್ತಿ ಪಡೆದು ಸಂಶೋಧನೆಗಾಗಿ ಇಲ್ಲವೆ ಹೆಚ್ಚಿನ ಶಿಕ್ಷಣಕ್ಕಾಗಿ ವಿದೇಶ ಯಾತ್ರೆ ಕೈಕೊಳ್ಳುವರು; ಆದರೆ ಪರೀಕ್ಷೆಯು ಜನೇವರಿ ೧೪ರಿಂದ ಮಾರ್ಚ ೧೪ ಹಾಗೂ ಜೂನ ೧೪ರಿಂದ ಆಗಸ್ಟ ೧೪ರ ಅವಧಿಯಲ್ಲಿ ಜರುಗಿದರೆ-ಅಂಥ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ಸಂಶಯಾಸ್ಪದವಿದ್ದು ವಿದ್ಯಾರ್ಥಿವೇತನ ಶಿಷ್ಯವೃತ್ತಿಗೆ ಎರವಾಗಬೇಕಾಗುವುದು.



ಸಿಂಹ

ಈ ವರುಷ ಈ ರಾಶಿಯವರಿಗೆ ಬರಲಿರುವ ಒಂಭತ್ತನೆಯ ಗುರುವಿನಿಂದಾಗಿ ಉದ್ಯೋಗ ಆರ್ಥಿಕ ಹಾಗೂ ಕೌಟುಂಬಿಕ ದೃಷ್ಟಿಯಿಂದ ಯಶೋದಾಯಕವಾಗಿದೆ.

ಸಾಡೇಸಾತಿ ಹಾಗೂ ಎಂಟನೆಯ ಗುರುವಿನ ಅನಿಷ್ಟತೆಯಿಂದಾಗಿ ಕಳೆದ ವರುಷ ನಿಮ್ಮ ಜೀವನದ ಮೇಲೆ ಮುಸುಕಿದ್ದ ಕಾರ್ಮೋಡಗಳು ಈ ವರುಷದ ಮಧ್ಯದಿಂದ ಬರಲಿರುವ ಒಂಭತ್ತನೆಯ ಗುರುವಿನಿಂದಾಗಿ ಚದುರಿಹೋಗಿ ನಿದ್ರಾರಹಿತವಾದ ಅನೇಕ ರಾತ್ರಿಗಳನ್ನು ಕಳೆದ ನೀವು ಕೆಲ ಮಟ್ಟಿಗೆ ಸುಖ ಶಾಂತಿಯನ್ನು ಪಡೆಯುವಿರಿ. ಮಘಾ ನಕ್ಷತ್ರದ ಸಿಂಹ ರಾಶಿಯವರಿಗೆ ಸುಖ ಶಾಂತಿಗಳ ಭರವಸೆ ಇದ್ದರೆ: ಪೂರ್ವಾ(ಹುಬ್ಬಾ) ಉತ್ತರಾ ನಕ್ಷತ್ರಗಳ ಸಿಂಹರಾಶಿಯವರಿಗೆ ಕ್ಲೇಶದಾಯಕವಾಗಿದೆ. ಆರೋಗ್ಯದ ದೃಷ್ಟಿಯಿಂದಲೂ ಈ ವರುಷ ಕಳೆದ ವರ್ಷಕ್ಕಿಂತ ಪ್ರಗತಿದಾಯಕವಿದೆ; ಆದರೆ ನವ್ಹೆಂಬರ ೧೫ ರಿಂದ ಡಿಶೆಂಬರ ೧೬, ಮಾರ್ಚ ೧೫ರಿಂದ ಎಪ್ರಿಲ್ ೧೨, ಹಾಗು ಜುಲೈ ೧೫ರಿಂದ ಸಪ್ಟೆಂಬರ್ ೧೬ರ ವರೆಗಿನ ಈ ನಾಲ್ಕು ತಿಂಗಳ ಕಾಲ ಪ್ರತಿಕೂಲವಾಗಿದ್ದು ಈ ಅವಧಿಯಲ್ಲಿ ರೋಗ ಉಲ್ಬಣವಾಗುವದಲ್ಲದೇ ಅಪಘಾತದ ಭಯವೂ ಉಂಟು. ಮಿಕ್ಕ ಎಂಟು ತಿಂಗಳ ಕಾಲ ಆರೋಗ್ಯ ಚೆನ್ನಾಗಿರುವದು. ಕಳೆದ ವರುಷದಿಂದಿದ್ದ ಎಂಟನೆಯ ಗುರುವಿನ ಮೂಲಕ ಗಂಭೀರವಾಗಿದ್ದ ಆರ್ಥಿಕ ಸ್ಥಿತಿಯು ಬರಲಿರುವ ಒಂಬತ್ತನೇಯ ಗುರುವಿನಿಂದಾಗಿ ಚೇತರಿಸಿಕೊಳ್ಳುವದಲ್ಲದೆ ಜನೇವರಿ ೧೪ರಿಂದ ಮಾರ್ಚ ೧೫, ಎಪ್ರಿಲ್ ೧೨ರಿಂದ ಜೂಲೈ ೧೫ರವರೆಗಿನ ಈ ಐದು ತಿಂಗಳ ಕಾಲದಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವದು. ಆಕಸ್ಮಿಕ ಧನಲಾಭದಿಂದಲೂ ಹಣ ಸುವಾಯ

ವಾಗುವದರಿಂದ ಕಳೆದ ವರುಷದಿಂದ ಬಾಕಿ ಉಳಿದ ಡಾಕ್ಟರ, ವಕೀಲರ, ಬಿಲ್ಲುಗಳು ಹಾಗು ಸಾಲಗಾರರ ಕಾಟದಿಂದಲೂ ಮುಕ್ತರಾಗುವಿರಿ. ಆದರೆ ನವ್ಹೆಂಬರ ೪ ರಿಂದ ಡಿಶೆಂಬರ ೧೫, ಮಾರ್ಚ ೧೫ ರಿಂದ ಎಪ್ರಿಲ್ ೧೨, ಜುಲೈ ೧೫ರಿಂದ ಸಪ್ಟೆಂಬರ ೧೮ರ ಅವಧಿ ತೀರ ಪ್ರತಿಕೂಲವಾಗಿದ್ದು ಬರತಕ್ಕ ಹಣ ಸಮಯಕ್ಕೆ ಬರದೇ ಕೊಡತಕ್ಕ ಹಣಕ್ಕಾಗಿ ಸಾಕುಬೇಕಾಗುತ್ತದಲ್ಲದೆ ಅವಮಾನಕಾರಕ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ವೆಚ್ಚವೂ ಹೆಚ್ಚುತ್ತದಾದ್ದರಿಂದ ಸೂಕ್ಷ್ಮಮತಿಗಳಾದ ನೀವು ಮಾನಸಿಕ ಸ್ವಾಸ್ಥ್ಯಕ್ಕೆರವಾಗುವಿರಿ. ಕಳೆದ ವರುಷದಿಂದ ಅರ್ಧಕ್ಕೆ ನಿಂತ ಕಾರ್ಯಗಳೆಲ್ಲವೂ ಬರಲಿರುವ ಒಂಭತ್ತನೆಯ ಗುರುವಿನ ಮೂಲಕ ಈ ವರುಷ ಪೂರ್ತಿಯಾಗುವವು. ವಾದ,ಸ್ಪರ್ಧೆ, ಕೋರ್ಟಿನ ವ್ಯವಹಾರದಲ್ಲಿ ಉತ್ತರಾರ್ಧದಲ್ಲಿ ಜಯಲಭಿಸುವದು. ಆದರಲ್ಲಿಯೂ ನೌಕರಿ ಹಾಗು ರಾಜಕೀಯಕ್ಕೆ ಸಂಬಂಧಿಸಿದ ವಾ ಜ್ಯಗಳಿಗೆ ಎಪ್ರಿಲ್ ೧೨ ರಿಂದ ಜುಲೈ ೧೫ರ ವರೆಗಿನ ಕಾಲದಲ್ಲಿ ಜಯ ಲಭಿಸುತ್ತದೆ. ದಿವಾಣಿ ವಾ ಜ್ಯಗಳಿಗೆ ಉತ್ತರಾರ್ಧದಲ್ಲಿ ಯಶಸ್ಸು ಲಭಿಸುವದು ಫೌಜದಾರಿ ಮೊಕದ್ದಮೆಗಳನ್ನು ಈ ವರುಷ ಕೈಕೊಳ್ಳದಿರುವದೇ ಹಿತಕರವು. ಅನಿವಾರ್ಯವಿದ್ದಲ್ಲಿ ಪೂರ್ವಾರ್ಧವು ಪೂರಕವು.

ಈ ವರುಷದ ಮಧ್ಯದಿಂದ ಬರುವ ಒಂಭತ್ತನೆಯ ಗುರುವಿನ ಶುಭಫಲದ ಮೂಲಕ ಈ ರಾಶಿಯ ನೌಕರವರ್ಗದವರಿಗೆ ಅನುಕೂಲವುಂಟು. ಜನೇವರಿ ೧೪ರಿಂದ ಮಾರ್ಚ೧೪, ಹಾಗೂ ಎಪ್ರಿಲ್ ೧೨ರಿಂದ ಜುಲೈ ೧೫ರವರೆಗಿನ ಅವಧಿಯು ಈ ರಾಶಿಯವರಿಗೆ ಶುಭವೂ ಅನಕೂಲವೂ ಇರುವದರಿಂದ ಈ ಕಾಲದಲ್ಲಿ ಬಡತಿ, ಅನಕೂಲ ಜಾಗೆಗೆ ಬದಲಿ, ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ, ಹಂಗಾಮಿ ನೌಕರರಿಗೆ ಕಾಯಂ ಆಗುವಿಕೆ. ಮೊದಲಾದ ಶುಭ ಘಟನೆಗಳು ಜರಗುವವು. ಆದರೆ ನವ್ಹೆಂಬರ ೧೪ರಿಂದ ಡಿಶೆಂಬರ ೧೫, ಮಾರ್ಚ ೧೫ರಿಂದ ಎಪ್ರಿಲ್ ೧೨, ಜುಲೈ ೧೫ರಿಂದ ಸಪ್ಟೆಂಬರ ೧೫ರವರೆಗಿನ ಈ ನಾಲ್ಕು ತಿಂಗಳು ಕಾಲ ಮಾತ್ರ ಪ್ರತಿಕೂಲವಿದ್ದು ಈ ಅವಧಿಯಲ್ಲಿ ವರಿಷ್ಠರ ಕಿರುಕುಳಹೆಚ್ಚಿ, ಅನಪೇಕ್ಷಿತ ಸ್ಥಳಕ್ಕೆ ಬದಲಿಯಾಗುವ ಸಂಭವವಿದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಸಂಚಾರಿ ಕೆಲಸಗಾರ, ಗಿರಣಿ-ಕಾರಖಾನೆಗಳ ಕಾರ್ಮಿಕ ವರ್ಗದವರಿಗೆ ಈ ವರ್ಷವು ಹೇಳಿಕೊಳ್ಳುವಂಥ ಪ್ರೋತ್ಸಾಹದಾಯಕವಾಗಿಲ್ಲವಾದರೂ ಮಧ್ಯದ ಆರು ತಿಂಗಳ ಕಾಲವೆಂದರೆ ಜನೇವರಿ ೧೪ರಿಂದ ಜುಲೈ ೧೫ರವರೆಗಿನ ಕಾಲ ಶುಭವೂ ಅನಕೂಲವೂ ಆಗಿರುವದು. ಈ ಅವಧಿಯಲ್ಲಿ ಅವರ ಕೆಲ ಬೇಡಿಕೆಗಳು ಈಡೇರುತ್ತವೆ. ಎಲ್ಲ ಬೇಡಿಕೆಗಳಿಗೆ ಒತ್ತಾಯ ಮಾಡದೆ ಸಂಧಾನ ಮನೋಭಾವನೆಯಿಂದ ವರ್ತಿಸಿದಲ್ಲಿ ಖಂಡಿತ ಲಾಭವಾಗುವದು. ಮುಂಬರುವ ಶುಭ ಫಲದಾಯಕ ಒಂಭತ್ತನೆಯ ಗುರುವಿನ ಮೂಲಕ ಈ ರಾಶಿಯ ಬುದ್ಧಿಜೀವಿಗಳಾದ ಅಧ್ಯಾಪಕ, ಲೇಖಕ, ಕಲಾವಿದ ಪತ್ರಿಕೋದ್ಯಮಿ, ಡಾಕ್ಟರ, ಕರಣಿಕ, ವಕೀಲ, ನ್ಯಾಯಾಧೀಶರಿಗೆ ಈ ವರುಷ ಪ್ರೋತ್ಸಾಹದಾಯಕವಿದೆ. ಅದರಲ್ಲಿಯೂ ಜನೇವರಿ ೧೪ರಿಂದ ಮಾರ್ಚ ೧೪ ರವರೆಗೆ, ಹಾಗೂ ಎಪ್ರಿಲ್ ೧೨ರಿಂದ ಜುಲೈ ೧೫ರವರೆಗಿನ ಈ ಐದು ತಿಂಗಳ ಕಾಲ ಶುಭವೂ ಅನುಕೂಲವೂ ಇರುವದರಿಂದ ಈ ಕಾಲದಲ್ಲಿ ಉದ್ಯೋಗದಲ್ಲಿ ಉತ್ಕರ್ಷ ಸಾಧಿಸುವದು. ಸರಕಾರ ಹಾಗೂ ಸಂಸ್ಥೆಗಳಿಂದ ಮಾನ-ಸನ್ಮಾನ, ಮನ್ನಣೆ, ಪ್ರಶಸ್ತಿ, ಪದಕಗಳು ದೊರೆಯುವವು. ದ್ರವ್ಯಾನುಕೂಲತೆಯಾಗಿ ವಾಹನ ಸೌಖ್ಯ ಪರದೇಶ ಪರ್ಯಟನಗಳಂಥ ಶುಭಘಟನೆಗಳು ಜರಗುವವು. ಆದರೆ ನವ್ಹೆಂಬರ ೧೫ರಿಂದ ಡಿಶೆಂಬರ ೧೬, ಮಾರ್ಚ ೧೫ರಿಂದ ಎಪ್ರಿಲ್ ೧೧, ಜುಲೈ ೧೫ರಿಂದ ಸಪ್ಟೆಂಬರ್ ೧೫ ರವರೆಗಿನ ಈ ನಾಲ್ಕು ತಿಂಗಳ ಕಾಲ ತೀರ ಪ್ರತಿಕೂಲವಿದ್ದು ಉದ್ಯೋಗದಲ್ಲಿ ಹಾನಿ, ಶತ್ರುಗಳ ಕಾಟ ಆರ್ಥಿಕ ಮುಗ್ಗಟ್ಟು ಮೊದಲಾದ ತೊಂದರೆಗಳನ್ನು ಎದುರಿಸಬೇಕಾಗುವದು.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಸ್ಥ, ಕಮೀಶನ್ ಏಜೆಂಟ, ಹಂಚಿಕೆದಾರ, ಗಿರಣಿ, ಕಾರಖಾನೆ, ಟಾಕೀಜ, ಚಾಳ, ಹೋಟೆಲಗಳ ಮಾಲಕ ವರ್ಗದವರಿಗೆಲ್ಲ ಕಳೆದ ವರುಷ ಕುಂಠಿತವಾಗಿದ್ದ ಉದ್ಯೋಗ ಈ ವರುಷ ಚೇತರಿಸಿಕೊಳ್ಳುವುದು. ನೌಕರರ ಸಮಸ್ಯೆ ಹಾಗೂ ಸರಕಾರದ ನಿರ್ಭಂಧಗಳಿಂದ ಕಳೆದ ವರುಷ ಜರ್ಜರಿತವಾಗಿದ್ದ ಅವರ ಉದ್ಯೋಗ ಈ ವರುಷದ ಮಧ್ಯದಿಂದ ಅಂದರೆ ಜನೇವರಿ ೧೪ ರಿಂದ ಜುಲೈ ೧೫, ವರೆಗಿನ ಈ ಅವಧಿಯಲ್ಲಿ ಚೇತರಿಸಿಕೊಳ್ಳುವದಲ್ಲದೆ ಸಮಸ್ಯೆಗಳೂ ಪರಿಹಾರವಾಗಿ ಮತ್ತೆ, ಹೊಸಶಾಖೆಗಳನ್ನು ಪ್ರಾರಂಭಿಸಬಹುದಾಗಿದೆ. ಆದರೆ ಸಪ್ಟೆಂಬರ ೧೪ರಿಂದ ಡಿಶೆಂಬರ ೧೫, ಮಾರ್ಚ ೧೫ ರಿಂದ ಎಪ್ರಿಲ್ ೧೧ ಜುಲೈ, ೧೫ರಿಂದ ಸಪ್ಟೆಂಬರ ೧೫ರವರೆಗಿನ ಕಾಲ ಪ್ರತಿಕೂಲವಾಗಿದೆ. ಈ ರಾಶಿಯ ಕೃಷಿಕರಿಗೆ ಪೂರ್ವಾರ್ಧವು ಪ್ರತಿಕೂಲವಿದ್ದರೆ ಉತ್ತರಾರ್ಧವು ಪ್ರಗತಿದಾಯಕವಿದೆ. ಮುಂಗಾರಿ ಬೆಳೆ ಕೈಕೊಟ್ಟರೆ ಹಿಂಗಾರಿ ಬೆಳೆ ಕೈ ಹಿಡಿಯುವುದು. ಕಳೆದ ವರುಷ ಒತ್ತಿಹಾಕಲ್ಪಟ್ಟ ಹೊಲಮನೆಗಳನ್ನು ಈ ವರುಷ ಬಿಡಿಸಿಕೊಳ್ಳಬಹುದಾಗಿದೆ. ಕುಂಠಿತವಾಗಿದ್ದ ಬೇಸಾಯ ಮತ್ತೆ ಪ್ರಾರಂಭವಾಗುವದಲ್ಲದೆ ಎಪ್ರಿಲ್ ೧೨ರಿಂದ ಜುಲೈ ೧೫ರ ನಡುವಣ ಕಾಲದಲ್ಲಿ ಹೊಸದಾಗಿ ದನಕರುಗಳನ್ನು ಕೊಳ್ಳುವ ಇಲ್ಲವೆ ಬೇಸಾಯಕ್ಕೆ ಬೇಕಾಗಬಹುದಾದ ಉಪಕರಣಗಳನ್ನು ಕೊಳ್ಳುವ ಯೋಗವಿದೆ.

ಕಳೆದ ವರುಷದಿಂದ ಪ್ರಯತ್ನಿಸುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣಬಲ ಕೂಡಿ ಬಂದಿದೆ. ಜನೇವರಿ ೧೪ರಿಂದ ಜುಲೈ ೧೫ರವರೆಗಿನ ಈ ಆರು ತಿಂಗಳ ಕಾಲದಲ್ಲಿ ವಿವಾಹ ಸಾಂಗವಾಗಿ ಗೃಹಸ್ಥಾಶ್ರಮದ ಆನಂದಮಯ ಜೀವನದಲ್ಲಿ ಪದಾರ್ಪಣೆ ಮಾಡುವರು. ವಿವಾಹಿತ ಸ್ತ್ರೀ ಪುರುಷರಿಗೆ ಈ ವರುಷ ಪ್ರಗತಿದಾಯಕವಿದ್ದು ಎಂಟನೆಯ ಗುರು ಹಾಗು ಸಾಡೇಸಾತಿಯ ಅನಿಷ್ಟತೆಯಿಂದ ಒಡೆದುಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವದು. ತಪ್ಪು ತಿಳುವಳಿಕೆ ಹಾಗು ಗೃಹಕಲಹದಿಂದ ಸ್ಮಶಾನದಂತೆ ಕಾಣುತ್ತಿದ್ದ ಮನೆಯು ಮತ್ತೆ ನಂದನವನದಂತೆ ಶೋಭಿಸುವದು. ಆದರೆ ಈ ಎಲ್ಲ ಅನುಕೂಲತೆಗಳು ಮಘ ನಕ್ಷತ್ರದ ಸಿಂಹ ರಾಶಿಯವರಿಗೆ ಇದ್ದು ಪೂರ್ವಾ ಹಾಗು ಉತ್ತರಾ ನಕ್ಷತ್ರದ ಸಿಂಹರಾಶಿಯವರಿಗೆ ಈ ವರುಷವೂ ಪ್ರತಿಕೂಲವಿದೆ. ಜನೇವರಿ ೧೪ರಿಂದ ಮಾರ್ಚ ೧೫, ಎಪ್ರಿಲ್ ೧೨ರಿಂದ ಜುಲೈ ೧೫ರವರೆಗಿನ ಈ ಐದು ತಿಂಗಳ ಕಾಲ ಈ ರಾಶಿಯವರಿಗೆ ಶುಭವೂ ಹಾಗು ಅನುಕೂಲವೂ ಇರುವದರಿಂದ ಈ ಅವಧಿಯಲ್ಲಿ ತೀರ್ಥಯಾತ್ರಾ ಸಂದರ್ಶನ, ಬೆಲೆಯುಳ್ಳ ವಸ್ತು ಒಡವೆಗಳನ್ನುಕೊಳ್ಳುವ, ನೂತನ ಗೃಹಪ್ರವೇಶ ಮೊದಲಾದ ಅವರ ಎಲ್ಲ ಬಯಕೆಗಳು ಈಡೇರುವವು. ಈ ರಾಶಿಯ ಗರ್ಭಿಣಿ ಸ್ತ್ರೀಯರ ಹೆರಿಗೆಯು ಜನೇವರಿ ೧೪ರಿಂದ ಮಾರ್ಚ್ ೧೫ರ ಹಾಗು ಎಪ್ರಿಲ್ ೧೨ರಿಂದ ಜುಲೈ ೧೫ ರ ನಡುವಣ ಅವಧಿಯಲ್ಲಾದರೆ ಸುಖಪ್ರಸವವಾಗಿ ಜನಿಸುವ ಶಿಶು ಗಂಡು ಮಗುವಾಗುವದು. ಹೆರಿಗೆಯು ನವ್ಹೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ ರಿಂದ ಎಪ್ರಿಲ್ ೧೧, ಮತ್ತು ಜುಲೈ ೧೫ರಿಂದ ಸಪ್ಟೆಂಬರ್ ೧೮ರ ನಡುವಣ ಅವಧಿಯಲ್ಲಾದರೆ ಪ್ರಸೂತಿ ಕಷ್ಟದಾಯಕ. ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ, ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷದ ಮಧ್ಯದಿಂದ ಬರುವ ಒಂಭತ್ತ



ದೀಪಾವಳಿಯು
ಸರ್ವರಿಗೂ
ಶುಭದಾಯಕವಾಗಲಿ !

ಫೋನ: 62841, 63191, 62783

ದಿ ಕರ್ನಾಟಕ ಇಂಡಸ್ಟ್ರಿಯಲ್ ಕೋ-ಆಪರೇಟಿವ್ಹ ಬ್ಯಾಂಕ ಲಿ.

ನಂ. 11 ನ್ಯೂಹಿಲ್ ವ್ಯೂ. ಬಸವನಗುಡಿ, ಬುಲ್ ಟೆಂಪಲ್ ರೋಡ, ಬೆಂಗಳೂರ-4

ರಾಷ್ಟ್ರದ ಸಹಕಾರಿ ರಂಗದಲ್ಲಿ ಇಂಡಸ್ಟ್ರಿಯಲ್ ಕ್ರೆಡಿಟ್‌ನಲ್ಲಿ
ಪುರೋಗಾಮಿಗಳು ಚಿಕ್ಕ ಪ್ರಮಾಣದ ಉದ್ಯಮಗಳ
ಅಭಿವೃದ್ಧಿಯಲ್ಲಿ ಅತಿಮಹತ್ವದ ಪಾತ್ರ ನಿರ್ವಹಿಸುವರು

ಶೇರು ಬಂಡವಲು ಮತ್ತು ಕಾಯ್ದಿಟ್ಟ ನಿಧಿ — — ರೂ. 236 ಲಕ್ಷಕ್ಕೂ ಮಿಕ್ಕಿದೆ
ದುಡಿಯುವ ಬಂಡವಲು — — — — — — ರೂ. 567 ಲಕ್ಷಕ್ಕೂ ಮಿಕ್ಕಿದೆ
ಠೇವಣಿಗಳು — — — — — — — — ರೂ. 136 ಲಕ್ಷಕ್ಕೂ ಮಿಕ್ಕಿದೆ

ಈ ಕೆಳಗಿನಂತೆ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರಗಳ ನೀಡಿಕೆ

ಸೇವ್ಹಿಂಗ್ಸ ಬ್ಯಾಂಕ 6% — ಕರಂಟ ಡಿಪಾಜಿಟ್ ½%

ಮುದ್ದತಿ ಠೇವುಗಳು

30	ದಿನಗಳಿಂದ	90	ದಿನಗಳ ವರೆಗೆ	— — — — — —	6½%
91	ದಿನಗಳಿಂದ	6	ತಿಂಗಳ ವರೆಗೆ	— — — — — —	6¾%
6	ತಿಂಗಳಿಂದ	12	ತಿಂಗಳ ವರೆಗೆ	— — — — — —	8%
12	ತಿಂಗಳಿಂದ	24	ತಿಂಗಳ ವರೆಗೆ	— — — — — —	8½%
24	ತಿಂಗಳಿಂದ	36	ತಿಂಗಳ ವರೆಗೆ	— — — — — —	9%
36	ತಿಂಗಳಿಂದ	60	ತಿಂಗಳ ವರೆಗೆ	— — — — — —	10%
60	ತಿಂಗಳು ಮತ್ತು ಮೇಲಿನ ಅವಧಿಗೆ			— — — — — —	10½%

ಜಿ. ಕೆ. ರಾಜಯ್ಯ ಸೆಟ್ಟಿ
ಪ್ರೆಸಿಡೆಂಟ

ನೆಯ ಗುರುವಿನಿಂದಾಗಿ ಪ್ರೋತ್ಸಾಹದಾಯಕವಿದೆ. ಶತ್ರುಗಳು ಮಿತ್ರರಾಗುವದರಿಂದ ಸಲ್ಲದ ಅಪವಾದಕ್ಕೆ ಗುರಿಯಾಗಿದ್ದ ನೀವು ಏಪ್ರಿಲ್ ೧೨ ರಿಂದ ದೋಷ ಮುಕ್ತರಾಗುವಿರಿ. ಅನೇಕ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಳೆದುಕೊಂಡಿದ್ದ ಸ್ಥಾನ ಮಾನ ಈ ವರುಷ ಪುನಃ ಪಡೆಯುವಿರಿ. ಜನೇವರಿ ೧೪ರಿಂದ ಮಾರ್ಚ ೧೫ ಹಾಗು ಏಪ್ರಿಲ್ ೧೨ ರಿಂದ ಜುಲೈ೧೫ರ ವರೆಗಿನ ಈ ಐದು ತಿಂಗಳಕಾಲ ನಿಮಗೆ ಶುಭವೂ ಅನುಕೂಲವೂ ಇರುವದರಿಂದ ಈ ಕಾಲದಲ್ಲಿ ಸ್ಥಾನ ಮಾನ ಅಧಿಕಾರದಲ್ಲಿ ಹೆಚ್ಚಳವಾಗಿ ಜನಪ್ರಿಯತೆ ಪಡೆಯುವಿರಿ. ಇದೇ ಅವಧಿಯಲ್ಲಿ ಜರುಗಬಹುದಾದ ಯಾವದೇ ಚುನಾವಣೆಯಲ್ಲಿ ಸ್ಪರ್ಧಿಸಿದಲ್ಲಿ ಆಯ್ಕೆ ನಿಶ್ಚಿತ. ಆದರೆ ನವಂಬರ ೧೪ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಏಪ್ರಿಲ್ ೧೨, ಜುಲೈ೧೫ ರಿಂದ ಅಗಸ್ಟ ೧೫ರವರೆಗಿನ ಈ ಮೂರು ತಿಂಗಳ ಕಾಲ ಪ್ರತಿಕೂಲವಿರುವದರಿಂದ ಚುನಾವಣೆಗಳ ಗೊಂದಲದಿಂದ ದೂರವಿರುವದೇ ಹಿತಕರವು.

ಈ ರಾಶಿಯ ವಿದ್ಯಾರ್ಥಿಗಳಿಗೆ, ಕಳೆದ ವರುಷದಿಂದ ಅರ್ಧಕ್ಕೆ ನಿಂತ ಶಿಕ್ಷಣ ಮತ್ತೆ ಮುಂದುವರಿಯುವದು. ಶಿಕ್ಷಕರ ಅವಕೃಪೆಗೆ ಪಾತ್ರರಾಗಿದ್ದ ವಿದ್ಯಾರ್ಥಿಗಳು ಅವರ ಕೃಪೆಗೆ ಪಾತ್ರರಾಗುತ್ತಾರೆ. ನಿಂತು ಹೋಗಿದ್ದ ಶಿಷ್ಯವೃತ್ತಿ, ವಿದ್ಯಾರ್ಥಿವೇತನ ದೊರೆಯುವದು. ಜನೇವರಿ ೧೪ರಿಂದ ಮಾರ್ಚ ೧೫, ಏಪ್ರಿಲ್ ೧೨ರಿಂದ ಜುಲೈ ೧೫ರ ನಡುವಣ ಅವಧಿಯಲ್ಲಿ ಜರಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆ ಆಗುವರಲ್ಲದೆ ಶ್ರೇಣಿ, ದರ್ಜೆ, ಪ್ರಶಸ್ತಿ ಪದಕಗಳನ್ನು ಪಡೆಯುವರು. ಹೆಚ್ಚಿನ ಶಿಕ್ಷಣ ಇಲ್ಲದೇ ಸಂಶೋಧನೆಕಾರ್ಯಕ್ಕಾಗಿ, ವಿದೇಶ ಪ್ರವಾಸವನ್ನು ಕೈಕೊಳ್ಳುವರು. ಆದರೆ ನವ್ಹೆಂಬರ್ ೧೫ರಿಂದ ಜನೇವರಿ ೧೩, ಮಾರ್ಚ ೧೫ರಿಂದ ಏಪ್ರಿಲ್ ೧೧ ಮತ್ತು ಜುಲೈ ೧೫ರಿಂದ ಸಪ್ಟೆಂಬರ್ ೧೫ರಅವಧಿಯಲ್ಲಿ ಜರಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ಸಂಶಯಾಸ್ಪದ.

ಮುಕ್ತಿ !



ನಿನ್ನ ಧರ ತನಿರಸವನುಂಡು

ನಾನು ಪೂರ್ಣತೆ ಪಡೆದೆ !

ನಿನ್ನ ಅಪ್ಪುಗೆಯ ಸುಖದಿಂದ

ನಾನು ಮುಮುಕ್ಷುಗಳ ಮುಕ್ತಿ ಪಡೆದೆ!

-ಪಂಚಾಕ್ಷರಿ ಹಿರೇಮಠ



ಕನ್ಯಾ

ಈ ರಾಶಿಯವರಿಗೆ ಈ ವರುಷ ಉದ್ಯೋಗ ಆರ್ಥಿಕ, ಆರೋಗ್ಯದ ದೃಷ್ಟಿಯಿಂದ ಪ್ರಗತಿದಾಯಕವಾದರೆ ಕೌಟುಂಬಿಕ, ಪ್ರಾಪಂಚಿಕ ಶೈಕ್ಷಣಿಕ ದೃಷ್ಟಿಯಿಂದ ನಿರುತ್ಸಾಹದಾಯಕವಾಗಿದೆ.

ಈ ರಾಶಿಯವರಿಗೆ ಕಳೆದ ವರುಷದಿಂದ ಇರುವ ಶುಭ ಫಲದಾಯಕ ಹನ್ನೊಂದನೆಯ ಶನಿ ಈ ವರುಷವೂ ಶುಭಫಲ ಕೊಡುತ್ತಾನೆ. ಇದುವರೆಗೆ ಶುಭ ಫಲವನ್ನು ಕೊಡುತ್ತಿದ್ದ ಏಳನೆಯ ಗುರುವು ಎಂಟನೆಯವನಾಗಲಿದ್ದು ಆತ ಅಶುಭಫಲ ನೀಡುವನು. ಎರಡೂ ಪ್ರಬಲ ಗ್ರಹಗಳಾದ ಗುರು-ಶನಿಯರಲ್ಲಿ ಒಬ್ಬನು ಅತ್ಯಂತ ಶುಭಫಲದಾಯಕನಾದರೆ ಮತ್ತೊಬ್ಬ ಅತ್ಯಂತ ಅಶುಭ ಫಲದಾಯಕನಾಗಿರುವದರಿಂದ ಈ ರಾಶಿಯವರಿಗೆ ಮಿಶ್ರಫಲವಿದೆ. ಅದರಲ್ಲಿಯೂ ಉತ್ತರಾ ಹಾಗೂ ಹಸ್ತಾದ ಮೊದಲಿನ ಎರಡು ಚರಣದ ಕನ್ಯಾರಾಶಿಯವರಿಗೆ ಎಂಟನೆಯ ಗುರುವಿನ ಅನಿಷ್ಟ ಫಲ ದೊರೆತರೆ ಹಸ್ತಾದ ಕೊನೆಯ ಎರಡು ಚರಣ ಹಾಗೂ ಚಿತ್ರದ ಮೊದಲೆರಡು ಚರಣದ ಕನ್ಯಾ ರಾಶಿಯವರಿಗೆ ಏಳನೆಯ ಗುರುವಿನ ಶುಭಫಲ ದೊರೆಯುತ್ತದೆ. ಈ ರಾಶಿಯವರ ಆರೋಗ್ಯ ವರುಷದ ಮುಕ್ಕಾಲು, ಅವಧಿಯವರೆಗೆ ಉತ್ತಮವಿರುವದು. ಆದರೆ ಡಿಶೆಂಬರ ೧೫ರಿಂದ ಜನೇವರಿ ೧೪, ಏಪ್ರಿಲ್ ೧೨ರಿಂದ ಮೇ ೧೪, ಆಗಸ್ಟ ೧೫ರಿಂದ ಅಕ್ಟೋಬರ ೧೬ರವರೆಗಿನ ಈ ನಾಲ್ಕು ತಿಂಗಳುಗಳು ಮಾತ್ರ ಕಿಂಚಿತ್ ತೊಂದರೆಯಾಗ ಬಹುದಾಗಿದೆ. ಈ ಅಸ್ವಸ್ಥತೆ, ಶಾರೀರಿಕ ಪೀಡೆಯಾಗಿರದೆ ಶತ್ರುಗಳ ಕಾಟ ಮಾನಸಿಕವಾಗಿ ವೇದನೆಯಿಂದ ಉಂಟಾಗಬಹುದಾಗಿದೆ. ಆರ್ಥಿಕ ಸ್ಥಿತಿ ವರುಷವಿಡೀ ತೃಪ್ತಿಕರವಿರುವದು. ಅದರಲ್ಲಿಯೂ ನವಂಬರ ೪ರಿಂದ ಡಿಶೆಂಬರ ೧೪ ಜನೇವರಿ ೧೪ರಿಂದ ಏಪ್ರಿಲ್ ೧೨ ಹಾಗೂ ಮೇ ೧೫ರಿಂದ ಅಗಸ್ಟ ೧೫ರ ವರೆಗಿನ ಅವಧಿಯಲ್ಲಿ ದತ್ತಕ, ವಾರಸಾ. ಸ್ತ್ರೀಧನ, ಲಾಟರಿ ಬಕ್ಷೀಸ ಬಹುಮಾನ ಕಮೀಶನ್ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭವಾಗಿ 'ಹಿಂದಿನ' ಸಾಲಶೂಲಗಳೆಲ್ಲವೂ ತೀರುವವು. ಬರಲಿರುವ ಎಂಟನೆಯ ಗುರುವಿನಿಂದಾಗಿ ವಾದ, ಸ್ಪರ್ಧೆ, ಕೋರ್ಟ ಕಛೇರಿಗಳ ಕಾರದಲ್ಲಿ ತೊಂದರೆಯುಂಟು. ವ್ಯಾಜ್ಯ ಅನಿವಾರ್ಯವಿದಲ್ಲಿ. ಫ... ಸಾರಿ. ದಿವಾಣಿ ಮೊಕದಮೆಗಳಿಗೆ ವರುಷದ ಪೂರ್ವಾರ್ಧವೂ ರಾಜಕೀಯ ಹಾಗೂ ನೌಕರರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಉತ್ತರಾರ್ಧವೂ ಪೂರಕವು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ ಆರ್ಥಿಕ ದೃಷ್ಟಿಯಿಂದ ಶುಭದಾಯಕವಿದ್ದರೆ ಅಧಿಕಾರ ದೃಷ್ಟಿಯಿಂದ ಅಶುಭದಾಯಕ, ನವ್ಹೆಂಬರ ೪ರಿಂದ ಡಿಶೆಂಬರ ೧೫, ಜನೇವರಿ ೧೪, ರಿಂದ ಮಾರ್ಚ ೧೫, ಮೇ ೧೫ರಿಂದ ಅಗಸ್ಟ ೧೫ರವರೆಗಿನ ಈ ಅವಧಿಯಲ್ಲಿ ಬಡತಿ ಇಚ್ಛಿತ ಸ್ಥಳಕ್ಕೆ ಬದಲಿ, ನಿರುದ್ಯೋಗಿಗಳಿಗೆ ನೌಕರಿ ಲಭಿಸುವಿಕೆ ಮೊದಲಾದ ಶುಭ ಘಟನೆಗಳು ಜರುಗುತ್ತವೆ. ಹಂಗಾಮಿ ನೌಕರದಾರರಿಗೆ ಈ ವರುಷವೂ ಅಸ್ಥಿರತೆಯದಾಗಿದೆ. ಡಿಶೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಮೇ ೧೪ ಅಗಸ್ಟ ೧೫ ರಿಂದ ಅಕ್ಟೋಬರ್ ೧೬ರವರೆಗಿನ ಅವಧಿಯು ಪ್ರತಿಕೂಲವೂ ಅಶುಭವೂ ಇರುವದರಿಂದ ವರಿಷ್ಠರ ಕಿರುಕಳ, ಅನಾರೋಗ್ಯ ಅಪಘಾತದ ಭಯ ಮೊದಲಾದ ಅಶುಭ ಘಟನೆಗಳು ಜರುಗುತ್ತವೆ. ಶನಿ ಶುಭದಾಯಕನಿರುವದರಿಂದ ಈ ರಾಶಿಯ ಗಿರಣಿ, ಕಾರಖಾನೆಗಳ ಕಾರ್ಮಿಕವರ್ಗ, ಬಾಹ್ಯ ಹಾಗು ತಾಂತ್ರಿಕ ಕೆಲಸಗಾರ ಪ್ರವಾಸೀ ಕೆಲಸಗಾರರಿಗೆ ಪ್ರಗತಿದಾಯಕವಿದೆ. ಅವರ ಬಹುತರ ಎಲ್ಲ ಬೇಡಿಕೆಗಳು ಈಡೇರುವವು. ಅದರಲ್ಲಿಯೂ ನವ್ಹೆಂಬರ ೪ರಿಂದ ಡಿಶೆಂಬರ ೧೫, ಜನೇವರಿ ೧೪ರಿಂದ ಮಾರ್ಚ ೧೫, ಜೂನ ೧೫ರಿಂದ ಅಗಸ್ಟ ೧೫, ರ ಅವಧಿಯಲ್ಲಿ ಅನೇಕ ಬೇಡಿಕೆಗಳು ಈಡೇರುವವು.ಇಮ್ಮಡಿ ಇನ್‌ಕ್ರೀಮೆಂಟ್ ಹೆಚ್ಚಿನ ಬೋನಸ್ಸು ದೊರೆತು ದ್ರವ್ಯಾನುಕೂಲತೆ ಆಗಬಹುದಾಗಿದೆ.

ಈ ರಾಶಿಯ ಅಧ್ಯಾಪಕ, ಕರಣಿಕ, ಸಾಹಿತಿ, ಲೇಖಕ, ಕಲಾವಿದ ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆ ಬರಲಿರುವ ಎಂಟನೆಯ ಗುರುವಿನಿಂದಾಗಿ ಹೇಳಿಕೊಳ್ಳುವಷ್ಟು ಪ್ರಗತಿದಾಯಕವಾಗಿಲ್ಲ. ಆರ್ಥಿಕ ದೃಷ್ಟಿಯಿಂದ ಹಾನಿದಾಯಕವಲ್ಲವಾದರೂ, ಸ್ಥಾನ ಮಾನ ಅಧಿಕಾರಕ್ಕೆ ಎರವಾಗಬೇಕಾಗುವದು. ಸರಕಾರ ಹಾಗು ಸಂಸ್ಥೆಗಳಿಂದ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಈ ರಾಶಿಯ ಕೃಷಿಕರಿಗೆ ಈ ವರುಷ ಅತ್ಯುತ್ತಮವಿದ್ದು ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲವೆಲ್ಲ ತೀರುವದಲ್ಲದೆ ಹೊಸದಾಗಿ ಜಾಗೆ, ಮನೆ, ಹೊಲಗಳನ್ನು ಖರೀದಿಸುವರು. ಬೇಸಾಯಕ್ಕೆ ಬೇಕಾಗಬಹುದಾದ ದನಕರು ಟ್ರಕ್. ಟ್ರ್ಯಾಕ್ಟರ, ಪಂಪಸೆಟ್ಟ ಮೊದಲಾದ ಕೃಷಿ ಉಪಕರಣಗಳನ್ನು ಖರೀದಿಸುವರು. ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಸ್ಥ, ಕಮೀಶನ್ ಏಜೆಂಟ್, ಗಿರಣಿ, ಕಾರಖಾನೆ, ಟಾಕೀಜ, ಚಹಾ ಹೋಟೆಲುಗಳ ಮಾಲಕ ವರ್ಗದವರಿಗೆಲ್ಲ ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದ್ದರೂ ಎಂಟನೆಯ ಗುರುವಿನಿಂದಾಗಿ ನೌಕರರ ಸಮಸ್ಯೆಗಳೊಂದಿಗೆ ಸರಕಾರದ ನಿರ್ಭಂಧನೆಗಳನ್ನು ಎದುರಿಸಬೇಕಾಗುತ್ತದೆ.

ಈ ರಾಶಿಯ ವಧೂವರರಿಗೆ ಮುಂಬರುವ ಎಂಟನೆಯ ಗುರು ಅಶುಭದಾಯಕನಾಗಿರುವನು. ಪೂರ್ವಾರ್ಧವು ಶುಭದಾಯಕವಾಗಿದ್ದು ಈ ಅವಧಿಯಲ್ಲಿ ವಿವಾಹ ನಿಶ್ಚಯ ಆಗಿದ್ದರೆ ನಿರ್ವಿಘ್ನವಾಗಿ ವಿವಾಹ ಸಾಂಗಗೊಳ್ಳುತ್ತದೆ. ಉತ್ತರಾರ್ಧದಲ್ಲಿ ಮದುವೆ ಗೊತ್ತುಮಾಡಿದ್ದರೆ ಮುರಿದು ಹೋಗ... ಉತ್ತರಾ ಹಾಗೂ ಹಸ್ತಾದ ಮೊದಲಿನ ಎರಡು ಚರಣದ ಕನ್ಯಾರಾಶಿಯ ವಧೂವರರಿಗೂ

ಕೂರ್ವಾರ್ಧವು ಶುಭದಾಯಕವಿದ್ದರೆ ಹಸ್ತಾದ ಕೊನೆಯ ಎರಡು ಚರಣ ಹಾಗೂ ಚಿತ್ರಾ ನಕ್ಷತ್ರದ ಕನ್ಯಾರಾಶಿಯವರಿಗೆ ಉತ್ತರಾರ್ಧವು ಪೂರಕವಾಗಿದೆ. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೆಲ್ಲ ಎಂಟನೆಯ ಗುರುವಿನಿಂದಾಗಿ ಅಪ್ತೇಷ್ಟರಲ್ಲಿ ವಿರಸ. ಪ್ರತಿನಿತ್ಯದ ಗೃಹಕಲಹದಿಂದಾಗಿ ಮಾನಸಿಕ ನೆಮ್ಮದಿ ದೊರೆಯದು. ಆದರಲ್ಲಿಯೂ ಡಿಶೆಂಬರ ೧೫ರಿಂದ ಜನೇವರಿ ೧೪, ಮಾರ್ಚ ೧೫ ರಿಂದ ಮೇ ೧೫, ಹಾಗೂ ಅಗಸ್ಟ ೧೪ರಿಂದ ಅಕ್ಟೋಬರ ೧೬ರವರೆಗಿನ ಅವಧಿಯಲ್ಲಿ ಮನೆಯ ಪರಿಸ್ಥಿತಿ ಹದಗೆಟ್ಟು ಏಕತ್ರ ಕುಟುಂಬ ಒಡೆಯಬಹುದಾಗಿದೆ. ಆದರೆ ಆರ್ಥಿಕ ದೃಷ್ಟಿಯಿಂದ ಪ್ರಗತಿದಾಯಕವಿದೆ. ಆದರಲ್ಲಿಯೂ ನವ್ಹೆಂಬರ ೪ ರಿಂದ ಡಿಶೆಂಬರ ೧೫, ಜನೇವರಿ ೧೪ ರಿಂದ ಮಾರ್ಚ ೧೫, ಮೇ ೧೫ ರಿಂದ ಅಗಸ್ಟ ೧೫ರ ವರೆಗಿನ ಕಾಲದಲ್ಲಿ ಆರ್ಥಿಕ ಸ್ಥಿತಿಯು ತೃಪ್ತಿಕರ ವಿರುವದರಿಂದ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ನೂತನ ಗೃಹಪ್ರವೇಶ ತೀರ್ಥಯಾತ್ರಾ ಸಂದರ್ಶನ, ಇವೇ ಮೊದಲಾದ ಶುಭಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ನವ್ಹೆಂಬರ ೪ರಿಂದ ಡಿಶೆಂಬರ ೧೫, ಮೇ ೧೫ರಿಂದ ಅಗಸ್ಟ ೧೫, ಜನೇವರಿ ೧೫ರಿಂದ ಎಪ್ರಿಲ್ ೧೭ರ ನಡುವಣ ಅವಧಿಯಲ್ಲಾದರೆ ಸುಖಪ್ರಸವ. ಆದರೆ ಹೆರಿಗೆಯು ಡಿಶೆಂಬರ ೧೫ರಿಂದ ಜನೇವರಿ ೧೪ ಏಪ್ರಿಲ್ ೧೭ರಿಂದ ಮೇ ೧೫ ಅಗಸ್ಟ ೧೫ರಿಂದ ಅಕ್ಟೋಬರ ೧೬ ರ ಮಧ್ಯದ ಅವಧಿಯಲ್ಲಾದರೆ ಪ್ರಸೂತಿ ಕಷ್ಟಕರ. ಹಾಗು ಶಸ್ತ್ರಕ್ರಿಯೆ ಅನಿವಾರ್ಯ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಎಂಟನೆಯ ಗುರು ನಿರುತ್ಸಾಹದಾಯಕನಾಗಿರುವನು. ಆದಾಗ್ಯೂ ನವಂಬರ ೪ ರಿಂದ ಡಿಶೆಂಬರ ೧೫, ಜನೇವರಿ ೧೪ರಿಂದ ಮಾರ್ಚ ೧೫, ಮೇ ೧೫ ರಿಂದ ಅಗಸ್ಟ ೧೫ರವರೆಗಿನ ಅವಧಿಯು ಅನುಕೂಲವಿದ್ದು ಮಾನ ಸನ್ಮಾನ ಗೌರವ ಪಡೆದು ಅಧಿಕಾರ ಪಡೆಯುವರಲ್ಲದೆ ಇದೇ ಅವಧಿಯಲ್ಲಿ ಚುನಾವಣೆ ಜರುಗಿದಲ್ಲಿ, ಸ್ಪರ್ಧೆ ತುರಿಸಿನದಾದರೂ ಆಯ್ಕೆ ನಿಶ್ಚಿತ. ಆದರೆ ಡಿಶೆಂಬರ ೧೫ರಿಂದ ಜನೇವರಿ ೧೪, ಏಪ್ರಿಲ್ ೧೪ ರಿಂದ ಮೇ ೧೪, ಹಾಗೂ ಅಗಸ್ಟ ೧೫ರಿಂದ ಅಕ್ಟೋಬರ ೧೬ರ ವರೆಗಿನ ಅವಧಿ ತೀರ ಪ್ರತಿಕೂಲವಾಗಿದೆ. ಮಿತ್ರರು ಶತ್ರುಗಳಾಗಿ ಮಿಥ್ಯಾಪವಾದಕ್ಕೆ ಗುರಿಯಾಗುವರಲ್ಲದೇ ಅವಿಶ್ವಾಸ ಸೂಚನೆಗೆ ಒಳಗಾಗಬಹುದು. ಈ ಅವಧಿಯಲ್ಲಿ ಜರುಗಬಹುದಾದ ಚುನಾವಣೆಗಳಲ್ಲಿ ಸ್ಪರ್ಧಿಸಿದಲ್ಲಿ ಇಡುಗಂಟು ಕಳೆದುಕೊಳ್ಳಬಹುದು.

ಈ ರಾಶಿಯ ವಿದ್ಯಾರ್ಥಿಗಳಿಗೆ ಆರ್ಥಿಕ ದೃಷ್ಟಿಯಿಂದ ಈ ವರುಷ ಪ್ರಗತಿದಾಯಕವಿದ್ದರೂ ಮನೆಯಲ್ಲಿಯ ಕಲುಷಿತ ವಾತಾವರಣ ಹಾಗೂ ಶಿಕ್ಷಕರ ಅವಕೃಪೆಯಿಂದಾಗಿ ಶಿಕ್ಷಣ ಮುಂದುವರೆಯುವದೇ ಕಠಿಣವಾಗುತ್ತದೆ. ನವ್ಹೆಂಬರ ೧೪ರಿಂದ ಡಿಶೆಂಬರ ೧೫, ಜನೇವರಿ ೧೪ರಿಂದ ಮಾರ್ಚ ೧೫ ಹಾಗೂ ಜೂನ ೧೫ರಿಂದ ಅಗಸ್ಟ ೧೫ ರ ಅವಧಿಯಲ್ಲಿ ನಡೆಯುವ ಪರೀಕ್ಷೆಗೆ ಕಟ್ಟುವ ವಿಧ್ಯಾರ್ಥಿಗಳು ತೇರ್ಗಡೆಯಾಗುವರಲ್ಲದೇ ದರ್ಜೆ, ಶ್ರೇಣಿ, ಹೊಂದಿ ವಿದ್ಯಾರ್ಥಿವೇತನ ಪಡೆಯುವರು. ಡಿಶೆಂಬರ ೧೩ರಿಂದ ಜನೇವರಿ ೧೪ ಏಪ್ರಿಲ್ ೧೭ರಿಂದ ಜೂನ ೧೪, ಹಾಗೂ ಅಗಸ್ಟ ೧೫ರಿಂದ ಅಕ್ಟೋಬರ ೧೬ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವವರ ಪರೀಕ್ಷೆಯ ಫಲಿತಾಂಶ ಸಂಶಯಾಸ್ಪದ.



ತುಲಾ

ವರುಷಾಂತ್ಯದವರೆಗೂ ಹತ್ತನೆಯವನಾಗಿರುವ ಶನಿ ಹಾಗೂ ಬರಲಿರುವ ಏಳನೆಯ ಗುರು ಶುಭದಾಯಕವಾಗಿರುವದರಿಂದ ಈ ವರುಷವು ಈ ರಾಶಿಯವರಿಗೆ ಅವರ ಜೀವನದಲ್ಲಿಯೇ ಸುವರ್ಣಕಾಲವಾಗಿದೆ.

ಶುಭಫಲದಾಯಕನಾಗಿರುವ ಶನಿಯ ಕೃಪಾಕಟಾಕ್ಷಕ್ಕೆ ಪಾತ್ರರಾದ ನೀವು ಮುಂಬರುವ ಏಳನೆಯ ಗುರುವಿನ ಕೃಪೆಗೂ ಪಾತ್ರರಾಗುವಿರಿ. ಹೀಗೆ ಎರಡು ಪ್ರಬಲಗ್ರಹಗಳ ಅನುಗ್ರಹವನ್ನು ಪಡೆದ ನಿಮಗೆ ಈ ವರ್ಷವು ಅತ್ಯಂತ ಅಪೂರ್ವ ಹಾಗೂ ಸ್ಮರಣೀಯವಾಗಿರುವದು. ಕಳೆದ ಅನೇಕ ವರುಷಗಳಿಂದ

ಅರ್ಧಕ್ಕೆ ನಿಂತ ಕಾರ್ಯಗಳೆಲ್ಲ ನೆರವೇರುವವು. ಅಲ್ಲದೇ ನಿಮ್ಮ ಎಲ್ಲ ಆಶೆ–ಆಕಾಂಕ್ಷೆಗಳು ಈಡೇರುವವು. ಆರೋಗ್ಯದ ದೃಷ್ಟಿಯಿಂದ ಈ ವರ್ಷದ ಒಂಭತ್ತು ತಿಂಗಳುಕಾಲ ಆರೋಗ್ಯ ಚೆನ್ನಾಗಿರುವದು. ಆದರೆ ಜನೇವರಿ ೧೪ರಿಂದ ಫೆಬ್ರುವರಿ ೧೨, ಮೇ ೧೫ರಿಂದ ಜೂನ ೧೫, ಹಾಗೂ ಸಪ್ಟೆಂಬರ ೧೬ರಿಂದ ಅಕ್ಟೋಬರ ೧೭ರವರೆಗಿನ ಮೂರುತಿಂಗಳ ಕಾಲ ಮಾತ್ರ ಕಿಂಚಿತ್ ಶಾರೀರಿಕ ಪೀಡೆ ಉಂಟಾಗಬಹುದಾಗಿದೆ.

ಆರ್ಥಿಕ ಸ್ಥಿತಿಯು ವರ್ಷವಿಡೀ ತೃಪ್ತಿಕರವಿರುವದು. ಆದರಲ್ಲಿಯೂ ನವ್ಹೆಂಬರ ೧೪ರಿಂದ ಜನೇವರಿ ೧೪, ಮಾರ್ಚ ೧೫ ರಿಂದ ಮೇ ೧೫, ಜೂನ ೧೫ ರಿಂದ ಸಪ್ಟೆಂಬರ ೧೬ರ ವರೆಗಿನ ಅವಧಿಯು ಅತ್ಯಂತ ಶುಭವೂ ಅನುಕೂಲವೂ ಆಗಿರುವದು. ಈ ಅವಧಿಯಲ್ಲಿ ಸಟ್ಟಾ, ಲಾಟರಿ, ಕಮೀಶನ್, ದತ್ತಕ, ವಾರಸಾ, ಸ್ತ್ರೀಧನ, ಬಕ್ಷೀಸ್ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭಯೋಗವಿದೆ. ಅಲ್ಲದೇ ಇದೇ ಅವಧಿಯಲ್ಲಿ ವಾಹನ ಸೌಖ್ಯ, ಪರದೇಶ ಪರ್ಯಟನ ಸ್ಥಾವರ ಇಸ್ಟೇಟ ಸಂಪಾದನೆ ಮೊದಲಾದ ಶುಭಘಟನೆಗಳು ಜರುಗುವವು. ಕೋರ್ಟು ಕಚೇರಿ ಹಾಗು ವಾದ ಸ್ಪರ್ಧೆಗಳಲ್ಲಿ ಪ್ರಚಂಡ ಜಯ ಲಭಿಸುವದು. ನಿಖರವಾಗಿ ಹೇಳುವದಾದರೆ ಫೌಜದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧವೂ ನೌಕರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಮಧ್ಯದಕಾಲವೂ ದಿವಾಣಿ ಹಾಗೂ ರಾಜಕೀಯಕ್ಕೆ ಸಂಬಂಧಿಸಿದ ವ್ಯಾಜ್ಯಗಳಿಗೆ ಉತ್ತರಾರ್ಧವೂ ಪೂರಕವಾಗಿದೆ.

ಈ ರಾಶಿಯ ನೌಕರ ವರ್ಗದವರಿಗೆ ವರಿಷ್ಠರ ಸಹಾಯ ಸಹಕಾರ ವರುಷವಿಡೀ ದೊರೆಯುವದಲ್ಲದೆ ನವಂಬರ ೪ ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಮೇ ೧೫ ಹಾಗೂ ಜೂನ ೧೫ ರಿಂದ ಸಪ್ಟೆಂಬರ ೧೫ರ ವರೆಗಿನ ಕಾಲ ಅತ್ಯಂತ ಶುಭದಾಯಕವಿದ್ದು ಈ ಕಾಲದಲ್ಲಿ ಬಡತಿ ಲಭಿಸಿ ಅನಕೂಲಕರ ಜಾಗೆಗೆ ಬದಲಿಯಾಗುವದು. ನಿರುದ್ಯೋಗಿಗಳಿಗೆ ನೌಕರಿ ಲಭಿಸುವದು. ಹಂಗಾಮಿ ನೌಕರರಿಗೆ ಕಾಯಂ ಆಗುವ, ಇವೇ ಮೊದಲಾದ ಶುಭಘಟನೆಗಳು ಜರುಗುವವು.

ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಪ್ರವಾಸಿ ಕೆಲಸಗಾರ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆಲ್ಲ ವರಿಷ್ಠರ ಸಹಾಯ ಸಹಕಾರ ವರುಷವಿಡೀ ದೊರೆಯುವದಲ್ಲದೇ ನವಂಬರ ೪ ರಿಂದ ಜನೇವರಿ ೧೪, ಮಾರ್ಚ ೧೫ ರಿಂದ ಮೇ ೧೫, ಜೂನ ೧೫ ರಿಂದ ಸಪ್ಟೆಂಬರ್ ೧೫ರ ವರೆಗಿನ ಈ ಏಳು ತಿಂಗಳಕಾಲವಂತೂ ತೀರ ಶುಭದಾಯಕವಿದ್ದು ಈ ಅವಧಿಯಲ್ಲಿ ಅವರ ಅನೇಕ ಬೇಡಿಕೆಗಳು ಈಡೇರುವವು. ಡಬಲ್ ಇನಕ್ರೀಮೆಂಟ ಅಧಿಕ ಬೋನಸ್‌ಗಳ ಜೊತೆಗೆ ಇತರ ಅನಕೂಲತೆಗಳು ಲಭಿಸುವವು. ಈ ರಾಶಿಯ ಅಧ್ಯಾಪಕ, ಸಾಹಿತಿ, ಲೇಖಕ ಕಲಾವಿದ, ಪತ್ರಿಕೋದ್ಯಮಿ, ಕಾರಕೂನ ವರ್ಗ, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಎಲ್ಲ ವರ್ಗದ ಬುದ್ಧಿಜೀವಿಗಳಿಗೆ ಈ ವರುಷವು ಅತ್ಯಂತ, ಅಪೂರ್ವ ಸ್ಮರಣೀಯವಾಗಿರುವದು. ಉದ್ಯೋಗದಲ್ಲಿ ಪ್ರಗತಿ ಸ್ಥಿರತೆ ಸಾಧಿಸಿ ಮನ್ನಣೆ ದೊರೆಯುವದಲ್ಲದೆ ಸರಕಾರ ಹಾಗು ಸಮಾಜಗಳಿಂದ ಪ್ರಶಸ್ತಿ ಭಕ್ಷೀಸ್ ಬಹುಮಾನ ಬಿರುದು ಬಾವಲಿಗಳು ಲಭಿಸುವವು. ದ್ರವ್ಯಾನುಕೂಲತೆಯಾಗಿ ವಾಹನ ಸೌಖ್ಯ ಪರದೇಶ ಪರ್ಯಟನಗಳಂಥ ಶುಭಘಟನೆಗಳು ಜರುಗುತ್ತವೆ.

ಇನ್ನೇನನೂ ಬಯಸೆ



ನಿನ್ನ ಕಂಡ ಬಳಿಕ ನನ್ನ ಗೆಳತಿ
ಇನ್ನಾರನೂ ನೋಡುವ ಬಯಕೆ ಇಲ್ಲ
ವಾಯ್ತು !
ನಿನ್ನ ಕೂಡಿದ ಬಳಿಕ ನನ್ನ ಸಖಿ
ಇನ್ನೇನನೂ ಎನ್ನ ಮನ ಬಯಸ
ದಾಯ್ತು !

–ಪಂಚಾಕ್ಷರಿ ಹಿರೇಮಠ


ಈ ರಾಶಿಯ ಕೃಷಿಕರಿಗೆ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲಗಳೆಲ್ಲ ತೀರುವವು. ಅಲ್ಲದೇ ಹೊಸದಾಗಿ ಜಾಗೆ, ಮನೆ, ಹೊಲಗಳನ್ನು ಕೊಳ್ಳುವರು. ಬೇಸಾಯಕ್ಕೆ ಬೇಕಾಗುವ ಉಪಕರಣ, ದನಕರುಗಳು, ಟ್ರಕ್, ಟ್ರ್ಯಾಕ್ಟರ, ಪಂಪಸೆಟ್ಟು ಮೊದಲಾದವುಗಳನ್ನು ಖರೀದಿಸುವ ಇಲ್ಲವೆ ನವೀಕರಿಸುವ ಸಾಮರ್ಥ್ಯಬರುವದು.

ಸ್ವತಂತ್ರ ವ್ಯಾಪಾರೋದ್ಯಮಿ, ಕಮೀಶನ್ ಏಜೆಂಟ, ಹಂಚಿಕೆದಾರ, ಗಿರಣಿ, ಕಾರಖಾನೆ. ಚಾಳ ಟಾಕೀಜ ಹೊಟೇಲಗಳ ಮಾಲಕ ವರ್ಗದವರಿಗೆ ಉದ್ಯೋಗದಲ್ಲಿ ಉತ್ಕರ್ಷ ಸಾಧಿಸುವದು. ನೌಕರರ ಸಮಸ್ಯೆ ಹಾಗೂ ಸರಕಾರದ ನಿರ್ಬಂಧನೆಗಳು ದೂರಾಗುವವು. ಅಲ್ಲದೆ ಸರಕಾರ ಮತ್ತು ಕಾರ್ಪೋರೇಷನ್‌ಗಳಿಂದ ಸಹಾಯ ಸಹಕಾರ ಲಭಿಸುವವು. ನವ್ಹೆಂಬರ ೪ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಮೇ ೧೫ ಜೂನ ೧೫ರಿಂದ ಸಪ್ಟೆಂಬರ ೧೫ರವರೆಗಿನ ಕಾಲದಲ್ಲಿ ಉದ್ಯೋಗ ವಿಸ್ತರಣೆ ಅಥವಾ ಹೊಸ ಶಾಖೆಗಳನ್ನು ಪ್ರಾರಂಭಿಸಬಹುದಾಗಿದೆಯಲ್ಲದೆ ದ್ರವ್ಯಾನುಕೂಲತೆ ಉಂಟಾಗುವದು.

ಕಳೆದ ವರ್ಷದಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಕಂಕಣಬಲಕೂಡಿ ಬಂದಿರುವದಲ್ಲದೆ ನವ್ಹೆಂಬರ ೪ರಿಂದ ಜನೇವರಿ ೧೪, ಫೆಬ್ರುವರಿ ೧೫ ರಿಂದ ಮೇ ೧೫, ಜೂನ ೧೫ರಿಂದ ಜುಲೈ ೧೫ರ ಅವಧಿಯಲ್ಲಿ ವಿವಾಹ ಸಾಂಗವಾಗಿ ವೈವಾಹಿಕ ಜೀವನದ ಆನಂದ ಸಾಗರದಲ್ಲಿ ಓಲಾಡುವರು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೆಲ್ಲ ಈ ವರುಷ ಪ್ರಗತಿದಾಯಕವಾಗಿದ್ದು ಒಡೆದುಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವದಲ್ಲದೆ ಬೆಲೆಯುಳ್ಳ ವಸ್ತ್ರ ಒಡವೆಗಳನ್ನು ಕೊಳ್ಳುವ, ನೂತನ ಗೃಹ ಪ್ರವೇಶ, ತೀರ್ಥಯಾತ್ರಾ, ಸಂದರ್ಶನ, ಇವೇ ಮೊದಲಾದ ಶುಭಘಟನೆಗಳು ಜರುಗಲಿವೆ. ಈ ರಾಶಿಯ ಗರ್ಭಿಣಿಯರ ಹೆರಿಗೆ ಸುಖಪ್ರದವಾಗುವದಲ್ಲದೆ ಗಂಡು ಸಂತಾನವಾಗುವ ಸುಯೋಗವಿದೆ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರು ರಾಜಕೀಯದಲ್ಲಿ ಪ್ರತ್ಯಕ್ಷ ಭಾಗವಹಿಸಿ ಅನೇಕ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಗೌರವ ಸ್ಥಾನಮಾನ ಅಧಿಕಾರ ಪಡೆದು ಜಿಲ್ಲಾ ಮಟ್ಟದ ರಾಜ್ಯ ಮಟ್ಟದ ರಾಷ್ಟ್ರಮಟ್ಟದ ಗಣ್ಯ ವ್ಯಕ್ತಿಗಳಾಗುವುದರಲ್ಲಿ ಸಂಶಯವಿಲ್ಲ. ಈ ವರುಷದಲ್ಲಿ ಜರುಗಲಿರುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೂ ಆಯ್ಕೆ ಖಂಡಿತ, ಶತ್ರುಗಳು ಮಿತ್ರರಾಗುವುದರಿಂದ ಅವಿರೋಧ ಆಯ್ಕೆಯ ಸಂಭವವೂ ಇದೆ. ಇಲ್ಲವೆ ಅತ್ಯಧಿಕ ಮತಗಳಿಂದ ಆಯ್ಕೆಯಾಗಬಹುದು.

ಈ ರಾಶಿಯ ವಿದ್ಯಾರ್ಥಿಗಳ ಅರ್ಧಕ್ಕೆ ನಿಂತ ಶಿಕ್ಷಣ ಮತ್ತೆ ಮುಂದುವರಿಯುವದು. ಶಾಲೆ ಕಾಲೇಜುಗಳ ವಿಶ್ವವಿದ್ಯಾಲಯಗಳ ವಿದ್ಯಾಮಂಡಳಿಗಳ ಅಥವಾ ಸ್ಪರ್ಧಾತ್ಮಕ ಹಾಗೂ ವಿಭಾಗಗಳ ಪರೀಕ್ಷೆಗೆ ಕಟ್ಟಿದಲ್ಲಿ ಯಶಸ್ಸು ಖಂಡಿತವು. ಕಳೆದ ವರುಷ ಕಳೆದುಕೊಂಡ ಶಿಷ್ಯ ವೃತ್ತಿ ವಿದ್ಯಾರ್ಥಿವೇತನ ಮತ್ತೆ ಪಡೆಯುವರು. ಡಿಸೆಂಬರ ೧೫ರಿಂದ ಜನೇವರಿ ೧೪, ಫೆಬ್ರುವರಿ ೨೫ ಮೇ ೧೫, ಜುಲೈ ೧೫ರಿಂದ ಸಪ್ಟೆಂಬರ ೧೬ರ ಅವಧಿಯಲ್ಲಿ ಜರುಗಲಿರುವ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆ ಆಗುವರಲ್ಲದೆ ದರ್ಜೆ, ಶ್ರೇಣಿ ದೊರೆತು, ಪ್ರಶಸ್ತಿ ಪದಕ ಬಕ್ಷಿಸ ಬಹುಮಾನಗಳನ್ನು ಪಡೆದು ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ವಿದೇಶ ಪರ್ಯಟನವನ್ನು ಕೈಕೊಳ್ಳುವ ಸುಯೋಗವಿದೆ.



ವೃಶ್ಚಿಕ

ಈ ರಾಶಿಯು ಎಲ್ಲ ವರ್ಗದವರಿಗೂ ಎಲ್ಲ ದೃಷ್ಟಿಯಿಂದಲೂ ಈ ವರುಷದಲ್ಲಿ ಯಾವ ಮಹತ್ವದ ಶುಭಾಶುಭಫಲ ದೊರೆಯದೇ ಯಥಾಸ್ಥಿತಿ ಮುಂದುವರೆಯುವದು.

ಇದುವರೆಗೆ ಐದನೆಯವನಾಗಿ ಶುಭಫಲವನ್ನೀಯುತ್ತಿದ್ದ ಗುರುವು ಮುಂದಿನ ಫೆಬ್ರುವರಿ ೨೫ರಿಂದ ಆರನೆಯವನಾಗಲಿರುವುದರಿಂದ ಶುಭಫಲದ ಪ್ರಮಾಣ ಕಡಿಮೆಯಾಗುವುದು. ಆದರೆ ಜೇಷ್ಠಾ ನಕ್ಷತ್ರದ ವೃಶ್ಚಿಕ ರಾಶಿಯವರಿಗೆ ಗುರುವಿನ ಶುಭಫಲ ದೊರೆಯುತ್ತದೆ. ಕಳೆದ ವರುಷದಿಂದ ಪ್ರಾರಂಭವಾದ ಒಂಭತ್ತನೆಯ ಶನಿಯು ಈ ವರುಷವೂ ಒಂಭತ್ತನೆಯವನಾಗಿಯೇ ಮುಂದುವರೆದರೂ ಅವನು

ಶುಭ ಫಲವನ್ನು ಕೊಡುವುದಿಲ್ಲ. ಅಶುಭ ಫಲವನ್ನೂ ಕೊಡದೇ ಯಥಾಸ್ಥಿತಿ ಮುಂದುವರಿದರೂ ವಿಶಾಖಾ ಅನುರಾಧಾ ನಕ್ಷತ್ರದವರಿಗೆ ಶುಭಫಲ ಕೊಡುವನು. ಹನ್ನೆರಡನೆಯ ರಾಹುವಿನ ಅಶುಭ, ಫಲ ವರ್ಷಾಂತ್ಯದ ವರೆಗೂ ಇರುತ್ತದೆ. ಆರೋಗ್ಯ ದೃಷ್ಟಿಯಿಂದ ವರುಷದ ಆರು ತಿಂಗಳ ಕಾಲ ಸರಿ ಇದ್ದರೆ ಇನ್ನು ಆರು ತಿಂಗಳ ಕಾಲ ಆರೋಗ್ಯ ಕೆಡಬಹುದಾಗಿದೆ. ಅದರಲ್ಲಿಯೂ ನವ್ಹೆಂಬರ ೪ರಿಂದ ಡಿಸೆಂಬರ ೧೫,ಫೆಬ್ರುವರಿ ೧೨ರಿಂದ ಮಾರ್ಚ ೧೫, ಜೂನ ೧೫ರಿಂದ ಜುಲೈ ೩೦ರ ವರೆಗೆ ಆರೋಗ್ಯಕ್ಕೆ ತೊಂದರೆ. ಶತ್ರುಗಳಪೀಡೆ, ಅಪಘಾತಗಳ ಭಯವುಂಟು. ನಿರೀಕ್ಷಿಸಿದ ಮೂಲದಿಂದ ಹಣ ಬರುವುದರಿಂದ ಆರ್ಥಿಕ ಸ್ಥಿತಿ ಹಿಡಿತದಲ್ಲಿರುತ್ತದೆ. ಆಕಸ್ಮಿಕ ಧನ ಲಾಭದ ಯೋಗವೂ ಇಲ್ಲ. ಸಾಲಗಾರರ ಕಾಟವೂ ಇಲ್ಲ. ಹೀಗಾಗಿ ಈ ವರುಷ ಯಾವ ಹೆಚ್ಚಿನ ಬದಲಾವಣೆ ಇರದೇ ಕೊರತೆ ಆಗುವುದಿಲ್ಲ. ಅದರಲ್ಲಿಯೂ ಡಿಸೆಂಬರ ೧೪ರಿಂದ ಫೆಬ್ರುವರಿ ೧೨, ಎಪ್ರಿಲ್ ೧೨ರಿಂದ ಜೂನ ೧೪ ಹಾಗೂ ಅಗಸ್ಟ ೧೫ರಿಂದ ಅಕ್ಟೋಬರ ೧೭ರ ವರೆಗಿನ ಈ ಆರು ತಿಂಗಳ ಕಾಲ ನಿರೀಕ್ಷಿಸಿದ ಮೂಲದಿಂದ ಬರಬೇಕಾಗಿದ್ದ ಹಣವು ಬರುವುದರಿಂದ ನಿಮ್ಮ ಆರ್ಥಿಕ ಸ್ಥಿತಿ ಹಿಡಿತದಲ್ಲಿರುತ್ತದೆ. ಆದರೆ ನವಂಬರ ೪ರಿಂದ ಡಿಶೆಂಬರ ೧೩, ಫೆಬ್ರುವರಿ ೧೩ರಿಂದ ಎಪ್ರಿಲ್ ೧೧ ಹಾಗೂ ಜೂನ ೧೫ರಿಂದ ಅಗಸ್ಟ ೧೪ರ ವರೆಗಿನ ಈ ಐದು ತಿಂಗಳ ಕಾಲ ಆದಾಯಕ್ಕಿಂತ ಖರ್ಚು ವಿಪರೀತ ಬೆಳೆಯುವುದರಿಂದ ತುಸು ತೊಂದರೆಯಾಗುತ್ತದೆ. ಮುಂಬರುವ ಆರನೆಯ ಗುರುವಿನಿಂದಾಗಿ ವಾದ ಸ್ಪರ್ಧೆ, ಕೋರ್ಟಿನ ವ್ಯವಹಾರದಲ್ಲಿ ಯಶಸ್ಸು ದೊರೆಯುವದಿಲ್ಲ. ಅದರಲ್ಲಿಯೂ ದಿವಾಣಿ ಹಾಗೂ ರಾಜಕೀಯಕ್ಕೆ ಸಂಬಂಧಿಸಿದ ವ್ಯಾಜ್ಯಗಳಿಗೆ ಸೋಲುಂಟು. ಆದುದರಿಂದ ಈ ವರುಷ ಯಾವುದೇ ಪ್ರಕಾರದ ವ್ಯಾಜ್ಯಗಳಿಗೆ ಕೋರ್ಟಿನ ಕಟ್ಟೆ ಹತ್ತದೇ ಇರುವದು ಒಳ್ಳೆಯದು. ರಾಜಿ ಸಂಧಾನ ಹಿತಕರ. ದಾವೆ ದಾಖಲು ಮಾಡುವುದು ಅನಿವಾರ್ಯವಿದ್ದಲ್ಲಿ ಮಾರ್ಚ ೧೫ ರಿಂದ ಜೂನ ೧೫ ಹಾಗು ಜುಲೈ ೧೫ರಿಂದ ಅಕ್ಟೋಬರ ೧೭ರ ವರೆಗಿನ ಅವಧಿಯಲ್ಲಿ ದಾಖಲುಮಾಡಿ ವರುಷವಿಡೀ ಮುದ್ದತ್ತು ತೆಗೆದುಕೊಳ್ಳುತ್ತ ಹೋಗಬೇಕು.

ಈ ರಾಶಿಯ ನೌಕರ ವರ್ಗದವರಿಗೆ ಈ ವರುಷ ಹೇಳಿಕೊಳ್ಳುವಂಥ ಪ್ರಗತಿ ಕಂಡು ಬಾರದೆ, ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ, ಮೊದಲಾದ ಯಾವ ಶುಭ ಘಟನೆಗಳೂ ಜರುಗುವದಿಲ್ಲ. ಅದರಂತೆ ಹಿಂಬಡತಿ. ಚಾರ್ಜಸೀಟ, ವರಿಷ್ಠರ ಉಪದ್ರವವೂ ಇರುವದಿಲ್ಲ. ಒಂದು ರೀತಿಯಿಂದ ಯಥಾಸ್ಥಿತಿಯೇ ಮುಂದುವರೆಯುವದು. ಆದಾಗ್ಯೂ ಜನವರಿ ೧೪ರಿಂದ ಫೆಬ್ರುವರಿ ೧೧, ಎಪ್ರಿಲ್ ೧೨ರಿಂದ ಜೂನ ೧೪ ಮತ್ತು ಅಗಸ್ಟ ೧೪ರಿಂದ ಅಕ್ಟೋಬರ ೧೭ರ ವರೆಗಿನ ಈ ಐದು ತಿಂಗಳ ಕಾಲ ಈ ರಾಶಿಯ ನೌಕರ ವರ್ಗದವರಿಗೆ ಇದ್ದುದರಲ್ಲಿಯೇ ಅನುಕೂಲವಿದ್ದು, ವಿಶಾಖಾ ಅನುರಾಧಾ ನಕ್ಷತ್ರಗಳ ವೃಶ್ಚಿಕ ರಾಶಿಯವರಿಗೆ ಆರ್ಥಿಕದ ದೃಷ್ಟಿಯಿಂದ ಶುಭದಾಯಕವಿದ್ದರೆ ಜೇಷ್ಠಾ ನಕ್ಷತ್ರದ ವೃಶ್ಚಿಕ ರಾಶಿಯವರಿಗೆ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ ಹಾಗೂ ಅಧಿಕಾರ ದೃಷ್ಟಿಯಿಂದ ಶುಭದಾಯಕವಿದೆ. ನಿರುದ್ಯೋಗಿಗಳಿಗೆ ಜನವರಿ ೧೪ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫ ಹಾಗೂ ಅಗಸ್ಟ ೧೫ರಿಂದ ಅಕ್ಟೋಬರ ೧೭ರ ವರೆಗಿನ ಕಾಲದಲ್ಲಿ ತಾತ್ಪೂರ್ತಿಕ ನೌಕರಿ ಲಭಿಸುತ್ತದೆ. ಆದರೆ ನವ್ಹೆಂಬರ ೪ರಿಂದ ಜನವರಿ ೧೩, ಫೆಬ್ರುವರಿ ೧೨ರಿಂದ ಮಾರ್ಚ ೧೫, ಹಾಗೂ ಜೂನ ೧೫ರಿಂದ ಅಗಸ್ಟ ೧೫ರ ವರೆಗಿನ ಕಾಲ ಅಸಹನೀಯವಾಗಿದ್ದು, ಇದ್ದ ನೌಕರಿ ಕಳೆದುಕೊಳ್ಳುವ ಹಾಗೂ ಆರ್ಥಿಕ ಮುಗ್ಗಟ್ಟನ್ನೂ ಎದುರಿಸಬೇಕಾಗುತ್ತದೆ. ಹಂಗಾಮಿ ನೌಕರರು ಈ ವರುಷವೂ ಅಸ್ಥಿರತೆಯಲ್ಲಿಯೇ ತೊಳಲಾಡಬೇಕಾಗುತ್ತದೆ. ಈ ರಾಶಿಯ ಬಾಹ್ಯ ಹಾಗೂ ತಾಂತ್ರಿಕ ಕೆಲಸಗಾರ, ಪ್ರವಾಸಿ ಹಾಗೂ ಸಂಚಾರಿ ಕೆಲಸಗಾರ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆ ಪೂರ್ವಾರ್ಧದ ಮೂರು ತಿಂಗಳು ಹಾಗು ಉತ್ತರಾರ್ಧದ ಮೂರು ತಿಂಗಳು ಶುಭವೂ ಅನುಕೂಲವೂ ಇರುವುದರಿಂದ ಅವರ ಬಹಳಷ್ಟು ಬೇಡಿಕೆಗಳು ಈಡೇರುತ್ತವೆ. ಆದರೆ ಮಧ್ಯದ ಆರು ತಿಂಗಳ ಕಾಲ ತೀರ ಪ್ರತಿಕೂಲವಿದ್ದು,ವರಿಷ್ಠರ ಅಥವಾ ಮಾಲಕರ ಕಿರುಕುಳವನ್ನು ಎದುರಿಸಬೇಕಾಗುತ್ತದೆ.

ಈ ರಾಶಿಯ ಸಾಹಿತಿ, ಕಲಾವಿದ, ಲೇಖಕ, ಪತ್ರಿಕೋದ್ಯಮಿ, ಅಧ್ಯಾಪಕ, ಕಾರಕೂನ, ಡಾಕ್ಟರ ವಕೀಲ, ಪತ್ರಿಕೋದ್ಯಮಿ ಮೊದಲಾದ ಬುದ್ಧಿಜೀವಿಗಳಿಗೆ ಮುಂಬರುವ ಆರನೆಯ ಗುರುವಿನಿಂದಾಗಿ ಹೇಳಿಕೊಳ್ಳುವಂಥ ಪ್ರಗತಿ ಕಂಡು ಬಾರದು. ಆರ್ಥಿಕ ದೃಷ್ಟಿಯಿಂದ ಹಾನಿ ಇಲ್ಲದಿದ್ದರೂ ಕೂಡ ಸ್ಥಾನ-ಮಾನ ಅಧಿಕಾರಕ್ಕೆ ಎರವಾಗಬೇಕಾಗುತ್ತದೆ. ಅದರಲ್ಲಿಯೂ ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೨ರಿಂದ ಎಪ್ರಿಲ್ ೧೨, ಹಾಗೂ ಜೂನ ೧೫ ರಿಂದ

ಆಗಸ್ಟ ೧೫ ರ ವರೆಗಿನ ಈ ಕಾಲದಲ್ಲಿ ಆರ್ಥಿಕ ಮುಗ್ಗಟ್ಟು ಹಾಗೂ ಸರಕಾರ ಸಂಘ ಸಂಸ್ಥೆಗಳಿಂದ ಅವಮಾನಕಾರಕ ಪ್ರಸಂಗವನ್ನು ಎದುರಿಸಬೇಕಾಗುತ್ತದೆ. ಆದರೆ ಡಿಸೆಂಬರ ೧೫ರಿಂದ ಫೆಬ್ರುವರಿ ೧೨, ಎಪ್ರಿಲ್ ೧೩ ರಿಂದ ಜೂನ ೧೪, ಆಗಸ್ಟ ೧೫ ರಿಂದ ಅಕ್ಟೋಬರ ೧೬ರ ವರೆಗಿನ ಈ ಆರು ತಿಂಗಳುಗಳ ಕಾಲ ಶುಭವೂ ಅನುಕೂಲವೂ ಇರುವುದರಿಂದ ಈ ಕಾಲದಲ್ಲಿ ದ್ರವ್ಯಾನುಕೂಲ ಹಾಗೂ ವರಿಷ್ಠರ ಸಹಾಯ ಸಹಕಾರ ಲಭಿಸುತ್ತದೆ. ಈ ರಾಶಿಯ ಕೃಷಿಕರಿಗೆ ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲವೆಲ್ಲ ತೀರುವದು. ಆದರೆ ಫೆಬ್ರುವರಿ ೧೨ರಿಂದ ಎಪ್ರಿಲ್ ೧೨, ಜೂನ ೧೫ರಿಂದ ಆಗಸ್ಟ ೧೫ರ ವರೆಗಿನ ಈ ನಾಲ್ಕು ತಿಂಗಳ ಕಾಲ ತೀರ ಪ್ರತಿಕೂಲವಿದ್ದು ಕಳ್ಳಕಾಕರ ಭಯ ಶತ್ರು, ಪೀಡೆ, ಆರ್ಥಿಕ ಮುಗ್ಗಟ್ಟು ಸಂಘಸಂಸ್ಥೆಗಳ ಉಪದ್ರವವನ್ನು ಎದುರಿಸಬೇಕಾಗುತ್ತದೆ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ. ಠೋಕ ವ್ಯಾಪಾರಸ್ಥ, ಕಮೀಶನ ಹಂಚಿಕೆದಾರ, ಗಿರಣಿ, ಹೋಟಲ, ಕಾರಖಾನೆ, ಚಾಳ, ಟಾಕೀಜ. ಮೊದಲಾದವುಗಳ ಮಾಲಕ ವರ್ಗದವರಿಗೆಲ್ಲ ಉದ್ಯೋಗ, ಆರ್ಥಿಕ ದೃಷ್ಟಿಯಿಂದಈ ವರುಷ ಪ್ರಗತಿದಾಯಕವಾಗಿದೆ.ಆದರ ನೌಕರರ ಸಮಸ್ಯೆ ಹಾಗೂ ಸರಕಾರ ಸಂಘ-ಸಂಸ್ಥೆಗಳ ನಿರ್ಬಂಧನೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲಿಯೂ ನವಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೨ರಿಂದ ಮಾರ್ಚ ೧೫ ಮತ್ತು ಜೂನ ೧೫ರಿಂದ ಆಗಸ್ಟ ೧೫ರ ವರೆಗಿನ ಕಾಲವಂತೂ ತೀರ ಅಸಹನೀಯವಾಗಿದೆ. ವಿಘ್ನೇಶ್ವರನನ್ನು ಪೂಜಿಸಿರಿ. ಬೃಹಸ್ಪತಿಯ ಶಾಂತಿ ಜಪ ಮಾಡಿರಿ. ತೊಂದರೆಗಳು ನಿವಾರಣೆಯಾಗುವವು.

ಈ ರಾಶಿಯ ವಧೂವರರಲ್ಲಿ ವಿಶಾಖಾ ಹಾಗೂ ಅನುರಾಧಾ ನಕ್ಷತ್ರಗಳ ವೃಶ್ಚಿಕ ರಾಶಿಯವರಿಗೆ ಪೂರ್ವಾರ್ಧವು ಶುಭದಾಯಕವಿದ್ದು, ಈ ಕಾಲದಲ್ಲಿ ನಿಶ್ಚಯವಾಗಿ ವಿವಾಹವು ಸಾಂಗವಾಗುವದು. ಆದರೆ ಉತ್ತರಾರ್ಧವು ಅಶುಭದಾಯಕವಿದ್ದು,ಗೆ ೞತ್ತು ಮಾಡಿದ್ದ ಮದುವೆ ಸಹ ಮುರಿಯಬಹುದು.ಅದರಂತೆ ಜೇಷ್ಠಾ ನಕ್ಷತ್ರದ ವೃಶ್ಚಿಕ ರಾಶಿಯವರಿಗೆ ಪೂರ್ವಾರ್ಧವು ಅಶುಭದಾಯಕವಿದ್ದು ಉತ್ತರಾರ್ಧದಲ್ಲಿ ನಿರ್ವಿಘ್ನದಿಂದ ವಿವಾಹ ಸಾಂಗವಾಗುತ್ತದೆ. ಈ ರಾಶಿಯ ವಿವಾಹಿತ ಸ್ತ್ರೀ-ಪುರುಷರಿಗೆ ಆರನೆಯ ಗುರುವಿನಿಂದಾಗಿ ಆಪ್ತೇಷ್ಟರಲ್ಲಿ ವಿರಸ ಹುಟ್ಟಿ ಗೃಹಕಲಹ ಹೆಚ್ಚುವುದರಿಂದ ಮಾನಸಿಕ ನೆಮ್ಮದಿ ದೊರೆಯದು. ಅದರಲ್ಲಿಯೂ ಫೆಬ್ರುವರಿ ೧೨ರಿಂದ ಏಪ್ರಿಲ್ ೧೨, ಹಾಗು ಜೂನ ೧೫ರಿಂದ ಆಗಸ್ಟ ೧೪ರ ವರೆಗಿನ ಈ ನಾಲ್ಕು ತಿಂಗಳ ಕಾಲ ಗೃಹಕಲಹ, ಮಿಥ್ಯಾಪವಾದದಿಂದಾಗಿ ಮನೆಯ ಪರಿಸ್ಥಿತಿ ತೀರ ಹದಗೆಟ್ಟು ಏಕತ್ರ ಕುಟುಂಬ ಒಡೆಯಬಹುದಾಗಿದೆ. ಆರ್ಥಿಕ ದೃಷ್ಟಿಯಿಂದ ಈ ವರುಷ ಪ್ರಗತಿದಾಯಕವಿದ್ದು, ಡಿಸೆಂಬರ ೧೫ರಿಂದ ಫೆಬ್ರುವರಿ ೧೨, ಏಪ್ರಿಲ್ ೧೨ರಿಂದ ಜೂನ ೧೫, ಆಗಸ್ಟ ೧೫ರಿಂದ ಅಕ್ಟೋಬರ ೧೬ರ ವರೆಗಿನ ಈ ಆರು ತಿಂಗಳ ಕಾಲ ಶುಭವೂ ಅನುಕೂಲವೂ ಇದ್ದು, ಈ ಅವಧಿಯಲ್ಲಿ ಬೆಲೆಯುಳ್ಳ ವಸ್ತು ಒಡವೆಗಳ ಖರೀದಿ, ನೂತನ ಗೃಹ ಪ್ರವೇಶ, ತೀರ್ಥಯಾತ್ರಾ ಸಂದರ್ಶನ, ಮೊದಲಾದ ಘಟನೆಗಳು ಜರಗುವವು. ಈ ರಾಶಿಯ ಗರ್ಭಿಣಿಯರ ಹೆರಿಗೆಯು ಸಪ್ಟೆಂಬರ್ ೧೫ರಿಂದ ಫೆಬ್ರುವರಿ ೧೨, ಎಪ್ರಿಲ್ ೧೨ರಿಂದ ಜೂನ ೧೫, ಆಗಸ್ಟ ೧೫ರಿಂದ ಅಕ್ಟೋಬರ ೧೬ರ ಅವಧಿಯಲ್ಲಾದರೆ ಸುಖ ಪ್ರಸೂತಿ. ಹೆರಿಗೆಯು ಫೆಬ್ರುವರಿ ೧೩ರಿಂದ ಎಪ್ರಿಲ್ ೧೧, ಜೂನ ೧೫ರಿಂದ ಆಗಸ್ಟ ೧೪ರ ಅವಧಿಯಲ್ಲಾದರೆ ಕಷ್ಟದಾಯಕ ಹಾಗೂ ಶಸ್ತ್ರಕ್ರಿಯೆ ಅನಿವಾರ್ಯವಾಗುವದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ನವ್ಹೆಂಬರ ೧೫ರಿಂದ ಫೆಬ್ರುವರಿ ೧೨,ಎಪ್ರಿಲ್ ೧೨ರಿಂದ ಜೂನ ೧೫, ಆಗಸ್ಟ ೧೫ರಿಂದ ಅಕ್ಟೋಬರ ೧೬ರ ನಡುವಣ ಅವಧಿಯು ಇದ್ದುದರಲ್ಲಿಯೇ ಅನುಕೂಲವಾಗಿದ್ದು, ಸ್ಥಾನಮಾನ ಗೌರವ ಲಭಿಸುವದು. ಇದೇ ಅವಧಿಯಲ್ಲಿ ಚುನಾವಣೆ ಜರುಗಿದಲ್ಲಿ ಸ್ಪರ್ಧಿಸಬಹುದು. ಮಿತ್ರರು ಶತ್ರುಗಳಾಗುವುದರಿಂದ ಸ್ಪರ್ಧೆ ನೇರ ಇಲ್ಲವೇ ತುರುಸಿನದಾಗಿದ್ದು ಆಯ್ಕೆ ಖಂಡಿತ. ಆದರೆ ಫೆಬ್ರುವರಿ ೧೨ರಿಂದ ಎಪ್ರಿಲ್ ೧೧, ಜೂನ ೧೫ರಿಂದ ಆಗಸ್ಟ ೧೪ರ ವರೆಗಿನ ಈ ನಾಲ್ಕು ತಿಂಗಳ ಕಾಲ ತೀರ ಪ್ರತಿಕೂಲವಿದ್ದು, ಮಿಥ್ಯಾಪವಾದಕ್ಕೆ ಗುರಿಯಾಗಿ ಸ್ಥಾನಮಾನ ಅಧಿಕಾರವನ್ನು ಕಳೆದುಕೊಳ್ಳುವರು. ಇದೇ ಅವಧಿಯಲ್ಲಿ ಜರುಗಲಿರುವ ಚುನಾವಣೆಗೆ ಸ್ಪರ್ಧಿಸದಿರುವುದೇ ಹಿತಕರವು.

ಈ ರಾಶಿಯ ವಿದ್ಯಾರ್ಥಿಗಳಿಗೆ ಮನೆಯಲ್ಲಿಯ ಕಲುಷಿತ ವಾತಾವರಣ ಹಾಗು ಶಿಕ್ಷಕರ ಅವಕೃಪೆಯಿಂದಾಗಿ ಶಿಕ್ಷಣ ಮುಂದುವರಿಸುವುದೇ ಕಠಿಣವಾಗುತ್ತದೆ. ವಿದ್ಯಾರ್ಥಿವೇತನ, ಶಿಷ್ಯವೃತ್ತಿಗೆ ಎರವಾಗಬೇಕಾಗುತ್ತದೆ. ನವ್ಹೆಂಬರ ೧೫ರಿಂದ ಫೆಬ್ರುವರಿ ೧೨ ಎಪ್ರಿಲ್ ೧೨ರಿಂದ ಜೂನ ೧೫. ಆಗಸ್ಟ ೧೫ರಿಂದ ಅಕ್ಟೋಬರ ೧೬ರ ಒಳಗೆ ಜರುಗುವ ಪರೀಕ್ಷೆಗೆ ಕಟ್ಟಿದವರು ಸಾಮಾನ್ಯ ದರ್ಜೆಯಲ್ಲಿ ತೇರ್ಗಡೆಯಾಗುವರು. ಆದರೆ ಪರೀಕ್ಷೆಯು ಫೆಬ್ರುವರಿ ೧೨ರಿಂದ ಎಪ್ರಿಲ್ ೧೧ ಜೂನ ೧೫ರಿಂದ ಆಗಸ್ಟ ೧೪ರ ಅವಧಿಯಲ್ಲಿ ಜರುಗಿದರೆ ಅಂಥವರ ಫಲಿತಾಂಶವು ಸಂಶಯಾಸ್ಪದ.



ಧನು

ಮುಂಬರುವ ಐದನೆಯ ಗುರು ಹಾಗೂ ವರುಷಾಂತ್ಯದ ವರೆಗೆ ಇರುವ ಹನ್ನೊಂದನೆಯ ರಾಹು ಇಬ್ಬರೂ ಶುಭರಿರುವ ಕಾರಣ ಎಂಟನೆಯ ಶನಿಯ ಅನಿಷ್ಟತೆಯ ಪ್ರಖರತೆ ಕಡಿಮೆಯಾಗುವದಲ್ಲದೆ ಹೋದ ವರುಷದೊಂದಿಗೆ ತುಲನೆ ಮಾಡಿದಾಗ ಈ ವರುಷ ಪ್ರೋತ್ಸಾಹದಾಯಕವಿದೆ.

ಈ ರಾಶಿಯವರಿಗೆ ಕಳೆದ ವರುಷ ಘಟಿಸಿದ ಸಂಗತಿಗಳನ್ನು ನೆನೆಸಿಕೊಂಡಲ್ಲಿ ಮೈಯಲ್ಲಿ ನಡುಕ ಹುಟ್ಟುವುದು. ಆರೋಗ್ಯ ಗೃಹಸೌಖ್ಯಕ್ಕೆ ಎರವಾದವರೆಷ್ಟು? ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹಾನಿ ಹೊಂದಿದವರೆಷ್ಟು? ಅದೊಂದು ದೀರ್ಘಪಟ್ಟಿಯೇ ಆಗುವದು. ಇರಲಿ. ಮುಂಬರುವ ಐದನೆಯ ಗುರು ಶುಭದಾಯಕನಾಗಿರುವನು, ಕ್ರಮೇಣ ಪರಿಸ್ಥಿತಿ ಸುಧಾರಿಸುತ್ತ ಹೋಗುವುದು. ಮೂಲಾ ನಕ್ಷತ್ರದ ಧನು ರಾಶಿಯವರಿಗೆ ಪರಿಸ್ಥಿತಿ ಸುಧಾರಿಸಿದರೆ ಪೂರ್ವಾಷಾಢಾ ಹಾಗೂ ಉತ್ತರಾಷಾಢಾದ ಧನುರಾಶಿಯವರಿಗೆ ತಾಪದಾಯಕವಾಗಿದೆ. ಪ್ರಾಣದೇವರು ಹಾಗು ಶ್ರೀ ಗುರುದತ್ತನನು ಪ್ರಾರ್ಥಿಸಿರಿ. ಎಲ್ಲವೂ ಸರಿಯಾಗುವದು. ಕಳೆದ ವರುಷವಿದ್ದ ಶಾರೀರಿಕ ಪೀಡೆ, ಸ್ವಜನ ವಿರೋಧದಿಂದ ಉಂಟಾಗಿದ್ದ ಮಾನಸಿಕ ವ್ಯಥೆ ಕಡಿಮೆ ಆದರೂ ನವ್ಹೆಂಬರ ೧೫ರಿಂದ ಜನೆವರಿ ೧೪, ಮಾರ್ಚ ೧೫ರಿಂದ ಎಪ್ರಿಲ್ ೧೨, ಜುಲೈ ೧೫ರಿಂದ ಆಗಸ್ಟ ೧೬ರ ವರೆಗಿನ ಈ ನಾಲ್ಕು ತಿಂಗಳ ಕಾಲ ಮಾತ್ರ

ಅನಾರೋಗ್ಯ, ಅಪಘಾತದ ಭೀತಿ, ಶತ್ರುಗಳ ಕಾಟ ವಿದ್ದು ಉಳಿದ ಎಂಟು ತಿಂಗಳುಗಳ ಅವಧಿಯಲ್ಲಿ ಆರೋಗ್ಯ ಚೆನ್ನಾಗಿರುವದು. ಮುಂಬರುವ ಐದನೆಯ ಗುರು ಹಾಗೂ ವರ್ಷಾಂತ್ಯದ ವರೆಗೆ ಇರುವ ಹನ್ನೊಂದನೆಯ ರಾಹುವಿನ ಶುಭಫಲದ ಮೂಲಕ ಆರ್ಥಿಕ ಸ್ಥಿತಿ ವರುಷವಿಡೀ ತೃಪ್ತಿಕರವಿರುತ್ತದೆ. ಅದರಲ್ಲಿಯೂ ನವ್ಹೆಂಬರ ೪ರಿಂದ ಡಿಸೆಂಬರ ೧೯, ಫೆಬ್ರುವರಿ ೧೨ರಿಂದ ಮಾರ್ಚ ೧೪, ಮೇ ೧೫ರಿಂದ ಜುಲೈ ೧೪ ಮತ್ತು ಆಗಸ್ಟ ೧೫ ರಿಂದ ವರ್ಷಾಂತ್ಯದ ವರೆಗಿನ ಕಾಲವು ಆರ್ಥಿಕ ದೃಷ್ಟಿಯಿಂದ ಶುಭವೂ ಅನುಕೂಲವೂ ಆಗಿರುವುದರಿಂದ ಈ ಅವಧಿಯಲ್ಲಿ ದತ್ತಕ, ವಾರಸಾ ಸ್ತ್ರೀಧನ, ಭಕ್ಷಿಸ, ಲಾಟರಿ, ಬಹುಮಾನ, ಕಮೀಶನ್ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭದ ಯೋಗವಿದೆ. ಕಳೆದ ವರುಷ ಮಾಡಿದ್ದ ಸಾಲವೆಲ್ಲ ತೀರಿ ಹೋಗಿ ನಾಲ್ಕು ಜನರಿಗೆ ಸಹಾಯ ಮಾಡುವಷ್ಟರ ಮಟ್ಟಿಗೆ ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸುವದು. ಆದರೆ ನವ್ಹೆಂಬರ ೨೦ ರಿಂದ ಫೆಬ್ರುವರಿ ೧೨, ಮಾರ್ಚ ೧೧ರಿಂದ ಎಪ್ರಿಲ್ ೧೨ ಹಾಗೂ ಜುಲೈ ೧೫ರಿಂದ ಆಗಸ್ಟ ೧೫ರ ವರೆಗಿನ ಈ ಐದು ತಿಂಗಳುಗಳು ಪ್ರತಿಕೂಲವಿದ್ದು, ಆದಾಯ, ಅಲ್ಪ. ವೆಚ್ಚ ವಿಪರೀತ ಬೆಳೆದು ಹಳೆಯ ಸಾಲ ತೀರಿಸಲು ಹೊಸ ಸಾಲಕ್ಕಾಗಿ ಪರದಾಡಬೇಕಾಗುವದು. ಆದರೆ ಯಶಸ್ಸು ಖಂಡಿತ. ವಾದ ಸ್ಪರ್ಧೆ ಮತ್ತು ಕೋರ್ಟಿನ ವ್ಯವಹಾರದಲ್ಲಿ ಬರಲಿರುವ ಐದನೆಯ ಗುರುವಿನಿಂದಾಗಿ ಎಲ್ಲ ಬಗೆಯ ವ್ಯಾಜ್ಯಗಳಲ್ಲಿ ವರುಷದ ಉತ್ತರಾರ್ಧದಲ್ಲಿ ಯಶಸ್ಸು ಸಿಗುತ್ತದೆ. ಆದರೆ ಪೂರ್ವಾರ್ಧ ಪ್ರತಿಕೂಲವಿರುವುದರಿಂದ ಯಾವುದೇ ಬಗೆಯ ವ್ಯಾಜ್ಯಗಳಿಗೆ ಕೈ ಹಾಕದಿರುವುದೇ ಹಿತಕರವು. ಅನಿವಾರ್ಯವಿದ್ದಲ್ಲಿ ದಾಖಲು ಮಾಡಿ ಉತ್ತರಾರ್ಧದ ವರೆಗೆ ಮುದ್ದತ್ತು ತೆಗೆದುಕೊಳ್ಳುತ್ತ ಹೋಗುವದುಚಿತ.

ಈ ರಾಶಿಯ ನೌಕರರಿಗೆ ಕಳೆದ ವರುಷ ವರಿಷ್ಟರೊಡನೆ ಉಂಟಾಗಿದ್ದ ತಪ್ಪು ತಿಳುವಳಿಕೆ ವರುಷದ ಮಧ್ಯದಿಂದ ಕ್ರಮೇಣ ದೂರಾಗಿ ಸಹಾಯ ಸಹಕಾರ ಹೆಚ್ಚುವುದು. ಫೆಬ್ರುವರಿ ೧೨ರಿಂದ ಮಾರ್ಚ ೧೫, ಎಪ್ರಿಲ್ ೧೨ರಿಂದ ಜೂನ ೧೫ ಹಾಗೂ ಆಗಸ್ಟ ೧೫ರಿಂದ ವರುಷಾಂತ್ಯದ ವರೆಗಿನ ಕಾಲ ಅನುಕೂಲವಾಗಿರುವುದರಿಂದ ಈ ಅವಧಿಯಲ್ಲಿ ಈ ರಾಶಿಯ ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವುದು. ನೌಕರ ವರ್ಗದವರಿಗೆ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ, ಹಂಗಾಮಿ ನೌಕರದಾರರಿಗೆ ನೌಕರಿಯಲ್ಲಿ ಕಾಯಂ ಆಗುವಿಕೆ. ಇವೇ ಮೊದಲಾದ ಶುಭ ಘಟನೆಗಳು ಲಭಿಸುವವು. ಈ ರಾಶಿಯ ಬಾಹ್ಯ ಪ್ರವಾಸಿ, ಸಂಚಾರಿ, ತಾಂತ್ರಿಕ ಕೆಲಸಗಾರರಿಗೆ ಹಾಗು ಗಿರಣಿ, ಕಾರಖಾನೆಗಳ ಕಾರ್ಮಿಕರಿಗೆಲ್ಲ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಕಳೆದ ವರುಷದಂತೆ ಉದ್ವಿಗ್ನ ಪರಿಸ್ಥಿತಿ ಇರುವುದಿಲ್ಲ. ಅಲ್ಲದೆ ಈ ವರುಷ ಉತ್ತರಾರ್ಧವು ಅನುಕೂಲವಿರುವುದರಿಂದ ಅವರ ಕೆಲ ಬೇಡಿಕೆಗಳು ಈಡೇರುವವು.

ಈ ರಾಶಿಯ ಅಧ್ಯಾಪಕ ಸಾಹಿತಿ, ಕಲಾವಿದ, ಪತ್ರಿಕೋದ್ಯಮಿ, ಲೇಖಕ, ಡಾಕ್ಟರ, ವಕೀಲ ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆ ಬರಲಿರುವ ಐದನೆಯ ಗುರುವಿನಿಂದಾಗಿ ಫೆಬ್ರುವರಿ ೧೨ರಿಂದ ಮಾರ್ಚ ೧೪, ಎಪ್ರಿಲ್ ೧೨ರಿಂದ ಜೂನ ೧೫, ಆಗಸ್ಟ ೧೫ರಿಂದ ವರುಷಾಂತ್ಯದ ವರೆಗಿನ ಕಾಲವು ಶುಭವೂ ಅನುಕೂಲವೂ ಇರುವುದರಿಂದ ಈ ಅವಧಿಯಲ್ಲಿ ಉದ್ಯೋಗದಲ್ಲಿ ಉತ್ಕರ್ಷ ಸಾಧಿಸಿ ಸರಕಾರ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪದಕ ಬಹುಮಾನಾದಿಗಳು ಲಭಿಸುವವಲ್ಲದೆ ದ್ರವ್ಯಾನುಕೂಲತೆಯಾಗಿ ವಾಹನ ಸೌಖ್ಯ, ಪರದೇಶ ಪರ್ಯಟನಗಳಂಥ ಶುಭ ಘಟನೆಗಳು ಜರುಗುವವು.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕ ವ್ಯಾಪಾರಸ್ಥ, ಕಮೀಶನ್ ಏಜಂಟ, ಹುಂಡಿಕೆದಾರ, ಚಾಳ, ಟಾಕೀಜ, ಹೋಟಲ, ಗಿರಣಿ, ಕಾರಖಾನೆಗಳ ಮಾಲಕ ವರ್ಗದವರಿಗೆಲ್ಲ ವರುಷವಿಡೀ ಇರುವ ಹನ್ನೆರಡನೆಯ ರಾಹು ಹಾಗು ಮಧ್ಯದಿಂದ ಬರುವ ಐದನೆಯ ಗುರುವಿನ ಮೂಲಕ ಈ ವರುಷ ಪ್ರೋತ್ಸಾಹದಾಯಕವಿದೆ. ಕುಂಠಿತವಾದ ಉದ್ಯೋಗ ಚೇತರಿಸುವುದು. ನೌಕರರ ಸಮಸ್ಯೆ ಸರಕಾರದ ನಿಬಂಧನೆಗಳಿರುವದಿಲ್ಲ. ಅದರಲ್ಲಿಯೂ ಜನವರಿ ೧೪ರಿಂದ ಮಾರ್ಚ ೧೫ ಎಪ್ರಿಲ್ ೧೨ ರಿಂದ ಜುಲೈ ೧೫ ಹಾಗೂ ಆಗಸ್ಟ ೧೫ ರಿಂದ ವರ್ಷಾಂತ್ಯದ ವರೆಗಿನ ಕಾಲ ಅತ್ಯಂತ ಶುಭದಾಯಕವಿದೆ. ಈ ಕಾಲದಲ್ಲಿ ಉದ್ಯೋಗದಲ್ಲಿ ಉತ್ಕರ್ಷ ಸಾಧಿಸಿ ಹಿಂದಿನ ಸಾಲಗಳೆಲ್ಲ ತೀರಿ ಹೋಗಿ ಹೊಸಶಾಖೆಗಳನ್ನು ಪ್ರಾರಂಭಿಸುವ ಉದ್ಯೋಗಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಸಾಮರ್ಥ್ಯ ಬರುತ್ತದೆ. ಈ ರಾಶಿಯ ಕೃಷಿಕರಿಗೆ ಈ ವರುಷ ಹೇಳಿಕೊಳ್ಳುವಂಥ ಪ್ರಗತಿದಾಯಕವಿಲ್ಲವಾದರೂ ಕುಂಠಿತವಾದ ಬೇಸಾಯ ಮತ್ತೆ ಪ್ರಾರಂಭವಾಗುವುದು. ಒತ್ತಿ ಹಾಕಲ್ಪಟ್ಟ ಹೊಲ ಮನೆಗಳನ್ನು ಬಿಡಿಸಿಕೊಳ್ಳುವ ಇಲ್ಲವೆ ಹೊಸದಾಗಿ ದನಕರುಗಳು, ಬೇಸಾಯಕ್ಕೆ ಬೇಕಾಗುವ ಉಪ

ಕರಣಗಳನ್ನು ಕೊಳ್ಳುವ ಸಾಮರ್ಥ್ಯ ಬರುತ್ತದೆ. ಒಂದು ವೈಶಿಷ್ಟ್ಯವೆಂದರೆ ವರುಷದ ಪೂರ್ವಾರ್ಧವು ತೀರ ಪ್ರತಿಕೂಲವಾದರೆ ಉತ್ತರಾರ್ಧವು ಅತ್ಯಂತ ಶುಭದಾಯಕವಿದೆ.


ಕಳೆದ ಅನೇಕ ವರುಷಗಳಿಂದ ಪ್ರಯತ್ನಿಸುತ್ತಿರುವವರ ಈ ರಾಶಿಯ ವಧೂವರರಿಗೆ ಈ ವರುಷ ಮಧ್ಯದಿಂದ ಬರುವ ಐದನೆಯ ಗುರುವಿನಿಂದಾಗಿ ಕಂಕಣಬಲ ಕೂಡಿ ಬಂದಿದೆ. ಆದರಲ್ಲಿಯೂ ಫೆಬ್ರುವರಿ ೧೨ರಿಂದ ಜುಲೈ ೧೫, ಹಾಗೂ ಆಗಸ್ಟ ೧೫ರಿಂದ ಅಕ್ಟೋಬರ ೨೪ರ ಅವಧಿಯಲ್ಲಿ ವಿವಾಹ ಸಾಂಗವಾಗಿ ಗೃಹಸ್ಥಾಶ್ರಮದ ಆನಂದಮಯ ಜೀವನದಲ್ಲಿ ಪದಾರ್ಪಣೆ ಮಾಡುವರು. ನಾಲ್ಕನೆಯ ಗುರು ಹಾಗೂ ಎಂಟನೆಯ ಶನಿಯ ಅನಿಷ್ಟತೆಯಿಂದ ಕಳೆದ ವರುಷ ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವುದು. ತಪ್ಪು ತಿಳುವಳಿಕೆಯಿಂದಲೂ ಗೃಹಕಲಹದಿಂದಲೂ ಸ್ಮಶಾನದಂತೆ ಕಾಣುತ್ತಿದ್ದ ಮನೆ ಮತ್ತೆ ನಂದನವನದಂತೆ ಶೋಭಿಸುವದು. ವಿವಾಹಿತ ಸ್ತ್ರೀ ಪುರುಷರಿಗೆಲ್ಲ ಈ ವರುಷ ಪ್ರಗತಿಯದಿದ್ದು, ಅದರಲ್ಲಿಯೂ ಫೆಬ್ರುವರಿ/೧೨ರಿಂದ ಜುಲೈ ೧೫, ಆಗಸ್ಟ ೧೫ರಿಂದ ವರುಷಾಂತ್ಯದ ವರೆಗಿನ ಅವಧಿ ಶುಭದಾಯಕವಿದೆ. ಈ ಕಾಲದಲ್ಲಿ ಸ್ಥಾವರ ಆಸ್ತಿ ಸಂಪಾದನೆ, ಬೆಲೆಯುಳ್ಳ ವಸ್ತು ಒಡವೆಗಳನ್ನು ಕೊಳ್ಳುವ, ತೀರ್ಥಯಾತ್ರಾ ಸಂದರ್ಶನ, ಮೊದಲಾದ ಶುಭ ಘಟನೆಗಳು ಜರುಗುವವು.

ಈ ರಾಶಿಯ ಗರ್ಭಿಣಿಯರ ಹೆರಿಗೆಯು ಫೆಬ್ರುವರಿ ೧೨ರಿಂದ ಮಾರ್ಚ ೧೫, ಎಪ್ರಿಲ್ ೧೨ರಿಂದ ಜುಲೈ ೧೫ ಮತ್ತು ಆಗಸ್ಟ ೧೫ರಿಂದ ವರುಷಾಂತ್ಯದ ವರೆಗಿನ ಅವಧಿಯಲ್ಲಾದರೆ ಸುಖಪ್ರಸವ, ಜನಿಸುವ ಶಿಶು ಗಂಡುಮಗುವಾಗುವ ಯೋಗವುಂಟು. ಆದರೆ ಹೆರಿಗೆಯು ನವ್ಹೆಂಬರ ೧೪ ರಿಂದ ಫೆಬ್ರುವರಿ ೧೧, ಮಾರ್ಚ ೧೫ರಿಂದ ಎಪ್ರಿಲ್ ೧೨ ಹಾಗೂ ಜುಲೈ ೧೫ರಿಂದ ಆಗಸ್ಟ ೧೫ರ ನಡುವಿನ ಕಾಲದಲ್ಲಾದರೆ ಪ್ರಸೂತಿ ಕಷ್ಟಕರ. ಶಸ್ತ್ರಕ್ರಿಯೆ ಅನಿವಾರ್ಯವಾಗುವದು.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ವರುಷದ ಮಧ್ಯದಿಂದ ಬರುವ ಐದನೆಯ ಗುರುವಿನಿಂದಾಗಿ ಪ್ರೋತ್ಸಾಹದಾಯಕವಾಗಿದೆ. ಶತ್ರುಗಳು ಮಿತ್ರರಾಗುವ ಕಾರಣ, ಕಳೆದ ವರುಷ ಸಲ್ಲದ ಅಪವಾದಕ್ಕೆ ಗುರಿಯಾಗಿದ್ದ ನೀವು ಈ ವರುಷ ಮುಕ್ತರಾಗುವಿರಿ. ಆದರಲ್ಲಿಯೂ ಫೆಬ್ರುವರಿ ೧೨ರಿಂದ ಮಾರ್ಚ ೧೪, ಎಪ್ರಿಲ್ ೧೨ರಿಂದ ಜುಲೈ ೧೪ ಹಾಗೂ ಆಗಸ್ಟ ೧೫ರಿಂದ ವರುಷಾಂತ್ಯದ ವರೆಗಿನ ಕಾಲವಂತೂ ಅತ್ಯಂತ ಯಶೋದಾಯಕವಾಗಿದ್ದು ಕಳೆದುಕೊಂಡಿದ್ದ ಸ್ಥಾನಮಾನ, ಅಧಿಕಾರ, ಜನಪ್ರಿಯತೆ ಪುನಃ ಪಡೆಯುವಿರಿ. ಅನೇಕ ಸಂಘಸಂಸ್ಥೆಗಳ ಸದಸ್ಯ, ಪದಾಧಿಕಾರಿಗಳಾಗಿ ಗಣ್ಯವ್ಯಕ್ತಿಗಳಾಗುವಿರಿ. ಇದೇ ಅವಧಿಯಲ್ಲಿ ಚುನಾವಣೆಗಳು ಜರುಗಿದಲ್ಲಿ ಸ್ಪರ್ಧೆಯಲ್ಲಿ ಜಯ ಖಂಡಿತ; ಆದರೆ ಮಿಕ್ಕ ಕಾಲದಲ್ಲಿ ಚುನಾವಣೆಗಳು ಜರುಗಿದರೆ ಸ್ಪರ್ಧಿಸದಿರುವುದು ಹಿತಕರ.


ಈ ರಾಶಿಯ ವಿದ್ಯಾರ್ಥಿಗಳಿಗೆ ಬರಲಿರುವ ಐದನೆಯ ಗುರು ಯಶೋದಾಯಕನಾಗಿರುವನು. ಕಳೆದ ವರುಷದಿಂದ ಅರ್ಧಕ್ಕೆ ನಿಂತಿದ್ದ ಶಿಕ್ಷಣ ಮತ್ತೆ ಮುಂದುವರೆಯುವದಲ್ಲದೆ ಶಿಕ್ಷಕರ ಅವಕೃಪೆಗೆ ಪಾತ್ರರಾದ ವಿದ್ಯಾರ್ಥಿಗಳು ಅವರ ಕೃಪೆಗೆ ಪಾತ್ರರಾಗುವರು. ನಿಂತಿದ್ದ ಶಿಷ್ಯವೃತ್ತಿ, ವಿದ್ಯಾರ್ಥಿವೇತನ ಪುನಃ ದೊರೆಯುವುದು. ಫೆಬ್ರುವರಿ ೧೨ರಿಂದ ಮಾರ್ಚ ೧೫, ಎಪ್ರಿಲ್ ೧೨ರಿಂದ ಜುಲೈ ೧೫ ಹಾಗೂ ಆಗಸ್ಟ ೧೫ರಿಂದ ವರುಷಾಂತ್ಯದ ವರೆಗೆ ಜರುಗಲಿರುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆಯಾಗುವರಲ್ಲದೆ ದರ್ಜೆ, ಶ್ರೇಣಿ ಪಡೆಯುವರು. ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ವಿದೇಶ ಯಾತ್ರೆಯನ್ನು ಕೈಕೊಳ್ಳಬಹುದಾಗಿದೆ. ನವ್ಹೆಂಬರ ೪ರಿಂದ ಫೆಬ್ರುವರಿ ೧೨ ಮಾರ್ಚ ೧೫ರಿಂದ ಎಪ್ರಿಲ್ ೧೧, ಜುಲೈ ೧೫ರಿಂದ ಆಗಸ್ಟ ೧೪ರ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟಿದವರ ಫಲಿತಾಂಶವನ್ನು ಹೇಳುವುದು ಕಠಿಣ.

ಯಾರ ನೆನೆಯಲಿ?



ಈ ಮೊದಲು ನಿನ್ನ ನೆನೆನೆನೆದು
ಕಣ್ಣೀರು ಇಡುತ್ತಿದ್ದೆ ಗೆಳತಿ!
ಈಗ ನೀನೇ ನಾನಾದ ಬಳಿಕ
ಇನ್ನಾರ ನೆನೆಯಲಿ?

–ಪಂಚಾಕ್ಷರಿ ಹಿರೇಮಠ



ಮಕರ

ಈ ರಾಶಿಯವರಿಗೆ ಈ ವರುಷ ಉದ್ಯೋಗ ಆರ್ಥಿಕದಲ್ಲಿ ಯಥಾಸ್ಥಿತಿ ಮುಂದುವರೆದರೆ ಕೌಟುಂಬಿಕ, ಪ್ರಾಪಂಚಿಕ, ಆರೋಗ್ಯ, ಶೈಕ್ಷಣಿಕ ದೃಷ್ಟಿಯಿಂದ ಪ್ರತಿಕೂಲ ಹಾಗೂ ನಿರುತ್ಸಾಹ ದಾಯಕವಾಗಿದೆ.

ಕಳೆದ ವರುಷದಿಂದ ಈ ರಾಶಿ[illegible]ಗೆ ಏಳನೆಯವನಾಗಿರುವ ಶನಿ ಈ ವರ್ಷ ಕೂಡ ಅದೇ ಸ್ಥಾನದಲ್ಲಿ ಮುಂದುವರೆದರೂ ಆತನು ಯಾವ ಶುಭ ಅಶುಭ ಫಲವನ್ನೂ ಕೊಡದೇ ಯಥಾಸ್ಥಿತಿ ಪರಿಸ್ಥಿತಿಯನ್ನು ಮುಂದುವರೆಸುವನು. ಆದರೆ ಫೆಬ್ರುವರಿ ೨೫ರಿಂದ ಬರುವ ನಾಲ್ಕನೆಯ ಗುರುವು ವರ್ಷಾಂತ್ಯದ ವರೆಗೆ ಅಶುಭಫಲದಾಯಕನಾಗಿರುವನು. ಈತನ ಅಶುಭಫಲವು ಉತ್ತರಾಷಾಢಾ ಹಾಗು ಶ್ರವಣಾ ನಕ್ಷತ್ರ ಮಕರ ರಾಶಿಯವರಿಗಿದ್ದು, ಧನಿಷ್ಠಾ ನಕ್ಷತ್ರದ ಈ ರಾಶಿಯವರಿಗೆ ಶುಭಫಲವೇ ದೊರೆಯುವುದು. ಉದ್ಯೋಗ ಆರ್ಥಿಕದಲ್ಲಿ ರಾಹು ವರುಷವಿಡೀ ಶುಭಫಲವನ್ನು ಕೊಡುವನಾದರೆ ಶನಿಯು ವರುಷವಿಡೀ ಯಾವ ಶುಭ ಅಶುಭ ಫಲ ಕೊಡದೇ ಯಥಾಸ್ಥಿತಿ ಮುಂದುವರೆಸುವನು. ಗುರು ಮಾತ್ರ ವರುಷವಿಡೀ ಅಶುಭಫಲದಾಯಕನಾಗಿರುವದರಿಂದ ಈ ವರುಷ ಮಿಶ್ರಫಲವಿದೆ. ಅವನ ಪೂಜೆ, ಶಾಂತಿ, ಜಪ ಇಲ್ಲವೆ ಪ್ರತಿ ಗುರುವಾರ ದತ್ತ ದರ್ಶನ ಮಾಡಿದರೆ ಆತನ ಅನಿಷ್ಟತೆಯು ಕಡಿಮೆ ಆಗುವುದು.

ಈ ರಾಶಿಯವರ ಆರೋಗ್ಯ ವರುಷದ ಏಳು ತಿಂಗಳ ಕಾಲ ದೈಹಿಕವಾಗಿ ಚೆನ್ನಾಗಿರುವದು. ಮಾನಸಿಕ ನೆಮ್ಮದಿ ಮಾತ್ರ ವರುಷವಿಡೀ ಇರುವುದಿಲ್ಲ. ಡಿಸೆಂಬರ ೧೫ರಿಂದ ಫೆಬ್ರುವರಿ ೧೨, ಎಪ್ರಿಲ್ ೧೨ ರಿಂದ ಮೇ ೧೫, ಜುಲೈ ೧೫ರಿಂದ ಸಪ್ಟಂಬರ ೧೫ರ ವರೆಗಿನ ಅವಧಿಯಲ್ಲಿ ಆರೋಗ್ಯ ಕೆಡುವುದಲ್ಲದೇ ಶತ್ರುಗಳ ಪೀಡೆ ಅಪಘಾತದ ಭಯವೂ ಉಂಟು. ಆರ್ಥಿಕದ ದೃಷ್ಟಿಯಿಂದ ಈ ವರುಷ ಬಹು ವಿಚಿತ್ರವಿದೆ. ಆಕಸ್ಮಿಕ ಧನಲಾಭದ ಜೊತೆಗೆ ಸಾಲಗಾರರ ಕಾಟವೂ ಉಂಟು. ಡಿಸೆಂಬರ ೧೫ರಿಂದ ಫೆಬ್ರುವರಿ ೧೩, ಎಪ್ರಿಲ್ ೧೨ರಿಂದ ಜೂನ ೧೫, ಜುಲೈ ೧೫ರಿಂದ ಸಪ್ಟಂಬರ ೧೫ರ ವರೆಗಿನ ಆರು ತಿಂಗಳುಗಳು ತೀರ ಪ್ರತಿಕೂಲವಿದ್ದು, ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗುವುದು. ಡಾಕ್ಟರ ಮತ್ತು ವಕೀಲರ, ಬಿಲ್ಲುಗಳನ್ನು ತೀರಿಸಲು ಹೊಸ ಸಾಲಕ್ಕಾಗಿ ಪರದಾಡಬೇಕಾಗುತ್ತದೆ. ಬರತಕ್ಕ ಹಣ ಸಮಯಕ್ಕೆ ಬರದೇ ಕೊಡತಕ್ಕ ಹಣಕ್ಕಾಗಿ ಸಾಕು ಬೇಕಾಗುವದು; ಆದರೆ ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೩ರಿಂದ ಎಪ್ರಿಲ್ ೧೨, ಜುಲೈ ೧೫ ರಿಂದ ಸಪ್ಟಂಬರ ೧೬. ಹಾಗು ವರುಷಾಂತ್ಯದ ವರೆಗಿನ ಆರು ತಿಂಗಳುಗಳ ಕಾಲ ಅತ್ಯಂತ ಶುಭದಾಯಕವಿದ್ದು ನಿರೀಕ್ಷಿಸಿದ ಮೂಲದಿಂದ ಹಣ ಬರುವದು; ಇದೇ ಸಮಯದಲ್ಲಿ ಆಕಸ್ಮಿಕ ಧನಲಾಭದ ಯೋಗವೂ ಉಂಟು. ಮುಂಬರುವ ನಾಲ್ಕನೆಯ ಗುರು ವಾದ, ಸ್ಪರ್ಧೆ, ಕೋರ್ಟು, ಕಚೇರಿಗಳ ಕೆಲಸಕ್ಕೆ ಪ್ರತಿಕೂಲವಿರುವುದರಿಂದ ಅವುಗಳ ಗೊಡವೆಗೆ ಈ ವರುಷ ಹೋಗದಿರುವುದೇ ಹಿತಕರವು. ಇದ್ದುದರಲ್ಲಿಯೇ ಪೂರ್ವಾರ್ಧ ಕೆಲ ಮಟ್ಟಿಗೆ ಅನುಕೂಲ. ರಾಜಿ, ಸಂಧಾನ, ಮನೋಭಾವನೆಯಿಂದ ವರ್ತಿಸುವುದು ಹಿತಕರ. ದಾವೆ ಮಾಡುವುದು ಅನಿವಾರ್ಯವಿದ್ದಲ್ಲಿ ದಾಖಲು ಮಾಡಿ, ವರುಷವಿಡೀ ಮುದ್ದತ ತೆಗೆದುಕೊಳ್ಳುವುದು ಹಿತಕರ.

ಈ ರಾಶಿಯ ನೌಕರರಿಗೆ ಆರ್ಥಿಕದೃಷ್ಟಿಯಿಂದ ಹಾನಿಯೇನಿಲ್ಲ; ಆದರೆ ಅಧಿಕಾರದದೃಷ್ಟಿಯಿಂದ ಅಶುಭದಾಯಕವಿದೆ. ಹಂಗಾಮಿ ನೌಕರರಿಗೆ ಅಸ್ಥಿರತೆ, ಈ ವರುಷವೂ ಮುಂದುವರಿಯುವುದು. ಇದ್ದುದರಲ್ಲಿಯೇ ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೪ ರಿಂದ ಎಪ್ರಿಲ್ ೧೨ ಮೇ ೧೫ರಿಂದ ಜುಲೈ ೧೫, ಸಪ್ಟಂಬರ ೧೬ರಿಂದ ವರುಷಾಂತ್ಯದ ವರೆಗಿನ ಕಾಲ

ಕೆಲ ಮಟ್ಟಿಗೆ ಅನುಕೂಲ. ಈ ಅವಧಿಯಲ್ಲಿ ತಾತ್ಕಾಲಿಕ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿಯಾಗುವದು ಮೊದಲಾದ ಶುಭಘಟನೆಗಳು ಜರುಗುವವು. ಆದರೆ ಡಿಸೆಂಬರ ೧೫ರಿಂದ ಫೆಬ್ರುವರಿ ೧೩, ಎಪ್ರಿಲ್ ೧೨ರಿಂದ ಮೇ ೧೪, ಜುಲೈ ೧೫ರಿಂದ ಸಪ್ಟಂಬರ ೧೫ರ ವರೆಗಿನ ಕಾಲದಲ್ಲಿ ತೀರ ಪ್ರತಿಕೂಲವಿರುವುದರಿಂದ ಅನಪೇಕ್ಷಿತ ಸ್ಥಳಕ್ಕೆ ಬದಲಿ, ವರಿಷ್ಠರ ಅಸಹನೀಯ ಕಿರುಕುಳದಿಂದಾಗಿ ನೌಕರಿಗೆ ತಿಲಾಂಜಲಿಯನ್ನೀವ ಸನ್ನಿವೇಶ ಎದುರಾಗುವುದು. ನಿರುದ್ಯೋಗಿಗಳಿಗಂತೂ ಈ ಅವಧಿಯು ಅಸಹನೀಯ. ಆರ್ಥಿಕ ಮುಗ್ಗಟ್ಟಿನೊಂದಿಗೆ ಸಲ್ಲದ ಅಪವಾದಕ್ಕೂ ಗುರಿಯಾಗಬೇಕಾಗುವುದು. ಈ ರಾಶಿಯ ಬಾಹ್ಯ ಕೆಲಸಗಾರ ಪ್ರವಾಸಿ ಹಾಗು ತಾಂತ್ರಿಕ ಕೆಲಸಗಾರ ಶ್ರಮಜೀವಿಗಳಿಗೆಲ್ಲ ಹತ್ತನೆಯ ರಾಹುವಿನಿಂದಾಗಿ ವರುಷದ ಮುಕ್ಕಾಲು ಅವಧಿಯು ಶುಭವಿರುತ್ತದೆ. ಆದರಲ್ಲಿಯೂ ನವ್ಹೆಂಬರ ೪ರಿಂದ ಡಿಸೆಂಬರ ೧೫, ಜನವರಿ ೧೪ರಿಂದ ಎಪ್ರಿಲ ೧೩, ಮೇ ೧೫ರಿಂದ ಜುಲೈ ೧೫, ಸಪ್ಟಂಬರ ೧೫ರಿಂದ ವರ್ಷಾಂತ್ಯದ ವರೆಗಿನ ಕಾಲ ಶುಭವೂ, ಅನುಕೂಲವೂ ಆಗಿದ್ದು, ಈ ಅವಧಿಯಲ್ಲಿ ಒಂದೆರಡು ಹೆಚ್ಚಿನ ಇನ್‌ಕ್ರಿಮೆಂಟ ಬಡತಿ. ವರಿಷ್ಠರ ಸಹಾಯ ಸಹಕಾರ ದೊರೆಯುವದಲ್ಲದೆ ಅವರ ಅನೇಕ ಬೇಡಿಕೆಗಳು ಈಡೇರುವವು.

ಈ ರಾಶಿಯ ಸಾಹಿತಿ, ಲೇಖಕ, ಕಲಾವಿದ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ನ್ಯಾಯಾಧೀಶ ಮೊದಲಾದ ಬುದ್ಧಿಜೀವಿಗಳಿಗೆ ಮುಂಬರುವ ನಾಲ್ಕನೆಯ ಗುರುವಿನಿಂದಾಗಿ ಈ ವರುಷ ಪ್ರತಿಕೂಲವಿದೆ, ಉದ್ಯೋಗದಲ್ಲಿ ಚಟುವಟಿಕೆ ಕಂಡು ಬಾರದು. ಮಿತ್ರರು ಶತ್ರುಗಳಾಗುವುದರಿಂದ ಮಿಥ್ಯಾಪವಾದವನ್ನು ಎದುರಿಸಬೇಕಾಗುತ್ತದೆ. ಇದ್ದುದರಲ್ಲಿಯೇ ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೨ರಿಂದ ಎಪ್ರಿಲ್ ೧೩, ಮೇ ೧೫ರಿಂದ ಜುಲೈ ೧೫ರ ವರೆಗಿನ ಕಾಲ ಕೆಲ ಮಟ್ಟಿಗೆ ಶುಭವಿರುವುದರಿಂದ ಆರ್ಥಿಕದೃಷ್ಟಿಯಿಂದ ಅನುಕೂಲವಿದೆ. ಆದರೆ ಅಧಿಕಾರ, ಸ್ಥಾನ–ಮಾನ ದೃಷ್ಟಿಯಿಂದ ನಿರುತ್ಸಾಹದಾಯಕವೇ ಸರಿ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ ಠೋಕ ಹಾಗೂ ಕಮೀಶನ್ ಎಜೆಂಟ, ಹಂಚಿಕೆದಾರ, ಚಾಳ, ಟಾಕೀಜ, ಗಿರಣಿ, ಕಾರಖಾನೆ, ಹೋಟೆಲುಗಳ ಮಾಲಕವರ್ಗದವರಿಗೆಲ್ಲ ಉತ್ಸಾಹದಾಯಕ ವರ್ಷವಿದಾಗಿಲ್ಲ. ಹೊಸಶಾಖೆ, ಹೊಸಉದ್ಯೋಗ, ಪ್ರಾರಂಭಿಸಬೇಕೆಂಬ ವಿಚಾರ ಕೈಬಿಡಬಹುದಾಗಿದೆ. ನೌಕರರ ಸಮಸ್ಯೆಗಳೊಂದಿಗೆ ಸರಕಾರದ ನಿರ್ಬಂಧನೆಗಳನ್ನೂ ಎದುರಿಸಬೇಕಾಗುತ್ತದೆ. ಈ ರಾಶಿಯ ಕೃಷಿಕರಿಗೆ ಮುಂಗಾರಿ ಬೆಳೆ ನಿರೀಕ್ಷೆಗಿಂತ ಹೆಚ್ಚು ಬಂದು ಆರ್ಥಿಕ ಸ್ಥಿತಿ ಚೇತರಿಸುವದು. ಹೊಸ ಮನೆ, ಗದ್ದೆ, ತೋಟ ಪಟ್ಟಿಗಳು ದನಕರುಗಳು ಹಾಗು ಬೇಸಾಯದ ಉಪಕರಣಗಳನ್ನು ಕೊಳ್ಳುವ ಇಲ್ಲವೇ ನವೀಕರಿಸುವ ಸಾಧ್ಯತೆ ಉಂಟು. ಆದರೆ ಹಿಂಗಾರಿ ಬೆಳೆ ಕೈ ಕೊಡುವದರಿಂದ ನಿಮ್ಮ ಲೆಕ್ಕ ಸಂಪೂರ್ಣ ತಪ್ಪುತ್ತದೆ. ಅದರಲ್ಲಿಯೂ ಎಪ್ರಿಲ್ ೧೨ರಿಂದ ಜೂನ ೧೫, ಜುಲೈ ೧೫ರಿಂದ ಸಪ್ಟೆಂಬರ ೧೫ರ ವರೆಗಿನ ಈ ನಾಲ್ಕು ತಿಂಗಳ ಅವಧಿಯಲ್ಲಿ ಸಾಲಗಾರರ ಕಾಟ ಹೆಚ್ಚಿ ಹೊಸ ಸಾಲಕ್ಕಾಗಿ ಪರದಾಡಬೇಕಾಗುತ್ತದೆ. ಹೊಲ, ಮನೆ, ಜಾಗೆಗಳನ್ನು ಒತ್ತಿ ಹಾಕಿ ಋಣಮುಕ್ತರಾದಬೇಕಾಗುತ್ತದೆ. ಈ ರಾಶಿಯ ವಧೂವರರಿಗೆ ಪೂರ್ವಾರ್ಧದಲ್ಲಿ ಮದುವೆ ನಿಶ್ಚಯವಾದಲ್ಲಿ ನಿರ್ವಿಘ್ನವಾಗಿ ವಿವಾಹ ಸಾಂಗವಾಗುವದು. ಉತ್ತರಾರ್ಧದಲ್ಲಿ ವಿವಾಹ ಗೊತ್ತಾದರೆ ಮುರಿಯಬಹುದು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೆ ಮುಂಬರುವ ನಾಲ್ಕನೆಯ ಗುರುವಿನಿಂದಾಗಿ ಈ ವರುಷ ಕ್ಲೇಶದಾಯಕವಾಗಿದೆ. ಪ್ರತಿ ನಿತ್ಯದ ಗೃಹ ಕಲಹ. ಆಪ್ತೇಷ್ಟರೊಂದಿಗೆ ವಿರಸ, ಕಲಹ, ತಪ್ಪು ತಿಳುವಳಿಕೆಯಿಂದಾಗಿ ನಿದ್ರಾರಹಿತವಾದ ರಾತ್ರಿಗಳನ್ನು ಕಳೆಯಬೇಕಾಗುತ್ತದೆ. ಅದರಲ್ಲಿಯೂ ಡಿಸೆಂಬರ ೧೫ರಿಂದ ಫೆಬ್ರುವರಿ ೧೩, ಎಪ್ರಿಲ್ ೧೨ರಿಂದ ಜೂನ ೧೫. ಜುಲೈ ೧೫ರಿಂದ ಸಪ್ಟಂಬರ ೧೫ರ ವರೆಗಿನ ಈ ಆರು ತಿಂಗಳ ಕಾಲದಲ್ಲಿ ಗೃಹಕಲಹ ಮಿತಿ ಮೀರಿ ಏಕತ್ರ ಕುಟುಂಬ ಒಡೆಯಬಹುದಾಗಿದೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ತೊಂದರೆಯದಾಗಿದ್ದು. ಶಸ್ತ್ರಕ್ರಿಯೆ ಅನಿವಾರ್ಯವಾಗುತ್ತದೆ.

ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಬರಲಿರುವ ನಾಲ್ಕನೆಯ ಗುರು ನಿರುತ್ಸಾಹದಾಯಕನಾಗಿರುವನು. ಆದಾಗ್ಯೂ ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೨ರಿಂದ ಎಪ್ರಿಲ್ ೧೩, ಮೇ ೧೫ರಿಂದ ಜುಲೈ ೧೫ರ ವರೆಗಿನ ಅವಧಿಯು ಇದ್ದುದರಲ್ಲಿಯೇ ಶುಭವೂ ಅನುಕೂಲವೂ ಆಗಿರುವುದರಿಂದ ಸ್ಥಾನ–ಮಾನ, ಅಧಿಕಾರ ಪಡೆಯುವರು. ಈ ಅವಧಿಯಲ್ಲಿ ಜರುಗುವ ಚುನಾವಣೆ ತುರುಸಿನದಾದರೂ ಆಯ್ಕೆ ನಿಶ್ಚಿತ. ಆದರೆ ಡಿಸೆಂಬರ ೧೫ರಿಂದ ಫೆಬ್ರುವರಿ ೧೩, ಎಪ್ರಿಲ್ ೧೨ರಿಂದ ಮೇ ೧೪, ಜುಲೈ ೧೫ರಿಂದ ಸಪ್ಟಂಬರ ವರೆಗಿನ ಈ ಐದುತಿಂಗಳುಗಳು ಪ್ರತಿಕೂಲವಿದ್ದು ಮಿತ್ರರು ಶತ್ರುಗಳಾಗುವುದರಿಂದ ಅವಿಶ್ವಾಸ ಸೂಚನೆಗೆ ಬಲಿಯಾಗಿ ಸ್ಥಾನ–ಮಾನ, ಅಧಿಕಾರವನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಅವಧಿಯಲ್ಲಿ ಚುನಾವಣೆ ಜರುಗಿದಲ್ಲಿ ಸ್ಪರ್ಧಿಸದಿರುವುದೇ ಹಿತಕರವು, ಸ್ಪರ್ಧಿಸಿದಲ್ಲಿ ಇಡುಗಂಟು ಜಪ್ತಾಗುವುದು.


ಈ ರಾಶಿಯ ವಿದ್ಯಾರ್ಥಿಗಳಿಗೆ ನಾಲ್ಕನೆಯ ಗುರುವಿನಿಂದಾಗಿ ಈ ವರುಷ ತೀರ ಪ್ರತಿಕೂಲವಿದ್ದು, ಶಿಕ್ಷಕರ ಅವಕೃಪೆ ಮನೆಯಲ್ಲಿಯ ವಿಷಮ ವಾತಾವರಣ ಆರ್ಥಿಕ ಮುಗ್ಗಟ್ಟುಗಳಿಂದಾಗಿ ಶಿಕ್ಷಣ ಮುಂದುವರಿಸುವದೇ ಕಷ್ಟವಾಗುತ್ತದೆ. ಕಳೆದ ವರುಷ ಪಡೆದ ಶಿಷ್ಯವೇತನ ವಿದ್ಯಾರ್ಥಿವೇತನವನ್ನು ಕಳೆದುಕೊಳ್ಳಬಹುದು. ನವ್ಹೆಂಬರ ೪ರಿಂದ ಡಿಸೆಂಬರ ೧೫, ಫೆಬ್ರುವರಿ ೧೨ರಿಂದ ಎಪ್ರಿಲ್ ೧೧, ಮೇ ೧೫ರಿಂದ ಜುಲೈ ೧೫, ಸಪ್ಟೆಂಬರ ೧೫ರಿಂದ ವರ್ಷಾಂತ್ಯದ ವರಗೆ ಜರುಗುವ ಪರೀಕ್ಷೆಗೆ ಕಟ್ಟುವವರು ಹೇಗೋ ತೇರ್ಗಡೆಯಾಗುವರು; ದರ್ಜೆ, ಶ್ರೇಣಿ ದೊರೆಯುವದು ಮಾತ್ರ ದುಸ್ತರ. ಆದರೆ ಪರೀಕ್ಷೆಯು ಡಿಸೆಂಬರ ೧೫ರಿಂದ ಫೆಬ್ರುವರಿ ೧೧, ಎಪ್ರಿಲ್ ೧೨ರಿಂದ ಮೇ ೧೪. ಜುಲೈ ೧೫ರಿಂದ ಸಪ್ಟೆಂಬರ ೧೫ರ ಅವಧಿಯಲ್ಲಿ ಜರುಗಿದರೆ ಅಂಥವರ ಫಲಿತಾಂಶ ಸಂಶಯಾಸ್ಪದ,



ಮತ್ತೆ ಬೇಯಿಸದಿರು !

ನೀನೊಮ್ಮೆಯೂ ಬಂದು ನಿನ್ನವನ
ಯೋಗಕ್ಷೇಮ ವಿಚಾರಿಸಲಿಲ್ಲ !
ಹೀಗೇಕೆ ಅನ್ಯಮನಸ್ಕಳಾದೆ ಗೆಳತಿ
ವಿರಹದುರಿಯಲಿ ಬೆಂದವನ ಮತ್ತೆ
ಬೇಯಿಸದಿರು !

–ಷಂಚಾಕ್ಷರಿ ಹಿರೇಮಠ



ಕುಂಭ

ಈ ವರುಷ ಈ ರಾಶಿಯ ಎಲ್ಲ ವರ್ಗದವರಿಗೂ ಹೋದ ವರುಷದಂತೆ ಯಥಾಸ್ಥಿತಿಯೇ ಮುಂದುವರೆಯುವದು. ಧನಿಷ್ಠಾ ಶತತಾರಾದ ಕುಂಭರಾಶಿಯವರಿಗೆ ಶುಭಫಲದ ಪ್ರಮಾಣ ಕಡಿಮೆಯಾದರೆ ಪೂರ್ವಾ ಭಾದ್ರಪದದ ಕುಂಭರಾಶಿಯವರಿಗೆ ಶುಭಫಲಗಳ ಪ್ರಮಾಣ ವಿಶೇಷವಾಗಿದೆ.

ಈ ರಾಶಿಯವರಿಗೆ ಕಳೆದ ವರುಷದಿಂದ ಎರಡನೆಯವನಾಗಿ ಶುಭಫಲ ನೀಡುತ್ತಿದ್ದ ಗುರುವು ಫೆಬ್ರುವರಿ ೨೫ರಿಂದ ಮೂರನೆಯವನಾಗಿ ಬರಲಿದ್ದು, ಶುಭಫಲ ನೀಡದಿದ್ದರೂ ಅಶುಭ ಫಲ ಕೊಡಲಾರನು. ಆದರೆ ಧನಿಷ್ಠಾ ಹಾಗು ಶತತಾರಾದ ಮೊದಲೆರಡು ಚರಣದ ಕುಂಭ ರಾಶಿಯವರಿಗೆ ಮೂರನೆಯ ಗುರುವಿನ ಫಲ ದೊರೆತರೆ ಶತತಾರಾದ ಕೊನೆಯ ಎರಡು ಚರಣದವರಿಗೆ ಪೂರ್ವಾಭಾದ್ರಪದದ ಕುಂಭರಾಶಿಯವರಿಗೆ ಎರಡನೆಯ ಗುರುವಿನ ಶುಭಫಲವು ವರುಷಾಂತ್ಯದವರೆಗೆ ದೊರೆಯುತ್ತದೆ. ಕಳೆದ ವರುಷದಿಂದ ಬಂದ ಆರನೆಯ ಶನಿಯು ಈ ವರುಷವೂ ಅದೇ ಸ್ಥಾನದಲ್ಲಿ ಮುಂದುವರೆಯುತ್ತಾನೆ. ಅದರಂತೆ ಕಳೆದ ವರುಷ ಬಂದ ಒಂಬತ್ತನೆಯ ಶುಭಫಲದಾಯಕ ರಾಹು ಕೂಡ ಅದೇ ಸ್ಥಾನದಲ್ಲಿ ಮುಂದುವರೆಯುತ್ತಾನೆ. ಗ್ರಹಗತಿ ಹೀಗಿರುವದರಿಂದ ಕಳೆದ ವರುಷದಂತೆ ಈ ವರುಷವೂ ಯಶೋದಾಯಕವೂ ಪ್ರಗತಿದಾಯಕವೂ ಆಗಿರುವದು.

ಈ ರಾಶಿಯವರ ಆರೋಗ್ಯ ಉತ್ತಮವಿದ್ದಾಗ್ಯೂ ಜನೇವರಿ ೧೪ರಿಂದ ಫೆಬ್ರುವರಿ ೧೩, ಮೇ ೧೫

ರಿಂದ ಜೂನ ೧೫, ಸಪ್ಟೆಂಬರ ೧೬ರಿಂದ ಅಕ್ಟೋಬರ ೧೬ರವರೆಗಿನ ಈ ಮೂರು ತಿಂಗಳ ಕಾಲ ಮಾತ್ರ ಕಿಂಚಿತ್ ಆರೋಗ್ಯ ಕೆಡಬಹುದು. ಆರ್ಥಿಕ ಸ್ಥಿತಿ ಅತ್ಯಂತ ತೃಪ್ತಿಕರವಿರುವದು. ಅದರಲ್ಲಿಯೂ ನವ್ಹೆಂಬರ ೪ರಿಂದ ಜನೇವರಿ ೧೪, ಫೆಬ್ರುವರಿ ೧೨ರಿಂದ ಮೇ ೧೫ರ ಅವಧಿಯಲ್ಲಿ ಅತ್ಯಂತ ಶುಭ ಹಾಗು ಅನುಕೂಲವಾಗಿರುವದು. ಈ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವದಲ್ಲದೆ ದತ್ತಕ, ವಾರಸಾ, ಸ್ತ್ರೀಧನ, ಟಕ್ಸಿಸ್, ಬಹುಮಾನ, ಲಾಟರಿ, ಮೊದಲಾದ ರೀತಿಯಿಂದ ಆಕಸ್ಮಿಕ ಧನಲಾಭವಾಗುವದು. ಹಿಂದಿನ ಸಾಲವೆಲ್ಲ ತೀರಿ ವಾಹನ ಸೌಖ್ಯ, ಸ್ಥಾವರ ಇಸ್ಟೇಟ ಸಂಪಾದನೆ, ವಸ್ತು ಒಡವೆಗಳನ್ನು ಕೊಳ್ಳುವಿಕೆ, ತೀರ್ಥಯಾತ್ರಾ ಸಂದರ್ಶನ, ಮೊದಲಾದ ಸ್ಮರಣೀಯ ಘಟನೆಗಳು ಜರಗುತ್ತವೆ. ವಾದ, ಸ್ಪರ್ಧೆ, ಮೊದಲಾದ ಯಾವದೇ ಪ್ರಕಾರದ ವ್ಯಾಜ್ಯಗಳಲ್ಲಿ ಈ ವರುಷ ಜಯಿಕಟ್ಟಿಟ್ಟದ್ದು. ಅದರಲ್ಲಿಯೂ ಪೂರ್ವಾರ್ಧವು ಅತ್ಯಂತ ಶುಭದಾಯಕವಿದೆ. ವಿವರವಾಗಿ ಹೇಳಬೇಕೆಂದರೆ ದಿವಾಣಿ, ರಾಜಕೀಯ, ಹಾಗು ನೌಕರರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ಪೂರ್ವಾರ್ಧವೂ, ಫೌಜದಾರಿ ವಾಜ್ಯಗಳಿಗೆ ಉತ್ತರಾರ್ಧವೂ ಶುಭದಾಯಕವಿರುವದು.

ಈ ರಾಶಿಯ ನೌಕರ ವರ್ಗದವರಿಗೆ ಅತ್ಯಂತ ಶುಭದಾಯಕ ವರುಷವಿದಾಗಿದ್ದು ಅದರಲ್ಲಿಯೂ ನವ್ಹೆಂಬರ ೪ ರಿಂದ ಜನೇವರಿ ೧೪, ಫೆಬ್ರುವರಿ ೧೨ ರಿಂದ ಮೇ ೧೫ರ ನಡುವಿನ ಕಾಲದಲ್ಲಿ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ, ಹಂಗಾಮಿ ನೌಕರರಿಗೆ ಕಾಯಂ ಆಗುವಿಕೆ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಮೊದಲಾದ ಶುಭಘಟನೆಗಳು ಜರುಗುತ್ತವೆ. ಆದರೆ ಜನೇವರಿ ೧೪ರಿಂದ ಫೆಬ್ರುವರಿ ೧೨, ಮೇ ೧೫ರಿಂದ ಜೂನ ೧೫, ಸಪ್ಟೆಂಬರ ೧೬ರಿಂದ ಅಕ್ಟೋಬರ ೧೬ರ ವರೆಗಿನ ಮೂರುತಿಂಗಳ ಕಾಲ ತುಸು ಪ್ರತಿಕೂಲವಿದ್ದು ಈ ಅವಧಿಯಲ್ಲಿ ಅನಪೇಕ್ಷಿತ ಸ್ಥಳಕ್ಕೆ ಬದಲಿ, ವರಿಷ್ಠರ ಕಿರುಕಳವನ್ನು ಎದುರಿಸಬೇಕಾಗುತ್ತದೆ. ಈ ರಾಶಿಯ ಬಾಹ್ಯ, ಸಂಚಾರಿ, ತಾಂತ್ರಿಕ ಕೆಲಸಗಾರ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆ ಶನಿ–ರಾಹುದ್ವಯರು ಶುಭರಿರುವದರಿಂದ ಈ ವರುಷವು ಅವರ ಜೀವನದಲ್ಲಿಯೇ ಸುವರ್ಣಕಾಲವಾಗಿದೆ. ಬಹುದಿನಗಳ ಅವರ ಬೇಡಿಕೆಗಳು ಈಡೇರುವವು. ಅದರಲ್ಲಿಯೂ ನವ್ಹೆಂಬರ ೪ರಿಂದ ಮೇ ೪ರ ವರೆಗಿನ ಕಾಲ ಅತ್ಯಂತ ಶುಭದಾಯಕವಾಗಿದ್ದು ಸ್ಥಾನ, ಅಧಿಕಾರ ಪಡೆದು ದ್ರವ್ಯಾನುಕೂಲತೆ ಆಗುವದರಲ್ಲಿ ಸಂದೇಹವಿಲ್ಲ.

ಈ ರಾಶಿಯ ಅಧ್ಯಾಪಕ, ಕಲಾವಿದ, ಸಾಹಿತಿ, ಲೇಖಕ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ನ್ಯಾಯಾಧೀಶ, ಕಾರಕೂನ ಮೊದಲಾದ ಬುದ್ಧಿಜೀವಿ ವರ್ಗದವರಿಗೆ ಉತ್ಸಾಹದಾಯಕವಿದ್ದು, ಅದರಲ್ಲಿಯೂ ನವ್ಹೆಂಬರ ೪ ರಿಂದ ಜನೇವರಿ ೧೪, ಫೆಬ್ರುವರಿ ೧೨ ರಿಂದ ಮೇ ೧೪, ಜುಲೈ ೧೫ ರಿಂದ ಸಪ್ಟೆಂಬರ ೧೫ರ ವರೆಗಿನ ಕಾಲ ಅತ್ಯಂತ ಶುಭದಾಯಕವಿದೆ. ಈ ಕಾಲದಲ್ಲಿ ಪ್ರಗತಿ ಸಾಧಿಸಿ ಸರಕಾರ, ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪದಕಗಳು ಲಭಿಸುವದರ ಜೊತೆಗೆ ದ್ರವ್ಯಾನುಕೂಲತೆಯಾಗಿ ವಾಹನ ಸೌಖ್ಯ, ಪರದೇಶ ಪರ್ಯಟನ, ಸ್ಥಾವರ ಇಸ್ಟೇಟ ಸಂಪಾದನೆ, ಮೊದಲಾದ ಅಪೂರ್ವ ಹಾಗೂ ಸ್ಮರಣೀಯ ಘಟನೆಗಳು ಜರಗುವವು. ಅವರ ಬಹುದಿನಗಳ ಕನಸು ನನಸಾಗುವ ಕಾಲವಿದು. ಶನಿ–ರಾಹುದ್ವಯರ ಬೆಂಬಲ ಪಡೆದ ಈ ರಾಶಿಯ ಕೃಷಿಕರಿಗೆ ನಿರೀಕ್ಷೆಗಿಂತ ಅಧಿಕ ಬೆಳೆ ಬರುವದರಿಂದ ಹಿಂದಿನ ಸಾಲವೆಲ್ಲ ತೀರಿ ಹೊಸದಾಗಿ ಹೊಲ, ಮನೆ, ಜಾಗೆ, ತೋಟ, ದನಕರುಗಳು, ಟ್ರಕ್-ಟ್ರ್ಯಾಕ್ಟರ ಪಂಪಸೆಟ್ಟ ಮೊದಲಾದ ಬೇಸಾಯಕ್ಕೆ ಉಪಯುಕ್ತವಾದ ಉಪಕರಣಗಳನ್ನು ಕೈಕೊಳ್ಳುವ ಇಲ್ಲವೇ ನವೀಕರಣ ಮಾಡುವ ಸಾಮರ್ಥ್ಯ ಬರುತ್ತದೆ.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ ಠೋಕವ್ಯಾಪಾರಸ್ಥ, ಕಮೀಶನ್, ಏಜೆಂಟ್. ಹುಂಚಿಕೆದಾರ ಚಾಳ, ಟಾಕೀಜ, ಗಿರಣಿ–ಕಾರಖಾನೆ ಹೋಟೇಲಗಳ ಒಡೆಯರಿಗೆ ಈ ವರುಷವು ಯಶೋದಾಯಕವಿದ್ದು ಅದರಲ್ಲಿಯೂ ನವ್ಹೆಂಬರ ೪ರಿಂದ ಜನೇವರಿ೧೪, ಫೆಬ್ರುವರೀ ೧೨ ರಿಂದ ಜುಲೈ ೧೫ರ ವರೆಗಿನ ಕಾಲ ಅತ್ಯಂತ ಶುಭದಾಯಕವಾಗಿದೆ. ಈ ಕಾಲದಲ್ಲಿ ಹೊಸ ಶಾಖೆ ಇಲ್ಲವೆ ಹೊಸ ಉದ್ಯೋಗಗಳನ್ನು ತೆರೆಯಬಹುದಾಗಿದೆಯಲ್ಲದೆ ದ್ರವ್ಯಾನೂಕೂಲತೆಯಾಗಿ ಸ್ಥಿರ ಆಸ್ತಿಯು ಸಂಪಾದನೆಯೂ ಸಾಧ್ಯವಾಗುವದು. ಸರಕಾರದ ನಿರ್ಬಂಧನೆ ಹಾಗು ನೌಕರ ಸಮಸ್ಯೆಗಳಿಗೆಲ್ಲ ಈ ವರುಷ ಪರಿಹಾರ ಲಭಿಸುವದು.

ಕಳೆದ ಅನೇಕ ವರುಷಗಳಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವದು, ಅದರಲ್ಲಿಯಾ ನವ್ಹೆಂಬರ ೪ ರಿಂದ ಜನೇವರಿ೧೩, ಫೆಬ್ರುವರಿ ೧೨ರಿಂದ ಜುಲೈ ೧೫ರವರೆಗಿನ ಕಾಲದಲ್ಲಿ ವಿವಾಹವು ಜರುಗಿ ಗೃಹಸ್ಥಾಶ್ರಮದ ಆನಂದಮಯ ಜೀವನದಲ್ಲಿ ಓಲಾಡುವದು. ಈ ರಾಶಿಯ ವಿವಾಹಿತ

ಸ್ತ್ರೀ–ಪುರುಷರಿಗೆ ಈ ವರುಷವು ಅವರ ಜೀವನದಲ್ಲಿಯೇ ಅತ್ಯಂತ ಶುಭದಾಯಕ ಹಾಗು ಸ್ಮರಣೀಯವಾಗಿದ್ದು ಅವರ ಬಹುದಿನಗಳ ಆಶೆ–ಆಕಾಂಕ್ಷೆಗಳು ಈಡೇರುವವು. ಅದರಲ್ಲಿಯೂ ನವ್ಹೆಂಬರ ೪ರಿಂದ ಜನೇವರಿ ೧೪, ಫೆಬ್ರುವರಿ ೧೨ ರಿಂದ ಮೇ ೧೫ರ ವರೆಗಿನ ಕಾಲ ಅತ್ಯಂತ ಶುಭದಾಯಕವಾಗಿದೆ. ಈ ಕಾಲದಲ್ಲಿ ಬೆಲೆಯುಳ್ಳ ವಸ್ತು ಒಡವೆಗಳನ್ನು ಕೊಳ್ಳುವಿಕೆ ನೂತನ ಗೃಹಪ್ರವೇಶ, ತೀರ್ಥಯಾತ್ರಾ ಸಂದರ್ಶನ, ವಾಹನ ಸೌಖ್ಯ, ಸ್ಥಾವರ ಇಸ್ಟೇಟ ಸಂಪಾದನೆ ಮೊದಲಾದ ಸ್ಮರಣೀಯ ಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ನವ್ಹೆಂಬರ ೪ರಿಂದ ಜನೇವರಿ ೧೪, ಮಾರ್ಚ ೧೫ರಿಂದ ಮೇ ೧೫, ಜೂನ ೧೫ರಿಂದ ಜುಲೈ ೧೫, ಆಗಸ್ಟ ೧೫ರಿಂದ ಸಪ್ಟೆಂಬರ ೧೬ರ ಅವಧಿಯಲ್ಲಾದರೆ ಸುಖ–ಪ್ರಸವವಾಗುವದಲ್ಲದೇ ಗಂಡು ಸಂತತಿಯ ಯೋಗವಿದೆ. ಆದರೆ ಹೆರಿಗೆಯು ಜನೇವರಿ ೧೪ ರಿಂದ ಮಾರ್ಚ೧೪, ಮೇ ೧೪ ರಿಂದ ಜೂನ ೧೪, ಸಪ್ಟೆಂಬರ ೧೫ ರಿಂದ ಅಕ್ಟೋಬರ, ೧೬ರವರೆಗಿನ ಕಾಲದಲ್ಲಾದರೆ ತುಸು ತೊಂದರೆಯುದು.

ಅನೇಕ ಗ್ರಹಗಳ ಬೆಂಬಲ ಪಡೆದ ಈ ರಾಶಿಯ ರಾಜಕೀಯ ಸಾಮಾಜಿಕ ಕಾರ್ಯಕರ್ತರಿಗೆ ಈ ವರುಷ ತುಂಬ ಯಶೋದಾಯಕವಾಗಿದೆ. ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಗೌರವಸ್ಥಾನ ಮಾನ ಅಧಿಕಾರ ಪಡೆದು ರಾಜ್ಯಮಟ್ಟದ ರಾಷ್ಟ್ರಮಟ್ಟದ ಗಣ್ಯ ವ್ಯಕ್ತಿಗಳಾಗುವದರಲ್ಲಿ ಸಂದೇಹವಿಲ್ಲ. ಶತ್ರುಗಳು ಮಿತ್ರರಾಗುವದರಿಂದ ಈ ವರುಷದಲ್ಲಿ ಜರುಗುವ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಆಯ್ಕೆ ಖಂಡಿತ.

ಈ ರಾಶಿಯ ವಿದ್ಯಾರ್ಥಿಗಳಿಗೆ ಕುಂಠಿತಗೊಂಡಿದ್ದ ಶಿಕ್ಷಣ ಮತ್ತೆಮುಂದುವರೆಯುವದು. ನವ್ಹೆಂಬರ ೪ ರಿಂದ ಜನೇವರಿ ೧೩, ಫೆಬ್ರುವರಿ ೧೨ರಿಂದ ಮೇ ೧೪, ಜೂನ ೧೫ರಿಂದ ಜುಲೈ ೧೫ರವರೆಗಿನ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವವರು ಅನಾಯಾಸವಾಗಿ ತೇರ್ಗಡೆ ಆಗುವರಲ್ಲದೆ ಶ್ರೇಣಿ, ದರ್ಜೆ ಹೊಂದಿ ಪ್ರಶಸ್ತಿ, ಪದಕಗಳನ್ನು ಪಡೆಯುವರು. ಶಿಷ್ಯವೃತ್ತಿ, ವಿದ್ಯಾರ್ಥಿವೇತನ ಪಡೆದು ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ವಿದೇಶಯಾತ್ರೆಯನ್ನು ಕೈಕೊಳ್ಳುವ ಯೋಗವಿದೆ. ಆದರೆ ಜನೇವರಿ ೧೪ರಿಂದ ಫೆಬ್ರುವರಿ ೧೨, ಮೇ ೧೫ರಿಂದ ಜೂನ ೧೫, ಜುಲೈ ೧೫ರಿಂದ ಅಕ್ಟೋಬರ ೧೭ರ ನಡುವಿನ ಅವಧಿಯಲ್ಲಿ ನಡೆಯುವ ಪರೀಕ್ಷೆಗೆ ಕಟ್ಟುವವರು ತೇರ್ಗಡೆಯಾಗಲು ಬಹು ಪರಿಶ್ರಮಪಡಬೇಕಾಗುತ್ತದೆ.



ಮೀನ

ಈ ರಾಶಿಯುವರಿಗೆ ಈ ವರುಷ ಮಿಶ್ರಫಲವಿರುವದಾದರೂ ಕಳೆದ ವರುಷದಲ್ಲಿದ್ದ ತೊಂದರೆ ಹಾಗೂ ಅಸ್ಥಿರತೆಗಳು ದೂರಾಗುವವು.

ಈ ರಾಶಿಯುವರಿಗೆ ಕಳೆದ ವರ್ಷದಿಂದ ಬಂದ ಅನಿಷ್ಟ ಫಲದಾಯಕ ಐದನೆಯ ಶನಿ ಈ ವರುಷವೂ ಅದೇ ಸ್ಥಾನದಲ್ಲಿ ಮುಂದುವರೆಯುತ್ತಾನೆ. ಅದರಂತೆ ಕಳೆದ ವರುಷದಿಂದ ಬಂದ ಎಂಟನೆಯ ರಾಹುವಿನ ಅನಿಷ್ಟತೆ ಈ ವರುಷವೂ ಇರುವದು. ಆದರೆ ಜನ್ಮಸ್ಥ ಗುರು ಫೆಬ್ರುವರಿ ೨೫ರಂದು ನಿರ್ಗಮಿಸಿ ಎರಡನೆಯವನಾಗುವನು. ಆತ ವರುಷಾಂತ್ಯದವರೆಗೂ ಇರುತ್ತಾನೆ. ಗ್ರಹಗತಿ ಹೀಗಿರುವದರಿಂದ ಕೆಲ ಅವಧಿಯವರೆಗೆ ಕೆಲವರಿಗೆ ಶುಭ ಫಲ ದೊರೆತರೆ ಉಳಿದ ಅವಧಿಯಲ್ಲಿ ಅಶುಭ ಫಲ ದೊರೆಯುವದು.

ಕಳೆದ ವರುಷದಿಂದ ಇದ್ದ ಶಾರೀರಿಕ ಪೀಡೆ, ಸ್ವಜನ ವಿರೋಧದಿಂದ ಉಂಟಾಗಿದ್ದ ಮಾನಸಿಕ ತೊಂದರೆ ಕಡಿಮೆ ಆದರೂ ಫೆಬ್ರುವರಿ ೧೨ರಿಂದ ಮಾರ್ಚ ೧೫, ಜೂನ ೧೫ರಿಂದ ಅಗಸ್ಟ ೧೪ರವರೆಗಿನ ಈ ಮೂರು ತಿಂಗಳುಗಳ ಕಾಲ ಮಾತ್ರ ಶಾರೀರಿಕ ಪೀಡೆ, ಅಪಘಾತದ ಭಯವಿದೆ. ಉಳಿದ ಎಂಟು ತಿಂಗಳ ಕಾಲ ಆರೋಗ್ಯ ಉತ್ತಮ ಇರುವದು. ಮುಂಬರುವ ಎರಡನೆಯ ಗುರುವಿನಿಂದಾಗಿ ಆರ್ಥಿಕ ಸ್ಥಿತಿ ತೃಪ್ತಿಕರವಿರುತ್ತದೆ. ಅದರಲ್ಲಿಯೂ ನವ್ಹೆಂಬರ ೪ರಿಂದ ಫೆಬ್ರುವರಿ ೧೨, ಮಾರ್ಚ ೧೫ ರಿಂದ ಜೂನ ೧೫, ಅಗಸ್ಟ ೧೫ರಿಂದ ಅಕ್ಟೋಬರ ೧೬ರವರೆಗಿನ ಈ ಎಂಟುತಿಂಗಳ ಕಾಲ ಅತ್ಯಂತ ಶುಭದಾಯಕವಿದೆ. ಈ ಅವಧಿಯಲ್ಲಿ ನಿರೀಕ್ಷಿಸಿದ ಮೂಲದಿಂದ ಹಣ ಬರುವದಲ್ಲದೆ ದತ್ತಕ, ವಾರಸಾ, ಸ್ತ್ರೀಧನ, ಬಕ್ಷೀಸ್ ಬಹುಮಾನ ಲಾಟರಿ, ಕಮೀಶನ್ ಮೊದಲಾದ ಮೂಲದಿಂದ ಆಕಸ್ಮಿಕ ಧನಲಾಭವಾಗುವದರಿಂದ ಕಳೆದ ವರುಷದಲ್ಲಾಗಿದ್ದ ಸಾಲವೆಲ್ಲ ತೀರಿಹೋಗಿ ನಾಲ್ಕುಜನರಿಗೆ ಸಹಾಯ ಮಾಡುವ ಚೈತನ್ಯ ಬರುವದು. ಆದರೆ ಫೆಬ್ರುವರಿ ೧೨ ರಿಂದ ಮಾರ್ಚ ೧೫, ಜೂನ ೧೫ ರಿಂದ ಅಗಸ್ಟ ೧೪, ರವರೆಗಿನ ಈ ಮೂರು ತಿಂಗಳಕಾಲ ಆದಾಯ ಕಡಿಮೆಯಾಗಿ ವೆಚ್ಚ ವಿಪರೀತ ಹೆಚ್ಚಿ ಸಾಲಗಾರರ ಕಾಟ ಹೆಚ್ಚುವದು. ಹಳೆ ಸಾಲತೀರಿಸಲು ಹೊಸ ಸಾಲಕ್ಕಾಗಿ ಪರದಾಟ, ಆದಾಗ್ಯೂ ಎರಡನೆಯ ಗುರುವಿನಿಂದಾಗಿ ಎಲ್ಲವೂ ಸರಿಹೋಗುವದು. ವಾದ, ಸ್ಪರ್ಧೆ, ಕೋರ್ಟಿನ ವ್ಯವಹಾರದಲ್ಲಿ ಮುಂಬರುವ ಎರಡನೆಯ ಗುರುವಿನಿಂದಾಗಿ ಯಶಸ್ಸು ಸಿಗುತ್ತದೆ. ವಿವರವಾಗಿ ಹೇಳುವದಾದರೆ ಫೌಜದಾರಿ ವ್ಯಾಜ್ಯಗಳಿಗೆ ಪೂರ್ವಾರ್ಧವು ದಿವಾಣಿ ವ್ಯಾಜ್ಯಗಳಿಗೆ ಉತ್ತರಾರ್ಧವು ರಾಜಕೀಯ ಹಾಗೂ ನೌಕರಿಗೆ ಸಂಬಂಧಿಸಿದ ವ್ಯಾಜ್ಯಗಳಿಗೆ ವರುಷದ ಮಧ್ಯದ ಕಾಲವು ಶುಭವಿರುವದರಿಂದ ಈ ಅವಧಿಯಲ್ಲಿ ಯಶಸ್ಸು ಲಭಿಸುವುದು.

ಈ ರಾಶಿಯ ನೌಕರರಿಗೆ ಈ ವರ್ಷ ಕಳೆದ ವರ್ಷದಲ್ಲಿದ್ದ ಅಸ್ಥಿರತೆ ದೂರಾಗುವದು. ವರಿಷ್ಠರ ಸಹಾಯ, ಸಹಕಾರ ಹೆಚ್ಚುವದಲ್ಲದೆ ನವ್ಹೆಂಬರ ೧೪ ರಿಂದ ಫೆಬ್ರುವರಿ ೧೨, ಮಾರ್ಚ ೧೪ ರಿಂದ ಜೂನ೧೫, ಅಗಸ್ಟ ೧೫ ರಿಂದ ಸಪ್ಟೆಂಬರ ೧೬ರವರೆಗಿನ ಈ ಏಳು ತಿಂಗಳ ಕಾಲವು ಅತ್ಯಂತ ಶುಭವೂ ಅನುಕೂಲವೂ ಇರುವದರಿಂದ ನೌಕರಿಯಲ್ಲಿ ಬಡತಿ, ಇಚ್ಛಿತ ಸ್ಥಳಕ್ಕೆ ಬದಲಿ ಹಂಗಾಮಿ ನೌಕರರಿಗೆ ಕಾಯಂ ಆಗುವಿಕೆ, ನಿರುದ್ಯೋಗಿಗಳಿಗೆ ಉದ್ಯೋಗ ಲಭಿಸುವಿಕೆ, ಮೊದಲಾದ ಶುಭಘಟನೆಗಳು ಜರುಗುವವು.

ಈ ರಾಶಿಯ ಬಾಹ್ಯ, ಸಂಚಾರಿ, ಪ್ರವಾಸಿ, ನೌಕರರ ತಾಂತ್ರಿಕ ವರ್ಗ, ಗಿರಣಿ ಕಾರಖಾನೆಗಳ ಕಾರ್ಮಿಕರಿಗೆ ಶನಿ–ರಾಹುದ್ವಯರು ಅಶುಭರಿರುವ ಕಾರಣ ಹೇಳಿಕೊಳ್ಳುವಷ್ಟು ಅನುಕೂಲವಿಲ್ಲವಾದರೂ ಕಳೆದ ವರುಷಕ್ಕಿಂತ ಪ್ರಗತಿದಾಯಕವಿದೆ. ನವ್ಹೆಂಬರ್ ೧೫ರಿಂದ ಫೆಬ್ರುವರಿ ೧೨, ಎಪ್ರಿಲ್ ೧೫ರಿಂದ ಜೂನ ೧೫, ಅಗಸ್ಟ ೧೫ರಿಂದ ಸಪ್ಟೆಂಬರ ೧೫ರವರೆಗಿನ ಕಾಲದಲ್ಲಿ ಅವರ ಅನೇಕ ಬೇಡಿಕೆಗಳು ಈಡೇರುವವು. ಒಂದೆರಡು ಹೆಚ್ಚಿನ ಇನ್‌ಕ್ರೀಮೆಂಟ್ ಹಾಗು ಅಧಿಕ ಬೋನಸ, ವರಿಷ್ಠರ ಸಹಾಯ ಸಹಕಾರ ಪಡೆಯುವುದು. ಆದರೆ ಫೆಬ್ರುವರಿ, ೧೨ ರಿಂದ ಎಪ್ರಿಲ್೧೧ ಹಾಗೂ ಜೂನ ೧೫ರಿಂದ ಅಗಸ್ಟ ೧೪ರವರೆಗಿನ ಈ ನಾಲ್ಕು ತಿಂಗಳ ಕಾಲ ತೀರ ಪ್ರತಿಕೂಲವಿರುವದರಿಂದ ವರಿಷ್ಠರ ಅಸಹಕಾರ, ಆರ್ಥಿಕ ಮುಗ್ಗಟ್ಟು, ಕೈಕಾಲಿಗೆ ಘಾಯ ಆಗುವಿಕೆ, ಮೊದಲಾದ ಅಶುಭ ಘಟನೆಗಳು ಸಂಭವಿಸಬಹುದಾಗಿದೆ.

ಈ ರಾಶಿಯ ಅಧ್ಯಾಪಕ, ಸಾಹಿತಿ ಲೇಖಕ ಕಲಾವಿದ, ಪತ್ರಿಕೋದ್ಯಮಿ, ಡಾಕ್ಟರ, ವಕೀಲ, ನ್ಯಾಯಾಧೀಶ, ಕಾರಕೂನ ಮೊದಲಾದ ಬುದ್ಧಿಜೀವಿಗಳಿಗೆ ಮುಂಬರುವ ಎರಡನೆಯ ಗುರು ಶುಭದಾಯಕನಿರುವದರಿಂದ ಈ ವರುಷ ಉದ್ಯೋಗದಲ್ಲಿ ಪ್ರಗತಿ, ಸ್ಥಿರತೆ ಇದ್ದು ಮನ್ನಣೆಯೂ ದೊರೆಯುವದು. ಅದರಲ್ಲಿಯೂ ನವ್ಹೆಂಬರ ೧೪ರಿಂದ ಫೆಬ್ರುವರಿ೧೨, ಮಾರ್ಚ ೧೫ರಿಂದ ಜೂನ ೧೫, ಅಗಸ್ಟ೧೫ ರಿಂದ ಸಪ್ಟೆಂಬರ ೧೫ರವರೆಗಿನ ಅವಧಿಯು ಅತ್ಯಂತ ಯಶೋದಾಯಕವಾಗಿದ್ದು ಸರಕಾರ ಹಾಗು ಸಂಘ–ಸಂಸ್ಥೆಗಳಿಂದ ಪ್ರಶಸ್ತಿ, ಪದಕ ಬಿರುದು ಬಾವಲಿ, ಬಕ್ಷಿಸ್ ಬಹುಮಾನ ಲಭಿಸುವದಲ್ಲದೆ ವಿಶೇಷ ದ್ರವ್ಯಾನುಕೂಲತೆಯಾಗಿ ವಾಹನ ಸೌಖ್ಯ ಪರದೇಶ ಪರ್ಯಟನ ಸ್ಥಾವರ ಇಸ್ಟೇಟ ಸಂಪಾದನೆ, ಮೊದಲಾದ ಶುಭ ಹಾಗೂ ಸ್ಮರಣೀಯ ಘಟನೆಗಳು ಜರಗುವವು.

ಈ ರಾಶಿಯ ಸ್ವತಂತ್ರ ವ್ಯಾಪಾರೋದ್ಯಮಿ, ಠೋಕವ್ಯಾಪಾರಸ್ಥ, ಕಮೀಶನ್ ಏಜೆಂಟ, ಹಂಚಿಕೆದಾರ, ಚಾಳ, ಟಾಕೀಜ, ಗಿರಣಿ ಕಾರಖಾನೆ, ಹೋಟೆಲ ಮೊದಲಾದವುಗಳ ಮಾಲಕ ವರ್ಗಕ್ಕೆ ಕಳೆದ ವರುಷ ಎದುರಾಗಿದ್ದ ನೌಕರರ ಸಮಸ್ಯೆಗಳಿಗೆ ಪರಿಹಾರ ದೊರೆಯುವದಲ್ಲದೆ ಸರಕಾರದ ನಿರ್ಬಂಧಗಳೂ ದೂರಾಗುವವು. ಅದರಲ್ಲಿಯೂ ನವ್ಹೆಂಬರ ೧೪ ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫, ಅಗಸ್ಟ ೧೫ರಿಂದ ಸಪ್ಟೆಂಬರ ೧೫ರವರೆಗಿನ ಏಳು ತಿಂಗಳುಗಳು ಅತ್ಯಂತ ಅನುಕೂಲವಿದ್ದು ಈ ಕಾಲದಲ್ಲಿ ಉದ್ಯೋಗದಲ್ಲಿ ಲಾಭವಾಗಿ ಹೇರಳ ಹಣ ಸಂಪಾದನೆ, ಹೊಸ ಉದ್ಯೋಗ ಪ್ರಾರಂಭಿಸುವಿಕೆ, ಇಲ್ಲವೆ ಹೊಸ ಶಾಖೆಗಳನ್ನು ತೆರೆಯುವಿಕೆ, ಮೊದಲಾದ ಪ್ರಗತಿದಾಯಕ ಸಂಗತಿಗಳು ಜರಗುವವು. ಈ ರಾಶಿಯ ಕೃಷಿಕರಿಗೆ ಶನಿ–ರಾಹುಗಳು ಅಶುಭರಿರುವದರಿಂದ ಮಿಶ್ರಫಲವಿದೆ ಎನ್ನುವದಕ್ಕಿಂತ ಶ್ರಮಕೆ ತಕ್ಕ ಪ್ರಗತಿ ಇಲ್ಲವೆನ್ನಬೇಕು. ಪೂರ್ವಾರ್ಧವು ಪ್ರಗತಿದಾಯಕವಿದ್ದು ನಿರೀಕ್ಷೆಗಿಂತ ಅಧಿಕ ಬೆಳೆ ಬಂದು ಹಿಂದಿನ ಸಾಲವೆಲ್ಲ ತೀರಿ ಹೋಗಿ ಹೊಸ ಜಾಗೆ, ಹೊಲ–ಮನೆ, ದನ–ಕರು, ಪಂಪಸೆಟ್ಟ, ಟ್ರಕ್, ಟ್ರಾಕ್ಟರ, ಮೊದಲಾದ ಬೇಸಾಯಕ್ಕೆ ಬೇಕಾಗುವ ಉಪಕರಣಗಳನ್ನು ಕೊಳ್ಳುವ ಇಲ್ಲವೆ ನವೀಕರಿಸುವ ಸಾಮರ್ಥ್ಯ ಬರುವದು. ಆದರೆ ಉತ್ತರಾರ್ಧವು ತೀರ ಪ್ರತಿಕೂಲವಿದ್ದು ಸಾಲಗಾರರ ಕಾಟ, ದನಕರುಗಳಿಗೆ ಬೇನೆ, ಬೇಸಾಯಕ್ಕೆ ಬೇಕಾಗುವ ಉಪ

ಕರಣಗಳು ಕೆಡುವಿಕೆ, ಮೊದಲಾದ ಅಶುಭ ಘಟನೆಗಳು ಜರುಗಿ ಬೇಸಾಯ ಮುಂದುವರೆಸುವದೇ ಕಠಿಣವಾಗುವದು.

ಕಳೆದ ವರ್ಷದಿಂದ ಗೃಹಸ್ಥಾಶ್ರಮಕ್ಕಾಗಿ ಹಾತೊರೆಯುತ್ತಿರುವ ಈ ರಾಶಿಯ ವಧೂವರರಿಗೆ ಈ ವರುಷ ಅವರ ಮನೋರಥ ಈಡೇರುವದು. ನವಂಬರ ೧೫ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫, ಅಗಸ್ಟ ೧೬ರಿಂದ ಸಪ್ಟೆಂಬರ ೧೬ರವರೆಗಿನ ಈ ಏಳು ತಿಂಗಳ ಅವಧಿಯಲ್ಲಿ ನಿರ್ವಿಘ್ನವಾಗಿ ವಿವಾಹ ಜರುಗಿ ಆನಂದಮಯ ಜೀವನದಲ್ಲಿ ಓಲಾಡುವರು. ಈ ರಾಶಿಯ ವಿವಾಹಿತ ಸ್ತ್ರೀ ಪುರುಷರಿಗೆಲ್ಲ ಈ ವರ್ಷ ಪ್ರೋತ್ಸಾಹದಾಯಕವಾಗಿದ್ದು, ಒಡೆದು ಹೋಗಿದ್ದ ಏಕತ್ರ ಕುಟುಂಬ ಮತ್ತೆ ಒಂದುಗೂಡುವದಲ್ಲದೆ ಆಪ್ತೇಷ್ಟರಲ್ಲಿ ಉಂಟಾಗಿದ್ದ ತಪ್ಪುತಿಳಿವಳಿಕೆ ದೂರವಾಗಿ ಮತ್ತೆ ಪ್ರೀತಿ ವಿಶ್ವಾಸ ಕುದುರುವದು. ನವ್ಹೆಂಬರ ೧೪ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫, ಅಗಸ್ಟ ೧೫ರಿಂದ ಸಪ್ಟೆಂಬರ ೧೬ರವರೆಗಿನ ಈ ಏಳು ತಿಂಗಳ ಕಾಲ ಅತ್ಯಂತ ಶುಭದಾಯಕವಾಗಿದೆ. ಈ ಕಾಲದಲ್ಲಿ ಬೆಲೆಯುಳ್ಳ ವಸ್ತು, ಒಡವೆಗಳ ಕೊಳ್ಳುವಿಕೆ, ನೂತನ ಗೃಹಪ್ರವೇಶ, ತೀರ್ಥಯಾತ್ರಾ ಸಂದರ್ಶನ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವ ಇವೇ ಮೊದಲಾದ ಶುಭ ಘಟನೆಗಳು ಜರುಗುತ್ತವೆ. ಈ ರಾಶಿಯ ಗರ್ಭಿಣಿಯರ ಹೆರಿಗೆಯು ನವ್ಹೆಂಬರ ೧೫ರಿಂದ ಫೆಬ್ರುವರಿ ೧೨, ಎಪ್ರಿಲ್ ೧೨ರಿಂದ ಜೂನ ೧೫, ಅಗಸ್ಟ ೧೫ರಿಂದ ಸಪ್ಟೆಂಬರ್ ೧೫ರವರೆಗಿನ ಈ ಆರು ತಿಂಗಳಲ್ಲಿ ಆದರೆ ಸುಖಪ್ರಸೂತಿಯಾಗಿ ಗಂಡು ಸಂತಾನವಾಗುವದು. ಹೆರಿಗೆಯು ಫೆಬ್ರುವರಿ ೧೨ರಿಂದ ಎಪ್ರಿಲ್ ೧೨, ಜೂನ ೧೫ರಿಂದ ಅಗಸ್ಟ ೧೪, ಸಪ್ಟೆಂಬರ್ ೧೫ರಿಂದ ವರುಷಾಂತ್ಯದ ವರೆಗಿನ ಅವಧಿಯಲ್ಲಾದರೆ ಪ್ರಸೂತಿ ತೊಂದರೆಯದಲ್ಲದೆ ಶಸ್ತ್ರಕ್ರಿಯೆ ಅನಿವಾರ್ಯವಾಗುವದು.

ಈ ರಾಶಿಯ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕರ್ತರಿಗೆ ನವ್ಹೆಂಬರ ೧೪ ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫ ಅಗಸ್ಟ ೧೫ರಿಂದ ಅಕ್ಟೋಬರ ೧೬ರವರೆಗಿನ ಏಳುತಿಂಗಳ ಕಾಲವಂತೂ ಅತ್ಯಂತ ಶುಭ ಹಾಗೂ ಅನುಕೂಲವಾಗಿದ್ದು ಈ ಕಾಲದಲ್ಲಿ ಪ್ರತ್ಯಕ್ಷ ರಾಜಕೀಯದಲ್ಲಿ ಭಾಗವಹಿಸಿ ಅನೇಕ ಸಂಘಸಂಸ್ಥೆಗಳ ಸದಸ್ಯತ್ವ ಹಾಗೂ ಪದಾಧಿಕಾರಿಗಳಾಗಿ ಸ್ಥಾನಮಾನ ಅಧಿಕಾರ ಪಡೆದು ರಾಜ್ಯಮಟ್ಟದ, ರಾಷ್ಟ್ರಮಟ್ಟದ ಗಣ್ಯ ವ್ಯಕ್ತಿಗಳಾಗುವರು. ಈ ಅವಧಿಯಲ್ಲಿ ಜರುಗಬಹುದಾದ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸಿದಲ್ಲಿ ಯಶಸ್ಸು ಖಂಡಿತ. ಅತ್ಯಧಿಕ ಮತಗಳಿಂದ ಆಯ್ಕೆ ಆಗುವ ಸಂಭವ ಉಂಟು ಆದರೆ ಫೆಬ್ರುವರಿ ೧೨ರಿಂದ ಮಾರ್ಚ ೧೫ ಜೂನ ೧೫ರಿಂದ ಅಗಸ್ಟ ೧೪ರ ವರೆಗಿನ ಈ ನಾಲ್ಕು ತಿಂಗಳುಗಳು ಪ್ರತಿಕೂಲವಿದ್ದು ಮಿತ್ರರು ಶತ್ರುಗಳಾಗುವುದರಿಂದ ಈ ಕಾಲದಲ್ಲಿ ಚುನಾವಣೆಗಳು ಜರುಗಿದರೆ ಆಯ್ಕೆ ಖಂಡಿತ; ಆದರೆ ಸ್ಪರ್ಧೆ ತುರುಸಿನದಾಗುತ್ತದೆ.

ಈ ರಾಶಿಯ ವಿದ್ಯಾರ್ಥಿಗಳಿಗೆ ಮುಂಬರುವ ಎರಡನೆಯ ಗುರುವಿನಿಂದಾಗಿ ಈ ವರುಷ ಶುಭದಾಯಕವಿದೆ. ನವ್ಹೆಂಬರ ೧೪ರಿಂದ ಫೆಬ್ರುವರಿ ೧೨, ಮಾರ್ಚ ೧೫ರಿಂದ ಜೂನ ೧೫ ಅಗಸ್ಟ ೧೫ರಿಂದ ಅಕ್ಟೋಬರ ೧೬ರ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ಅನಾಯಾಸವಾಗಿ ತೇರ್ಗಡೆ ಆಗುವರಲ್ಲದೆ ದರ್ಜೆ ಶ್ರೇಣಿ ಪಡದು ಪ್ರಶಸ್ತಿ ಪದಕಗಳನ್ನು ಹೊಂದುವರು. ಹೆಚ್ಚಿನ ಶಿಕ್ಷಣಕ್ಕಾಗಿ ಇಲ್ಲವೇ ಸಂಶೋಧನೆಗಾಗಿ ವಿದೇಶ ಪರ್ಯಟನ ಕೈಕೊಳ್ಳುವ ಸುಯೋಗವೂ ಉಂಟು. ಆದರೆ ಫೆಬ್ರುವರಿ ೧೨ರಿಂದ ಮಾರ್ಚ ೧೫, ಜೂನ ೧೫ರಿಂದ ಅಗಸ್ಟ ೧೪ ಹಾಗು ಅಕ್ಟೋಬರ ೧೬ರ ಅವಧಿಯಲ್ಲಿ ಜರುಗುವ ಪರೀಕ್ಷೆಗೆ ಕಟ್ಟುವ ವಿದ್ಯಾರ್ಥಿಗಳು ತೇರ್ಗಡೆಯಾಗಲು ಹೆಣಗಬೇಕಾಗುತ್ತದೆ.

ಶುಭಂ-ಭವತು

ಮೊಸರು ಅವಲಕ್ಕಿ

* ಎನ್ಕೆ



ಸುದಾಮ ತಂದ ಒಣ ಅವಲಕ್ಕಿಯನ್ನೆ
ಶ್ರೀ ಕೃಷ್ಣ ಸ್ವೀಕರಿಸಿ ಸುಪ್ರೀತನಾದ.
ಆದರೆ ಪಾಪ! ಆ ಪರಮಾತ್ಮನಿಗೆ
ಮೊಸರವಲಕ್ಕಿಯ ಮಹತ್ವ
ತಿಳಿದಿರಲಿಲ್ಲ !

ನನ್ನ ಜೀವನದಲ್ಲಿ ಮೊಸರು ಅವಲಕ್ಕಿ ವಹಿಸಿದ ಪಾತ್ರ ಬಹಳ ದೊಡ್ಡದು. ಬಾಲ್ಯದಿಂದ ಇಂದಿನ ನನ್ನ ನಿವೃತ್ತಿ ಜೀವನದ ಗುರುವಾರ ಶನಿವಾರಗಳ ರಾತ್ರಿ ಉಪಹಾರಗಳವರೆಗೂ ಮೊಸರು ಅವಲಕ್ಕಿ ಮಹತ್ವದ ಸ್ಥಾನವನ್ನು ಪಡೆದಿದೆ. ಅದೇನು ಮಹಾ ಪಕ್ವಾನ್ನ ಎಂದು ನೀವು ಮೂಗು ಮುರಿದರೆ ನಿಮಗೆ–ಮೊಸರು ಅವಲಕ್ಕಿಯ ಮಹಾತ್ಮ್ಯೆ ಗೊತ್ತೇ ಇಲ್ಲವೆಂದು ಹೇಳಬೇಕಾಗುತ್ತದೆ. ಹಾಗೆ ನೋಡಿದರೆ ಸುದಾಮನ ಅವಲಕ್ಕಿಗೆ ಸುಪ್ರಸನ್ನನಾದ ಶ್ರೀ ಕೃಷ್ಣನಿಗೂ ಮೊಸರು ಅವಲಕ್ಕಿಯ ಮರ್ಮ ತಿಳಿದಿರಲೇ ಇಲ್ಲ ಎನ್ನಬೇಕು. ಏಕೆಂದರೆ ಸುದಾಮನು ಒಣ ಅವಲಕ್ಕಿಯನ್ನೇ ಕೃಷ್ಣಾರ್ಪಣ ಎಂದು ಹೇಳಿದ. ಮಹಾರಾಯ ಪರಮಾತ್ಮನಿಗಾಗಿ ಒಂದಿಷ್ಟು ಹಚ್ಚಿದವಲಕ್ಕಿಯನ್ನಾದರೂ ಒಯ್ಯಬಾರದಾಗಿತ್ತೆ? ಪಾಪ, ಮನೆಯಲ್ಲಿ ಒಗ್ಗರಣೆ ಕಾಳು ಸಹ ಇದ್ದಿರಲಿಲ್ಲವೆಂದು ತೋರುತ್ತದೆ. ಇನ್ನು ಮೊಸರವಲಕ್ಕಿಯ ಮಾತಂತೂ ದೂರವೇ ಉಳಿಯಿತು. ಸಾಗರಶಾಯಿಯಾದ ಆ ಪರಮಾತ್ಮನಿಗೂ ಒಂದಿಷ್ಟು ನೆಗಡಿ ಬಂದಿತ್ತೆಂದು ತೋರುತ್ತದೆ. ಎಂತಲೆ ಅಡರಾಸಿ ಬಂದು ಸುದಾಮನ ಗಂಟು ಬಿಚ್ಚಿ ರುಕ್ಮಿಣಿಗೆ ಒಂದಿಷ್ಟೂ ಹತ್ತಿಗೊಡದಂತೆ ಹಿಡಿ ಅವಲಕ್ಕಿಯನ್ನು ಒಂದೇ ತುತ್ತಿಗೆ ಬಾಯಲ್ಲಿ ಹಾಕಿಬಿಟ್ಟ. ಆದರೆ ನನಗೆ ನೆಗಡಿ ಬಂದಾಗಲೆಲ್ಲ ನಮ್ಮವ್ವ 'ಹಿಡಿ ಒಣ ಅವಲಕ್ಕಿ ಮುಕ್ಕಿ ಮಲಗು' ಎಂದಾಗಲೆಲ್ಲ ಜೊತೆಗೆ ಒಂದಿಷ್ಟು ಮೊಸರನ್ನು ಹಾಕಿಸಿಕೊಂಡು ಬೈಸಿಕೊಂಡ ಪರವೆ ಇಲ್ಲದೆ ಮೊಸರವಲಕ್ಕಿಯ ಮೇಜವಾನಿಯನ್ನೇ ಔಷಧಿ ಮಾಡಿಕೊಂಡಿದ್ದೇನೆ.

ಮೊಸರು ಅವಲಕ್ಕಿಯ ಮಟ್ಟಿಗೆ ನಾನು ಒಂದಿಷ್ಟು ಅಥಾರಿಟಿ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ. 'ಮೊಸರು ಅವಲಕ್ಕಿಗಿಂತ ಒಗ್ಗರಣೆ ಅವಲಕ್ಕಿ ಶ್ರೇಷ್ಠವಲ್ಲವೇನು?' ಎಂದು ನನ್ನ ಮಿತ್ರ ಕೇಳಿದಾಗ, 'ಅದೇ ಒಗ್ಗರಣೆ ಮೊಸರು ಅವಲಕ್ಕಿಗೆ ಹಾಕಿದಾಗ ಆಗ ನೋಡಿರಿ ಅದರ ರುಚಿ' ಎಂದು ಹೇಳಿದಾಗ ಆ ಮಿತ್ರ ಅದನ್ನು ಪ್ರಯೋಗಿಸಿಯೆ ನೋಡಿದ ಮೇಲೆ ನನಗೆ ಸರ್ಟಿಫಿಕೆಟ್ ಕೊಡಲೇ ಬೇಕಾಯಿತು. ಸರ್ಟಿಫಿಕೆಟ್ ಏನು. ಜಯಪತ್ರವನ್ನೆ ಕೊಟ್ಟ.

ಮೊಸರು ಅವಲಕ್ಕಿಯ ಮೀಮಾಂಸೆ ತಿಳಿಯುವ ಮೊದಲು ಅವಲಕ್ಕಿ ಮೊಸರು ಮತ್ತು ಮೊಸರು ಅವಲಕ್ಕಿ ಇವುಗಳ ವ್ಯತ್ಯಾಸವನ್ನು ನೀವು ತಿಳಿದಿರಬೇಕಾಗುವುದು. ಮೊಸರು ಅವಲಕ್ಕಿಗಿರುವ ಸೊಗಸು ಅವಲಕ್ಕಿ ಮೊಸರಿಗೆ ಬಂದೀತೆ? ಕೈಲಾಸಂ ಮಾತಿನಲ್ಲಿ ಹೇಳಬಹುದಾದರೆ 'ಡಿಕಾಕ್ಷನ್‌ಗೆ ಹಾಲಲ್ಲ, ಹಾಲಿಗೆ ಡಿಕಾಕ್ಷನ್' ಇದ್ದ ಹಾಗೆ ಅವಲಕ್ಕಿ ಮೊಸರು ಮತ್ತು ಮೊಸರು ಅವಲಕ್ಕಿ. ಅರ್ಥವಾಯಿತೆ? ಇಷ್ಟಕ್ಕೆ ಏನಾಗುತ್ತದೆ. ಇನ್ನೂ ಕೇಳಿ. ಮೊಸರು ಎಂದರೆ ಜೊಟ್ಟೆ ಮೊಸರಲ್ಲ. ಕೃಷ್ಣಾ ತೀರದ ಗಡಿಗೆಯ ಕೆನೆ ಮೊಸರಾಗಿರಬೇಕು. ಆ ಮೊಸರಿನಲ್ಲಿ ನಾಕು ಕಾಳು ಅವಲಕ್ಕಿ ಮುಳುಗಿಸಬೇಕು, ಒಂದಿಷ್ಟು ಉಪ್ಪು, ಒಂದಿಷ್ಟು ಚಟ್ನಿಪುಡಿ. ವೈಶಾಖ ಹುಣ್ಣಿಮೆಯ ಬೆಳ್ದಿಂಗಳಿನಲ್ಲಿ ನದೀ ತೀರದಲ್ಲಿ ಇಂತಹ ಮೊಸರು ಅವಲಕ್ಕಿ ರುಚಿ ನೋಡಿದ್ದೀರಾ? ಇದೇನು ಈ ಮೊಸರು ಅವಲಕ್ಕಿಗೆ ಇನ್ನಾವುದೇ ಅಲಂಕಾರ ಬೇಡವೆ? ಎಂದು ಕೇಳಬಹುದು ನೀವು. ಇದು ನಿರಾಭರಣ ಸುಂದರಿಯಂತೆ ನಿಸರ್ಗಸಿದ್ಧ ರುಚಿ! ಒಂದು ಚಟ್ನಿ ಪುಡಿಯ ಹೊರತಾಗಿ ಇನ್ನೇನೂ ಸಾಧನೆ ಬೇಡ. ಈಗಿನ ಕಾಲಕ್ಕೆ ಇಂತಹ ಹೆಡಸಾದ ಗಡಿಗೆ ಮೊಸರು ಸಿಕ್ಕೀತೋ ಇಲ್ಲವೋ ನಾನು ಹೇಳಲಾರೆ. ಪಾವಡರ್ ಮಿಲ್ಕಿನ ಮೊಸರು ಈಗ ಅಮೇರಿಕೆಯ ಕೃಪೆಯಿಂದ ಭಾರತದ ಹಳ್ಳಿಗಳಲ್ಲೆಲ್ಲಾ ಪ್ರವೇಶ ಮಾಡಿದೆ, ಉಚಿತ ಮಕ್ಕಳ ಪೋಷಣೆಯ ವೇಷದಲ್ಲಿ.

ಇಂಡಿಯಾದ ಆರ್ಥಿಕ ಸುಧಾರಣೆಗಾಗಿ ರಫ್ತು ಹೆಚ್ಚಾಗಬೇಕಾಗಿದೆ ಅಷ್ಟೆ? ಡಿ ಹೈಡ್ರೇಟ್ ಮಾಡಿದ ಮೊಸರು ಅವಲಕ್ಕಿಯನ್ನು ರಫ್ತು ಮಾಡಿದರೆ ಅಮೇರಿಕನ್ ನಾಲಗೆ ಹುಚ್ಚು ಬಿಟ್ಟು ಹೋದೀತು. ನಮ್ಮ ಬೆಲ್ಲಾಹಿಟ್ಟು' ಕೂಡ ಮೌಲಿಕವಾದ ರಫ್ತು ವಸ್ತುವಾಗಬಲ್ಲದು. ಈಗೇನೊ ರಾಗಿ ಮಾಲ್ಟ್ ಟಿನ್ ಆಗಿ ಮಾರುಕಟ್ಟೆಗಳಲ್ಲಿ ದೊರಕುತ್ತದೆ. ಉತ್ತರ ಕರ್ನಾಟಕದ 'ಅಳ್ಳಿಟ್ಟು' ಇನ್ನೂ ಯಾವ ವೈಜ್ಞಾನಿಕ ಬ್ರೇನ್‌ವೇವ್‌ಗೆ ಸಿಲುಕಿಲ್ಲವೆಂದು ತೋರುತ್ತದೆ.

ಆದರೂ ಬೆಲ್ಲಾಹಿಟ್ಟಿನ ಸಿಹಿ ನನಗಷ್ಟು ಹಿಡಿಸುವುದಿಲ್ಲ. ಯಾವುದೆ ಸಡಗರದ ಉಪಹಾರಗಳಲ್ಲಿ

ಬೆಲ್ಲಾಹಿಟ್ಟು ಜನಪ್ರಿಯತೆಯನ್ನು ಪಡೆದಿರುವುದಕ್ಕೆ ಕಾರಣವಿದೆ. ಬೆಲ್ಲಾಹಿಟ್ಟು ಜನರೊದಲ್ಲಿ ಬಂದಿರುವುದಿಲ್ಲ. ಬೆಲ್ಲಾಹಿಟ್ಟಿನ ಜೊತೆಗೆ ಒಂದಿಷ್ಟು ಮಡಿವಂತಿಕೆ ಸೇರಿಕೊಂಡಿದೆ. ಸಾಮಾನ್ಯವಾಗಿ ಬೆಲ್ಲಾಹಿಟ್ಟು ಮಡಿವಂತರ ಮನೆಯ ಮಡಿ ಹೆಂಗಸರ ಸ್ಪೇಷಲ್ ಉಪಹಾರವಾಗಿದೆ. ಬೆಲ್ಲಾಹಿಟ್ಟು ಇಷ್ಟೊಂದು ಲೋಕಪ್ರಸಿದ್ಧವಾಗದಿರುವುದಕ್ಕೆ ಕಾರಣಗಳೂ ಇವೆ. ಮುಖ್ಯವಾಗಿ ಅರಳಿನ ಜೋಳ ಯಾವಾಗಲೂ ಎಲ್ಲ ಕಡೆಗೂ ಸಿಗುವುದಿಲ್ಲ. ಅದರೊಂದಿಗೆ ಅಳ್ಳಿಟ್ಟು ತಯಾರಿಸುವುದರ ಹಿಂದಿನ ಶ್ರಮವೇನು ಕಡಿಮೆಯದೆ? ಇಂದಿನ ಧಿಡೀರ ತಯಾರಿ ಸಾಮಾನುಗಳ ಯುಗದಲ್ಲಿ ಇಷ್ಟೊಂದು ಶ್ರಮ ವಹಿಸುವವರು ಯಾರು? ಟಿನ್ನ್ ಅಳ್ಳಿಟ್ಟು ಸಿಗುವಂತಾದರೆ ಆಗ ಮತ್ತೆ ಅದರ ಲೋಕಪ್ರಿಯತೆ ಬೆಳೆದೀತು.

ಅಂತೂ ಮೊಸರು ಅವಲಕ್ಕಿಗೇ ನಾನು ಪ್ರಾಶಸ್ತ್ಯ ನೀಡಿದ ಕಾರಣ ತಮಗೀಗ ಸುಸ್ಪಷ್ಟವಾಗಿರಬೇಕು. ಅದರ ಪ್ರಥಮ ವಿಶಿಷ್ಟ ಗುಣವೆಂದರೆ ಅದರ ತ್ರಾಸರಹಿತ ತಯಾರಿಕೆ. ಅವಲಕ್ಕಿಯಂತೂ ರೆಡಿಮೇಡ್ ಸಿಗುತ್ತದೆ. ಮೊಸರೂ ಅಷ್ಟೇ. ಅವೆರಡನ್ನೂ ಮಿಕ್ಸ್ ಮಾಡುವುದಿಷ್ಟೆ ನಮ್ಮ ಪರಿಶ್ರಮ. (ಅದನ್ನು ಸೇವಿಸುವ ಶ್ರಮವೂ ಉಂಟು ಎನ್ನಿ.)

ಕೆನೆ ಮೊಸರಿದ್ದರೇನೆ ಮೊಸರು ಅವಲಕ್ಕಿಯ ಸ್ವಾರಸ್ಯ. ಇನ್ನೊಂದಿಷ್ಟು ವೈಖರಿ ಬೇಕೆಂದರೆ ಒಂದಿಷ್ಟು ತುಪ್ಪದ ಒಗ್ಗರಣೆ ಹಾಕಬಹುದು. ಆಮೇಲೆ ಕೇಳುವುದೇನು? ಬೇಕಾದರೆ ಒಂದಿಷ್ಟು ಸಣ್ಣಗೆ ಹೆಚ್ಚಿದ ಉಳ್ಳೆಗಡ್ಡಿ, ಕೋತಂಬರಿ, ಎಳೆಯ ಹಸಿ ಮೆಣಸಿನಕಾಯಿ–ಸಾಕು. ಇನ್ನೇನೂ ಹೆಚ್ಚಿನ ಸಂಭಾರ ಬೇಡ. ಆಗ ನೋಡಿ ಅದರ ಸ್ವಾದಿಷ್ಟತೆ.

ಮೊಸರು ಅವಲಕ್ಕಿಯನ್ನು ಒಂದು ಸ್ಟೀಲ್ ಡಬ್ಬಿಯಲ್ಲಿ ಹಾಕಿಕೊಂಡು ಯಾವುದೆ ಪ್ರವಾಸಕ್ಕೆ ಪಾಥೇಯವೆಂದು ಒಯ್ಯಬಹುದು. ವನಭೋಜನಕ್ಕೆ ಮೊಸರು ಅವಲಕ್ಕಿ ಇಲ್ಲದಿದ್ದರೆ ಹೇಗೆ ಹೇಳಿ? ಅಂತೆಯೇ ಹೇಳಿದೆನಲ್ಲ ಶ್ರೀ ಕೃಷ್ಣನಂತಹ ದೇವತೆಗಳಿಗೂ ಅಭಿಲಾಷೆಯ ಜಿನಸು ಈ ಮೊಸರು ಅವಲಕ್ಕಿ. ಚೈತ್ರ ಮಾಸದ ಗೌರಿಗೂ ಮೊಸರು ಅವಲಕ್ಕಿಯ ಪ್ರಸಾದವೇ ಬೇಕು. ನಮ್ಮ ಮನೆಯಲ್ಲಿ ಚೈತ್ರ ಮಾಸದ ಗೌರಿಯನ್ನು ಕಳಿಸುವಾಗಲೆಲ್ಲ ನಾನು ಗಂಟೆ ಗಟ್ಟಲೆ ಕಾದು ನಿಂತಿದ್ದು ಒಂದು ಮುಟ್ಟಿಗೆ ಮೊಸರು ಅವಲಕ್ಕಿಯನ್ನು ರುಚಿಸಿದ ರಸಸ್ಮೃತಿಯನ್ನು ಬಾಲ್ಯದಿಂದ ಇಂದಿನವರೆಗೂ ಕಾಪಾಡಿಕೊಂಡು ಬಂದಿದ್ದೇನೆ. ಏಂದರೆ ಅದೇನೂ ಅಂತಹ ವಿಶೇಷ ತಯಾರಿಕೆಯುದಾಗಿರಲಿಲ್ಲ. ಆದರೆ ಒಂದು ಚಮಚೆಗಿಂತ ಹೆಚ್ಚು ಸಿಗುತ್ತಿರಲಿಲ್ಲವೆಂದೇ ಅದಕ್ಕೆ ಅಂತಹ ಅಪರೂಪದ ಸ್ವಾದ ಬಂದಿರುತ್ತಿತ್ತು. ನಾನೂ ಕಾಡಿ ಬೇಡಿ ಒಂದು ಮುಟ್ಟಿಗೆಯಷ್ಟು ಪಡೆಯುತ್ತಿದ್ದೆ. ಅಷ್ಟೊಂದು ಧಡಪಡಿಸಿ ದೊರಕಿಸಿದ ಆ ಮುಟ್ಟಿಗೆಯ ಮೊಸರು ಅವಲಕ್ಕಿಯ ಸವಿ ನನ್ನ ನೆನಪಿನ ಪುಟದಲ್ಲಿ ನವನವೋನ್ಮೇಷಶಾಲಿನಿಯಾಗಿ ಪವಡಿಸಿದೆ.

ಮೊಸರು ಅವಲಕ್ಕಿ ನನ್ನ ಎಣಿಕೆಯಲ್ಲಿ ಎತ್ತರದ ಸ್ಥಾನವನ್ನು ಪಡೆದಿರುವುದಕ್ಕೆ ಎಲ್ಲಕ್ಕೂ ಮುಖ್ಯ ಕಾರಣವೆಂದರೆ ನನ್ನ ಜೀವನ ಸ್ಮೃತಿಯಲ್ಲಿ ಅದು ಪಡೆದಿರುವ ಅಮರ ಮಧುರ ಸ್ಥಾನ. "ರಾಜದ್ವಾರೇ ಸ್ಮಶಾನೇಚ ಯಸ್ತಿಷ್ಠತಿ ಸ ಬಾಂಧವಃ" ಎಂಬಂತೆ ಮೊಸರು ಅವಲಕ್ಕಿ ನನ್ನ ಮಧುರ ಬಾಂಧವ. ಸಂಪತ್ ಶುಕ್ರವಾರವೆಂದೊ, ಸತ್ಯನಾರಾಯಣ ಪೂಜೆಯೆಂದೊ ಯಾವುದೆ ಶುಭ ಮುಹೂರ್ತ ನಿಮಿತ್ತವಾಗಿ ನಮ್ಮ ಮನೆಯಲ್ಲಿ ಮಧ್ಯಾಹ್ನದ ಊಟ ಹೊತ್ತಾದಾಗಲೆಲ್ಲ ನಮಗೆ ಪ್ರಾಣಾಧಾರವೆಂದರೆ ಮೊಸರು ಅವಲಕ್ಕಿ. ಊಟ ಹೊತ್ತಾದಾಗಲೆಲ್ಲ ನಮ್ಮವ್ವ ನನಗೂ ನಮ್ಮಣ್ಣನಿಗೂ ಕೂಡಿಯೆ ಒಂದೇ ಕಲಪರಟೆಯಲ್ಲಿ ಮೊಸರು ಅವಲಕ್ಕಿ ಕಲಸಿ ಕೊಡುತ್ತಿದ್ದಳು. ನಾವಿಬ್ಬರೂ ಒಂದೇ ಕಲಪರಟೆಯಲ್ಲಿ ಒಬ್ಬರಿಗೆ ಹೆಚ್ಚು, ಒಬ್ಬರಿಗೆ ಕಡಿಮೆ ಎಂಬ ದಾಯಾದಿತ್ವದ ಯಾದವೀ ಕಲಹವಿಲ್ಲದೆ ಸಂಭಾಳಿಸಿಕೊಂಡು ಮೊಸರು ಅವಲಕ್ಕಿ ಸೇವಿಸುತ್ತಿದ್ದೆವು. ಮೊದ ಮೊದಲಿಗೆ ಒಂದೇ ಕಲಪರಟೆಯ ಮೊಸರು ಅವಲಕ್ಕಿಯನ್ನು ಎರಡು ಸಮ ಭಾಗ ಮಾಡಿ ಇನ್ನೊಬ್ಬರ ಗಡಿ ಆಕ್ರಮಣ ಮಾಡದೆ ಸಹಜೀವನ, ಸಹನಾವವತು ತತ್ವವನ್ನು ಆಚರಿಸುತ್ತ ಖಾದ್ಯ ಸೇವನೆ ಮಾಡುತ್ತಿದ್ದೆವು. ಮುಂದೆ ಬರಬರುತ್ತ ಅವಲಕ್ಕಿಯನ್ನು ವಿಭಾಗಿಸದೆ ಒಟ್ಟಾರೆಯಲ್ಲಿಯೆ ಒಬ್ಬೊಬ್ಬರೂ ಒಂದೊಂದೇ ತುತ್ತು ತೆಗೆದುಕೊಳ್ಳುತ್ತಿದ್ದೆವು. ನಮ್ಮಣ್ಣ 'ನೋಡಪಾ ನಾ ಏನೂ ದೊಡ್ಡ ತುತ್ತು ಮಾಡಿಲ್ಲ' ಎಂದು ಪ್ರತಿಯೊಂದು ತುತ್ತನ್ನೂ ನನಗೆ ತೋರಿಸಿ ಬಾಯೊಳಗಿರಿಸುತ್ತಿದ್ದ. ಆತನ ಆಗಿನ ಹೊಂದಾಣಿಕೆಯ ಮನೋವೃತ್ತಿ ಈಗಲೂ ನೆನೆದಾಗ ಇಂತಹ ಸೋದರ್ಯಭಾವ ನಮ್ಮ ದೇಶದ ರಾಜ್ಯ ರಾಜ್ಯಗಳಲ್ಲಿ, ನಮ್ಮ ಪ್ರಪಂಚದ ದೇಶ ದೇಶಗಳಲ್ಲಿ ಮೂಡಬಾರದೆ ಎನಿಸಿದೆ. ಈ ಮೊಸರು ಅವಲಕ್ಕಿಯ ಕಲಪರಟೆ ನನಗೆ ಕಲಿಸಿದ ಪಾಠ ಬಹಳ ದೊಡ್ಡದು. ಇಂದಿಗೂ ನಮ್ಮ ಮನೆಯಲ್ಲಿ ಆ ಕಲಪರಟೆ ಅಚ್ಚಳಿಯದೆ ಮೌಲಿಕ ಸ್ಮೃತಿ ಸಂಕೇತವಾಗಿ ಉಳಿದುಕೊಂಡಿದೆ. ಯಾವ ಪ್ರಾಚ್ಯ ವಸ್ತುವಿಗೆ ಈ ಮೌಲ್ಯ ಬಂದೀತು?

ರಾಜದ್ವಾರದ ಮಧುರ ಬಾಂಧವ್ಯದೊಂದಿಗೆ ಮೊಸರು ಅವಲಕ್ಕಿಯ ಸ್ಮಶಾನಸ್ಮೃತಿಯೂ ನನ್ನಲ್ಲಿ ಅವಿಸ್ಮರಣೀಯವಾಗಿ ಉಳಿದುಕೊಂಡಿದೆ. ತಂದೆ ತಾಯಿಗಳನ್ನು ಕಳೆದುಕೊಂಡ ಮೇಲೆ ನಾನು ಅದೆಷ್ಟೊ ಸಲ ಬಂಧು ಬಾಂಧವರ ಮೃತದೇಹಗಳಿಗೆ ಹೆಗಲು ಕೊಟ್ಟು ಸ್ಮಶಾನವನ್ನು ಕಂಡು ಬಂದಿದ್ದೇನೆ. ಸ್ಮಶಾನವನ್ನು ಕಂಡಾಗಲೆಲ್ಲ ನನ್ನಲ್ಲಿ ಅವರ್ಣನೀಯವಾದ ಭಾವೋದ್ವೇಗ. ಸ್ಮಶಾನ ವೈರಾಗ್ಯ ಎಂದು ಹೇಳಿ ವಿಡಂಬಿಸಬಾರದಂಥ ಅಂತಸ್ತುಮುಲ; ಅಂತಸ್ತಾಪ. ಬಹುಶಃ ಈ ತಾಪಕ್ಕೆ ಒಂದಿಷ್ಟು ಶಮನವೆಂದೆ ಮೊಸರು ಅವಲಕ್ಕಿಯನ್ನು ಕೊಡುತ್ತಿರಬೇಕು. ಇಂತಹ ಸೂತಕದ ಸಮಯದಲ್ಲೂ ನಾನು ಮೊಸರು ಅವಲಕ್ಕಿಯ ಸಾಂತ್ವನವನ್ನು ಅನುಭವಿಸಿದ್ದೇನೆ. ಆದರ ಈ ಸಾಂತ್ವನಪರ ಸದ್ಗುಣವು ಮೊಸರಿನಿಂದ ಬಂದುದೊ, ಅವಲಕ್ಕಿಯಿಂದ ಬಂದುದೊ ನಾ ಹೇಳಲಾರೆ. ಎರಡರ ಸಾಮರಸ್ಯದಿಂದಲೆ ಅದು ಬಂದಿದೆಯೆಂದು ಹೇಳಬೇಕಾಗುತ್ತದೆ. ಏಕೆಂದರೆ ಬರಿ ಮೊಸರನ್ನೆ ತಿಂದಾಗಲಿ, ಬರಿ ಅವಲಕ್ಕಿಯನ್ನೆ ಮುಕ್ಕಿ ಆಗಲಿ ಈ ಪರಿಣಾಮ ಹೊಂದುವುದು ಸಾಧ್ಯವಿಲ್ಲ. ಆದರೆ ಒಂದು ಮಾತು. ಹಬ್ಬದ ಸಡಗರಗಳಲ್ಲಿಯ ಮೊಸರು ಅವಲಕ್ಕಿಯ ರುಚಿಗೆ ಒಂದು ಹುರುಪಿನ ರಸರುಚಿ ಇದ್ದರೆ ಸ್ಮಶಾನ ಯಾತ್ರೆಯಿಂದ ಮರಳಿದ ಮೊಸರು ಅವಲಕ್ಕಿಗೆ ನಿಸ್ತೇಜವಾದ ರುಚಿ-'ಹುಣ್ಣಿವಿ ಚಂದಿರನ ಹೆಣಾ ಬಂತೂ ಮುಗಿಲಾಗ ತೇಲತ ಹಗಲ'ಎಂಬಂತೆ ಅದೇ ಚಂದಪ್ಪನೆ, ಆದರೆ ಹಗಲುಹೊತ್ತು.

ಮೊಸರು ಅವಲಕ್ಕಿಯ ಇನ್ನೊಂದು ವಿಷಾದಾಂತ ಚಿತ್ರವೂ ನನ್ನ ಕಣ್ಣು ಮುಂದೆ ಬರುತ್ತಿದೆ. 'ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ' ಎಂದು ಅಂಬಿಕಾತನಯದತ್ತರು 'ಪುಟ್ಟ ವಿಧವೆ'ಯನ್ನು ಕುರಿತು ಕರುಳು ಚುರುಗುಟ್ಟುವಂತೆ ಬರೆದಿದ್ದಾರೆ. ನಮ್ಮ ಗಂಗಬಚಿ ಪುಟ್ಟ ವಿಧವೆಯೇನೂ ಅಲ್ಲ. ವೈಧವ್ಯವನ್ನು ಎಷ್ಟೋ ಕಾಲದಿಂದ ಪಚನ ಮಾಡಿಕೊಂಡು ವೃದ್ಧಾಪ್ಯದಲ್ಲಿ ಕಾಲಿರಿಸಿದಾಕೆ. ನಾನಿನ್ನೂ ಬಾಲಕನಾಗಿದ್ದಾಗಲೆ ಆಕೆ ವೃದ್ಧೆಯಾಗುತ್ತ ಬಂದಿದ್ದಳು. ಪ್ರತಿನಿತ್ಯವೂ ಗಂಗಬಚಿ ರಾತ್ರಿ ಮೊಸರು ಅವಲಕ್ಕಿಯ ಫರಾಳ ಮಾಡುತ್ತಿದ್ದಳು. ನಾನೋ ಊಟವಾಗಿದ್ದರೂ ನಿದ್ದೆಗಣ್ಣುಗಳನ್ನು ಉಜ್ಜಿಕೊಳ್ಳುತ್ತ ಗಂಗಬಚಿಯ ಮೊಸರು ಅವಲಕ್ಕಿಗಾಗಿ ಕಾದು ನಿಂತಿರುತ್ತಿದ್ದೆ. ಗಂಗಬಚಿ • ಥಾಬಳಿ ಹಚ್ಚಿಕೊಂಡಳೊ ನನಗೆ ಖುಷಿಯೊ ಖುಷಿ. 'ಹೂಂ. ಬಾ, ಹಿಡಿ. ಹುಚ್ಚು ಖೋಡಿ. ಅದೊಂದು ತುತ್ತು ಮೊಸರು ಅವಲಕ್ಕಿ ಸಲುವಾಗಿ ನಿದ್ದೀಕಟ್ಟಿ ನಿಂತದ' ಎಂದು ದೂರಿಂದ ಮೊಸರು ಅವಲಕ್ಕಿಯನ್ನು ನನ್ನ ಪುಟ್ಟ ಅಂಗೈ ತುಂಬ ಹಾಕುವಳು. ನನ್ನ ಜೊತೆಗೆ ನಮ್ಮ ಸೋದರತ್ತೆಯ ಮಗಳು 'ಪದ್ದಿ'ಯೂ ಗಂಗಜ್ಜಿಯ ಪ್ರಸಾದಕ್ಕೆ ಕೈ ಚಾಚುವಳು. ತನಗೂ ಒಂದು ತುತ್ತು ದೊರೆತಾಗ ಪದ್ದಿ ಗೆಲುವಿನ ಮುಖದಿಂದ ನನ್ನ ಬಳಿ ಬರುವಳು. ಒಮ್ಮೆ ನಾನು ಪದ್ದಿಗೆ 'ದೊಡ್ಡಾಕಿ ಆದ ಮ್ಯಾಲೆ ನೀನೂ ಗಂಗಬಚಿ ಹಾಂಗ ಆದರ ನಿನಗೂ ದಿನಾಲು ಮೊಸರು ಅವಲಕ್ಕಿ ಸಿಗತದಲ್ಲ?' ಎಂದೆ. ಪದ್ದಿಗೆ ಈ ಮಾತು ಯಾಕೋ ರುಚಿಸಲಿಲ್ಲ. 'ಹೋಗೊ ಬೋಳ್ಯಾ, ಏನಂತ ಹಾಂಗೆಲ್ಲಾ ಮಾತಾಡಿದರ'ಎಂದಳು. ನಮ್ಮಿಬ್ಬರ ಮಾತೂ ಗಂಗುಬಚಿಯ ಕಿವಿಯ ಮೇಲೆ ಬಿದ್ದವು. 'ಅಯ್ಯ ನಿನ್ನ ಸುಡ್ಲಿ. ಒಂದು ಮೊಸರು ಅವಲಕ್ಕಿ ಸಲುವಾಗಿ ಏನು ಭಾಗ್ಯಾ ಬಯಸ್ತೀಯೊ ನಮ್ಮಪ್ಪ! ನಾವೊಂದು ಮದಿವಿ ಆಗೂ ಮರುಸೊತ್ತು ಇಲ್ಲದ ಈ ವೈಧವ್ಯದ ಸಂಪತ್ತು ಹೊರಿಸಿ ಕಳಿಸಿದ್ಯಾ ಆ ಭಗವಂತ. ನಾ ಹೀಂಗ ಆದಾಗ ಇನ್ನೂ ಎಂಟು ವರ್ಷ ಸುದ್ಧಾ ಪೂರಾ ಆಗಿದ್ದಿಲ್ಲ...' ಗಂಗಬಚಿಗೆ ಮುಂದೆ ಮಾತು ಬಾರದಾದವು. ಮೊಸರು ಅವಲಕ್ಕಿಯ ತುತ್ತು ಗಂಟಲದಲ್ಲೇ ಸಿಕ್ಕಂತೆ ಸಂಕಟಪಟ್ಟಳು. ಅಂದು ನನ್ನ ಎಳೆಯ ಕರುಳಿಗೆ 'ಬರೆಗುಡಿ' ಕೊಟ್ಟಂತಾಗಿತ್ತು. ಮೊಸರು ಅವಲಕ್ಕಿಯ ಸ್ವಾದ ಒಂದಿಷ್ಟು ವಿಷಾದಯೋಗವನ್ನು ತಾಳಿತ್ತು. ಗಂಗಬಚಿಯ ಜೀವನಕಥೆ ಅಗಾಧವಾದ ವ್ಯಥೆಯಿಂದ ಕೂಡಿದ್ದಿತೆಂಬ ಕಲ್ಪನೆ ಆಗ ಮಾತ್ರವೆ ನನ್ನ ಬಾಲಿಶ ಮನಕ್ಕೆ ಸ್ವಲ್ಪ ಹೊಳೆದಿತ್ತು.

ಮೊಸರು ಅವಲಕ್ಕಿಯ ರುಚಿ ಬಾಲ್ಯದಿಂದಲೆ ನನಗೆ ಅಂಟಿಕೊಂಡು ಬೆಳೆದು ಬಂದಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಆಗ ನಾನು ಯೋಚಿಸುವೆ–ನಾನು ಬೆಳೆದು ದೊಡ್ಡವನಾಗಿ ದುಡಿಯ ತೊಡಗಿದ ಮೇಲೆ ದಿನಾಲು ಬೇಕಾದಷ್ಟು ಮೊಸರು ಅವಲಕ್ಕಿ ತಿನ್ನಬಹುದು–ಎಂದು. ಅದಕ್ಕಾಗಿಯೆ ನಾನು ಗುರುವಾರ, ಶನಿವಾರಗಳನ್ನು ಪ್ರಾರಂಭಿಸಿದೆ. ಆದರೆ ಯಾಕೊ ಗುರುವಾರ ಶನಿವಾರಗಳು ನನ್ನ ಪ್ರಕೃತಿಗೆ ಒಗ್ಗಲಿಲ್ಲ. ರಾತ್ರಿ ಊಟಮಾಡದೆ ಮಲಗಿದರೆ ಮರುದಿನ ಆರೋಗ್ಯ ಸರಿ ಇರುತ್ತಿರಲಿಲ್ಲ. ಹೀಗಾಗಿ ವಾರ ಮಾಡುವುದನ್ನು ನಿಲ್ಲಿಸಬೇಕಾಯಿತು. ಆದರೂ ನಾಲಗೆಯ ರುಚಿಗಾಗಿ ನಿತ್ಯವೂ ಒಂದು ಸಾರೆ ನನ್ನಾಕೆ ಮೊಸರು ಅವಲಕ್ಕಿಯ ನನ್ನ ಚಪಲವನ್ನು

ಪೂರೈಸಿಯೆ ಇರುತ್ತಿದ್ದಳು. ಚಹಾದ ಜೊತೆಗೆ ಉಪ್ಪು ತುಪ್ಪ ಅವಲಕ್ಕಿ ಹಚ್ಚಿದಾಗಲೆಲ್ಲ ಮೇಲೆ ಒಂದಿಷ್ಟು ಕೆನೆಮೊಸರು ಹಾಕಿಸಿಕೊಂಡು ಮೊಸರು ಅವಲಕ್ಕಿಯ ಅಭಿಲಾಷೆಯನ್ನು ತೀರಿಸಿಕೊಳ್ಳುತ್ತಿದ್ದೆ.

ಅವಲಕ್ಕಿಯಲ್ಲಿ ಇನ್ನೂ ಬೇಕಾದಷ್ಟು ವೈರೈಟಿ ಗಳಿವೆ. ತೋಯಿಸಿದ ಒಗ್ಗರಣೆ ಅವಲಕ್ಕಿ, ಹಚ್ಚಿದ ಒಗ್ಗರಣೆಯ ಅವಲಕ್ಕಿ, ಸಾದಾ ಮೆಂತೆ ಹಿಟ್ಟು ತುಪ್ಪದ ಅವಲಕ್ಕಿ, ಅದಕ್ಕೆ ಒಂದಿಷ್ಟು ಹಸಿ ಕೊಬ್ಬರಿ, ಕೋತಂಬರಿ, ಉರುಳೀಗಡ್ಡಿ ಮೊದಲಾದ ಖಮ್ಮಗಿನ ಜೀನಸುಗಳನ್ನು ಹಾಕಿ ಮಸಾಲೆ ಅವಲಕ್ಕಿ ತಯಾರಿಸಬಹುದು. 'ಬಟಾಟಿ ಪೋಹೆ' ಇದು ಮಹಾರಾಷ್ಟ್ರದ ಕೊಡುಗೆ. ಅದರದೂ ಒಂದು ಸವಿ. ಯಾವುದೆ ವೈರೈಟಿ ಎಂದರೂ ನನಗೆ ಮೇಲೆ ಒಂದಿಷ್ಟು ಕೆನೆಮೊಸರು ಬೇಕೇಬೇಕು.

ನನಗೆ ಸಾರಸ್ವತರ ಸಂಬಂಧ ಹೆಚ್ಚು. ನನ್ನದು ಸಾರಸ್ವತ ಪ್ರಪಂಚವೇ ಆದುದರಿಂದಲೋ ಏನೊ. ನಾನು ವಿದ್ಯಾರ್ಥಿಯಾಗಿದ್ದಾಗ ಒಬ್ಬ ಸಾರಸ್ವತ ವಿದ್ಯಾರ್ಥಿನಿ ನನ್ನ ಪ್ರೈಮೋಟಿಗಾತಿಯಾಗಿದ್ದಳು. ನಾನು ಶಿಕ್ಷಕನಾಗಿದ್ದಾಗ ಒಬ್ಬ ಸಾರಸ್ವತ ಹುಡುಗಿ ನನ್ನ ಪೆಟ್‌ಸ್ಟುಡಂಟ್ ಆಗಿದ್ದಳು. ನನ್ನ ಅನೇಕ ವ್ಯವಸಾಯ ಬಂಧುಗಳೂ ಸಾರಸ್ವತರೆ. ಇದನ್ನು ಯಾತಕ್ಕೆ ಹೇಳಲಿಕ್ಕೆ ಬಂದೆ ಅಂದರೆ ನನ್ನ ಮೊಸರು ಅವಲಕ್ಕಿಯ ಅಭಿರುಚಿಗೂ ನನ್ನ ಸಾರಸ್ವತ ಸಂಪರ್ಕಕ್ಕೂ ಸಂಬಂಧ ಇದೆ. ಅನೇಕ ವರುಷಗಳಿಂದಲೂ ಶ್ರೀ ಕೃಷ್ಣ ಪರಮಾತ್ಮ ನನಗೆ ಗೋಕುಲಾಷ್ಟಮಿಗೆ ಸಾರಸ್ವತರ ಮನೆಯ ಮೊಸರು ಅವಲಕ್ಕಿಯ ಪ್ರಸಾದವನ್ನು ಕರುಣಿಸುತ್ತ ಬಂದಿದ್ದಾನೆ. ಚೈತ್ರ ಮಾಸದ ಗೌರೀ ಪ್ರಸಾದ ನನ್ನ ಬಾಲ್ಯದ ಸ್ಮೃತಿಯಾದರೆ ಗೋಕುಲಾಷ್ಟಮಿಯ ಸಾರಸ್ವತ ಮೊಸರು ಅವಲಕ್ಕಿ ನನ್ನ ಪ್ರೌಢ ಸ್ಮೃತಿಯಾಗಿ ವರುವರುಷವೂ ಮರಳಿ ಮರಳಿ ಬರುತಿದೆ. ಈ ಗೋಕುಲಾಷ್ಟಮಿಯ ಸಾರಸ್ವತ ಮೊಸರು ಅವಲಕ್ಕಿಯ ಒಂದು ಸ್ವಾದವೆ ಸ್ವಾದ! ಇದರ Recipe ದ ರಹಸ್ಯವೇನೊ ನನಗೆ ತಿಳಿಯದು. ಎಲ್ಲರಂತೆ ಒಂದಿಷ್ಟು ಅವಲಕ್ಕಿ, ಒಂದಿಷ್ಟು ಮೊಸರು, ಒಂದಿಷ್ಟು ಒಗ್ಗರಣೆ, ಒಂದಿಷ್ಟು ಮಸಾಲೆ ಸಾಮಾನು ಎಲ್ಲಾ ಬಿದ್ದಿರುತ್ತದೆ. ಆದರೆ ಈ ಸ್ವಾದದ Secret ಏನು? ಅದರಲ್ಲಿ ಹಾಕಲಾದ ಹಸಿ ಶುಂಠಿಯದೇ ಇರಬೇಕು ಎಂದು ನನ್ನ ತರ್ಕ. ಅಥವ ಬಹಳ ಹೊತ್ತು ಮೊಸರು ಮತ್ತು ಅವಲಕ್ಕಿ ಬೆರೆತುದರಿಂದ ಈ ಒಂದು ಟೆಂಪರ್ ಬಂದಿರುತ್ತದೆಯೋ ಏನೊ. ಮೇಲೆ ಸ್ವಲ್ಪ ಸಕ್ಕರೆಯನ್ನು ಬೆರೆಸಿರುತ್ತಾರೊ ಏನೊ. ಪ್ರತಿ ವರುಷವೂ ಈ ಖಾದ್ಯ ಪರಮಾತ್ಮನ ಕೃಪೆಯಿಂದ ದೊರೆಕೊಳ್ಳುತ್ತಿರುವಾಗ ಇದರ ವಿಶ್ಲೇಷಣೆಗೆ ನಾನೇಕೆ ಹೋಗಲಿ? ಅವರನ್ನಾದರೂ ಯಾಕೆ ಕೇಳಲಿ? ಅಲ್ಲವೆ?

ದೀಪಾವಳಿಯ ಫಲಹಾರದ ವೈವಿಧ್ಯವೇನೆ ಇರಲಿ; ಕೊನೆಯಲ್ಲಿ ಒಂದಿಷ್ಟು ಮೊಸರವಲಕ್ಕಿ ಇಲ್ಲದಿದ್ದರೆ ಅದಕ್ಕೆ ಪೂರ್ಣವಿರಾಮ ಬಾರದು, ಮತ್ತೆ

ತಂಜಾವರಿ ಭಿಕಾರಿ



ಚೆಲ್ಲಗಾತಿ ಚೆಲುವೆಯ ಜತೆ ಹೊಂಟಿಹ
ಮಜನು ಮಹಾಶಯನಿಗೆ ಅಡ್ಡ
ಗಂಟು ಬಿದ್ದು ತಂಜಾವರಿ ಭಿಕಾರಿ
ಕಿತ್ತು ಬಿಟ್ಟನಪ್ಪ ದುಡ್ಡ!

-ಎಂ. ಅಕಬರ ಅಲಿ

ನನ್ನ ಸ್ಮೃತಿಯ ಸಿನಿಮಾ ಸುರುಳಿಯನ್ನು ಹಿಂದಕ್ಕೆ ಓಡಿಸಬೇಕು. ಆಗ ನಾನು ಇಂಗ್ಲೀಷ್ ಐದನೆಯ ವರ್ಗದ ವಿದ್ಯಾರ್ಥಿ. ನಮ್ಮಕ್ಕನ ಮನೆಯಲ್ಲೇ ನಾನೂ ನಮ್ಮಣ್ಣನೂ ಇರುತ್ತಿದ್ದೆವು. ನಾವಿರುತ್ತಿದ್ದುದು ಒಂದು ಚಾಳು. ಆ ಚಾಳಿನವರೆಲ್ಲರ ದೀಪಾವಳಿಯಲ್ಲಿ ಆಚರಿಸುತ್ತಿದ್ದ ಒಂದು ಸಹ ಜೀವನದ ಸಹಕಾರದ, ಅನ್ಯೋನ್ಯತೆಯ ಒಂದು ವೈಶಿಷ್ಟ್ಯ. ಆ ನರಕ ಚತುರ್ದಶಿ! ನಸುಕಿನಲ್ಲೆದ್ದು ಆಕಾಶ ಬುಟ್ಟಿ ಹಚ್ಚಿ ಅದನ್ನು ಮೇಲಕ್ಕೆ ಕಟ್ಟಿದಾಗ ದೀಪಾವಳಿಯ ಧ್ವಜವಂದನ ಕಾರ್ಯಕ್ರಮ ಮೊದಲಾದಂತಾಗುತ್ತಿತ್ತು. ಆಮೇಲೆ ಮನೆಯ ಆರತಿ ಮುಗಿಸಿದ ಮೇಲೆ ಮನೆ ಮನೆಯ ಆರತಿ! ಚಾಳಿನವರೆಲ್ಲರೂ ನಮ್ಮ ಮನೆಗೆ ಬರುವುದು, ನಾವು ಚಾಳಿನ ಎಲ್ಲ ಮನೆಗಳಿಗೂ ಹೋಗುವುದು. ಆರತಿ ಮಾಡಿದ ಗೃಹಿಣಿಯರು ಮಾತ್ರ ಅಂದಿನ ಮಟ್ಟಿಗೆ ಸಾವುಕಾರ್ತಿಯರಾಗುತ್ತಿದ್ದರು. ಎಲ್ಲರೂ ಆರತಿ ತಟ್ಟೆಯಲ್ಲಿ ಬೆಳ್ಳಿಯ ರೂಪಾಯಿಗಳನ್ನು ಹಾಕುವವರೆ. (ನಮಗೆ ಆರತಿ ಆದ ಮೇಲೆ ನಾನು ನಮ್ಮಕ್ಕನಿಗೆ ಆರತಿ ಮಾಡ ಹೋದರೆ ನನಗೆ ಮಾತ್ರ ರೂಪಾಯಿ ಸಿಗುತ್ತಲೆ ಇರಲಿಲ್ಲ.)

ಸರಿ, ಆರತಿ ಮುಗಿದ ಮೇಲೆ ಒಬ್ಬೊಬ್ಬರ ಮನೆಗೆ ಫರಾಳದ ಸರತಿಯ ಆಮಂತ್ರಣ. ಎಲ್ಲರ ಮನೆಗಳಲ್ಲೂ ಅದೇ ಮೆನೂ-ಅದೆ ಉಂಡಿ, ಅದೇ ಚಕ್ಕುಲಿ, ಅದೇ ಕರಚೀಕಾಯಿ. ಆದರೆ ಕೆಲವರ ಮನೆಯಲ್ಲಿ ತಾಜಾ ಉಪ್ಪಿಟ್ಟು. ಅವಲಕ್ಕಿ ಮೊಸರು ಮಾತ್ರ ಎಲ್ಲ ಮನೆಗಳಲ್ಲೂ Common feature. ನನಗಂತೂ ಅಂದು ಹೊಟ್ಟೆ ತುಂಬ ಅವಲಕ್ಕಿ ಮೊಸರು ತಿಂದ ತೃಪ್ತಿ! ಆದರೆ ಇಷ್ಟೆ-ಅದು ಮೊಸರು ಅವಲಕ್ಕಿಯಾಗಿರದೆ ಅವಲಕ್ಕಿ ಮೊಸರು ಆಗಿರುತ್ತಿತು.

ಅರ್ಥವಾಯಿತಲ್ಲವೆ? ಜೀವನದಲ್ಲಿ ನಗೆ ಬರಲಿ, ಕಣ್ಣೀರಿರಲಿ ಎರಡೂ ಸಮಯಕ್ಕೆ ಸಾಮಾನ್ಯ ಉಪಹಾರ ಮೊಸರು ಅವಲಕ್ಕಿ; ಅಥವ ಅವಲಕ್ಕಿ ಮೊಸರು. 'ಸುಖ ದುಃಖೇ ಸಮೇ ಕೃತ್ವಾ' ಎಂಬ ವೇದಾಂತವನ್ನು ಹೇಳಬಲ್ಲ ಒಂದೇ ಒಂದು ಸಾಂಕೇತಿಕ ಉಪಹಾರವೆಂದರೆ ಮೊಸರು ಅವಲಕ್ಕಿ, ನನಗೆ ಸಮಭಾಗಿ ದಾಯಾದಿತ್ವದ ಪಾಠವನ್ನು ಕಲಿಸಿದ ಗುರು ಈ ಮೊಸರು ಅವಲಕ್ಕಿ. ಬಡವರಿಗೂ ಸಿರಿವಂತರಿಗೂ ಸಾಮಾನ್ಯವಾದ ಈ ಖಾದ್ಯ ಸಮತಾವಾದದ ಸಂಕೇತವಾಗಿದೆ. ಇದರ ತಯಾರಿಕೆಗೆ ಹೆಚ್ಚಿನ ಕೌಶಲವೇನೂ ಬೇಕಿಲ್ಲ. ಆದರೂ ಅವರವರ ಪ್ರತಿಭೆ ಪರಿಶ್ರಮಗಳ ಫಲವನ್ನು ಈ ಮೊಸರು ಅವಲಕ್ಕಿಯ ರುಚಿಯಲ್ಲಿ ಕಾಣಬಹುದಾಗಿದೆ. ಅಡುಗೆ ಮಾಡದೆಯೆ ಹಬ್ಬದ ಊಟ ಉಂಡಷ್ಟು ಸುಖ ಸಿಗಬೇಕಾದರೆ ಈ ಮೊಸರು ಅವಲಕ್ಕಿ. ಅಡುಗೆ ಬಾರದ ಪುರುಷರಿಗೆ ಸುಲಭದ ಆಹಾರ ಈ ಮೊಸರು ಅವಲಕ್ಕಿ. ಡೈಬಿಟಿಕ್ ರೋಗಿಗಳಿಗೆ ಇದರಿಂದ ಅಪಾಯವಿಲ್ಲ. ರಕ್ತ ಕೆಟ್ಟವರು ಚಟ್ನಿ ಪುಡಿ ಸಹ ಇಲ್ಲದೆ ಮೊಸರು ಅವಲಕ್ಕಿ ಸೇವಿಸುವುದರಿಂದ ಶುದ್ಧಾತ್ಮರಾಗುವರು, ಹಲ್ಲಿದ್ದವರು, ಹಲ್ಲಿಲ್ಲದವರು, ಬಾಲಕರು ಯುವಕರು ಮುದುಕರು (ಇದರಲ್ಲಿ ಬಾಲಕಿಯರು, ಯುವತಿಯರು, ಮುತ್ತೈದೆಯರುರೂ ಬಂದರು) ಎಲ್ಲರಿಗೂ ಇದು ಸುಖಾದ್ಯ. 'ಕಿಂ ಬಹುನಾ- ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' ಎಂಬಂತೆ ಈ ಜಗತ್ತನ್ನೆ ತನ್ನ ಒಂದಂಶದಿಂದ ಶ್ರೀ ಕೃಷ್ಣ ಪರಮಾತ್ಮನಂತೆ ಈ ಮೊಸರು ಅವಲಕ್ಕಿಯೂ ವ್ಯಾಪಿಸಿ ನಿಂತಿದೆ. ಅದೂ ಅಲ್ಲದೆ 'ಅಹಂ ಸರ್ವಸ್ಯಪ್ರಭವೋ ಮತ್ತಃ ಸರ್ವಂ ಪ್ರವರ್ತತೇ! ಇತಿ ಮತ್ವಾ ಭಜಂತೇ ಮಾಂ ಬುಧಾಭಾವ ಸಮನ್ವಿತಾಃ" ಎಂಬ ಭಗವದುಕ್ತಿಯಂತೆ ಮೊಸರು ಅವಲಕ್ಕಿಯೂ ಜಗಧಾರಿ, ಜಗನ್ಮೂಲ, ಜಗತ್ ಪ್ರವರ್ತಕ. ಆದರೆ ಇದನ್ನು ಭಾವಸಮನ್ವಿತರಾದ ಬುದ್ಧಿವಂತರು ಮಾತ್ರ ಬಲ್ಲವರಾಗಿರುತ್ತಾರೆ.

ಓಂತತ್ಸದಿತಿ ಶ್ರೀಮನ್ ಮೊಸರು ಅವಲಕ್ಕಿ ಯೋಗಶಾಸ್ತ್ರೇ ಏಕಮೇವಾಧ್ಯಾಯಃ.

ಮೊಸರು ಅವಲಕ್ಕಿಯ ಮಾಹಾತ್ಮ್ಯೆಯ ಕಲ್ಪನೆ ತಮಗೆ ಬಂದಿರಬೇಕಲ್ಲವೆ? ಆದ್ದರಿಂದ ಮೊಸರು ಅವಲಕ್ಕಿ ನಮ್ಮ ರಾಷ್ಟ್ರೀಯ ಉಪಹಾರವಾಗಬೇಕೆಂದು ತಮಗೂ ಅನಿಸುವದಿಲ್ಲವೆ?

ಅನಾಥೆ

ವೀಣಾ

"ಮಹಿಳೆ ಅದರಲ್ಲೂ ಅನಾಥ ಮಹಿಳೆಯರ ಏಳ್ಗೆಗಾಗಿ ತನ್ನ ಜೀವನವಿರುವವರೆಗೂ ಶ್ರಮಿಸುವೆ" ಎಂದು ಭಾಷಣ ಬಿಗಿದ ಹೆಡ್ಮಾಸ್ತರ ರೆಡ್ಡಿ ಕೋಮಲೆಗೆ ಮಾಡಿದುದಾದರೂ ಏನು?



ಅಂದು ಭಗಿನೀ ಸೇವಾಸಮಾಜದ ವಾರ್ಷಿಕೋತ್ಸವ. ಅಂತೆಯೇ ಎಲ್ಲ ಕಡೆ ಹಬ್ಬದ ವಾತಾವರಣ. ಒಂದೇ ಕಂಪೌಂಡಿನಲ್ಲಿರುವ ಸಮಾಜದ ಆಫೀಸು, ಹುಡುಗಿಯರ ವಸತಿಯ ಕೋಣೆಗಳು, ಸಣ್ಣದೊಂದು ಹಾಯ್ ಸ್ಕೂಲು, ಶಿಶು ವಿಹಾರ, ಹೊಸದಾಗಿ ಕಟ್ಟಿಸಿದ ಪುಟ್ಟ ಅತಿಥಿಗೃಹ–ಎಲ್ಲ ಕಡೆ ತಳಿರು ತೋರಣ. ಹಾಯ್ ಸ್ಕೂಲಿನ ಹೆಡ್‌ಮಾಸ್ತರ ಶಿವರಾಮ ರೆಡ್ಡಿ ತನ್ನ ಪೂರ್ಣ ಬೆಳ್ಳಗಾದ ತಲೆಗೆ ಈ ಉತ್ಸವದ ಪ್ರಸಂಗಕ್ಕಾಗಿ ಡಾಯ್ ಮಾಡಿಸಿಕೊಂಡು, ಮಲ್ಲಿನ ಜುಬ್ಬಾ–ಖಾದೀ ಧೋತರ ಉಟ್ಟು ಲವಲವಿಕೆಯಿಂದ ಓಡಾಡುತ್ತಿದ್ದಾನೆ. ಅವನ ಸಹಕಾರಿಯೂ ಸೇವಾ ಸಮಾಜದ ಅನಾಥಾಲಯದ ಮೇಲ್ವಿಚಾರಕಿಯೂ ಆದ ಕಮಲಮ್ಮ ದೇಸಾಯಿ ಹೊಸ ಸಿಲ್ಕ್ ಸೀರೆ ಉಟ್ಟು, ಆಭರಣಗಳನ್ನು ರವಾನಿಸುತ್ತ ತುಂಬ ಬಿಂಖಿಯಾಗಿರುವಂತೆ ತೋರುತ್ತಿದ್ದಾಳೆ. ವರ್ಷದಲ್ಲಿ ಒಂದೆರಡು ಬಾರಿ ಮಾತ್ರ ಆಚರಿಸಲ್ಪಡುವ ಇಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸಮಾಜಕ್ಕೆ ದರ್ಶನ ಕೊಡುವ ಪರಿಪಾಠವುಳ್ಳ ಭಗಿನೀ ಸೇವಾ ಸಮಾಜದ ಮುಖ್ಯ ಕಾರ್ಯದರ್ಶಿನಿ ಶ್ರೀಮತಿ ಅಂಬುಜಮ್ಮ ಸರದೇಶಪಾಂಡೆ ಇಂದು ಹೊತ್ತಾರೆಯೇ ಎದ್ದು ತನ್ನಷ್ಟೇ ವಿಶಾಲವಾದ ಮರ್ಸಿಡಿಸ್ ಕಾರಿನಲ್ಲಿ ಸಮಾ

ಜಿಕ್ಕೆ ಆಗಮಿಸಿ. ಸೊಂಟದ ಮೇಲೆ ಕೈಯಿಟ್ಟುಕೊಂಡು ಚೌಕಾಗಿ ನಿಂತು ಎಲ್ಲ ವ್ಯವಸ್ಥೆಗಳನ್ನು ಪರಿಶೀಲಿಸುತ್ತಿದ್ದಾಳೆ.

ಮಧ್ಯದ ಹಾಲ್‌ನ ಗೋಡೆಯ ಮೇಲೆ ತೂಗು ಹಾಕಿದ ಧೋಂಡೂ ಬಾಯಿ ಪಂತ ಅವರ ದೊಡ ಭಾವ ಚಿತ್ರದ ಮೇಲೆ ಇವತ್ತು ಧೂಳಿಲ್ಲ. ಬ್ರಿಟಿಶರ ಕಾಲದಲ್ಲಿ ಸಾಂಗಲಿಯ ಶ್ರೀಮಂತ ಕುಟುಂಬವೊಂದರಲ್ಲಿ ಹುಟ್ಟಿ, ಅಭಾಗಿನಿ ಹೆಣ್ಣುಮಕ್ಕಳ ಉದ್ಧಾರಕ್ಕಾಗಿ ಹಲವು ರೀತಿಯಿಂದ ಶ್ರಮಿಸಿ, ಅದರಲ್ಲೇ ಜನ್ಮ ಸವೆಸಿದ ಆ ತಾಯಿ ಸಾಯುವ ಕೆಲ ವರ್ಷಗಳ ಮುಂಚೆ ತನ್ನ ಅಪಾರ ಆಸ್ತಿಯನ್ನೆಲ್ಲ ವಿಕ್ರಯಿಸಿ ಬಂದ ಹಣದಿಂದ ಆಗಿನ ಮುಂಬಯಿ ಕರ್ನಾಟಕದ ಹಲವು ಪಟ್ಟಣಗಳಲ್ಲಿ ಹಲವು ಬಗೆಯ ಸಂಸ್ಥೆಗಳನ್ನು, ಶಾಲೆಗಳನ್ನು, ಅನಾಥಾಲಯಗಳನ್ನು ಸ್ಥಾಪಿಸಿದಳು. ಹಾಗೆ ಅಲ್ಪ ಬಂಡವಾಳದೊಂದಿಗೆ ಬೆಳಗಾವಿಯಲ್ಲಿ ಸುರುವಾಗಿತ್ತು, ಈ ಭಗಿನೀ ಸೇವಾ ಸಮಾಜ. ತನ್ನ ಕೊನೆಗಾಲದಲ್ಲಿ ಬೆಳಗಾವಿಯಲ್ಲೇ ಇದ್ದ ಧೋಂಡೂಬಾಯಿ ತಾನಿರುವವರೆಗೂ ಈ ಸಂಸ್ಥೆಯನ್ನು ತಾಯಿಯಂತೆ ನೋಡಿಕೊಂಡಳು. ಹಲವು ಕಾರಣಗಳಿಂದ ಅನಾಥರಾದ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಆಶ್ರಯವಿತ್ತಳು. ಅವರ ಹೊಟ್ಟೆ–ಬಟ್ಟೆ, ಶಿಕ್ಷಣ ಇತ್ಯಾದಿಗೆ ಅನುವು ಮಾಡಿ ಕೊಟ್ಟಳು. ಸೇವಾ ಮನೋಭಾವದ ವಯಸ್ಕರಾದ, ತ್ಯಾಗಬುದ್ಧಿಯ ಹಲವು ಹೆಂಗಸರನ್ನು ಆಯ್ದು ತಂದು ಸಮಾಜದ ಕೆಲಸ ನೋಡಿಕೊಳ್ಳಲು ನಿಯಮಿಸಿದಳು. ಮುಂದೆ ಅದಕ್ಕೆ ಸರಕಾರದಿಂದ ಗ್ರ್ಯಾಂಟೂ ದೊರೆಯಿತು. ಹಾಗೆ ಬೆಳೆಯುತ್ತಾ ಹೋಯಿತು ಸಂಸ್ಥೆ, ಕಾಲಕ್ಕೆ ತಕ್ಕ ಹಲವು ಹತ್ತು ಬದಲಾವಣೆಗಳೊಂದಿಗೆ.

ಸೇವಾ ಸಮಾಜದಲ್ಲೀಗ ಒಂದು ನೂರಕ್ಕೂ ಮೇಲ್ಪಟ್ಟು ಅನಾಥ ಹುಡುಗಿಯರಿದ್ದಾರೆ. ಇಪ್ಪತ್ತೈದು ವಿಶಾಲವಾದ ವಸತಿ ಕೋಣೆಗಳಿವೆ. ಚಿಕ್ಕ ಹುಡುಗಿಯರಿಗೆ ಮ್ಯಾಟ್ರಿಕ್‌ವರೆಗೆ ಪುಕ್ಕಟೆ ಶಿಕ್ಷಣದ ವ್ಯವಸ್ಥೆಯಿದೆ. ತುಸು ದೊಡ್ಡವರಾದ ಹೆಂಗಳೆಯರಿಗೆ ಹೊಲಿಗೆ, ಕಸೂತಿ, ಟೈಪಿಂಗ್–ಶಾರ್ಟ್‌ಹ್ಯಾಂಡ್ ಕಲಿಸುವ ವ್ಯವಸ್ಥೆಯೂ ಇದೆ. ಎಲ್ಲ ವೆಚ್ಚ ನಿಭಾಯಿಸಿಕೊಂಡು ಹೋಗಲು ಧೋಂಡೂ ಬಾಯಿ ಇಟ್ಟು ಹೋದಮೂಲ ಧನದಿಂದ ಬರುವ ಬಡ್ಡಿಯಲ್ಲದೇ ಸರಕಾರದಿಂದ ದೊರೆವ ಹಣವೂ ಇದೆ. ಅಲ್ಲದೇ ಹುಡುಗಿಯರ ಮಧ್ಯಾಹ್ನದ ಉಪಹಾರಕ್ಕಾಗಿಯೆಂದೋ ಹೊಸ ಯೂನಿಫಾರ್ಮಿಗೆಂದೋ ಆಗಾಗ ನಗರದ ರೋಟರಿ–ಲಾಯನ್ಸ್‌ನವರು, ಒಮ್ಮೊಮ್ಮೆ ರೆಡ್‌ಕ್ರಾಸ್‌ನವರು, ಅಮೇರಿಕೆಯಿಂದ ಬರುವ ಪೀಸ್ ಕೋಡ್‌ನವರು ಇತ್ಯಾದಿ ಮೇಲಿಂದ ಮೇಲೆ ಕೊಡುವ ಹೆಚ್ಚಿನ ಹಣ, ಬಟ್ಟೆ, ಗೋದಿ, ಹಾಲಿನ ಟಿನ್‌ಗಳು, ಬೇರೆ. ಇವೆಲ್ಲ ಹುಡುಗಿಯರಿಗೆ ಕಾಣ ಸಿಗುವುದೂ ಇವತ್ತಿನಂಥ ಅಪರೂಪ ಸಂದರ್ಭಗಳಲ್ಲಿಯೇ.

ಅಂತೆಯೇ ಇಂದು ಸಮಾಜದ ಹುಡುಗಿಯರಿಗೆಲ್ಲ ತುಂಬ ಸಂತಸ. ಚಿಕ್ಕ ಹುಡುಗಿಯರಿಗೆ ದೊಡ್ಡ ಹುಡುಗಿಯರು ಹೇನು ತೆಗೆದು, ಇಂಥ ಸಂದರ್ಭಗಳಲ್ಲಿ ಮಾತ್ರ ಕಮಲಮ್ಮ ಕೊಡುತ್ತಿದ್ದ ಕೊಬ್ಬರಿ ಎಣ್ಣೆ ಹಚ್ಚಿ ತಲೆ ಬಾಚಿದ್ದಾರೆ.. ಹಿಂದಿನ ದಿನವೇ ಸಿಕ್ಕ ಹೊಸ ಯೂನಿಫಾರ್ಮ್–ನೀಲಿ ಪರಕಾರ, ಬಿಳಿ ಪೋಲಕಾ ತೊಟ್ಟಿದ್ದಾರೆ ಎಲ್ಲರೂ. ರೋಟರಿ ಕ್ಲಬ್‌ನವರು ಕೊಟ್ಟಿದ್ದ ಮುನ್ನೂರು ಮೀಟರಿಗೂ ಮಿಕ್ಕಿದ್ದ ಯೂನಿಫಾರ್ಮಿನ ಬಟ್ಟೆ ಸಾಕಷ್ಟು ನಯವಾಗಿದ್ದರೂ, ಅದು ಕಮಲಮ್ಮನ ಸ್ಪೆಶಲ್ ದರ್ಜಿಯಿಂದ ಹೊಲಿದು ಬರುವುದರಲ್ಲಿ ಹೇಗೋ ಒರಟಾಗಿ ರೂಪಾಂತರ ಹೊಂದಿದ್ದು ಬಹಳ ಹುಡುಗಿಯರ ಗಮನಕ್ಕೆ ಬಂದೇ ಇಲ್ಲ. ಬೆಳಗಿನ ಉಪಹಾರಕ್ಕೆ ಬಂದವರಿಗೆ ಸಿಕ್ಕಿದ್ದು ಕರಿದವಲಕ್ಕಿ ಹಾಗೂ ಒಂದೊಂದು ಮೈಸೂರುಪಾಕು. ದಿನದ ಹಸಿ ಬಿಸಿ ಜೋಳದ ಹಿಟ್ಟಿನ ಮುದ್ದೆ ಹಾಗೂ ಉಪ್ಪು ನೀರಿನ ಎಸರಿನಿಂದ ಬಾಯಿ ಕಟ್ಟಿದ್ದ ಮಕ್ಕಳಿಗೆ ಇಂದು ತುಂಬ ಖುಷಿ. ಮಧ್ಯಾಹ್ನದ ಊಟಕ್ಕೂ ಇಂದು ಎಂದಿನಂತೆ ದಪ್ಪ ರೊಟ್ಟಿ–ಬೇಳೆಯ ಸಾರಿನ ಬದಲು ಅನ್ನ ಹಾಗೂ ಏನಾದರೊಂದು ಸಿಹಿ ಸಿಗುತ್ತದೆಂದು ಅವರಿಗೆ ಮೊದಲೇ ಗೊತ್ತಿದ್ದುದರಿಂದ ಅವರೆಲ್ಲ ತುಂಬ ಹುರುಪಿನಿಂದಿದ್ದಾರೆ. ಮತ್ತೊಂದು ವಿಶೇಷವೆಂದರೆ ಅವರಿಗೆ ಇಂದು ಸ್ಕೂಲಿಲ್ಲ. ಅರ್ಥಾತ್ ಹೆಡ್ಮಾಸ್ತರರಿಂದ ಬಡಿಗೆ ಏಟು, ಕಿವಿ ಹಿಂಡಿಸಿಕೊಳ್ಳುವುದು, ಒಂಟಿಗಾಲಲ್ಲಿ ಸ್ಕೂಲು ಸುತ್ತುಹಾಕುವುದು, ಇದ್ಯಾವುದೂ ಇಲ್ಲ. ದೊಡ್ಡ ಹುಡುಗಿಯರಿಗೆ ತುಸು ಹೆಚ್ಚಿನ ಸಮಾಧಾನ. ಅಕಾರಣವಾಗಿ ಕ್ಲಾಸಿನಲ್ಲಿ ಈ ಹೆಡ್ಮಾಸ್ತರು ಅವರ ಮೈಗೆ–ಎದೆಗೆ ಕೈ ತಾಗಿಸುವುದು, ಗಲ್ಲ ಚಿವಿಯುವುದು, ನಿಂದೆಯ ಮಾತಾಡುವುದು ಇತ್ಯಾದಿಗಳಿಂದ ಒಂದು ದಿನ ಅವರಿಗೆ ಬಿಡುಗಡೆ. ಅದೂ ಅಲ್ಲದೆ ಇಂಥ ವಿಶೇಷ ಕಾರ್ಯಕ್ರಮಗಳಿದ್ದಾಗ ಹೊರಗಿನಿಂದ ಯಾರಾದರೂ ಆಮಂತ್ರಿತ ಗಣ್ಯ ಅತಿಥಿಗಳು ಬರುವುದರಿಂದ ಅವರ ಆದರ ಸತ್ಕಾರದಲ್ಲೇ ಹಗಲು–ರಾತ್ರಿ ಎಲ್ಲ ಕಳೆಯುತ್ತಾಳೆ ಕಮಲಮ್ಮ. ಆದ್ದರಿಂದ ಆಕೆ ಹುಡುಗಿಯರ ಕೋಣೆಗಳಿಗೆ ರಾತ್ರಿಯ ರೌಂಡ್ಸಿಗೆ ಬರುವ ಭಯವಿಲ್ಲ. ಇಂದು ಆಕೆ ಯಾವ ಹುಡುಗಿಯನ್ನು ಹಠಾತ್ತಾಗಿ ಆಕ್ರಮಿಸಿ ಹೆದರಿಸಿ ತನ್ನ ಕೋಣೆಗೆ ಎಳೆದುಕೊಂಡು ಹೋಗಿ ತನ್ನ ಮಂಚದಲ್ಲಿ ತನ್ನೊಂದಿಗೆ ರಾತ್ರಿ ಕಳೆಯಲು ಒತ್ತಾಯಿಸುತ್ತಾಳೋ ಎಂಬ ಎದೆಗುದಿಯಿಲ್ಲ. ಇದು ಕಮಲಮ್ಮನಿಗೆ ಇತ್ತೀಚೆ ಬಂದಿರುವ ರೋಗ. ಹುಡುಗಿಯರ ಭಾಷೆಯಲ್ಲಿ "ರಾತ್ರಿ ದೆವ್ವ" ವಯಸ್ಕಳಾದ ಯಾವುದಾರೊಬ್ಬ ಹುಡುಗಿಯನ್ನು ಎಳೆದುಕೊಂಡು ಹೋಗಿ 'ಏನೋ' ಮಾಡುತ್ತಾಳಂತೆ–ಅಂತ ಎಲ್ಲರ ಬಾಯಲ್ಲಿ ಪಿಸು ಮಾತು. ಏನೋ ಅಂದರೆ ಏನೆಂದು ತಿಳಿದುಕೊಳ್ಳುವ ಕುತೂಹಲ ಹಲವರಿಗೆ. ಏನು ಅಂತ ಆ ಅನುಭವವಾದ ಹುಡುಗಿಯರಿಗೆ ಕೇಳಿದರೆ ಸಿಗುವ ಉತ್ತರ ಕಿಸಿ ಕಿಸಿ ನಗು, ಒಮ್ಮೊಮ್ಮೆ 'ಛೀ, ನಾಚಿಕೇಗೇಡು'. ಅಂತೂ ಕಮಲಮ್ಮನ ರಾತ್ರಿಯ ರೌಂಡ್ ಅವರಿಗೆಲ್ಲ ಹೆದರಿಕೆಯ ವಿಚಿತ್ರ ಕಾತರದ ನಿರೀಕ್ಷಣೆ. ಇಂದು ಅದಿಲ್ಲವೆಂದು ಅವರಿಗೆ ಸಮಾಧಾನ.

ಎಲ್ಲ ಹುಡುಗಿಯರೂ ಗುಂಪು ಗುಂಪಾಗಿ ಆಡುತ್ತ ಹಾಡುತ್ತ ನಗುತ್ತ ಹೊರಗೆ ಮರಗಳ ಕೆಳಗಡೆ ಇದ್ದಾರೆ. ಆದರೆ ಮಹಡಿಯ ಮೇಲಿನ ಕೊನೆಯ ರೂಮಿನಲ್ಲಿ ಕೋಮಲಾ ಒಬ್ಬಳೇ ಕೂತಿದ್ದಾಳೆ. ಅವಳ ಪಾಲಿಗೆ ಏಕೋ ಈ ಉತ್ಸಾಹ, ಸಂಭ್ರಮ ಸಂತಸ ಇಂದು ಇಲ್ಲವಾಗಿದೆ. ಯಾವಾಗಲೂ ತುಂಟಾಟದಲ್ಲಿ, ಅಭ್ಯಾಸದಲ್ಲಿ ಎಲ್ಲ ಚಟುವಟಿಕೆಗಳಲ್ಲಿ ಉಳಿದವರಿಗಿಂತ ಮುಂದಿರುತ್ತಿದ್ದ ಹುಡುಗಿಗೆ ಇಂದೇನೋ ದಿಗ್ಭ್ರಮೆ. ಮುಂಜಾನೆ ಎದ್ದಾಗ ಅವಳೂ ಎಲ್ಲರಂತೆ ಆನಂದದಲ್ಲಿದ್ದಳು. ಬೆಳಗಿನ ನಾಲ್ಕು ಗಂಟೆಗೇ ಅರೆನಿದ್ರೆಯಲ್ಲೇ ಏಳಬೇಕಾಗಿದ್ದರೂ ಎಂದಿನಂತೆ ಇಂದು ಎಬ್ಬಿಸಲು ಬಂದ ಕೆಲಸದ ದುರುಗವ್ವನ ಮೇಲೆ ಸಿಟ್ಟು ಬಂದಿರಲಿಲ್ಲ. ಯಾಕೆಂದರೆ ಇಂದು ಕಡ್ಡಾಯವಾಗಿ ಕೊರೆಯುವ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡಬೇಕಿರಲಿಲ್ಲ. ಅಡಿಗೆಯ ಗೌರಮ್ಮ ಅಷ್ಟೊತ್ತಿಗೇ ಎದ್ದು ಹಂಡೆಗಳಲ್ಲಿ ಬಿಸಿ ನೀರು ಕಾಯಿಸಿದ್ದಳು. ಇವತ್ತು ಕೋಮಲಾನ ಪಾಲಿಗೆ ಬಂದ ಡ್ಯೂಟಿ ಪುಣ್ಯಕ್ಕೆ ಕಕ್ಕಸ ಸ್ವಚ್ಛಗೊಳಿಸುವದಾಗಿರದೆ ಅಂಗಳ ಗುಡಿಸುವದಾದ್ದರಿಂದ ಆಕೆ ಮುಂಜಾನೆ ಗೆಲುವಾಗಿಯೇ ಇದ್ದಳು. ಸರಿಯಾಗಿ ಕಕ್ಕಸ ಹಸನು ಮಾಡಲಿಲ್ಲವೆಂದು ಅಂದಿನ ಕಕ್ಕಸ ಡ್ಯೂಟಿಯ ಚಿಕ್ಕ ಹುಡುಗಿಯರಾದ ಲತಾ–ಉಷಾರ ಮೇಲೆ ಸಿಟ್ಟಾದ ಕಮಲಮ್ಮ ಅವರಿಗೆ ಶಿಕ್ಷೆಯೆಂದು ಅವರಿಗೆ ಬೆಳಗಿನ ಉಪಹಾರ ಕೊಡದೆ ಇಬ್ಬರನ್ನೂ ಮಧ್ಯಾಹ್ನದವರೆಗೆ ಕಕ್ಕಸದಲ್ಲಿಯೇ ಕೂಡಿಹಾಕಿದಾಗ ಕೋಮಲೆಗೆ ಅಯ್ಯೋ ಪಾಪ! ಅನಿಸಿತ್ತಾದರೂ, ತನಗೆ ಬರಲಿಲ್ಲವಲ್ಲ ಸಧ್ಯ ಈ ಪಾಳಿ ಅಂತ ಸಮಾಧಾನವೆನಿಸಿತ್ತು. ಹಿಂದಿನ ರಾತ್ರಿ ಹೆಡ್ಮಾಸ್ತರರ ಕಾಲು ಒತ್ತುವ ಡ್ಯೂಟಿಗೆ ಹೋಗಿದ್ದ ಸುಮಿತ್ರಾ ಏಕೋ ಅಳುತ್ತ ತಿರುಗಿ ಬಂದಿದ್ದಳು. ಆಕೆ ಕೋಮಲಾನೊಂದಿಗೆ ಒಂದೇ

ಕೋಣೆಯಲ್ಲಿರುತ್ತಿದ್ದರಿಂದ ರಾತ್ರಿಯೆಲ್ಲಾ ಆಕೆ ನಿದ್ರೆ ಮಾಡದೆ ಅಳುತ್ತಲೇ ಕಳೆದಿದ್ದನ್ನು ಗಮನಿಸಿದ ಕೋಮಲಾಗೆ ತನಗಿನ್ನೂ ಆ ಕರೀ ಮುಸುಡಿಯ ಬಿಳಿ ಕೂದಲಿನ ಮುದುಕನ ಕಾಲು ಒತ್ತುವ ಡ್ಯೂಟಿ ಬಂದಿಲ್ಲವಲ್ಲ ತಾನೇ ಪುಣ್ಯವಂತೆ ಅನಿಸಿತ್ತು. ತಲೆ ಬಾಚಿ ಬಿಸಿ ನೀರು ಸ್ನಾನ ಮಾಡಿ ಉತ್ಸವದಲ್ಲಿ ಪಾಲುಗೊಳ್ಳಲು ಉತ್ಸಾಹದಿಂದಲೇ ಸಿದ್ಧಳಾಗಿದ್ದಳು ಆಕೆ.

ಆದರೆ ಪ್ರಾರ್ಥನೆಯ ನಂತರ ಅಂಬುಜಮ್ಮ ತನ್ನ ಗುಜ್ಜಾನೆ ಮರಿಯಂಥ ದೇಹಹೊತ್ತು ಕೋಮಲಾ ನಿಂತಿದ್ದಲ್ಲಿಗೆ ನಡೆದು ಬಂದು ಅವಳನ್ನು ಪಕ್ಕಕ್ಕೆ ಕರೆದು ಪಿಸುಧ್ವನಿಯಲ್ಲಿ ಆಣತಿಯಿತ್ತಿದ್ದಳು–"ಇವತ್ತು ರಾತ್ರಿ ನಿನಗೆ ಗೆಸ್ಟ್ ರೂಮ್ ಡ್ಯೂಟಿ" ಅಂತ. ಕೋಮಲೆಯ ಎದೆಯೊಡೆದು ನೀರಾಯಿತು. ಉತ್ಸವದ ಉತ್ಸಾಹವೆಲ್ಲ ಕ್ಷಣದಲ್ಲಿ ಮಾಯ. ಅಂಬುಜಮ್ಮನಿಗೆ ಎದುರಾಡುವ ಧೈರ್ಯ ಸಮಾಜದಲ್ಲಿ ಯಾವ ಪಿಳ್ಳೆಗೂ ಇರಲಿಲ್ಲ. ಹಿಂದೊಮ್ಮೆ ಸಮಾಜದ ಹುಡುಗಿಯರಿಗೆಂದು ಅಮೇರಿಕನ್ ಸಹಕಾರೀ ಸಂಸ್ಥೆಯೊಂದು ನೂರು ಹಣ್ಣಿನ ಟಿನ್‌ಗಳನ್ನು ಕಳಿಸಿದ್ದು, ಅಂಬುಜಮ್ಮನ ಮರ್ಸಿಡಿಸ್‌ನಲ್ಲಿ ಅವೆಲ್ಲ ರಾತ್ರೋ ರಾತ್ರಿ ಮಾಯವಾದದ್ದನ್ನು ಪ್ರಶ್ನಿಸಿದ ರೇಖಾ ಅನ್ನುವ ತಿಳಿಗೇಡಿ ಹುಡುಗಿಗೆ "ಉದ್ಧಟತನದ ಅಪರಾಧ"ಕ್ಕಾಗಿ ಕಾಸಿದ ಛಡಿಯ ಬರೆ ಎಳೆದು ಅವಳ ಬಲಗೈ ಕೊನೆವರೆಗೂ ನಿರುಪಯೋಗಿಯಾದದ್ದನ್ನು ಸಮಾಜದ ಯಾವ ಹುಡುಗಿಯೂ ಮರೆತಿರಲಿಲ್ಲ. ಪಿಳಿ ಪಿಳಿ ಕಣ್ಣು ಬಿಡುತ್ತ ನಿಂತೇ ಇದ್ದಳು ಕೋಮಲಾ. ನಂತರ ಹೇಗೋ ಬಂದು ರೂಮು ಸೇರಿ ಹಾಸಿದ್ದ ಕಂಬಳಿಯ ಮೇಲೆ ಕುಸಿದು ಕೂತಳು. ಕೈಕಾಲಲ್ಲಿನ ಶಕ್ತಿ ಉಡುಗಿ ಹೋಗಿತ್ತು. ಹೊರಗಿನ ಗದ್ದಲ, ಸಂಭ್ರಮ, ತುತ್ತೂರಿ ಎಲ್ಲದಕ್ಕೂ ಕಿವುಡಾಗಿದ್ದಳು ಆಕೆ. ತಿರುತಿರುಗಿ ಅಂಬುಜಮ್ಮನ ಗಡಸು ಧ್ವನಿ ಅವಳಿಗೆ ವಿಕಾರವಾಗಿ ಕೇಳಿಸುತ್ತಿತ್ತು. "ಗೆಸ್ಟ್ ರೂಮಿನ ಡ್ಯೂಟಿ...ಇವತ್ತು ರಾತ್ರಿ"... ಈ 'ಗೆಸ್ಟ್ ರೂಮಿನ ಡ್ಯೂಟಿ' ಬಹಳ ಹುಡುಗಿಯರಿಗೆ ಅರ್ಥವಾಗಿರದ ರಹಸ್ಯ. ವಿಶೇಷ ಪ್ರಸಂಗಗಳಲ್ಲಿ ಸಮಾಜಕ್ಕೆ ಆಮಂತ್ರಿತರಾಗಿ ದಯಮಾಡಿಸುವ ಗಣ್ಯ ಅತಿಥಿಗಳು ಸಮಾಜದ ಅತಿಥಿಗೃಹದಲ್ಲಿ ರಾತ್ರಿ ತಂಗಿದಾಗ ಅವರ ಸೇವೆಗಾಗಿ ಒಬ್ಬ ಹುಡುಗಿ ಅಲ್ಲೇ ಹೋಗಿ ರಾತ್ರಿಯೆಲ್ಲ ಇದ್ದು ಮುಂಜಾನೆ ತಿರುಗಿ ಬರುವುದು. ಅಲ್ಲಿ ಏನೇನಾಗುತ್ತದೆಂದು ಹಾಗೆ ಹೋಗಿ ಬಂದ ಯಾವಳೂ ಎಂದೂ ಯಾರಿಗೂ ಹೇಳುವುದಿಲ್ಲ. ಗೆಸ್ಟ್ ರೂಮಿನ ಡ್ಯೂಟಿ ಅಂದರೆ ಅವರಿಗೆಲ್ಲ ಏನೋ ಕುತೂಹಲ.

ಕೋಮಲೆಗೆ ಮಾತ್ರ ವಿಪರೀತ ಹೆದರಿಕೆಯಾಗಿದೆ. ಗೆಸ್ಟ್ ರೂಮಿನ ಡ್ಯೂಟಿ ಮಾಡಿದ್ದ ಮಂಗಳಾಗೆ ಹೊಸ ಸೀರೆ–ಗಿಲೀಟಿನ ಒಡವೆ ಸಿಕ್ಕಿದ್ದು ಆಕೆ ನೋಡಿದ್ದಾಳೆ. ಇನ್ನೊಂದು ಸಂದರ್ಭದಲ್ಲಿ ಆ ಡ್ಯೂಟಿ ಮಾಡಿದ ಶಾಂತಾ ಅಂತೂ ಮುಂದೆ ಎರಡು ತಿಂಗಳಲ್ಲಿ ಯಾರಿಗೂ ಹೇಳದೆ ಸಮಾಜದಿಂದ ಪರಾರಿಯಾಗಿದ್ದಳು. ಮುಂದೆ ಅವಳ ಲಗ್ನದ ಆಮಂತ್ರಣ ಪತ್ರಿಕೆ ಬಂದಿತು ಸಮಾಜಕ್ಕೆ. ಒಮ್ಮೆ ಸಮಾಜದ ಹುಡುಗಿಯರನ್ನೆಲ್ಲ ಕರೆದುಕೊಂಡು ಕಮಲಮ್ಮ ಯಾವುದೋ ಟಾಕೀಜಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದ ಚ್ಯಾರಿಟಿ ಶೋಗೆ ಹೋದಾಗ, ಅಲ್ಲೇ ಬಾಲ್ಕನಿಯಲ್ಲಿ ಕೂತಿದ್ದ ಶಾಂತಾನನ್ನು ಕೋಮಲಾ ನೋಡಿದ್ದಳು. ಹಸಿರು ಬಳೆ, ಮಂಗಳಸೂತ್ರ, ಜರೀ ಸೀರೆಯಿಂದಲಂಕೃತಳಾಗಿ ಹೆಮ್ಮೆಯಿಂದ ಗಂಡನೊಂದಿಗೆ ಕೂತಿದ್ದ ಶಾಂತಾನನ್ನು ನೋಡಿದಾಗ ಸಹಜವಾಗಿಯೆ ಹಲವು ಹುಡುಗಿಯರಿಗೆ ಗೆಸ್ಟ್‌ರೂಮ್ ಡ್ಯೂಟಿಯ ಬಗ್ಗೆ ಆಸಕ್ತಿ ಹುಟ್ಟಿತ್ತು. ಆದರೂ ಕೋಮಲಾ ಹೆದರಲು ಕಾರಣ–ಆಕೆಗೆ ತಿರು ತಿರುಗಿ ನೆನಪಿಗೆ ಬರುತ್ತಿದ್ದ, ಬಹಳ ವರ್ಷಗಳ ಹಿಂದೆ ನಡೆದಿದ್ದ ಒಂದು ಮೈನವಿರೇಳಿಸುವ ಘಟನೆ. ಕೋಮಲಾಗೆ ಆಗ ಆರೇಳು ವರ್ಷವಿರಬಹುದು. ದಕ್ಷಿಣದ ಒಂದು ಅನಾಥಾಶ್ರಮದಿಂದ ಈ ಸೇವಾ ಸಮಾಜಕ್ಕೆ ಆಕೆ ಹೊಸದಾಗಿ ರಿಕ್ರೂಟ್ ಆಗಿ ಬಂದಿದ್ದಳು. ಅವಳ ಮೃದುವಾದ ಮುದ್ದು ಮುಖ ನೋಡಿ ಅಂಬುಜಮ್ಮನೇ ಅವಳಿಗೆ 'ಕೋಮಲಾ' ಅಂತ ಹೊಸ ಹೆಸರು ಕೊಟ್ಟದ್ದು. ಆಗಿನ್ನೂ ಈ ಬೆಡಗಿನ ಅತಿಥಿಗೃಹ ಇರಲಿಲ್ಲ. ಆಫೀಸು ಕೋಣೆಯ ಪಕ್ಕದ ಹಾಲಿನಲ್ಲೇ ಅತಿಥಿಗಳ ವಸತಿಯ ವ್ಯವಸ್ಥೆ ಇತ್ತು. 'ಗೆಸ್ಟ್ ರೂಮ್ ಡ್ಯೂಟಿ' ಅಂತ ಅಂಬುಜಮ್ಮ ಆಗಷ್ಟೇ ಹೊಸದಾಗಿ ಪ್ರಾರಂಭಿಸಿದ್ದಳು ಈ ಪದ್ಧತಿಯನ್ನು. ಅವಳು ಮುಂಧೋರಣೆಯಿಂದ ಪ್ರಾರಂಭಿಸಿದ ಈ ಹೊಸ ಸುಧಾರಣಾ ವಿಧಿಯಿಂದ ಸಮಾಜಕ್ಕೆ ಸಾಕಷ್ಟು ಗ್ರ್ಯಾಂಟು, ಊರಿನ ಗೌರವಾನ್ವಿತ ನಾಗರಿಕರಿಂದ ಸಹಾಯ ಧನ ಇತ್ಯಾದಿ ಸಿಗಲಾರಂಭಿಸಿತ್ತು. ಆಗ ಒಂದು ಸಲ ಹೀಗೆಯೇ ಮಂತ್ರಿಗಳೊಬ್ಬರು ಬಂದು, ಅಬಲೆಯರ ಉದ್ಧಾರದ ಬಗ್ಗೆ ಸುದೀರ್ಘ ಭಾಷಣ ಮಾಡಿ, ರಾತ್ರಿ ಅಂಬುಜಮ್ಮನ ಮನೆಯ ಸ್ಪೆಶಲ್ ಅಡಿಗೆಯವನಿಂದ ತಯಾರಾಗಿ ಬಂದ ಭರ್ಜರಿ ಚಿಕನ್ ತಿಂದು ಹೆಡ್ಮಾಸ್ತರ್ ಒದಗಿಸಿದ ವಿದೇಶೀ ವ್ಹಿಸ್ಕಿ ಸವಿದು, ಗೂಳಿಯಂತೆ ಗುಟುರು ಹಾಕುತ್ತ ಕೋಣೆ ಸೇರಿದ್ದರು. ಅಂದು ಗೆಸ್ಟ್ ರೂಮಿನ ಡ್ಯೂಟಿಗೆ ಹೋಗಿದ್ದ ಹುಡುಗಿ ಮರುದಿನ ಮುಂಜಾನೆ ಸಮಾಜದ ಕಂಪೌಂಡಿನಲ್ಲಿನ ಹಳೆಯ ಬೇವಿನ ಮರಕ್ಕೆ ನೇಣು ಹಾಕಿಕೊಂಡು ತೂಗುಬಿದ್ದಿದ್ದಳು. ಆ ವಿಕಾರ ದೃಶ್ಯವನ್ನು ಮುಂಜಾನೆ ಎದ್ದೊಡನೆ ಮೊಟ್ಟ ಮೊದಲು ನೋಡಿದ್ದ ಕೋಮಲಾ ಚಿಟ್ಟನೆ ಚೀರಿ ಮೂರ್ಛೆ ಹೋಗಿದ್ದಳು. ಪೋಲೀಸರು ಬಂದಿದ್ದರು. ಮಂತ್ರಿಗಳನ್ನು ಕಂಡು ಸೆಲ್ಯೂಟ್ ಹೊಡೆದರು. ಮಂತ್ರಿಗಳ ಸಮಕ್ಷಮ ವಿಚಾರಣೆ ನಡೆದು ಆಶ್ರಮದ ಬಡ ಮಾಲಿಯನ್ನು ಅರೆಸ್ಟ್ ಮಾಡಿ ಎಳಕೊಂಡು ಹೋದರು. ಮಾನ್ಯ ಮಂತ್ರಿಗಳು ಅಂಬುಜಮ್ಮನ ಕಾರಿನಲ್ಲಿ ಆರಾಮಾಗಿ ಏರೋಡ್ರೋಮಿಗೆ ಹೋದರು. ಮುಂದೆ ಯಾರೂ ಆ ಹುಡುಗಿಯ ಬಗೆಗೆ ಚಕಾರ ಎತ್ತಲಿಲ್ಲ.

ಆದರೆ ಯಾಕೋ ಕೋಮಲಾಗೆ ಅದನ್ನು ಮರೆಯುವುದು ಸಾಧ್ಯವಾಗಿರಲಿಲ್ಲ. ಇಂದು 'ಗೆಸ್ಟ್ ರೂಮ್ ಡ್ಯೂಟಿ' ಅಂದೊಡನೆ ಧುತ್ತೆಂದು ಅವಳೆದುರು ಆ ಘಟನೆ ಬಂದು ನಿಂತಿತು. ಅಂತೆಯೇ ಆಕೆ ಕಂಗಾಲಾಗಿದ್ದಳು.

* * *

ಸಂಜೆಯ ಸಭೆಗೆ ಮುಖ್ಯ ಅತಿಥಿಗಳಾಗಿ ಬಂದವರು ರಾಜ್ಯ ಸಮಾಜ ಕಲ್ಯಾಣ ಶಾಖೆಯ ಮುಖ್ಯ ಅಧಿಕಾರಿಯೊಬ್ಬರು. ಶುದ್ಧ ಖಾದಿಧಾರಿ. ಚೆಲುವಾದ ನಗುಮುಖ. ವಯಸ್ಸಿನ್ನೂ ಚಿಕ್ಕದು. ಅವರ ಭಾಷಣವಂತೂ ಎಲ್ಲರ ಮನ ತಟ್ಟಿತು. ಭಾರತದಲ್ಲಿ ಹೆಣ್ಣುಮಕ್ಕಳಿಗೆ ಮನುವಿನ ಕಾಲದಿಂದಲೂ ಆಗುತ್ತಿರುವ ಅನ್ಯಾಯ, ಸ್ವತಂತ್ರ ಭಾರತದಲ್ಲಿ ಮಹಿಳೆಯರಿಗಿರುವ ವಿಶೇಷ ಸೌಲಭ್ಯಗಳು, ಅವುಗಳ ಲಾಭವನ್ನುಅವರು ಪಡೆಯಬೇಕಾದ ಬಗೆ, ಅನ್ಯಾಯ, ಅತ್ಯಾಚಾರಗಳನ್ನು ಎದುರಿಸಲು ಬೇಕಾದ ಧೈರ್ಯ ಕುರಿತು ಅವರು ಉತ್ಸಾಹದಿಂದ ಮಾತಾಡಿದರು. ಹೆಣ್ಣು ಎಂದಿಗೂ ಅನಾಥೆಯಲ್ಲ, ಆಕೆ ಮಾತೆ, ಶಕ್ತಿಸ್ವರೂಪಿಣಿ, ಸ್ಫೂರ್ತಿದಾಯಿನಿ ಅಂದರು. ಕುಸಿದು ಹೋಗುತ್ತಿರುವ ನಮ್ಮ ದೇಶದ ನೈತಿಕ ಬಲ ಮಹಿಳೆಯರಿಂದಲೇ ಉಳಿಯಬೇಕು ಅಂದರು. ರಾಜಾರಾಮಮೋಹನರಾಯ– ಸಾ ವ ರ ಕ ರ–ಕರ್ವೆಯವರ ಹಾಗೆ ಮಹಿಳಾ ಉದ್ಧಾರವನ್ನೇ ತಾನೂ ಜೀವನದ ಗುರಿಯಾಗಿಟ್ಟುಕೊಂಡಿರುವೆನೆಂದು ಘೋಷಿಸಿದರು. ಭಗಿನೀ ಸೇವಾ ಸಮಾಜಕ್ಕಾಗಿ ಸಭಾಗೃಹವೊಂದನ್ನು ಕಟ್ಟಿಸಲೆಂದು ಅಂಬುಜಮ್ಮ ತುಂಬ ಕಷ್ಟಪಟ್ಟು ಸಂಗ್ರಹಿಸುತ್ತಿರುವ ನಿಧಿಗೆ ತಮ್ಮ ವೈಯಕ್ತಿಕ ಕಾಣಿಕೆಯೆಂದು ಆಗಲೇ ಒಂದು ಸಾವಿರ ರೂಪಾಯಿಯ ವಾಗ್ದಾನ ಮಾಡಿದರು.

ಭಾಷಣ ಮುಗಿಸಿ ನೀರು ಕುಡಿದು ಆತ ಕೂತಾಗ ಜನ ತುಂಬ ಹೊತ್ತು ಚಪ್ಪಾಳೆ ಬಾರಿಸಿದರು. ಅಂದಿನ ಸಭೆಗೆ ಊರಿನ ಗಣ್ಯ ನಾಗರಿಕರು, ಸರಕಾರಿ ಅಧಿಕಾರಿಗಳು ವಿಶೇಷ ಸಂಖ್ಯೆಯಲ್ಲಿ ಬಂದಿದ್ದು ಸಭೆಗೆ ಶೋಭೆಯನ್ನು ತಂದಿದ್ದರಿಂದ ಅಂಬುಜಮ್ಮನಿಗೆ ತುಂಬ ಉತ್ಸಾಹ ಉಕ್ಕಿ ಬಂದಿತ್ತು. ಅತಿಥಿಗಳ ಭಾಷಣದ ನಂತರ ಅಧ್ಯಕ್ಷೆಯಾಗಿದ್ದ ಆಕೆ ಎದ್ದು ನಿಂತು ನೆರೆದ ಮಹಾಜನಗಳೆದುರು ಭಗಿನೀ ಸೇವಾ ಸಮಾಜದ ಹಕ್ಕಿ ನೋಟವನ್ನು ಪ್ರಸ್ತುತಪಡಿಸಿದಳು. ತನಗೆ ಅಧಿಕಾರ ಬಂದ ನಂತರ ಸಮಾಜದ ಒಳ್ಳೆಯದಕ್ಕಾಗಿ ತಾನು ಕೈಕೊಂಡ ಹೊಸ ಹೊಸ ಸುಧಾರಣೆಗಳು, ಹುಡುಗಿಯರ ಬಗೆಗೆ ತನಗೂ ಇತರ ಆಡಳಿತವರ್ಗದ ಸಿಬ್ಬಂದಿಗೂ ಇರುವ ಅಪರಿಮಿತ ಪ್ರೇಮ, ಈ ಸಮಾಜವನ್ನು ಅತ್ಯಂತ ಆದರ್ಶ ಸಂಸ್ಥೆಯನ್ನಾಗಿ ಮಾರ್ಪಡಿಸಬೇಕೆನ್ನುವ ತನ್ನ ಕನಸು–ಕುರಿತು ವಿವರಿಸಿದಳು. ಹುಡುಗಿಯರಿಗೆ ಪ್ರತಿದಿನ ಮುಂಜಾನೆ ಸಿರಾ–ಹಾಲು, ಮಧ್ಯಾಹ್ನ ಚಪಾತಿ ಪಲ್ಯ ಅನ್ನ, ಸಂಜೆ ಹಣ್ಣು, ರಾತ್ರಿ ಅನ್ನ–ಸಾರು; ಹಬ್ಬಗಳಲ್ಲಿ ಸಿಹಿ ತಿಂಡಿ ನೀಡುತ್ತಿರುವದನ್ನು ತಿಳಿಸಿ ಅವರಿಗೆ ಹೊಸ ಉಡುಗೆ; ಪುಕ್ಕಟೆ ಅತ್ಯುತ್ತಮ ಶಿಕ್ಷಣ; ಅವರ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸಕ್ಕೆ ಎಲ್ಲ ಬಗೆಯ ಸಹಾಯ ಮಾಡುತ್ತಿರುವದನ್ನು ಕುರಿತು ಮಾತ

ಸಾಹೇಬಗಿರಿ



ಬೇರುಕಿತ್ತು ಚೆಲ್ಲಿದರೂ ಇನ್ನೂ
ಕರಿಕಿಯು ತಲೆಯೆತ್ತಿದೆ ಸುತ್ತು;
ಬಿಳಿ ಸಾಹೇಬರು ಗುಳೇ ಕಿತ್ತರೂ
ಇದೆ ಸಾಹೇಬಗಿರಿಯ ಮತ್ತು !

-ಎಂ. ಅಕಬರ ಅಲಿ

ಮಾಡಿದರು. ಕೆಲವು ತಾಯಿ–ತಂದೆಗಳಿಗಂತೂ ತಮ್ಮ ಮಕ್ಕಳನ್ನೂ ಇಲ್ಲೇ ತಂದು ಬಿಡಬಾರದೇಕೆ ಅನಿಸಿದ್ದರೂ ಅನಿಸಿದ್ದೀತು.

ಕೊನೆಯಲ್ಲಿ ಶಿವರಾಮ ರೆಡ್ಡಿಯಿಂದ ಆಭಾರ ಮನ್ನಣೆ. ಎಲ್ಲ ಹೆಣ್ಣು ಮಕ್ಕಳು ಲಕ್ಷ್ಮಿಯ ಸ್ವರೂಪ, ತಾಯಿಯ ಸಮಾನ ಅಂತ ತನ್ನ ನಂಬಿಗೆ; ಅನಾಥ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವ ಅಪೂರ್ವ ಪುಣ್ಯ ಯೋಗ ತನಗೆ ಒದಗಿ ಬಂದದ್ದಕ್ಕಾಗಿ ದೇವರಿಗೆ ತಾನು ಕೃತಜ್ಞ; ಈ ಪವಿತ್ರ ಕರ್ತವ್ಯವನ್ನು ಜೀವವಿರುವ ವರೆಗೂ ಲೋಪ ಬಾರದಂತೆ ನಡೆಸಿಕೊಂಡು ಹೋಗ ಬೇಕೆನ್ನುವುದು ತನ್ನ ಬಾಳಿನ ಏಕಮೇವ ಧ್ಯೇಯ.

ಚಪ್ಪಾಳೆಗಳ ಮೇಲೆ ಚಪ್ಪಾಳೆ. ಎಲ್ಲರ ಬಾಯಲ್ಲೂ ಭಗಿನೀ ಸೇವಾ ಸಮಾಜದ ಬಗ್ಗೆ ಪ್ರಶಂಸೆಯ ಮಾತು. ಸಭೆಯ ನಂತರ ರೋಟರಿಯವರು ಬಿಸ್ಕಿಟ್ ಪ್ಯಾಕೆಟ್ ಹಂಚಿದಾಗ ಹುಡುಗಿಯರಿಗೆ ಖುಷಿಯೋ ಖುಷಿ. ಹಂಚಲೆಂದು ಅವುಗಳನ್ನು ಅಂಬುಜಮ್ಮನ ವಶಕ್ಕೆ ಕೊಡದೆ ನೇರವಾಗಿ ನೆರೆದ ಹುಡುಗಿಯರಿಗೇ ತಲುಪಿಸಿದಾಗ ಹುಡುಗಿಯರು ಕುಣಿದು ಕುಪ್ಪಳಿಸಿದರು.

ಕೋಣೆಯ ಕಿಟಕಿಯ ಸರಳುಗಳನ್ನು ಬಿಗಿಯಾಗಿ ಹಿಡಿದುಕೊಂಡು ಕತ್ತಲಲ್ಲಿ ಕೋಮಲಾ ಒಬ್ಬಳೇ ನಿಂತಿದ್ದಳು. ಓಡಿ ಹೋದರೆ ಹೇಗೆ ಎಂಬ ವಿಚಾರವೂ ಬಂದಿತು. ಆದರೆ ಸಮಾಜದ ಸುತ್ತಲಿನ ಏಳುಫೂಟು ಎತ್ತರದ, ಗಾಜಿನ ಚೂರು, ಚುಚ್ಚಿದ ಗೋಡೆ, ಗೇಟಿನಲ್ಲಿ ಚಾಕು ಸಿಗಿಸಿಕೊಂಡು ನಿಂತ ಗೂರ್ಖಾನ ವಿಕಾರ ಸ್ವರೂಪ ನೆನೆದಾಗ ಹದಿನಾಲ್ಕು ವರ್ಷದ ಅವಳ ಎಳೆಯ ಮನಸ್ಸು ಹೆದರಿಕೊಂಡಿತು.

* * *

ರಾತ್ರಿ ಹನ್ನೊಂದೂವರೆ. ಅತಿಥಿಗೃಹದ ಹೊರಗೆ ಬೆಳದಿಂಗಳಲ್ಲಿ ಕಟ್ಟೆಯ ಮೇಲೆ ಕಮಲಮ್ಮನೊಂದಿಗೆ ಮಜವಾಗಿ ಹರಟುತ್ತ ಬೀಡಿ ಸೇದುತ್ತ ಕೂತಿದ್ದ ಹೆಡ್ಮಾಸ್ತರು ಯಾಕೋ ಬಾಗಿಲ ಸಪ್ಪಳ ಕೇಳಿ ತಿರುಗಿ ನೋಡಿದರು ಮಾನ್ಯ ಅತಿಥಿಗಳು ನೈಟ್‌ಗೌನಿನಲ್ಲಿ ಹೊರ ಬಂದಿದ್ದರು. ಎದ್ದು ಅವರೆಡೆ ಧಾವಿಸಿದ ಶಿವರಾಮ ರೆಡ್ಡಿ, "ಏನಾಯಿತು ಮಹಾಸ್ವಾಮಿ? ಮಾಲು ಮನಸ್ಸಿಗೆ ಬರಲಿಲ್ಲವೇ? ಏನು ತೊಂದರೆ ನನಗೆ ಹೇಳಿರಿ."

ಅನುಮಾನಿಸುತ್ತ ಕೆಳದನಿಯಲ್ಲಿ ಮಾತಾಡಿದ ಅತಿಥಿ; "ರೆಡ್ಡಿಯವರು, ನಿಮಗ ಮೊದಲು ಹೇಳಿದ್ದೆ, ನನಗಿದೆಲ್ಲಾ ಬ್ಯಾಡ ಅಂತ. ನೀವು ಒತ್ತಾಯ ಮಾಡಿದ್ರಿ ಅಂತ ಹೂಂ ಅಂದೆ. ಈಗ ನೋಡಿದರ ಯಾರೋ ಅಡ್ನಾಡಿ ಹುಡುಗೀನ್ನ ಕಳಿಸೀರಿ. ಅತ್ತು ಕರದು ರಂಭಾಟ ಮಾಡ್ಲಿಕ್ಹತ್ಯಾಳ. ನನ್ನ ಸಮೀಪ ಬರಬ್ಯಾಡ್ರಿ, ಮುಟ್ಟಬ್ಯಾಡ್ರಿ, ನೀವ್ಹ ದೇವ್ರು, ತಾಯಿ-ತಂದೆ ಅಂತ ಪ್ರಲಾಪ ಮಾಡ್ಲಿಕ್ಹತ್ಯಾಳ. ನನಗ–ನೀವೇನs ಅನ್ರಿ, ನನಗ–ಹೆಣ್ಮಕ್ಕಳ ಮನಸ್ಸು ನೋಯ್ಸೂದಾಗೂದಿಲ್ಲ... ಅಂದರ ಅವರ ಒಪ್ಪಿಗಿ ಇಲ್ಲದಾಗ" –ಉಗುಳು ನುಂಗಿದ. ಶಿವರಾಮ ರೆಡ್ಡಿ ಅನುಭವಿಕ, ಪ್ರಸಂಗಾವಧಾನ ತಂದುಕೊಂಡು ಒಮ್ಮೆಲೆ ಆರ್ಜವತೆಯಿಂದ ಹೇಳಿದ, "ಮಹಾಸ್ವಾಮಿಯವರು ಸಿಟ್ಟಾಗಬಾರದು. ಐದು ನಿಮಿಷ ಈ ಹಾಲ್‌ನಲ್ಲಿ ಕೂತು ಒಂದು ಸಿಗರೇಟ್ ಸೇದಿರಿ–ಇಂಪೋರ್ಟೆಡ್. ಅಷ್ಟರಲ್ಲಿ ನಾನು ಎಲ್ಲ ಸರಿ ಮಾಡುವೆ."

* * *

ಹದಿನೈದು ನಿಮಿಷಗಳ ನಂತರ ಕಚ್ಚಿ ಬಿಗಿದುಕೊಳ್ಳುತ್ತ ಹೊರಬಂದ ಶಿವರಾಮ ರೆಡ್ಡಿ ಮಾನ್ಯ ಅತಿಥಿಗಳನ್ನು ಪುನಃ ಆದರಪೂರ್ವಕವಾಗಿ ಒಳಗೆ ಕಳಿಸಿದಾಗ ಅವರಿಗೆ ಮಧುರ ಆಶ್ಚರ್ಯ ಕಾದಿತ್ತು. ಅಷ್ಟೊಂದು ವಿರೋಧ ಮಾಡಿ ಆಣೆ ಭಾಷೆ ಹಾಕಿ ಅತ್ತು ಕರೆದಿದ್ದ ಹುಡುಗಿ ಈಗ ದೊಡ್ಡ ಮಂಚದ ಮೇಲೆ ಸುಮ್ಮನೇ ಮಲಗಿಕೊಂಡಿದ್ದಳು. ಆತ ಬಳಿ ಸಾರಿದಾಗ ಪ್ರತಿಕ್ರಿಯೆ ತೋರಲಿಲ್ಲ. ಇಷ್ಟೇ ಅಲ್ಲ, ಅವಳ ಅರಿವೆ ಸೆಳೆದಾಗಲೂ ಸುಮ್ಮನೇ ಬಿದ್ದುಕೊಂಡಿದ್ದಳು–ಶೂನ್ಯವನ್ನು ದೃಷ್ಟಿಸುತ್ತ ಈ ಪರಿವರ್ತನೆಯ ರಹಸ್ಯವೇನೆಂದು ಆತ ಅಚ್ಚರಿಪಡುತ್ತಿದ್ದಾಗ ಕಿಡಿಕಿಯಾಚೆ ಹೆಡ್ಮಾಸ್ತರು ಕೊಚ್ಚಿಕೊಳ್ಳುತ್ತಿದ್ದುದು ಕೇಳಿಸಿತು. "ಕಮಲೀ, ಇನ್ನು ಮೇಲೆ ಈ ಹುಡುಗಿಯರನ್ನು ಒಂದು ದಂ ಮೊದಲು ನಾನು ಟೆಸ್ಟ್ ಮಾಡಿ, ಸಾದು ಮಾಡಿ ನಂತರವೇ ಗೆಸ್ಟ್ ರೂಮ್ ಡ್ಯೂಟಿಗೆ ಕಳಿಸಬೇಕು ನೋಡು. ಇಲ್ಲವಾದರೆ ಇವರು ಸಮಾಜದ ಮರ್ಯಾದೆ ತೆಗೆದಾರು."

ಕಮಲಮ್ಮನ ನಗು, ಗಂಡಸಿನ ನಗುವಿನಂತೆ ಕೇಳಿಸಿತು.

ಮುದ್ದುಮಕ್ಕಳಿಗೊಂದು ಕವಿತೆ

ನೀಟಾಗಿ ಪುಟು ಪುಟು ಎಳೆ ಕ್ರಾಪು ಬಾಚಿ
ಪೌಡರು ಘಮಘಮಿಸುವ ಪುಟಾಣಿ ಮಕ್ಕಳೇ
ಖುಷಿಯಾಗುತ್ತದೆ ನಿಮ್ಮ ಕಂಡು
-ನಿಮ್ಮ ಹಾಗೆಯೇ ನಾನೂ ಇದ್ದೆನಲ್ಲಾ
ತತ್‌ಕ್ಷಣ ನೋಯುದ್ದ ಕಹಿಯಾಗುತ್ತದೆ ಮನ
-ನನ್ನ ಹಾಗೆಯೇ ಮುಂದೆ ನೀವೂ ಆಗುವಿರಲ್ಲಾ

ಏಕೆ ಮಕ್ಕಳೇ ಪಾಪ
ನಿಮಗೇನು ಗೊತ್ತು ನಿಮ್ಮ ಹುಟ್ಟಿನ ತಡ
ನಿಮಗೇನು ಗೊತ್ತು ನೀವಪ್ಪಳಿಸಲ್ಪಟ್ಟ
ನದಿಯೇ ಇಲ್ಲದ ದಡ
ನಿಮ್ಮ ಪುಟ್ಟದೃಷ್ಟಿಗ ಈ ನಾನು
ನನ್ನವರು ಎಷ್ಟು ವಿಶಾಲ ತಾನೆ ನಿರ್ಭೀತ
ನಿಮ್ಮ ನಿಲುವುಗಳಿಗೆ ಈ ಎಲ್ಲ ನಕಾಶೆ ಗುಡ್ಡ
ಕೊಳ್ಳ ಕಾಲುವೆ ಕಾಡು ಕೇವಲ ಹಿನ್ನೆಲೆ ತಾನೆ
ತಾನೆ ತಾನಾಗಿ ಬೃಹದಾಕಾರಕ್ಕೆ ಬೆಳೆಯುವ
ಪ್ರಶ್ನೆಗಳ ಮೇಲೆ ನಿಮ್ಮ
ಪುಟ್ಟ ಸಾಕ್ಸುಗಳೊಳಗಿನ ಬಿಳಿ ಎಳೆ ಮೀನು
ಪಾದಗಳ ಗುರುತು ಮೂಡುವುದಿಲ್ಲ ಮಕ್ಕಳೇ

ಪ್ರಶ್ನೆ ಕೇಳಲು ನೀವು ಕೈಯೆತ್ತಿ ಒಮ್ಮೆ
ಎಲ್ಲ ಕೈಗಳ ಎಳೆ ಮೊಗ್ಗು ಬೆರಳು
ಕೂಡಿ ಚೆಂದದ ಮಲ್ಲಿಗೆ ರಾಶಿ
ಒಮ್ಮೆ ಅತ್ತು ಬಿಡಿ ದೇಶಕ್ಕಾಗಿ -ಹಾಹಾ
ಆ ಎಸಳು ತುಟಿಯಿಂದ ಪಟ ಪಟ ಹುಡಿ
ಉದುರುವ ಚಂದ್ರಸೂರ್ಯ ನಕ್ಷತ್ರ
ಬೆಳ್ಳನೆ ಹಾಲು ಬೆಳದಿಂಗಳು
ಮೈಕಿಗೆ ಬಾಯಿ ಕೊಡಿ ನೋಡುವಾ-
ತಿಳಿ ತಿಳಿ ತೊದಲು ದೃಷ್ಟಿ ಭಾಷೆ ಎಷ್ಟು ಹಿತದರಳು
ಹಸಿವಿಗೆ ಹಾರ್ಲಿಕ್ಸು
ಅತ್ತರೆ ಚಾಕಲೇಟು-ಮತ್ತೆ ಮುತ್ತಿ ನೋಕುಳಿ
ಅರಿವೇ ಇಲ್ಲದ ಕ್ಷಣದ ಕೋಶಾವಸ್ಥೆ

ನಿಮ್ಮ ಕಣ್ಣುಗಳೊಳಗೆ ಏನು ನಡೆದಿಲ್ಲ
ಯಾಕೆ ನಡೆದಿಲ್ಲ
ಸಧ್ಯ ನಿಮ್ಮ ನೋಟದ ನೇರ ಇನ್ನೂ ಒಡೆದಿಲ್ಲ
ಶಿಸ್ತಾಗಿ ಶಾಲೆಗೆ ಹೋಗುತ್ತೀರಿ ಅರ್ಥವರ್ಥ
ಕಲಿಯುತ್ತೀರಿ ನಿಮ್ಮ ಅಮ್ಮ ಅಪ್ಪ
ನೆರೆಹೊರೆಯಲ್ಲಿ ನಿಮ್ಮ ಕೊಂಡಾಡಿ ಕಚ್ಚಾಡಿ
ನೀವು ನಿದ್ದೆ ಹೋದ ಮೇಲೆ ಮತ್ತಗೆ ಎದ್ದು ಬಟ್ಟಗೇ
ಮಲಗುತ್ತ-ಬ್ಯಾಂಕಲ್ಲಿ ನಿಮ್ಮ ಎಕೌಂಟಿಗೆ ಜಮಾ ಮಾಡಿ
ಮಾಡಿ ಮಾಡಿ ಸುಸ್ತಾಗುತ್ತಿರುವಾಗಲೇ
ಈ ಹವೆಗ್ಗೇ -ಎಂತೆಂಥ ಕಾಲದಿಂದಲೂ ಈ ನೆಲಕ್ಕಂಟೇ ಇರುವ
ಈ ಹವೆಗೇ ನಿಮ್ಮ ಪುಪ್ಪುಸಗಳು ಅರಳಿಕೊಳ್ಳುತ್ತವೆ
ನೀವು ಬೆಳೆದುಬಿಟ್ಟಿರುತ್ತೀರಿ ಮಕ್ಕಳೇ ನಿಮಗದು ಗೊತ್ತಾಗುವದಿಲ್ಲ
ಇಂದಿನ ಇರುವೆಗಳೇ ಅಂದು ಚೇಳಾಗಿರುತ್ತವೆ
ಇಂದಿನ ಎರೆಹುಳುಗಳೇ ಅಂದಿನ ಹಾವಾಗಿರುತ್ತವೆ


ಆಟ ಆಡಿ ಮಕ್ಕಳೇ
ಗುಬ್ಬಿ ಗೂಡು ಅದೂ ಇದೂ ಆಟ ಆಡಿ
ಒಬ್ಬ ಮರಿ ಬ್ಯಾಟ್ಸ್‌ಮನ್ ಒಬ್ಬ ನರಿ ಸ್ಟೇಟ್ಸ್‌ಮನ್
ಒಬ್ಬ ನಟ ಒಬ್ಬ ನಟ ದಾರ ಕಳೆದ ಗಾಳಿಪಟ
ಈಗಲೇ ಎಲ್ಲವನ್ನು ತಮಾಷೆ ಎಂದುಕೊಂಡು
ಆಡಿಕೊಳ್ಳಿ ಮಕ್ಕಳೇ

ಇಂದಿನ ಈ ತೆಂಗು ಕಂಗು ಹೊಟ್ಟೆ ಟೊಪ್ಪಿಗೆ
ಇವೆಲ್ಲ ಒಮ್ಮೆ ನಿಮ್ಮ ಹಾಗೆಯೇ ಇದ್ದವು
ಈ ಗಂಟಲು ನರಗಳು ಗದ್ದುಗೆ ಪಾದಗಳು ಘಟಾನು
ಘಟಗಳು ಎಲ್ಲ ಒಮ್ಮೆ ನಿಮ್ಮ ಹಾಗೆಯೇ ಇದ್ದವು
ಅಂತೆಯೇ
ನಿಮ್ಮನ್ನು ನೋಡುತ್ತಿರುವಂತೇ ನನಗೆ ಹೆದರಿಕೆ ಆಗುತ್ತದೆ
ಜತೆಗೇ
ಈ ನಿರ್ಲಿಪ್ತ ಅತೀತ ಅತೀಂದ್ರಿಯ ಖುಷಿಗೆ
ಅಸೂಯೆ ಆಗುತ್ತದೆ

ಈ ಪುಟ್ಟ ಪುಟ್ಟ ತೊಂಡೆ ಬೆರಳು ಸೌತೆ ಕೈಕಾಲು
ಬೆಳೆದು ಬಿರುಸಾಗಿ ಈ ಜೀವರಸ
ಚಿಮ್ಮುವ ಗಲ್ಲಗಳು ಒಣಗಿ ಗೆರೆಸುಕ್ಕು ಮೂಡಿ
ಧೀರ ಗಂಭೀರ ಮೀಸೆ ಗಡ್ಡಾದಿಗಳ
ಎಂತೆಂಥದೋ ಕಳೆಗಳ ಒಡೆಯರಾಗಿ
ಅಪ್ಪಂದಿರಾಗಿ ಥೇಟು ಅಪ್ಪಂತರಾಗಿ
ವಸ್ತುಗೆ ಮೀರಿದ ಭಾವ ಹೊತ್ತು ಮೆರೆಯಲಿದ್ದೀರಿ
ಆ ನಿಮ್ಮ ಘೋರ ಕವಿ ಸಮಯಗಳನ್ನು ಊಹಿಸಲಾರೆ

ಬನ್ನಿ ಮಕ್ಕಳೇ
ನೀವು ಹೀಗೆಯೇ ಇದ್ದುಬಿಟ್ಟಿದ್ದರೆ!
—ಎಂದುಕೊಳ್ಳುತ್ತ ಬಟ್ಟಾರೆ
ಖುಷಿಯಿಂದ ಮುತ್ತಿಡುತ್ತೇನೆ
ಈ ಇಂದಿನ ಹಗಲು ಇರುಳಾಗುವದರೊಳಗೇ.

ಜಯಂತ ಕಾಯ್ಕಿಣಿ



ಈಗ ನಾನು ಭೂತಾಧ್ಯಯನ ನಡೆಸಿದ್ದೇನೆ. ಕೆಲ ಭೂತಗಳ ಬಗ್ಗೆ ಅರಿತಿದ್ದೇನೆ. ಕಿಲಾಡಿ ಭೂತ, ಗಂಡು ಭೂತ, ಹೆಣ್ಣು ಭೂತ ನಿಮ್ಮನ್ನು ಅಂಜಿಸಲೂ ಬಹುದು. ಅವುಗಳನ್ನು ವಶಪಡಿಸಿಕೊಂಡಿರಾದರೆ ಹೇಳಿದ ಕೆಲಸಮಾಡಿ ರಂಜಿಸಲೂಬಹುದು.

ನಾನು ಕಾಣದ ಭೂತಗಳು

ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಾನು ಸ್ವತಃ ಯಾವ ಭೂತವನ್ನೂ ಕಂಡವನಲ್ಲ. ಆದರೆ ಭೂತವನ್ನು ಕಂಡಿದ್ದೇನೆ ಅಂತ ಹೇಳಿಕೊಳ್ಳುವವರನ್ನು ಕಂಡವರನ್ನು ನಾನು ಕಂಡಿದ್ದೇನೆ. ಭೂತದ ಸಪ್ಪಳ ಕೇಳಿದ್ದೇನೆ ಅಂತ ಹೇಳಿಕೊಳ್ಳುವವರಿಂದ ಸಂಗತಿಗಳನ್ನು ಕೇಳಿದ್ದೇನೆ. ಅವರೆಲ್ಲರ ಪ್ರಾಮಾಣಿಕತೆಯ ಬಗ್ಗೆ ನನಗೆ ಕಿಂಚಿತ್ತು ಸಂಶಯವಿಲ್ಲ. ಆದ್ದರಿಂದ ನನ್ನ ಕಣ್ಣು ಕಿವಿಗಳಲ್ಲಿ ಏನೋ ದೋಷ ಇರಬೇಕು ಅಂತ ನಾನು ತೀರ್ಮಾನಿಸಬೇಕಾಗಿದೆ. ಇದೇನೂ ಅಸಂಭವವಲ್ಲ. ಕೆಲವರು ಬಣ್ಣಗುರುಡರಾಗಿರುತ್ತಾರಂತೆ. ಅವರಿಗೆ ಬಣ್ಣಕ್ಕೂ ಬಣ್ಣಕ್ಕೂ ಭೇದವೇ ಕಾಣಿಸಲ್ಲಂತೆ. ವಧೂಪರೀಕ್ಷೆಗೆ ಹೋದ ತರುಣರಿಗೆ ಒಂದೊಂದು ಸಲ ಬಣ್ಣಗುರುಡು ಬರುತ್ತೆ ಅನ್ನೋಕೆ ಸಾಕಷ್ಟು ಆಧಾರಗಳು ಇವೆ. ಹಾಗೆಯೇ ಕೆಲವರು ಗಾನಗಿವುಡರಾಗಿರುತ್ತಾರೆ. ಅವರಿಗೆ 'ಸ'-ಕ್ಕೂ 'ಪ'-ಕ್ಕೂ ಭೇದವೇ ಗೊತ್ತಾಗಲ್ಲ. ಇದೆಲ್ಲ ವಿಜ್ಞಾನಕ್ಕೆ ಒಪ್ಪಿತವಾದ ತಥ್ಯ. ಅದೇ ರೀತಿ, ನಾನು ಭೂತಗುರುಡನಾಗಿರಬೇಕು. ಆದಕ್ಕೇ ಭೂತದ ಆಡುಂಬೋಲಗಳಲ್ಲಿ ಕೂಡ ನನಗೆ ಅವು ಕಾಣಿಸಿರಲಿಕ್ಕಿಲ್ಲ.

ಭೂತಗಳ ಅನುಭವವುಳ್ಳವರ ಸಾಕ್ಷ್ಯಗಳನ್ನು ಓರೆದುನೋಡಿ ನಾನು ಕೆಲ ಖಚಿತ ತೀರ್ಮಾನಗಳಿಗೆ ಬಂದಿದ್ದೇನೆ. ಬಗೆಬಗೆಯ ಭೂತಗಳು ಈ ಪ್ರಪಂಚದಲ್ಲಿ ಅವೆ ಅನ್ನೋದರಲ್ಲಿ (ನನಗೆ) ಏನೂ ಅನುಮಾನ ಉಳಿದಿಲ್ಲ. ಶಾಸ್ತ್ರೀಯ ಅಧ್ಯಯನಕ್ಕಾಗಿ ಅವುಗಳನ್ನು, ಭೂತ, ಪ್ರೇತ, ಪಿಶಾಚಿ, ಯಕ್ಷಿ, ಬೇತಾಳ, ರಾಕ್ಷಸ, ದೇವತೆ, ದೆವ್ವ ಮೊದಲಾಗಿ ವಿಂಗಡಿಸಬಹುದು. ಹೆಣ್ಣುಭೂತಗಳಿವೆ, ಗಂಡುಭೂತಗಳಿವೆ, ಕಪ್ಪುಭೂತಗಳಿವೆ, ಬಿಳೀಭೂತಗಳಿವೆ; ಉಪಕಾರಿ ಭೂತಗಳಿವೆ, ಕಿಡಿಗೇಡಿ ಭೂತಗಳಿವೆ; ಸೌಮ್ಯಭೂತಗಳಿವೆ, ಕ್ರೂರಭೂತಗಳಿವೆ. ಇರುಳಲ್ಲಿ ಹೊರಬೀಳೋ ಭೂತಗಳದ್ದೇ ಮೆಜಾರಿಟಿ ಆದರೂ ನಡುಹಗಲಲ್ಲಿ ಓಡಾಡುವ ಅಲ್ಪಸಂಖ್ಯಾಕ ಭೂತಗಳನ್ನು ನಾವು ಅಲಕ್ಷ್ಯ ಮಾಡೋ ಹಾಗಿಲ್ಲ. (ಅಲ್ಪಸಂಖ್ಯಾಕರಿಗೆ ಈ ಕಾಲದಲ್ಲಿ ಬಹಳ ಮಹತ್ವ ಬಂದಿದೆ ನೋಡಿ!) ನಸುಕಿನಲ್ಲಿ ಹೊರಬೀಳುವ ಭೂತಗಳ ಸುದ್ದಿ ನಾನು ಈ ವರೆಗೂ ಕೇಳಿಲ್ಲವಾದರೂ ಮುಸ್ಸಂಜೆಯಲ್ಲಿ ತಿರುಗಾಡುವವುಗಳ ಅಸ್ತಿತ್ವ ದೃಢಪಟ್ಟಿದೆ.

ನಾನು ತಿಳಿದುಕೊಂಡ ಪ್ರಕಾರ ಕೆಲವು ಭೂತಗಳು ಹುಟ್ಟಾಭೂತಗಳೇ ಆಗಿರುತ್ತವೆ. ನಿಜವಾದ ಅಥೆಂಟಿಕ್ ಭೂತಗಳು ಅಂದರೆ ಇವುಗಳೇ. ಕೆಲವು ನಿಮ್ಮ ನಮ್ಮ ಹಾಗೇ ಬದುಕಿದ್ದು, ಸತ್ತ ಮೇಲೆ ಭೂತಗಳಾಗುತ್ತವೆ. ಅವುಗಳನ್ನು ಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ದೆವ್ವ ಇತ್ಯಾದಿಯಾಗಿ ವರ್ಗೀಕರಿಸಬಹುದು. ಬೇತಾಳಗಳು ಹುಟ್ಟುಭೂತಗಳೋ ಸತ್ತಭೂತಗಳೋ ಇನ್ನೂ ಖಂಡಿತವಾಗಿಲ್ಲ. ಆದರೆ ವರದಿಗಳ ಮೇಲಿಂದ, ಅವುಗಳು ಹೆಣಗಳಲ್ಲಿ ಹೊಕ್ಕು ಅವುಗಳನ್ನು ನಡೆಸುತ್ತವೆಂತಲೂ ನೀವು ಭೂತಗಣ್ಣುಗಳಿಂದ ಸುಸಜ್ಜಿತರಾಗಿದ್ದರೆ ನಿಮಗೆ ಅವು ಸ್ಮಶಾನದಲ್ಲಿ ಮರದ ಟೊಂಗೆಗಳಿಂದ ತಲೆಕೆಳಗಾಗಿ ಜೋತಾಡುತ್ತ ಕಾಣಿಸಿಕೊಳ್ಳುತ್ತವೆ ಅಂತಲೂ ಹೇಳಬಹುದು. ಜಕಣಿಗಳು ಅನ್ನೋ ಇನ್ನೊಂದು ಉಪವರ್ಗ ದೇವತೆಗಳಿಗೂ ಮನುಷ್ಯರಿಗೂ ನಡುವೆ ನಿಲ್ಲುತ್ತದಂತೆ. ಇವಲ್ಲದೆ ಅಸ್ಸಾಮಿನಲ್ಲಿ ತೋಳಭೂತಗಳೂ ನಮ್ಮ ಪಶ್ಚಿಮ ಕರಾವಳಿಯಲ್ಲಿ ಹುಲಿಭೂತಗಳೂ ಇವೆ. ಸತ್ತಮೇಲೆ ಭೂತವಾದ ಒಂದು ರೈಲ್ವೆ ಎಂಜಿನ್ನಿನ ಸ್ವಾರಸ್ಯ ಪ್ರಕರಣ ವರದಿಯಾಗಿದೆ. ಅದು ತನ್ನ ಪ್ರತಿ ವರ್ಷಶ್ರಾದ್ಧದ ರಾತ್ರಿ ಹನ್ನೆರಡು ಗಂಟೆಗೆ ಸರಿಯಾಗಿ ತನಗೆ ಚಿರಪರಿಚಿತವಾದ ಒಂದು ರೈಲುಮಾರ್ಗದಲ್ಲಿ ಧಾವಿಸುತ್ತಿತ್ತು.

ಭೂತಗಳ ಬಗ್ಗೆ ನಾನು ಮುಂದೆ ಬರೆಯಲಿರುವ ಮಹಾಪ್ರಬಂಧದಲ್ಲಿ ಭೂತಗಳ ಕೂಲಂಕಷ ಚರ್ಚೆ ಮಾಡಲಿದ್ದೇನೆ. ಆದ್ದರಿಂದ ಇಲ್ಲಿ ವಿಷಯದ ಬೇರೆ ಬೇರೆ ಮುಖಗಳನ್ನು ವಿವರವಾಗಿ ಹಿಂಜುವ ಶ್ರಮ ತೆಗೆದುಕೊಳ್ಳಲ್ಲ. ಇಲ್ಲಿ ಎಲ್ಲಾ ವರ್ಗಗಳ ಭೂತಗಳನ್ನೂ ಕೈಕೊಳ್ಳೋದೂ ಇಲ್ಲ. ಅಖಿಲ ಕರ್ನಾಟಕದ ಭೂತಗಳನ್ನು ಕೂಡ ಪ್ರಸ್ತಾಪಿಸಿಲ್ಲ. ನಮ್ಮ ಕರಾವಳಿ ಜಿಲ್ಲೆಗಳ ಕೆಲ ಅಥೆಂಟಿಕ್ ಭೂತಗಳ ಕೈವಾಡಗಳನ್ನು ಮಾತ್ರ, ಸ್ಥಾಲೀಪುಲಾಕನ್ಯಾಯದಿಂದ ಚರ್ಚಿಸುತ್ತೇನೆ.

-೨-

ದಕ್ಷಿಣ ಕನ್ನಡದ ಕುರುಚಲು ಗಿಡ ಪೊದೆಗಳಿಂದ ಜಟಿಲವಾದ ಗುಡ್ಡಗಾಡುಗಳಲ್ಲಿ ಒಂದು ಪೊದೆ

ಲಾಂಗೂಲಾಚಾರ್ಯ



ಇದೆ. ಬಹುಶಃ ನಮ್ಮ ಸಸ್ಯಶಾಸ್ತ್ರಜ್ಞರ ದಾಖಲೆಗೆ ಅದು ಸಿಕ್ಕಿಲ್ಲ. ಅದಕ್ಕೆ ವಿಜ್ಞಾನಿ ಲಿನ್ನಿಯಸ್ಸನ ನಾಮಕರಣ ಪದ್ಧತಿಯಲ್ಲಿ ಹೆಸರೂ ದೊರೆತಿಲ್ಲ. ಆದರೆ ಅದು ಇದೆ ಎಂಬುದು ನಿಶ್ಚಿತ. ಯಾಕಂದರೆ, ಅದರ ಹೆಸರು ಮತ್ತು ಗುಣಧರ್ಮ ಸಕಲ ಜನರಿಗೆ ಗೊತ್ತಿದೆ. ರಾಜಾರಸ್ತೆಯನ್ನು ಬಿಟ್ಟು ಗುಡ್ಡಗಾಡಿನ ಒಳದಾರಿ ಹಿಡಿಯೋ ಜನ ಎಲ್ಲೆಲ್ಲಿಯೂ ಇದ್ದಾರಲ್ಲ. ಅಂಥವರು ಎಲ್ಲಿಯಾದರೂ ಈ ವಿಶಿಷ್ಟ ಪೊದೆಯನ್ನು ಮುಟ್ಟಿದರೆ ಸಾಕು.–ಅದರ ಹೆಸರೇ 'ಕೊಲೆಸೊಪ್ಪು' ಅಥವಾ 'ಭೂತಗುಲ್ಮ' ಅಂದಮೇಲೆ ಕೇಳೋದೇನು-ಒಳದಾರಿ ಹಿಡಿಯಬೇಕೆಂದವನು, ಈ ಸ್ಪರ್ಶದ ಮಹಿಮೆಯಿಂದಾಗಿ ಮುಂದಿನ ಕವಲುದಾರಿಯಲ್ಲಿ ತಪ್ಪು ಜಾಡು ಹಿಡಿಯುತ್ತಾನೆ. ಅಲ್ಲಿಂದ ಮುಂದೆ ಅವನು ಪ್ರತಿ ಕವಲಿನಲ್ಲಿ ತಪ್ಪು ದಾರಿಯನ್ನೇ ಹಿಡಿದು ಗುಡ್ಡ ಸುತ್ತುತ್ತಾನೆ; ಮತ್ತು ಮೈಲಾರಕ್ಕೆ ಎಂದೂ ಮುಟ್ಟಲ್ಲ. ಅವನಿಗೆ ಕಡೆಗೆ ಏನಾಗುತ್ತೆ ಅಂತ ಯಾರಿಗೂ ಸರಿಯಾಗಿ ತಿಳಿಯದು. ಯಾಕೆಂದರೆ ಅದನ್ನು ಮುಟ್ಟಿದ ಯಾವಾತನೂ ತನ್ನ ಕಥೆ ಹೇಳೋಕೆ ತಿರುಗಿ ಬಂದ ದಾಖಲೆ ಇಲ್ಲ. ದೈನಂದಿನ ಜೀವನದಲ್ಲಿ ಇದಕ್ಕೆ ಸುಮಾರಾಗಿ ಸಮಾನವಾದ ಒಂದು ಉದಾಹರಣೆ ಅಂತಂದರೆ, ಕೆಟ್ಟಗಳಿಗೇಲಿ ಸಿವಿಲ್ ವ್ಯಾಜ್ಯಕ್ಕೆ ಕೈಹಾಕಿ, ಕೋರ್ಟು ಕಚೇರಿಗಳ ಅರಣ್ಯದಲ್ಲಿ ದಾರಿಗೆಟ್ಟು ಸುತ್ತುವ ದುರ್ದೈವಿ ವ್ಯಕ್ತಿಗಳದ್ದು. ಈ ನಿಗೂಢ ಪೊದೆಯನ್ನು ಸಸ್ಯವರ್ಗದ ಭೂತ ಅಥವಾ ಭೂತವರ್ಗದ ಸಸ್ಯ ಅನ್ನಬಹುದು.

ಸಸ್ಯಶಾಸ್ತ್ರಜ್ಞರು ಈ ಅಪರೂಪ ಸಸ್ಯವನ್ನು ತ್ವರಿತದಿಂದ ಶೋಧಿಸಬೇಕು ಅಂತ ಇಲ್ಲಿ ನಾನು ಒತ್ತಾಯಪಡಿಸುತ್ತೇನೆ. ಈಚೆಗೆ ಕನ್ನಡ ಜಿಲ್ಲೆಗಳಲ್ಲಿ ಗುಡ್ಡಗಳನ್ನು ಕೆತ್ತಿ ಹೊಸಾಗಮೆ ಅಂದರೆ ಪ್ಲಾಂಟೇಶನ್ ಮತ್ತು ಪ್ಲಾಟುಗಳನ್ನು ಮಾಡೋ ಕಾರ್ಯಕ್ರಮಗಳು ವಿಸ್ತರಿಸುತ್ತಾ ಇವೆ. ಕೆಲವೇ ವರ್ಷಗಳಲ್ಲಿ ಭೂತಗುಲ್ಮಗಳು ಸಂಪೂರ್ಣ ನಾಶವಾಗಬಹುದು. ಅದಕ್ಕೆ ಮುಂಚಿತವಾಗಿಯೇ ವಿಜ್ಞಾನಿಗಳು ಕಾರ್ಯಪ್ರವೃತ್ತರಾಗಬೇಕು. ಅಕಸ್ಮಾತ್ತಾಗಿ ಈ ಸಸ್ಯವನ್ನು ಮುಟ್ಟಿದರೆ ಸಂಶೋಧಕರಿಗೆ ದಾರಿ ತಪ್ಪುವ ಅವಸ್ಥೆ ಬರೋ ಭಯ ಒಂದು ಇದೆ. ಅದಕ್ಕೆ ಪ್ರತಿ ಉಪಾಯ ಹುಡುಕೋದು ಮನುಷ್ಯ ಬುದ್ಧಿಗೆ ನಿಲುಕದ್ದೇನೂ ಅಲ್ಲ. ಶೋಧಕ್ಕೆ ಹೊರಡೋ ವಿಜ್ಞಾನಿ ಕಾಲಿಗೊಂದು ಬಲವಾದ ಮತ್ತು ಉದ್ದವಾದ ದಾರವನ್ನು ಕಟ್ಟಿಕೊಂಡು ಅದರ ಇನ್ನೊಂದು ತುದಿಯನ್ನು ಒಬ್ಬ ಸಹಕಾರಿಯ ಕೈಗೆ ಕೊಡಬೇಕು. ನಿರೀಕ್ಷಿಸಿದ ಸಮಯದೊಳಗೆ ವಿಜ್ಞಾನಿ ವಾಪಸಾಗದೇ ಹೋದರೆ ಆ ಸಹಕಾರಿ ಸೂತ್ರ ಚಾಲನೆಯಲ್ಲಿ ತೊಡಗಬೇಕು. ಈ ಉಪಾಯದಿಂದ ಕಳೆದು ಹೋದ ವಿಜ್ಞಾನಿಯನ್ನು ಎಳೆದು ತರೋದು ಸಾಧ್ಯ.

–೩–

ಕನ್ನಡ ಜಿಲ್ಲೆಯ ಒಂದು ಹಳೇ ಜನಪ್ರಿಯ ಭೂತದ ಹೆಸರು ಬಬ್ಬರ್ಯ, ಅವನ ಹೆಸರಿನಲ್ಲಿ ಉಡುಪಿಯಲ್ಲಿ ಒಂದು ಓಣಿ, ಒಂದು ದಿಬ್ಬ ಇರೋದರ ಮೇಲಿಂದಲೇ ಅವನ ಜನಪ್ರಿಯತೆ ಯಾವನೊಬ್ಬ ದೇಶಭಕ್ತನ ಜನಪ್ರಿಯತೆಗಿಂತ ಕಡಿಮೆ ಇಲ್ಲ ಅಂತ ನಿಮಗೆ ಮನವರಿಕೆಯಾಗಬೇಕು. ಅವನ ಗುಡಿಗಳು ಬೇರೆ ಊರುಗಳಲ್ಲಿಯೂ ಇವೆ. ಹೆಸರಿಂದಲೇ ಧ್ವನಿತವಾಗೋ ಹಾಗೆ, ಅವನು ಬಹಳ ಬೃಹದ್ ಗಾತ್ರದ ಭೂತ. ಅವನು ಅರಳೀಮರದಷ್ಟು ಎತ್ತರವಾಗಿದ್ದಾನೆ ಅಂತ ಅವನನ್ನು ಕಂಡವರು ಹೇಳುತ್ತಾರೆ. ಇದು ಸತ್ಯ ಇರಬೇಕು! ಅವನ ಗುಡೀಲಿರೋ ಅವನ ಮುಖಾನ ನಾನು ನೋಡಿದ್ದೇನೆ. ಅದರ ಗಾತ್ರದ ಮೇಲಿಂದ ಲೆಕ್ಕ ಹಾಕಿದರೆ, ಅವನು ಮರದುದ್ದ ಇರಬೇಕು. ಆದ್ದರಿಂದಲೇ ಕೊಬ್ಬಿದವರನ್ನ ಬಬ್ಬರ್ಯನ ಹಾಗೆ ಇದ್ದಾನೆ ಅನ್ನೋದು ರೂಢಿ. ಅವನು ತುಂಬಾ ಅಪಾಯಕರ ಭೂತವೂ ಹೌದು. ಮಧ್ಯಾಹ್ನ ಬಿಸಿಲಿಗಾಗಲೀ ಮಧ್ಯರಾತ್ರಿಯ ಕತ್ತಲಲ್ಲಿ ಆಗಲೀ ಅವನು ನಿಮ್ಮ ಮುಂದೆ ಧುತ್ತಂತ ನಿಂತು ಬಿಡಬಹುದು. (ಐಡೆಂಟಿಫಿಕೇಶನ್ ಬಗ್ಗೆ ಅವನ ಬಣ್ಣ ಬಿಳಿದು) ನೀವು ಅವನನ್ನು ನೋಡಿಯೇ ಜ್ವರ ಬಂದು...

ಆದರೆ ಅವನನ್ನು ಒಲಿಸಿಕೊಂಡರೆ ಅವನು ತೀರ ಅನಿಷ್ಟಭೂತವಲ್ಲ. ನೀವು ಬಬ್ಬರ್ಯನ 'ಕೋಲ'–ಅಂದರೆ ಒಂದು ತರದ ನೃತ್ಯಪೂಜೆ ಮಾಡಿಸಬಹುದು. ಕರಾವಳಿಯ ಅನೇಕ ಭೂತಗಳಿಗೆ ಇರೋ ಹಾಗೆ, ತುಳು ಭಾಷೆಯಲ್ಲಿ ಅವನ ಮಹಿಮೇನ ಕೊಂಡಾಡೋ 'ಪಾಡ್ದನ' ಇದೆ. ಅದನ್ನ ಅವನ ಪುರೋಹಿತರು ಹಾಡುತ್ತಾರೆ. ಅವನು ನಿಮ್ಮ ದನಕರುಗಳನ್ನ ರಕ್ಷಿಸೋಕೂ ಸಿದ್ಧನೇ. ಅದಕ್ಕೆ ನೀವು 'ಬಬ್ಬರ್ಯನ ಅಡ್ಡೆ' ಅನ್ನೋ ಒಂದು ತರಹದ ಕುಚ್ಚಿದ ಕಡಬು ಮಾಡಿಸಿ ಅವನಿಗೆ ಅರ್ಪಿಸಬೇಕು. ನೈವೇದ್ಯವಾದ ಒಂದು ಕಡುಬನ್ನು ಮೂರು ತುಂಡು ಮಾಡಿ ಮೂರು ದಿಕ್ಕುಗಳಿಗೆ ಒಗೆಯಬೇಕು ಇನ್ನೊಂದನ್ನ 'ಹೊರಗಿನವರಿಗೆ' ದಾನ ಮಾಡಬೇಕು. ಮತ್ತೊಂದನ್ನ ದನಕರುಗಳಿಗೆ ಕೊಡಬೇಕು. ಈ ಪ್ರಸಾದ ಭಕ್ಷಣೆ ಮಾಡಿದ ದನಕರುಗಳು ಹುಲಿಗಳಿಂದ ನಿರ್ಭಯ! ರೋಗಗಳಿಗೆ ಇಮ್ಯೂನ್; ಮತ್ತು ಸಂಜೆಯಾಗುತ್ತಲೇ ಚೆನ್ನಾಗಿ ಸಾಕಿದ ಗಂಡನ ಹಾಗೆ, ಅವುಗಳು ನೆಟ್ಟಗೆ ಮನೆಗೆ ಬಂದು, ಕೊಟ್ಟಿಗೇಲೀ ಸಗಣಿ ಹಾಕುತ್ತವೆ. ನನಗೆ ತಿಳಿದ ಮಟ್ಟಿಗೆ ಸಿಹಿ ತಿಂಡಿಗೆ ಬಾಯಿ ಚಪ್ಪರಿಸುವ ಭೂತ ಬಬ್ಬರ್ಯ ಒಬ್ಬನೇ. ಒಂದೇ ಕಷ್ಟ ಅಂದರೆ ಅವನ ಮಾಮೂಲು ಗೊತ್ತಾದ ಗಡುವಿಗೆ ಬಾರದೆ ಇದ್ದರೆ ನಿಮ್ಮ ದನಕರು ವಿಕ್ಷಿಪ್ತವಾಗಿ ವರ್ತಿಸೋಕೆ ತೊಡಗಬಹುದು, ಮಾಮೂಲು ಅಟ

ಹೋಕೆ ನಿಮಗೆ ಒಂದು ತಿಂಗಳ ಗ್ರೇಸ್ ಮಾತ್ರ ಇದೆ. ತಿಳಿಯುವದು

ಕಲ್ಲುಟಿಗ ಅಥವಾ ಕಲ್ಲುಕುಟಿಗ ಭೂತವಾಗೋಕೆ ಮುಂಚೆ ಶಿಲ್ಪಿಯಾಗಿದ್ದನಂತೆ. ಭೂತವಾದ ನಂತರ ಅವನು ಕಲ್ಲು ಕೆತ್ತೋದು ಬಿಟ್ಟು ಕಲ್ಲು ಒಗೆಯೋದು ಆರಂಭಮಾಡಿದ. ಅವನು ಹೆಚ್ಚು ಮಟ್ಟಿಗೆ ನಮ್ಮ ಶಾಲೆ ಕಾಲೇಜು ಹುಡುಗರ ಹಾಗೆ ಅಪಾಯಕರವಲ್ಲದ ಕಿಡಿಗೇಡಿತನದಿಂದಲೇ ತೃಪ್ತನಾಗುವ ತುಂಟ. ನಿಮ್ಮ ಮನೇ ಮೇಲೆ ಮಾತ್ರವಲ್ಲದೆ ಮನೆಯೊಳಗೂ ಅವನು ಕಲ್ಲು ಬೀರಬಹುದು. ನಿಜವಾಗಿ ಸಿಟ್ಟಿಗೆದ್ದಾಗ್ಗೆ ಅವನು ಪೆಟ್ಟಿಗೆಯೊಳಗಿನ ಬಟ್ಟೆ ಮೊದಲಾದ ಜ್ವಲನಶೀಲ ಪದಾರ್ಥಗಳನ್ನು ಸುಟ್ಟು ಹೊಗೆಯೆಬ್ಬಿಸಬಹುದು. ನಮ್ಮ ಯುವಜನರಿಗೂ ಕಲ್ಲುಕುಟಿಗನಿಗೂ ಒಂದು ವ್ಯತ್ಯಾಸ ಮಾತ್ರ ಇದೆ. ಕಲ್ಲುಕುಟಿಗ ಸಾರ್ವಜನಿಕ ಆಸ್ತಿಗಳ ಮೇಲೆ 'ಅತ್ಯಾಚಾರ' ಮಾಡಲ್ಲ. ಅವನದ್ದು ಖಾಸಗಿ ಸೇಡು. ನಿಮಗೆ ಉಪಟಳ ಕೊಡಬೇಕು ಅಂತ ಒಂದು ಸಲ ನಿಶ್ಚಯಿಸಿದ ಮೇಲೆ ಅವನು ಮಂತ್ರವಾದಿಗಳಿಗೆ ಸಹಿತ ಸುಲಭದಲ್ಲಿ ಮಣಿಯೋ ಗಿರಾಕಿ ಅಲ್ಲ. ನಾನು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಕೋರ್ಟಿನಲ್ಲಿ ಗ್ರಾಹ್ಯವಾಗಬಹುದಾದಷ್ಟು ಬಲವಾದ ಸಾಕ್ಷ್ಯಗಳ ಆಧಾರದಿಂದ ಒಬ್ಬಾನೊಬ್ಬ ಗೃಹಸ್ಥರ ಮನೇಲಿ ಕಲ್ಲುಕುಟಿಗ ನಡಸಿದ ಉಪದ್ರವಗಳನು ದೃಢಪಡಿಸಿಕೊಂಡಿದ್ದೇವೆ. ಅವರ ಮನೇಲಿ ದಿನದ ಯಾವ ಸಮಯದಲ್ಲೇ ಆದರೂ ಕಲ್ಲುಕುಟಿಗನ ಶಿಲಾವೃಷ್ಟಿ ಆಗುತ್ತಿತ್ತು. ಮಂತ್ರವಾದಿಗಳ ಆಶ್ರಯ ಪಡೆದ ಕೂಡಲೆ ಅವನು ಕಲ್ಮಳೆಯಿಂದ ಒಂದು ಹೆಜ್ಜೆ ಮುಂದೆ ಹೋಗಿ ಒಲೆಯಲ್ಲಿ ಹೊರತು ಮತ್ತೆಲ್ಲ ಕಡೆ ಬೆಂಕಿ ಎಬ್ಬಿಸತೊಡಗಿದ, ಒಲೆಯಲ್ಲಿಟ್ಟ ಪಾತ್ರೆ ಪರಡಿ ನೋಡನೋಡ್ತಾ ಉರುಳಿ ಬೀಳೋದು ಪ್ರಾರಂಭವಾಯಿತು. ಕೆಲ ಪದಾರ್ಥಗಳು ಇದ್ದಕ್ಕಿದ್ದ ಹಾಗೆ ಮಂಗಮಾಯವಾದವು. ಕಟ್ಟಕಡೆಗೆ ಆ ಮಹನೀಯರು ಕಲ್ಲುಕುಟಿಗನಿಗೆ ಒಂದು ಗುಡಿ ಕಟ್ಟಿಸಿ ಪ್ರಸಂಗದಿಂದ ಪಾರಾದರು. ಈ ಗುಡಿಯಲ್ಲಿ ಈಗ ಭರ್ಜರಿ ಭಕ್ತರೂ ಅವರ ಅಂಗಡಿಯಲ್ಲಿ ಅಷ್ಟೇ ಭರ್ಜರಿ ಗಿರಾಕಿಗಳೂ ತುಂಬಿರುತ್ತಾರೆ. ಈ ಗುಡಿ ಈಗಲೂ ಇದೆ.

ಕಲ್ಲುಕುಟಿಗನ್ನ ಭಜನೆಮಾಡಿ ಒಲಿಸಿಕೊಳ್ಳಬಹುದು. ಅವನೊಮ್ಮೆ ವಶವಾದರೆ ನೀವು ಯಾವುದೇ ಎಮರ್ಜನ್ಸಿಯನ್ನು ಲೀಲಾಜಾಲವಾಗಿ ಎದುರಿಸಬಲ್ಲಿರಿ. ಕಲ್ಲುಕುಟಿಗನ ಭಜನೆ ಮಾಡಿದವರೊಬ್ಬರ ಸಮಾಚಾರ ಹೇಳುತ್ತೇನೆ. ಒಂದು ದಿನ ರಾತ್ರೀಲಿ ಅವರಲ್ಲಿಗೆ ಅಪರೂಪದ ನಂಟರು ಬಂದರು. ಅವರು ಬೆಳಗೇನೆ ಹೊರಡುವವರಿದ್ದರು. ಅವರಿಗೆ ಊಟ ಮಾಡದಿದ್ದರೆ ಇವರ ಆತ್ಮಗೌರವ ಉಳಿಯೋ ಹಾಗಿದ್ದಿಲ್ಲ. ಆದರೆ ಮನೇಲಿ ತತ್‌ಕ್ಷಣಕ್ಕೆ ಆಗಬಹುದಾದ ಯಾವ ಭಕ್ಷಕ್ಕೂ ಸಾಮಗ್ರಿ ಇದ್ದಿಲ್ಲ. ಅವರು ಅಂಜಿದರೆ? ಅಳುಕಿದರೆ? ಇಲ್ಲ, ಕಲ್ಲುಕುಟಿಗನ್ನ ನೆನೆದರು. ಮರುಕ್ಷಣದಲ್ಲಿ ಅವರ ಅಡಿಗೇಮನೇಲಿ ಬೇಕೆಂಬಷ್ಟು ತಾಜಾ ಶಾವಿಗೆ ಬಂದು ಕೂತಿತ್ತು, ಮರ್ಯಾದೆ ಉಳಿಸಿದ ಕಲ್ಲುಕುಟಿಗ. ಅದೇ ಹಳ್ಳಿಯ ಇನ್ನೊಂದು ಮನೇಲಿ ಮುನ್ನಾರಾತ್ರಿ ಮಾಡಿಟ್ಟಿದ್ದ ಶಾವಿಗೆ ನೋಡುತ್ತಿದ್ದ ಹಾಗೆ ಮಾಯವಾಯಿತು ಅಂತ ಹಾಹಾಕಾರ ಮರುದಿನ ಊರಲ್ಲಿ ಹಬ್ಬಿತು. ಇದೇ ರೀತಿ ಅವರು ತುರ್ತು ಬಂದಾಗ ಸೀರೆ ಕುಪ್ಪಸ, ಕೈಗಡಿಯಾರ ಅಥವಾ ಮತ್ತೇನನ್ನು ಬೇಕಾದರೂ ತರಿಸಬಲ್ಲವರಾಗಿದ್ದರಂತೆ. ಪುಣ್ಯಕ್ಕೆ ಬೇರೊಬ್ಬರ ಹೆಂಡತಿಯ ಮೇಲೆ ಆ ಭಜಕೋತ್ತಮರಿಗೆ ಮನಸ್ಸಾಗಲಿಲ್ಲ. ಅವರ ಹೆಂಡತಿಗೆ ಅವರೂ ಅವರ ಕಲ್ಲುಕುಟಿಗನೂ ಸೇರಿಯೇ ಹೆದರಿ ನಡುಗುತ್ತಿದ್ದರು. ಅಂದರೆ ಕಾರಣ ನಿಮಗೆ ಅರ್ಥವಾದೀತು.

-೪-

ದನಕರುಗಳಿಗೆ ತೊಂದರೆ ಕೊಡೋ ಹುಲಿ-ಚೌಡಿ ಮೊದಲಾದ ಇತರ ಭೂತಗಳ ಬಗ್ಗೆ ಹೆಚ್ಚೇನೂ ಹೇಳೋಕೆ ಇಲ್ಲಿ ಪುರುಸೊತ್ತು ಇಲ್ಲ. ಇನ್ನು ನಾನು ಗಂಡು ಭೂತಗಳಿಂದ ಹೆಣ್ಣು ಭೂತಗಳ ಕಡೆ ತಿರುಗುತ್ತೇನೆ. ಮನುಷ್ಯರಲ್ಲಿ ಹೇಗೋ ಹಾಗೆ ಭೂತಗಳಲ್ಲಿಯೂ ಪುಲ್ಲಿಂಗಕ್ಕಿಂತ ಸ್ತ್ರೀಲಿಂಗವೇ ಕುತೂಹಲಕರವೂ ಭಯಂಕರವೂ ಆಗಿದೆ. ಯಕ್ಷಿಣಿ ಅಥವಾ ಜಕಣಿಗಳನ್ನೇ ತೆಗೆದುಕೊಳ್ಳಿ, ಅವು ಹೆಚ್ಚಾಗಿ ತಾಳಿಮರಗಳನ್ನು ಆಶ್ರಯಿಸಿರುತ್ತವೆ. ಅವುಗಳ ಪ್ರತಾಪವನ್ನು ಕುರಿತು ಒಂದು ಸತ್ಯಕಥೆ ನಿಮಗೆ ಹೇಳುತ್ತೇನೆ..

ಈ ಶತಮಾನದ ಪ್ರಾರಂಭದಲ್ಲಿ ಒಂದು ದಿನ ಇಬ್ಬರು ತರುಣ ಬ್ರಾಹ್ಮಣರು ಎಲ್ಲಿಯೋ ಭೋಜನ ಹೊಡೆದು ಇಳಿಹೊತ್ತಿನಲ್ಲಿ ಕೆಲ ಮೈಲು ದೂರದ ತಮ್ಮ ಊರಿಗೆ ಹೊರಟರು. ಒಳದಾರೀಲಿ ಹೋದರೆ ಬೇಗನೇ ಮನೆ ಸೇರಬಹುದು ಅಂತ ಅವರು ಗುಡ್ಡದ ಕಾಲುದಾರಿ ಹಿಡಿದರು. ಅವರು ಎಲ್ಲಿ ಕೊಲೆಸೊಪ್ಪು ತಗಲಿಸಿಕೊಂಡರೋ, ಗೊತ್ತಿಲ್ಲ. ಗುಡ್ಡ ಸುತ್ತಿದರು, ಬಯಲುಗಳಿಗೆ ಇಳಿದರು, ಭತ್ತದ ಗದ್ದೆಗಳ ಅಂಚುಗುಂಟ ಸಾಗಿ ತಿರುಗಿ ಗುಡ್ಡ ಹತ್ತಿ ಸುತ್ತಿದರು. ಕತ್ತಲಾಯಿತು. ಚುಕ್ಕಿಗಳು ಮಿನುಗಿದವು. ನಕ್ಷತ್ರ ನೋಡಿ ನಡೆದರು. ನಿರ್ಜನ ಗುಡ್ಡಗಳಲ್ಲಿ ಕಂಡಕಂಡ ಕಾಲುದಾರಿಯಲ್ಲಿ ಕಾಲು ಹಾಕಿದರು. ಎಲ್ಲಿಯೂ ಮನೆಮಾರುಗಳ ಲಕ್ಷಣವೇ ಇಲ್ಲ. ರಾತ್ರಿ ಹತ್ತರ ಸುಮಾರಿಗೆ ಸ್ವಲ್ಪ ದೂರದಲ್ಲಿ ಹತ್ತಿರ ಹತ್ತಿರವಾಗಿ ಎರಡು ಮಿಣುಕು ದೀಪಗಳು ಕಾಣಿಸಿದವು. ಮನೆಗಳೇ ಇರಬೇಕು ಅಂತ ಆ ದಿಕ್ಕಿಗೆ ಸಾಗಿದರು. ನಿಜಕ್ಕೂ ಮನೆಗಳು. ರಾತ್ರೀನ್ನ ಅಲ್ಲಿ ಕಳೆದು ನಸುಕಿನಲ್ಲಿ ತಮ್ಮೂರ ಕಡೆ ಹೋದರಾಯಿತು ಅಂದುಕೊಂಡರು.

ಎರಡೂ ಮನೆಗಳಲ್ಲಿ ಬಾಗಿಲಿಗೆ ಒರಗಿ ಒಬ್ಬೊಬ್ಬ ತರುಣಿ ನಿಂತಿದ್ದಳು. ಒಬ್ಬ ಈ ಮನೆಗೆ ಒಬ್ಬ ಆ ಮನೆಗೆ ಹೋಗಿ ಯಜಮಾನರು ಇದ್ದಾರೆಯೋ ಅಂತ ವಿಚಾರಿಸಿದರು. ಇಬ್ಬರೂ, "ಇಲ್ಲ, ಇಲ್ಲೇ ಎಲ್ಲೋ ಹೋಗಿದ್ದಾರೆ. ಸ್ವಲ್ಪ ತಡೆದು ಬಂದಾರು. ಬನ್ನಿ. ಏನು ಕೆಲಸ?" ಅಂದರು. ಬ್ರಾಹ್ಮಣರು ತಮ್ಮ ಕಷ್ಟ ಹೇಳಿ, ಗಂಡಸರಿಲ್ಲ ಅಂದ ಮೇಲೆ ಇನ್ನೆಲ್ಲಾದರೂ ಆಶ್ರಯ ಹುಡುಕಬೇಕಾಯಿತು ಅಂತ ಬೆನ್ನು ತಿರುಗಿಸೋದರೊಳಗೆ ಆ ಹೆಂಗಸರು, "ಛೇ ಛೇ, ಈ ರಾತ್ರಿ ಇನ್ನೆಲ್ಲಿ ಹೋಗುತ್ತೀರಿ, ಪಾಪ! ಹತ್ತಿರ ಎಲ್ಲಿಯೂ ಬೇರೆ ಮನೆ ಇಲ್ಲ, ನಮ್ಮವರು ಬಂದೇ ಬರುತ್ತಾರೆ. ನೀವು ಇಲ್ಲೇ ಚಾವಡೀಲಿ ಮಲಗಿಕೊಳ್ಳಿ, ಚಾಪೆ ಕೊಡುತ್ತೇವೆ. ಇನ್ನೂ ಸ್ವಲ್ಪ ದಾರಿ ನೋಡಿ, ಬಾರದಿದ್ದರೆ ನಾವೂ ಒಳಬಾಗಿಲು ಹಾಕಿಕೊಂಡು ಮಲಗುತ್ತೇವೆ" ಅಂತ ಮಧುರವಾದ ನಗುವಿನೊಡನೆ ಹೇಳಿದ ಮೇಲೆ ಅವರಿಗೆ ಜೀವದಲ್ಲಿ ಜೀವ ಬಂತು. ಒಬ್ಬನಂತೂ ಮನಸ್ಸಿನಲ್ಲೇ ಮುಂಡಿಗೆ ತಿಂದ.

ಇನ್ನೊಬ್ಬ ಸ್ವಲ್ಪ ಕಮ್ಮಿ ರಸಿಕ, ಹೆಚ್ಚು ನೇಮನಿಷ್ಠೆಯವ. ಅವನು ಕೈಕಾಲು ತೊಳೆದುಕೊಂಡು, ತನ್ನ ಗಂಟಿನಲ್ಲಿದ್ದ ಒಂದು ಪುಸ್ತಕಾನ ಬಿಚ್ಚಿ ದೀಪದ ಮುಂದೆ ಕೂತ.

"ಏನು ಅದು?" ಮನೆಯವಳು ಕೇಳಿದಳು.

"ದೇವೀಮಹಾತ್ಮೆ. ನಿತ್ಯ ಇದರ ಪಾರಾಯಣ ಮಾಡದೆ ನಾನು ಮಲಗಲ್ಲ."

ತರುಣಿಯ ಮುಖ ಸ್ವಲ್ಪ ಕಪ್ಪಿಟ್ಟಂತೆ ಅವನಿಗೆ ತೋರಿತು. ಏನೋ ಅಂದುಕೊಂಡು ಅವನು, "ಓಂ ಅಸ್ಯ ಶ್ರೀ ಚಂಡಿಕಾ ಸಪ್ತಶತೀ ಸ್ತೋತ್ರ ಮಹಾಮಂತ್ರಸ್ಯ ಮಾರ್ಕಂಡೇಯ ಋಷಿಃ" ಅಂತ ಪ್ರಾರಂಭಿಸುತ್ತಲೆ ಅವಳು ಬೆಚ್ಚಿ ಸ್ವಲ್ಪ ಹಿಂದೆ ಸರಿದ ಹಾಗೆ ಅನಿಸಿತು. ಹಚ್ಚಿಕೊಳ್ಳದೆ ಅವ ಪಾರಾಯಣ ಮುಂದುವರಿಸಿದ. ಒಂದಧ್ಯಾಯ ಮುಗಿಯುವಷ್ಟರಲ್ಲಿ ಅವಳು ಬಂದು, "ಇನ್ನು ಮುಗಿಸಿ ರಾತ್ರಿ ಬಹಳವಾಯಿತು ಮಲಕ್ಕೊಳ್ಳಿ. ಬೆಳಗ್ಗೆ ಬೇಗ ಏಳಬೇಕಲ್ಲವೆ?" ಅಂದಳು.

"ಇಲ್ಲಮ್ಮಾ, ಇದನ್ನು ಮುಗಿಸದೆ ನಾನು ಮಲಗೋ ಹಾಗಿಲ್ಲ. ನೀವು ಬೇಕಾದರೆ ಕದ ಇಕ್ಕಿಕೊಂಡು ಮಲಗಿಬಿಡಿ." ಅಂದ ಬ್ರಾಹ್ಮಣ.

ಅವಳ ಗಂಡ ಬರಲೇ ಇಲ್ಲ. ಎರಡನೇ ಅಧ್ಯಾಯ ಮುಗಿಯೋದರಲ್ಲಿ ಅವಳು ಬಂದು ಮತ್ತೆ "ಮಲಕ್ಕೊಳ್ಳಿ" ಅಂತ ಒತ್ತಾಯ ಮಾಡಿದಳು. ಅವಳ ಮುಖದಲ್ಲಿ ಅಸಹನೆ, ಕಣ್ಣುಗಳಲ್ಲಿ ಹಸಿವು ಕಾಣಲಿಲ್ಲವೇ ಅಂದುಕೊಂಡು ಬ್ರಾಹ್ಮಣ ಓದು ಮುಂದುವರಿಸಿದ. ಅವಳು ಪದೇ ಪದೇ ಬಂದು ಹೆಚ್ಚು ಹೆಚ್ಚು ಕೋಪದಿಂದ, "ಏನು ಇನ್ನೂ ಮಲಗಲ್ಲವೇ ? ಹೊತ್ತು ಗಾಟವಾಗಿ ಹೋಯಿತಲ್ಲ. ನಿಮ್ಮ ಮಂತ್ರದ ಸದ್ದಿನಲ್ಲಿ ನನಗೂ ನಿದ್ದೆ ಬರಲ್ಲ. ಏಳಿ ಸಾಕು," ಅಂತ ದಬಾಯಿಸುತ್ತಿದ್ದಳು. ಬ್ರಾಹ್ಮಣನಿಗೆ ಸಂಶಯ ಬಲವಾಯಿತು. ಅವನು ಹೆಚ್ಚು ಸಾವಕಾಶವಾಗಿ ಹೆಚ್ಚು ಗಟ್ಟಿಯಾಗಿ ಪಠನೆ ಮುಂದುವರಿಸಿದ. "ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಸಂಜ್ಞಿತಾ", ಎಂಬಲ್ಲಿಗೆ ಬರುವಷ್ಟರಲ್ಲಿ ಅವಳು ಗಡುಸಾಗಿ "ಏನು ನೀವು ಪುಸ್ತಕ ಕಟ್ಟಿಟ್ಟು ದೀಪ ನಂದಿಸಿ ಮಲಗುತೀರೋ ನಾನೇ ಊದಿ ನಂದಿಸಬೇಕೋ?" ಅಂದಳು. ಅವನು, "ಹೌದಾ? ನೋಡುವಾ!" ಅಂತ ಪುಸ್ತಕದ ರೇಶ್ಮೆ ದಾರವನ್ನು ಒಂದು ಹುದೀನ ಕಾಲು ದೀಪದ ಕಾಲಿಗೆ ಕಟ್ಟಿ ತನ್ನ ಭಯವನ್ನು ಕಡಮೆ ಮಾಡಿಕೊಳ್ಳಲಿಕ್ಕೆ ಮತ್ತಷ್ಟು ಗಟ್ಟಿಯಾಗಿ ಪಾರಾಯಣ ಸಾಗಿಸಿದ. ಅವಳು ಹಿಂದಿನಿಂದ ಹಲ್ಲು ಮಸೆಯೋದು ಕೇಳಿಸುತ್ತಿತ್ತು, ಇವನ ಧೈರ್ಯ ಬೆಳೆಯುತ್ತಿತ್ತು.

ಅವನು ಕೊನೇ ಅಧ್ಯಾಯದ ಮಧ್ಯದಲ್ಲಿದ್ದಾಗ

ಕೋಳಿ ಕೂಗಿದ್ದು ಕೇಳಿಸಿತು. ತತ್‌ಕ್ಷಣ ಮನೆ, ದೀಪ, ತರುಣಿ, ಎಲ್ಲವೂ ಅಂತರ್ಧಾನ ಹೊಂದಿದವು. ನೋಡುತ್ತಾನೆ, ತಾನು ಒಂದು ತಾಳೀಮರದ ತುದಿಯಲ್ಲಿದ್ದಾನೆ. ಸಮೀಪದಲ್ಲೇ ಇನ್ನೊಂದು ತಾಳೀಮರ ಇದೆ. ಮರದ ಬುಡದಲ್ಲಿ ಮನುಷ್ಯನ ಹಸಿ ಎಲುಬುಗಳ ಒಂದು ರಾಶಿ. ರಸಿಕಮಿತ್ರನ ಸುಳಿವಿಲ್ಲ.

ಯಕ್ಷಿಣೀ ಕೈಯಿಂದ ಪಾರಾಗಿ ಬಂದ ಈ ಏಕಮಾತ್ರ ವ್ಯಕ್ತಿಯನ್ನು ಪ್ರತ್ಯಕ್ಷ ಕಾಣಬೇಕು ಅಂತ ನಾನು ಅವನ ಮನೆ ಹುಡುಕಿಕೊಂಡು ಹೋದಾಗ ಅವನು ತನ್ನ ಎಪ್ಪತ್ತನೇ ವಯಸ್ಸಿನಲ್ಲಿ ಮುಂಚಿನ ದಿನವೇ ತೀರಿಕೊಂಡದ್ದು ತಿಳಿಯಿತು. ಆದರೆ ಇತರರಿಗೆ ಅವನು ಹೇಳಿದ್ದ ವಿವರಗಳನ್ನ ಕಲೆ ಹಾಕಿ, ತಾಳೆ ನೋಡಿ, ಯಕ್ಷಿಣಿಗಳ ಕಾರ್ಯವಿಧಾನ ಅಥವಾ 'ಮೋಡಸ್ ಆಪರೆಂಡಿ'ಯ ಮಾಹಿತಿ ಕೊಟ್ಟಿದ್ದೇನೆ. ರಾತ್ರಿ ಗುಡ್ಡಗಳಲ್ಲಿ ದೀಪಗೀಪ ಕಾಣಿಸಿದರೆ ಸ್ವಲ್ಪ ಎಚ್ಚರ ಇರಲಿ.

ನಾನು ಸಂಶೋಧನೆ ಮಾಡಿದ ಇನ್ನೊಂದು ಹೆಣ್ಣು ಭೂತದ ಹೆಸರು ಕುಡುಪಾಲ್ ಭೂತ ಅಂತ. ಪ್ರತ್ಯಕ್ಷದರ್ಶಿಗಳಿಂದ ನಾನು ಸಂಗ್ರಹಿಸಿದ ಮಾಹಿತಿ ಪ್ರಕಾರ, ಕುಡುಪಾಲ್ ಭೂತಕ್ಕೆ ಹುಬ್ಬುಗಳವರೆಗೂ ತಲೆಗೂದಲು ಇದೆ. ಮತ್ತು ಅದನ್ನು ಕೆದರಿಕೊಂಡೇ ಅವಳು ತಿರುಗುತ್ತಾಳೆ. ಇನ್ನುಳಿದ ಅಂಶಗಳಲ್ಲಿ ಅವಳು ಬಲು ಮಾಟ ಮೈಕಟ್ಟಿನ ಭೂತ. ಬೇಕಾದಾಗ ಅವಳು ತುಂಬಾ ವಯ್ಯಾರಿಯೂ ಆಗಬಲ್ಲಳು. ಕಾರಿರುಳಲ್ಲಿ ನೀವು ಒಬ್ಬರೇ ಹೊರಟಿದ್ದರೆ ಅವಳು ನಿಮ್ಮ ಹಿಂದೆ ಹಿಂದೆ ಬರತೊಡಗಬಹುದು; ಮತ್ತು ನೀವು ಮಲ್ಲಿಗೆ ಹೂವಿನ ವಾಸನೆಯಿಂದ ಸೆಳೆಯಲ್ಪಟ್ಟವರಾಗಿ ಹಿಂತಿರುಗಿ ನೋಡಿದರೆ ಅವಳು, "ಸ್ವಲ್ಪ ಸುಣ್ಣ ಕೊಡುತ್ತೀರಾ, ವೀಳ್ಯಕ್ಕೆ" ಅಂತ ಕೇಳುತ್ತಾಳೆ. ನೀವು ತರುಣರೂ ರಸಿಕಪ್ರವೃತ್ತಿಯವರೂ ಆಗಿದ್ದರೆ, ಮತ್ತು ಎಲೆ ಅಡಿಕೆ ಚಂಚಿ ಇಟ್ಟವರಾಗಿದ್ದರೆ, ಇಂಥ ಪ್ರಸಂಗದಲ್ಲಿ ಏನು ಮಾಡುವಿರೆಂಬುದು ನಿಮಗೆ ಚೆನ್ನಾಗಿ ಗೊತ್ತಿದೆ. ಅದೇ ನಿಮ್ಮ ಕೊನೆ ಅಂತ ನಿಮ್ಮನ್ನು ಎಚ್ಚರಿಸುತ್ತೇನೆ. ಅವಳು ನಿಮ್ಮ ಕೈ ಹಿಡಿಯುತ್ತಾಳೆ ಮತ್ತು ತನ್ನ ಪತಿರಾಯನಾದ ಬಬ್ಬರ್ಯನ ಕಡೆ ನಿಮ್ಮನ್ನು ಎಳೆದೊಯ್ಯುತ್ತಾಳೆ. ಭೂತಗಳಿಗೂ ಸಂಸಾರ ಇದೆ ಅನ್ನೋದು ಸ್ವಾರಸ್ಯದ ವಿಷಯ. ಅಸ್ಸಾಂ ರಾಜ್ಯದ ಕೆಲ ಬುಡಕಟ್ಟಿನ ಜನಾಂಗಗಳಲ್ಲಿ ಹೆಂಡಂದಿರನ್ನು ಮೈಮುರಿ ದುಡಿಸಿ ಗಂಡಂದಿರು ಬೀಡಿ ಸೇದುತ್ತ ಕಾಲ ಕಳೆಯುತ್ತಾರಂತೆ. ಕುಡುಪಾಲ್ ಭೂತ ಜಾತಿ ಅಸ್ಸಾಮಿನಿಂದ ಯಾವುದಾದರೂ ಹಡಗಿನಲ್ಲಿ ಪಶ್ಚಿಮ ಕರಾವಳಿಗೆ ವಲಸೆ ಬಂದಿದ್ದರೂ ಇರಬಹುದು.

ಅಕಸ್ಮಾತ್ ಕುಡುಪಾಲ್ ಭೂತ ನಿಮ್ಮ ಬೆನ್ನು ಬಿದ್ದರೆ ನೀವು ಏನು ಮಾಡಬೇಕು? ನಾಚಿಗೆಗೀಚಿಗೆ ಕಳೆದೊಗೆದಾಚೆಗೆ ಬೀಸಾಗಿ ನಿಮ್ಮ ಅಂಡರ್‌ವೇರ್ ಸಹಿತ ಸಮಸ್ತ ವಸ್ತ್ರಗಳನ್ನು ಕಳಚಿ ತಲೆಯ ಮೇಲಿರಿಸಿಕೊಂಡು, ಹಿಂತಿರುಗಿ ನೋಡದೆ ಓಡಬೇಕು. ಹೆಣ್ಣುಭೂತವಾಗಿರೋ ಕಾರಣ, ಕುಡುಪಾಲವ್ವನಿಗೆ ನಿಮ್ಮನ್ನ ನಗ್ನಾವಸ್ಥೇಲಿ ಹಿಡಿಯೋಕೆ ನಾಚಿಕೆಯಾಗುತ್ತೆ. ಭೂತಗಳು ಕ್ರೂರವಾಗಿರಬಹುದು; ಆದರೆ ಅಸಂಸ್ಕೃತಗಳಲ್ಲ. ಕುಡುಪಾಲ್‌ಭೂತ ನಿಮ್ಮನ್ನು ಬೆನ್ನಟ್ಟಬಹುದು; ಆದರೆ ಮುಟ್ಟಲಾರಳು. ನೀವು ಮನೆ ಸೇರಿದ ಮೇಲೆ ಅವಳು ನಿಮ್ಮ ಆಸೆ ಬಿಟ್ಟು ಹೊರಟುಹೋಗುವಳು.

ಬಾಪೂಜಿ ಹೇಳಿದ್ದು



ಬಾಪೂಜಿ ಹೇಳಿ ಬಿಟ್ಟರು ಸ್ವಲ್ಪ ನಕ್ಕು
ಎಲ್ಲರೂ ಹೇಳುವರು: ಇದು ನಮ್ಮ ಹಕ್ಕು
ಮರೆತು ಬಿಟ್ಟದ್ದಾರೆ ತಮ್ಮ ಕರ್ತವ್ಯ.
ಈಗಂತು ಅತಿ ಮುಖ್ಯವಾದದ್ದು ದ್ರವ್ಯ.

-ದಿನಕರ ದೇಸಾಯಿ


ನೀವು ಎಂಟೆದೆಯ ಬಂಟರಾಗಿದ್ದರೆ ಈ ಭೂತವನ್ನು ನಿಮ್ಮ ಅತ್ಯಂತ ವಿಧೇಯ ಗುಲಾಮಳಾಗಿ ಮಾಡಿಕೊಳ್ಳಬಲ್ಲಿರಿ. ಅವಳು ಸುಣ್ಣ ಕೇಳುತ್ತಲೇ ಮೊದಲು ನೀವು ಬಟ್ಟೆ ಕಳಚಿ ಒಗೆದವರೇ ಗಕ್ಕನೆ ಹಿಂತಿರುಗಬೇಕು. ಕಣ್ಮುಚ್ಚಿ ಕಣ್ಣು ತೆರೆಯೋದರೊಳಗೆ ಅವಳ ಕೂದಲಿಗೆ ಕೈ ಹಾಕಬೇಕು. ಕಾಸು ಹಿಡಿದ ಜಿಪುಣನದರಷ್ಟೇ ಬಿಗಿಮುಷ್ಟಿಯಿಂದ ಅವಳ ಕೂದಲನ್ನು ಹಿಡಿದು ಕೊಳ್ಳಬೇಕು. ಮನುಷ್ಯರ ಹಾಗೇ ಭೂತಗಳಿಗೆ ಕೆಲ ಮರ್ಮಸ್ಥಾನಗಳಿವೆ. ತಲೆಗೂದಲು ಹಿಡಿದೆಳೆದರೆ ಈ ಭೂತಕ್ಕೆ ಪ್ರಾಣಾಂತಿಕ ವೇದನೆ. ಅವಳು ಕೂಗುತ್ತಾಳೆ; ನಿಮ್ಮನ್ನು ದಬಾಯಿಸೋಕೆ ನೋಡುತ್ತಾಳೆ; ನಿಮ್ಮ ಸಮೇತ ಆಕಾಶಕ್ಕೆ ನೆಗೆಯುತ್ತಾಳೆ. ನೀವು ಕೈ ಸಡಿಲಿಸಬಾರದು. ಆಮೇಲೆ ತನ್ನ ಮಧುರ ಕಂಠದಿಂದ ಅಂಗಲಾಚುತ್ತಾಳೆ. ಅಳುತ್ತಾಳೆ. ನೀವೇನಾದರೂ ಸ್ತ್ರೀದಾಕ್ಷಿಣ್ಯಕ್ಕೆ ಬಿದ್ದಿರೋ, ಕೆಟ್ಟಿರಿ. ನೀವು ಹಿಡಿದಪಟ್ಟು ಅಕ್ಷರಶಃ ಬಿಡದೇ ಹೋದರೆ, ಅವಳು ನೋವು ತಾಳಲಾರದೆ ನಿಮಗೆ ಒಂದೆರಡು ಕೂದಲನ್ನು ಕಿತ್ತುಕೊಳ್ಳಕ್ಕೆ ಬಿಟ್ಟು ನಿಮ್ಮ ಕೈಯಿಂದ ಪಾರಾಗುತ್ತಾಳೆ. ಆ ಕೂದಲನ್ನು ನೀವು ಭದ್ರವಾಗಿ ಇಟ್ಟುಕೊಳ್ಳಿ. ಅಂದಿನಿಂದ ಅವಳು ನಿಮ್ಮ ಖರ್ಚಿಲ್ಲದ ದಾಸಿ.

ಹೀಗೆ ಕುಡುಪಾಲವ್ವನನ್ನ ವಶಮಾಡಿಕೊಂಡ ಭಟ್ಟರೊಬ್ಬರ ಸುದ್ದಿಯನ್ನು ನಾನು ಕೇಳಿದೆ. ಅವರು ಅವಳಿಂದ ಗದ್ದೆ ಕೆಲಸ ಮಾಡಿಸುತ್ತಿದ್ದರು. ಗೊಬ್ಬರ ಹೊರಿಸುತ್ತಿದ್ದರು. ಕಳೆ ಕೀಳಿಸುತ್ತಿದ್ದರು. ನಟ್ಟಿ ವೇಳೆಯಲ್ಲಿ ಸಂಜೆ ಹೊತ್ತಿಗೆ ಒಂದು ರಾಶಿ ಬತ್ತದ ಅಗೆಗಳನ್ನು ಗದ್ದೇ ಅಂಚಿನಲ್ಲಿ ಹಾಕಿಸಿ ಬಿಟ್ಟು, ಮೂದರಿಗಾಗಿ ಒಟ್ಟು ಅಗೆಯನ್ನ ಗದ್ದೇಲಿ ನಟ್ಟು ಹೊರಟು ಹೋಗುತ್ತಿದ್ದರು. ಮರುದಿನ ಬೆಳಗಾಗುವುದರೊಳಗೆ ಅವರ ಇಡೀ ಗದ್ದೆಯಲ್ಲಿ ಭೂತಸಸಿಗಳನ್ನು ನಟ್ಟು ಬಿಡುತ್ತಿತ್ತು. ಈ ಕ್ರಮದಿಂದ ಒಮ್ಮೊಮ್ಮೆ ತಮಾಷೆ ಪರಿಸ್ಥಿತಿ ಉಂಟಾಗುತ್ತಿತ್ತು. ಒಂದು ಸಂಜೆ ಭಟ್ಟರು ಹೀಗೆ ಮಾಡೆಲ್ ಅಗೆ ನಟ್ಟು ಹೊರಟು ಹೋದ ಬಳಿಕ, ಯಾವನೋ ಕಿಡಿಗೇಡಿ ಅದನ್ನು ಕಿತ್ತು ಬುಡಮೇಲಾಗಿ ನಟ್ಟುಹೋಗಿ ಬಿಟ್ಟ. ಮರುದಿನ ಬೆಳಿಗ್ಗೆ ನೋಡುತ್ತಾರೆ, ಇಡೀ ಗದ್ದೆ ತುಂಬಾ ಸಸಿಗಳು "ಶೀರ್ಷಾಸನ ಹಾಕಿ" ನಿಂತಿವೆ.

ಆದರೆ ಈ ಸ್ವಾರಸ್ಯದ ಕಥೆ ವಿಷಾದಾಂತವಾಯಿತು. ಒಂದು ದಿವಸ ಭಟ್ಟರು ಯಾವುದೋ ಕೆಲಸಕ್ಕೆ ಗದ್ದೇ ಕಡೆ ಹೋಗಿದ್ದರು. ಅವರಿಲ್ಲದಾಗ ಒಬ್ಬಾಕೆ ಮನೆಗೆ ಬಂದು, "ನಿಮ್ಮ ಗಂಡ ಹೇಳಿದರು, ದೇವರ ಕೋಣೇಲಿ ಪೀಠದ ಕೆಳಗೆ ಒಂದು ತಾಮ್ರದ ಕರಡಿಗೆ ಉಂಟಂತೆ. ಅದು ಈಗ ತುರ್ತು ಬೇಕಾಗಿದೆಯಂತೆ ತಗಂಬಾ ಅಂದರು." ಅಂದಳು. ಭಟ್ಟರ ಹೆಂಡತಿ ನಂಬಿ ಕರಡಿಗೆ ತೆಗೆದುಕೊಟ್ಟಳು. ಬಂದವಳು ತನ್ನ ಕಳೆದುಕೊಂಡ ಕೂದಲನ್ನ ಮರಳಿ ದೊರಕಿಸಕ್ಕೆ ಹೊಂಚು ಕಾಯುತ್ತಿದ್ದ ಕುಡುಪಾಲವ್ವ ಅಂತ, ಪಾಪ, ಭಟ್ಟತಿಗೆ ಏನು ಗೊತ್ತು! ಮತ್ತೈದು ನಿಮಿಷಕ್ಕೆ ಭಟ್ಟರ ಹೆಣ ಮನೇ ಕಡೆ ಹೊರಟಿತ್ತು. ದಾಸ–ಗುಲಾಮಗಿರಿ ಒಡೆಯನಿಗೂ ಒಳ್ಳೇದಲ್ಲ.

ಭೂತಗಳ ಬಗ್ಗೆ ಇನ್ನೂ ಏನೇನೋ ಬರೆಯಬಲ್ಲೆ. ಆದರೆ ಈಗ ಕೆಲ ಶತಮಾನಗಳಿಂದ ಭೂತಗಳು ಅವನತಿಗೆ ಇಳಿಯುತ್ತಾ ಇವೆ. ಬ್ರಾಹ್ಮಣರು ತಂದ ದೇವರುಗಳು ಇಲ್ಲಿ ತಳವೂರಿದ ಮೇಲೆ ಭೂತಗಳ ಸ್ವಾತಂತ್ರ್ಯ ಸಾವಕಾಶವಾಗಿ ಕಳೆದುಹೋಯಿತು. ಈ ಸಾಮ್ರಾಜ್ಯಶಾಹಿ ದೇವರುಗಳು ಸ್ಥಳೀಯ ಭೂತಗಳನ್ನ ತಮ್ಮ ಅಂಕಿತಕ್ಕೊಳಪಡಿಸಿಕೊಂಡರು. ಹೀಗೆ ಬಬ್ಬರ್ಯ ಅನಂತೇಶ್ವರನ ಬಂಟನಾದ; ಕಲ್ಕುಟ್ಕ, ರಕ್ತೇಶ್ವರಿ, ಪಂಜುರ್ಲಿ ಮೊದಲಾದ ಅನೇಕ ಭೂತಗಳಿಗೆ ಕೋಲ ಮೊದಲಾದ ಕಟ್ಟು ಕಟ್ಟಳೆಗಳು ನಡೆಯುವಾಗಲೂ ಸಾಮ್ರಾಜ್ಯಶಾಹಿ ಶಿವ ವಿಷ್ಣು ಇತ್ಯಾದಿಗಳ ಅಧಿರಾಜತ್ವದ ಕೆಳಗೇ ನಡೆಯಬೇಕಾಗುತ್ತದೆ.

ಇನ್ನೊಂದೆಂದರೆ, ಮನುಷ್ಯರು ಭೂತ ಪ್ರೇತಗಳ ಕಾದಿಟ್ಟ ಪ್ರದೇಶಗಳಲ್ಲಿ ಕಾಲು ಚಾಚಿ ಕಾಲೂರುತ್ತಿದ್ದಾರೆ. ಯಾವ ಪ್ರದೇಶಗಳಲ್ಲಿ ಮನುಷ್ಯರು ಹಗಲು ಕೂಡ ಭೂತಭಯದಿಂದ ಪ್ರವೇಶ ಮಾಡೋಕೆ ಅಂಜುತ್ತಿದ್ದರೋ ಅಂಥಲ್ಲಿ ಈಗ ರಾತ್ರಿಯಲ್ಲಿ ಕಾಣಿಸಿಕೊಳ್ಳೋಕೂ ಭೂತಗಳು ಅಂಜುತ್ತಿವೆ. ಭೂತಗಳಿಗೆ ಒಂದು ಕಾಲ, ಮನುಷ್ಯರಿಗೊಂದು ಕಾಲ–ಏನು ಮಾಡೋಣ?


ಸಮೃದ್ಧ ಬೆಳೆಯ ಹಿಂದೇನಿದೆ?
Swift
ಸಮೃದ್ಧ ಬೆಳೆ
ಸಂತಸಮಯ ಜೀವನ
ಸ್ವಿಫ್ಟ್ ಕೊಡುಗೆ : ಅಜೋಟೋ ಮತ್ತು ರೈಜೋ
ಜೀವಾಣು ಗೊಬ್ಬರ
ಅಜೋಟೋ ಬ್ಯಾಕ್ಟರ್
ಹತ್ತಿ, ಜೋಳ, ಗೋಧಿ, ಬತ್ತ
ಕಬ್ಬು, ರಾಗಿ, ಮೆಕ್ಕಜೋಳ
ಹಾಗೂ ಇತರ ಬೆಳೆಗಳಿಗೆ
ರೈಜೊ ಬ್ಯಾಕ್ಟರ್
ಶೇಂಗಾ, ತೊಗರಿ, ಅವರೆ
ಕಡಲೆ ಇತರ ದ್ವಿದಳ ಧಾನ್ಯಗಳಿಗೆ
ತಯಾರಕರು
Swift
ಸ್ವಿಫ್ಟ್ ಅಗ್ರೋ ಕೆಮಿಕಲ್ಸ್ ಅಂಡ್ ನ್ಯೂಟ್ರಿಯಂಟ್ಸ್ (ಪ್ರೈ.) ಲಿಮಿಟೆಡ್
ಎ-17, ಎಂ.ಐ.ಡಿ.ಸಿ. ಚಿಕ್ಕಲ್ ಥಾಣಾ, ಔರಂಗಾಬಾದ್-431001.
ರೀಜನಲ್ ಆಫೀಸ್ :
No. 2485, ಸ್ಟೇಜ್ II, ರಾಜಾಜಿನಗರ, ಬೆಂಗಳೂರು-10.
ಮಾರಾಟಗಾರರು : 1. ಮೆ॥ ಪಾಂಡುರಂಗ ಆಟೋಮೋಟಿವ್ & ಪಾರ್ಟ್ಸ್, ಗುಲ್ಬರ್ಗ. 2. ಮೆ॥ ಲ್ಯಾಬ್ರಿಕೆಂಟ್ ಅಂಡ್ ಸೀಡ್ಸ್, ಬೆಳಗಾಂ.
3. ಮೆ॥ ರೇಣುಕಾಚಾರ್ಯ ಟ್ರೇಡರ್ಸ್, ಹುಬ್ಬಳ್ಳಿ. 4. ಮೆ॥ ನಿಯೋ ಮೆಡಿಕಲ್ ಸ್ಟೋರ್ಸ್, ಹರಿಹರ. 5. ಮೆ॥ ಜೆ. ಎಸ್. ಕಾರ್ಪೋರೇಷನ್, ಬೆಂಗಳೂರು.

ಗತಿ-ಸ್ಥಿತಿ

೧

ಇತಿಮಿತಿ ಇಲ್ಲದಿತಿಹಾಸ ನಾನೀನೆಂಬ ನೊಣ ಎಂಕ ಶೀನ
ಶಿಂಗುಣಿಸಿದಂತೆಲ್ಲ ಹೊಸ ಕುದುರೆ ಕೊಬ್ಬು ಕುಣಿತ
ಈ ಬ್ರೆಕ್ಕು ಇಲ್ಲದ ಬಸ್ಸು ಹೀಗೇ ಓಡುತ್ತಿದೆ
ಭೀಬತ್ಸಾರೋಹಣದ ಉಪೋದ್ಘಾತಕ್ಕೆ.
ದಿವಾಳಿ ಕುಬೇರನ ಹದಗೆಟ್ಟ ಖಜಾನೆಯು ಕೈ ಸವೆಸುತ್ತ
ಹುಚ್ಚು ತಲೆ ಹುರುಪಳಿಸಿದುನ್ಮಾನ ಉದ್ಗಾರ ಶೀಳಿ ಹೊತ್ತು.

ಭೂತ ಭವಿಷ್ಯಕು ಲಾಳಿ ವರ್ತಮಾನ
ಅರ್ಥವಿಲ್ಲದ ಬದುಕಿನಿತಿಹಾಸ ಬೇರಿಳಿದ ಮರಕ್ಕೆ
ಗೊಣ್ಣೆ ಹುಳಕೊರೆತ. ಸ್ವಗತ ರಾಗದ ಮೊರೆತ.
ಹುಟ್ಟು ಸಾವಿನ ಅಂಕಿ ಸುಕ್ಕುಗಟ್ಟಿದ ಪಾನು
ಪ್ರಶ್ನಾರ್ಥಕ.

ಇದೆ ಒಳಗೆ,
ಒಳ ಒಳಗೆ ಗೋಳಗೊಳಕಿ ಬಾಳು.
ಬಾಣಂತಿ ಬೆಂದೊಡಲ ಹಸಿ ಕಾಣದಿತಿಹಾಸ ನಿರ್ಗತಿಕ.
ಸತ್ತ ಸೋಗು.
ಕೈಯಿರದ. ಕಿಸೆಹರಿದ ಹಳೆಕೋಟು. ಪಿಸಿದ ಮಕ್ಕಳ ಚಡ್ಡಿ
ಹರಿದ ಸೀರೆಯ ಗಂಟು ತಲೆದಿಂಬಿಗೆ
ಕುಕ್ಕರಿಸಿ ಮೂಲೆ ಹಿಡಿದ ನಡಮುರಿದ ಕಸಬರಿಗೆ
ತೆಕ್ಕೆ ಲೋಡಿನ ಗುಂಟ ತಗಣಿ ಮೆರವಣಿಗೆ

ಹೊರಗೆ,
ಕಾಸಿ ಸೋಸಿದ ಬೆಳದಿಂಗಳ ಮೀಸಲೂಟ
ಖಾಸಾ ಮನೆಯಂಗಳದ ರಂಗೋಲೆ ಹುಡಿಯಲ್ಲಿ
ತಿರುಗು ಮುರುಗು ಪಾದ ಪರಿಷೆಯ ಗುರುತು
ಕೆಂಪು ಹಸಿರಾಗಿ ಕಪ್ಪು ಬಿಳುಪಾಗಿ ಇಲ್ಲವೆ
ವ್ಯತಿರಿಕ್ತವಾಗಿಸುವ ಮಂತ್ರತಂತ್ರದ ಕೊಂಪೆ
ಕಾಂತಿ-ಕಹಳೆ ತುತ್ತೂರಿ ಸುಂಟರಗಾಳಿಯಾಟ
ಮಾಟ ಮಾಡಿದ ಹಾಗೆ. ನಿಃಶಬ್ದ-ಸಂಪದ್ಭರಿತ.

ಈ ಬಸ್ಸು ಹೀಗೆ ಓಡುತ್ತಿದೆ ಕಾಲಚಕ್ರದ ಮೇಲೆ
ವ್ಯೂಹ ರಚಿಸುತ್ತ.
ಇದ್ದಕ್ಕಿದ್ದಂತೆ ಅಂಗಾತ ಬಿದ್ದ ಈ
ಟಾರು ರಸ್ತೆಯ ಹೊತ್ತು ಡಬ್ಬು ಮಲಗಿಸಿದಾಗ
ಮರೆತ-ಲಾಲಿಜೋಗುಳ ಕಿವಿಗೆ ಹೊಸ ತಿರುವು
ಆಗ ಯೋಚನೆ. ಅಳುಕಲಾರದ ನೆನಪು ನಿನಾದ ಗುಂಗು.
ತಕ್ಷಣ
ಇತಿಹಾಸ ಕಸಿ ಕಟ್ಟದಡವಿ ಮರ ನಳನಳಿಸುತ್ತದೆ.
ಮಿತಿಹಾಕಿಟ್ಟ ಹೊಸ ಕಿರ್ದಿ ಪಾನು ಹರಿಯುತ್ತಲೇ
ದೀಪದೊಡ್ಡದಾಗುತ್ತದೆ.

೨

ಹೀಗೆಯೇ ಹುಡುಗಾಟದಲ್ಲಿ ಆ ಊರ ಗೌಡನ ಮಗಳು
ಚಂದ್ರಿ, ಕಂಪಿ ಸಂಪನ್ನೆ
ಇತಿಹಾಸ ಹುಸಿಮಾಡಿ ಹಸಗೆಟ್ಟಿದ್ದು ಎಂಥ ಪ್ರೇಮ.
ಮತಲಬಿ ಬೃಹನ್ನಳೆಯು ಮೈಕಾಮ ಮರೆಮಾಚದ
ವೀರತನಕೆ ರಾಹು ಪ್ರೀತಿ.
ಆ ಚಂದ್ರಿ, ಕಲೆ ನುಂಗಿದ ಸಂಪೂರ್ಣ ಅಮವಾಸಿ.
ಬುಲಾಕು ಮೂಗು ನೇರಕ್ಕೆ ಕಂಡ ನಕ್ಷತ್ರಗಳಗೊಂದೊಂದು
ಆಶೆ ಹೂಂಕರಿಸಿದ್ದು ರುದ್ರನಾಟಕದಂತ್ಯ.

ರಾಜಾಧಿರಾಜರು ಮುಳುಗಿ
ಕುರುಕ್ಷೇತ್ರನೆತ್ತರಾಗಿ ನಿಗಿನಿಗೀ ಉರಿದ
ದುರ್ಯೋಧನನ ಧರ್ಮಯುದ್ಧ ಬಿಕೋ ಎಂದೆ
ತದ್ರೂಪ ಇತಿಹಾಸ.
ಪ್ರೀತಿ ಶಾಸನವಾಗಿ ಬರೆದಿಟ್ಟ ಆಟೋಗ್ರಾಫಿಯ
ಪಾನ ನಗುಬಿಗುವಿನಲ್ಲೆಷ್ಟೊ ದಿನ
ಬೆಚ್ಚಗಿತ್ತು ಪ್ರೀತಿ ಪಿಸಾಗೋಪುರ
ಇದು ಕಣ್ಣರಿಯದಿತಿಹಾಸ.

ಈ ಇತಿಹಾಸ, ಈ ಬಸ್ಸು
ಈ ಸ್ಥಿತಿ, ಈ ಗತಿ
ಹೀಗೇ ಓಡುತ್ತಲಿದೆ.
ಈ ಗಾಳಿ ಇಲ್ಲೇ ಕಿತ್ತು ಬೀಳಲಿ. ಇಲ್ಲೇ ಎಡಕೆ ನೆಣ್ಮಕಿ ಮುಕಿ.
ಸತ್ತವರ ಲೆಕ್ಕ ಬರೆಯುದಕೆ ಮುಂದ [illegible]
ಕೆಂಪೇರಿದೊಡಲ ಇತಿಹಾಸದ ಕಾವು ತಿಂದ
ಈ ಕಾಯ್ದ ಕರಿ ಟಾರಿನ ತುಂಬ ಚೆಲ್ಲಾಡಿದ
ಗುಲಾಬಿ ಎಸಳಿಗೊಂದೊಂದು ಕತೆ ಕಟ್ಟಿ,
ಅಡುಬರುಸಿ ಅಪ್ಪಿದಾಗ
ಕಿಸೆಯ ಅಳಿದುಳಿದ ಚಿಲ್ಲರ ಬಿದ್ದುರುಳಿ
ಅತ್ತಿತ್ತ ಓಡಿದ್ದಾಂಗ ಮನಸು.

ಛೀ,
ಹೊತ್ತು ನೆತ್ತಿಗೇರಿದರೂ ಹಾಗೆಯೇ ಬಿದ್ದಿದೆ
ಈ ಹರೆಗಸ.
ಮತ್ತೆ ತೊನಸಿಯ ಗಿರಕಿ ಮಾರಿಸುತ್ತ.


ಸೋಮಶೇಖರ ಇಮ್ರಾಪುರ

ಜಗತ್ತಿನ ಪ್ರಥಮ ಡಿಟರ್ಜೆಂಟ್ ಒಗೆಯುವ ಬಾರ್

ಸುಪರ್ 777



ಹಣ ಉಳಿಸಿರಿ, ಬಿಳಿಪು ಹೆಚ್ಚಿಸಿರಿ



ಸುಪರ್ 777 ಒಗೆಯುವ ಜಗತ್ತಿನ ಒಂದು ಚಮತ್ಕಾರವಾಗಿದೆ! ಇದನ್ನು ಒಂದು ಹೊಸ ಫಾರ್ಮ್ಯುಲಾದ ಪ್ರಕಾರ ತಯಾರಿಸಲಾಗಿದೆ. ಇದರಲ್ಲಿ ಹೆಚ್ಚಿನ ಒಗೆಯುವ, ಬಿಳಿಗೊಳಿಸುವ, ಸ್ವಚ್ಛಗೊಳಿಸುವ ಶಕ್ತಿಯಿದೆ— ಕ್ಷಾರಯುಕ್ತ ನೀರಿನಲ್ಲಿಯೂ! ಇದರ ಬೆಲೆಯೋ? ಸಾಮಾನ್ಯ ಬಾರ್ ಸಾಬೂನುಗಳಿಗಿಂತ ಕಡಿಮೆ!

ಒಂದು ಹೊಸ ವಿಧದ ಒಗೆಯುವ ಬಾರ್—ಸುಪರ್ 777 ಡಿಟರ್ಜೆಂಟ್ ಒಗೆಯುವ ಬಾರ್—ಉಪಯೋಗಿಸ ತೊಡಗಿರಿ!

S... HPMA-6A/73 Kan

ಶೋಧಕ ಗುಳಿಗೆ

ಪ್ರೊ. ಜಿ.ವಿ. ನಾಡಕರ್ಣಿ

ಡಾ|| ರಮಾಕಾಂತರ ಸಂಶೋಧನೆ ಮುಗಿದ ಮೇಲೆ, ಮನೆಗೆ ಬಂದವರೆಲ್ಲ ತಮ್ಮ " ಗುಟ್ಟು-ರಟ್ಟು" ಮಾಡುತ್ತಿದ್ದುದು ಅರ್ಥವಾಗದೇ ನೀಲಕಂಠ ಒದ್ದಾಡಿದ. ಆದರೆ ತಮ್ಮ ಸಂಶೋಧನೆ ತಮಗೇ ಮುಳುವಾದೀತೆಂದು "ಹಗಲುಗನಸಿಗ" ರಮಾಕಾಂತರಿಗೆ ಹೇಗರ್ಥವಾದೀತು........

ಡಾ|| ರಮಾಕಾಂತರು ಕಾಫೀಕುಡಿದು ಖಾಲೀ ಕಪ್ಪನ್ನು ಟೇಬಲ್ ಮೇಲೆ ಇಟ್ಟರು. ಅವರ ಅಸಿಸ್ಟಂಟ ಬಾಗಿಲು ಅರ್ಧತೆರೆದು ಒಳಗೆ ಮುಖ ಹಾಕಿದ.

"ಕಮ್ ಇನ್" ಎಂದರು ರಮಾಕಾಂತ.

ಅಸಿಸ್ಟಂಟ ನೀಲಕಂಠ ದೇಶಾವರಿ ನಗೆ ನಗುತ್ತ ಡಾಕ್ಟರರ ಹತ್ತಿರದ ಸ್ಟೂಲಿನ ಮೇಲೆ ಕುಳಿತ.

"ಸಾರ್ ಇಂದಿನ ಯುಗವನ್ನು ಗುಳಿಗೆಯ ಯುಗ ಎಂದು ಕರೆದರೆ ತುಂಬಾ ಒಪ್ಪುತ್ತದೆ"-ಎಂದ ನೀಲಕಂಠ.

ಪ್ರಸಿದ್ಧ ವಿಜ್ಞಾನ ಸಂಶೋಧಕ ಡಾ|| ರಮಾಕಾಂತರು ಸದಾ ಸಂಶೋಧನೆಯಲ್ಲಿ ಮಗ್ನರಾಗಿರುತ್ತಿದ್ದರು: ಅವರ ಅಸಿಸ್ಟಂಟನ ವಿನೋದ ಪ್ರವೃತ್ತಿ ಅವರಿಗೆ ನಡುನಡುವೆ ವಿರಾಮವನ್ನೊದಗಿಸಿ, ಅವರ ಮುಂದಿನ ಸಂಶೋಧನೆಗೆ ಉತ್ಸಾಹವನ್ನು ತರುತ್ತಿತ್ತು. ಆದ್ದರಿಂದ ನೀಲಕಂಠ ಹೀಗೆ ನಡುನಡುವೆ ಬರುವುದು ಅವರಿಗೆ ಆಪ್ಯಾಯಮಾನವಾಗಿಯೇ ಇತ್ತು.

"ಅಲ್ಲವೋ, ಇಂದಿನ ಯುಗವನ್ನು ಅಣುಯುಗ, ಬಾಹ್ಯಾಕಾಶಯುಗ, ಸ್ತ್ರೀಶಕ್ತಿಯುಗ ಎಂದೆಲ್ಲಾ ಹೇಳುವುದುಂಟು. ನೀ "ಗುಳಿಗೆ ಯುಗ" ಎಲ್ಲಿಂದ ತೆಗೆದೆ?"

"ಸಾರ್, ಈಗ ಪೇಶಂಟ್ಸಗಳಿಗೆ ಹೊಟ್ಟೆ ಸ್ವಚ್ಛವಾಗಿಸಲು ಗುಳಿಗೆ, ಮಲಬದ್ಧತೆ ಉಂಟು ಮಾಡಲು ಗುಳಿಗೆ, ನಿದ್ರೆ ಬರುವದಕ್ಕೆ ಗುಳಿಗೆ, ಗರ್ಭನಿರೋಧಃ ಮಾತ್ರೆ, ಮುಟ್ಟು ಮುಂದೆ ಹೋಗುವುದಕ್ಕೆ ಗುಳಿಗೆ..."

"ಸಾಕು ಸಾಕು, ತಿಳಿಯಿತು ಬಿಡು" ಎಂದು ನೀಲಕಂಠನನ್ನು ನಡುವೆಯೇ ತಡೆದು ಬೇಸರದಿಂದ ಡಾಕ್ಟರರು ನುಡಿದರು.

ಆದರೆ ಅವನು ಅಷ್ಟಕ್ಕೇ ಬಿಡಬೇಕಲ್ಲ? "ಇಷ್ಟೇ ಅಲ್ಲ, ಸಾರ್. ಕೆಲವು ಜನರು ಇತ್ತೀಚೆಗೆ ಮಾತಿನಲ್ಲಿ ಗುಳಿಗೆ ಉರುಳಿಸುತ್ತಾರಲ್ಲ! ಅದು ಸುಳ್ಳು ಎಂಬುದು ಗೊತ್ತಿದರೂ ನಿಜ ಅನ್ನುವ ಹಾಗೆ ಭಾಸವಾಗುತ್ತದೆ."

"ಓಹೋ! ಬರುಡೆ ಅನ್ನು. ಈ ಸುಳ್ಳಿನ ಗುಳಿಗೆ ಇತ್ತೀಚೆಗೆ ಹೆಚ್ಚಾದದ್ದು ನಿಜ."-ಡಾಕ್ಟರರು ಒಪ್ಪಿದರು.

ಇದೇ ಸಂದರ್ಭ ನೋಡಿ ನೀಲಕಂಠ ಹಲ್ಲು ಕಿರಿಯುತ್ತ-"ಸಾರ್, ತಾವು ಒಂದು ಗುಳಿಗೆಯ ಸಂಶೋಧನೆಯಲ್ಲಿ ತೊಡಗಿದ್ದೀರಲ್ಲ, ಅದು ಎಲ್ಲಿಯವರೆಗೆ ಬಂದಿದೆ ಅಂತ..."

"ಶ್! ಸ್ವಲ್ಪ ಮೆಲ್ಲಗೆ ಮಾತಾಡು. ಸಂಶೋಧನೆ ಪೂರ್ಣವಾಗುವವರೆಗೆ ಯಾರ ಮುಂದೆಯೂ ಈ ವಿಷಯ ಬಾಯಿಬಿಡಬೇಡ ಎಂದು ನಾ ಹೇಳಿಲ್ಲವೆ".

"ಕ್ಷಮಿಸಿರಿ, ಸಾರ್" ಎಂದ ನೀಲಕಂಠ ಮೆಲುದನಿಯಲ್ಲಿ. "ನಾನು ಬೇರೆ ಯಾರ ಮುಂದೆಯೂ ಇದರ ಸೂಚನೆ ಕೂಡ ಮಾಡಿಲ್ಲ."

"ಸರಿ: ಬಾಯಿಗೆ ಬೀಗ ಹಾಕು- ಇನ್ನೊಂದು ವಾರದವರೆಗೆ ತಡೆದು ನೋಡು" ಎಂದವರೇ ಡಾಕ್ಟರರು ತಮ್ಮ ಟೇಬಲ್ ಕಡೆಗೆ ತಿರುಗಿ ಮತ್ತೆ ಸಂಶೋಧನೆಯಲ್ಲಿ ತೊಡಗಿದರು.

ಅಸಿಸ್ಟಂಟ್ ನೀಲಕಂಠ ಡಾಕ್ಟರರ ಪ್ರಾಯ್ವೇಟ ಕೋಣೆಯ ಬಾಗಿಲವನ್ನು ಸದ್ದಿಲ್ಲದೆ ಮುಚ್ಚಿಕೊಂಡು ಹೊರಟುಹೋದ.

ಮುಂದೆ ಒಂದುವಾರ ರಮಾಕಾಂತರು ಹಗಲು-ರಾತ್ರಿ ಎನ್ನದೆ ಸಂಶೋಧನೆ ಮುಂದುವರಿಸಿದರು. ಎಂಟನೆಯ ದಿನ ಹಸನ್ಮುಖರಾಗಿ ಡಾಕ್ಟರರು ತಮ್ಮ ಲೆಬೋರೇಟರಿ ಬಿಟ್ಟು ಹೊರಗೆ ಬಂದರು. ಅವರ ಪ್ರಸನ್ನ ಮುಖಮುದ್ರೆಯಿಂದಲೇ ಅವರ ಪತ್ನಿ ತಮ್ಮ ಪತಿ ಯಶಸ್ವಿಯಾದುದನ್ನು ಊಹಿಸಿದರು. ಆದರೆ, ಬೇಕೆಂದೇ ಅವರು ಈ ವಿಷಯವಾಗಿ ಗಂಡನೊಡನೆ ಯಾವ ಮಾತನ್ನೂ ಆಡಲಿಲ್ಲ.

ಹೌದು; Combination ಯಶಸ್ವಿಯಾಗಿತ್ತು. ತಾವು ಕಂಡು ಹಿಡಿದ ದ್ರಾವಕದಿಂದ ಸದ್ಯ ಹನ್ನೆರಡು ಗುಳಿಗೆಗಳನ್ನು ಅವರು ತಯಾರಿಸಿದ್ದರು. ಅವುಗಳನ್ನು ಪ್ರಯೋಗಿಸಿ ಈ ಗುಳಿಗೆಗಳ ವ್ಯಾವಹಾರಿಕ ಮಹತ್ವವನ್ನು ಅವರು ಈಗ ಅರಿತುಕೊಳ್ಳಬೇಕಾಗಿತ್ತು. ಬೇರೆ ಬೇರೆ ಉದ್ಯೋಗದ ಜನರು ಅವರ ಕ್ಲಬ್ಬಿಗೆ ಬರುತ್ತಿದ್ದರಾದ್ದರಿಂದ ಜನರ ಸ್ವಭಾವ ವೈವಿಧ್ಯವು ಅವರಿಗೆ ತುಂಬಾ ಪರಿಚಿತವಿತ್ತು.

ಮರುದಿನ ಸಂಜೆ ಸೇಠ ಅಮೃತಲಾಲ ರಮಾಕಾಂತರ ಮನೆಗೆ ಬಂದರು. ಡಾಕ್ಟರರು ಅವರನ್ನು ಸ್ವಾಗತಿಸಿ ಲೋಕಾಭಿರಾಮವಾಗಿ ಮಾತಾಡುತ್ತ-"ಬಿಸಿನೆಸ್ ಹೇಗಿದೆ, ಸೇಟಜೀ" ಎಂದರು.

"ಎಲ್ಲಾ ಡೌನ್ ಆಗಿದೆ, ಡಾಕ್ಟರ್, ಈಗ



ಪಿಚರ್ ವಿಪರೀತ; ಆಳುಹೋಳಿನ ಪಗಾರ ಸಿಕ್ಕಾ ಪಟ್ಟೆ–ಮೇಲಾಗಿ ಮೊದಲಿನಂತೆ ಕೆಲಸಮಾಡುವದಿಲ್ಲ. ಅಲ್ಲದೆ ಇತ್ತೀಚೆಗೆ ನೂರೆಂಟು ಕಾಯ್ದೆ ಆಗಿರುವುದರಿಂದ, ನಮ್ಮಂಥ ಸೀದಾ–ಸಾದಾ ವ್ಯಾಪಾರಸ್ಥರಿಗೆ ತುಂಬಾ ತೊಂದರೆ ನೋಡಿರಿ."

"ಸೇಟಜಿ, ನಿಮಗೇನು ಕಷ್ಟ? ಕಳ್ಳಸಂಗ್ರಹ, ಕಳ್ಳಪೇಟೆ ಇವನ್ನು ತಡೆಗಟ್ಟಲು ಸರಕಾರ ಕ್ರಮ ಕೈಕೊಂಡಿದೆ. ಸರಳ ವ್ಯವಹಾರ ಮಾಡುವ ನಿಮ್ಮಂಥವರಿಗೆ ಯಾವ ತೊಂದರೆಯೂ ಇಲವಲ್ಲ!" ಎಂದರು ಡಾ॥ ರಮಾಕಾಂತರು.

ಅಷ್ಟರಲ್ಲಿ ಅಸಿಸ್ಟಂಟ್ ನೀಲಕಂಠ ಕಾಫಿ–ಬಿಸ್ಕೀಟು ತಂದುಕೊಟ್ಟ. ಅವನಿಗೆ ಅಲ್ಲಿಯೇ ನಿಲ್ಲಲು ಹೇಳಿ, ಡಾಕ್ಟರರು ಕಾಫಿಯ ಕಪ್ಪನ್ನು ಸೇಟಜಿಯವರ ಕೈಗಿತ್ತರು. "ನಾನೇ ತೆಗೆದುಕೊಳ್ಳುತ್ತಿದ್ದೆನಲ್ಲ"ಎಂದು ಸೇಟಜಿ ವಿನಯದಿಂದ ನುಡಿದರು. ಸೇಟಜಿಯವರಿಗೆ ಕೊಡುವಾಗ ಡಾಕ್ಟರರ ಕೈಯು ಹಾಗೇಕೆ ಆ ಕಪ್ಪಿನ ಮೇಲೆ ಹಾಯ್ದು ಹೋಯಿತೆಂಬುದು ನೀಲಕಂಠನಿಗೆ ತುಸು ವಿಚಿತ್ರವೆನಿಸಿತು.

ಕಾಫೀ ಕುಡಿದು ಸೇಟಜಿ ಎರಡು ನಿಮಿಷ ಮೌನವಾಗಿ ಕುಳಿತರು. ಆಗ ಡಾಕ್ಟರರು ಅವರ ಮುಖಭಾವವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದುದನ್ನು ನೀಲಕಂಠ ನೋಡಿದ. "ನೋಡ್ರೀ, ಡಾಕ್ಟರರೇ," ಸೇಟಜಿ ನುಡಿದರು. "ಸರಕಾರದವರು ತಿಪ್ಪರಲಾಗ ಹಾಕಲಿ; ನಮ್ಮ ಖರೇವ್ಯವಹಾರದ ಸುಳಿವು ಸುದ್ದಾ ಅವರಿಗೆ ಹತ್ತುವಂತೆಯೇ ಇಲ್ಲ! ಸರಕಾರಕ್ಕೆ ಗೊತ್ತಿರುವದು ನಮ್ಮ ಒಂದು ಗೋಡೌನ್ ಮಾತ್ರ. ಆದರೆ ನಮ್ಮ ಖರೇ ಗೋಡೌನ್ನು ಆರು ಇವೆ, ಅದೂ–ಬೇರೆ ಬೇರೆ ಸ್ಥಳಗಳಲ್ಲಿ! ನಮ್ಮ ದೇವರ ಮನೆಯಲ್ಲಿಯ ಲಕ್ಷ್ಮೀಫೋಟೋದ ಹಿಂದೆ ಒಂದು ಸಣ್ಣ ಹ್ಯಾಂಡಲ್ ಇದೆ. ಅದನ್ನು ತಿರುಗಿಸಿದರೆ, ದೇವರ ಕಟ್ಟೆಯಲ್ಲಿಯ ಒಂದು ಫರಸಿಕಲ್ಲು ಸರಿದು ಸ್ಥಳಮಾಡಿಕೊಡುತ್ತದೆ. ಅದರಲ್ಲಿ ಇಳಿದುಹೋದರೆ ನಮ್ಮ ಗುಪ್ತ ಗೃಹಕ್ಕೇ ಹೋಗಿ ಮುಟ್ಟಬಹುದು. ಅಲ್ಲಿ ಅಕ್ಕಿಯಲ್ಲಿ ಬೆರಸಲು ಬೆಣಚುಕಲನ್ನು ಚೂರು ಮಾಡಲು ಒಂದು ಯಂತ್ರವನ್ನೇ ತಯಾರಿಸಿ ಇಟ್ಟಿದ್ದೇನೆ. ಅದರಿಂದ ತಯಾರಾದ ಕಲ್ಲಿನ ಚೂರು ಮತ್ತು ಅಕ್ಕಿ ಇವುಗಳಲ್ಲಿ ಬರಿಕಣ್ಣಿಗೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಹೇಗಿದೆ, ಡಾಕ್ಟರರೇ, ನಮ್ಮ ಗಮ್ಮತ್ತು?"

ಡಾ॥ ರಮಾಕಾಂತರು ಯಾವ ಮಾತನ್ನೂ ಆಡದೆ ಮುಗುಳ್ನಗೆ ಮಾತ್ರ ನಕ್ಕರು. ಸೇಟಜಿಯವರ ಮಾತುಗಳನ್ನು ಕೇಳುತ್ತಿದ್ದ ನೀಲಕಂಠ ಆಶ್ಚರ್ಯದಿಂದ ತೆರೆದ ಬಾಯಿಯನ್ನು ಮುಚ್ಚುವುದನ್ನೇ ಮರೆತಿದ್ದ!

ಸೇಟಜಿ ಮುಂದುವರಿದು–"ನೋಡ್ರಿ ಡಾಕ್ಟರರೇ, ನಮ್ಮದೇ ಕರೆನ್ಸಿ ಕೂಡ ಇದೆ!" ಎಂದು ಗಹಗಹಿಸಿ ನಕ್ಕರು. "ನೂರು ರೂಪಾಯಿ, ಎರಡು ರೂಪಾಯಿಗಳ ಬ್ಲಾಕ್ ಪ್ಲೇಟಿನಲ್ಲಿ ಮಾಡಿಸಿಬಿಟ್ಟಿದ್ದೇನೆ. ಯಾರಿಗೂ ಇದರ ಪತ್ತೆ ಹಚ್ಚುವುದೇ ಸಾಧ್ಯವಿಲ್ಲ ಎಂದು ಅಭಿಮಾನದಿಂದ ನುಡಿದರು ಸೇಟಜಿ.

ಸೇಟಜಿ ತಮ್ಮ ನಿಜವ್ಯವಹಾರದ ಚಿದಂಬರ ರಹಸ್ಯವನ್ನು ಹೀಗೇಕೆ ಬಾಯ್ಬಿಟ್ಟು ಹೇಳುತ್ತಿದ್ದಾರೆಂಬುದು ನೀಲಕಂಠನಿಗೆ ದಿಗಿಲು ಉಂಟುಮಾಡಿತ್ತು. ಅವನು ಮೂಕನಾಗಿ ನಿಂತುಕೊಂಡಿದ್ದ. ಡಾಕ್ಟರ್ ರಮಾಕಾಂತರ ಮುಖವು ಮಾತ್ರ ಆನಂದದಿಂದ ಏಕೆ ಅರಳಿದೆ ಎಂಬುದು ಅವನಿಗೆ ತಿಳಿಯದ ವಿಷಯವಾಗಿತ್ತು.

ಮಾರನೆಯ ದಿನ ಸಂಜೆಗೆ ಮಠದ ಅಧಿಕಾರಿ ಸದಾನಂದ ಆಗಮಿಸಿದರು. ಡಾ॥ ರಮಾಕಾಂತರು ಅವರನ್ನು ಸ್ವಾಗತಿಸಿ ಒಳಗೆ ಕರೆದುಕೊಂಡು ಹೋಗಿ ಮಣೆ ಹಾಕಿ ಕೂಡಿಸಿದರು. ನೀಲಕಂಠನೂ ಬಂದು ಸಾಷ್ಟಾಂಗ ನಮಸ್ಕಾರಹಾಕಿ ದೂರ ಕುಳಿತುಕೊಂಡ. ಆ ಮೇಲೆ ಮಾತನಾಡುತ್ತ ಸದಾನಂದರು–"ನೋಡ್ರಿ, ಡಾಕ್ಟರರೇ, ಇವತ್ತು ಜನರಿಗೆ ಧರ್ಮದಲ್ಲಿ, ದೇವರಲ್ಲಿ ವಿಶ್ವಾಸವಿಲ್ಲ. ಗುರುಗಳಲ್ಲಿ ವಿಶ್ವಾಸವಿಲ್ಲ. ನಮ್ಮ ಕಾಲಕ್ಕಾದರೋ ಸದಾಚಾರ, ಭಕ್ತಿ, ವ್ರತ–ನಿಯಮಗಳಿದ್ದುವು. ಇವತ್ತೇನಿದೆ? ಇಂದು ಚೈನಿ ಸಲುವಾಗಿ ಜನ ಬೇಕಾದಷ್ಟು ಹಣ ಖರ್ಚುಮಾಡುತ್ತಾರೆ. ಆದರೆ, ಮಠ, ಗುರುಗಳು, ದೇವರು ಅಂದರೆ ಮಾತ್ರ ಒಂದು ಪೈಸಾ ಕೊಡಲಿಕ್ಕೆ ತಯಾರಿಲ್ಲ" ಎಂದು ಆಡಿದರು. ಡಾಕ್ಟರರು ಅದಕ್ಕೆ ತಮ್ಮ ಸಮ್ಮತಿ ಸೂಚಿಸಿದರು. ಅಷ್ಟರಲ್ಲಿ ಬೆಳ್ಳಿ ಲೋಟದಲ್ಲಿ ಹಾಲು, ತಟ್ಟೆಯಲ್ಲಿ ಹಣ್ಣು ಇವನ್ನು ಡಾಕ್ಟರರ ಪತ್ನಿ ತಂದಿಟ್ಟು ಸದಾನಂದರಿಗೆ ನಮಸ್ಕರಿಸಿದರು. ಡಾಕ್ಟರರು ಬಹಳ ವಿನಯದಿಂದ ತಮ್ಮ ಕೈಯಿಂದಲೇ ಸದಾನಂದರಿಗೆ ಹಾಲುತುಂಬಿದ ಲೋಟ ಕೊಟ್ಟರು. ಅವರು ಹಾಲು ಕುಡಿದು ಕೆಲಹೊತ್ತು ಮೌನವಾಗಿ ಕುಳಿತರು. ಆಗ ಡಾಕ್ಟರರು ಅವರ ಮುಖಭಾವವನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸುತ್ತಿದ್ದುದನ್ನು ನೀಲಕಂಠ ಗಮನಿಸಿದ.

"ಇವತ್ತು ನೋಡ್ರಿ, ಡಾಕ್ಟರರೇ. ಯಾವುದಾದರೂ ಮಠ ಸೇರಿ ಅದರಲ್ಲಿ ಅಧಿಕಾರಿಯಾಗಿರುವಷ್ಟು ಲಾಭದಾಯಕವಾದದ್ದು ಇನ್ನೊಂದಿಲ್ಲ" ಎಂದರು ಸದಾನಂದರು. "ನನಗೆ ಶಿಕ್ಷಣ ಪೂರ್ಣ ಮುಗಿಸುವುದು ಆಗಲಿಲ್ಲ; ಎಲ್ಲಿಯೂ ನೌಕರೀನೂ ಸಿಗಲಿಲ್ಲ. ಅಷ್ಟರೊಳಗೆ ಸುದೈವದಿಂದ ಮಠದೊಳಗಿನ ಈ ಕೆಲಸ ಸಿಕ್ಕಿತು ನೋಡಿರಿ. ಅಂದಿನಿಂದ ಧನ್ಯ ಆಗಿ ಬಿಟ್ಟೀನಿ ನೋಡಿರಿ, ಡಾಕ್ಟರ್" ಎಂದು ಅವರು ನಕ್ಕರು. "ಪಾಪ! ಸ್ವಾಮಿಗಳಿಗೇನು ಗೊತ್ತಾಗತದರೀ ಮಠದ ಕಾರುಭಾರ? ಅವರು ತಮ್ಮ ಪೂಜಾ–ಪುನಸ್ಕಾರ, ಧ್ಯಾನದೊಳಗ ಕೂತುಬಿಟ್ಟಿರತಾರ. ಎಲ್ಲಾ ಹಣದ ವ್ಯವಹಾರ ನಮ್ಮ ಕೈಯೊಳಗೇ ನೋಡಿರಿ. ನನ್ನ ಹೆಂಡತಿ–ಮಕ್ಕಳು ಮಾತ್ರವಲ್ಲ; ನನ್ನ ದೂರದ ಬಂಧುಗಳು, ಇಷ್ಟಮಿತ್ರರು ಕೂಡ ಉದ್ಧಾರ ಹೊಂದಿದ್ದಾರೆ, ನೋಡಿರಿ" ಎಂದು ಹಸನ್ಮುಖಿಯಾದರು ಸದಾನಂದರು.

ನೀಲಕಂಠ ಈ ಟ್ರಾನ್ಸಫರ್ ಸೀನನ್ನು ಕಂಡು ಆಶ್ಚರ್ಯಚಕಿತನಾಗಿದ್ದ; ಡಾಕ್ಟರರು ಮಾತ್ರ ನಿರಾಸೆಯ ದೀರ್ಘ ನಿಟ್ಟುಸಿರು ಬಿಟ್ಟರು.

ಕೆಲ ಸಮಯದ ನಂತರ ಸದಾನಂದರು ಹೋದರು. ಆಗ ನೀಲಕಂಠ "ಸಾರ್, ನಿನ್ನೆ ಸೇಟಜಿ ಮತ್ತು ಇಂದು ಸದಾನಂದರು ಹೀಗೇಕೆ ತಮ್ಮ ಗುಟ್ಟನ್ನೆಲ್ಲ ನಿಮಗೆ ಹೇಳಿಬಿಡುತ್ತಿದ್ದಾರೆ? ಉಳಿದವರೆದುರು ಎಂದಾದರೂ ತಮ್ಮ ರಹಸ್ಯವನ್ನು ಇವರು ಹೇಳುವಂಥವರೇ?" ಎಂದು ಆಶ್ಚರ್ಯದಿಂದ ಕೇಳಿದ. ಅದಕ್ಕೆ ಡಾಕ್ಟರರು ನಗುತ್ತ–"ಸ್ವಲ್ಪ ತಡೆದು ನೋಡು; ಇನ್ನೂ ಮೋಜು ಇದೆ" ಎಂದರು.

ಎರಡು ದಿನಗಳ ನಂತರ ವಾಕಿಂಗ್‌ಸ್ಟಿಕ್ ಬೀಸುತ್ತ ಶಂಭೂರಾಯರು ಬಂದವರೇ "ಡಾಕ್ಟರರು ಮನೆಯಲ್ಲಿಲ್ಲವೇನು?" ಎಂದು ಕೇಳಿದರು. ನೀಲಕಂಠ ಅವರನು ಸ್ವಾಗತಿಸಿ, "ಅವರು ಹೊರಗೆ ಹೋಗಿದ್ದಾರೆ. ಸ್ವಲ್ಪ ಕೂಡಿರಿ" ಎಂದು ಅವರನ್ನು ಕರೆದು ಕೂಡಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಹೊರಗೆ ಹೋಗಿದ್ದ ಡಾ. ರಮಾಕಾಂತರು ಮನೆಗೆ ಬಂದರು. ಕುಶಲ ಪ್ರಶ್ನೆಗಳಾದ ಮೇಲೆ ಶಂಭೂರಾಯರು ನೇರವಾಗಿ ವಿಷಯವನ್ನೇ ಪ್ರಸ್ತಾಪಿಸಿದರು:

"ಶ್ರೀನಿವಾಸರಾಯರು ಸಾಯುವ ಮುಂದೆ ಮೃತ್ಯುಪತ್ರ ಮಾಡಿಟ್ಟಿದ್ದರು ಅಂತ ನೀವು ನಿನ್ನೆ ಹೇಳಿದಿರಿ. ನನಗೆ ಆ ವಿಷಯವೇ ತಿಳಿಯದು, ಡಾಕ್ಟರ್. ಅಂದಮೇಲೆ ಆ 'ವಿಲ್' ನನ್ನ ಹತ್ತರ ಇರುವದಾದರೂ ಹೇಗೆ? ನೀವೇ ಹೇಳಿರಿ."

"ಇದು ನೋಡಿರಿ, ಶಂಭೂರಾವ್. ನೀವು ಶ್ರೀನಿವಾಸರಾಯರ ಪರಮಮಿತ್ರರು. ನಿಮ್ಮ ಮೇಲೆ ಅವರದು ಬಹಳ ವಿಶ್ವಾಸವಿತ್ತು. ಅಂತೆಯೇ ಮೃತ್ಯುಪತ್ರ ಮಾಡಿದ ಮೇಲೆ ಅದನ್ನು ನಿಮ್ಮ ಕಡೆಗೇ ಕೊಟ್ಟಿದ್ದಾರೆ ಅಂತ ಶ್ರೀನಿವಾಸರಾಯರ ಮಗಳೇ ನನಗೆ ಹೇಳಿದ್ದಾಳೆ" ಎಂದರು ಡಾಕ್ಟರರು.

"ಹಾಗಾದರೆ ನಾ ಸುಳ್ಳು ಹೇಳ್ತೀನಿ ಅಂತೀರೇನು ಡಾಕ್ಟರ್?" ಎಂದರು ಸಿಟ್ಟಿನಿಂದ ಶಂಭೂರಾಯರು.

ಅಷ್ಟರಲ್ಲಿ ಆಳು ಚಹಾ–ಬಿಸ್ಕೀಟು ತಂದಿಟ್ಟು ಹೋದ.

"ಮೊದಲು ಚಹಾ ತೊಗೋಳ್ರಿ; ಅಂದರ ಮಾತಾಡಲಿಕ್ಕೆ ಅನುಕೂಲವಾಗುತ್ತದೆ" ಎಂದು ಡಾಕ್ಟರರು ಹೇಳುತ್ತ ಚಹಾದ ಕಪ್ಪನ್ನು ಶಂಭೂರಾಯರ ಕೈಗಿತ್ತರು. ಅವರು ತುಸು ಸಿಟ್ಟಿನಿಂದಲೆ ಚಹ ಕುಡಿದು ಮುಗಿಸಿದರು; ಎರಡು ನಿಮಿಷ ಮೂಕರಾಗಿ ಕುಳಿತರು. ಅವರ ಮುಖಮುದ್ರೆಯನ್ನು ಅಭ್ಯಸಿಸಿದ ಡಾಕ್ಟರರು "ಈಗ ಹೇಳಿರಿ, ಶಂಭೂರಾವ್. ಆ ಮೃತ್ಯುಪತ್ರದ ವಿವರ ತಿಳಿಸಿರಿ" ಎಂದರು.

"ಶ್ರೀನಿವಾಸರಾಯರು ಮೃತ್ಯುಪತ್ರ ಮಾಡುವಾಗ ಅವರ ಹತ್ತಿರ ನಾನಿದ್ದೆ. ಅವರು ತಮ್ಮ ಎಲ್ಲಾ ಆಸ್ತಿಯನ್ನು ತಮ್ಮ ಒಬ್ಬಳೇ ಮಗಳು ಲಲಿತಾನ ಹೆಸರಿನಲ್ಲಿ ಮಾಡಿಟ್ಟಿದ್ದಾರೆ" ಎಂದರು ಶಂಭೂರಾಯರು. "ಲಲಿತಾ ನನ್ನ ಸೊಸೆಯಾಗಿ ಬರುವವಳಿದ್ದಳು; ಆದರೆ ನನ್ನ ಮಗ ಈಗ ಮುಂಬೈಯಲ್ಲಿ ಬೇರೆ ಕನ್ಯೆಯನ್ನು ಮದುವೆಯಾಗಲು ನಿಶ್ಚಯಿಸಿದ್ದರಿಂದ ಆ ಮೃತ್ಯುಪತ್ರವನ್ನು ಮುಚ್ಚಿಟ್ಟಿದ್ದೇನೆ ಡಾಕ್ಟರ್" ಎಂದು ನಗುತ್ತ ನುಡಿದರು ಶಂಭುರಾಯರು.

"ಮೃತ್ಯುಪತ್ರ ಎಲ್ಲಿದೆ?" ಸಣ್ಣ ಧ್ವನಿಯಲ್ಲಿ ಕೇಳಿದರು ಡಾಕ್ಟರರು. "ನಮ್ಮ ಮನೆಯಲ್ಲಿ ಶ್ರೀಗಂಧದ ನಟರಾಜನ ಮೂರ್ತಿ ಇದೆಯಲ್ಲವೆ? ಅದರ ಪಾದದ ಹತ್ತಿರ ಇರುವ ಒಂದು ಗುಪ್ತ ಸ್ಥಳದಲ್ಲಿ ಆ ಮೃತ್ಯುಪತ್ರ ಭದ್ರವಾಗಿ ಬಚ್ಚಿಟ್ಟಿದ್ದೇನೆ" ಎಂದು ಉತ್ತರಿಸಿದರು ಶಂಭುರಾಯರು. ಡಾಕ್ಟರ ರಮಾಕಾಂತರ ಮುಖವು ಆನಂದದಿಂದ ಅರಳಿತು. ಸ್ವಲ್ಪ ಹೊತ್ತಿನ ಮೇಲೆ ಶಂಭೂರಾಯರು ತಮ್ಮ ಮನೆಗೆ ಹೋದರು. ಡಾಕ್ಟರರಿಗೆ ತುಂಬಾ ತೃಪ್ತಿಯಾಯಿತು.

ಮತ್ತೊಂದು ಸಂಜೆ ಅಡ್ವೋಕೇಟ ದೇಶಪಾಂಡೆ ಕನ್ಸಲ್ಟಿಂಗ ಡಾಕ್ಟರ್ ಅಬಲೂರ್ ಅವರು ರಮಾಕಾಂತರ ಮನೆಗೆ ಬಂದರು. ಅವರೆಲ್ಲ ರಮಾಕಾಂತರ ಕ್ಲಬ್ಬಿನ ಕಾಯಂ ಸದಸ್ಯರು. ಅವರೆಲ್ಲ ಸುಖಾಸೀನರಾದ ಮೇಲೆ ಹರಟುತ್ತ ಕುಳಿತರು; ತಮ್ಮ ಉದ್ಯೋಗದ ಕಷ್ಟ–

ಕಷ್ಟಗಳನ್ನೆಲ್ಲ ಸಹಿಸಿಕೊಂಡು ತಾವು ಮಾಡುತ್ತಿರುವ ಸಮಾಜ ಸೇವೆಯನ್ನು ಬಾಯ್ತುಂಬಾ ಬಣ್ಣಿಸಿದರು. ನೀಲಕಂಠ ಕಾಫಿ, ಕೇಕು ತಂದಿಟ್ಟ. ಡಾಕ್ಟರರು ಅತಿಥಿಗಳಿಗೆ ತಮ್ಮ ಕೈಯಿಂದಲೇ ಕಾಫೀ ಕೊಟ್ಟರು. ಕುಡಿದ ತುಸು ಹೊತ್ತಿನ ಮೇಲೆ ಡಾ॥ ಅಬಲೂರ್ ನಗುತ್ತ ಹೇಳಿದರು–"ಜನರ ಮೌಢ್ಯವೇ ನಮ್ಮ ನಿಜವಾದ ಬಂಡವಲು. ನಮ್ಮಲ್ಲಿ ಪೇಶಂಟ ರಕ್ತ ಪರೀಕ್ಷೆಗಾಗಿ ಬಂದೊಡನೆಯೆ ಅವನನ್ನು ಮೂತ್ರ ಪರೀಕ್ಷೆಗಾಗಿ ಒಬ್ಬ ಸ್ಪೆಶಾಲಿಸ್ಟನ ಕಡೆಗೆ, ಕಣ್ಣು ತಪಾಸಣೆಗೆ, ಚರ್ಮದ ಪರೀಕ್ಷೆಗೆ, ಹೃದಯ ಪರೀಕ್ಷೆಗೆ ಎಂದು ಬೇರೆ ಬೇರೆ ನಮ್ಮ ಗುಂಪಿನ ತಜ್ಞರ ಕಡೆಗೆ ಕಳಿಸುತ್ತೇವೆ. ಇಂಥ ಕೋ–ಆಪರೇಟಿವ್ ರೀತಿಯಲ್ಲಿ ಕೆಲಸ ಮಾಡದಿದ್ದರೆ ಇಂದು ನಾವು ಇಂಥ "ಸ್ಟೈಲ್"ದಲ್ಲಿ ಜೀವನ ನಡೆಸುವುದು ಸಾಧ್ಯವಾದೀತೇ ರಮಾಕಾಂತರಾವ್?"

ದೇಶಪಾಂಡೆಯವರೂ ತಮ್ಮ ವೃತ್ತಿಯ ಗುಟ್ಟನ್ನೆಲ್ಲ ವಿವರಿಸಿ, "ಸಮಾಜ ಸೇವೆಯ ಆಶ್ರಯ ಪಡೆಯದಿದ್ದರೆ, ಬರೀ ವಕೀಲಿ ವೃತ್ತಿಯಿಂದ ನಮ್ಮ ಪ್ರಪಂಚ ನಡೆದೀತೇ? ಅಲ್ಲದೆ, ಸಮಾಜದಲ್ಲಿ ನಮ್ಮನ್ನು ಗೌರವದಿಂದ ಮಾತನಾಡಿಸುತ್ತಿದ್ದರೇ?" ಎಂದು ನಗುತ್ತ ಕೇಳಿದರು.

ಡಾ॥ ರಮಾಕಾಂತರು ಯಾಂತ್ರಿಕವಾಗಿ ಹೂಂಗುಟ್ಟಿದರು. ಸ್ವಲ್ಪ ದೂರದಲ್ಲಿ ನಿಂತಿದ್ದ ನೀಲಕಂಠ ಚಕಿತನಾಗಿ ಕಂಬದಂತೆ ನಿಶ್ಚಲನಾಗಿಬಿಟ್ಟಿದ್ದ. ಈ ವಾರದಲ್ಲಿ ರಮಾಕಾಂತರ ಮನೆಗೆ ಬಂದ ಅತಿಥಿಗಳೆಲ್ಲ ಹೀಗೇಕೆ ತಮ್ಮ ರಹಸ್ಯವನ್ನೆಲ್ಲ ತಾವಾಗಿಯೇ ಹೇಳಿ ಬಿಡುತ್ತಿದ್ದಾರೆ ಎಂಬ ಅವನ ಸಮಸ್ಯೆಗೆ ಪರಿಹಾರ ದೊರೆತಿರಲಿಲ್ಲ.

ಅತಿಥಿಗಳೆಲ್ಲ ಹೋದ ಮೇಲೆ ನೀಲಕಂಠ ..ಾಕ್ಟರರ ಹತ್ತಿರ ಬಂದು ಧೈರ್ಯ ಮಾಡಿ ಕೇಳಿಯೇ ಬಿಟ್ಟ–"ಸಾರ್, ಅತಿಥಿಗಳೆಲ್ಲ ಹೀಗೇಕೆ ತಾವಾಗಿಯೇ ತಮ್ಮ ಗುಟ್ಟನ್ನೆಲ್ಲಾ ರಟ್ಟು ಮಾಡಿ ಬಿಡುತ್ತಿದ್ದಾರಲ್ಲ? ಎಂಥ ಮೋಡಿ ಹಾಕಿ ಬಿಟ್ಟಿದ್ದೀರಲ್ಲ ನೀವು?"

ಡಾ॥ ರಮಾಕಾಂತರು ಅವನನ್ನು ತಮ್ಮ ಪ್ರಾಯ್ವೇಟ ಕೋಣೆಗೆ ಕರೆದೊಯ್ದು ಮೆಲುದನಿಯಲ್ಲಿ ಹೇಳಿದರು–"ಇದಕ್ಕೆಲ್ಲ ಒಂದೇ ಉತ್ತರ, ನೀಲಕಂಠ. ಎಲ್ಲಾ ಶೋಧಕ ಗುಳಿಗೆಯ ಪರಿಣಾಮ. ನನ್ನ ಶೋಧನೆ ಸಂಪೂರ್ಣವಾಗಿ ಸಫಲವಾಗಿದೆ" ಅವರ ಮುಖದ ಮೇಲೆ ತೃಪ್ತಿಯಿತ್ತು.

"ಶೋಧಕ ಗುಳಿಗೆ? ಹಾಗೆಂದರೇನು?" ಅಚ್ಚರಿಯಿಂದ ಕೇಳಿದ ನೀಲಕಂಠ. "ಅಯ್ಯೋ, ಪೆದ್ದೆ! ಈಗ ಕೆಲವು ಸಮಯದಿಂದ ನಾನೊಂದು ಸಂಶೋಧನೆ ಕೈಕೊಂಡಿದ್ದು ನಿನಗೆ ಗೊತ್ತಿದೆಯಪ್ಪ? ಅದರ ಫಲವೇ "ಶೋಧಕ ಗುಳಿಗೆ." ಅದನ್ನು ನುಂಗಿದ ವ್ಯಕ್ತಿ ಎರಡು ನಿಮಿಷದ ನಂತರ ಸತ್ಯ ಸಂಗತಿಗಳನ್ನು ಮಾತ್ರ ಹೇಳುತ್ತ ಹೋಗುವನು. ಆಗ ಸುಮಾರು ಅರ್ಧ ತಾಸಿನವರೆಗೆ ಆ ವ್ಯಕ್ತಿಯ ಮನಃಸ್ಥಿತಿ ಒಂದು ವಿಚಿತ್ರ ರೂಪವನ್ನು ಪಡೆಯುತ್ತದೆ. ನಿಜ ಸಂಗತಿಯನ್ನು ಬಚ್ಚಿಟ್ಟು, ಸುಳ್ಳನ್ನು ಹೇಳುವ ಶಕ್ತಿಯನ್ನು ಆಗ ಆ ವ್ಯಕ್ತಿಯ ಮನಸ್ಸು ಕಳೆದುಕೊಂಡು ಬಿಡುತ್ತದೆ" ವಿವರಿಸಿದರು ಡಾ॥ ರಮಾಕಾಂತ.

"ಓಹೋ! ಎಂಥ ಅದ್ಭುತ ಶೋಧವಿದು! ಅದಕ್ಕಾಗಿಯೇ ನೀವು ಅತಿಥಿಗಳಿಗೆಲ್ಲ ಕೈಯಾರೆ ಚಹಾ ಕಾಫಿ ಕೊಡುವ ಅತಿಥಿ ಸತ್ಕಾರದ ನೆಪದಲ್ಲಿ ಒಂದು ಗುಳಿಗೆಯನ್ನು ಅದರಲ್ಲಿ ಬೆರಸುತ್ತಿದ್ದಿರಿ ಅಂತ ಕಾಣುತ್ತದೆ. ಏನು ಮೋಜು ಸಾರ್ ಇದು? ಅಲ್ಲದೆ ನಿಮ್ಮ ಶೋಧದಿಂದ ಇಡಿಯ ಜಗತ್ತಿಗೇ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ" ಎಂದು ನೀಲಕಂಠ ಹೆಮ್ಮೆ–ಹಿಗ್ಗುಗಳಿಂದ ನುಡಿದ.

"ನನ್ನ ಶೋಧದಿಂದ ಪ್ರಯೋಜನವಿದೆ, ನೀಲಕಂಠೂ, ಆದರೆ ಅದರ ಜೊತೆಗೆ ಡೇಂಜರ್ ಕೂಡಾ ಇದೆ. ತುಂಬಾ ಡೇಂಜರಸ್ ಈ ಶೋಧಕ ಗುಳಿಗೆ. " ಡಾಕ್ಟರರು ಹೇಳಿದರು.

ಮುಂದೆ ರಮಾಕಾಂತರು ಆ ಗುಳಿಗೆಯನ್ನು ತಮ್ಮ ಹೆಂಡತಿಯ ಹಾಗೂ ಮಗನ ಮೇಲೆ ಮಾಡಿ ನೋಡಿ ಅವರ ನಿರ್ಮಲ ಅಂತಃಕರಣವನ್ನು ಕಂಡುಕೊಂಡು ತೃಪ್ತರಾದರು. ಅದಕ್ಕಿಂತ ಹೆಚ್ಚಾಗಿ ತಮ್ಮ ಸಂಶೋಧನೆಯು ಸಂಪೂರ್ಣ ಸಫಲವಾಗಿದೆ ಹಾಗೂ ವ್ಯಕ್ತಿಗಳ ಮೇಲೆ ಯಾವ ದುಷ್ಪರಿಣಾಮ ಮಾಡುವುದಿಲ್ಲ ಎಂಬುದನ್ನು ಖಚಿತ ಮಾಡಿಕೊಂಡು ಹಿಗ್ಗಿದರು.

ಡಾ॥ ರಮಾಕಾಂತರು ಆ ಗುಳಿಗೆಯ ಉಪಯೋಗದಿಂದ ನಿಜವಾದ ಅಪರಾಧಿಗಳನ್ನು ಪತ್ತೆ ಹಚ್ಚಲು ಅನುಕೂಲವಾಗುತ್ತದೆಂದು ನಿರ್ಧರಿಸಿಕೊಂಡರು. ಅಲ್ಲದೆ ದೇಶದಲ್ಲಿಯ ಹಾಗೂ ಅಂತಾರಾಷ್ಟ್ರೀಯ ಗುಪ್ತಚಾರರ ಅಂತರಂಗವನ್ನು ಬಯಲಿಗೆಳೆಯಲು ಇದು ಸುಲಭೋಪಾಯವಾಗುವುದರಿಂದ ಸರಕಾರವು ಈ ಗುಳಿಗೆಯ Formula ವನ್ನು ತಮ್ಮಿಂದ ಸಾಕಷ್ಟು ಹಣ ಕೊಟ್ಟು ಕೊಂಡುಕೊಳ್ಳಬಹುದು ಎಂದುಕೊಂಡರು, ಅಲ್ಲದೆ ತಮಗೆ ರಾಷ್ಟ್ರೀಯ ಗೌರವವೂ ದೊರೆಯುವುದು ಖಂಡಿತ; ಅಲ್ಲದೆ ಮನೆ ಮನೆಗಳಲ್ಲಿಯೂ ಇದರ ಉಪಯೋಗವಿದ್ದೇ ಇದೆ ಎಂದುಕೊಂಡು ಅನೇಕ ಕನಸುಗಳನ್ನು ಕಂಡರು.

ಆಧರೆ ಇಷ್ಟರಲ್ಲಿ ರಮಾಕಾಂತರ ಪತ್ನಿಗೆ ನೀಲಕಂಠನಿಂದ ಈ ಶೋಧಕ ಗುಳಿಗೆಯ ವಿಷಯ ತಿಳಿದು ಬಂದಿತು. ತಮ್ಮ ಪತಿಯ ಮೇಲೆಯೇ ಈ ಗುಳಿಗೆಯ ಪ್ರಯೋಗ ಏಕೆ ಮಾಡಿ ನೋಡಬಾರದು? ಎಂಬ ವಿಚಾರ ಅವರಿಗೆ ಬಂದಿತು. ಅವರಿಗೆ ಇದೊಂದು ವಿನೋದದ, ಮೋಜಿನ ವಿಚಾರವಾಗಿ ಭಾಸವಾಯಿತು. ಸರಿ; ಒಂದು ಸಂಜೆ ತಾವಿಬ್ಬರೇ ಇರುವಾಗ ಕಾಫಿಯಲ್ಲಿ ಒಂದು ಗುಳಿಗೆ ಹಾಕಿ ಡಾ॥ ರಮಾಕಾಂತರಿಗೆ ಕೊಟ್ಟರು. ಲಲಿತಾಬಾಯರಿಗೆ ತುಂಬಾ ಕುತೂಹಲ!

"ನೀವು ಈ ಶೋಧಕ ಗುಳಿಗೆ ಕಂಡು ಹಿಡಿದಿದ್ದೀರಲ್ಲ? ಇದರಿಂದ ನಿಮಗೆ ಅಂತರಾಷ್ಟ್ರೀಯ ಗೌರವ ದೊರೆಯಬಹುದು; ಹಣವೂ ಸಿಗುತ್ತದೆ. ಜಗತ್ತಿನ ದೊಡ್ಡ ಸಂಶೋಧಕರಲ್ಲಿ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ."

ಡಾ॥ ರಮಾಕಾಂತರು ಕಾಫಿ ಕುಡಿದು ಎರಡು ನಿಮಿಷ ಮೌನವಾಗಿ ಕುಳಿತರು. ಲಲಿತಾ ಬಾಯರು ಕೇಳಿದರು. "ಈ ಸಂಶೋಧನೆ ಮಾಡಲಿಕ್ಕೆ ನಿಮಗೆ ಒಟ್ಟು ಎಷ್ಟು ಕಾಲ ಹಿಡಿಯಿತು?"

ಅದಕ್ಕೆ ರಮಾಕಾಂತರು ನಕ್ಕು ಬಿಟ್ಟರು. "ಲಲಿತಾ ಈ ಶೋಧಕ ಗುಳಿಗೆಯ ನಿಜ ಇತಿಹಾಸ ನಿನಗೆ ಗೊತ್ತಿಲ್ಲ. ಜಗತ್ತಿಗೂ ಸತ್ಯ ಸಂಗತಿ ಗೊತ್ತಿಲ್ಲ,ಎಂದೂ ಗೊತ್ತಾಗುವುದೇ ಇಲ್ಲ.ಈ ಗುಳಿಗೆಯ ಮೂಲ Formulaವನ್ನು ಪ್ರಖ್ಯಾತ ವಿಜ್ಞಾನಿ ಪ್ರೊ. ರಘುರಾಮ ಅವರ ಲೆಬೊರೇಟರಿಯಿಂದ ನಾನು ಕದ್ದು ತಂದಿದ್ದೇನೆ. ಇದರಲ್ಲಿ ನಿಜವಾಗಿಯೂ ನನ್ನ ಸಂಶೋಧನೆ ಇಲ್ಲವೇ ಇಲ್ಲ! ಎಲ್ಲರಿಗೂ ಖಾತ್ರಿ ಮಾಡುವುದರ ಸಲುವಾಗಿ ನಾನು ಸುಳ್ಳೇ ಏಳೆಂಟು ದಿವಸ ಅಖಂಡ ಈ ಸಂಶೋಧನೆಯಲ್ಲಿ ತೊಡಗಿದಂತೆ ನಟಿಸಿದೆ, ಅಷ್ಟೆ!"

ಈ ಅನಿರೀಕ್ಷಿತ ವಿಷಯವನ್ನು ಕೇಳಿ ಲಲಿತಾ ಬಾಯರು ಸ್ತಂಭೀಭೂತರಾಗಿ ಕುಳಿತರು. ತಮ್ಮ ಪತಿಯ ಮೇಲೆ "ನಾನು ಏಕೆ ಈ ಗುಳಿಗೆಯ ಪ್ರಯೋಗ ಮಾಡಿದೆ?" ಎಂದು ಪಶ್ಚಾತ್ತಾಪಪಟ್ಟರು. ಈ ಶೋಧಕ ಗುಳಿಗೆಯಿಂದ ಜಗತ್ತಿಗೆ ಪ್ರಯೋಜನವೆ? ಅಥವಾ ಹಾನಿಯೆ? ಎಂಬುದೇ ಅವರಿಗೆ ಬಿಡಿಸಲಾರದ ಸಮಸ್ಯೆಯಾಯಿತು. ●

ಆಕಾಶ ಬುಟ್ಟಿ

ತೂಗಿ ಬಿಡುವೆನು ದೂರ ನಡೆದವರಿಗೆಂದು
ಬಣ್ಣ ಬಣ್ಣದ ಮುಗಿಲ ಬುಟ್ಟಿಯಿದನಿಂದು ॥

ಹಸಿರು ಕನಸನು ಹೊದ್ದ ನೆಲದಕಿವಿಯಲ್ಲಿಂದು
ಗಾಳಿ ಹಾಡಿದೆ ಹಾಲು ತನೆಯ ಹಾಡು
ರತ್ನದೀಪದ ಸಾಲು ನಕ್ಷತ್ರ ಮಾಲೆಗಳ
ಕಂಡು ತಲೆಯೆತ್ತಿಹುದು ಮುಗಿಲ ಗೂಡು ॥೧॥

ಕಾಲವೇ ಕತ್ತಲೆಯ ಕೋಲೂರಿ ನಿಲ್ಲಿಸಿದೆ
ಹಲವು ಹಂಬಲ ಹಾಳೆಗಳನು ಹಚ್ಚಿ
ಬದುಕಿನೆಣ್ಣೆಯು ಹೊಯ್ದು ಹಣತೆಯಲಿ ಬೆಳಗುತಿದೆ
ಜೀವ ಬೆಳಕಿನ ಗತಿಯು ಗರಿಯು ಬಿಚ್ಚಿ ॥೨॥

ದೂರ ದಾರಿಯು ನಡೆದ ಹಿರಿಯರೆ, ನಿಮಗಿಲ್ಲಿ
ದಾರಿ ತೋರಲಿ ನನ್ನ ಪುಟ್ಟ ಬೆಳಕು
ದುಃಖ ಚೀಲವ ಹೊತ್ತು ಸಾಗಿರುವ ಪಯಣಿಗರೆ
ಹಿತ ಹಿಗ್ಗು ಇದಿರಲಿ ಹೊಳೆವ ಬದುಕು ॥೩॥

ಸುಬ್ಬಣ್ಣ ಎಕ್ಕುಂಡಿ



ಸೀಮೋಲ್ಲಂಘನ

(ರೂಪಕ)

ಮಾಧವ ನಾ. ಮಹಿಷಿ

ಕಾಣಿಸಿಕೊಳ್ಳುವವರು :

೧ ಯುವಕ
೨ ಯುವತಿ
೩ ಸೂತ್ರಧಾರ
೪ ವ್ಯಕ್ತಿ

(ಸಾಗರದ ತೆರೆಗಳು ದಂಡೆಗಪ್ಪಳಿಸುವ ಗಂಭೀರ ಹಿನ್ನೆಲೆಯಲ್ಲಿ ಉಪನಿಷತ್ತಿನ ಶಾಂತಿ ಮಂತ್ರ 'ಓಂ ಸಹನಾವವತು ಸಹನೌ ಭುನಕ್ತು, ಸಹವೀರ್ಯಂ ಕರವಾವಹೈ, ತೇಜಸ್ವಿನಾ ವಧೀತಮಸ್ತು, ಓಂ ಶಾಂತಿಃ ಶಾಂತಿಃ ಶಾಂತಿಃ' ಅಷ್ಟೇ ಗಂಭೀರವಾಗಿ ಕೇಳಿಬರುತ್ತದೆ. ಆ ಮಂತ್ರಪಠಣ ಕೊನೆಗೊಳ್ಳುತ್ತಿರುವಂತೆಯೇ ಅದೇ ಜನಿಸಿದ ಮಗುವಿನ ಮೊದಲ ಅಳುವಿನ ಧ್ವನಿ, ತೆರೆಗಳ ಸಪ್ಪಳ ಕ್ಷೀಣಿಸುತ್ತಿರುವಂತೆಯೆ...)

ಯುವಕ: ಛೆ, ಇದೊಂದು ದ್ವಂದ್ವ. ಆ ಮುದುಕ ಶಾಂತಿಗಾಗಿ ಹಪಾಹಪಿಸುತ್ತಿದ್ದಾನೆ; ಈ ಮಗು ಮಣ್ಣಿನ ವಾಸನೆ ಮೂಗಿಗೆ ಬಡಿದೊಡನೆಯೆ ಉಸಿರುಕಟ್ಟುವಂತೆ ಕಿರುಚುತ್ತಿದೆ–ಅಶಾಂತಿಪರ್ವಕ್ಕೆ ಮುನ್ನುಡಿಯೆಂಬಂತೆ!

ಯುವತಿ: ಯಾಕೀ ಹೊಯ್ದಾಟ ಯುವಕಾ? ಸಾಗರದಂಚಿಗೆ ನಿಂತೂ ನೀನು ಸತ್ಯವನ್ನು ಗುರುತಿಸದೆ ಹೋದೆಯಾ? ಆ ಮುದುಕನದು ಶಾಂತಿ ಮಂತ್ರವೂ ಅಲ್ಲ. ಈ ಮಗುವಿನದು ಅಶಾಂತಿಮಂತ್ರವೂ ಅಲ್ಲ, ನಿನ್ನ ಕೃತಿಯ ಪರಿಣಾಮವನ್ನೆದುರಿಸಲಾಗದೆ ವಿಶ್ವಾಮಿತ್ರನಾಗಬೇಡ. ದ್ವಂದ್ವ ನಿನ್ನ ಮನಸಿನ ಮಗು. ಸಂಶಯದ ಶಿಶು. ಹೂಂ, ಸಮಯ ಸಾಲದು; ಸಂಶಯದ ಸೀಮೆಯನ್ನುಲ್ಲಂಘಿಸು. ಜಡತೆ ಮರಣ, ಗತಿಯೇ ಜೀವನ; ಪ್ರಗತಿಯೇ ಗುರಿ, ಹೆಗ್ಗುರಿ...

(ಮತ್ತೆ ಭೋರ್ಗರೆವ ಸಾಗರದ ಅಬ್ಬರದಲ್ಲಿ ಅವಳ ಧ್ವನಿ ಲೀನವಾಗಿ ಬಿಡುತ್ತದೆ)

ಸೂತ್ರಧಾರ: ಅಬ್ಬಾ! ಏನಿದು ಹುಡುಗಾಟ? ನಾನು ಸೂತ್ರದಾರ. ಈ ನಾಟಕದಲ್ಲಿಯ ಪಾತ್ರಗಳೆಲ್ಲ ನನ್ನ ತಾಳಕ್ಕೆ ತಕ್ಕಂತೆ ಕುಣಿಯಬೇಕು. ಇದು ನನ್ನ ಇಚ್ಛೆ. ಅಂತೆಯೇ ಅವನ ಇಚ್ಛೆಯೂ ಹೌದು. ಇದು ನಿಯತಿ. ಇದೇ ನಿಯಮ. ಇನ್ನು ವಿಲಂಬವೇಕೆ? ಧಾ ಧಾಗಿನ್ನ ಧಾ...ಧಾ–ಧಾ ತಿರಕಿಟ ಧಾ... ಇದೇನು, ಪಕ್ಕ ಮೇಳದವರೂ ಇಲ್ಲ, ನರ್ತಕಿಯೂ ನಾಪತ್ತೆ! ಸೂತ್ರಧಾರ ನಾನೆಂಬುದು ಇವರಿಗೆ ತಿಳಿಯದೆ?! (ನಿರಾಸೆಯಿಂದೆಂಬಂತೆ) ಕಲಿಯುಗ. ಇದು ಕಲಿಯುಗ. ಇಲ್ಲಿ ನಿಯಮಗಳೆಲ್ಲ ತಲೆಕೆಳಗಾಗಿರುವುದೇ ಯುಗಧರ್ಮ! ನಾನು ಸೂತ್ರಧಾರ; ಆದರೆ ನಾ ಹಿಡಿದ ಸೂತ್ರದ ಆ ತುದಿಗೆ ಗೊಂಬೆಗಳೇ ಇಲ್ಲವಾದರೆ ನಾನು ಯಾರನ್ನು ಕುಣಿ

ಸಲಿ? ಆ ಗೊಂಬೆಗಳೇನಾದರೂ ಇಂದು ಜೀವ ತುಂಬಿಕೊಂಡು ನನ್ನ ವಿರುದ್ಧ ದುಪ್ಪರ ಹೂಡಿದುವೆ? ಛೆ, ಇದೊಂದು ದ್ವಂದ್ವ, ದ್ವಂ...ದ್ವ...

ವ್ಯಕ್ತಿ: ಏನಿದು ಸೂತ್ರಧಾರ, ನಿನ್ನ ತಾಳಕ್ಕೆ ತಕ್ಕಂತೆ ನೀನಾದರೂ ಕುಣಿಯಬಾರದೆ? ಎಲ್ಲಿ ನಿನ್ನ ತಾಳ? ಎಲ್ಲಿ ನಿನ್ನ ತಂತಿ? ನೀನೀಗ ಕವಲು ದಾರಿಯಲ್ಲಿ ನಿಂತಿರುವಿ. ಇದರಲ್ಲಿ ನಿನ್ನ ದಾರಿಯೇನೆಂದು ನಿನಗೇ ತಿಳಿಯದಂತಾಗಿ ಪರಿತಪಿಸುತ್ತಿರುವಿ. ದ್ವಂದ್ವ ಇರುವುದು ನಿನ್ನ ತಲೆಯಲ್ಲಿ. ಪ್ರಕೃತಿ ನಿಂತ ನೀರಲ್ಲ. ಪ್ರಗತಿಯತ್ತ ನೀನು ದಾರಿ ತೋರಬಲ್ಲೆಯಾದರೆ ಇದ್ದುಬಿದ್ದವರೆಲ್ಲ ನಿನ್ನ ಬೆನ್ನ ಹಿಂದೋಡಿ ಬರುತ್ತಾರೆ. ನಿನ್ನ ತಾಳಕ್ಕೆ ತಕ್ಕಂತೆ ಕುಣಿಯಲು ಜನ ಗೊಂಬೆಗಳೂ ಅಲ್ಲ; ಗೊಂಬೆಗಳಿಗೆ–ಕುಣಿಯಬೇಕೆಂದರೂ–ಜೀವವಿಲ್ಲ... ಆ ನಿರ್ಜೀವ ಜಗತ್ತಿಗೆ, ಬೇಕಾದರೆ ನೀನೇ ರಾಜ ನೀನೇ ರಾಣಿ ಅಂದುಕೊ. ನಿನ್ನ ನಿರ್ಜೀವ ಜಗತ್ತಿನ ಲಕ್ಷಣವೇ ನಿಷ್ಕ್ರಿಯತೆಯಲ್ಲವೇನು?

ಸೂತ್ರಧಾರ: ಏಯ್, ಇಲ್ಲದ ಸಂಶಯದ ಬೀಜವನ್ನು ನನ್ನ ಮನಸ್ಸಿನಲ್ಲಿ ಬಿತ್ತಬೇಡ. ಕರ್ತವ್ಯವನ್ನು ಮರೆತು ನನ್ನೆದುರು ಹರಟಬೇಡ. ನಾನೆಳೆವ ಸೂತ್ರದ ಛಂದಕ್ಕೆ ಸರಿಯಾಗಿ ನೀನು ಹೆಜ್ಜೆ ಹಾಕಬೇಕು. ಮೈ ಕೈ ಅಲುಗಿಸಬೇಕು. ಸಲ್ಲದ ಹಾಳು ಹರಟೆಗೆ ಕಿವಿಗೊಡಲು ನನಗೆ ಸಮಯವೆಲ್ಲಿ!? ಹೂಂ, ತಕ ಧೀಂ ತನನ... (ಅವನ ಧ್ವನಿ ಅರಣ್ಯರೋದನದಂತೆ ಅನಂತದಲ್ಲಿ ಲೀನವಾಗಿಬಿಡುತ್ತದೆ.)

ವ್ಯಕ್ತಿ: ಹ್ಹ ಹ್ಹ ಹ್ಹ... ಸೃಷ್ಟಿಕರ್ತನಿಗೂ ಇಲ್ಲದ ಸೊಕ್ಕು ನಿನಗೇಕೆ? ನೀನು ಸೂತ್ರಧಾರನಾಗಿರುವೆಯಾದರೆ ಅದು, ನಿನಗೆ ವಹಿಸಿಕೊಟ್ಟಿರುವ ಒಂದು ಕರ್ತವ್ಯವನ್ನು ತೂಕ ತಪ್ಪದಂತೆ ನಿರ್ವಹಿಸುವುದಕ್ಕಾಗಿ. ನಿನಗಿಲ್ಲದ, ನಿನಗೆ ಸಲ್ಲದ ಗುಣಶ್ರೇಷ್ಠತೆಯನ್ನು ನಿನಗೆ ನೀನೇ ಆರೋಪಿಸಿಕೊಂಡು ಹೊಗೆಸುತ್ತಿದ ಕನ್ನಡಿಯಲ್ಲಿ ಪ್ರತಿಬಿಂಬ ಕಂಡು ಮೈ ಮರೆತಿರುವಿ. ನೀನು ನೋಡಬೇಕಿರುವುದು ದಿಗಂತವನ್ನಲ್ಲ; ನಿನ್ನೊಳಗೇನಿದೆಯೆಂದು ತುಸು ಇಣುಕಿ ನೋಡಿಕೊ...

ಸೂತ್ರಧಾರ: ನಾನಾಡಿಸುವ ಆಟದಲ್ಲಿ ನೀನೊಂದು ಪಾತ್ರ. ಅದನ್ನು ಮರೆತು ನನಗೇ ಉಪದೇಶ ಮಾಡಲು. ಮುಂದಾಗಿರುವ ನಿನ್ನ ಧಾರ್ಷ್ಟ್ಯವನ್ನು ನಾನು ಸಾಮಾನ್ಯನಾಗಿದ್ದರೆ ಮೆಚ್ಚಬಹುದಿತ್ತು. ನಿನ್ನನ್ನೂ ನಿನ್ನಂಥವರನ್ನೂ ಆಡಿಸುವುದೇ ನನ್ನ ಕರ್ತವ್ಯ–ಅಲ್ಲಲ್ಲ ಧರ್ಮ. ಕೆಲಸಕ್ಕೆ ಬಾರದ ಮಾತಿನಲ್ಲಿ ಸಮಯ ಹರಣ ಮಾಡಬೇಡ. ನಾ ಬಯಸಿದೊಡನೆಯೇ ನನಗೆ ನಿನ್ನ ಕಾಲ್ಗೆಜ್ಜೆಯ ಧ್ವನಿ ಕೇಳಲೇಬೇಕು. ಧಾ, ಧಾ ತಿರಕಟ ಧಾ... ಯಾಕೆ, ಕಾಲಲ್ಲಿಯ ಕಸುವು ಉಡುಗಿಹೋಗಿದೆಯೇನು!?

(ಕುಣಿತವನ್ನಾರಂಭಿಸಿದಂತೆ ಒಂದೆರಡು ಹೆಜ್ಜೆ ಹಾಕಿದ ಗೆಜ್ಜೆಗಳ ಸಪ್ಪಳ ಅದು ಪ್ರಾರಂಭವಾಯಿತೆನ್ನುವಷ್ಟರಲ್ಲೇ ನಿಂತುಬಿಡುತ್ತದೆ.)

ವ್ಯಕ್ತಿ: (ಸ್ವಗತ) ಇವನಾಣತಿ ಕೇಳಿದಾಗ ಮನಸನ್ನು ಮೀರಿಯೂ ಕಾಲು ಕುಣಿಯಲು ತವಕಿಸುತ್ತಿವೆಯಲ್ಲ! (ಪ್ರಕಟ) ನೋಡು ಸೂತ್ರಧಾರ, ನಿನ್ನ ಆಜ್ಞೆಯಲ್ಲೇ ಎಲ್ಲೋ ಕೊರತೆಯಿದೆ. ನಿನ್ನ ಶಬ್ದಗಳು ಬಂದು ಕಿವಿಗೆ ಅಪ್ಪಳಿಸಿದರೂ ಕಾಲುಗಳನ್ನು ತಲಪುವುದೇ ಇಲ್ಲ. ಬೆಳಕಿನ ಆಗರವಾಗಿರಬೇಕಿದ್ದ ನೀನು ಕತ್ತಲೆಯ ಖನಿಯಾಗಿರುವಿ. ನಿನ್ನ ಒತ್ತಾಯ ಹೆಚ್ಚಿದರೆ ಧಿಕ್ಕಾರ ಅನಿವಾರ್ಯವಾಗುತ್ತದೆ. ಸೂತ್ರ ಹರಿದು ಹೋಗುವ ಮುನ್ನ ಇನ್ನೊಮ್ಮೆ ಹುರಿ ಹಾಕಿಕೊ.

ಸೂತ್ರಧಾರ: ಕಲಿಯುಗ, ಇದು ಕಲಿಕಾಲ. ತಲೆ ಕೆಳಗಾಗಿರುವುದೇ ಯುಗಧರ್ಮ ಇದ್ದೊಬ್ಬ ಪಾತ್ರಧಾರಿಯೂ ನನ್ನನ್ನು ಮೀರುತ್ತಿದ್ದರೆ ಆ ಇಬ್ಬರು ನಾಪತ್ತೆ!

ವ್ಯಕ್ತಿ: ತಲೆ ಮೇಲೆ ಕೈ ಹೊತ್ತು ಕೂಡದಿರು ಸೂತ್ರಧಾರ. ಅದೋ ಅಲ್ಲಿ ಕೇಳಿಬರುತ್ತಿರುವುದೇನು ಆಲಿಸು... ಕಿವಿಗೊಟ್ಟು ಕೇಳು. (ಮತ್ತೆ ಭೋರ್ಗರೆವ ಸಾಗರದ ಹಿನ್ನೆಲೆಯಲ್ಲಿ 'ಓಂ ಸಹನಾವತು... ಶಾಂತಿಃ ಶಾಂತಿಃ' ಕೇಳಿ ಬರುತ್ತಿರುವಂತೆಯೇ ಮಗುವಿನ ಅಳುವೂ ಕೇಳಿಸುತ್ತದೆ.)

ವ್ಯಕ್ತಿ: ಕೇಳಿದೆಯಾ ಸೂತ್ರಧಾರ ?

ಸೂತ್ರಧಾರ: ನಾನಿರುವುದು ಕೇಳುವುದಕ್ಕಲ್ಲ, ಹೇಳುವುದಕ್ಕೆ; ಆದರೂ ಕೇಳುತ್ತಿದ್ದೇನೆ. ಯಾವುದು ನನ್ನ ಧರ್ಮವಲ್ಲವೋ ಅದನ್ನು ಮಾಡಲು ನೀನು ಒತ್ತಾಯಿಸುತ್ತಿದ್ದೀ! ನಾನು ಮಣಿಯಬಾರದು. ಹತ್ತು ಬದಿಯಿಂದ ಬರುವುದನ್ನೆಲ್ಲ ಕೇಳಿಸಿಕೊಂಡೆನಾದರೆ ನನ್ನ ಗತಿಯೇನು, ನನ್ನ ಸೂತ್ರಗಳ ರತಿಯೇನು? ಎಲ್ಲ ಪಾತ್ರಧಾರಿ, ಹೊರಗಿನ ಧ್ವನಿಗೆ ಮನಸೋಲದಿರು. ಒಮ್ಮೆ ಮನ ಸೋತರೆ ಮೈ ಸೋಲಲು ಹೊತ್ತು ಹಿಡಿಯುವುದಿಲ್ಲ.

(ಹಿನ್ನೆಲೆಯಲ್ಲಿ ಬಿರುಗಾಳಿಯ ಅಬ್ಬರ. ಅದರ ಹಿಂದೆಯೇ ಕೋಲಾಹಲದ ಗದ್ದಲ

ಸೂತ್ರಧಾರ : ಏನಿದು ಕೋಲಾಹಲ!

ಯುವಕ: ಕೋಲಾಹಲವಲ್ಲ, ಹಾಲಾಹಲ! ಧೈರ್ಯವಿದ್ದರೆ ನುಂಗು; ನುಂಗಿ ನೀಲಕಂಠನಾಗು. ನರಸತ್ತವನಂತೆ ಹೀಗೇಕೆ ನಿಂತಿರುವಿ ಸೂತ್ರಧಾರ? ಎಲ್ಲಿ ನಿನ್ನ ಸೂತ್ರಗಳು? ಎಲ್ಲಿ ನಿನ್ನ ತಾಳ? ಎಲ್ಲಿ ನಿನ್ನ ತಂತಿ?

ಸೂತ್ರಧಾರ:– (ಹೌಹಾರಿದವನಂತೆ) ಬಂದೆಯಾ, ಬಾ ಯುವಕ, ಅದೆಲ್ಲಿ ಮಾಯವಾಗಿದ್ದಿ? ಯುವತಿಯೆಲ್ಲಿ?

ವ್ಯಕ್ತಿ: ನೀನು ಕಣ್ಣಿದ್ದೂ ಕುರುಡ ಸೂತ್ರಧಾರ! ಯುವಕನನ್ನು ಬಿಟ್ಟು ಯುವತಿಯಿಲ್ಲ, ಯುವತಿಯನ್ನು ಬಿಟ್ಟು ಯುವಕನಿಲ್ಲವೆಂಬುದು ನಿನಗೆ ತಿಳಿಯದಲ್ಲ ! ಅದೆಂಥ ಜಡಮತಿ ನಿನ್ನದು !

ಸೂತ್ರಧಾರ: ಕಣ್ಣಿಗೆ ಕಾಣದ್ದನ್ನು ನಂಬು ಎನ್ನುತ್ತೀಯಾ? ನನಗೆ ತತ್ತ್ವೋಪದೇಶ ಬೇಡ. ನಾನು ನಂಬುವುದು ವಸ್ತುಸ್ಥಿತಿಯನ್ನು ಮಾತ್ರ. ನಾನು ಕಣ್ಕಟ್ಟು ನೋಡಲೂ ಅರೆ, ಮಾಡಲೂ ಅರೆ.

ವ್ಯಕ್ತಿ: ಹ್ಹ ಹ್ಹ ಹ್ಹ! ಕಲಿಕಾಲ ಸೂತ್ರಧಾರ, ಇದು ಕಲಿಕಾಲ. ಇಷ್ಟು ದಿನ ನೀನು ಮಾಡುತ್ತ ಬಂದುದೇನೆಂದು ನಿನಗೇ ತಿಳಿಯದಲ್ಲ ! ಕಲಿ ಈಗ ನಿನ್ನ ತಲೆಯಲ್ಲಿ ಹೊಕ್ಕಿದ್ದಾನೆ. ಕಣ್ಣುಜ್ಜಿಕೊಂಡು ನೋಡು. ನೀನು ಯುವತಿಯೆಂದು ಭಾವಿಸಿದ್ದವಳು ತಾಯಿಯಾಗಿ ನಿಂತಿದ್ದಾಳೆ. ಆಕೆ ಎದೆಗವುಚಿಕೊಂಡಿರುವುದೇನು ನೋಡು. ನಿನ್ನ ಸೂತ್ರ ಎಳೆದುನೋಡು, ಆ ಮಗುವಿನ ಮೇಲಾದರೂ ನಾಟೀತೇ ಎಂದು! (ಮಗುವಿನ ಅಳು.)

ಸೂತ್ರಧಾರ: ಏನಿದು ಯುವತಿ! ನನ್ನನ್ನು, ಈ ಸೂತ್ರಧಾರನನ್ನು ಮೀರಿ ಇದೇನು ಮಾಡಿಬಿಟ್ಟೆ ?

ಯುವತಿ: ಸೂತ್ರಧಾರ, ನಿನ್ನ ಸೂತ್ರಗಳ ಮಿತಿಯರಿಯದೆ ನೀನು ಬಡಬಡಿಸುತ್ತಿರುವಿ. ಆ ರಂಗಮಂಚದ ಹೊರಗೆ ನಿನ್ನ ಸೂತ್ರಗಳು ಬರಿ ನಿರ್ಜೀವ ದಾರವೆಂಬುದು ನೀನು ತಿಳಿಯದೇ ಹೋದೆಯಲ್ಲ! ವಯಸ್ಸು ಬೆಳೆದರೂ ತಿಳುವಳಿಕೆ ಇದ್ದಲ್ಲೇ ಉಳಿದಿದೆಯಲ್ಲ! ಆ ಮುದುಕ ಸಾಗರದ ಬದಿ ನಿಂತು 'ಶಾಂತಿ ಶಾಂತಿ' ಎಂದು ಅರಚುತ್ತಿದ್ದಾನೆ. ಈ ಯುವಕ ಹರೆಯದ ಹುಮ್ಮಸಿನಲ್ಲಿ ತಾ ಮಾಡಿದ್ದು ತಪ್ಪೊ ಒಪ್ಪೊ ತಿಳಿಯದೆ ಸಂಶಯದ ಸುಳಿಯಲ್ಲಿ ಸಿಕ್ಕು ಅಂಡಲೆಯುತ್ತಿದ್ದಾನೆ. ಜಗತ್ತು ನಮ್ಮ ನಿಮ್ಮೆಲ್ಲರನ್ನೂ ಮೀರಿದ ನಿಯಮಗಳಂತೆ ನಡೆದಿದೆಂಬುದನ್ನು ನೀವೆಲ್ಲ ಮರೆಯುತ್ತಿದ್ದೀರಿ,

ಯುವಕ: ಸೂತ್ರಧಾರ, ನೀನೊಲ್ಲದುದಕ್ಕೆ ಈಕೆ ಸಂತೋಷದಿಂದ ಕೈಯೊಡ್ಡುತ್ತಿದ್ದಾಳೆ ನೋಡು! ಹಾಲಾಹಲವನ್ನೇ ಅಮೃತವೆಂದು ಸ್ವೀಕರಿಸಲು ಮುಂದಾಗುತ್ತಿದ್ದಾಳೆ,

ಯುವತಿ: ಮೀಸೆ ಹೊತ್ತವರಲ್ಲಿ ಪೌರುಷ ಬರಿ ಬಢಾಯಿಯಾಗುಳಿದರೆ ಹೆಣ್ಣು ತಾನು ಶಕ್ತಿಯೆಂಬುದ ತೋರಬೇಕಾಗುತ್ತದೆ. ಗುರಿಯನ್ನು ದಾರಿಯನ್ನೂ ಸ್ಪಷ್ಟವಾಗಿ ತಿಳಿದಿರಬೇಕಾದವರು ಸಂದೇಹದ ಮಡುವಿನಲ್ಲಿ ಮುಳುಮುಳುಗಿ ಏಳುತ್ತಿದ್ದೀರಿ. ನಾವು ಯೌವನದ ಆನಂದವನ್ನು ಹೊತ್ತು ಮೃತ್ಯುವಿನ ದಿಕ್ಕಿನಲ್ಲಿ ಸಾಗಿರುವುದು ನಿರರ್ಥಕವಾಗಿಯಲ್ಲ–ಯಾವುದೇ ಒಂದು ಸತ್ಯದ ಪ್ರತಿಷ್ಠಾಪನಕ್ಕಾಗಿ, ಆ ಸತ್ಯದ ಸರಿಯಾದ ಚಿತ್ರ ಈ ಕ್ಷಣಕ್ಕೆ ನಮ್ಮ ಕಣ್ಣೆದುರಿರಲಿಕ್ಕಿಲ್ಲ. ಆದರೆ ಹಾಗೆಂದು ನಾವು ನಿಷ್ಕ್ರಿಯರಾಗಿ ಕೈ ಚೆಲ್ಲಿ ಕೂಡಲಾಗುತ್ತದೆಯೆ?

ಸೂತ್ರಧಾರ: ಯುವತಿ, ಸಣ್ಣ ಬಾಯಲ್ಲಿ ದೊಡ್ಡ ತುತ್ತೇಕೆ? ಸೂತ್ರಧಾರನ ಆಣತಿಯನ್ನು ಮೀರಿ ನಡೆದ ತಪ್ಪು ಮುಚ್ಚಿಕೊಳ್ಳಲು ನಿನಗೇ ತಿಳಿಯದ ತತ್ತ್ವಗಳ ಗಂಟನ್ನು ಬಿಚ್ಚಬೇಡ.

ವ್ಯಕ್ತಿ: ಯುವತಿ, ಇವನ ಮಂಕನ್ನು ಯಾರೂ ತಿದ್ದಲಾರರು. ತುಕ್ಕು ಹಿಡಿದ ಯಂತ್ರವಾಗಿದ್ದಾನಿವನು. ವಯಸ್ಸಿನೊಂದಿಗೆ ಬಂದ ಅನುಭವದ ಅಭ್ಯಾಸದಿಂದ ತನ್ನ ಬಗ್ಗೆ ತಾನೇ ಕಲ್ಪಿಸಿಕೊಂಡುದನ್ನು ಮಾತ್ರ ನಂಬುತ್ತಾನಿವನು. ಇವನೆದುರು ಮಾತಾಡುವುದೆಂದರೆ ಬೋರ್ಗಲ್ಲ ಮೇಲೆ ಹಾಲು ಸುರಿದಂತೆ,

ಸೂತ್ರಧಾರ: ಧರ್ಮವನರಿಯದೆ, ನಿಯಮ ಮೀರಿ ನಡೆವುದೇ ಧರ್ಮ ವೆಂದು ಭ್ರಮಿಸಿ ವರ್ತಿಸುತ್ತಿದ್ದೀರಿ. ನಿಮ್ಮ ನಡತೆಗೆ ಯೌವನದ ಒಪ್ಪವಿಟ್ಟುಕೊಂಡು ಅದೇ ದಿಟವೆಂದು ಸಾಧಿಸುತ್ತಿದ್ದೀರಿ. ಅಸಹಾಯ ಹೆಣ್ಣು ಮಹಾಜ್ಞಾನಿಯಂತೆ ಮಾತಾಡತೊಡಗುವುದು ಕಲಿಯುಗದ ವೈಪರೀತ್ಯವಲ್ಲದಿನ್ನೇನು !?

ಯುವಕ: ಸೂತ್ರಧಾರ, ನಮಗೆಲ್ಲ ನಾಯಕನಾಗಿರಬೇಕಾದ ನೀನು ಅಸಹಾಯ ನಂತೆ ಅಳುತ್ತಿರುವೆಯಲ್ಲ !

ಸೂತ್ರಧಾರ: ಅಸಹಾಯನಂತಲ್ಲ, ವಿವೇಕಿಯಂತೆ ಚಿಂತಿಸುತ್ತಿದ್ದೇನೆ. ನಮ್ಮ ಕೃತಿ ಗಳ ಯುಕ್ತಾಯುಕ್ತತೆಗಳನ್ನು ನನ್ನೊಳಗೇ ವಿಮರ್ಶಿಸುತ್ತಿದ್ದೇನೆ.

ವ್ಯಕ್ತಿ: ಅಬ್ಬಾ ವಿವೇಕವೆ!

ಯುವತಿ: ಈ ವಿವೇಕ ನಮ್ಮನ್ನು ನಿಷ್ಕ್ರಿಯರಾಗಿಸುವುದಾದರೆ ನಮಗಿದು ಬೇಡ.

ಯುವಕ: ಯುವತಿ, ಮಾತಿನ ಚಮತ್ಕೃತಿಯಿಂದ ವ್ಯರ್ಥ ಕಾಲಹರಣ ಮಾಡ ಬೇಡ. ಮನುಷ್ಯಧರ್ಮ ವಿವೇಕವನ್ನು ಮೀರಿರಲಾರದು.

ಯುವತಿ: ಯುವಕ, ಅನಾವಶ್ಯಕ ದ್ವಂದ್ವಕ್ಕೆ ಮತ್ತೆ ಎಡೆಗೊಡಬೇಡ. ಹೊಣೆ ಹೊತ್ತವನಂತೆ ವರ್ತಿಸು. ವಿವೇಕ ಹೊಣೆ ಹಾರಿಸಿಕೊಳ್ಳಲೊಂದು ಉಪಕರಣ ಮಾತ್ರವಾಗದಿರಲಿ. ಈ ಮಾತನ್ನು ನಿನ್ನನ್ನುದ್ದೇಶಿಸಿಯೇ ಹೇಳುತ್ತಿದ್ದೇನೆ.

ಯುವಕ: ಯುವತಿ...(ಎಂದು ಪ್ರಾರಂಭಿಸುವಷ್ಟರಲ್ಲೇ ಹಿನ್ನೆಲೆಯಲ್ಲಿ ಮತ್ತೆ ಕೋಲಾಹಲ ಕೇಳಿಬರುತ್ತದೆ. ಅದು ಸವೆಯುತ್ತಿದ್ದಂತೆಯೆ ತಾಲಬದ್ಧ ನರ್ತ ನದ ಸ್ಪಷ್ಟ ಧ್ವನಿ.)

ವ್ಯಕ್ತಿ: ಸೂತ್ರಧಾರ, ಅದೇನು ನೋಡುತ್ತಿರುವಿ? ಕೇಳು, ಕಿವಿಗೊಟ್ಟು ಕೇಳು. ನಿನ್ನನ್ನೂ ಮೀರಿದ ಯಾವನೋ ಸೂತ್ರಧಾರ ಜಗತ್ತನ್ನು ಕುಣಿಸುತ್ತಿದ್ದಾನೆ ನೋಡು.

ಸೂತ್ರಧಾರ: ಕಲಿಕಾಲ! ನನ್ನನ್ನು ಮೀರಿಯೂ ನಾನು ಬಯಸದಿದ್ದಾಗಲೂ ಜಗತ್ತು ನರ್ತಿಸುತ್ತಿದೆ: ನಾನು ಬಯಸಿದಾಗ ನನ್ನ ಧ್ವನಿಯೇ ನನ್ನನ್ನು ಅಣಕಿಸುತ್ತಿದೆ!

ಯುವತಿ: ಕಲಿಕಾಲವೇನು ಬಂತು ! ಜಗತ್ತು ಎಂದೆಂದಿಗೂ ಹೀಗೆಯೇ ಇತ್ತು, ಇಂದೂ ಇದೆ, ಮುಂದೂ ಇರುತ್ತದೆ. ಆದರೆ ನಿರಂತರ ಸೃಷ್ಟಿಕಾರ್ಯವನ್ನು ನಾವು ಮಾಡುತ್ತಲೇ ಹೋಗಬೇಕಿದೆಯೆನ್ನುವುದನ್ನು ಮರೆತರೆ ನಿಂತ ನೀರಿನಂತೆ ಮಲೆತು ಹೋಗುತ್ತೇವೆ.

ಯುವಕ: ಯುವತೀ, ನಿನ್ನ ಮಾತಿನಲ್ಲೇ ನನಗೆ ಬೆಳಕಿನ ಆಸೆ ತೋರುತ್ತಿದೆಯಲ್ಲ. ನಾವು ನಿನ್ನಿಂದ ಪಾಠ ಕಲಿಯಬೇಕಾಗಿ ಬಂತೆ? ವಿಧಿಯಲೀಲೆ?

ಯುವತಿ: ಯಾಕೆ ಯುವಕ, ತಿಳುವಳಿಕೆಯ ಗುತ್ತಿಗೆಯೇನು ಮೀಸಲೇ ಇದೆಯೆ ?

(ಮಗು ಮತ್ತೆ ಅಳುತ್ತದೆ.)

ಯುವತಿ: ಹಿಡಿ ಯುವಕಾ, ಕೈಗೆತ್ತಿಕೊ ನಿನ್ನ ಮಗುವನ್ನು. ಅದು ಅಳುತ್ತಿದೆ ಯೆಂದು ಹೆದರಬೇಡ. ಅದು ಅಳುವಲ್ಲ, ಪಾರ್ಥಿವ ಬಂಧನದ ವಿರುದ್ಧ ಅದರ ಪ್ರತಿಭಟನೆ. ಎಳವೆಯಲ್ಲಿ ಅಳುವೇ ಅದಕ್ಕೆ ಆಧಾರ. ಯೌವನದಲ್ಲಿ ಕಾಲಿಕ್ಕಿದಾಗ ಅದರ ಶಕ್ತಿಯನ್ನು ನೋಡುವೆಯಂತೆ. ನಾವು ಸೃಷ್ಟಿಸುವುದಕ್ಕಾಗಿ ಇಲ್ಲಿ ಬಂದಿ ದ್ದೇವೆ. ಅದೇ ಸತ್ಯ, ಅದೇ ಶಿವ. ಅದೇ ಸುಂದರ. ನಾವು ಸೃಜಿಸಿದ ಪದಾರ್ಥವನ್ನು ಅರಳಿಸಬೇಕಾದರೆ ನಾವು ಆತ್ಮದಾನ ಮಾಡಬೇಕು. ಅದರ ಆನಂದದಲ್ಲಿ ನಮ್ಮನ್ನು ನಾವು ಮರೆಯೋಣ. ನಮ್ಮ ಗುರಿಯ ಬಗ್ಗೆ, ನಮ್ಮ ದಾರಿಯ ಬಗ್ಗೆ ನಮಗೆನಿತೂ ಸಂಶಯ ಬೇಡ, ಸಂದೇಹ ಬೇಡ. ಹೂಂ, ಸಂಶಯದ ಸೀಮೋಲ್ಲಂಘನವಾಗಲಿ. ಸೂತ್ರಧಾರ, ಏನು ನೋಡುತ್ತಿರುವಿ? ನಿನ್ನ ಕರ್ತವ್ಯ ನೀನು ಮಾಡು, ಜಗತ್ತು ತನ್ನನ್ನು ತಾನು ನೋಡಿಕೊಳ್ಳುತ್ತದೆ. ಹೂಂ...

ಸೂತ್ರದಾರ: ಧಾ, ಧಾಗಿನ್ನ ಧಾ, ಧಾ ತಿರಕಟ ಧಾ-(ಎಂದು ಪ್ರಾರಂಭಿಸು ವಂತೆಯೆ ಸುಸಂಗತ ವಾದ್ಯಮೇಳದೊಂದಿಗೆ ನರ್ತನದ ಹೆಜ್ಜೆ ಹೆಜ್ಜೆಗಳ ಸದ್ದು. ಅದು ಮರೆಯಾಗುವಂತೆಯೆ ನಾಲ್ವರೂ ಉತ್ಸಾಹದಿಂದ ಕೂಗುತ್ತಾರೆ; "ಗತಿಯೇ ಜೀವನ, ಪ್ರಗತಿಯೇ ಗುರಿ ಹೆಗ್ಗುರಿ...")

* *

ಈಗ ಹೂ ಮನಸ್ಸಿಗಿಲ್ಲ ಜಾಗ

ಕಣ್ತೆರೆದರೆ ಸುತ್ತ ಹಬ್ಬಿದೆ ಪಾಪಾಸು ಕಳ್ಳಿ
ಪ್ಯಲಿ ಮ್ಯಲ್ಯ

ಈ ಕಳ್ಳಿಯು ನೆರಳು ನೆರಳಲ್ಲ
ಆಶ್ರಯದ ತಾಣವಲ್ಲ—

ಕರಾಳ ಕಳ್ಳಿ ನೆರಳ ಕೆಳಗೆ
ನರಳುವ ಕೊರಳನೆತ್ತಿದೆ

ಮೇಲೆ ಕಳ್ಳಿಯ ಹಣ್ಣು ಬೀರಿದೆ ತನ್ನ ಕೆಂಗಣ್ಣು
ಹಿನ್ನೆಲೆಗೆ ಕೆಂಡದಂಥ ಕೆಮ್ಮಣ್ಣು ನೋ[illegible]ರಿದೆ
ಬದಿಯೊಳಗೆ ಸುಪ್ತ ರೋಷದ ವಿಷ ದೊಂಬಿ ಧೂಳೆದ್ದಿದೆ.

ಬೇರೆ ದಾರಿ ಇಲ್ಲದೆ
ಬೇಗೆ ಕೊರಳು ಹೊರಳಿ ಕನಲಿದೆ

ಕುದಿಯುವ ನೆಲದ ಮೇಲೆ ಬಣಬಣ ಬಾನು
ಸುಡುವ ಬಿಸಿಲು ಹರಿದಿದೆ-
ಬೇಸತ್ತ ಜನರ ಅಳಲ ಹೊನಲು ಮೊರೆದಿದೆ.

ಹೂ ತುಂಬಿದ ಕಣ್ಣಿನಲ್ಲಿ ಮನಸ್ಸು ಹುಣ್ಣಾಗಿದೆ
ಮೌನ ಗಾನ ಒಡೆದಿದೆ
ಸಹನೆ ಪರೀಕ್ಷೆ ನಡೆದಿದೆ

ಬೆಂದ ಒಡಲುಗಳಿಂದ ಕಹಳೆ ಕೂಗೇಳುತ್ತಿದೆ
ಮುಪ್ಪುರಿಗೊಂಡು ಚೀರುತ್ತಿದೆ

ಸಾವಿರದ ಬವಣೆ ಭೇರಿ ಬಲವಾಗಿ ಬಡಿಯುತ್ತಿದೆ
ಶಾಂತಿ ಕೊಂದ ಆಕ್ರಂದನ ಸ್ಫೋಟದ ಸಿಡಿಲುಗಡಣ!

ಸುಡಿ ಕೊಡು ಕೊಳೆಯಲ್ಲಿ ಪ್ರೀತಿಯಿಲ್ಲ ನೀತಿಯಲ್ಲ
ಹಸಿವೆ ಹೆಡೆ ಬಿಚ್ಚಿದೆ-

ಬತ್ತು ಕೂಡ ನಗೆಯ ಸೆಲೆಯು ನುಂಗಿ ನೀರು ಕುಡಿದಿದೆ
ನಾಲಗೆಯೊಳಗೇ ಸ್ವರ ಹೂತು ವಿಗತಿನಾದ ಬರಿದಿದೆ.

ಸುತ್ತಲ ಮೀಸೆಗಳ ಮೇಲೆ ಆವೇಶದ ಹುಚ್ಚು ಕುಣಿತ
ಲಾವಣ್ಯ ಜೀವಗಳೂ ಹಾರಾಡುತ್ತಿವೆ ಸೀಮಿತ
ಮಾತು ಮಾತಿಗೂ ಉದ್ರಿಕ್ತ ಬೆಂಕಿ ಸಿಡಿತ

ಸತ್ಯ ಗೋರಿಯು ಸೇರಿದೆ
ಅಕ್ಕರೆ ಕದ ತೆಗೆಯದೆ
ಆಕ್ರೋಶ ಮಾತ್ರ ಕಾಗಿದೆ.

ಮನ ಮನದಲ್ಲಿ ತಾಳ್ಮೆ ಸಿಗದೆ
ನಿಶ್ವಾಸದ ಉಸಿರಿಗೆ ರೋಗ ಬಡಿದಿದೆ

ಸನಿಹದ ಮುಖಗಳಲ್ಲಿ ಮುಷ್ಟಿಗಳಲ್ಲಿ ವಿಚಿತ್ರ
ನೆಲದ ಉದ್ದಗಲ ಬರೆದ ರಂಗವಲ್ಲಿ ಕೂಡ ವಿಕೃತ

ಹೂ ಮನಸ್ಸಿಗೆ ಮೋಹನ ಮುರಳಿಗೆ
ಈಗ ಖಂಡಿತಾ-ಇಲ್ಲ ಜಾಗ

ನಿಗಿ ನಿಗಿ ಹಗಲ ಬಿಳಿ ಕೊರಳಿಗೆ
ಅಡಿಗಡಿಗೆ ಕಹಿ ವ್ಯಂಗ್ಯ ನೇತಾಡಿದೆ
ತಿಳಿ ಗಾಳಿಯಾದರೂ ಬೀಸ ಬಾರದೇ ಈ ಬಯಲಿಗೆ!

ದೊಡ್ಡರಂಗೇಗೌಡ


ಪ್ರಯೋಗಿಕ
ಎನ್. ಎಸ್. ಚಿದಂಬರರಾವ್

- ೧ -

ವಿಜಯ ಕೈಲಿದ್ದ ಪುಸ್ತಕವನ್ನು ತದೇಕನಾಗಿ ಓದುತ್ತಿದ್ದ. ನೂರಾ ಎಪ್ಪತ್ತನೆಯ ಪುಟದಿಂದ ನೂರಾ ಎಂಬತ್ತು......ನೂರಾ ತೊಂಬತ್ತು......ಇನ್ನೂರು ...ಇನ್ನೂರಾ ಆರು... ಇನ್ನೂರಾ ಹತ್ತು... ಹನ್ನೊಂದು...ಹನ್ನೆರಡು ಪುಸ್ತಕವನ್ನು ಮುಚ್ಚಿ ಲಗೇಜಿನ ಕಡೆ ಕಣ್ಣು ಹಾಯಿಸಿದ. ಬಸ್ ಇನ್ನೂ ದಾರಿಯಲ್ಲೇ ನಿಂತಿದ್ದು ಕಾಣಿಸಿತು. ಪ್ರಯಾಣಿಕರೆಲ್ಲರೂ ಮೇಲೆ ಕೆಳಗೆ ಓಡಾಡುತ್ತಿದ್ದರು. ವಿಷಯವೇನೆಂದು ಅವನು ಯಾರನ್ನೂ ಕೇಳಲಿಲ್ಲ.

ಪುಸ್ತಕ ಮುಗಿದು ಹೋಗಿತ್ತು. ಅವನ ಅಂದಾಜಿನಂತೆ ಈ ವೇಳೆಗೆ ತಾನು ತಲುಪಬೇಕಾಗಿದ್ದ ಊರು ಸಿಕ್ಕುವುದಿತ್ತು. ಆದರೆ ಆ ವಾಹನವಿನ್ನೂ ಇಲ್ಲೇ ಇದೆ. ವಿಜಯ ಸುಮ್ಮನೆ ಕಣ್ಣು ಮುಚ್ಚಿ ಕುಳಿತ.

ಕೆಲವು ನಿಮಿಷಗಳಲ್ಲಿಯೇ ಜನಗಳೆಲ್ಲ ಬಸ್ಸಿನೊಳಕ್ಕೆ ನುಗ್ಗಿದರು. ಕಂಡಕ್ಟರ್ ಸೀಟಿ ಊದಿದ ತಕ್ಷಣವೇ ಅದು ವೇಗವಾಗಿ ಹೊರಟಿತು. ವಿಜಯ ಸಮಯ ನೋಡಿಕೊಂಡ. ನಾಲ್ಕೂ ಮುಕ್ಕಾಲಾಗಿ ಹೋಗಿತ್ತು.

ಮತ್ತೆ ಬಸ್ ನಿಂತಿತು. ಇದೀಗ ವಿಜಯ ಕಿಟಕಿಯಿಂದ ಹೊರಗೆ ನೋಡಿದ. ಮತ್ತೊಂದು ಹಳ್ಳಿ–ಅಲ್ಲಿಯೂ ಅಷ್ಟು ಜನ ಇಳಿದರು.–ಬಸ್ಸಿನಲ್ಲಿ ಏಳೆಂಟು ಜನ ಮಾತ್ರ ಉಳಿದುಕೊಂಡರು.

ವಿಜಯ ಕಿಟಕಿಯಿಂದ ಹೊರ ನೋಡುತ್ತಾ ಕುಳಿತ. ಬಸ್ ಇನ್ನೂ ಎರಡು ಕಡೆ ನಿಂತಿತು. ಮತ್ತೆ ಹೊರಟಾಗ ಬಸ್ಸಿನಲ್ಲಿ ತಾನೊಬ್ಬನೇ ಉಳಿದೆ–ಎನ್ನಿಸಿ ವಿಜಯ ಕಿಟಕಿಯಿಂದ ತನ್ನ ದೃಷ್ಟಿಯನ್ನು ಬಸ್ಸಿನ ಒಳಭಾಗಕ್ಕೆ ಎಳೆದುಕೊಂಡು ಆ ಖಾಲಿ ಸೀಟುಗಳತ್ತ ಕಣ್ಣಾಡಿಸಿದ.

ಬಸ್ಸಿನಲ್ಲಿ ಡ್ರೈವರ್, ಕಂಡಕ್ಟರ್, ಲೈನ್ ಏಜೆಂಟ್ ಈ ಮೂವರೇ ಅಲ್ಲದೆ ನಾಲ್ಕನೆಯ ವ್ಯಕ್ತಿಯೊಂದನ್ನು ಕಂಡು ವಿಜಯ ಚಕಿತನಾದ.

ಹೌದು...ಆ ವ್ಯಕ್ತಿ ಅವನ ಮುಂದಿರುವ ಸೀಟಿನಲ್ಲೇ ಕುಳಿತು ಕಿಟಕಿಯಿಂದ ಹೊರಗೆ ನೋಡುತ್ತಿತ್ತು. ತನ್ನನ್ನು ಬಿಟ್ಟರೆ ಇದೊಂದೇ ವ್ಯಕ್ತಿ ಈ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವುದು ಎಂದುಕೊಂಡ. ಆದರೆ ಆ ಬಗ್ಗೆ ಕುತೂಹಲ ಆಶ್ಚರ್ಯ–ಮುಂತಾಗಿ ಏನನ್ನೂ ಅವನು ತೋರಿಸಲಿಲ್ಲವೆಂಬಂತೆ ಕುಳಿತ.

"ನೀವೂ ದೇವಪುರಕ್ಕೆ ಹೋಗ್ತಾ ಇದೀರಾ?" ಪ್ರಶ್ನೆ ಆ ವ್ಯಕ್ತಿಯಿಂದಲೇ ಬಂದಾಗ ವಿಜಯ ಆ ಕಡೆ ತಿರುಗಿ "ಹೌದು..." ಎಂದ.

"ನಾನೂ ಅಲ್ಲಿಗೇ ಹೋಗ್ತಾ ಇದೀನಿ..." ವಿಜಯ ಈ ಮಾತಿಗೆ ಸುಮ್ಮನೆ ತಲೆ ಹಾಕಿದ.

"ನಿಮ್ಮದು ಅದೇ ಸ್ವಂತ ಸ್ಥಳಾನಾ?"

"ಅಲ್ಲ......"

"ಹಾಗಾದ್ರೆ ದೇವಪುರದಲ್ಲಿ ನಿಮ್ಮ ಪರಿಚಿತರು, ಸಂಬಂಧ ಯಾರಾದ್ರೂ ಇದಾರಾ?"

"ಇಲ್ಲ..."

ವಿಜಯನ ಚುಟುಕು ಉತ್ತರಗಳಿಂದ ಆ ವ್ಯಕ್ತಿಗೆ ಬೇಸರವಾಗಿರಬೇಕು.

"ನಾನೂ ಇದೇ ತಾನೇ ದೇವಪುರಕ್ಕೆ ಹೊಸದಾಗಿ ಹೋಗ್ತಾ ಇದೀನಿ"

ವಿಜಯ ತಲೆ ಆಡಿಸಿದ.

"ಅಲ್ಲಿರೋ ಗರ್ಲ್ಸ್ ಹೈಸ್ಕೂಲಿಗೆ ನನಗೆ ಅಪಾಯಿಂಟ್‌ಮೆಂಟ್ ಸಿಕ್ಕಿದೆ..."

ವಿಜಯ 'ಹೂಂ'ಗುಟ್ಟಿದ.

"ನಿಮ್ಮ ಹೆಸರೇನು? ಕೇಳಬಹುದೇ?"

"ವಿಜಯ..."

ಆದರೆ ವಿಜಯ ಅದೇ ಪ್ರಶ್ನೆಯನ್ನು ಮತ್ತೆ ಕೇಳಲಿಲ್ಲ. ಆ ಪ್ರಶ್ನೆ ಬರಬಹುದೆಂದು ನಿರೀಕ್ಷಿಸಿದ್ದ ವ್ಯಕ್ತಿಗೆ ನಿರಾಶೆಯಾಗಿರಬೇಕು.

"ನನ್ನ ಹೆಸರು ಸುಧಾ ಅಂತ."

ವಿಜಯ ತಲೆ ಹಾಕಿದ. ಎಂತಹ ಶುಷ್ಕ ವ್ಯಕ್ತಿ ಈ ವಿಜಯ ಎಂದುಕೊಂಡಳು !

ಸುಧಾ ಮತ್ತೆ ಕೇಳಿದಳು:

"ನೀವೇನ್ಮಾಡ್ತೀರಿ ಅಲ್ಲಿ?"

"ಅಲ್ಲಿರೋ ಗರ್ಲ್ಸ್ ಹೈಸ್ಕೂಲಿನಲ್ಲಿ ಮೇಷ್ಟ್ರು..."

"ಎಷ್ಟು ದಿನದಿಂದ ಇದೀರಿ ಅಲ್ಲಿ?"

"ನಾಳೆಯಿಂದ..."ವಿಜಯನ ಉತ್ತರದಿಂದ ಸುಧಾ ಚಕಿತಳಾದಳು.

"ಹಾಗಾದ್ರೆ ನಿಮ್ದೂ ಹೊಸಾ ಅಪಾಯಿಂಟ್‌ಮೆಂಟಾ?"

"ಅಲ್ಲ..."

ವಿಜಯ ದೇವಪುರದ ಹೈಸ್ಕೂಲಿಗೆ ವರ್ಗವಾಗಿ ಬಂದಿರಬಹುದೆಂದು ಸುಧಾ ತಕ್ಷಣ ಊಹಿಸಿದಳು. ಹಾಗಾದರೆ ತಾವಿಬ್ಬರೂ ಆ ಊರಿಗೆ ಹೊಸಬರು. ದೇವಪುರ ತಕ್ಕಷ್ಟು ದೊಡ್ಡ ಊರೇ. ಅಲ್ಲಿ ಹೋದ ತಕ್ಷಣ ಊಟ–ವಸತಿಗಳ ಸಮಸ್ಯೆ ಅಷ್ಟೊಂದು ತೊಂದರೆ ಕೊಡಲಾರದು ಎಂದುಕೊಂಡಳು.

"ದೇವಪುರದಲ್ಲಿ..." ಏನನ್ನೋ ಕೇಳಬೇಕೆಂದುಕೊಂಡಿದ್ದ ಸುಧಾ ವಿಜಯ ತನ್ನ ಲಗೇಜು ಸಮೇತ ಮೇಲಕ್ಕೇಳುವುದನ್ನು ನೋಡಿ ಸುಮ್ಮನಾಗುತ್ತಾ ಕಿಟಕಿಯ ಹೊರಗೆ ನೋಡಿದಳು.–ದೇವಪುರ ಬಸ್‌ಸ್ಟ್ಯಾಂಡು ಕಾಣುತ್ತಿತ್ತು. ವಿಜಯ ಕೈ ಗಡಿಯಾರ ನೋಡಿಕೊಂಡ. ಆರರ ಸಮಯವಾಗಿತ್ತು. ಬಸ್ಸಿನಿಂದ ಇಳಿದು ಸ್ಟ್ಯಾಂಡಿನಲ್ಲಿ ನಿಂತ. ಸುಧಾ ಸಹ ಕೆಳಗಿಳಿದಳು. ಕಂಡಕ್ಟರ್ ಮೇಲಿನಿಂದ ವಿಜಯನ ಹೋಲ್ಡಾಲನ್ನು ಕೆಳಗಿಳಿಸಿದ. ವಿಜಯ ಅದನ್ನು ತೆಗೆದುಕೊಂಡವನೇ ಲೆದರ್ ಸೂಟ್‌ಕೇಸ್ ಹಾಗೂ ಚರ್ಮದ ಕೈ ಚೀಲದ ಸಮೇತ ಎರಡು ಹೆಜ್ಜೆ ಇಡತೊಡಗಿದಾಗ ಸುಧಾ –"ಮಿಸ್ಟರ್ ವಿಜಯ್, ದಯವಿಟ್ಟು ನನ್ನ ಹೋಲ್ಡಾಲ್ ಇಳಿಸಿಕೊಡ್ತೀರಾ?" ಎಂದು ಗೋಗರೆದಳು.

ಟಾಪಿನ ಮೇಲಿದ್ದ ಕಂಡಕ್ಟರ್ ಸುಧಾಳ ಹೋಲ್ಡಾಲನ್ನು ಕೆಳಗಿಳಿಸುವಾಗ ವಿಜಯ ತನ್ನ ಸಾಮಾನುಗಳನ್ನು ಅಲ್ಲಿದ್ದ ಕಲ್ಲು ಬೆಂಚಿನ ಮೇಲಿಟ್ಟು ಅದನ್ನು ಕೆಳಗಿಳಿಸಿದ.

"ವಿಜಯ, ನೀವೀಗ ಎಲ್ಲಿ ಹೋಗ್ತೀರಿ?" ಮತ್ತೆ ವಿಜಯ ಹೊರಟನೆಂದು ತಕ್ಷಣವೇ ಕೇಳಿದಳು ಸುಧಾ.

"ಯಾವ್ದಾದ್ರೂ ಹೋಟೆಲಿಗೆ..."

ಸುಧಾ ಮೇಲೆ ಕೆಳಗೆ ನೋಡುತ್ತಾ ನಿಂತಳು. ನಂತರ ಏನನ್ನೋ ನಿರ್ಧರಿಸಿದವಳಂತೆ ತಟ್ಟನೆ–

"ಸರಿ ಹಾಗಾದ್ರೆ...ನಡೀರಿ...ನಾನೂ ನಿಮ್ಮ ಜೊತೆನೇ ಬರ್‍ತೀನಿ...ತಡೀರಿ...ಕೂಲೀನ ಕರೀತೀನಿ" ಎಂದಳು.

"ಕೂಲಿ ಯಾಕೆ? ನಾನು ಒಬ್ಬನೇ ನಿಮ್ದು ನನ್ನದು ಕೂಡ ಲಗೇಜ್ ಒಯ್ಯಬಲ್ಲೆ"

ನಿಜ...ವಿಜಯ ಗರಡಿ ಪೈಲ್ವಾನನ ಹಾಗೆ ಬೆಳೆದಿದ್ದ ಎಂಬುದನ್ನು ಸುಧಾ ಬಹಳ ಹೊತ್ತಿನಿಂದಲೂ ಗಮನಿಸಿದ್ದಳು. ಅವಳೇನೂ ಮಾತನಾಡಲು ಹವಣಿಸುತ್ತಿದ್ದಂತೆಯೇ, ವಿಜಯ ಎರಡೂ ಹೋಲ್ಡಾಲುಗಳನ್ನು ಅನಾಮತ್ತಾಗಿ ಎತ್ತಿ ಹೆಗಲಿಗಿಟ್ಟುಕೊಂಡು ಮತ್ತೊಂದು ಕೈಯಲ್ಲಿ ತನ್ನ ಲೆದರ್ ಸೂಟ್‌ಕೇಸ್ ಹಿಡಿದ. ಸುಧಾ ವಿಜಯನ ಕೈಲಿದ್ದ ಚರ್ಮದ ಕೈಚೀಲ ತಾನು ತೆಗೆದುಕೊಂಡಳು.

ವಿಜಯ ಎರಡು ಹೋಲ್ಡಾಲ್ ಸಮೇತ ನಡೆಯುವ ದೃಶ್ಯ ಅಲ್ಲಿನ ಜನರನ್ನೆಲ್ಲ ಆಕರ್ಷಿಸಿತ್ತು. ಮನರಂಜನೆಯಂತೆ ಜನ ಅದನ್ನು ಸವಿಯತೊಡಗಿದರು. ಸುಧಾ ವಿಜಯನ ಜೊತೆ ಬರುತ್ತಿರುವುದೂ ಮತ್ತೊಂದು ಆಕರ್ಷಣೆಯಾಗಿತ್ತು. ಸುಧಾಳಿಗೇ ಸ್ವಲ್ಪ ಸಂಕೋಚವಾದ ಹಾಗಾಯಿತು. ಕೂಲಿಯವನನ್ನು ಕರೆತರಬಹುದಾಗಿತ್ತೆಂದು ಹಲವಾರು ಬಾರಿ ಅವಳು ಗೊಣಗಿದುದನ್ನು ಕೇಳಿಸಿಯೂ ಕೇಳಿಸದಂತೆ ವಿಜಯ ಮುಂದುವರೆಯುತ್ತಿದ್ದ.

"ಸವಿತಾ ಭವನ್" ಎಂಬ ನಾಮಫಲಕ ಕಂಡಾಗ ಸುಧಾ ವಿಜಯನ ಗಮನವನ್ನು ಸೆಳೆಯುತ್ತಾ "ಈ ಹೋಟೆಲಲ್ಲಿ ವಿಚಾರಿಸೋಣ...ದೊಡ್ಡದಾಗಿದೆ...." ಎಂದಳು. ವಿಜಯ ಹೆಗಲ ಮೇಲಿದ್ದ ಹೋಲ್ಡಾಲ್‌ಗಳನ್ನು ಹೋಟೆಲಿನ ಕಟ್ಟೆಯ ಮೇಲಿಡುತ್ತಾ ನೇರವಾಗಿ ಒಳಕ್ಕೆ ಹೋಗಿ ಮಾಲೀಕನೆದುರು ನಿಂತ. ಪಕ್ಕದಲ್ಲೇ ಸುಧಾ ಬಂದು ನಿಂತುದನ್ನು ಅವನು ಗಮನಿಸಲಿಲ್ಲ.

ಮಾಲೀಕ ಜಬರದಸ್ತಾಗಿ ಬೆಳೆದ ಮೀಸೆವಾಲಾ... ಇಬ್ಬರನ್ನೂ ತನ್ನ ಇರಿಯುವ ಕಣ್ಣುಗಳಿಂದ ನೋಡುತ್ತಲೇ ಅವನ ತುಟಿಗಳ ಮೇಲೆ ಸಣ್ಣ ನಗೆಯೊಂದು ಹಾದು ಹೋದುದನ್ನು ಸುಧಾ ಗಮನಿಸಿದಳು.

"ಏನು ಬೇಕಾಗಿತ್ತು?" ಗೊಗ್ಗರು ಧ್ವನಿಯ ಮಾಲೀಕ ಕೇಳಿದ.

"ನೋಡಿ, ನಾವಿಬ್ಬರೂ ಪರಸ್ಥಳದೋರು, ಈ ಊರ್‍ನಲ್ಲೇ ಕೆಲಸದ ಮೇಲೆ ಬಂದಿದೀವಿ...ಎರಡು ರೂಮು ಬೇಕಾಗಿತ್ತು....ನಾವು ಆಮೇಲೆ ಬೇರೆ ಮನೆ ಮಾಡ್ತೀವಿ...ಅಲ್ಲಿವರೆಗೆ ಮಾತ್ರ" ವಿಜಯ ಹೇಳಿ ನಿಲ್ಲಿಸಿದ.

"ರೂಂ ನಮ್ಮಲ್ಲಿ ಈಗ ಒಂದೇ ಸಿಕ್ಕೋದು... ಎಲ್ಲಾ ಭರ್ತಿ..."

ಸುಧಾ ವಿಜಯನ ಮುಖ ನೋಡಿದಳು. ವಿಜಯ ಮಾಲೀಕನ ಮುಖವನ್ನು ನೋಡುತ್ತಾ ನಿಂತ. ಮಾಲೀಕ ಇಬ್ಬರನ್ನೂ ಕೆಣಕುವಂತೆ ನೋಡಿ, ಮೇಜಿನ ಡ್ರಾ ಎಳೆದು. ಯಾವುದೋ ದೊಡ್ಡ ಖಾತೆ ಪುಸ್ತಕದಲ್ಲಿ ತಲ್ಲೀನನಾದವನಂತೆ ತಲೆ ತಗ್ಗಿಸಿದ.

"ಒಂದೇ ರೂಮಿದೆ ಅಂತಾರೆ ಒಂದೇ... ನಿಮಗೇನೂ ಅಭ್ಯಂತರವಿಲ್ಲವಲ್ಲ?..." ಎಂದ ವಿಜಯ.

"ಆಗಬಹುದು. ಸುಮ್ನೆ ಈ ಅಪ ವೇಳೇಲಿ ಇಡೀ ಊರು ತಿರುಗೋಕೆ ಸಾಧ್ಯವೇ?" ಸುಧಾ ದನಿಗೂಡಿಸಿದಳು.

"ಕೊಡಿ ರೂಮನ್ನು..."

ವಿಜಯ ಹೇಳಿದ್ದನ್ನು ಕೇಳಿ ಮಾಲೀಕ ಮತ್ತೆ ನಕ್ಕು ಕಾಲಿಂಗ್ ಬೆಲ್ ಒತ್ತಿದ. ಮೇಜಿನ ಡ್ರಾನಿಂದ ಮತ್ತೊಂದು ಲೆಡ್ಜರ್ ತೆಗೆದು, ವಿಜಯನ ಮುಂದೆ ಹಿಡಿಯುತ್ತಾ

"ಇದ್ರಲ್ಲಿ ನಿಮ್ಮ ಹೆಸರು, ವಿಳಾಸ, ಎಲ್ಲಾ ಬರದು ರುಜು ಹಾಕಿ...ಅಡ್ವಾನ್ಸ್ ಹತ್ತು ರೂಪಾಯಿ ಕೊಡಿ" ಎಂದ.

ವಿಜಯ ತನ್ನ ಹೆಸರು, ವಿಳಾಸ ಬರೆದು ರುಜು

ಹಾಕಿದ. ಮಾಲೀಕ ಅದನ್ನೊಮ್ಮೆ ಓದಿ. "ಈ ಜೊತೆಗಿರೋ ತಾಯಿ ಯಾರು? ನಿಮ್ಮ ಫ್ಯಾಮಿಲೀನಾ?" ಎಂದ.

"ಛೇ. ಛೆ! ಅಲ್ಲ ಅವರು ನನ್ನ ಸ್ನೇಹಿತರು."

"ಹಾಗಾದ್ರೆ ಅವರೂ ಹೆಸರು ಬರೆದು ರುಜು ಹಾಕಬೇಕು. ಎಲ್ಲ ಕಾನೂನು ಸಾರ್. ನೀವೇನೂ ತಪ್ಪು ತಿಳ್ಕೋಬ್ಯಾಡ್ರಿ..." ಎಂದ ಮಾಲೀಕ ಮತ್ತೆ ಲೆಡ್ಜರ್ ಮುಂದೆ ಹಿಡಿದ. ಸುಧಾ ತನ್ನ ಹೆಸರು, ವಿಳಾಸ, ಬರೆದು ರುಜು ಹಾಕಿದಳು.

ವಿಜಯ ಪರ್ಸ್‌ನಿಂದ ಹತ್ತರ ನೋಟು ತೆಗೆದ. ಸುಧಾ ಸಹ ಐದರ ಎರಡು ನೋಟು ತೆಗೆದಳು.

"ಐದು ಮಾತ್ರ ಕೊಡಿ ಸಾಕು" ಎಂದ ವಿಜಯ. ಸುಧಾ ಅವಕ್ಕಾದಳು. ಮಾತಾಡದೆ ಐದರ ಒಂದು ನೋಟನ್ನು ವಿಜಯನ ಕೈಗಿತ್ತಳು. ವಿಜಯ ಹತ್ತರ ನೋಟನ್ನು ಮಾಲೀಕನಿಗಿತ್ತು, ರಶೀತಿ ಪಡೆದ.

ಅಷ್ಟರಲ್ಲಿ ಕೊಳಕು ಬಟ್ಟೆಯ ಹುಡುಗನೊಬ್ಬ ನಿಂತು ಇವರಿಗಾಗಿ ಕಾಯುತ್ತಿದ್ದ.

"ಲೇ ಮಾದಾ...ಇವರನ್ನು ಫಸ್ಟ್ ಫ್ಲೋರ್ ಹದಿನೇಳನೇ ರೂಮಿಗೆ ಕರ್ಕೊಂಡು ಹೋಗು" ಎಂದು ಮಾಲೀಕ ಆಜ್ಞಾಪಿಸಿದ.

ವಿಜಯ ಎರಡು ಹೆಜ್ಜೆ ಹೊರಗಿಟ್ಟು, ಅಲ್ಲಿದ್ದ ಎರಡು ಹೋಲ್ಡಾಲ್‌ಗಳನ್ನೂ ಎತ್ತಿ ಹೆಗಲಿಗಿಟ್ಟ. ಮಾದ ಅವುಗಳನ್ನು ತೆಗೆದುಕೊಳ್ಳಲು ಕೈ ಚಾಚಿದಾಗ–

"ಸುಮ್ನೆ ರೂಮು ತೋರ್ಸಯ್ಯ. ನಿಂಗೆ ಇದನ್ನು ಹೊರೋ ಅಷ್ಟು ತಾಖತ್ತಿಲ್ಲ" ಎಂದು ವಿಜಯ ಮುಂದಡಿಯಿಟ್ಟಾಗ ಆ ಹುಡುಗ ದಂಗಾದ.

ರೂಮು ಬಹಳ ಇಕ್ಕಟ್ಟಾಗಿತ್ತು. ಆದರೂ ಎರಡು ಮಂಚ, ದೊಡ್ಡ ನಿಲುವುಗನ್ನಡಿ, ಟೇಬಲ್ ಫ್ಯಾನು, ವಾಶ್‌ಬೇಸಿನ್–ಎರಡು ಕುರ್ಚಿ, ಎರಡು ಮೇಜು ಬಟ್ಟೆ ತಗಲು ಹಾಕುವ ಸ್ಟಾಂಡು–ಎಲ್ಲಾ ಇದ್ದವು. ರೂಮಿಗೆ ಸೇರಿದಂತೆ ಅಟ್ಯಾಚ್ಡ್ ಬಾತ್‌ರೂಂ ಸಹ ಇತ್ತು. ವಿಜಯ–ಸುಧಾ ಇಬ್ಬರೂ ರೂಮನ್ನು ಪ್ರವೇಶಿಸಿ ಮಾದನಿಗೆ ಸ್ವಲ್ಪ ನೀರು ತರುವಂತೆ ಹೇಳಿದರು. ಅಲ್ಲಿಯೇ ಇದ್ದ ದೊಡ್ಡ ಪಿಂಗಾಣಿ ಹೂಜಿಯನ್ನು ಮಾದ ತೆಗೆದುಕೊಂಡು ಕೆಳಗೆ ನಡೆದ.

ವಿಜಯ ಒಂದು ಹೋಲ್ಡಾಲನ್ನು ಒಂದು ಮಂಚದ ಮೇಲಿಟ್ಟು, "ಸುಧಾ ಇದು ನಿಮ್ಮ ಮಂಚ. ಈ ಬದಿಯ ಕುರ್ಚಿ, ಮೇಜುಗಳು ನಿಮ್ಮದು." ಎಂದು ಹೇಳಿ, ಮತ್ತೊಂದು ಮಂಚದ ಮೇಲೆ ತನ್ನ ಹೋಲ್ಡಾಲನ್ನು ಸ್ಥಾಪಿಸಿದ. ನಂತರ ಹೋಲ್ಡಾಲನ್ನು ಬಿಚ್ಚಿ ಅದರಿಂದ ಒಂದು ಲುಂಗಿಯನ್ನು ತೆಗೆದು ಸುತ್ತಿಕೊಳ್ಳುತ್ತಾ, ಪ್ಯಾಂಟು ಕಳಚಿದ. ಸ್ಲ್ಯಾಕ್ ಸಹ ಕಳೆದು ಸ್ಟ್ಯಾಂಡಿಗೆ ನೇತು ಹಾಕಿದ.

"ಸುಧಾ ನಾನು ಸ್ವಲ್ಪ ಮುಖ ತೊಳೆದು ಬರ್‍ತೀನಿ" ಎಂದವನೇ ಬಾತ್‌ರೂಮ್‌ಗೆ ಹೋದ.

ಸುಧಾ ಕ್ಷಣ ಹೊತ್ತು ಸುಮ್ಮನೆ ಕುಳಿತಿದ್ದಳು. ಈ ಊರಿಗೆ ಬರುವಾಗ ಇಲ್ಲಿನ ಪರಿಚಿತರೊಬ್ಬರ ವಿಳಾಸವನ್ನು ಅಪ್ಪ ಕೊಟ್ಟಿದ್ದರು. ಆದರೂ, ತಾನೇಕೆ ಈ ಅಪರಿಚಿತ ವ್ಯಕ್ತಿಯೊಂದಿಗೆ ಈ ಒಂಟಿ ರೂಮಿಗೆ ಬಂದೆ? ತಾನು ಕೆಲಸಕ್ಕೆ ಹೊರಟಾಗಿನಿಂದ ಅಮ್ಮ ತನ್ನ ಒಂಟಿ ಬಾಳಿನ ಬಗ್ಗೆ ನೂರಾರು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದರು. ಕುಲ, ವಂಶ, ಮರ್ಯಾದೆ–ಹೀಗೇ ಹಲವಾರು ಭಯಗೊಳಿಸುವ ಪದಗಳ ಬಗ್ಗೆ ಬೇಕಾದಷ್ಟು ಹೇಳಿದ್ದರು. ಈಗ ಈ ಅಪರಿಚಿತ ವಿಜಯ... ಭಾವೋದ್ವೇಗಗಳನ್ನೇ ತೋರ್ಪಡಿಸದ ವಿಜಯ... ದಷ್ಟ ಪುಷ್ಟನಾದ ಆಕರ್ಷಕ ಯುವಕ ವಿಜಯ... ಇವನೊಡನೆ ತಾನು ಈ ರಾತ್ರಿಯನ್ನು ಏಕಾಂತದಲ್ಲಿ ಕಳೆಯಲಿದ್ದೇನೆ. ತಾನು ಇದನ್ನು ಖಂಡಿತ ನಿರೀಕ್ಷಿಸಿಯೂ ಇರಲಿಲ್ಲ.

ಬಾಗಿಲು ತೆರೆದ ಸದ್ದಾಯಿತು. ಸುಧಾಳ ಯೋಚನೆಗಳಿಗೆ ತಡೆ ಬಿತ್ತು. ಥಟ್ಟನೆ ಮೇಲೆದ್ದಾಗ ಮಾದ ನೀರಿನ ಹೂಜಿ ಸಮೇತ ಪ್ರತ್ಯಕ್ಷನಾಗಿದ್ದ. ಹೂಜಿಯನ್ನು ಮೇಜಿನ ಮೇಲಿಟ್ಟವನೇ "ಅಮ್ಮಾವರೇ ಇನ್ನೇನಾರಾ ತರ್ಲಾ?" ಎಂದು ತಲೆ ಕೆರೆಯುತ್ತಾ ನಿಂತ. ಸುಧಾಗೆ ಕಾಫಿಯ ಅಗತ್ಯ ಬಹಳವಾಗಿತ್ತು. ಪರ್ಸಿನಿಂದ ಐದರ ನೋಟು ತೆಗೆದು ಮಾದನ ಕೈಗಿಡುತ್ತಾ–"ಎರಡು ಸೊಗಸಾದ ಸ್ಪೆಷಲ್ ಕಾಫಿ, ಒಂದು ಪ್ಯಾಕೆಟ್ ಬಿಸ್ಕಟ್ ತಗೊಂಬಾ..." ಎಂದಳು. ಮಾದ ಓಡಿದ. ಸುಧಾ ಬೇಗ ಬೇಗ ಮೇಲೆದ್ದು ತನ್ನ ಹೋಲ್ಡಾಲ್ ಬಿಚ್ಚಿ, ಬೇರೆ ಸೀರೆಯನ್ನುಟ್ಟುಕೊಂಡಳು. ಸೋಪ್ ಬಾಕ್ಸ್, ಟವಲ್, ಸಮೇತ ಸಿದ್ಧಳಾಗುತ್ತಿದ್ದ ಹಾಗೆಯೇ ವಿಜಯ ಬಾತ್‌ರೂಮಿನಿಂದ ಕೈಕಾಲು ಒರೆಸಿಕೊಳ್ಳುತ್ತಾ ಹೊರಬರುವುದು ಕಾಣಿಸಿತು.

"ನಾನೂ ಸ್ವಲ್ಪ ಮುಖ ತೊಳೆದು ಬರ್‍ತೀನಿ..." ಎನ್ನುತ್ತಾ ಸುಧಾ ಬಾತ್‌ರೂಮಿನಲ್ಲಿ ಐಕ್ಯವಾದಳು.

ವಿಜಯ ತನ್ನ ಮಂಚದ ಮೇಲೆ ಕುಳಿತು, ಹೋಲ್ಡಾಲಿನಿಂದ ತನ್ನ ಬಟ್ಟೆ ಬರೆಗಳನ್ನು ತೆಗೆದು ಸ್ಟಾಂಡಿಗೆ ಹಾಕತೊಡಗಿದ. ಲೆದರ್ ಸೂಟ್‌ಕೇಸಿನ ಬಾಗಿಲು ತೆರೆದು ಅದರಲ್ಲಿದ್ದ ಕೆಲವು ಪುಸ್ತಕಗಳನ್ನು ಮೇಜಿನ ಮೇಲಿಟ್ಟ. ನಂತರ ಬಾಚಣಿಗೆಯಿಂದ ತಲೆಯನ್ನು ಸರಿಪಡಿಸಿಕೊಂಡ. ತನ್ನ ಮಂಚದ ಬದಿಗಿದ್ದ ಕುರ್ಚಿಯಲ್ಲಿ ಕುಳಿತು ಮೇಜಿನ ಮೇಲಿಟ್ಟ ಪುಸ್ತಕಗಳಲ್ಲೊಂದನ್ನು ತೆಗೆದು ಓದತೊಡಗಿದ.

ಬಾಗಿಲು ತೆರೆದ ಸದ್ದಾಯಿತು. ವಿಜಯ ಪುಸ್ತಕದಲ್ಲಿ ತಲ್ಲೀನನಾಗಿದ್ದ.

"ಸಾರ್...ಕಾಫಿ...ಬಿಸ್ಕೇಟು..." ಎಂಬ ಧ್ವನಿ ಕೇಳಿ ತಲೆ ಎತ್ತಿದ.

"ಯಾರೋ ನಿನಗೆ ತರೋಕೆ ಹೇಳ್ದೋರು?" ಎಂದ. "ಅಮ್ಮಾವ್ರೇ ಐದು ರೂಪಾಯ್ ಕೊಟ್ಟು ಏಳಿದ್ರು ಸಾರ್" ಎಂಬ ಉತ್ತರವೂ ಕೇಳಿಸಿತು.

"ಸರಿ...ಅಲ್ಲಿಟ್ಟು ಹೋಗು...ಹತ್ತು ನಿಮಿಷ ಬಿಟ್ಟು ಬಾ"

ಮಾದ ಹೊರಟು ಹೋದ.

ಬಾತ್‌ರೂಮಿನ ಬಾಗಿಲು ತೆರೆಯಿತು. ಸುಧಾ ಮುಖ ಒರೆಸಿಕೊಳ್ಳುತ್ತಾ ರೂಮಿನೊಳಕ್ಕೆ ಬಂದಳು. ಮೇಜಿನ ಮೇಲೆ ಕಾಫಿ ಬಟ್ಟಲುಗಳಿದ್ದವು...ಪಕ್ಕದಲ್ಲಿ ಬಿಸ್ಕೆಟ್ ಪೊಟ್ಟಣ–ಅದರ ಪಕ್ಕದಲ್ಲೆ ಉಳಿದ ಚಿಲ್ಲರೆ ಹಣ!

ಸುಧಾ ತನ್ನ ಮಂಚದ ಬದಿಯಿದ್ದ ಕುರ್ಚಿಯಲ್ಲಿ ಕೂಡುತ್ತಾ–

"ವಿಜಯ್, ಮೊದ್ಲು ಕಾಫಿ ತಗೊಳ್ಳಿ...ತಣ್ಣಗಾಗುತ್ತೆ" ಎಂದಳು.

ವಿಜಯ ಪುಸ್ತಕದಿಂದ ಅರ್ಧತಲೆ ಎತ್ತಿದ.

"ಕಾಫಿ ತಗೊಳ್ಳಿ ಮೊದಲು..."

"ಕಾಫೀನಾ...ಆಲ್‌ರೈಟ್..." ಎನ್ನುತ್ತಾ ಒಂದು ಬಟ್ಟಲನ್ನು ಕೈಗೆತ್ತಿಕೊಂಡ.

"ತಡೀರಿ...ಎರಡು ಬಿಸ್ಕಟ್ ತಗೊಳ್ಳಿ" ಸುಧಾ ಪ್ಯಾಕೆಟನ್ನು ಒಡೆದು ಎರಡು ಬಿಸ್ಕೀಟನ್ನು ಅವನೆದುರಿ

......ಇದನ್ನು ಕುರಿತು

- ಜೀವನದಲ್ಲಿ ಹೊಸ ಪ್ರಯೋಗಗಳಾಗುತ್ತಲೇ ಇರಬೇಕು. ಗಂಡು-ಹೆಣ್ಣುಗಳ ಪರಸ್ಪರ ಅನುಬಂಧದಲ್ಲಿರುವ ದ್ವಂದ್ವ; ಬ್ರಹ್ಮಚರ್ಯ-ಕಾಮಜೀವನ.
- ಬ್ರಹ್ಮಚರ್ಯ ನಿಜವಾಗಿಯೂ ಒಂದು ಮೌಲ್ಯವೆ? ಕಾಮಜೀವನ ಪಾಪವೇ?
- ಕಾಮದಲ್ಲಿ ಪ್ರವೃತ್ತನಾಗಿ ಬ್ರಹ್ಮಚರ್ಯದತ್ತ ಸಾಗುವ ಪ್ರವೃತ್ತಿ ಮಾರ್ಗ-ವಿಜಯ ಅನುಸರಿಸಿದುದು.
- ನಿವೃತ್ತಿ ಮಾರ್ಗದಿಂದಲೇ ಬ್ರಹ್ಮಚಾರಿಯಾಗುಳಿದವನು ಹಿರಣ್ಮಯ. ಇವನೇ ವಿಜಯನಿಗೆ ಆದರ್ಶ.
- ಸುಧಾ ಈ ಪ್ರಯೋಗಗಳ ಮಧ್ಯೆ ಆನುಷಂಗಿಕವಾಗಿ ಸಿಲುಕುವ ಹೆಣ್ಣು-ಬಾಳ ಬಯಕೆಯನ್ನು ಹೊತ್ತ ಹರೆಯದ ಪದವೀಧರೆ.
- ರವಿ ಕೇವಲ ವಾಸ್ತವ ದೃಷ್ಟಿಯುಳ್ಳ, ತಾತ್ವಿಕ ಹಿನ್ನೆಲೆ ಸಾಲದ ನವಯುವಕ-ಪ್ರಾಯೋಗಿಕ ಪ್ರಜ್ಞೆಯಿಲ್ಲದವ.
- ಸುಧಾ ಕೇಂದ್ರವ್ಯಕ್ತಿಯಾಗಿ, ಇವಳ ಸುತ್ತಲೂ ತಿರುಗುವ ಗಂಡುಜಾತಿ, ಅನೇಕ ಅನುಬಂಧಗಳ ಮೇಲೆ ಚೆಲ್ಲುವ ಬೆಳಕು.
- ಹಿರಣ್ಮಯನ ನೈಷ್ಠಿಕ ಬ್ರಹ್ಮಚರ್ಯ ಹುಸಿಯಾದಾಗಲೇ ಕತೆಯು ಆಯಾಮ ಬದಲಿಸುವದು......
- -ಹೀಗೆ, ಪ್ರಾಯೋಗಿಕ ಚಿಂತನೆಗೆ ದಾರಿಮಾಡಿಕೊಡುವ ಪ್ರಾಮಾಣಿಕ ಪ್ರಯತ್ನವೇ ಈ ಕಾದಂಬರಿ- "ಪ್ರಾಯೋಗಿಕ......"

–ಇನ್ನು ಓದಿ.......


ಉತ್ಸವದ ದಿನಗಳಿಗಾಗಿ ಕರೋನಾದವರ ಕೊಡುಗೆ
ಫೂಟ್ ಫ್ರೆಂಡ್
ಆದರ್ಶ
Corona
ಕರೋನಾ ಸಾಹು ಕಂ. ಲಿ.
221, ದಾದಾಭಾಯಿ ನವರೋಜಿ ರೋಡ್, ಬೊಂಬಾಯಿ 400 001.

ಗಿಟ್ಟಳು. ವಿಜಯ ಅವುಗಳನ್ನು ತೆಗೆದುಕೊಂಡ. ಒಂದು ಬಿಸ್ಕೇಟನ್ನು ಬಾಯಲ್ಲಿ ಹಾಕಿಕೊಂಡು, ಎರಡು ಗುಟುಕು ಕಾಫಿ ಕುಡಿದು

"ಎಷ್ಟಾಯಿತು ಹಣ?..." ಎಂದ.

"ಓ...ಹೋಗ್ಲಿ ಬಿಡಿ..."

"ಛೆ...ಛೆ! ಅದ್ಯಾಕೆ? ನೀವು ನನಗೆ ಏನೂ ಅಲ್ಲ; ನನ್ನ ಸಲುವಾಗಿ ನೀವು ಯಾವ ಹಣಾನೂ ಖರ್ಚು ಮಾಡಬಾರ್ದು...ಹೇಳಿ ಎಷ್ಟಾಯ್ತು?"

"ನಂಗೊತ್ತಿಲ್ಲ...ಐದು ರೂಪಾಯಿ ನೋಟು ಕೊಟ್ಟಿದ್ದೆ...ಮಿಕ್ಕ ಚಿಲ್ರೆ ಅಲ್ಲೇ ಇದೆ."

ವಿಜಯ ಚಿಲ್ಲರೆಯನ್ನು ಎಣಿಸಿದ. ಮೂರು ರೂಪಾಯಿಗಳಿದ್ದವು. ತಕ್ಷಣ ಮೇಲೆದ್ದು, ಪರ್ಸಿನಿಂದ ಒಂದು ರೂಪಾಯಿಯನ್ನು ಸುಧಾಳ ಕಡೆ ಸರಿಸಿದ.

ಸುಧಾ ಮಂಕಾದಳು...ಕ್ಷಣ ಹೊತ್ತು ಏನನ್ನೋ ಯೋಚಿಸಿ—

"ಹಾಗಾದ್ರೆ ವಿಜಯ್...ನೀವು ನನ್ನ ಹೋಟ್ಲಾಲ್ ಹೊತ್ಕೊಂಡು ಬಂದ್ರಲ್ಲ...ಏಕೆ?" ಎಂದು ಕೇಳಿದಳು.

"ಯಾಕೆ ಅಂದ್ರೆ...ನೀವೇ ಕೇಳಿದ್ರಲ್ಲ...ಕೇಳಿದಾಗ ಸಹಾಯ ಮಾಡಬೇಕಷ್ಟೆ"

"ನಾನು ನಿಮ್ಮನ್ನ ಬಸ್ಸಿನಿಂದ ಇಳಿಸಿ ಅಂತ ಕೇಳ್ದೆ...ದಾರೀಲಿ ಹೊತ್ಕೊಂಡು ಬನ್ನಿ ಅಂತ ಹೇಳಿದೆನಾ?"

"ನಾನು ಹೊರದೇ ಇದ್ರೆ ನೀವು ಕೂಲಿಯವನನ್ನು ಕರೀತಾ ಇದ್ರಿ...ನೀವೇ ಹೊತ್ಕೊಂಡು ಬರ್ತಾ ಇದ್ರಾ?"

"ಹಾಗಾದ್ರೆ ನೀವು ಹೊತ್ತಿದ್ದಕ್ಕೆ ನಾನೇನೂ ಕೊಡಬೇಡ್ವೆ?"

"ನಾನು ಕೂಲಿಯವನಲ್ಲವಲ್ಲ..."

ಇಬ್ಬರೂ ಕಾಫಿ ಹೀರಿದರು. ಬಾಗಿಲು ತೆರೆದ ಸದ್ದಾಯಿತು. ಮಾದ ಪ್ರತ್ಯಕ್ಷನಾಗಿದ್ದ.

"ಸುಧಾ...ನಿಮಗೆ ಊಟ ಎಷ್ಟೊತ್ತಿಗೆ ಬೇಕು?"

"ನೀವು ಯಾವಾಗ ಮಾಡ್ತೀರೋ ಆಗ."

"ಸರಿ—ಇನ್ನರ್ಧ ಗಂಟೆ ಬಿಟ್ಟು ಎರಡು ಊಟ ತಗೊಂಡು ಬಾ..." ಎಂದು ಮಾದನಿಗೆ ವಿಜಯ ಆಜ್ಞಾಪಿಸಿದ. ಮಾದ ಕಪ್ಪು ಬಸಿಗಳೊಡನೆ ನಡೆದ.

ಸುಧಾ ತನ್ನ ಪರ್ಸ್ ತೆಗೆದು ಹಣವನ್ನೆಲ್ಲ ಮೇಜಿನ ಮೇಲೆ ಸುರಿದಳು....ಎಣಿಸಿದಾಗ ತೊಂಬತ್ನಾಲ್ಕು ರೂಪಾಯಿಗಳಿದ್ದವು.

"ವಿಜಯ್...ನಂದೊಂದು ಮಾತು ಕೇಳ್ತೀರಾ?"

"ಹೇಳಿ."

"ನನ್ನ ಹತ್ರ ತೊಂಬತ್ನಾಲ್ಕು ರೂಪಾಯಿ ಇದೆ... ಇಷ್ಟನ್ನೂ ನಿಮ್ಮ ಹತ್ರ ಕೊಡ್ತೀನಿ. ಹ್ಯಾಗೂ ಇಬ್ರೂ ಒಟ್ಗೇ ಖರ್ಚು ಮಾಡ್ತೀವಲ್ಲ"

"ಬೇಡ ಸುಧಾ, ನಾವಿಬ್ರೂ ಇದೊಂದೇ ರಾತ್ರಿ ಹೀಗೆ ಅನಿವಾರ್ಯವಾಗಿ ಇರಬೇಕಾಗಿದೆ...ನಾಳೆ ನಾನು ಬೇರೆ ಮನೆ ಮಾಡ್ತೀನಿ...ನೀವೂ ಮಾಡಬೇಕಾಗುತ್ತೆ. ಅಲ್ದೆ...ಆಮೇಲೆ ನಮ್ಮಿಬ್ಬರ ಭೇಟಿ ಸ್ಕೂಲ್ನಲ್ಲಿ ಮಾತ್ರ..."

ಸುಧಾ ಹೆಚ್ಚು ಚರ್ಚೆ ಮಾಡಲಿಲ್ಲ.

ಕ್ಷಣ ಕಾಲ ಮೌನ ಆವರಿಸಿತು. ತಕ್ಷಣವೇ ವಿಜಯ ಎದುರಿಗಿದ್ದ ಪುಸ್ತಕದಲ್ಲಿ ಮಗ್ನನಾದ. ಸುಧಾ ತನ್ನ ಬಳಿಯಿದ್ದ ಯಾವುದೋ ವಾರಪತ್ರಿಕೆಯನ್ನು ಬಿಚ್ಚಿದಳು.



ಬಾಗಿಲು ತೆರೆದ ಶಬ್ದವಾಯಿತು.

ಮಾದ ಟಫಿನ್‌ಕ್ಯಾರಿಯರ್‌ನಲ್ಲಿ ಊಟ ತಂದಿಟ್ಟು ಹೋದ.

— ೨ —

ಊಟ ಮುಗಿಸಿದ ನಂತರ—

"ನಿಮ್ಮ ಸ್ಥಳ ಯಾವುದು?" ಸುಧಾ ಆರಂಭಿಸಿದಳು. ಊಟ ಮಾಡುವಾಗ ವಿಜಯ ಎರಡೋ ಮೂರೋ ಮಾತಾಡಿದ್ದ. ಅವಳಿಗೆ ಬಲು ಬೇಸರವಾಗಿತ್ತು. ಅವನನ್ನು ಮಾತಿಗೆಳೆಯಬೇಕೆಂದು ನಿರ್ಧರಿಸಿ ಆ ಪ್ರಶ್ನೆ ಕೇಳಿದ್ದಳು.

ವಿಜಯ ಕ್ಷಣ ಹೊತ್ತು ರೂಮಿನ ಮೇಲ್ಛಾವಣಿಯನ್ನು ದಿಟ್ಟಿಸಿದ. ನಿಧಾನವಾಗಿ ಉಸಿರೆಳೆದುಕೊಂಡ. ತಟ್ಟನೆ ಸುಧಾ ಕಡೆ ತಿರುಗಿ ಅವಳನ್ನೇ ಕೆಲ ನಿಮಿಷ ತದೇಕವಾಗಿ ನೋಡಿದ. ಅವನು ಅವಳನ್ನು ಅದುವರೆಗೂ ಹಾಗೆ ದಿಟ್ಟಿಸಿ ನೋಡಿರಲಿಲ್ಲ. ಸುಧಾಗೆ ಸ್ವಲ್ಪ ಆಶ್ಚರ್ಯವಾಯಿತು, ಮುಖ ಕೆಂಪಡರಿತು. ಅವಳು ತಲೆ ತಗ್ಗಿಸಿದಳು.

"ಸುಧಾ, ನಮ್ಮ ಜೀವನಕ್ಕೆ ಯಾವಾಗಲೂ ಮೂರು ಮುಖ ಇದ್ದೇ ಇದೆ...ಅದನ್ನು ನೀವು ಗುರ್ತಿಸಿದ್ದೀರಾ?"

ಗ್ರಹಚಾರ—ಎಂದುಕೊಂಡಳು ಸುಧಾ. ಏನಾದರೂ ಮಾತನಾಡಬೇಕೆಂದು ಬಯಸುತ್ತಿದ್ದ ಅವಳಿಗೆ ಈ ಪ್ರಶ್ನೆ ತುಂಬ ಸೀರಿಯಸ್ಸಾಗಿತ್ತು. ಅದನ್ನೇ ಹೇಳಿದಳು.

"ವಿಜಯ್, ನೀವು ತುಂಬಾ ಸೀರಿಯಸ್ ಪ್ರಶ್ನೆ ಕೇಳ್ತೀರಿ..."

"ಹೌದು ಸುಧಾ...ನಾವು ಕಳೀತಿರೋ ಈ ಜೀವನದ ಸ್ವಭಾವವೇ ಸೀರಿಯಸ್ಸು"

"ಸುಳ್ಳು...ಎಷ್ಟೋ ಜನ ಜೀವನಾನ ತುಂಬ ಲೈಟ್ ಆಗಿ ತೊಗೊಳ್ತಾರೆ...ಅವರು ಯಾವಾಗ್ಲೂ ನಗ್ತಾ ಇರ್ತಾರೆ".

"ಇರಬಹುದು ಸುಧಾ...ಆದರೆ ಅದು ಬರೀ ಪಲಾಯನವಾದ...ಅಷ್ಟೆ...ಅವರಿಗೆ ಜೀವನದ ಈ ಗಂಭೀರ ಮುಖ ನೋಡೋದಕ್ಕೆ ಹೆದರಿಕೆ.....ಅದಕ್ಕಾಗಿ ನಗುವಿನ ಮುಖವಾಡ ಹಾಕ್ತಾರೆ...ಅಂಥ ವ್ಯಕ್ತಿಗಳಿಂದ ಯಾವ ಕೆಲ್ಸಾನೂ ಸಾಗಲಾರದು."

"ವಿಜಯ್...ನೀವು ಹೇಳ್ತಿರೋ ಮಾತುಗಳನ್ನು ಸುಲಭವಾಗಿ ಒಪ್ಪಿಕೊಳ್ಳೋಕೆ ನಾನು ತಯಾರಾಗಿಲ್ಲ.— ಎಂದಿದ್ರೂ ಸಾಯಲೇಬೇಕಾದ ಮನುಷ್ಯ, ಹುಟ್ಟಿದಾಗಿನಿಂದ ಸಾಯೋತನಕ ಕಳೆಯೋ ಕಾಲವೇ ಜೀವನ ಅಂತಾದ್ರೆ, ಅದನ್ನು ಸೀರಿಯಸ್ಸಾಗಿ ಯಾಕೆ ತಗೋಬೇಕೋ ನಂಗಂತೂ ಅರ್ಥವಾಗ್ತಾ ಇಲ್ಲ."

"ಹೌದು ಸುಧಾ...ನಿಮಗೆ ಅನೇಕ ವಿಚಾರಗಳು ಅರ್ಥವಾಗೋದಿಲ್ಲ, ಅರ್ಥ ಮಾಡ್ಕೊಳ್ಳೋ ಪ್ರಯ

ಕ್ಕಾನೂ ನೀವು ಮಾಡೋದಿಲ್ಲ...ಇಲ್ನೋಡಿ... ಆ ಗೋಡೆ ಮೇಲೇನಿದೆ ಹೇಳಿ" ಎನ್ನುತ್ತಾ ಎದುರು ಗೋಡೆಯ ಕಡೆ ಕೈತೋರಿಸಿದ. ಸುಧಾ ಅತ್ತ ಕಣ್ಣಾಡಿಸಿದಾಗ ಹಲ್ಲಿಯೊಂದು ಬೇಟೆಗಾಗಿ ಹೊಂಚು ಹಾಕುತ್ತಿರುವುದು ಕಾಣಿಸಿತು.

"ಅದೊಂದು ಹಲ್ಲಿ ಅಂತ ನಮ್ಮಿಬ್ಬರಿಗೂ ಗೊತ್ತು...ಆದ್ರೆ...ಅದಕ್ಕಿಂತ ಹೆಚ್ಚು ವಿಚಾರ ಸಹ ನಾವು ಮನಸ್ಸು ಮಾಡಿದ್ರೆ ಗೊತ್ತು ಮಾಡ್ಕೋಬಹುದು."

"ನೀವು ಹೇಳೋದೇ ನಂಗೆ ಅರ್ಥವಾಗ್ತಿಲ್ಲ... ಅದೊಂದು ಹಲ್ಲಿ ಅನ್ನೋಕಿಂತ ಹೆಚ್ಚಿಗೆ ಏನು ಗೊತ್ತಾಗಬೇಕು ಹೇಳಿ? ಜೂಆಲಜಿ ಪುಸ್ತಕ ಬಿಡಿಸಿ ನೋಡಬೇಕು...ಅಷ್ಟೆ"

ವಿಜಯ ಒಮ್ಮೆ ನಕ್ಕ. ಅವನು ನಗುವುದೂ ಅಪರೂಪವೇ ಎಂಬುದು ಸುಧಾಗೆ ಆಗಲೇ ಗೊತ್ತಾಗಿತ್ತು.

"ಜೂಆಲಜಿ ಪುಸ್ತಕ ಬಿಡಿಸಿ ನೋಡಿದ್ರೆ ಒಂದು ಮುಖ ಮಾತ್ರ ಅರ್ಥವಾಗುತ್ತೆ ಸುಧಾ...ನಮಗೆ ಆ ಪ್ರಾಣಿ ಬಗ್ಗೆ ವಿವರಗಳು ಸಿಕ್ಕುತ್ತೆ. ನಮಗೆ ಅದು ಉಪಯೋಗವಿಲ್ಲ...ಹಲ್ಲಿಯಿಂದ ಪ್ರತ್ಯೇಕವಾದ ಕೆಲವು ವಿಚಾರ ನಮಗೆ ಹೊಳೆಯೋದಿಲ್ಲವೆ?"

"ವಿಜಯ್...ನೀವು ಇಷ್ಟೊಂದು ಸಣ್ಣ ವಿಚಾರದ ಬಗ್ಗೆ ಹೀಗೆಲ್ಲ ಸೀರಿಯಸ್ಸಾಗೀ ಮಾತಾಡ್ತೀರಿ ಅಂತ ನಂಗೊತ್ತಿರಲಿಲ್ಲ...ಈಗ ನೀವೇ ಸ್ಪಷ್ಟವಾಗಿ ಹೇಳಿಬಿಡಿ"

ವಿಜಯ ಪ್ರಾರಂಭಿಸಿದ.

"ಹಲ್ಲೀನ ಅಥವಾ ಬೇರೆ ಯಾವ ಪ್ರಾಣಿ ನೋಡಿದ್ರೂ ನಮಗೆ ಮೊದಲು ಎರಡು ವಿಚಾರ ಹೊಳೆಯಬೇಕು. ಒಂದು, ನಾನು ಹಲ್ಲಿ ಅಲ್ಲ–ಎರಡು, ಅದು ನಾನಲ್ಲ. ಆಮೇಲೆ ನಾನು ಏಕೆ ಹಲ್ಲಿ ಅಲ್ಲ, ನಾಯಿ ಅಲ್ಲ, ಬೆಕ್ಕಲ್ಲ, ಗೂಬೆಯಲ್ಲ...ಆ ಪ್ರಾಣಿಗಳೇಕೆ ನಾನಲ್ಲ–ಅನ್ನೋ ಯೋಚನೆ. ಅಂದ್ರೆ ಹೀಗೆ ಪ್ರಾಣಿಗಳ ಜೀವನ ಕ್ರಮ ಎಷ್ಟು ಸರಳ ಅನ್ನೋದನ್ನ ಯೋಚಿಸಿ, ಅದಕ್ಕೆ ಮಾನವನ ಜೀವನಕ್ರಮ ಹೋಲಿಸಿದಾಗ ನಮ್ಮ ಜೀವನ ಯಾಕೆ ಸೀರಿಯಸ್ ಅನ್ನೋದು ತಾನಾಗಿ ಅರ್ಥವಾಗುತ್ತೆ"

"ನಿಜ...ನಮ್ಮ ಜೀವನ ಬಹಳ ಸಂಕೀರ್ಣ."

"ಅಲ್ವೆ ಸುಧಾ, ನಮ್ಮ ಜೀವನ ಸಂಕೀರ್ಣ ಅಂತ ಒಪ್ಪಿಕೊಂಡ ಮೇಲೆ ಅದು ತುಂಬಾ ತೀವ್ರ ಹಾಗೂ ಗಂಭೀರ ಅನ್ನೋದನ್ನೂ ಒಪ್ಪಲೇಬೇಕಾಗುತ್ತೆ"

ಸುಧಾ ಮಾತನಾಡಲಿಲ್ಲ–ಕ್ಷಣ ಹೊತ್ತು ಮೌನವಾಗಿ ಯೋಚಿಸುತ್ತಾ ಕುಳಿತಳು. ವಿಜಯ ಗೋಡೆಯ ಮೇಲಿನ ಹಲ್ಲಿಯನ್ನೇ ದಿಟ್ಟಿಸುತ್ತಿದ್ದ.

"ಅದು ಸರಿ ವಿಜಯ್...ನೀವು ನನ್ನ ಪ್ರಶ್ನೆಗೆ ಉತ್ತರಾನೇ ಕೊಡಲಿಲ್ಲವಲ್ಲ"

"ಯಾವ ಪ್ರಶ್ನೆ?"

"ಅದೇ–ನಿಮ್ಮ ಸ್ವಂತ ಸ್ಥಳ ಯಾವುದು?"

"ಓಹೋ...ಅದಾ?...ಆ ಪ್ರಶ್ನೆ ಕೇಳಿದ ಕೂಡಲೇ ನನಗೆ ಹೊಳೆಯೋ ಅಂಶ ನಮ್ಮ ಜೀವನದ ಮೂರು ಮುಖಗಳು."

"ಹೋಗ್ಲಿ...ಆ ಮೂರು ಮುಖಗಳು ಯಾವ್ವು ಅಂತಲಾದ್ರೂ ಹೇಳಿ"

ವಿಜಯ ಮತ್ತೊಮ್ಮೆ ನೀಳವಾಗಿ ಉಸಿರಾಡಿದ. ಮತ್ತೆ ಸುಧಾಳತ್ತ ನೆಟ್ಟ ದೃಷ್ಟಿಯಿಟ್ಟು–"ಕೇಳಿ ಸುಧಾ...ಈ ದಿವ್ಸ ನಾವಿಬ್ರೂ ಈ ಕೋಣೇಲಿ ಸೇರಿದೀವಿ. ಹೀಗೆ ನಾವು ಸೇರಿರೋದಕ್ಕೆ ಈ ಹಿಂದೆ ಹಲವಾರು ಘಟನೆಗಳು ಕಾರಣ... ಆ ಒಂದೊಂದು ಘಟನೆಯೂ ಈ ದಿನ ನಮ್ಮ ಪಾಲಿಗಿಲ್ಲ...ಆದರೆ ಅದರ ಫಲ ಸ್ವರೂಪವಾಗಿ ನಾವಿಬ್ಬರೂ ಇಲ್ಲಿದ್ದೇವೆ. ...ಹಿಂದಿನ ಆ ಘಟನೆಗಳ ಸಮಗ್ರ ಮೊತ್ತವಾದ ಭೂತವು ನಮ್ಮ ಜೀವನದ ಒಂದು ಮುಖ. ಅದು ಈಗಿಲ್ಲದಿದ್ದರೂ ಅದರ ಪ್ರಭಾವವಿದ್ದೇ ಇದೆ....ನಾಳೆಯಿಂದ ನಮ್ಮ ಜೀವನದ ದಿಕ್ಕು ಹೇಗೆ ತಿರುವುದೋ ನಮಗೆ ಗೊತ್ತಿಲ್ಲ...ಅಂತೂ ಅದು ಘಟಿಸುವುದು ನಿಜ...ಈ ಕಾಣದ ಭವಿಷ್ಯ ಮತ್ತೊಂದು ಮುಖ...ಈ ಎರಡರ ನಡುವೆ ಇರುವ ಪ್ರತ್ಯಕ್ಷ ವಾಸ್ತವವೇ ಮೂರನೆಯ ಮುಖ. ನೀವು ನನ್ನನ್ನು ಕೇಳಿದ ಪ್ರಶ್ನೆ ಮೊದಲನೇ ಮುಖಕ್ಕೆ ಸೇರಿದ್ದು...ಪ್ರಾಯಶಃ ಈ ಪ್ರತ್ಯಕ್ಷ ವಾಸ್ತವಕ್ಕೆ ಆ ಪ್ರಶ್ನೆಯ ಉತ್ತರ ಏನೂ ಸಹಾಯ ಮಾಡಲಾರದು."

ಸುಧಾ ಗಂಭೀರಳಾಗಿ ಕುಳಿತಳು. ಇದುವರೆಗೂ ಇಂತಹ ಸಂಭಾಷಣೆಯನ್ನವಳು ನಡೆಸಿಯೇ ಇರಲಿಲ್ಲ. ಏನು ವಿಚಿತ್ರ ಮನುಷ್ಯ ಈ ವಿಜಯ! ಎಂದುಕೊಂಡಳಾದರೂ ಅವನು ಹೇಳಿದ ವಿಚಾರಗಳ ಗಹನತೆ ಅವಳನ್ನು ಪ್ರಭಾವಗೊಳಿಸದಿರಲಿಲ್ಲ.

ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ಸುಧಾ ಏನನ್ನೋ ಗಾಢವಾಗಿ ಯೋಚಿಸುತ್ತಿದ್ದಳು.

"ವಿಜಯ್...ನೀವು ಫಿಲಾಸಫಿ ತುಂಬಾ ಓದಿದೀರಿ ಅಲ್ವಾ?"

"ಸುಧಾ...ಇಷ್ಟನ್ನು ಅರ್ಥ ಮಾಡ್ಕೊಳ್ಳೋದಕ್ಕೆ ಫಿಲಾಸಫಿ ಏನೂ ಓದಬೇಕಾಗಿಲ್ಲ. ಇದೆಲ್ಲ ಯೋಚನೆ ಮಾಡೋ ವಿಚಾರ...ಅಷ್ಟೆ"

ವಿಜಯ ಆಕಸ್ಮಾತ್ತಾಗಿ ತನ್ನ ಗಡಿಯಾರ ನೋಡಿಕೊಂಡ....ರಾತ್ರಿ ಹನ್ನೆರಡೂವರೆ!

"ಸುಧಾ...ಆಗ್ಲೇ ಹನ್ನೆರಡೂವರೆ...ಮಲಕ್ಕೊಳ್ಳಿ ಪಾಪ...ತುಂಬಾ ಹೊತ್ತಾಯ್ತು." ಎಂದವನೇ ನೇರವಾಗಿ ತನ್ನ ಮಂಚದ ಮೇಲೆ ಹೋಲ್ಡಾಲ್ ಉರುಳಿಸಿ, ಬೆಡ್‌ಷೀಟ್ ಹೊದ್ದು ಮಲಗಿಯೇ ಬಿಟ್ಟ. ಸುಧಾ ವಿಜಯನ ಮಾತುಗಳನ್ನೇ ಮೆಲುಕು ಹಾಕುತ್ತಾ ಮೇಲೆದ್ದು ತನ್ನ ಮಂಚದ ಕಡೆ ನಡೆದಳು.

"ವಿಜಯ್...?" ಎಂದಳು. ...ಪ್ರತ್ಯುತ್ತರವಾಗಿ ಕೇಳಿಸಿದ್ದು ಅವನ ಗೊರಕೆ.

ಸುಧಾ ಮಲಗಿ ಬೆಡ್‌ಷೀಟ್ ಮೇಲೆಳೆದುಕೊಂಡಳು....ದೀಪ ಆರಿಸುವುದಕ್ಕಾಗಿಯೇ ವಿಜಯನನ್ನು ಕೂಗಿದ್ದಳು. ಅವನು ನಿದ್ರಾವಶನಾದುದರಿಂದ ತಾನೇ ಎದ್ದು ದೀಪ ಆರಿಸಿ ಮತ್ತೆ ಮಲಗಿದಳು. ನೂರಾರು ಯೋಚನೆಗಳು ಅವಳನ್ನು ಮುತ್ತಿದವು. ಗುಂಡೂರಾಯರ ಮನೆಗೆ ತಾನು ಈ ದಿನ ಹೋಗಬೇಕಾಗಿತ್ತು. ಅವರಿಗೆ ಅವಳ ತಂದೆ ಒಂದು ಪತ್ರವನ್ನು ಸಹ ಕೊಟ್ಟಿದ್ದರು. ಅದರಲ್ಲಿ ಅವರೇನು ಬರೆದಿದ್ದರೆಂದು ಸುಧಾ ನೋಡಿರಲಿಲ್ಲ. ಈಗ ಯಾಕೆ ನೋಡಬಾರದೆನ್ನಿಸಿತು. ಮರುಗಳಿಗೆಯೇ, ವಿದ್ಯಾವಂತಳಾದ ತಾನು, ತಂದೆಯೇ ಆಗಲಿ, ತಾಯಿಯೇ ಆಗಲಿ, ಮತ್ತೊಬ್ಬರಿಗೆ ಬರೆದ ಪತ್ರವನ್ನು ಅನಧಿಕೃತವಾಗಿ ವಾಚಿಸುವುದು ತಪ್ಪೆನ್ನಿಸಿತು. ಆಯೋಚನೆಯನ್ನು ಅಲ್ಲೇ ಚಿವುಟಿ ಹಾಕಿದಳು. ಆದರೆ ಆ ಪತ್ರವಂತೂ ತನ್ನಲ್ಲಿಯೇ ಇದೆ. ಅದನ್ನು ಗುಂಡೂರಾಯರಿಗೆ ತಲುಪಿಸಬೇಕು...ನಾಳೆ ಅವರಿಗೆ ಪತ್ರ ತಲ್ಪಿಸುವುದರ ಮೂಲಕ ಅವರ ಮನೆಗೆ ಹೋಗಬಹುದು–ಗುಂಡೂರಾಯರು ತನ್ನ ತಂದೆಯ ಬಾಲ್ಯ ಸ್ನೇಹಿತರು. ತಾನು ಅವರ ಮನೆಗೆ ಬಂದ ವಿಷಯವಾಗಿ ಅವರು ತಂದೆಗೆ ಪತ್ರ ಬರೆಯಬಹುದು...ಅವರು ನಿಜ ಸ್ಥಿತಿಯನ್ನೇ ಬರೆದರೆ, ಈ ರಾತ್ರಿ ತನ್ನ ವಸತಿ ಎಲ್ಲಾಯಿತೆಂಬ ಬಗ್ಗೆ ಅನುಮಾನ ಮಾಡುವುದು ಸಹಜ. ಹಾಗಾದರೆ ತಾನೀಗ ಏನು ಮಾಡಬೇಕು? ಸುಧಾ ಯೋಚಿಸತೊಡಗಿದಳು. ಈ ರಾತ್ರಿಯೇ ಅವರ ಮನೆಗೆ ಯಾಕೆ ಹೊರಟು ಬಿಡಬಾರದು ? ಈಗಿನ್ನೂ ಒಂದು ಗಂಟೆಯಿರಬಹುದು. ಎರಡನೇ ಆಟ ಬಿಡುವ ಹೊತ್ತಿರಬಹುದು. ಆದರೆ, ಈ ಹೋಟೆಲಿನಿಂದ ತಾನು ಹೊರಕ್ಕೆ ಹೊರಡುವುದು ಹೇಗೆ? ತನ್ನ ಹೋಲ್ಡಾಲನ್ನು ಯಾರು ತೆಗೆದುಕೊಳ್ಳುವವರು? ಒಂದು ಕ್ಷಣ ಅವಳಿಗೆ ಈ ವಿಜಯ ಈ ದಿನ ಸಿಕ್ಕಿದ್ದೇ ಇಷ್ಟೆಲ್ಲ ಅನಾಹುತಕ್ಕೆ ಕಾರಣ ಎನಿಸಿತು. ಆದರೆ ಅವನದೇನು ತಪ್ಪು? ಅವನಾಗಿ ತನ್ನನ್ನು ಮಾತನಾಡಿಸಲಿಲ್ಲ... ಕರೆಯಲಿಲ್ಲ... ತಾನಾಗಿ ಅವನನ್ನು ಹಿಂಬಾಲಿಸಿದೆ. ಹಾಗಾದರೆ, ತಾನೇಕೆ ವಿಜಯನನ್ನು ಹಿಂಬಾಲಿಸಿದೆ? ವಿಜಯ ಆಕರ್ಷಕ ಯುವಕ....ಗಟ್ಟಿಮುಟ್ಟಾದ ವ್ಯಕ್ತಿ...ಹೌದು...ಅವನನ್ನು ಕಂಡೊಡನೆಯೇ ತನಗೆ ಅವನ ಬಗ್ಗೆ ಆಸಕ್ತಿ ಹುಟ್ಟಿತು. ಅವನ ಮುಖದಲ್ಲಿ ಕಂಡ ಅಲೌಕಿಕ ವರ್ಚಸ್ಸಿಗೆ ತಾನು ಮರುಳಾಗಿಬಿಟ್ಟೆ.

ತಕ್ಷಣ ಸುಧಾ ಮೇಲೆದ್ದಳು...ಸ್ವಿಚ್ ಹಾಕಿದಳು. ದೀಪ ಬೆಳಗಿತು. ವಿಜಯನ ಮಂಚದತ್ತ ಕಣ್ಣಾಡಿಸಿದಳು. ವಿಜಯ ಗಾಢ ನಿದ್ರೆಯಲ್ಲಿದ್ದ. ಅವನು ಹೊದ್ದಿದ್ದ ಬೆಡ್ ಷೀಟು ಪಕ್ಕಕ್ಕೆ ಜಾರಿತ್ತು. ಅಂಗಾತನೇ ಮಲಗಿದ್ದ ಆ ಅಜಾನುಬಾಹುವನ್ನು ಕಂಡ ಸುಧಾ ಅರೆ ನಿಮಿಷ ಮೈಮರೆತಳು. ಉಸಿರಾಟದಿಂದ ಏರಿಳಿಯುತ್ತಿದ್ದ ಅವನ ಬಲಿಷ್ಟ ಎದೆಯನ್ನು ಬನಿಯನ್ನಿನ ಸಂದಿಗಳಿಂದ ತೂರಿ ಬರುತ್ತಿದ್ದ ಆ ಎದೆಯ ಮೇಲಣ ಕಪ್ಪು ಕೂದಲನ್ನೂ ಕಂಡಾಗ ಸುಧಾ ಬೆವರೊಡೆದಳು.

ಹೌದು...ಹೋಟೆಲಿಗೆ ಈ ರಾತ್ರಿ ಹೋಗಬೇಕೆಂದು ಅವನು ಹೇಳಿದಾಗ ತಾನೂ ಸಹ ಹೋಟೆಲಿನ ವಿಚಾರ ಏಕೆ ತೆಗೆದೆ? ಒಂದೇ ರೂಮಿದೆ–ಎಂದು ತಿಳಿದಾಗ ವಿಜಯನ "ನಿಮ್ಮ ಅಭ್ಯಂತರವೇನೂ ಇಲ್ಲವಲ್ಲ?" ಎಂಬ ಮಾತಿಗೆ ತಾನೆಷ್ಟು ವಿಧವಾದ ಅರ್ಥ ಹಚ್ಚಿದ್ದೆ ! ಆದರೆ ಈ ವಿಜಯ. ಎಷ್ಟು ಆಕರ್ಷಕನಾಗಿದ್ದಾನ್ನೋ, ಅಷ್ಟೇ–ಏಕೆ, ಅದಕ್ಕೂ ಹೆಚ್ಚಿನ ವಿಚಾರವಂತ. ಅವನ ಸೌಷ್ಠವಕ್ಕೆ ಮರುಳಾದ ತಾನು ಇದೀಗ ಅವನ ವಿಚಾರ ಗಾಂಭೀರ್ಯಕ್ಕೆ ಮಾರು ಹೋಗಿದ್ದೇನೆ. ವಿಜಯ್ ಎಲ್ಲ ವಿಷಯಗಳನ್ನೂ ಯಾವ ಉದ್ವೇಗವೂ ಇಲ್ಲದೆ ವಿಚಾರ ಮಾಡಬಲ್ಲ–ಹಾಗಿದ್ದರೆ,

ಹಾಗಿದ್ದರೆ–ತನ್ನ ಈಗಿನ ಸಮಸ್ಯೆಯನ್ನು ಅವನ ಮುಂದಿಟ್ಟು ಪರಿಹಾರ ಏಕೆ ಕೇಳಬಾರದು? ಹೌದು, ಈತನನ್ನು ಕಂಡರೆ, ತನ್ನಲ್ಲಿರುವ ರಹಸ್ಯಗಳೆಲ್ಲವನ್ನೂ ತೆರೆದ ಮನಸ್ಸಿನಿಂದ ನಿವೇದಿಸಿಕೊಳ್ಳಬೇಕೆಂಬ ಹಂಬಲ ಉಂಟಾಗುತ್ತಿದೆ. ಆದರೆ ಗಾಢನಿದ್ರೆಯಲ್ಲಿರುವ ಈ ವ್ಯಕ್ತಿಯನ್ನು ಎಬ್ಬಿಸುವುದು ಹೇಗೆ? ತಾನಾಗಿ ಎಚ್ಚರಗೊಳಿಸಿದರೆ, ಇಂಥ ಉನ್ನತ ವಿಚಾರಗಳ ಈ ವ್ಯಕ್ತಿ ಏನೆಂದು ತಿಳಿದುಕೊಂಡಾನು?

ಮರುಗಳಿಗೆಯೇ ವಿಜಯ್ ಹಾಗೆಲ್ಲ ಭಾವೋದ್ವೇಗಗಳಿಗೆ ವಶವಾಗುವವನಲ್ಲ ಎಂಬ ವಿಚಾರ ಜ್ಞಾಪಕವಾಯಿತು. ಸುಧಾ ಮಂಚವನ್ನು ಬಿಟ್ಟು ಕೆಳಗಿಳಿದಳು. ದೀಪದ ಪ್ರಕಾಶದಲ್ಲಿ ತನ್ನ ಸಮಸ್ತ ದೇಹವೂ ಎದುರಿಗಿದ್ದ ನಿಲುವುಗನ್ನಡಿಯಲ್ಲಿ ಬಿಂಬಿಸಿತು. ತನ್ನ ಬಿಂಬವನ್ನೇ ತಾನೊಮ್ಮೆ ನೋಡಿಕೊಂಡಳು.

ಹೊಳೆಯುವ ದಿಟ್ಟವಾದ ಕಣ್ಣು, ಎಸುಳಾದ

ಮೂಗು, ಕೆಂದುಟಿಗಳು, ಸ್ವಲ್ಪ ಉಬ್ಬಿ ಗುಲಾಬಿ ಬಣ್ಣಕ್ಕೆ ತಿರುಗಿದ ಕೆನ್ನೆಗಳು—ಉಬ್ಬಿರುವ ವಕ್ಷ, ದೇಹದ ಸಮತೋಲವನ್ನು ದಕ್ಷವಾಗಿ ಹೊರಬಲ್ಲ ತೊಡೆಯ ಭಾಗ ಇತ್ಯಾದಿಗಳನ್ನು ವಿವರ ವಿವರವಾಗಿ ಕನ್ನಡಿಯಲ್ಲಿ ನೋಡಿಕೊಂಡಳು.—ಅವಳಿಗೆ ತನ್ನ ರೂಪದ ಬಗ್ಗೆ ಹೆಮ್ಮೆಯೂ ಇತ್ತು—ಅದು ಇದೀಗ ಜಾಗೃತವಾಯಿತು. ತನ್ನನ್ನು ತಾನೇ ಮೆಚ್ಚಿಕೊಂಡಂತೆ, ಒಮ್ಮೆ ಮುಗುಳ್ನಗೆ ಬೀರಿದಾಗ, ಕನ್ನಡಿಯೂ ಅದನ್ನೇ ಮಾಡಿತು.

ಅದೇ ಕನ್ನಡಿಯ ಮತ್ತೊಂದು ಬದಿಯಲ್ಲಿ ವಿಜಯನ ಬಿಂಬವೂ ಕಂಡಿತು. ಅವನ ಮೈಕಟ್ಟು, ಮುಖದಲ್ಲಿ ನಿದ್ರಿಸುವಾಗಲೂ ಮಿನುಗುತ್ತಿದ್ದ ಮಂದಹಾಸ—ಎಲ್ಲವನ್ನೂ ಸುಧಾ ತನ್ನ ರೂಪದೊಂದಿಗೆ ಹೋಲಿಸಿಕೊಂಡಳು. ಎರಡು ದೇಹಗಳೂ ಆಕರ್ಷಣೆಯಲ್ಲಿ ಒಂದನ್ನೊಂದು ಸ್ಪರ್ಧಿಸುತ್ತಿರುವಂತೆ ಕಂಡಿತು. ಆ ಎರಡು ದೇಹಗಳ ಪೈಕಿ ತನ್ನದು ಯಾವುದು, ವಿಜಯನದಾವುದು—ಎಂಬುದನ್ನು ಪ್ರತ್ಯೇಕಿಸಲಾರದಾದಳು.

ಆದರೆ ಮರುಕ್ಷಣವೇ ಅವನ ಗಹನ ವಿಚಾರಧಾರೆ ಸುಪ್ತಿಯಲ್ಲಿ ಕರಗಿ ಹೋಗಿರುವ ಅವನ ಉನ್ನತ ತತ್ತ್ವಗಳು ಜ್ಞಾಪಕವಾಯಿತು ಅವಳಿಗೆ. ಹೌದು, ವಿಜಯನ ನಿಜವಾದ ವ್ಯಕ್ತಿತ್ವ ಆ ವಿಚಾರಗಳೇ ಕನ್ನಡಿಯಲ್ಲಿ ಬಿಂಬಿಸಿರುವ ಆ ಶರೀರವಲ್ಲ...ವಿಜಯನ ವಿಚಾರಗಳನ್ನು ಬಿಂಬಿಸುವ ಸಾಮರ್ಥ್ಯ ಆ ಗಾಜಿನ ಹಲಗೆಯಲ್ಲಿರಲಿಲ್ಲವೆಂದು ಅರ್ಥವಾಯಿತು. ಹಾಗಾದರೆ, ಕನ್ನಡಿಯಲ್ಲಿ ಕಾಣುತ್ತಿರುವ ಆ ದೇಹ ಆತನ ವ್ಯಕ್ತಿತ್ವದ ಅತ್ಯಂತ ಕ್ಷುಲ್ಲಕ ಭಾಗವೇ? ಎನಿಸಿತು. ವಿಜಯನ ಸಹವಾಸದಿಂದ ತನಗೂ ವಸ್ತುನಿಷ್ಠವಾಗಿ ಯೋಚಿಸುವ ಅಭ್ಯಾಸವಾಗಿ ಹೋಯಿತೆನ್ನಿಸಿತು.

ಹಾಗಾದರೆ ವಿಜಯನ ವಿಚಾರಧಾರೆಗಳು ಈಗ ಎಲ್ಲಿವೆ? ಆತನೇ ಹೇಳಿದಂತೆ ಈಗ ಆತ ಭೂತಕ್ಕೆ ಹಿಂದಿರುಗಿದ್ದಾನೆ—ಈ ವಿಚಾರಧಾರೆಗಳಿಗೂ ಈಗ ಆತನಿರುವ ಸ್ಥಾನಕ್ಕೂ ಎಷ್ಟೋ ದೂರದ ಅಂತರವಿದೆ. ಆತನ ವಿಚಾರಗಳನ್ನು ಪ್ರತಿಬಿಂಬಿಸುವ ಕನ್ನಡಿ ಯಾವುದು?

ಸುಧಾಳಿಗೆ ಏನೋ ಹೊಳೆದಂತಾಯಿತು—ವಿಜಯನ ವಿಚಾರವಾಗಿ ತಾನು ಯೋಚಿಸಿದುದೆಲ್ಲ ತನ್ನ ಬಗ್ಗೆಯೂ ಸತ್ಯವೇ ಅಲ್ಲವೆ? ಹಾಗಾದರೆ, ಕನ್ನಡಿಯಲ್ಲಿ ಕಾಣುವ ತನ್ನ ಬಿಂಬವೂ ತನ್ನ ವ್ಯಕ್ತಿತ್ವದ ಕ್ಷುಲ್ಲಕ ಅಂಶ. ಹಾಗಾದಲ್ಲಿ ತನ್ನ ವ್ಯಕ್ತಿತ್ವದ ತಾತ್ತ್ವಿಕ ಅಂಶ ಯಾವುದು? ಆ ಮಧ್ಯಾಹ್ನದಿಂದ ನಡೆದ ಘಟನೆಗಳನ್ನೆಲ್ಲ ಮೆಲುಕು ಹಾಕತೊಡಗಿದಳು.

ಬಸ್ ಪ್ರಯಾಣದಲ್ಲಿ ತನ್ನ ಹಿಂದಿದ್ದ ಸೀಟಿನಲ್ಲಿಯೇ ವಿಜಯ ಕುಳಿತಿದ್ದ. ತಾನು ಆತನ ಆಕರ್ಷಕ ವ್ಯಕ್ತಿತ್ವಕ್ಕೆ ಮರುಳಾಗಿ ಅನೇಕ ಬಾರಿ ಹಿಂದಿರುಗಿ ಆತನೆಡೆಗೆ ಕಳ್ಳನೋಟ ಬೀರಿದುದು, ಆತ ಅದಕ್ಕೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸದೆ, ಪುಸ್ತಕವೊಂದರಲ್ಲಿ ತಲ್ಲೀನನಾದದ್ದು, ಬಸ್ಸಿನಲ್ಲಿ ತಾವಿಬ್ಬರೇ ಉಳಿದಾಗ ತಾನಾಗಿ ಆತನನ್ನು ಮಾತನಾಡಿಸಿದುದು, ಆತನ ಅನುದ್ವೇಗಕರ ಉತ್ತರಗಳು, ಬಸ್‌ಸ್ಟ್ಯಾಂಡಿನಲ್ಲಿ ಆತನ ನಿರ್ಲಿಪ್ತ ವರ್ತನೆ, ಆತನಿಂದ ಆಕರ್ಷಿತಳಾದ ತಾನು ಆತನ ಬೆಂಬಿಡದೆ ಹೋಟೆಲಿಗೆ ಬಂದದ್ದು, ಒಂದೇ ರೂಮಿನಲ್ಲಿಯೇ ತಾವಿಬ್ಬರೂ ತಂಗಬೇಕಾದ ಸನ್ನಿವೇಶಕ್ಕಾಗಿ ಮನಸ್ಸಿನಲ್ಲಿಯೇ ಹರ್ಷಗೊಂಡದ್ದು—ಕೊನೆಗೆ ವಿಜಯನ ಶುಷ್ಕವೆನಿಸುವ ವರ್ತನೆಗಿಂತ, ಅದರ ಹಿಂದಿರುವ ವೈಚಾರಿಕತೆಗೆ ತಾನು ಮರುಳಾದದ್ದು.

"ಓಹ್...ನಾನು ಸಂಪೂರ್ಣ ಸೋತೆ" ಎಂದುಕೊಂಡಳು....ತನ್ನ ಸೌಂದರ್ಯದ ಬಗೆಗಿದ್ದ ಅವಳ ಹೆಮ್ಮೆ ನುಚ್ಚು ನೂರಾಯಿತು. ನಿಜ... ವಿಜಯನ ವಿಚಾರಧಾರೆಗಳನ್ನು ಬಿಂಬಿಸಬಲ್ಲ ಕನ್ನಡಿ ತಾನೇ ಎನ್ನಿಸಿತು. ಮಾನವನ ದೌರ್ಬಲ್ಯಕ್ಕೆ ಪ್ರಧಾನ ಕಾರಣ ಅವನ ಭಾವೋದ್ವೇಗವೇ ಎಂದು ತೀರ್ಮಾನಿಸಿದಳು....ಹಾಗಾದರೆ ಈ ಭಾವೋದ್ವೇಗವನ್ನು ಸರಿಸಿ ಹಾಕಿ, ವೈಚಾರಿಕತೆಗೆ ಶರಣು ಹೊಕ್ಕರೆ—ತನಗೆ ಭಯವೆಂಬುದೇ ಇಲ್ಲ...ನಿಜ. ವಿಜಯ ತನಗೆ ಆ ರಾತ್ರಿ ಕಲಿಸಿದ ಪಾಠ ಅದ್ಭುತ—ಎಂದುಕೊಂಡಳು.



"ಏಕೆ ಸುಧಾ? ಇನ್ನೂ ಮಲಗಲಿಲ್ವಾ?"

ಸುಧಾ ಬೆಚ್ಚಿದಳು—ವಿಜಯ ಎದ್ದು ಕುಳಿತಿದ್ದ. ಕನ್ನಡಿಯ ಎದುರು ನಿಂತಿದ್ದ ಸುಧಾ ನಾಚಿಕೆಯಿಂದ ತನ್ನ ಮಂಚದ ಬಳಿ ಬಂದು ಕುಳಿತಳು.

"ಯಾಕೆ ನಿದ್ದೆ ಬರ್ಲಿಲ್ವಾ?...ಎಂದ ವಿಜಯ್."

ಸುಧಾ ತನ್ನನ್ನೇ ತಾನು ಹತೋಟಿಯಲ್ಲಿಟ್ಟುಕೊಳ್ಳಲಾಗದೆ, ಮಂಚದಿಂದ ಕೆಳಗಿಳಿದು ಧಾವಿಸಿ ವಿಜಯನ ಕಾಲುಗಳನ್ನು ಭದ್ರವಾಗಿ ಹಿಡಿದುಕೊಂಡು—

"ಪ್ಲೀಸ್...ಎಕ್ಸ್‌ಕ್ಯೂಜ್‌ಮಿ ವಿಜಯ್... ದಯವಿಟ್ಟು ನನ್ನನ್ನು ಕ್ಷಮಿಸಿ" ಎಂದು ಹೇಳುತ್ತಾ ಅಳಲಾರಂಭಿಸಿದಳು.

ವಿಜಯ ತನ್ನ ಕಾಲುಗಳನ್ನು ಹಿಂತೆಗೆದುಕೊಂಡು "ಸುಧಾ...ದಯವಿಟ್ಟು ಕುರ್ಚಿ ಮೇಲೆ ಕೂತ್ಕೊಳ್ಳಿ..." ಎಂದು ತಾನೇ ಅವಳನ್ನೆತ್ತಿ ಕುರ್ಚಿಯ ಮೇಲೆ ಕೂರಿಸಿದ.

"ವಿಜಯ್...ನಿಮ್ಮ ಮಾನಸಿಕ ಔನ್ನತ್ಯ ತುಂಬ ದೊಡ್ಡದು....ಈಗ ನನಗೆ ಬಂದಿರೋ ಸಮಸ್ಯೆ ನಿಮ್ಮಿಂದ್ಲೇ ಬಗೆ ಹರಿಯಬೇಕು..."

"ಏನು ಹೇಳಿ?"

"ನಾನಿವತ್ತು ಈ ಊರಿನ ಲಾಯರ್ ಗುಂಡೂರಾಯರ ಮನೆಗೆ ಹೋಗಬೇಕಾಗಿತ್ತು....ನಮ್ತಂದೆ ಅವರಿಗೆ ಪತ್ರ ಸಹ ಕೊಟ್ಟಿದಾರೆ"

"ಮತ್ತೆ ನೀವು ಬಸ್‌ಸ್ಟ್ಯಾಂಡಿನಲ್ಲಿ ನಂಗೆ ಈ ವಿಚಾರ ಹೇಳ್ಲೇ ಇಲ್ಲ"

"ನಿಮಗೆ ವೃಥಾ ತೊಂದ್ರೆ ಕೊಡಬೇಕಾಗ್ತಿತ್ತು, ಅಲ್ಲದೆ, ಆ ಲಾಯರ್ ಮನೇನೂ ನಂಗೆ ಗೊತ್ತಿಲ್ಲ... ಹೋಲ್ಡಾಲ್ ಸಮೇತ ಊರೆಲ್ಲ ತಿರುಗೋ ಹಾಗಾಗುತ್ತೆ...ಅಂತ..."

"ಛೆ...ಛೆ...ಅಂಥಾ ಸಂದರ್ಭ ಇದ್ದಿದ್ರೆ ನಾಳೇ ಜಟಕಾದಲ್ಲೋ ರಿಕ್ಷಾದಲ್ಲೋ ನಿಮ್ಮನ್ನು ಅವರ ಮನೇಗೆ ತಲುಪಿಸೋ ವ್ಯವಸ್ಥೆ ಮಾಡ್ತಾ ಇದ್ನಲ್ಲ..."

"ಆದ್ರೆ... ವಿಜಯ್... ಆದರೆ... ಅದಕ್ಕಿಂತ ಹೆಚ್ಚಾಗಿ, ನಂಗೆ ಈ ರಾತ್ರಿ ನಿಮ್ಮ ಜೊತೆಗೇ ಕಳೀಬೇಕೂ...ಅಂತ ಬಯಕೆಯಾಗಿದ್ದು ನಿಜ..."

"ಯಾಕೆ ಹಾಗಾಯ್ತು?"

ಸುಧಾ ಈ ಪ್ರಶ್ನೆಗೆ ಏನು ಉತ್ತರ ಹೇಳಿಯಾಳು? ವಿಜಯನನ್ನು ಶುದ್ಧ ಅರಸಿಕನೆಂದು ತೀರ್ಮಾನಿಸಲು, ಅವನ ಗಹನ ವಿಚಾರಗಳು ದೊಡ್ಡ ಅಡ್ಡಿಯಾಗಿದ್ದವು.

"ನಿಮಗೆ ಬಯಕೆ ಈಡೇರಿದ ಹಾಗಾಯ್ತಲ್ಲವೆ?"

ಸುಧಾ ನಿರುತ್ತರಳಾದಳು...ಏನು ಹೇಳಬೇಕೆಂದು ತಕ್ಷಣ ಹೊಳೆಯಲಿಲ್ಲ.

"ಈಗ ನಿಮ್ಮ ಮುಂದಿರೋ ಸಮಸ್ಯೆಯಾದ್ರೂ ಏನು?"

"ನಾಳೆ ನಾನು ಆ ಗುಂಡೂರಾಯರ ಮನೆಗೆ ಹೋಗಬೇಕು...ಅವರಿಂದ ನಮ್ಮ ತಂದೆಗೆ ನಾನಿಲ್ಲಿಗೆ


ಡೆಟ್ ಒಗೆಯುವ ಬಿಲ್ಲೆ
ಸಾಬೂನಿಗಿಂತ
1½ ಪಾಲು ಹೆಚ್ಚು ಶಕ್ತಿಶಾಲಿ
—ಕ್ಷಾರಯುಕ್ತ ನೀರಿನಲ್ಲಿಯೂ.)
ಡೆಟ್ ಒಗೆಯುವ ಪೌಡರ್
ಹಲವಾರು ಸೈಜ್‌ಗಳಲ್ಲಿ ದೊರೆಯುತ್ತದೆ.
ಇದರ ಮಿಶ್ರಣದಲ್ಲಿ ಬಟ್ಟೆಗಳನ್ನು ನೆನೆಸಿ,
ಸ್ವಚ್ಛ ನೀರಿನಲ್ಲಿ ಅದ್ದಿ ತೆಗೆಯಿರಿ.
ನಿಮ್ಮ ಕೈಗಳಿಗೂ ಮೃದುವಾಗಿದೆ.
ಎನ್-ಡೆಟ್
ಕಲೆಗಳನ್ನು ತೆಗೆಯುವ ಎನ್‌ಸೈಮ್‌ಯುಕ್ತ
ಒಗೆಯುವ ಪೌಡರ್
(ಕ್ರಿಯಾಶೀಲ ಆದರೂ ಹಾನಿರಹಿತ.)
new!
det
detergent washing cake
NEW!
TRIPLE ACTION
white
det
WASHES WHITEST
enzyme
det
ಎಂದೂ ಇರಲಿಲ್ಲ,ದೊರೆಯಲಿಕ್ಕಿಲ್ಲ, ಇಂತಹ ಬಿಳುಪು–ಡೆಟ್ ಉತ್ಕೃಷ್ಟ ಉತ್ಪಾದನೆಗಳಿಂದ ದೊರೆಯುವ ಬಿಳುಪು
Shilpi HPMA 6/74 Kan

ಯಾವತ್ತು ಬಂದೆ ಅನ್ನೋ ವಿಚಾರ ತಿಳಿದೇ ತಿಳಿಯುತ್ತೆ. ಈ ರಾತ್ರಿ ನಾನಿಲ್ಲಿಗೆ ಬಂದಿರೋದು ನಮ್ಮ ತಂದೆಗೆ ಗೊತ್ತೇ ಇದೆ"

"ಸರಿ...ಇದರಲ್ಲಿ ಸಮಸ್ಯೆ ಯಾವುದು?"

"ಅದೇ...ಈ ರಾತ್ರಿ ನಾನು ಎಲ್ಲಿ, ಹೇಗೆ ಕಳೆದೆ ಅನ್ನೋ ವಿಚಾರ..."

ವಿಜಯ ಒಮ್ಮೆ ನಕ್ಕ...ಅಪರೂಪದ ನಗೆಯಲ್ಲವೆ?

"ಸರಿ...ಅರ್ಥವಾಯಿತು ಬಿಡಿ... ಈ ರಾತ್ರಿ ನಾವಿಬ್ಬರೂ ಹೀಗೆ ಒಂದೇ ಕೋಣೇಲಿದ್ದವು ಅನ್ನೋ ವಿಚಾರ...ಈ ಬಗ್ಗೆ ಈ ಹೋಟೆಲಿನ ಲೆಡ್ಜರ್‌ನಲ್ಲಿಯೂ ಪುರಾವೆ ಇದೆಯಲ್ಲ...ಅದರಿಂದಾಗೋ ನಷ್ಟವಾದ್ರೂ ಏನು?"

ಸುಧಾ ವಿಚಾರವನ್ನು ವಿಜಯನಿಗೆ ಹೇಗೆ ತಿಳಿಸಬೇಕೆಂದು ತಿಳಿಯದೆ ಪೇಚಾಡಿದಳು. ಅವಳ ಪೇಚಾಟ ನೋಡಲಾರದೆ ವಿಜಯನೇ ಮತ್ತೆ ಹೇಳಿದ.

"ಸುಧಾ, ನೀವು ಹೇಳೋ ಸಮಸ್ಯೆ ಏನು ಅಂತ ಅರ್ಥವಾಗದಷ್ಟು ಮೂರ್ಖನಲ್ಲ ನಾನು. ...ಆದ್ರೆ ಈ ವಿಚಾರ ನಿಮಗೇ ಎಷ್ಟರ ಮಟ್ಟಿಗೆ ಒಂದು ಸಮಸ್ಯೆಯಾಗಿದೆ ಅನ್ನೋದನ್ನ ತಿಳಿಯೋದಕ್ಕೆ ಹೀಗೆಲ್ಲ ಕೇಳಿದೆ. ಇದು ನಿಮ್ಮ ತಂದೆಗೆ ಸಮಸ್ಯೆ...ನಿಮಗಲ್ಲ...ನೋಡಿ ಸುಧಾ, ಸ್ಪಷ್ಟವಾಗಿ ಹೇಳುತ್ತೇನೆ...ನೀವು ನನ್ನ ಜೊತೆಗೆ ಈ ರಾತ್ರಿ ದೈಹಿಕ ಸುಖ ಬಯಸಿ ಬಂದಿರಿ. ಅದು ನನ್ನ ಬಯಕೆಯಾಗಿರಲಿಲ್ಲ...ನೀವು ನೋಡಲು ತುಂಬ ಚೆಲುವೆ.ಅಂದಾಕ್ಷಣವೇ ನಿಮ್ಮೊಡನೆ ದೇಹಸುಖ ಪಡೆಯಬೇಕೆಂಬ ಕಾನೂನು ಎಲ್ಲಿಯೂ ಇಲ್ಲ. ಒಂದು ವೇಳೆ ನೀವಂದುಕೊಂಡಂತೆ, ಈ ರಾತ್ರಿ ನಾವು ಎರಡರ ಬದಲು ಒಂದೇ ಮಂಚವನ್ನು ಉಪಯೋಗಿಸಿಕೊಂಡಿದ್ದಿದ್ದರೆ, ಆಗ ನಿಮಗಿದು ಸಮಸ್ಯೆಯಾಗುತ್ತಿರಲಿಲ್ಲವೆ? ಸಂತೋಷವಾಗಿ ನಾಳೆ ಬೆಳಗಾದ ಮೇಲೆ ನಿಮ್ಮ ತಂದೆಯ ಸ್ನೇಹಿತರ ಮನೆಗೆ ಹೋಗುತ್ತಿದ್ದಿರಿ...ನಿಮ್ಮ ಅಪೇಕ್ಷೆ ಈಡೇರಲಿಲ್ಲವೆಂಬುದೇ ನಿಮ್ಮ ಸಮಸ್ಯೆಯೇ ವಿನಾ, ಬೇರಾವ ಸಮಸ್ಯೆಯೂ ಇಲ್ಲಿಲ್ಲ"

ಸುಧಾ ಗುಂಡೇಟು ತಿಂದಂತೆ ಒದ್ದಾಡಿದಳು. ತನ್ನದೇ ಮಾನಸಿಕ ವಿಕಾರ ತನ್ನನ್ನು ಹೇಗೆ ಭಯದತ್ತ ತಳ್ಳುತ್ತಿದೆ ಎಂಬುದನ್ನು ನೆನೆದು ನಡುಗಿದಳು.

"ನೀವು ನಾಳೆಯೇ ಗುಂಡೂರಾಯರ ಮನೆಗೆ ಹೋಗಿ...ನಾನೇ ಬಂದು ನಿಮ್ಮನ್ನು ಬಿಟ್ಟು ಬರುತ್ತೇನೆ"

ಸುಧಾ ಏನನ್ನೋ ಯೋಚಿಸುತ್ತಾ ಕುಳಿತಳು–ನಂತರ,

"ವಿಜಯ್, ನಿಮ್ಮ ವರ್ತನೆ ವಿಲಕ್ಷಣ ಅಂತ ಅನ್ನಿಸೋಲ್ಲವೆ?...ಅಂದರೆ, ಹೀಗೆ ವಯಸ್ಕ ಗಂಡು ಹೆಣ್ಣುಗಳು ಒಟ್ಟಿಗೆ ಕಲೆತಾಗ ಪರಸ್ಪರ ಬಯಸುವುದು ತಪ್ಪೆ?"

"ಹಾಗೇನೂ ಇಲ್ಲ...ಬಯಸದೇ ಇರುವುದೂ ತಪ್ಪಲ್ಲ...ಇಲ್ಲಿ ಸರಿ ತಪ್ಪುಗಳ ದ್ವಂದ್ವಕ್ಕಿಂತ ಸುಲಭ–ಕಷ್ಟ ಅಥವಾ ಸಹಜ–ಕೃತಕ ಎಂಬ ದ್ವಂದ್ವ ಹೆಚ್ಚು ಸಮಂಜಸ"

"ಸ್ವಲ್ಪ ಬಿಡಿಸಿ ಹೇಳ್ತೀರಾ?"

"ಅಂದರೆ ಹೀಗೆ ಎರಡು ವಯಸ್ಕ ಗಂಡು ಹೆಣ್ಣುಗಳು ಸೇರಿದಾಗ ದೈಹಿಕ ಆಕರ್ಷಣೆಗೆ ಒಳಗಾಗುವುದು ಸುಲಭ, ಸಹಜ, ಆಕರ್ಷಿತರಾಗದಿರುವುದು ಕಷ್ಟ ಕೃತಕ."

"ಸರಿ! ಸಹಜವಾದದ್ದು ಸುಲಭವಾದದ್ದು–ಅದನ್ನೇ ಏಕೆ ಮಾಡಬಾರದು?"

"ಮಾಡಬಹುದು... ಮುಕ್ಕಾಲುಪಾಲು ಜನ ಮಾಡೋದೂ ಅದನ್ನೇ...ಆದ್ರೆ...ಪ್ರಾಣಿಗಳು ನಾವಲ್ಲ ನೋಡಿ...ಕಷ್ಟವಾದ್ದನ್ನು ಮಾಡಿದರೆ ಈ ಮನುಷ್ಯ ಪ್ರಾಣಿಗೆ ಏನೋ ಸಮಾಧಾನ...ಕೃತಕತೆ ಅನ್ನೋದೇ ಈ ಮನುಷ್ಯನ ಪ್ರಥಮ ಲಕ್ಷಣ...ಈ ಕಟ್ಟಡ, ಮಂಚ, ಫ್ಯಾನು, ದೀಪ, ಬಟ್ಟೆ ಬರೆ–ಎಲ್ಲಾ ಕೃತಕಮಯ...ಅಲ್ವೆ?"

ಸುಧಾ ಕೈ ಗಡಿಯಾರ ನೋಡಿಕೊಂಡಳು... ಮೂರೂವರೆ ಗಂಟೆಯಾಗಿತ್ತು.

"ವಿಜಯ್... ಮೂರೂವರೆ... ಮಲಕ್ಕೊಳ್ಳಿ ಪಾಪ...ನನ್ನಿಂದ ನಿಮಗೆ ನಿದ್ರೆ ಕೆಟ್ಟುಹೋಯ್ತು"

"ಹಾಗೇನಿಲ್ಲ...ನನ್ನ ನಿದ್ರೇನ ಯಾರೂ ಕೆಡಿಸೋಕಾಗಲ್ಲ..."

ಸುಧಾ ದೀಪ ಆರಿಸಿದಳು. ಇಬ್ಬರೂ ತಮ್ಮ ತಮ್ಮ ಮಂಚಗಳ ಮೇಲೆ ಮಲಗಿದರು.

ಸುಧಾ ಇನ್ನೂ ಯೋಚಿಸುತ್ತಲೇ ಇದ್ದಳು.

ವಿಜಯ ಎಷ್ಟೊಂದು ನೈಜವಾಗಿ ಚಿಂತಿಸುತ್ತಾರೆ! ಇವರ ಜೊತೆಗೆ ಕಳೆಯುವ ಸಮಯದ ಪ್ರತಿ ನಿಮಿಷವೂ ತುಂಬಾ ಅಮೂಲ್ಯ ಎನ್ನಿಸುತ್ತದೆ. ನಾಳಿನ ಸಮಸ್ಯೆ ಇನ್ನೂ ಹಾಗೇ ಉಳಿದಂತಾಯಿತು. ತಾನು ಗುಂಡೂರಾಯರ ಮನೆಗೆ ಹೋಗಬೇಕಾದ ಸಂದರ್ಭ ಒದಗುತ್ತದೆ... ಆದರೆ... ಆದರೆ... ವಿಜಯನ ಹೇಳಿಕೆಯಂತೆ ತಾನೂ ಹೊಸ ದಿಕ್ಕಿನಲ್ಲಿ ಯಾಕೆ ಯೋಚಿಸಬಾರದು?

ಹೌದು...ತಾನು ಯಾರ ಮನೆಗೂ ಹೋಗುವುದು ಬೇಡ...ವಿಜಯನ ಜೊತೆಗೇ ಏಕೆ ಇರಬಾರದು? ತಾನೀಗ ಎಳೆಯ ಮಗುವಲ್ಲ. ವಿದ್ಯಾವತಿ. ಸಂಪಾದಿಸುತ್ತಿದ್ದೇನೆ. ಈ ಬಗ್ಗೆ ತಂದೆ ತಾಯಿಗಳಿಂದ ಬರಬಹುದಾದ ಆಕ್ಷೇಪಣೆಗಳಿಗೆ ತಾನೇಕೆ ಬೆಲೆ ಕೊಡಲಿ? ವಿಜಯ ತನ್ನತ್ತ ಆಕರ್ಷಿತನಾಗಿಲ್ಲ...ಅದನ್ನೊಂದು ಸವಾಲಾಗಿ ಏಕೆ ಎದುರಿಸಬಾರದು? ಅವರು ತನ್ನ ಈ ಸವಾಲಿಗೆ ಏನು ಉತ್ತರ ಕೊಡುವರೋ ನೋಡಬೇಕೆನಿಸಿತು.

ಸುಧಾ ಯೋಚಿಸುತ್ತ ಹಾಗೆಯೇ ನಿದ್ರಿಸಿದಳು. ಮತ್ತೆ ಅವಳು ಕಣ್ಣು ಬಿಟ್ಟಾಗ ವಿಜಯ ಅವಳನ್ನೆಬ್ಬಿಸುತ್ತಿದ್ದ.

"ಏಳಿ ಸುಧಾ...ಆಗ್ಲೇ ಎಂಟು ಗಂಟೆ. ನೀವಿನ್ನೂ ಗುಂಡೂರಾಯರ ಮನೆಗೆ ಹೋಗಬೇಕಲ್ಲ... ಆಮೇಲೆ ಹತ್ತೂವರೆಗೆ ಸ್ಕೂಲಿಗೆ ಬೇರೆ ಹೋಗ್ಬೇಕಲ್ಲ..."

ಸುಧಾ ಕಣ್ಣು ಹೊಸಕಿಕೊಳ್ಳುತ್ತಾ ಮೇಲೆದ್ದಳು. ವಿಜಯ ಯಾವಾಗ ಎದ್ದಿದ್ದನೋ ಅವನ ಸ್ನಾನವೂ ಮುಗಿದಂತಿತ್ತು. ಟವೆಲ್, ಪೇಸ್ಟು, ಸೋಪ್ ಬಾಕ್ಸ್‌ಗಳೊಂದಿಗೆ ತಾನೂ ಬೇಗ ಬೇಗ ಬಾತ್‌ರೂಂ ಸೇರಿ ಬಾಗಿಲು ಮುಚ್ಚಿಕೊಂಡಳು.

ಅವಳು ಅರ್ಧ ಗಂಟೆಯಲ್ಲಿ ಸಿದ್ಧಳಾಗಿ ಹೊರಬರುವ ಹೊತ್ತಿಗೆ ಬಿಸಿ ಇಡ್ಲಿ ಸಾಂಬಾರ್ ಅವಳನ್ನು ಕಾಯುತ್ತಿತ್ತು.

"ಬೇಗ ಬ್ರೇಕ್‌ಫಾಸ್ಟ್ ಮುಗಿಸಿ...ಗುಂಡೂರಾಯರ ಮನೆಗೆ ಹೋಗೋಣ"

ಸುಧಾ ಮುಖಕ್ಕೆ ಸ್ನೋ ಲೇಪಿಸುತ್ತಿದ್ದಳು. ಒಮ್ಮೆ ವಿಜಯನ ಕಡೆ ನೋಡಿದಳು. ಆಮೇಲೆ–

"ವಿಜಯ್...ನಾನು ಗುಂಡೂರಾಯರ ಮನೆಗೆ ಹೋಗಲ್ಲ..." ಎಂದಳು.

"ವಿಜಯ ತನ್ನ ಈ ನಿರ್ಧಾರವನ್ನು ಕೇಳಿ ಬೆಚ್ಚಬಹುದು ಎಂದೆಣಿಸಿದ್ದಳು ಸುಧಾ.

"ಬಹಳ ಸಂತೋಷ...ನೀವೊಬ್ಬರೇ ಬೇರೆ ಮನೆಯಲ್ಲಿರ್ತೀರಾ?"

"ಊಹುಂ...ನಾನೂ ನಿಮ್ಮ ಜೊತೆಗೇ ಇರ್ತೀನಿ ನಿಮ್ಮ ತಂಗಿಯಂತೆ ಇರಬೇಕೂ ಅಂತ ...ನಿಮ್ಮ 'ಅಣ್ಣ' ಎಂದು ಕರೀಬಹುದೆ?"

ವಿಜಯ ಮತ್ತೆ ನಕ್ಕ.

"ಸುಧಾ...ನೀವೂ ನಾನೂ ಒಂದೇ ಕಡೆ ವಾಸ ಮಾಡೋದ್ರಲ್ಲಿ ತಪ್ಪೇನೂ ಇಲ್ಲ...ಆದ್ರೆ ನೀವು ಆ ಲೇಬಲ್‌ಗಳನ್ನು ಹಚ್ಚಬಾರದು. ನಾನು ಅಣ್ಣ, ನೀವು ತಂಗಿ–ಇದೆಲ್ಲ ಯಾಕೆ? ಖಂಡಿತಾ ನಾನು ನಿಮ್ಮಣ್ಣ ಅಲ್ಲ...ನೀವು ನನಗೆ ತಂಗಿಯೂ ಅಲ್ಲ...ನೋಡಿ...ಈ ಎರಡು ಪದಗಳನ್ನೂ ನಮ್ಮ ಮನಸ್ಸಿನ ದೌರ್ಬಲ್ಯಕ್ಕೆ ಹೊದಿಕೆಯಾಗಿ ಉಪಯೋಗಿಸೋದು ನಮ್ಮ ಸಂಪ್ರದಾಯ ಆಗಿದೆ. ಅದು ನಂಗಿಷ್ಟವಿಲ್ಲ...ನಾವಿಬ್ರೂ ಸ್ನೇಹಿತರು. ಸ್ನೇಹಿತರ ಹಾಗೇ ಇರೋಣ...ನೀವು ಅದಕ್ಕೆ ರೆಡಿಯಾಗಿದ್ರೆ ನಾನೂ ಸಿದ್ಧ"

ಸುಧಾಗೆ ಅವನ ಮಾತಿನಿಂದ ಅಚ್ಚರಿಯಾದರೂ ಒಳಗೊಳಗೇ ಸಂತೋಷವೂ ಆಯಿತು. ವಿಜಯ ನಿಜವಾಗಿಯೂ ಅನಾಹುತದ ಬಾಗಿಲು ತಟ್ಟುತ್ತಿಲ್ಲವಷ್ಟೆ ಎನ್ನಿಸಿತು. ಆದರೆ ಆ ಬಗ್ಗೆ ಯಾವುದೇ ಭಾವನೆಯನ್ನು ವ್ಯಕ್ತಗೊಳಿಸಲು ಅವಳಿಂದ ಸಾಧ್ಯವಾಗಲಿಲ್ಲ.

– ೩ –

ಆಗತಾನೇ ಬಂದ ಪತ್ರದ ಮೇಲಿದ್ದ ಅಕ್ಷರಗಳನ್ನು ನೋಡುತ್ತಿದ್ದ ಹಾಗೆಯೇ ಅದು ವಾಸುದೇವಯ್ಯನವರ ಪತ್ರವೆಂದು ಹುಟ್ಟಾ ವಕೀಲರಾದ ಗುಂಡೂರಾಯರಿಗೆ ತಿಳಿದು ಹೋಯಿತು. ಬಾಲ್ಯದ ಗೆಳೆಯರಾದ ಅವರಿಬ್ಬರಲ್ಲೂ ಗಾಢ ಮೈತ್ರಿ ಇತ್ತು. ಪತ್ರ ವ್ಯವಹಾರ ಕ್ರಮಬದ್ಧವಾಗಿ ನಡೆಯದಿದ್ದರೂ ಇಬ್ಬರ ಮನೆಗಳಲ್ಲೂ ಜರುಗಿದ ಎಲ್ಲಾ ವಿಶೇಷ ಸಂದರ್ಭಗಳಲ್ಲೂ ಪತ್ರಗಳು ಓಡಾಡಿದ್ದವು.

ಗುಂಡೂರಾಯರದು ನೆಮ್ಮದಿಯ ಜೀವನ. ಇದಕ್ಕೆ ಮುಖ್ಯ ಕಾರಣಗಳಲ್ಲಿ ಅವರಿಗಿದ್ದ ಏಕಮಾತ್ರ ಸಂತಾನವೂ ಹೌದು. ರವಿ ಗುಂಡೂರಾಯರ ಏಕೈಕ ಪುತ್ರ. ಆಧುನಿಕ ಶಿಕ್ಷಣವನ್ನು ಮಗನಿಗೆ ಯಥೇಚ್ಛವಾಗಿ ಕೊಡಿಸಿದ್ದರು. ವಾಣಿಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ರವಿ ಇದೀಗ ದೇವಪುರದ ರಾಷ್ಟ್ರೀಯ ಬ್ಯಾಂಕೊಂದರಲ್ಲಿ ದೊಡ್ಡ ಹುದ್ದೆಯಲ್ಲಿದ್ದ. ಗುಂಡೂರಾಯರು ತಮ್ಮ ವಕೀಲಿವೃತ್ತಿಯನ್ನು ಕಳೆದ ಐದಾರು ವರ್ಷಗಳಿಂದಲೂ ಬಿಟ್ಟಿದ್ದಾರೆ.

ಕಮಲಮ್ಮನಿಗೆ ಯಾವಾಗಲೂ ಒಂದು ಚಿಂತೆ ಇತ್ತೀಚೆಗೆ ಹೆಚ್ಚಾಗಿತ್ತು. ಅದು ಬೇರೆ ಜನಗಳ ಪಾಲಿಗೆ ಚಿಂತೆಯೇ ಅಲ್ಲವೆನ್ನಬಹುದು. ತಕ್ಕಷ್ಟು ಸ್ಥಿತಿವಂತರಾದ ಅವರು ತಮ್ಮ ಏಕಮಾತ್ರ ಪುತ್ರನ ವಿವಾಹಕ್ಕಾಗಿ ಚಿಂತಿಸಬೇಕಾದ ಪ್ರಮೇಯವೇನೆಂಬುದು ಇತರರಿಗೆ ಹೇಗೆ ಅರ್ಥವಾಗಬೇಕು?

ರವಿ ಆಕರ್ಷಕ ಯುವಕನೆಂಬುದನ್ನು ಮೊದಲು ಹೇಳಿಬಿಡಬೇಕು. ಅವನಲ್ಲಿ ವಿವಾಹಕ್ಕೆ ಅನರ್ಹವೆನಿಸುವ ಯಾವ ದೋಷಗಳೂ ಇರಲಿಲ್ಲ. ಗುಂಡೂರಾಯರ ಮನೆಯ ಬಾಗಿಲಲ್ಲಿ ಕನ್ಯಾಪಿತೃಗಳು ಕ್ಯೂ ನಿಂತಿದ್ದರೆಂಬ ವಿಷಯವೂ ಇಡೀ ದೇವಪುರದಲ್ಲಿ ಜನಜನಿತ.

ಹಾಗಾದರೆ ಕಮಲಮ್ಮನವರ ಆತಂಕಕ್ಕೆ ಕಾರಣ ವೇನು? ಮಗನ ವಿವಾಹ ಅವರ ಪಾಲಿಗೆ ಚಿಂತೆ ಏಕಾಯಿತು? ಅವರ ಅಣ್ಣನ ಮಗಳನ್ನೇ ಮೊಟ್ಟ ಮೊದಲು ರವಿಗೆ ತೋರಿಸಿದ್ದರು. ಕುಸುಮಾ ಲಕ್ಷಣವಾದ ಹುಡುಗಿ, ತಕ್ಕಮಟ್ಟಿಗೆ ಓದಿದ್ದಾಳೆ. ರವಿಗೆ ಅನುರೂಪವಾದ ಕನ್ಯೆ...ಇತ್ಯಾದಿ ...ಇತ್ಯಾದಿ.

ಹುಡುಗಿಯನ್ನು ನೋಡುತ್ತಲೇ ರವಿ ನಿರ್ಭಿಡೆಯಿಂದ ಉದ್ಗರಿಸಿದ್ದ–"ನನಗೆ ಈ ಹುಡುಗಿ ಲೈಕ್ ಆಗ್ಲಿಲ್ಲ...ಒಪ್ಪಾನೊಲ್ಲ" ಪಾಪ...ಕುಸುಮಾ ಕಣ್ಣೀರು ಹಾಕಿಬಿಟ್ಟಳು. ರವಿಯ ಸೋದರಮಾವ ಅನಂತಯ್ಯ ದಿಗ್ಭ್ರಾಂತರಾಗಿದ್ದರು. ಗುಂಡೂರಾಯರು ಸವಿ ಮಾತುಗಳಿಂದ, ಉಪಾಯದಿಂದ ವರದಕ್ಷಿಣೆ ಮುಂತಾಗಿ ಆಮಿಷಗಳನ್ನೊಡ್ಡುವ ಮೂಲಕ, ಕೊನೆಗೆ ಬೆದರಿಸಿ ರವಿಯ ಮನವೊಲಿಸಲು ಪ್ರಯತ್ನಿಸಿ ಅಯಶಸ್ವಿಗಳಾಗಿದ್ದರು.



"ನೋಡಿ ಅಪ್ಪಾ...ಇದು ನನ್ನ ಪ್ರೈವೇಟ್ ಅಫೇರ್. ಇದನ್ನು ಡಿಸೈಡ್ ಮಾಡಬೇಕಾದೋನು ನಾನು" ಎಂದು ಅಂತಿಮ ತೀರ್ಮಾನ ಹೇಳಿಬಿಟ್ಟ. ಅಂದಿನಿಂದ ಪ್ರಾರಂಭವಾಯಿತು ಈ ಕ್ರಮ. ಕನ್ಯೆಗಳ ಸಂದರ್ಶನ. ಅವರ ಎದುರಿಗೇ ರವಿಯಿಂದ ಮುಖಭಂಗ...ಗುಂಡೂರಾಯರು ನಾಲ್ಕೈದು ಇಂತಹ ಪ್ರಸಂಗಗಳನ್ನೆದುರಿಸಿ ಪರಿಣಾಮವನ್ನು ಕಂಡುಕೊಂಡು ಮಗನ ವಿವಾಹದ ಪ್ರಯತ್ನವನ್ನೇ ಕೈ ಬಿಟ್ಟರು. ಕಮಲಮ್ಮನವರು ಒಂದೆರಡು ಬಾರಿ ರಾಯರಿಗೆ ಈ ಬಗ್ಗೆ ವರಾತ ಹಾಕಿದಾಗ "ನಿನ್ಮಗನ ಕಾಲ್ದಲ್ಲಿ ನನ್ನ ಮರ್ಯಾದೆ ಉಳಿಯೋ ಹಂಗಿಲ್ಲ...ಅವನಾಗಿ ಯಾವ ರಂಭೇನ ಮೆಚ್ತಾನೋ ಆಗ ನೋಡೋಣಂತೆ" ಎಂದು ತೀರ್ಮಾನ ಹೇಳಿದ್ದರು. ಇದು ಕಮಲಮ್ಮನವರ ಚಿಂತೆಗೆ ಪ್ರಬಲ ಕಾರಣವಾಗಿತ್ತು.

ವಾಸುದೇವಯ್ಯನ ಪತ್ರವೆಂದು ತಿಳಿದಾಗ ಗುಂಡೂರಾಯರಿಗೆ ವಿಶೇಷ ಆಸಕ್ತಿ. ಆತುರವಾಗಿ ಕವರ್ ಒಡೆದು ನೋಡಿದರು.

"ಪ್ರಿಯ ಮಿತ್ರ ಗುಂಡಣ್ಣನಿಗೆ ಅನಂತ ವಂದನೆಗಳು...ಇತ್ತೀಚೆಗೆ ನಿನ್ನಿಂದ ಯಾವ ಪತ್ರವೂ ಇಲ್ಲ. ನೀವೆಲ್ಲ ಆರೋಗ್ಯವೆಂದು ಭಾವಿಸುತ್ತೇನೆ. ನಾವುಗಳೆಲ್ಲ ಇಲ್ಲಿ ತಕ್ಕ ಮಟ್ಟಿಗೆ ಆರೋಗ್ಯ. ಈ ಪತ್ರ ಬರೆದ ಮುಖ್ಯ ಉದ್ದೇಶವೆಂದರೆ, ನನ್ನ ಮಗಳು ಚಿ. ಸುಧಾಗೆ ನಿಮ್ಮೂರಿನ ಪ್ರೌಢ ಶಾಲೆಗೆ ಅಧ್ಯಾಪಕಿಯಾಗಿ ಕೆಲಸ ಸಿಕ್ಕಿರುವುದರಿಂದ, ಅವಳು ಇನ್ನೆರಡು ದಿನ ಬಿಟ್ಟು ನಿಮ್ಮಲ್ಲಿಗೆ ಬರುವವಳಿದ್ದಾಳೆ. ಒಬ್ಬಂಟಿಗಳನ್ನು ಕಳಿಸುವ ಅಪೇಕ್ಷೆ ನನಗಾಗಲೀ, ಅವಳ ತಾಯಿಗಾಗಲೀ ಸುತರಾಂ ಇಲ್ಲದಿದ್ದರೂ, ಸುಧಾ ಹಟ ಮಾಡಿ ಹೊರಟಿದ್ದಾಳೆ. ಈ ಸಂದರ್ಭದಲ್ಲಿ ನಿನ್ನಿಂದ ದೊಡ್ಡ ಸಹಾಯವನ್ನು ಬಯಸುತ್ತೇನೆ. ಸುಧಾ ಅಲ್ಲಿರುವವರೆಗೂ ನಿಮ್ಮ ಮನೆಯಲ್ಲೇ ಇರಲೆಂದು ನನ್ನ ಅಪೇಕ್ಷೆ. ನೀನೂ ಸೌ॥ ಕಮಲಮ್ಮನೂ ಅವಳಿಗೆ ತಂದೆ ತಾಯಿಗಳಿದ್ದಂತೆ. ಅವಳ ಬಗ್ಗೆ ಏನೇ ಖರ್ಚು ಬಂದರೂ ಅಡ್ಡಿಯಿಲ್ಲ. ದಯವಿಟ್ಟು ಈ ಉಪಕಾರವನ್ನು ಮಾಡುವಿಯಾಗಿ ನಂಬಿದ್ದೇನೆ. ಅಪರಿಚಿತಳಾದ ಅವಳನ್ನು ಕರೆದೊಯ್ಯಲು ನಾಡಿದ್ದು ಸಾಯಂಕಾಲ ನಾಲ್ಕೂವರೆ ಗಂಟೆಯ ಬಸ್ಸಿನ ಹತ್ತಿರ ಯಾರನ್ನಾದರೂ ಕಳುಹಿಸು. ತೊಂದರೆಗಾಗಿ ಕ್ಷಮೆಯಿರಲಿ.

ಇಂತು ನಿನ್ನ ಗೆಳೆಯ,
ವಾಸುದೇವಯ್ಯ."

ಗುಂಡೂರಾಯರು ಪತ್ರವನ್ನು ಮತ್ತೊಮ್ಮೆ ಓದಿಕೊಂಡರು. ಊಟಕ್ಕಾಗಿ ಕರೆಬಂದುದರಿಂದ ಪತ್ರ ಸಮೇತ ಅಡಿಗೆಮನೆಯನ್ನು ಪ್ರವೇಶಿಸಿದಾಗ ರವಿ ಆಗಲೇ ಎಲೆಯ ಮುಂದೆ ಕುಳಿತಿದ್ದ. ರಾಯರ ಕೈಯಲ್ಲಿ ಇದ್ದ ಪತ್ರವನ್ನು ನೋಡಿದ ಕಮಲಮ್ಮ–"ಯಾರದ್ದು ಕಾಗ್ದ?" ಎಂದರು.

"ನಮ್ಮ ವಾಸು ಬರೆದಿದ್ದಾನೆ...ಅವನ ಮಗಳಿಗೆ ಇದೇ ಊರಿನ ಹೈಸ್ಕೂಲಿಗೆ ಮೇಡಂ ಕೆಲ್ಸ ಸಿಕ್ಕಿದೆಯಂತೆ"

"ಯಾರು, ಅದೇ ಆ ಚಿತ್ರದುರ್ಗದ ವಾಸುದೇವಯ್ಯ ಅಲ್ವ?"

"ಹೌದು...'ಸುಧಾ' ಅಂತ ಒಬ್ಳು ಹುಡುಗಿ ಇರ್ಲಿಲ್ವೆ? ಅವನ ಕೊನೇ ಮಗಳು...ಆ ಹುಡ್ಗೀನೆ ಈಗ ಮೇಡಂ ಆಗಿ ಬರ್ತಾಳೆ"

"ಒಬ್ಬಳೇ ಬರ್ತಾಳೋ ಅಥವಾ ಅಪ್ಪ ಅಮ್ಮನೂ ಜೊತೆ ಬರ್ತಾರೋ?"


1
2
HOTEL
3
4
5
BANG
PRAN

"ಓ.ಕೇ. ಬಿಡ್ರಿ ನಾಳೆ... ಅದಕ್ಕೇ ಆ ಹುಡುಗಿ ಗೀಗ ನಮ್ಮನೇಲಿ 'ಇದ್ದೀ' ಅಂತ ಪತ್ರ ಬರೆದಿದ್ದಾಳೆ ನಾನು... ನಾಳಿದ್ದು ಸಾಯಂಕಾಲ ಬರ್‍ತಾಳಂತೆ."

ತಲೆ ತಗ್ಗಿ ಕುಳಿತು ಮಾತಾಡುತ್ತಿದ್ದ ರವಿ ಈಗ ಲಕ್ಷ್ಯವಿಟ್ಟ. ನಾಮಾನ್ಯವಾಗಿ ಅವನು ಮನೆಯ ವ್ಯವಹಾರಗಳಲ್ಲಿ ಕೈಹಾಕುತ್ತಿರಲಿಲ್ಲ. ನಮ್ಮನೆ ಬಗ್ಗೆ ಕುತೂಹಲದಿಂದ ತಂದೆಯ ಕಡೆಗೊಮ್ಮೆ ನೋಡಿದ. ರಾಯರು "ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು "ಅಂದ್ಹಾಗೇ... ರವೀ... ನಾಳಿದ್ದು ಸಾಯಂಕಾಲ ನೀನು ಸ್ವಲ್ಪ ಬಸ್ ಸ್ಟ್ಯಾಂಡ್ ಹತ್ರ ಹೋಗ್ತೀಯಾ? ಬ್ಯಾಂಕು ಮುಗಿಸ್ಕೊಂಡು ಹೋಗು... ನಾಲ್ಕೂವರೆಗೆ ಬಸ್ ಬರುತ್ತೆ... ನಾವ... ಆಕೆಗೆ ನಮ್ಮನೆ ಗೊತ್ತಿಲ್ಲವಲ್ಲ" ಎಂದರು.

ರವಿಗೆ ಏನಾವುದೋ ಸಂಶಯ ಬಲವಾಯಿತು. ಅಪ್ಪನ ಬಗ್ಗೆ ಅವನಿಗೆ ಇಡೀಗ ಯಾವುದೋ ಅದ ಸಾರಿಗೆ ಕಾಡ ಹತ್ತಿತು. ತನ್ನ ಮದುವೆಯ ಸಲುವಾಗಿ ಅಪ್ಪ ಕೈಗೊಳ್ಳುತ್ತಿದ್ದ ಸೂರಾರು ಉಪಾಯಗಳಲ್ಲಿ ಇದೂ ಒಂದಾಗಿ ಏಕಿರಬಾರದು ಎಂಬ ಯೋಚನೆ ಕ್ಷಣ ಕಾಲ ಮಿಂಚಿತು. ಅವನು ಒಂದು ನಿಮಿಷ ಮೌನವಾಗಿದ್ದು, ಅಮೇಲೆ,

"ನಾಳಿದ್ದು ನನಗೆ ಏನೇನೋ ಎಂಗೇಜ್‌ಮೆಂಟ್ಸ್ ಇವೆ... ಸಿದ್ದನ್ನ ಬೇಕಾದ್ರೆ ಕಳು ಹಿಸ್ತೀನಿ... ಅಗಬಹು ದಲ್ಲ... ಇವ್ನಕ್ಕಿಂತ ನಾನೂ ಆ ಹುಡುಗೀನ ಸರಿಯಾಗಿ ನೋಡಿಲ್ಲ. ನಾನು ಹೋದ್ರೂ ಒಂದೇ... ಸಿದ್ದ ಹೋದ್ರೂ ಒಂದೇ..." ಎಂದ.

ರಾಯರಿಗೆ ಇದರಿಂದ ಸ್ವಲ್ಪ ಅಸಮಾಧಾನವಾ ದರೂ ಮಗನ ಮಾತಿಗೆ ಇದಿರು ಹೇಳುವ ಹಾಗಿರಲಿಲ್ಲ. "ಸರಿ, ಹಾಗೇ ಮಾಡಪ್ಪ. ಒಟ್ಟಿನಲ್ಲಿ ಆ ಹುಡುಗಿ ಸುರಕ್ಷಿತವಾಗಿ ನಮ್ಮನೆ ಸೇರಿದ್ರೆ ಸಾಕು. ವಾಸು ನನ್ನೊಬ್ಬ ಅಷ್ಟೊಂದು ಭರವಸೆ ಇಟ್ಟಿದಾನೆ ಪಾಪ!" ಎಂದವರೇ ಊಟಕ್ಕೆ ಕುಳಿತರು.

ಎರಡು ದಿನ ಕಳೆದ ಬಳಿಕ ಸಾಯಂಕಾಲ ಸುಧಾಳ ಬರುವನ್ನು ಗುಂಡೂರಾಯರು ಇದಿರು ನೋಡುತ್ತಿದ್ದರು. ಸುಧಾಳನ್ನು ಅವರು ಈ ಹಿಂದೆಯೂ ಎರಡು ಬಾರಿ ನೋಡಿದ್ದರು. ಅವರೆ ಅವಳನ್ನೂ ಆಗ ತುಂಬಾ ಚಿಕ್ಕ ಹುಡುಗಿ... ಅಂಗಡಿ ಸುಧಾ ರಾಯರಿಗೆ ಚೆನ್ನಾಗಿಯೇ ನೆನಪಿದ್ದಳು. ಎಷ್ಟೋ ಬಾರಿ ವಾಸುದೇವಯ್ಯ ನವರಿಗೆ "ನಿನ್ನ ಮಕ್ಕಳ ಪೈಕಿ ಸುಧಾ ಬಹಳ ಚೆನ್ನಾಗಿದಾಳಪ್ಪ... ನನ್ನ ಮಗ ರವೀಗೇ ಕೊಟ್ಬಿಡು" ಎಂದಿದ್ದುದು ಜ್ಞಾಪಕವಾಯಿತು. ಇದೀಗ ತಾನಾಗಿಯೇ ಅಂತಹ ಸುವರ್ಣಾವಕಾಶವೊಂದು ಒದಗಿದೆ. ಸುಧಾ ಇನ್ನು ಮುಂದೆ ತಮ್ಮ ಮನೆಯಲ್ಲೇ ಇರುತ್ತಾಳೆ. ರವಿಗೆ ಕಾಲ ಕ್ರಮೇಣ ಅವಳ ಬಗ್ಗೆ ಆಸಕ್ತಿ ಮೂಡ ಬಹುದು. ಅವಳನ್ನು ಮದುವೆಯಾಗಲು ಸಿದ್ಧನಾಗಲೂ ಬಹುದು. ಹಾಗಾಗದೇ ಸುಧಾಳನ್ನು ತಂದು ತಮ್ಮ ಮನೆಯಲ್ಲಿಟ್ಟುಕೊಳ್ಳಲು ಸಾಧ್ಯವಿರಲಿಲ್ಲ. ಈಗ ಅವ ಳಾಗಿಯೇ ತಮ್ಮ ಮನೆಯಲ್ಲಿರಲು ಬರುತ್ತಿದ್ದಾಳೆ. ಅದೇ ಮಾತನ್ನು ರಾಯರು ಕಮಲಮ್ಮನಿಗೂ ಹೇಳಿ ದರು.

"ಸುಧಾ ತುಂಬ ಚೆಲುವಾದ ಹುಡುಗಿ... ಅಗ್ಲೇ ಅವಳು ಬಹಳ ಮುದ್ದಾಗಿ ಕಾಣ್ತಾ ಇದ್ದಳು... ಈಗ ಇನ್ನೂ ಚೆನ್ನಾಗಿರಬಹುದು... ನಿನ್ಗೂ ಅವಳನ್ನ ಮೆಚ್ಚಿ ದರೂ ಮೆಚ್ಚಬಹುದು. ಯಾಕೋ ಅಂದ್ರೆ, ಅವಳನ್ನು ಉಪವಾಸ್ತ್ಲೇ ಒಂದ್ಸಾರಿ ನೋಡಿದ ಹಾಗಾದ್ರೂ... ಅವಳ ಜೊತೆಗೇ ಕಾಲ ಹಾಕೀಕಾಗುತ್ತೆ. ನೋಡು... ಒಂದಲ್ಲ ಒಂದು ದಿನ, ನಾನು ಅವಳನ್ನೇ ಮದುವೆ ಆಗ್ತೀನಿ ಅಂತ ರವಿ ಹಟ ಹಿಡಿದ್ರೂ ಹಿಡೀಬಹುದು. ಆಗ ನಮ್ಮ ಸಮಸ್ಯೇನೂ ಬಗೆ ಹರೀತು. ಸ್ನೇಹಿತನೂ ಸಂತೋಷವಾಗುತ್ತೆ. ಏನಾಂತೀಯ?"

ಕಮಲಮ್ಮನವರಿಗೂ ಬಹಳ ಆನಂದವಾಯಿತು. ನಿಜ... ಸುಧಾ ತಮ್ಮ ಮನೆಗೆ ಬರುವುದರಿಂದ ಮಗನ ವಿವಾಹದ ಸಮಸ್ಯೆ ಖಂಡಿತ ಬಗೆಹರಿಯುವುದೆಂದು ದೃಢವಾಗಿಯೇ ನಂಬಿದರು. ಸುಧಾಳನ್ನು ಸೊಸೆಯಂತೆ ಬರಮಾಡಿಕೊಳ್ಳಲು ಸಿದ್ಧರಾಗಿದ್ದರು.

ಸಾಯಂಕಾಲ ಏಳೂವರೆಗೆ ಸಿದ್ದ ಮನೆ ಬಾಗಿಲಿಗೆ ಬಂದಾಗ ರಾಯರಿಗೆ ನಿರಾಶೆಯಾಯಿತು. ಅವನ ಜೊತೆಗೆ ಯಾರೂ ಬಂದಿರಲಿಲ್ಲ. ರಾಯರು ಕಾತುರ ರಾಗಿ ಅವನನ್ನು ಕೇಳಿದರು—

"ಏನೋ... ಯಾರೂ ಬರ್‍ಲಿಲ್ವೆ?"

"ಇಲ್ಲ ಬುದ್ಧೀ... ಬಸ್ ಇವತ್ತು ಬರಾಕಿಲ್ಲ ಅಂತಂದ್ರು..." ಎಂದ.

"ಏನಂದೆ? ಬಸ್ ಬರೋದಿಲ್ವೆ? ಯಾಕೆ? ಹೋಗ್ಲಿ ಬಿಡು. ಇವತ್ತು ಬಸ್ ಬರದೇ ಇದ್ರೆ ಆವಳನ್ನೇನು ಬರ್‍ತಾಳೆ? ನಾಳೆ ಬೆಳಗಿನ ಬಸ್ ಹತ್ರ ಹೋಗಿ ನೋಡು. ಅದಕ್ಕೂ ಬರದೇ ಇದ್ರೆ ನಾಳೆ ಸಂಜೆ ಬಸ್ ಹತ್ರ ಮತ್ತೊಂದ್ಸಲ ನೋಡು..." ಎಂದರು. ಸಿದ್ದ ಆಗಲೆಂದು ಹೊರಟ. ರಾಯರು ನಿರಾಶರಾಗಿ ಕಮಲಮ್ಮನಿಗೆ ಈ ವಿಚಾರ ತಿಳಿಸಿದರು. ಕಮಲಮ್ಮನವರಿಗೂ ಬೇಸರ ವಾಯಿತು. ರಾತ್ರಿ ರವಿ ಮನೆಗೆ ಬಂದಾಗ ಅನಿರೀಕ್ಷಿತ ವಾಗಿ ಅವನಿಂದ ಪ್ರಶ್ನೆಯೊಂದು ಬಂತು.

"ಆ ವಾಸುದೇವಯ್ಯನೋರ ಮಗಳು ಇವತ್ತು ಬರ್‍ಲಿಲ್ವೇನು?"

ರಾಯರಿಗೆ ಒಳಗಿಂದೊಳಗೇ ಸಂತೋಷವಾಯಿತು. ರವಿ ಯಾವತ್ತೂ ಇಂತಹ ಪ್ರಶ್ನೆಗಳನ್ನು ಕೇಳಿದವನಲ್ಲ. ...ಹಾಗಾದರೂ ಬರಲಿ... ಯಾರಾದರೂ ಹೋಗಲಿ... ತನ್ನ ಪಾಡಿಗೆ ತಾನು ಹಾಯಾಗಿ ರುವ ರವಿ ಈ ದಿನ ತಾನಾಗಿಯೇ ಸುಧಾಳ ಆಗಮನದ ಬಗ್ಗೆ ಹೀಗೆ ವಿಚಾರಿಸಿದಾಗ ಇದೊಂದು ಶುಭ ಸೂಚನೆ ಎನಿಸಿತು ರಾಯರಿಗೆ.

"ಇವತ್ತು ಆ ಬಸ್ಸೇ ಬರ್‍ಲಿಲ್ವಂತೆ... ಅದಕ್ಕೇ ಸಿದ್ದಂಗೆ ಹೇಳಿದೀನಿ... ನಾಳೆ ಬೆಳಗಿನ ಬಸ್ಸು, ಸಂಜೆ ಬಸ್ಸು ಎರಡನ್ನೂ ನೋಡು ಅಂತ." ಎಂದರು.

ರವಿ ಯಾವ ಮಾತನ್ನೂ ಆಡಲಿಲ್ಲ. ಅವನ ಮುಖದಲ್ಲಿ ಬೇಸರ ಮೂಡಿದಂತೆ ಕಂಡಿತು. ಅಥವಾ ಅದು ಕೇವಲ ತಮ್ಮ ಭ್ರಮೆಯಿರಬಹುದೆಂದು ಕೊಂಡರು ರಾಯರು. ಆದರೆ ಆರಕ್ಷಣ ಬಿಟ್ಟು ರವಿ ಬಾಯಿಬಿಟ್ಟ.

"ನಾಳೆ ಬೆಳಗ್ಗೆ ಹಾಗೂ ಸಂಜೆಯ ಬಸ್ ಹತ್ರ ನಾನೇ ಹೋಗ್ತೀನಿ... ಹೇಗೂ ನಾಳೆ ನನಗೆ ಅಂಥ ಅರ್ಜೆಂಟ್ ಕೆಲ್ಸವೂ ಏನೂ ಇಲ್ಲ"

ಮಾರನೆಯ ದಿನ ಬೆಳಗ್ಗೆ ರವಿ ಬಸ್‌ಸ್ಟ್ಯಾಂಡಿನಿಂದ ಒಂಟಿಯಾಗಿ ಬಂದಾಗ, ಅವನ ಮುಖ ಶೀರಾ ಪೆಚ್ಚಾಗಿತ್ತು. ಗುಂಡೂರಾಯರು ಅವನ ಬರವನ್ನೇ ನಿರೀಕ್ಷಿಸುತ್ತಿದ್ದರು. ಅವನೊಬ್ಬನೇ ಸಿದ್ದನೊಡನೆ ಬಂದಾಗ ರಾಯರು "ಯಾಕಪ್ಪಾ ರವೀ, ಸುಧಾ ಬರ್‍ಲಿಲ್ವೆ?" ಎಂದರು.

ರವಿ ತಲೆಯಾಡಿಸಿ 'ಇಲ್ಲ'ವೆಂದ. ರಾಯರು ಮತ್ತೇನೋ ಯೋಚಿಸಿ ಹೇಳಿದರು,

"ವಾಸು ಬರೆದಿರೋ ಪತ್ರದ ಪ್ರಕಾರ ಸುಧಾ ಸಾಯಂಕಾಲದ ಬಸ್ಸಿಗೆ ಬರ್‍ತಾಳೆ. ನೀನ್ನೆ ಬಸ್ ಬರ್‍ಲಿಲ್ಲ ನೋಡು. ಅದಕ್ಕೇ ಇವತ್ತು ಸಾಯಂಕಾಲದ ಬಸ್ಸಿಗೇ ಖಂಡಿತ ಬರ್‍ತಾಳೆ. ಸಾಯಂಕಾಲ ಹೋಗಿ ಬಾ"

ಯಥಾ ಪ್ರಕಾರ ಕಮಲಮ್ಮನವರೂ ರಾಯರೂ ಆ ಸಾಯಂಕಾಲ ಸುಧಾಳ ಬರವನ್ನು ಕಾಯುತ್ತಿದ್ದರು. ರವಿ ಮತ್ತೆ ಒಬ್ಬನೇ ಬಂದಾಗ ಅವರಿಗೂ ತೀವ್ರ ನಿರಾಶೆಯಾಯಿತು. ರವಿಯ ಮುಖ ಪೆಚ್ಚಾಗಿತ್ತು.

"ಅಪ್ಪಾ... ಯಾರೂ ಬಂದ ಹಾಗೆ ಕಾಣ್ಲಿಲ್ಲ... ಅದ್ರೆ ಒಂದ್ವಿಚಾರ ಮಾತ್ರ ತಿಳೀತು" ಎಂದ.

"ಏನಪ್ಪಾ ಅಂಥ ವಿಚಾರ?"

"ನಿನ್ನೆ ಸಾಯಂಕಾಲ ಆರೂವರೆ ಹೊತ್ತಿಗೆ ಆ ಬಸ್ ಬಂತು ಅಂತ ಬಸ್ ಸ್ಟ್ಯಾಂಡಿನಲ್ಲಿ ಹೇಳಿದ್ರು"

ರಾಯರಿಗೆ ದಿಗ್ಭ್ರಮೆಯಾಯಿತು. ಹಾಗಾದರೆ ಪತ್ರದ ಪ್ರಕಾರ ಸುಧಾ ಹಿಂದಿನ ದಿನ ಸಾಯಂಕಾಲವೇ ಬಂದಿರಬೇಕು. ಪಾಪ... ಅವಳಿಗೆ ಮನೆ ಪತ್ತೆಯಾಯಿ ತೋ ಇಲ್ಲವೋ? ರಾತ್ರಿಯೆಲ್ಲ ಎಲ್ಲಿದ್ದಳೋ ಏನೋ?

"ಹಾಗಾದ್ರೆ ಸುಧಾ ನಿನ್ನೆ ಸಾಯಂಕಾಲವೇ ಬಂದಿ ರಬಹುದೆ?"

"ಅದನ್ನ ಹೇಗೆ ಹೇಳೋದು? ಒಂದು ಪಕ್ಷ ಬರದೇನೂ ಇರಬಹುದು... ಆದ್ರೆ... ಆ ಬಸ್‌ನವನು ಹೇಳಿದಂತೆ ನಿನ್ನೆ ಸಂಜೆ ಈ ಊರಿಗೆ ಇಳ್ದೋ ಪ್ರಯಾಣಿ ಕರು ಬಂದ್ರಂತೆ—ಒಬ್ಬ ಹುಡುಗಿ, ಇನ್ನೊಬ್ಬಾತ ಆಕೆ ಜೊತೆಗಿದ್ದ"

ಗುಂಡೂರಾಯರಿಗೆ ಆ ಹುಡುಗಿ ಖಂಡಿತ ಸುಧಾ ಇರಬೇಕೆಂದು ಖಾತ್ರಿಯಾಯಿತು. ಆದರೆ ಆಕೆಯ ಜೊತೆಗಿದ್ದಾತ ಯಾರಿರಬಹುದು? ಎಂಬುದೇ ಬಗೆಹರಿಯಲಿಲ್ಲ. ವಾಸುದೇವಯ್ಯ ಏನಾದರೂ ಮಗಳ ಜೊತೆಗೆ ಬಂದಿರಬಹುದೆ? ಆದರೆ ಹಾಗೆ ಬಂದಿದ್ದರೆ ಆತ ತಮ್ಮ ಮನೆಗೆ ಬಂದೇ ಬರುತ್ತಿದ್ದರು. ಬಂದಿರುವಾತನೂ ಈ ಊರಿಗೆ ಹೊಸಬನಿರಬೇಕು. ಸುಧಾಳ ಅಣ್ಣ ಬಂದಿರಬಹುದೆ?

ಗುಂಡೂರಾಯರಿಗೆ ಯಾವುದೂ ಬಗೆ ಹರಿಯಲಿಲ್ಲ. ಅವರು ಪಟ್ಟುಬಿಡದುದರಿಂದ ಈ ವಿಷಯದ ಬಗ್ಗೆ ಎಲರಿಯಾಗಿ ಅನೇಕ ಸಾಧ್ಯತೆಗಳನ್ನು ಊಹಿಸಿ ಕೊನೆಗೊಂದು ತೀರ್ಮಾನಕ್ಕೆ ಬಂದರು.

"ನಿನ್ನೆ ಬಸ್ಸಿಗೆ ಬಂದ ಹುಡುಗಿ 'ಸುಧಾ' ಖಂಡಿತ ಅಲ್ಲ... ನಾಳೆ ದಿನ್ನ ಟಪಾಲ್ ನೋಡ್ಕೊಂಡು ನಾನೇ ವಾಸುಗೆ ಒಂದು ಪತ್ರ ಬರೆದು ಹಾಕ್ತೀನಿ... ತಡ ವಿಚಾರ ತಾನಾಗಿ ಗೊತ್ತಾಗುತ್ತೆ" ಎಂದರು.

ಬೆಳಗಿನ ಟಪಾಲನ್ನು ಕಾದರು. ಯಾವುದೋ ಎರಡು ಲಗ್ನಪತ್ರಿಕೆಗಳನ್ನು ಬಿಟ್ಟರೆ ಬೇರಾವ ಪತ್ರವೂ ಬರಲಿಲ್ಲ. ಸರಿ, ಪೂರ್ವ ನಿಶ್ಚಿತ ಯೋಜನೆಯಂತೆಯೇ ಗುಂಡೂರಾಯರು ವಾಸುದೇವಯ್ಯನಿಗೆ ಪತ್ರ ಬರೆ ದರು.

"ಪ್ರಿಯ ಮಿತ್ರ ವಾಸು, ನಿನ್ನ ಪತ್ರ ತಲ್ಪಿ ಏ ನಾರು ದಿನಗಳಾದರೂ ನಾನು ಉತ್ತರ ಬರೆಯಲಿಲ್ಲ. ಕಾರಣವೇನೆಂದರೆ, ನಿನ್ನ ಮಗಳು 'ಸುಧಾ' ನಮ್ಮಲ್ಲಿಗೆ ಬಂದ ಮೇಲೆ ಬಸ್ಸಿಗೆ ಬರೆಯೋಣವೆಂದು ಸುಮ್ಮನಿದ್ದೆ. ಆದರೆ ಇಲ್ಲಿಯ ವರೆಗೆ ಸುಧಾ ಇಲ್ಲಿಗೆ ಬರಲಿಲ್ಲ. ದಿನವೂ ಬಸ್‌ಸ್ಟ್ಯಾಂಡಿಗೆ ಹೋಗಿ ವಿಚಾರಿಸುತ್ತಿದ್ದೇವೆ. ಸುಧಾ ಈ ಊರಿನಲ್ಲಿ ಕೆಲಸ ಮಾಡಲು ಇಷ್ಟ ಪಡ ಲ್ಲವೆ? ಅಥವಾ ನಮ್ಮ ಮನೆಯಲ್ಲಿರಲು ಸಮ್ಮತಿಸ

ಲಿಲ್ಲವೆ? ಯಾವುದಕ್ಕೂ ತಕ್ಷಣ ಉತ್ತರ ಬರೆ...ಇಲ್ಲಿ ಎಲ್ಲರೂ ಕ್ಷೇಮ. ಇಂತು,

ನಿನ್ನ ಮಿತ್ರ, ಗುಂಡೂರಾವ್'

ಬ್ಯಾಂಕಿನಲ್ಲಿ ಕುಳಿತ ರವಿಗೆ ಕೆಲಸದಲ್ಲಿ ಮನಸ್ಸು ಕೊಡಗಲಿಲ್ಲ. ತನಗೆ ಈ ವಿಧವಾದ ಮಾನಸಿಕ ವ್ಯಗ್ರತೆ ಏಕಾಗಿದೆ ಎಂಬುದು ಅವನಿಗೇ ಬಗೆಹರಿಯಲಿಲ್ಲ. ವಾಸುದೇವಯ್ಯನವರಲ್ಲಿಗೆ ಈಗ ಹತ್ತು ವರ್ಷಗಳ ಹಿಂದೆ ಅಮ್ಮ ಅಪ್ಪನ ಜೊತೆಗೆ ತಾನೂ ಹೋದಾಗ ಲಂಗದ ಸುಧಾಳನ್ನು ಕಂಡಿದ್ದುದು ಅವನಿಗಿನ್ನೂ ಚೆನ್ನಾಗಿ ಜ್ಞಾಪಕವಿದೆ. ಆ ದೃಶ್ಯವನ್ನವನು ಎಂದೂ ಮರೆಯಲಾರ. ಆ ನೆನಪನ್ನು ಕೆದಕುವಂತೆ, ಗುಂಡೂರಾಯರಿಗೆ ವಾಸುದೇವಯ್ಯ ಬರೆದ ಪತ್ರ ಬಂದಿತ್ತು. ಆ ಸುಧಾ ತಮ್ಮ ಮನೆಯಲ್ಲೇ ವಾಸಿಸಲು ಬರುತ್ತಾಳೆ... ಈಗವಳು ಪದವೀಧರೆ–ಯೌವನದ ಶಿಖರದಲ್ಲಿದ್ದಾಳೆ... ಅವಳೊಂದಿಗೇ ತಾನು ವಾಸಿಸಬೇಕಾಗುತ್ತದೆ. ಮುಂತಾದ ಭಾವನೆಗಳಿಂದ ಯಾವುದೋ ಅನಿರ್ವಚನೀಯ ಆನಂದವನ್ನನುಭವಿಸುತ್ತಿದ್ದ ರವಿಗೆ ಅವಳು ಬಾರದೇ ಹೋದಾಗ ಅಷ್ಟೇ ಬೇಸರವೂ ಆಯಿತು.

'ನಾಳೆ ಅಪ್ಪ ಬರೆದ ಪತ್ರ ವಾಸುದೇವಯ್ಯನವರಿಗೆ ತಲುಪುತ್ತದೆ. ಅವರು ನಾಳೆಯೇ ಉತ್ತರ ಬರೆದರೆ ಅದು ನಾಡಿದ್ದು ಮನೆಗೆ ತಲುಪುತ್ತದೆ. ಇನ್ನೂ ಎರಡು ದಿನಗಳ ದೀರ್ಘ ಅವಧಿಯ ವರೆಗೆ ಕಾಯಬೇಕು' ಈ ಪ್ರತೀಕ್ಷೆ ಅವನಿಂದ ಸಾಧ್ಯವಾಗಲಿಲ್ಲ.

ಇದ್ದಕ್ಕಿದ್ದ ಹಾಗೇ ಅವನಿಗೊಂದು ಯೋಚನೆ ಹೊಳೆಯಿತು. ಮುಖ ಅರಳಿತು. ಈ ಉಪಾಯ ತನಗೆ ಮೊದಲೇ ಯಾಕೆ ಹೊಳೆಯಲಿಲ್ಲವೆಂದುಕೊಂಡ. ಅರ್ಧ ದಿನದ ರಜೆ ಬರೆದಿಟ್ಟು ಬ್ಯಾಂಕಿನಿಂದ ಹೊರಬಿದ್ದ. ಸರ್ಕಲ್ ರೆಸ್ಟೋರೆಂಟ್, ಉಮಾ ಚಿತ್ರಮಂದಿರ, ಸಾಯಿಬಾಬಾ ಸ್ಟೋರ್ಸ್, ಹೆಡ್ ಪೋಸ್ಟ ಆಫೀಸ್, ರಾಘವೇಂದ್ರ ಕ್ಲಿನಿಕ್, ಮೆಟ್ರೋ ರೇಡಿಯೋ ಹೌಸ್, ವೆಂಕಟೇಶ ಮೆಡಿಕಲ್‌ಸ್ಟೋರ್ಸ್‌ಗಳನ್ನೆಲ್ಲ ದಾಟಿ ಪೋಲೀಸ್ ಸ್ಟೇಷನ್ ಮುಂಭಾಗದಲ್ಲಿ ಹಾದು ವಿಸ್ತಾರವಾದ ಬಯಲಿಗೆ ಬಂದ. ಎದುರಿಗೆ ಬಾಲಕಿಯರ ಪ್ರೌಢ ಶಾಲೆಯ ನಾಮಫಲಕ ಕಾಣಿಸಿತು.

ವೇಗವಾದ ನಡಿಗೆಯಲ್ಲಿ ಶಾಲೆಯ ಅಧ್ಯಾಪಕರ ಕೊಠಡಿಗೆ ಬಂದವನೇ ಅಲ್ಲಿದ್ದ ಜನಗಳನ್ನು ಗಮನಿಸಿದಾಗ ಒಂದು ಮೂಲೆಯಲ್ಲಿದ್ದ ವ್ಯಕ್ತಿ ರವಿಯ ಗಮನವನ್ನು ವಿಶೇಷವಾಗಿ ಸೆಳೆಯಿತು. ರವಿ ಆ ವ್ಯಕ್ತಿಯನ್ನೇ ಕ್ಷಣ ಕಾಲ ದುರುಗುಟ್ಟಿದ ನಂತರ ವ್ಯಕ್ತಿಯ ಸಮೀಪ ಹೋಗಿ ನಿಂತು. ಅಲ್ಲಿದ್ದ ಬೇರಾವ ಅಧ್ಯಾಪಕರೂ ರವಿಯ ಬಗ್ಗೆ ಕಾಳಜಿ ವಹಿಸಲಿಲ್ಲ.

ಆ ವ್ಯಕ್ತಿ ಯಾವುದೋ ಪುಸ್ತಕ ವಾಚನದಲ್ಲಿ ಮಗ್ನವಾಗಿದ್ದಂತೆ ಕಂಡಿತು. ರವಿ ಒಮ್ಮೆ ಕೆಮ್ಮಿ "ಹಲೋ ವಿಜಯ್..." ಎಂದು ಅವನ ಭುಜದ ಮೇಲೇ ಕೈ ಹಾಕಿದ.

ವಿಜಯ ಒಮ್ಮೆಲೆ ಕತ್ತೆತ್ತಿ ರವಿಯ ಕಡೆ ನೋಡಿದ.

"ಬಾ...ಕೂತ್ಕೋ ರವಿ...ಚೆನ್ನಾಗಿದೀಯಾ?" ಎಂದ.

ರವಿ ಅವನ ಪಕ್ಕದಲ್ಲೇ ಕುಳಿತ. "ಏನಯ್ಯ... ಎಷ್ಟು ದಿನ ಆಯ್ತು ನಿನ್ನನ್ನು ನೋಡಿ. ...ಸುಮಾರು ಎಂಟು ವರ್ಷ ಆಯ್ತೂಂತ ಕಾಣುತ್ತೆ...ನೀನಿಲ್ಲಿ ದೀಯಾ ಅಂತ ಸಹ ಗೊತ್ತಾಗ್ಲಿಲ್ಲ ನಂಗೆ...ನಾನೂ ಈಗ ಆರು ವರ್ಷದಿಂದ ಇದೇ ಊರಿನ ಬ್ಯಾಂಕಿನಲ್ಲಿ ಹೆಡ್ ಅಕೌಂಟೆಂಟ್ ಆಗಿದೀನಿ...ನಮ್ದು ಇದೇ ಊರಲ್ವೆ? ನಿನ್ನ ಸರ್ವೀಸ್ ಎಷ್ಟು ವರ್ಷ ಆಯ್ತು...? ಇಲ್ಲಿಗೆ ಬಂದದ್ದು ಯಾವಾಗ?" ಎಂದು ಎಡಬಿಡದೆ ಪ್ರಶ್ನೆಗಳ ಸುರಿಮಳೆಯನ್ನೇ ಕರೆದ.

ವಿಜಯ ಒಮ್ಮೆ ರವಿಯ ಮುಖ ನೋಡಿದ. ನಂತರ ಬಾಯಿ ಬಿಟ್ಟ.

"ರವಿ. ನೀನು ಈ ಊರ್ನಲ್ಲಿ ನಂಗೆ ಸಿಕ್ತೀಯಾ ಅಂತ ನಂಗಂತೂ ಗೊತ್ತಿರಲಿಲ್ಲ. ತುಂಬ ಸಂತೋಷ. ನಾನು ಇಲ್ಲಿಗೆ ಬಂದು ಮೂರು ದಿನಾ ಆಯ್ತು.... ಇಲ್ಲಿಗೇ ವರ್ಗ ಆಯ್ತು."

"ಅಷ್ಟೇನಾ ಬರೀ ಮೂರು ದಿನ...ಎಲ್ಲಿ ದೀಯಾ?"

"ಸವಿತಾ ಭವನ ಫಸ್ಟ್ ಫ್ಲೋರ್–ಹದಿನೇಳನೇ ರೂಮು."

"ಎಷ್ಟು ದಿನಾಂತ ಅಲ್ಲಿರ್ತೀಯ? ನಮ್ಮನೇಗೇ ಬಂದ್ಬಿಡು"

"ನಿಮ್ಮನೇಲಾದ್ರೂ ಎಷ್ಟು ದಿನಾಂತ ಇರೋಕೆ ಸಾಧ್ಯ?"

"ಹಾಗಾದ್ರೆ ಏನ್ಮಾಡ್ತೀಯಾ?"

"ಎಲ್ಲಾದ್ರೂ ಬೇರೆ ಮನೆ ಹುಡುಕ್ತಾ ಇದೀನಿ. ನಿನಗೆ ಯಾವ್ದಾದ್ರೂ ಗೊತ್ತಿದ್ರೆ ಹೇಳು...ನೀನು ಇದೇ ಊರ್ನವನೇ ತಾನೇ"

"ಓ ಎಸ್...ನಮ್ಮ ಬೀದೀಲೇ ಒಂದು ಸೊಗಸಾದ ಮನೆ ಇದೆ. ನಿಂಗೆ ಮನೆ ಎಷ್ಟು ದೊಡ್ಡದು ಬೇಕು? ನಿನ್ನ ಸಂಸಾರ..."

"ಛೆ...ಛೆ...ನಂಗೆ ಮದುವೇನೇ ಇಲ್ಲ...ನಾವು ಇರೋದೇ ಇಬ್ಬರು...ನಾನೊಬ್ಬ...ನನ್ನ ಸ್ನೇಹಿತರು... ಅಷ್ಟೇ"

"ಹಾಗಾದ್ರೆ ನಾನು ಹೇಳಿದ ಮನೆ ನಿಮ್ಮಿಬ್ಬರಿಗೂ ತುಂಬ ಅನುಕೂಲವಾಗಿದೆ...ಬಾ.ಇವತ್ತು ಸಾಯಂಕಾಲ...ನೋಡಿ ಬರೋಣ...ಹಾಗೇ ಇವತ್ತು ರಾತ್ರಿ ನಮ್ಮನೇಲೆ ಊಟ ಮಾಡಿ ಬರಬಹುದು... ನಿನ್ನ ಫ್ರೆಂಡ್‌ನೂ ಕರ್ಕೊಂಡೇ ಬಾ. ಅಂದ ಹಾಗೇ ಆ ನಿನ್ನ ಸ್ನೇಹಿತರು ಏನು ಕೆಲ್ಸ ಮಾಡ್ತಾರೆ?"

"ಅವರೂ ಇಲ್ಲೇ ಇದಾರೆ...ಈಗ ಕ್ಲಾಸ್‌ಗೆ ಹೋಗಿದಾರೆ. ಇಲ್ದೇ ಇದ್ರೆ ನಿಂಗೂ ಪರಿಚಯ ಮಾಡಿಸ್ತಾ ಇದ್ದೆ"

"ಇರ್ಲಿ ಇರ್ಲಿ. ಹ್ಯಾಗೂ ಈ ಸಾಯಂಕಾಲ ನೀನು ಬರ್ತೀಯಲ್ಲ...ಆಗ ಅವರನ್ನು ಪರಿಚಯ ಮಾಡ್ಕೊಳ್ಳೋಣಂತೆ. ನಿಂಗೆ ಪುರುಸೊತ್ತಿದ್ರೆ ಒಂದು ನಿಮಿಷ ಬರ್ತೀಯಾ...ಆ ಎದುರುಗಡೆ ಹೋಟ್ಲಲ್ಲಿ ಸಲ್ಪ ಕಾಫಿ ತಗೊಳ್ಳೋಣಂತೆ."

ಇಬ್ಬರು ಗೆಳೆಯರೂ ಶಾಲೆಯಿಂದ ಹೊರಬಿದ್ದರು.

ರವಿ ತಾನು ಬಂದ ಉದ್ದೇಶವನ್ನು ಮರೆಯಬೇಕಾಯಿತು. ಈ ಶಾಲೆಯಲ್ಲಿ 'ಸುಧಾ'-ಎಂಬ ಹೆಸರಿನ ಅಧ್ಯಾಪಕಿ ಬಂದಿದ್ದಾರೆಯೇ ಹೇಗೆಂಬುದು ವಿಚಾರಿಸಿಕೊಳ್ಳಲು ಬಂದ ರವಿಗೆ ತನ್ನ ಹಳೆಯ ಜೊತೆಗಾರ ವಿಜಯನ ಭೇಟಿ ಆಕಸ್ಮಿಕವಾಗಿ ಆಗಿಹೋಯಿತು... ಗೆಳೆಯನನ್ನು ಈ ವಿಚಾರವಾಗಿ ಹೇಗೆ ಕೇಳಬೇಕೆಂಬ ಸಂಕೋಚ. ಇರಲಿ... ಹೇಗೂ ಸಾಯಂಕಾಲ ಮನೆಯ ಹತ್ತಿರ ಬಂದಾಗ ವಿಚಾರಿಸಬಹುದೆಂದುಕೊಂಡು ಸುಮ್ಮನಾಗಿಬಿಟ್ಟ. ಹೋಟೆಲಿನಲ್ಲಿ ಕುಳಿತು ಕಾಫಿ ಬರುವವರೆಗೂ ತಮ್ಮ ಹಿಂದಿನ ಜೀವನದ ಘಟನೆಗಳನ್ನೆಲ್ಲ ಮೆಲುಕು ಹಾಕಿದರು. ಕಾಲು ಗಂಟೆಯನಂತರ ವಿಜಯ– "ಹೋಗೋಣ ರವಿ... ನನಗೀಗ ಕ್ಲಾಸ್ ಇದೆ..."- ಎಂದು ಮೇಲೆದ್ದ. ರವಿ ವಿಜಯನಿಗೆ ತನ್ನ ಮನೆಯ ವಿಳಾಸವನ್ನು ನೀಡಿದ.

× × ×

"ಸುಧಾ, ನನ್ನ ಹಳೇ ಸ್ನೇಹಿತ ರವಿ ಈ ದಿನ ಸಿಕ್ಕಿದ್ದ... ಅವನೇ ಸ್ಕೂಲ್ ಹತ್ರ ಬಂದಿದ್ದ. ಅವರ ಮನೆ ಹತ್ರ ಒಂದು ಮನೆ ಇದೆಯಂತೆ... ನೋಡೋದಕ್ಕೆ ಈ ಸಾಯಂಕಾಲ 'ಬಾ' ಅಂತ ಹೇಳಿದ್ದಾನೆ... ನಿನ್ನನ್ನೂ ಕರ್ಕೊಂಡೇ ಬಾ ಅಂತಲೂ ಹೇಳಿದ್ದಾನೆ... ಬಾ, ಹೋಗೋಣ..."

"ಅವರ ಮನೆ ವಿಳಾಸ ಗೊತ್ತಾ ವಿಜಯ್?"

"ಓಹೋ... ಇಲ್ನೋಡು... ಕೊಟ್ಟುಹೋಗಿದಾನೆ..."– ವಿಜಯ ರವಿ ವಿಳಾಸ ಗುರುತು ಹಾಕಿಕೊಟ್ಟ, ಚೀಟಿಯನ್ನು ಅವಳ ಮುಂದೆ ಹಿಡಿದ. ಸುಧಾ ಆ ವಿಳಾಸವನ್ನು ತದೇಕವಾಗಿ ನೋಡಿದಳು– ಆಮೇಲೆ.

"ಸಾರಿ ವಿಜಯ್... ನಾನು ಬರೋಕಾಗಲ್ಲ... ನೀನೊಬ್ಬನೇ ಹೋಗಿ ಬಾ..."–ಎಂದಳು.

"ಯಾಕೆ ಸುಧಾ? ಏನು ಸಮಾಚಾರ?"–

"ಏನೂ ಇಲ್ಲ. ಈ ವಿಳಾಸ... ಇದು... ನಾನು ಯಾರ ಮನೆಗೆ ಹೋಗ್ಬೇಕಾಗಿತ್ತೋ ಅದೇ ಮನೆಯ ವಿಳಾಸ... ಗುಂಡೂರಾಯರ ಮನೆಯ ಅಡ್ರೆಸ್ ಇದು..."–

ವಿಜಯ ಯಾವ ಆಶ್ಚರ್ಯವನ್ನೂ ವ್ಯಕ್ತಪಡಿಸದೆ–"ಇರಬಹುದು... ಆದರೇನು? ನೀನು ಬರಬಾರದು ಅಂತ ಎಲ್ಲಿದೆ?"-ಎಂದ.

"ನಿಂಗೆ ಅರ್ಥವಾಗೋಲ್ಲ ವಿಜಯ್...ನಮ್ತಂದೆ ಸೂಚನೆಯನ್ನು ನಾನು ಪೂರ್ತಿ ಅಲಕ್ಷಿಸಿದೀನಿ... ಗುಂಡೂರಾಯರೂ ನನ್ನನ್ನು ನೋಡಿದಾರೆ... ಈ ರವೀನೂ ಸಹ ನನ್ನನ್ನು ನೋಡಿದ ಹಾಗೆ ಜ್ಞಾಪಕ.. ಇದು ಇನ್ನೇನಾದ್ರೂ ಸಮಸ್ಯೆ ತಂದು ಹಾಕಿದ್ರೆ ಹೇಗೇಂತ"–

"ಸುಧಾ, ನಿನ್ನ ತೀರ್ಮಾನ ಕಂಡಾಗ ನೀನು ನಿಜಕ್ಕೂ ವಿಚಾರವಾದಿ ಅಂತಲೇ ತಿಳಿದಿದ್ದೆ... ಈಗ ಮತ್ತೆ ನೀನು ಭಾವೋದ್ವೇಗಕ್ಕೆ ಒಳಗಾಗ್ತಾ ಇದೀಯ... ಇದು ಅಷ್ಟಾಗಿ ಸರಿಯಲ್ಲ... ಅಥ್ವಾ ಹೇಗೂ ಈಗ ಅವಕಾಶ ಸಿಕ್ಕಿದೆ.. ಬಾ ನನ್ನ ಜೊತೆ... ಅದೇ ಗುಂಡೂರಾಯರ ಮನೇಲೇ ನೀನು ಇರೋ ಹಾಗೆ ನಾನು ಏರ್ಪಾಟು ಮಾಡ್ತೀನಿ... ನೀನು ಯಾವ್ದಾದ್ರೂ ಒಂದು ದಾರೀ ಹಿಡೀಬೇಕು... ಎರಡೂ ಕಡೆ ಜಗ್ಗಾಡೋದು ಅಷ್ಟೇನೂ ಚೆನ್ನಾಗಿರೋಲ್ಲ... ಬೇಗ ರೆಡಿಯಾಗು-"

ಸುಧಾಗೆ ಏನು ಹೇಳಲೂ ತೋಚಲಿಲ್ಲ... ಕ್ಷಣ ಹೊತ್ತು ಮೌನವಾಗಿದ್ದು ಏನನ್ನೋ ಯೋಚಿಸಿ ಕೊನೆಗೊಂದು ತೀರ್ಮಾನಕ್ಕೆ ಬಂದವಳಂತೆ ಹೇಳಿದಳು–

"ಇಲ್ಲ ವಿಜಯ್... ನೀನು ಹೇಳೋದೇ ಸರಿ... ನಾನೀಗ ಎಲ್ಲ ಭಾವೋದ್ವೇಗಗಳನ್ನು ಮೆಟ್ಟಿ ನಿಲ್ಲಬೇಕು ಅಂತ ತೀರ್ಮಾನಿಸಿದೀನಿ... ನಡಿ ಹೋಗೋಣ.."

ಇಬ್ಬರೂ ಹೊರಡಲು ಅಣಿಯಾಗುತ್ತಿರುವಷ್ಟರಲ್ಲೇ ರೂಮಿನ ಬಾಗಿಲಿನಲ್ಲಿ ಯಾರದೋ ನೆರಳು ಬಿದ್ದಂತಾಯಿತು. ವಿಜಯ ತಿರುಗಿ ನೋಡಿದಾಗ ರವಿ ನಗುತ್ತಾ ನಿಂತಿದ್ದ.

"ಬಿಡುವಾಗಿತ್ತು ಅಂತ ನಾನೇ ಬಂದು ಬಿಟ್ಟೆ ವಿಜಯ್...ಬನ್ನಿ ಹೋಗೋಣಂತೆ ಮನೆ ನೋಡೋಕೆ!" ಅನ್ನುತ್ತಾ ಅಲ್ಲೇ ನಿಂತಿದ್ದ ಸುಧಾಳ ಕಡೆ ನೋಡಿದ...

"ರವಿ... ಮರೆತೆ... ಇಗೋ ಇವರೇ ನನ್ನ ಸ್ನೇಹಿತರು– ಸುಧಾ ಅಂತ...ಇವರೂ ನಮ್ಮ ಶಾಲೆಗೆ ಬಂದು ಮೂರು ದಿನ ಆಯ್ತು... ಅಷ್ಟೆ..."-ಎಂದು ರವಿಗೆ ಅವಳನ್ನು ಪರಿಚಯಮಾಡಿಸಿದ.

ರವಿ ಮತ್ತು ಸುಧಾ ಪರಸ್ಪರ ಕ್ಷಣಕಾಲ ನೋಡಿದರು. ರವಿ ತಾನು ಈ ಹತ್ತು ವರ್ಷಗಳ ಹಿಂದೆ ಕಂಡ ಮುಖವನ್ನು ತುಲನೆ ಮಾಡಿ ನೋಡತೊಡಗಿದಾಗ, ಆ ಮುಖ ಪವಾಡವೆಂಬಂತೆ ಸೂರ್ಮುಡಿಕಂಗೊಳಿಸಿದ್ದುದು ಗಮನಕ್ಕೆ ಬಂತು... "ಇದೇ ಹುಡುಗಿಯನ್ನೇ ವಾಸುದೇವಯ್ಯ ;ನಮ್ಮ ಮನೆಯಲ್ಲಿರಲು ಕಳಿಸಿದುದು. ವಿಜಯನಿಗೂ ಇವಳಿಗೂ ಇರುವ ಸಂಬಂಧವಾದರೂ ಏನು?"-ಎಂಬ ಪ್ರಶ್ನೆಯನ್ನು ತನಗೇ ಹಾಕಿಕೊಂಡ. ಅವಳ ಹೆಸರು ಕಿವಿಗೆ ಬಿದ್ದಾಗಿನಿಂದಲೂ ಆ ಹುಡುಗಿ ತನ್ನನ್ನು ಯಾವುದೋ ಅವ್ಯಕ್ತ ರೀತಿಯಲ್ಲಿ ಆಕರ್ಷಿಸುತ್ತಿರುವುದನ್ನು ಇದುವರೆಗೂ ಸ್ವಯಂ ಅನುಭವಿಸಿದ ರವಿ, ಇದೀಗ ಆ ಆಕರ್ಷಣೆಗೆ ಪ್ರಬಲ ಕಾರಣವನ್ನು ಸ್ಪಷ್ಟವಾಗಿ ಕಂಡುಕೊಂಡ. ಅದೇ ಅವಳು ತನ್ನ ತಂದೆಯ ಸ್ನೇಹಿತ ವಾಸುದೇವಯ್ಯನ ಮಗಳೆಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಅವಳನ್ನೇ ಹೇಗೆ ಕೇಳುವುದು?

ಸುಧಾ ರವಿಯನ್ನು ಆಪಾದಮಸ್ತಕ ನೋಡಿದಳು. ವಿಜಯನಿಗೂ ರವಿಗೂ ಯಾವುದೋ ಅತಿ ಮುಖ್ಯವಾದ ಅಂತರ ಇರುವುದು ಅವಳಿಗೆ ಸ್ಪಷ್ಟವಾಯಿತು... ತನ್ನ ತಂದೆ ಇವರ ಮನೆಯಲ್ಲೇ ತನ್ನನ್ನು ಬಿಡಲು ಯೋಚಿಸಿದ್ದ ವಿಷಯ ಈತನಿಗೂ ಈ ವೇಳೆಗೆ ತಿಳಿದಿರಬಹುದೆ?- ಎಂಬ ಆ ಶಂಕೆಯೂ ತಲೆದೋರಿತು. ಈಗ ಈತನೇ ತಮ್ಮಿಬ್ಬರಿಗೂ ಒಂದು ಮನೆಯನ್ನು ಬಾಡಿಗೆಗೆ ಗೊತ್ತು ಮಾಡಿಕೊಡುವವನಿದ್ದಾನೆ–ಈ ವಿಚಾರದಲ್ಲಿ ಮುಂದಿನ ಪರಿಣಾಮಗಳು ಹೇಗೆ, ಯಾವ ಭಯಂಕರ ರೂಪವನ್ನು ತಾಳುವುದೋ ಯೋಚಿಸಲಾರದಾದಳು. ವಿಜಯ ಹೇಳುವಷ್ಟು ಸುಲಭವಾಗಿ ಭಾವೋದ್ವೇಗವನ್ನು ನಿಯಂತ್ರಿಸಲಾಗುವುದಿಲ್ಲವೆಂಬ ಸತ್ಯ ಅವಳಿಗೆ ಮನವರಿಕೆಯಾದಂತೆ ಕಂಡಿತು.

ಆದರೆ ವಿಜಯ ಈ ಇಬ್ಬರ ಇಬ್ಬಂದಿಯನ್ನೂ ಬಹಳಕಾಲ ಮುಂದುವರಿಯಗೊಡದೆ-"ಬನ್ನಿ ಹೋಗೋಣ... ಮನೆ ನೋಡಬೇಕಲ್ಲ..."-ಎಂದು ರೂಮಿನಿಂದ ಹೊರಕ್ಕೆ ಹೆಜ್ಜೆ ಇಟ್ಟ, ಇಬ್ಬರೂ ಯಾಂತ್ರಿಕವಾಗಿ ವಿಜಯನನ್ನು ಹಿಂಬಾಲಿಸಿದರು. ದಾರಿಯಲ್ಲಿ ಯಾರಿಗೂ ಯಾವ ಮಾತನಾಡುವ ಸಂದರ್ಭವೂ ಒದಗಲಿಲ್ಲವೆಂಬಂತೆ, ಮೂವರೂ ಮೌನವಾಗಿ ದೇವಪುರದ ಪೇಟೆ ಬೀದಿಗಳ ಮುಖಾಂತರ ಮುಂದುವರಿದರು.

ರವಿ ಅದೇ ಬಿದಿಯ ಒಂದು ಮನೆಯ ಮುಂದೆ ನಿಂತು- "ಗೋಪಾಲ್... ಇದೀಯಾ ಮನೇಲಿ?"-ಎಂದಾಗ ರವಿಯ ವಯಸ್ಸಿನ ಒಬ್ಬ ಯುವಕ ಹೊರಬಂದ–

"ಓಹೋ... ರವಿ... ಬಾರಪ್ಪಾ... ಬಾ... ಇವರು ಯಾರು?" ವಿಜಯ ಮತ್ತು ಸುಧಾರನ್ನು ಕುರಿತು ಕೇಳಿದ.

"ಇವರಿಬ್ಬರೂ ಈ ಊರಿನ ಗರ್ಲ್ಸ್ ಹೈಸ್ಕೂಲಿಗೆ ಬಂದಿದ್ದಾರೆ... ನನ್ನ ಸ್ನೇಹಿತರು... ಇವರಿಗೊಂದು ಮನೆ ಬೇಕೂ ಅಂತ ಹೇಳಿದ್ರು... ನಿಮ್ಮ ಔಟ್‌ಹೌಸ್ ಹೇಗೂ ಖಾಲಿ ಇದೆಯಲ್ಲ.., ಅದನ್ನೇ ತೋರ್‍ಸೋಣಾಂತ ಕರ್‍ಕೊಂಡಬಂದೆ"–

"ಬಹಳ ಸಂತೋಷ... ನಿಮ್ಮ ಹೆಸರು..."-ಎನ್ನುತ್ತಿದ್ದ ಗೋಪಾಲನಿಗೆ ರವಿ ಅವರಿಬ್ಬರ ಪರಿಚಯವನ್ನು ಮಾಡಿಸಿಕೊಟ್ಟ.

"ಬನ್ನಿ ಮನೆ ತೋರಿಸ್ತೀನಿ... ನಮ್ತಂದೆ ಮನೇಲಿಲ್ಲ... ಆದ್ರೂ ಪರವಾಗಿಲ್ಲ... ಮನೆ ನಿಮಗೆ ಕಂಫರ್ಟೇಬಲ್ ಆದ್ರೆ ನಾಳೇನೇ ಬಂದ್ಬಿಡಿ..."ಎನ್ನುತ್ತಾ, ಗೋಪಾಲ ಆ ಮೂವರನ್ನೂ ತನ್ನ ಮನೆಯ ಹಿಂಭಾಗಕ್ಕೆ ಕರೆದೊಯ್ದು ಔಟ್‌ಹೌಸಿನ ಬೀಗವನ್ನು ತೆರೆದ.

ಸುಧಾಳಿಗೆ ಯಾವುದೋ ಮಹಾಪರಾಧಮಾಡುತ್ತಿದ್ದೇನೆನ್ನಿಸುವಂತಾಗಿತ್ತು. ರವಿಯ ಮೂಲಕ ಗುಂಡೂರಾಯರಿಗೆ ತಾನಿಲ್ಲಿ ವಿಜಯನ ಜೊತೆಗೆ ವಾಸಿಸುವ ವಿಚಾರ ತಿಳಿದು, ಅಲ್ಲಿಂದ ಅದು ತನ್ನ ತಂದೆಯವರಿಗೂ ಹೋಗುತ್ತದೆ... ಅಲ್ಲಿಂದ ಮುಂದೆ ತನ್ನ ತಂದೆ ತಾಯಿಗಳ ಪ್ರತಿಕ್ರಿಯೆ... ತನ್ನ ಅವರ ಅನುಬಂಧ... ಪ್ರಾಯಶಃ... ಈ ಎಲ್ಲ ಅನುಬಂಧಗಳನ್ನೂ ಕಳಚಿಕೊಳ್ಳಬೇಕಾದ ಪರಿಸ್ಥಿತಿ ಒದಗಬಹುದು. ಆದರೆ ಹೀಗೆ ಮಾಡುವ ನೈಜ ಅಗತ್ಯವಿದೆಯೆ? ಯಾವ ಪುರುಷಾರ್ಥಕ್ಕಾಗಿ ತಾನು ತಂದೆ ತಾಯಿಗಳಿಂದ ದೂರವಿರಬೇಕು... ದೂರವಾಗಬೇಕು? ಸಮಾಜವು ತನ್ನ ಸುತ್ತ ನೇಯಬಹುದಾದ ಜೇಡನ ಬಲೆಯಲ್ಲಿ ತಾನೇಕೆ ನೊಣವಾಗಿ ಸಿಕ್ಕಿಬೀಳಬೇಕು? ಸಹಸ್ರಾರು ಜನ ಹೇಗೆ ಜೀವಿಸುತ್ತಾರೋ ಹಾಗೇ ತಾನೂ ಏಕೆ ಈ ಬಾಳನ್ನು ನೂಕಬಾರದು? ಆದರೆ... ವಿಷಯ ತನ್ನ ಹತೋಟಿ ಮೀರಿದೆ... ಹೌದು... ತಾನು ಕಳೆದ ಮೂರು ರಾತ್ರಿಗಳನ್ನು ವಿಜಯನೊಂದಿಗೆ ಕಳೆದಿದ್ದೇನೆ... ಈ ವಿಚಾರ ತನ್ನ ತಂದೆಯ ಮಿತ್ರ ಗುಂಡೂರಾಯರ ಮಗ ರವಿಯ ಗಮನಕ್ಕೆ ಬಂದಿದೆ–

ವಿಜಯ ಮಾತ್ರ ಆ ಮನೆಯ ಒಳಹೊರಗನ್ನು ಪರಿಶೀಲಿಸಿ, ವಾಸಕ್ಕೆ ಅರ್ಹವೆಂಬ ತೀರ್ಮಾನಕ್ಕೆ ಬಂದವನೇ–"ಏನು ಸುಧಾ? ಏನು ಹೇಳ್ತೀರಿ? ಮನೆ ಚೆನ್ನಾಗಿದೆ ಅಲ್ವೆ?"-ಎಂದ. ಸುಧಾ ಯಾವುದೋ

ಮಾಯೆ-ಛಾಯೆ!



"ಗಂಡಿಗೋ ಹೆಣ್ಣಾಗಿ, ಹೆಣ್ಣಿಗೋ
ಗಂಡಾಗಿ
ಕಾಡಿತ್ತು ಮಾಯೆ"
ಅದಕೆಂದೆ ಯುವಜನದ ಬಟ್ಟೆಬರೆ,
ಮುಡಿ ಬೆಡಗಿ
ನಲ್ಲದರ ಛಾಯೆ!

-ಎಂ. ಅಕಬರ ಅಲಿ

ಶೋಕದಿಂದ ವಾಸ್ತವಕ್ಕಿಳಿದವಳಂತೆ ನಸು ಬೆಚ್ಚಿ- "ಆಂ...ಹೂಂ... ಹೌದು... ಮನೆ ಚೆನ್ನಾಗಿದೆ... ಬಾಡಿಗೆ ಎಷ್ಟೂಂತ ಕೇಳಿಬಿಡಿ..."ಎಂದಳು.

ಮೂವತ್ತು ರೂಪಾಯಿ ಬಾಡಿಗೆಯೆಂದು ಗೊತ್ತುಮಾಡಿಕೊಂಡ ವಿಜಯ, ಒಂದು ತಿಂಗಳ ಮುಂಗಡ ಹಣವನ್ನು ಗೋಪಾಲನ ಕೈಗಿತ್ತು-"ಸುಧಾ.. ನಿಮ್ಮ ಪಾಲಿನ ಹದಿನೈದನ್ನೂ ನಾನೇ ಕೊಟ್ಟಿದ್ದೇನೆ... ಆ ಮೇಲೆ ಕೊಡಿ."-ಎಂದಾಗ ಗೋಪಾಲ ಅವಾಕ್ಕಾದ. ರವಿ ವಿಜಯನನ್ನು ಮನೆಗೆ ಬರುವಂತೆ ಒತ್ತಾಯ ಮಾಡಿದ... ಆದರೆ ಸುಧಾ "ಬೇಡ ವಿಜಯ್... ಇನ್ನಾವತ್ತಾದ್ರೂ ಹೋಗೋಣವಂತೆ... ಈ ದಿವ್ಸ ನಂಗೆ ತುಂಬಾ ತಲೆ ನೋಯ್ತಾ ಇದೆ..." ಎಂದಳು. ವಿಜಯ ಸುಧಾಳೊಡನೆ ಸವಿತಾಭವನಕ್ಕೆ ಹಿಂದಿರುಗಿದ.

ಗೋಪಾಲ ರವಿಯ ಮುಖವನ್ನು ಕುತೂಹಲದಿಂದ ದಿಟ್ಟಿಸಿದ

"ಏನಯ್ಯಾ... ಅವರಿಬ್ರೂ ಗಂಡ ಹೆಂಡತಿ ಅಲ್ವೇನೋ?"-ಎಂದ. ರವಿ ಆ ಮಾತು ಕೇಳಿಸದವನಂತೆ ಏನನ್ನೋ ಯೋಚಿಸುತ್ತಾ ನಿಂತಿದ್ದ. ಗೋಪಾಲ ಮತ್ತೊಮ್ಮೆ ಪ್ರಶ್ನೆಯನ್ನು ಪುನರುಚ್ಚರಿಸಿದಾಗ- "ನೋ... ಅವರಿಬ್ರೂ ಕೇವಲ ಸ್ನೇಹಿತರು... ಅಷ್ಟೆ"-ಎಂದ.

"ವಾಟ್... ಸ್ನೇಹಿತ್ರು?... ಏನು ಹಾಗಂದ್ರೆ? ಬರೀ ಸ್ನೇಹಿತರು ಒಟ್ಟಿಗೇ ಒಂದೇ ಮನೇವಳಗೆ..."- ಗೋಪಾಲ ಇನ್ನೂ ಏನೇನೋ ಕೇಳುವವನಿದ್ದ. ಆದರೆ ರವಿ ಅದಕ್ಕೆ ತಡೆ ಹಾಕಿದಂತೆ- "ಮದುವೆಯಾಗೋವರೆಗೂ ಸ್ನೇಹಿತರೇ ತಾನೆ?"-ಎಂದ.

× × ×

ರಾತ್ರಿ ರವಿ ಮನೆಗೆ ಬಂದಾಗ ಎಂಟೂವರೆಯಾಗಿತ್ತು. ಗುಂಡೂರಾಯರು ಹಾಲಿನಲ್ಲಿ ಶತಪಥ ಹಾಕುತ್ತಿದ್ದರು.

"ಎಲ್ಲಿಗೆ ಹೋಗಿದ್ದೆ ರವಿ ಇಷ್ಟು ಹೊತ್ತು?"- ಮಗ ಮನೆಗೆ ಏಳೂವರೆ ಗಂಟೆಗೆ ಬಂದರೇ ರಾಯರಿಗೆ ಸಮಾಧಾನ...

"ಅಪ್ಪಾ... ಸುಧಾ ಈ ಊರಿಗೆ ಬಂದು ಆಗ್ಲೇ ಮೂರು ದಿವಸ ಆಯ್ತು"-ಎಂದ.

"ಏನಂದೆ? ಸುಧಾ ಬಂದಿದಾಳೆಯೇ? ಎಲ್ಲಿದಾಳೆ?"-

"ಸವಿತಾಭವನ್ ಫಸ್ಟ್‌ಫ್ಲೋರ್ ಹದಿನೇಳನೇ ರೂಮ್ನಲ್ಲಿ..."

"ರಾಮರಾಮಾ... ಪಾಪ... ಅವಳಿಗೆ ನಮ್ಮ ಮನೆ ಪತ್ತೆಯಾಯ್ತೋ ಇಲ್ವೋ... ನಿಂಗೆ ಹೇಗೆ ಗೊತ್ತಾಯ್ತು?"

"ಈ ಮಧ್ಯಾಹ್ನ ನಾನೇ ಅವರ ಸ್ಕೂಲ್ ಹತ್ರ ಹೋಗಿದ್ದೆ..." ಎಂದು ಆರಂಭಿಸಿ, ಗೋಪಾಲನ ಔಟ್ ಹೌಸ್ ತೋರಿಸಿದವರೆಗಿನ ಎಲ್ಲ ಸಮಾಚಾರಗಳನ್ನೂ ಚಾಚೂ ತಪ್ಪದೆ ಹೇಳಿದ.

ಗುಂಡೂರಾಯರು ಏನೂ ತೋಚದವರಂತೆ ತಲೆಯ ಮೇಲೆ ಕೈಹೊತ್ತು ಕುಳಿತರು. ರವಿ ಈ ಕತೆಯನ್ನು ಹೇಳುವಾಗ ಒಳಗಿನಿಂದ ಹಾಲಿಗೆ ಬಂದ ಕಮಲಮ್ಮನಂತೂ ದಿಗ್ಭ್ರಾಂತರಾದಂತೆ ಕುಳಿತುಬಿಟ್ಟರು. ತಮ್ಮ ಮಗನ ವಿವಾಹಕ್ಕೆ ಅನುಕೂಲಕರ ಸನ್ನಿವೇಶ ಒದಗಿದ್ದುದು ಕೆಟ್ಟು ಹೋಯಿತೆಂಬ ಭಾವನೆಗಿಂತ, ಸುಧಾ ಒಬ್ಬ ಅಪರಿಚಿತ ತರುಣನೊಡನೆ ವಾಸಿಸುವ ನಿರ್ಧಾರದಿಂದ ಅವಳ ಬಗ್ಗೆ ಅತ್ಯಂತ ತಿರಸ್ಕಾರ ಮೂಡಿತು.

"ನಾನು, ವಾಸು ಮಗಳು ಪರವಾಗಿಲ್ಲ, ಓದಿದಾಳೆ, ವಿದ್ಯಾವತಿ, ದುಡಿಯೋ ಜವಾಬ್ದಾರಿ ಹೊತ್ತಿದಾಳೆ ಅಂತ ಅಂದ್ಕೊಂಡಿದ್ದೆ. ಅವಳು ಈ ಮಟ್ಟದ ಹುಡುಗಿ ಅಂತ ಕೇಳಿ ದಿಕ್ಕೇ ತೋಚದ ಹಾಗಾಯ್ತು"- ಎಂದರು ಗುಂಡೂರಾಯರು.

"ಅಲ್ರೀ, ಯಾವನೋ ಏನೋ... ಅವನ ಜೊತೇಲಿ ಒಂದೇ ಮನೇಲಿರೋದಕ್ಕೆ ಅವಳು ಹ್ಯಾಗೆ ತಾನೆ ಒಪ್ಪಿದಳೂಂತ? ಅವಳಪ್ಪ ಏನಾದ್ರೂ ಹಾಗೆ ಹೇಳಿ ಕಳ್ಸಿದ್ರೋ ಏನೋ..."-ಕಮಲಮ್ಮ ದನಿಗೂಡಿಸಿದರು.

ರವಿ, ರಾಯರು-ಇಬ್ಬರಿಗೂ ಹೊಸ ವಿಷಯವೊಂದು ಸಿಕ್ಕಿದ ಹಾಗಾಯ್ತು. ಹೌದಲ್ಲ... ಇದ್ದರೂ ಇರಬಹುದು... ವಾಸುದೇವಯ್ಯನೇ ವಿಜಯನನ್ನು ಜೊತೆಮಾಡಿ ಕಳಿಸಿರಬಹುದಲ್ಲವೆ? ಆ ಬಗ್ಗೆ ರವಿ ಯಾವ ವಿಷಯವನ್ನೂ ಕೇಳಿರಲಿಲ್ಲ. ಸುಧಾ ಮತ್ತು ವಿಜಯ ಯಾವಾಗಿನಿಂದ ಜೊತೆಯಾದರೆಂಬ ಬಗ್ಗೆ ಯಾವ ಮಾಹಿತಿಯೂ ಅವನ ಬಳಿ ಇರಲಿಲ್ಲ. ಅವನಿಗೆ ಗೊತ್ತಿದ್ದ ಹಾಗೆ, ವಿಜಯನ ಸ್ಥಳ ಚಿತ್ರದುರ್ಗವಂತೂ ಅಲ್ಲ. ಅಥವಾ ವಿಜಯ ಚಿತ್ರದುರ್ಗದಲ್ಲೇ ಉಪಾಧ್ಯಾಯನಾಗಿದ್ದು ದೇವಪುರಕ್ಕೆ ವರ್ಗಪಡೆ

ಬರಬಹುದು... ಆ ವಿಚಾರ ತಿಳಿದ ವಾಸುದೇವಯ್ಯ ಮಗಳಿಗೆ ಜೊತೆಯಾಯಿತೆಂದು ಅವಳನ್ನು ವಿಜಯನೊಡನೆ ಕಳಿಸಿರಬಹುದೆ?

ರಾಯರು ಬಹಳ ಹೊತ್ತು ಯೋಚಿಸಿ- "ನೋಡೋಣ... ನಾಳೆ ವಾಸುವಿನಿಂದ ಪತ್ರ ಬಂದೇ ಬರುತ್ತೆ... ಯಾವ ವಿಚಾರವೂ ಗೊತ್ತಾಗುತ್ತೆ... ವಿಷಯ ತಿಳೀದೆ ನಾವು ನಾವೇ ಆತುರಪಡೋದು ಬ್ಯಾಡಾ..."-ಎಂದರು.

× × ×

ಸುಧಾಳಿಗೆ ಎಷ್ಟೊತ್ತಾದರೂ ನಿದ್ರೆ ಹತ್ತಲಿಲ್ಲ. ಎಷ್ಟೇ ಪ್ರಯತ್ನಪಟ್ಟರೂ ರವಿ ಅವಳ ಮನಸ್ಸಿನಿಂದ ದೂರವಾಗಲಿಲ್ಲ. ವಿಜಯನ ಗೊರಕೆ ಏಕಪ್ರಕಾರವಾಗಿ ಕೇಳುತ್ತಿತ್ತು-ತಾನು ಎಂತಹ ಆತುರ ಮಾಡಿಬಿಟ್ಟೆ? ಅಪ್ಪ ತನ್ನನ್ನು ಗುಂಡೂರಾಯರ ಮನೆಯಲ್ಲಿಯೇ ಇರ ಹೇಳಿದುದರ ಉದ್ದೇಶ ಪ್ರಾಯಶಃ ರವಿಯ ಕಾರಣವಾಗಿದ್ದಿರಬಹುದು. ರಾಯರೂ ಅಪ್ಪನೂ ಬಾಲ್ಯಸ್ನೇಹಿತರಂತೆ... ಹಾಗೆಯೇ ತನ್ನ ಮತ್ತು ರವಿಯ ವಿವಾಹದ ಪೂರ್ವಭಾವೀ ಸಿದ್ಧತೆಗಾಗಿಯೇ ಹೀಗೆ ತನಗೆ ಸೂಚನೆ ಕೊಟ್ಟಿದ್ದಿರಬಹುದು. ಗುಂಡೂರಾಯರ ಮನೆಯಲ್ಲಿ ರವಿಯಂತಹ ತರುಣನಿದ್ದಾನೆಂದು ತನಗೆ ಗೊತ್ತಿದ್ದರೆ, ಪ್ರಾಯಶಃ ತಾನು ಈ ವಿಜಯನ ಜೊತೆ ಇರಲು ಸಮ್ಮತಿಸುತ್ತಿರಲಿಲ್ಲ...

ಅವಳು ಪ್ರಾಮಾಣಿಕವಾಗಿ ಯೋಚಿಸುತ್ತಿದ್ದಳು... ರವಿಯ ಬಗ್ಗೆ ತಾನು ತುಂಬ ಆಕರ್ಷಿತಳಾಗಿದ್ದೇನೆಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಂಡಳು... ಆದರೆ ಈಗ ವಿಜಯನಿಂದ ಬಿಡುಗಡೆ ಹೊಂದುವ ಉಪಾಯ ಯಾವುದು? ಒಂದು ವೇಳೆ ವಿಜಯನಂತಹ ಬುದ್ಧಿಜೀವಿ ತನ್ನ ಈ ಪರಿವರ್ತನೆಯನ್ನು ನಿರ್ವಿಕಾರವಾಗಿ ಕಂಡರೂ ಕಾಣಬಹುದು... ಆದರೆ ರವಿ, ಗುಂಡೂರಾಯರು, ಅಪ್ಪ-ಇವರೆಲ್ಲ ಈ ಪರಿವರ್ತನೆಯನ್ನು ಹೇಗೆ ಸ್ವೀಕರಿಸಬಹುದು? ಅಥವಾ... ಇದೆಲ್ಲ ತನ್ನ ತಾರುಣ್ಯದಲ್ಲಿ ಉಕ್ಕಿಬರುವ ಭ್ರಮೆಯ ಫಲವೋ... ಏನಾದರೂ, ತಾನು ಮಾಡಿದ ಕೆಲಸ ಅಷ್ಟಾಗಿ ಸರಿ-ಎನ್ನಿಸಲಿಲ್ಲ. ಈ ಬಗ್ಗೆ ನಿದ್ರಿಸುತ್ತಿರುವ ವಿಜಯನನ್ನು ಎಬ್ಬಿಸಿ ಏನಾದರೂ ಕೇಳಬೇಕೆನ್ನಿಸಿತು.

"ವಿಜಯ್..."

ವಿಜಯ ತಟ್ಟನೆ ಎಚ್ಚರಗೊಂಡು ದೀಪಹಾಕಿದ.

"ಏನು ಸುಧಾ? ಇನ್ನೂ ನಿದ್ದೆ ಬರ್‍ಲಿಲ್ವೇ?"-

"ನಂಗೆ ಒಂದೂ ಅರ್ಥವಾಗ್ತಾ ಇಲ್ಲ ವಿಜಯ್... ನಾನೀಗ ಮಾಡ್ತಿರೋದು ಸರೀಂತ ನನಗೇ ನಂಬ್ಕೇ ಬರ್‍ತಾ ಇಲ್ಲ..."

"ಹಾಗಾದ್ರೆ ಹಾಗೆ ಮಾಡಬೇಡ... ನಿಂಗೆ ಯಾವುದ್ರಲ್ಲಿ ನಂಬ್ಕೆ ಬರುತ್ತೋ ಹಾಗೆ ಮಾಡು..."-

"ಆದ್ರೆ... ಅದು ನೀನು ಹೇಳೋ ಅಷ್ಟು ಸುಲಭ ಅಲ್ಲ ವಿಜಯ್... ನಮ್ಮ ಈ ಸೊಸೈಟೀನಲ್ಲಿ ಹೆಣ್ಣಿನ ಸ್ಥಾನಮಾನ ಅಷ್ಟೊಂದು ಲಿಬರಲ್ ಆಗಿಲ್ಲ..."

"ಅಂದ್ರೆ ಈಗೇನು ಮಾಡಬೇಕು ಅಂತಿಯಾ?"-

"ಅದೇ ನಂಗೂ ಅರ್ಥವಾಗ್ತಾ ಇಲ್ಲ... ನಾನೀಗ ನಿನ್ನ ಜೊತೇಲೇ ಇರ್‍ತೀನೀ ಅಂತ್ಲೆ ಇಟ್ಕೋ... ಇದು ನಮ್ಮಪ್ಪ ಅಮ್ಮನಿಗೆ ಸರಿ ಹೊಗ್ದೇ ಇರಬಹುದು... ನಾನೇನೋ ಅದನ್ನ ಕೇರ್ ಮಾಡ್ದೇ ಇದ್ರೂ, ಅದನ್ನೆಲ್ಲ ಸೀರಿಯಸ್ಸಾಗಿ ಯೋಚಿಸೋ ಸಂದರ್ಭ ಬಂದ್ರೂ ಬರಬಹುದು..."

"ಅಂಥಾ ಸಂದರ್ಭ ಯಾವ್ದು?"-

"ಒಂದ್ವೇಳೆ ನಿನಗೇ ಈ ಊರಿಂದ ವರ್ಗ ಆಯ್ತು... ಅಥವಾ ನನಗೇ ಆಯ್ತು ಅಂತಾ ಇಟ್ಕೋ... ಆಗ ನಾವಿಬ್ರೂ ಬೇರೆ ಬೇರೆ ಆಗ್ತೀವಿ.. ನಾನಂತೂ ಒಂಟಿಯಾಗ್ತೀನಿ..."-

"ಸುಧಾ... ನಾವಿಬ್ಬರೂ ಒಟ್ಟಾಗಿ ವಾಸ ಮಾಡೋ ಉದ್ದೇಶ, ಇಡೀ ಜೀವಮಾನ ಪರ್ಯಂತ ಹೀಗೇ ಜೊತೆಗಿರಬೇಕೂ ಅನ್ನೋದಲ್ಲ... ಈ ಊರ್‍ಲ್ಲಿರೋವರಗೂ ಇರಬಹುದು... ಇಷ್ಟಕ್ಕೂ ನಾವಿಬ್ರೂ ಒಂಟಿಯಾಗಿ ಇರೋರಲ್ಲ... ನನಗೂ ಮದುವೆಯಾಗಬಹುದು... ನಿನಗೂ ಆಗಬಹುದು... ಆಗ ನಾವು ಈಗಿರೋ ಹಾಗೆ ಇರೋದಕ್ಕೆ ಸಾಧ್ಯವೆ? ಈಗ ನಾವಿಬ್ರೂ ಒಟ್ಟಿಗಿರೋದು ಕೇವಲ ಇಬ್ಬರು ಸ್ನೇಹಿತರಂತೆ... ಲಿಂಗಭೇದ ಅನ್ನೋದು ಈ ಸ್ನೇಹಕ್ಕೆ, ಸಹಬಾಳ್ವೆಗೆ ಅಡ್ಡಿ ಅಲ್ಲ ಅಂತ ನನ್ನ ಭಾವನೆ...ಈಗಲೂ ನಿನಗೆ ಅದು ಅಡ್ಡಿ ಅಂತಾದ್ರೆ ನೀನು ಗುಂಡೂರಾಯರ ಮನೇಲೇ ಇರಬಹುದು..."

ಸುಧಾ ಕ್ಷಣಕಾಲ ಸ್ತಂಭೀಭೂತಳಾದಳು... ನನಗೂ ಮದುವೆ ಆಗಬಹುದು... ನಿನಗೂ ಆಗಬಹುದು"-ಎಂಬ ವಿಜಯನ ಮಾತು ಅವಳನ್ನು ಮತ್ತೆ ಏನೋ ಯೋಚಿಸುವಂತೆ ಮಾಡಿತು. ಹಾಗಾದರೆ ಈ ವಿಜಯ ಬ್ರಹ್ಮಚಾರಿಯಾಗೇ ಉಳಿಯುವ ಪ್ರತಿಜ್ಞೆ ಮಾಡಿದ ಶುಷ್ಕ ವೇದಾಂತಿಯಲ್ಲ.. ಇವನ ಗುರಿ ಆತ್ಮಾನುಭವದಂತಹ ಆಧ್ಯಾತ್ಮಸಂಬಂಧವಾದುದಲ್ಲ... ಲೌಕಿಕವಾದ ವ್ಯಕ್ತಿ ಈತ...

'ನನಗೂ ಮದುವೆಯಾಗಬಹುದು... ನಿನಗೂ ಆಗಬಹುದು" ಎಂದ ಈ ವಿಜಯ "ನಾವಿಬ್ಬರೂ ಮದುವೆಯಾದರೂ ಆಗಬಹುದು"-ಎಂದೇಕೆ ಹೇಳಲಿಲ್ಲ? ಪ್ರಾಯಶಃ ಈತನಿಗೆ ತನ್ನ ಬಗ್ಗೆ ಆಕರ್ಷಣೆ ಇಲ್ಲವೆ? ಅಥವಾ ತನಗಿಂತ ಮೋಹಕಳಾದ ಯುವತಿಯೊಬ್ಬಳಿಗೆ ತನ್ನ ಸರ್ವಸ್ವವನ್ನೂ ಈತ ಸಮರ್ಪಿಸಿಕೊಂಡಿರಬಹುದೆ? ಈ ವಿಜಯ ದಿನದಿನಕ್ಕೂ ಜಟಿಲನಾಗುತ್ತಿದ್ದಾನೆ... ಸಮಸ್ಯೆಯಾಗುತ್ತಿದ್ದಾನೆ ಎನ್ನಿಸಿತು.

"ಏನು ತೀರ್ಮಾನ ಮಾಡಿದೆ ಸುಧಾ?"

ಸುಧಾ ಇದೀಗ ನಿಜಕ್ಕೂ ಸಂದಿಗ್ಧದಲ್ಲಿದ್ದಳು... ಆದರೂ ತಟ್ಟನೆ ಮಾತೊಂದು ಅವಳ ಬಾಯಿಂದ ಅವಳರಿವಿಲ್ಲದೆಯೇ ಹೊರಬಿತ್ತು:

"ನಾನು ನಿನ್ನ ಜೊತೆಗೇ ಇರ್‍ತೀನಿ ವಿಜಯ್... ಆದರ ಪರಿಣಾಮ ಏನಾದ್ರೂ ಆಗ್ಲಿ",

- ೪ -

ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಸರಿಯಾಗಿ ಗುಂಡೂರಾಯರ ಮನೆಯ ಬಾಗಿಲಿಗೆ ಬಂದರು ವಾಸುದೇವಯ್ಯ. ಅವರ ಮುಖದಲ್ಲಿ ವ್ಯಗ್ರತೆ ಎದ್ದು ಕಾಣುತ್ತಿತ್ತು. ಅವರ ಜೊತೆಗೆ ಅವರ ಮಗ ನರಹರಿಯೂ ಬಂದಿದ್ದ. ರಾಯರು ಇಬ್ಬರನ್ನೂ ಆದರಪೂರ್ವಕ ಬರಮಾಡಿಕೊಂಡರು.

"ಎಲ್ಲಾ ಸೌಖ್ಯವೆ ವಾಸು?"

"ಯಾವ ಸೌಖ್ಯ ಎಲ್ಲಾದ್ರೂ ಹಾಳಾಗ್ಲಿ ಬಿಡು, ಸುಧಾ ಯಾಕೆ ಬರ್‍ಲಿಲ್ಲ ಅನ್ನೋ ಯೋಚ್ನೇಲಿ ನಮಗಂತೂ ಊಟ ನಿದ್ರೆ ಎರಡೂ ಬ್ಯಾಡವಾಗಿದೆ. ಅವಳು ಅವತ್ತೇ ಸಾಯಂಕಾಲ ಇಲ್ಲಿಗೆ ಹೊರಟಿದ್ದು..."

"ಏನೋ ಯೋಚ್ನೆ ಮಾಡ್ಬೇಡ ವಾಸು... ನಿನ್ಮಗಳು ಸುಖವಾಗಿದ್ದಾಳೆ..." ಗುಂಡೂರಾಯರಿಗೆ ಮತ್ತೆ ಸುಧಾಳ ಬಗ್ಗೆ ಮೂಡಿದ್ದ ತಿರಸ್ಕಾರ ನೂರ್ಮಡಿಯಾಯಿತು. ಇನ್ನೂ ದುಡಿಯಲು ಮನೆ ಬಿಟ್ಟು ಹೊರಕ್ಕೆ ಕಾಲಿಡುತ್ತಿದ್ದ ಹಾಗೇ ತನಗೆ ಬೇಕಾದ ಯಾವನೋ ಒಬ್ಬನ ಜೊತೆಯಲ್ಲಿ ಹೋಟೆಲಿನಲ್ಲಿ ವಾಸಮಾಡುವ ಈ ಹುಡುಗಿ ಉತ್ತಮ ಗೃಹಿಣಿಯಾಗಿ ಬಾಳಬಲ್ಲಳೆ- ಎನ್ನಿಸಿತು.

ವಾಸುದೇವಯ್ಯ ಹಾಗೂ ನರಹರಿ-ಇಬ್ಬರೂ ರಾಯರ ಆಶ್ವಾಸನೆಯಿಂದ ಸಮಾಧಾನದ ನಿಟ್ಟುಸಿರು ಬಿಟ್ಟರು.

"ಎಲ್ಲಿದಾಳೆ ಗುಂಡಾ... ನನ್ನ ಸುಧಾ... ಮೊದಲು ಅವಳ ಮುಖಾ ನೋಡಬೇಕು ನಾನು-"

"ಆಗಲಿ... ನೋಡ್ತೀಯಂತೆ... ಮೊದ್ಲು ಕೈಕಾಲು ಮುಖ ತೊಳ್ಕೋ... ಏನಾದ್ರೂ ಉಪಾಹಾರವಾಗ್ಲಿ..."-

ಕಮಲಮ್ಮ ವಾಸುದೇವಯ್ಯನ ಕ್ಷೇಮ ಸಮಾಚಾರ ವಿಚಾರಿಸಿದರು.

"ಎಲ್ಲಾ ಸೌಖ್ಯ ಕಮಲಮ್ಮ... ಈ ಸುಧಾ ಯೋಚ್ನೇಲಿ ಯಾರೂ ನಿದ್ದೆ ಸಹ ಮಾಡಿಲ್ಲ. ನೋಡ್ರಿ... ಈಗ ಹನ್ನೊಂದು ಗಂಟೆ ಬಸ್ಸಿಗೇ ಈ ನರಹರೀನ ವಾಪಸ್ ಚಿತ್ರದುರ್ಗಕ್ಕೆ ಕಳಿಸಬೇಕು... ಮೊದ್ಲು ಅವರ ಯೋಚನೆ ತಪ್ಪಬೇಕಾಗಿದೆ..."

"ಯಾಕೆ ಈಗ್ಲೆ ಒಂದು ಟೆಲಿಗ್ರಾಂ ಕೊಟ್ಟರಾಯ್ತು ಅಥವಾ ನಿಮ್ಮನೇ ಹತ್ರದಲ್ಲಿ ಯಾರ್‍ದಾದರೂ ಫೋನ್ ಇದ್ರೆ ಹೇಳು..."-

"ಟೆಲಿಗ್ರಾಂ ಕೊಡೋದೇ ವಾಸಿ... ಫೋನ್ ಹತ್ತಿರ ಯಾವ್ದೂ ಇಲ್ಲ..."-ಎನ್ನುತ್ತಾ ವಾಸುದೇವಯ್ಯ ಕೈಕಾಲು ತೊಳೆಯಲು ಬೀದಿ ಬಾಗಿಲಿಗೆ ಬಂದರು.

ರವಿ ಮನೆಯೊಳಕ್ಕೆ ಪ್ರವೇಶಿಸುತ್ತಿದ್ದ ಹಾಗೇ ವಾಸುದೇವಯ್ಯನವರ ಭೇಟಿಯಾಯ್ತು-

"ನೀನು ಗುಂಡನ ಮಗ ಅಲ್ವೆ? ನಿನ್ನ ಹೆಸರೂ..."

"ರವಿ ಅಂತ... ಯಾವಾಗ ಬಂದ್ರಿ ಸಾರ್?"

"ಇದೇ ತಾನೇ ಬರ್‍ತಾ ಇದೀನಪ್ಪ..." ವಾಸುದೇವಯ್ಯ ರವಿಯನ್ನೇ ತದೇಕವಾಗಿ ನೋಡುತ್ತಾನಿದ್ದರು. ಸುಧಾಳಿಗೆ ತಕ್ಕ ವರ ಎಂದುಕೊಂಡಿರಬೇಕು.

ಗುಂಡೂರಾಯರು ರವಿಗೆ, ಚಿತ್ರದುರ್ಗಕ್ಕೆ ಟೆಲಿಗ್ರಾಂ ಮಾಡುವಂತೆ ಹೇಳಿದರು.

ವಾಸುದೇವಯ್ಯನವರು ಯಾಂತ್ರಿಕವಾಗಿ ಕುರ್ಚಿಯಲ್ಲಿ ಕುಳಿತು, ಸುಧಾ ಬಗ್ಗೆ ವಿವರಗಳನ್ನು ತಿಳಿಯುವ ಕುತೂಹಲದಿಂದ ಗುಂಡೂರಾಯರ ಮುಖವನ್ನೇ ನೋಡುತ್ತಿದ್ದರು. ನರಹರಿಯೂ ಅಲ್ಲೇ ಇದ್ದ. ಮತ್ತೊಂದು ಕುರ್ಚಿಯಲ್ಲಿ ಕುಳಿತು, ರಾಯರಿಂದ ಬರಬಹುದಾದ ಮಾತುಗಳನ್ನು ನಿರೀಕ್ಷಿಸತೊಡಗಿದ. ಗುಂಡೂರಾಯರಿಗೂ ಇಬ್ಬರ ಕುತೂಹಲ, ಉದ್ವೇಗಗಳು ಅರ್ಥವಾದವು-ಅಷ್ಟರಲ್ಲಿ ಕಮಲಮ್ಮನವರು ಉಪಹಾರದ ತಟ್ಟೆಗಳನ್ನು ತಂದು ಅತಿಥಿಗಳ ಮುಂದಿಟ್ಟರು.

"ನಿಧಾನವಾಗಿ ತಗೋ ವಾಸು.... ಎಲ್ಲಾ ಹೇಳ್ತೀನಿ"-ಎಂದರು ರಾಯರು,

"ಅದೇನೋ ಸಮಾಚಾರ ಮೊದಲು ಹೇಳು ಗುಂಡ... ನಂಗೆ ಊಟ, ತಿಂಡಿ, ನಿದ್ದೆ ಯಾವ್ದೂ ಬ್ಯಾಡವಾಗಿದೆ."

ಬಹಳ ಬಲವಂತ ಮಾಡಿದ ಮೇಲೆ ವಾಸುದೇವಯ್ಯ, ನರಹರಿ, ಇಬ್ಬರೂ ತಮ್ಮ ಮುಂದಿದ್ದ ತಟ್ಟೆಗಳಿಗೆ ಕೈಹಾಕಿದರು.

"ಸುಧಾ ಆ ದಿನವೇ ಇಲ್ಲಿಗೆ ಬಂದಳಂತೆ..."-ಎಂದು ಆರಂಭಿಸಿದ ರಾಯರು, ರವಿ ತಮಗೆ ತಿಳಿಸಿದಷ್ಟನ್ನು ಆದಷ್ಟು ಎಚ್ಚರಿಕೆಯಿಂದ ಮಾರ್ಪಡಿಸಿ ವಿವರಿಸಿದರು–

"ಆ ವಿಜಯ ಅನ್ನೋ ವ್ಯಕ್ತಿ ನಿಂಗೆ ಪರಿಚಯ ವಿರಬೇಕು... ನಿನ್ನ ಸಂಬಂಧವೂ ಇದ್ದೀತು-ಅಂತ ನಾನು ಅಂದ್ಕೊಂಡಿದ್ದೆ... ಅವನ ಜೊತೆಗೇ ನೀನು ಸುಧಾನ್ನ ಇಲ್ಲಿಗೆ ಕಳಿಸಿರಬಹುದೂಂತ ಮಾಡಿದ್ದೆ..."

ವಾಸುದೇವಯ್ಯ ತಿಂಡಿ ತಿನ್ನುವುದನ್ನು ಬಿಟ್ಟು ದಿಗ್ಭ್ರಾಂತರಾಗಿ ಕುಳಿತಿದ್ದರು. ತಡೆ ತಡೆದು ಅವರಿಂದ ಅನೇಕ ನಿಟ್ಟುಸಿರುಗಳು ಹೊರಬಿದ್ದವು. ಯಾವುದೋ ಮರಣಾಂತಿಕ ಯಾತನೆಯನ್ನನುಭವಿಸುವವರಂತೆ ಚಡಪಡಿಸತೊಡಗಿದರು. ನರಹರಿಯ ಮುಖದಲ್ಲಿ ಕ್ರೌರ್ಯ, ಸಿಟ್ಟುಗಳು ಮನೆ ಮಾಡತೊಡಗಿದವು. ಅವನೇ ಮೊದಲು ಬಾಯಿಬಿಟ್ಟ.

"ಅವನ್ಯಾವನೋ ಆ ವಿಜಯ ಅನ್ನೋನು? ಬೇಕೂಫ... ಅವನ ಮೇಲೆ ಪೋಲೀಸ್ ಕಂಪ್ಲೆಂಟ್ ಕೊಡ್ತೀನಿ"-ಎಂದು ಹಲ್ಲುಕಡಿದ ನರಹರಿ.

ತಕ್ಷಣವೇ ಲಾಯರ್ ಹುದ್ದೆಯಲ್ಲಿ ಪಳಗಿದ್ದ ಗುಂಡೂರಾಯರು ಅವನನ್ನು ಸಮಾಧಾನ ಪಡಿಸುತ್ತಾ–"ಛೆ...ಛೆ! ಹಾಗೆಲ್ಲ ದುಡುಕಬಾರದಯ್ಯ... ಮೊದಲು ಸುಧಾ ಏನು ಹೇಳ್ತಾಳೆ ಅನ್ನೋದನ್ನು ಕೇಳಿ ಆಮೇಲೆ ಮುಂದುವರಿಯೋದು ಹಿತ... ಅವಳೇನೂ ಎಳೇ ಮಗು ಅಲ್ಲ... ಮೆಜಾರಿಟಿಗೆ ಬಂದಿರೋ, ದುಡಿಯೋ ಹುಡುಗಿ; ಅಲ್ದೆ... ಇಂಥ ವಿಚಾರಗಳೆಲ್ಲ ಪೋಲೀಸ್, ಕೋರ್ಟು ಅಂತ ಈ ಮಟ್ಟಕ್ಕೆ ಹೋದ್ರೆ ಮರ್ಯಾದೆ ಮೂರುಕಾಸಿಗೂ ಕಡೆಯಾಗುತ್ತೆ..."–ಎಂದರು.

ವಾಸುದೇವಯ್ಯನವರ ಮುಖದಲ್ಲಿ ಎಂಥದೋ ಭೀತಿಯ ಛಾಯೆ ಮೂಡಿತು... ಹಾಗೆಯೇ ಅವರ ಕಣ್ಣಂಚಿನಿಂದ ಎರಡು ಹನಿ ಉದುರಿದುದನ್ನು ಗುಂಡೂರಾಯರು ಗಮನಿಸಿದರು. ರಾಯರಿಗೂ ಅಸಾಧ್ಯ ತಳಮಳವಾಯಿತು.

"ನಮ್ಮ ವಂಶ ಅಂದ್ರೆ... ಇಡೀ ಜಿಲ್ಲೆಗೇ ಅಷ್ಟೊಂದು ಹೆಸರಾದ್ದು... ಗುಂಡಾ... ನೀನು ಹೇಳೋದೆಲ್ಲ ಕೇಳಿದ್ರೆ ನಾನಿನ್ನೂ ಈ ಭೂಮಿಯ ಮೇಲೆ ಯಾಕೆ ಬದುಕಿದೀನಿ ಅನ್ನೋ ಹಾಗೆ ಆಗತ್ತೆ... ಎಲ್ಲಿ ಆ ಚಂಡಾಲಿ ಇರೋ ಮನೆ? ಅದನ್ನಾದರೂ ತೋರ್ಸು... ಸೀದಾ ಹೋಗಿ ಅವಳ ಕತ್ತು ಹಿಚುಕಿ, ನಾನೂ ವಿಷ ತಗೊಂಡು ಪ್ರಾಣಾ ಬಿಡ್ತೀನಿ"-

"ಛೆ! ಛೆ! ಬಿಡ್ತು ಅನ್ನು... ಈ ವಿಚಾರಗಳನ್ನೆಲ್ಲ ಇಷ್ಟೊಂದು ಗುಲ್ಲೆಬ್ಬಿಸೋದು ಚೆನ್ನಾಗಿರೋಲ್ಲ... ಮೊದ್ಲು ಉಪಾಹಾರ ತಗೋ"-ಎಂದು ರಾಯರು ವಾಸುದೇವಯ್ಯನನ್ನು ಸಮಾಧಾನ ಪಡಿಸಲೆತ್ನಿಸಿದರು. ವಾಸುದೇವಯ್ಯ ಏನನ್ನೂ ತೆಗೆದುಕೊಳ್ಳಲಿಲ್ಲ. ನರಹರಿಯೂ ಉಪಹಾರವನ್ನು ಮುಟ್ಟಲಿಲ್ಲ.



"ಹ್ಯಾಗಾದ್ರೂ ಆಗ್ಲಿ ಸಾರ್. ಈಗ ನಾವು ಅವಳಿರೋ ಮನೆಗೇ ಹೋಗ್ತೀವಿ... ಸ್ವಲ್ಪ ದಯವಿಟ್ಟು ಆ ಮನೆ..."-ಎಂದು ನರಹರಿ ಕೇಳುತ್ತಿರುವಷ್ಟರಲ್ಲಿಯೇ ರವಿ ಒಳಕ್ಕೆ ಬಂದ... ಅವನ ಹಿಂದೆಯೇ ಸುಧಾ ಬಂದಳು... ಜೊತೆಗೇ ವಿಜಯನೂ ಒಳಕ್ಕೆ ಕಾಲಿಡುವುದನ್ನು ಎಲ್ಲರೂ ಗಮನಿಸಿದರು.

ಎಲ್ಲರೂ ಅರೆಕ್ಷಣ ಮೌನವಾಗಿ ನಿಂತಿದ್ದು, ಪರಸ್ಪರ ನೋಡತೊಡಗಿದರು.

"ನಾನೇ ವಿಜಯ್... ಈ ಊರಿನ ಗರ್ಲ್ಸ್ ಹೈಸ್ಕೂಲಿಗೆ ವರ್ಗವಾಗಿ ಬಂದಿರೋ ಮೇಷ್ಟ್ರು..."-ಎಂದು ವಿಜಯನೇ ತನ್ನ ಪರಿಚಯ ಹೇಳಿಕೊಂಡ.

ನರಹರಿಯ ಮುಖ ಗಂಟಾಯಿತು- ವಾಸುದೇವಯ್ಯನವರು ಸುಧಾಳ ಮುಖವನ್ನೇ ದೃಷ್ಟಿಸಿ ನೋಡತೊಡಗಿದರು. ಮುಂದೆ ಏನಾದರೂ ಅನರ್ಥ ಸಂಭವಿಸಬಹುದೆಂಬ ಶಂಕೆಯಿಂದ ಗುಂಡೂರಾಯರು ತಕ್ಷಣ ಬಾಯಿಬಿಟ್ಟರು–

"ಅದೆಲ್ಲ ಇರ್ಲಿ... ಈಗ ವಾಸುದೇವಯ್ಯ ಸುಧಾ ಜೊತೆಗೆ ಸ್ವಲ್ಪ ಮಾತಾಡಬೇಕಾಗಿದೆ... ಅವರಿಬ್ರೆ ಆದ್ರೆ ಅವರಿಗೂ ಅನುಕೂಲ... ನಮಗೂ ಸಂಕೋಚ ವಿರೋದಿಲ್ಲ... ನಮ್ಮ ಮನೆ ಮುಂದಿರೋ ಕೋಣೇಲಿ ಈಗ ಅವರಿಬ್ರೂ ಸೇರಿದ್ರೆ–ಒಳ್ಳೇದಲ್ವೇ?"

ಗುಂಡೂರಾಯರ ಸಲಹೆ ಸಂದರ್ಭೋಚಿತವಾಗಿತ್ತು. ರವಿ, ನರಹರಿ, ವಿಜಯ, ಗುಂಡೂರಾಯರು- ಎಲ್ಲರೂ ಅಲ್ಲಿದ್ದ ಕುರ್ಚಿಗಳಲ್ಲಿ ಕುಳಿತರು. ವಾಸುದೇವಯ್ಯ ಮಗಳೊಂದಿಗೆ ಮುಂದಿನ ಕೋಣೆಗೆ ಹೋದರು.

× × ×

"ಛೀ ಚಂಡಾಲೀ... ನಾನು ನಿನಗೆ ಬೊಗಳಿದ್ದೇನು? ನೀನು ಮಾಡಿದ್ದೇನು?" ಕೋಣೆಯ ಬಾಗಿಲನ್ನು ಭದ್ರಪಡಿಸಿದ ವಾಸುದೇವಯ್ಯನವರ ಬಾಯಿಂದ ಬಂದ ಮೊದಲ ಮಾತೇ ಈ ಸ್ವರೂಪದ್ದಾಗಿತ್ತು.

ಸುಧಾ ಒಂದು ಕ್ಷಣ ಸುಮ್ಮನೆ ತಂದೆಯನ್ನು ನಿಟ್ಟಿಸಿದಳು–ವಾಸುದೇವಯ್ಯನ ಮುಖ ಸಿಟ್ಟಿನಿಂದ ಕುದಿಯುತ್ತಿತ್ತು. ತಂದೆಯ ಕೋಪದ ಸ್ವರೂಪವೇನೆಂದು ಚೆನ್ನಾಗಿ ಬಲ್ಲ ಅವಳಿಗೆ, ವಿಜಯ, ಅವನ ವೈಚಾರಿಕತೆ, ಉದಾತ್ತತೆ, ಭಾವೋದ್ವೇಗವಿಲ್ಲದ ವರ್ತನೆ ಎಲ್ಲವೂ ಮರೆತು ಹೋಗಿ, ತಾನು ಒಬ್ಬ ಅಸಹಾಯಕ ಹೆಣ್ಣೆಂಬ ಅರಿವು ನೆತ್ತಿಯ ಮೇಲೆ ಹೊಯ್ದಾಡಿತು.

"ಬಿಡೇ ನಿನ್ನ ಹಾಳು ಬಾಯನ್ನು!" ಎಂದು ಅರಚಿದರು ವಾಸುದೇವಯ್ಯ. ಅವರು ಕೂಗಿದುದು ಮನೆಯ ಹಜಾರದಲ್ಲಿದ್ದವರಿಗೆಲ್ಲ ಕೇಳಿಸಿತು. ಗುಂಡೂರಾಯರು ಮೇಲೆದ್ದರು. ವಿಜಯನೂ ಮೇಲೆದ್ದು ನಿಂತು ಎರಡು ಹೆಜ್ಜೆ ಮುಂದೆ ಇಟ್ಟ. ನರಹರಿಯೂ ಮೇಲೇಳುತ್ತಾ, ವಿಜಯನನ್ನು ಹಿಡಿದು ಎರಡು ಬಾರಿಸುವ ಸನ್ನಾಹದಲ್ಲಿದ್ದಾಗ ರವಿ ಅವರಿಬ್ಬರಿಗೂ ಮಧ್ಯೆ ಬಂದ.

"ಪ್ರಾಯಶಃ ನಿಮಗಾರಿಗೂ ನಿಜ ಸ್ಥಿತಿಯ ಅರಿವಿಲ್ಲ... ಈಗ ನಾನು ಅನಿವಾರ್ಯವಾಗಿ ಸುಧಾರವರ ತಂದೆಯ ಬಳಿ ಮಾತನಾಡಬೇಕು..."ಎನ್ನುತ್ತಾ ವಿಜಯ ಮತ್ತೂ ನಾಲ್ಕು ಹೆಜ್ಜೆ ಮುಂದಿಟ್ಟ.

"ನಿನ್ನನ್ನು ಸೀಳಿ ಹಾಕಿದ್ರೂ ನನ್ನ ಸಿಟ್ಟು ಇಳಿಯೋಲ್ಲ!" ಎಂದು ಮತ್ತೆ ವಾಸುದೇವಯ್ಯ ಅಬ್ಬರಿಸಿದರು– ಗುಂಡೂರಾಯರು ಒಂದೇ ಹಾರಿಕೆಗೆ ಮುಂದಿನ ಕೋಣೆಯ ಬಾಗಿಲನ್ನು ಬಡಿಯ ತೊಡಗಿದರು. ಎರಡು ನಿಮಿಷಗಳಲ್ಲಿ ಬಾಗಿಲು ತೆರೆದ

ಸದ್ಾ ಬಿಟ್ಟು... ಮಿಂಚಿನವೇಗದಲ್ಲಿ ವಿಜಯ ಒಳಕ್ಕೆ ಹೋದ.

"ನಿಮ್ಮ ಮಗಳಿಂದ ಯಾವ ವಿವರವನ್ನು ಅಪೇಕ್ಷಿಸುತ್ತೀರಿ? ಹೇಳಿ. ನಾನು ಹೇಳ್ತೀನಿ"-ಎಂದ ವಿಜಯನನ್ನು ನುಂಗುವಂತೆ ನೋಡುತ್ತಾ-"ಬದ್ಮಾಶ್... ಪೋಲಗಾಟಿ... ನನ್ನ ಮಗಳನ್ನು ನಾನು ಏನು ಬೇಕಾದ್ರೂ ಕೇಳ್ತೀನಿ... ಮಧ್ಯೆ ಬಾಯಿ ಹಾಕೋದಕ್ಕೆ ನೀನ್ಯಾರೋ?"-ಎಂದರು ವಾಸುದೇವಯ್ಯ. ವಿಜಯ ಅಷ್ಟೇ ಶಾಂತವಾಗಿ- "ನಾನು ಸುಧಾ ರವರ ಸ್ನೇಹಿತ... ಅಲ್ದೆ ಒಂದೇ ಶಾಲೆಯಲ್ಲಿ ಕೆಲ್ಸ ಮಾಡ್ತಾ ಇದೀವಿ... ಸುಧಾ ಈಗ ಅರ್ನಿಂಗ್ ಮೆಂಬರ್... ದುಡೀತಿದಾರೆ. ಅವರಿಗೆ ವ್ಯಕ್ತಿಸ್ವಾತಂತ್ರ್ಯ ಇದೆ..." ಎಂದ.

"ಹೌದಪ್ಪಾ ನಾನೀಗ ಎಳೇ ಮಗು ಅಲ್ಲ ಅದೇನು ಬೇಕೋ ಕೇಳು ನಾನೇ ಹೇಳ್ತೀನಿ ಬೇಗಬೇಗ ಮುಗಿಸು ನಿನ್ನ ಪ್ರಶ್ನೇನಾ ನಾನಿನ್ನೂ ಸ್ಕೂಲಿಗೆ ಹೋಗ್ಬೇಕು." ವಾಸುದೇವಯ್ಯ ಕ್ಷಣಕಾಲ ಸ್ತಂಭೀಭೂತರಾದರು. ಸುಧಾಳ ಬಾಯಿಂದ ಈ ಮಾತುಗಳು ಬರಬಹುದೆಂದು ಅವರು ನಿರೀಕ್ಷಿಸಿರಲಿಲ್ಲ.

"ಈಗ ನೀವ್ಯಾರೂ ಇಲ್ಲಿರಬೇಡಿ.. ನಾನೇ ಅಪ್ಪನಿಗೆ ಎಲ್ಲಾ ವಿಚಾರಾನೂ ಹೇಳ್ತೀನಿ ನೀವು ದಯವಿಟ್ಟು ಹೊರಗೆ ಹೋಗಿ." ಎನ್ನುತ್ತಾ ಸುಧಾ ವಿಜಯನನ್ನು ಗುಂಡೂರಾಯನನ್ನು ಹೊರಕ್ಕೆ ಕಳಿಸಿ ಬಾಗಿಲು ಮುಚ್ಚಿ ಬೋಲ್ಟ್ ಹಾಕಿದಳು.

ಆಮೇಲೆ, ತಲೆಯ ಮೇಲೆ ಕೈಹೊತ್ತು ಕುಳಿತ ವಾಸುದೇವಯ್ಯನಿಗೆ ತಾನು ಆ ದಿನ ಬಸ್‌ಸ್ಟ್ಯಾಂಡಿನಲ್ಲಿಳಿದಾರಭ್ಯ ನಡೆದ ಸಮಸ್ತ ಘಟನೆಗಳನ್ನು ಚಾಚೂ ತಪ್ಪದೆ ವರದಿಮಾಡಿದಳು. ವಾಸುದೇವಯ್ಯ ಎಲ್ಲವನ್ನೂ ಕೇಳಿದರೋ ಇಲ್ಲವೋ... ಸುಧಾ ತನ್ನ ವರದಿಯನ್ನು ಪೂರೈಸಿದ ಮೇಲೆ, ಅವರು ನಿಟ್ಟುಸಿರೊಂದನ್ನು ಹೊರಚೆಲ್ಲಿದರು.

"ಹಾಗಾದ್ರೆ...ನೀನು ಹೇಳೋದೆಲ್ಲ ನಿಜವಾ?"

"ಇರೋ ವಿಚಾರನೆಲ್ಲ ಹೇಳಿದೀನಿ... ಅದನ್ನು ನಂಬೋದು ಬಿಡೋದು ಎಲ್ಲಾ ನಿನಗೆ ಸೇರಿದ್ದು... ಅಥ್ವಾ ನೀನು ನಂಬಲಿ ಅನ್ನೋ ಉದ್ದೇಶವೂ ನನಗಿಲ್ಲ..."

"ಅಂದ್ರೆ... ನೀನು ಆ ವಿಜಯನ ಜೊತೆಗೇ ಇರ್ತೀಯಾ?"-

"ಹೌದು... ಹಾಗಂತ ತೀರ್ಮಾನ ಮಾಡಿದೀನಿ. ಆತನಿಂದ ನಾನು ಇನ್ನೂ ಕಲೀಬೇಕಾದ್ದು ಬೇಕಾದಷ್ಟಿದೆ..."

ವಾಸುದೇವಯ್ಯನವರಿಗೆ ಸುಧಾಳ ಹೇಳಿಕೆಯಿಂದ ಕೆಲಮಟ್ಟಿಗೆ ಸಮಾಧಾನವಾದರೂ ಹಲವಾರು ಯೋಚನೆಗಳು ಅವರನ್ನು ಕಾಡುತ್ತಿದ್ದವು.

"ಸುಧಾ... ನೀನು ಹೇಳೋ ಹಾಗೆ ಆ ವಿಜಯ ನಿಜವಾಗಿಯೂ ಯೋಗ್ಯನೇ ಇರಬಹುದು... ನೋಡಿದರೆ ಹಾಗೇ ಕಾಣ್ತಾನೆ. ಆದರೆ... ನನ್ನ ಮನಸ್ನಲ್ಲಿ ಏನೋ ಬೇರೆ ಯೋಚ್ನೆ ಇತ್ತು. ಗುಂಡನ ಮನೆಗೇ ನಿನ್ನ ಕೊಡೋ ಆಲೋಚನೆ ಮಾಡಿದ್ದೆ... ತಾನಾಗಿ ದೇವ್ರು ಅಂಥ ಅವಕಾಶನೂ ಕೊಟ್ಟಿದ್ದ. ಈಗಲಾದ್ರೂ ನೀನು ಗುಂಡನ ಮನೇಲಿ ಇದ್ದುಕೊಂಡು, ವಿಜಯನ ಸ್ನೇಹ ಉಳಿಸ್ಕೋಬಹುದಲ್ಲ. ಹೇಗೂ ಇಬ್ರೂ ಒಂದೇ ಸ್ಕೂಲ್ನಲ್ಲಿದೀರಿ. ಒಟ್ಟಾಗಿ ಒಂದೇ ಮನೇಲಿ ಯಾಕೆ ವಾಸಮಾಡ್ಬೇಕು?"

ಸುಧಾ ಕ್ಷಣ ಹೊತ್ತು ಯೋಚಿಸಿದಳು. ತನ್ನ ತಂದೆ ಹೇಳುತ್ತಿರುವುದರಲ್ಲಿ ತಥ್ಯವಿಲ್ಲದೆ ಇಲ್ಲವೆಂದು ಅವಳಿಗೂ ಅನ್ನಿಸಿತು. ರವಿಯ ಬಗ್ಗೆ ತನಗೂ ಸಹ ಆಕರ್ಷಣೆ ಇರುವ ವಿಷಯವೂ ತಂದೆಯ ಸಲಹೆಗೆ ಪುಷ್ಟಿ ನೀಡಿತು. ಅಳೆದೂ ಹೊಯ್ದೂ ಕೊನೆಗೆ-

"ಆಗಲಿ ಅಪ್ಪಾ. ನೀವು ಹೇಳಿದಂತೆ ಇರೋಕ್ಕೆ ನನ್ನ ಅಭ್ಯಂತರವೇನೂ ಇಲ್ಲ"-ಎಂದು ತನ್ನ ಒಪ್ಪಿಗೆ ಸೂಚಿಸಿದಳು. ಇಬ್ಬರೂ ಕೋಣೆಯ ಬಾಗಿಲನ್ನು ತೆರೆದು ಹೊರಬಂದಾಗ ಇಬ್ಬರ ಮುಖದಲ್ಲೂ ಸಮಾಧಾನವಿತ್ತು.

ವಾಸುದೇವಯ್ಯ ಹಜಾರವನ್ನು ಪ್ರವೇಶಿಸಿ- "ಗುಂಡ... ಏನೋ ಒಂದು ಸಮಾಧಾನದ ತೀರ್ಮಾನವಾದ ಹಾಗಾಯ್ತಪ್ಪ...ಸ್ವಲ್ಪ ಈ ವಿಜಯನ ಜೊತೆಗೆ ಪ್ರೈವೇಟಾಗಿ ಮಾತಾಡಬೇಕಾಗಿತ್ತು..." ಎಂದರು. ವಿಜಯ ಸಿದ್ಧನಾಗಿ ಎದ್ದು ನಿಂತು ವಾಸುದೇವಯ್ಯನನ್ನು ಹಿಂಬಾಲಿಸಿದ.

"ಸುಧಾ ನಿಮ್ಮ ವಿಚಾರವಾಗಿ ಎಲ್ಲ ಹೇಳಿದ್ದಾಳೆ... ನಿಮ್ಮ ವರ್ತನೆ ಕಂಡು ನನಗೂ ಭಾಳಾ ಸಂತೋಷವಾಯ್ತು... ಅವಳ ಭವಿಷ್ಯ ಜೀವನದ ಬಗ್ಗೆ ಕೆಲವು ವಿಚಾರ ನಿಮ್ಮ ಹತ್ರ ಮಾತಾಡಬೇಕಾಗಿತ್ತು"-ಎಂದರು ವಾಸುದೇವಯ್ಯ.

"ಅಗತ್ಯವಾಗಿ ಮಾತಾಡಿ..."

"ಗುಂಡೂರಾಯನೂ ನಾನೂ ಬಾಲ್ಯ ಸ್ನೇಹಿತರು... ಈ ಸ್ನೇಹ, ಬಾಂಧವ್ಯದಲ್ಲಿ ಪರ್ಯವಸಾನವಾಗ್ಲೀ ಅಂತ ನನ್ನ ಆಸೆ... ರವೀಗೆ ಸುಧಾನ್ನ ಕೊಡಬೇಕು ಅನ್ನೋ ದೃಷ್ಟಿಯಿಂದ ಅವಳನ್ನು ಇವರ ಮನೇಲಿರೋದಕ್ಕೆ ನಾನೇ ಏರ್ಪಾಟು ಮಾಡಿದ್ದೆ... ಈಗಲೂ ಸುಧಾ ಈ ಗುಂಡನ ಮನೇಲಿ ಇದ್ರೆ ನಿಮ್ಮ ಸ್ನೇಹಕ್ಕೆ ಇದರಿಂದ ಯಾವ ಚ್ಯುತಿಯೂ ಬರಲಾರದಷ್ಟೆ!"-

"ಖಂಡಿತ ಹಾಗೇ ಆಗ್ಲಿ ಸ್ವಾಮಿ... ಸುಧಾ ನನ್ನ ಸ್ನೇಹಿತರೇ ಹೊರತು ಇನ್ನೇನೂ ಅಲ್ಲ... ಅವರು ಎಲ್ಲಿದ್ರೂ ನನ್ನ ಸ್ನೇಹಿತರೇ... ಅಲ್ದೆ, ರವಿ ಸಹ ನನ್ನ ಕ್ಲಾಸ್‌ಮೇಟು. ಅವರಿಬ್ರೂ ಮದುವೆಯಾಗೋದು ನನಗೂ ತುಂಬ ಸಂತೋಷದ ವಿಚಾರ"

ವಾಸುದೇವಯ್ಯನವರಿಗೆ ಬಹಳ ಸಂತೋಷವಾಯಿತು. ವಿಜಯನನ್ನು ತಬ್ಬಿಕೊಂಡರು. ಆದರೆ, ವಿಜಯನಿಂದ ಪ್ರತಿಕ್ರಿಯೆಯೇನೂ ಬರಲಿಲ್ಲ.

ಇಬ್ಬರೂ ಕೋಣೆಯಿಂದ ಹೊರಬಿದ್ದಾಗ, ಕದಡಿದ ವಾತಾವರಣ ತಿಳಿಯಾಗಿತ್ತು... ಗಂಟೆ ಹತ್ತೂ ಮುಕ್ಕಾಲಾದ್ದರಿಂದ ವಿಜಯ, ರವಿ, ಸುಧಾ, ಮೂವರೂ ಬೇಗ ಬೇಗ ಅಲ್ಲಿಂದ ಹೊರಟರು.

■ ■ ■

ಊಟವಾದ ನಂತರ ತಾಂಬೂಲ ಮೆಲ್ಲುತ್ತಾ- "ಗುಂಡಾ... ನನಗೆ ದಿಗ್ಭ್ರಾಂತಿಯಾಗಿತ್ತು. ಸುಧಾ ವಿಚಾರ ಕೇಳಿ, ಆದ್ರೆ, ಅವಳು ಎಲ್ಲ ಹೇಳಿದಳು... ಪಾಪ. ಆತ ಎಂಥಾ ದೊಡ್ಡಮನುಷ್ಯ ಅಂತೀ..." ಎಂದರು ವಾಸುದೇವಯ್ಯ.

ವಿಜಯನ ಬಗೆ ಯಾವ ಮಾಹಿತಿಯೂ ಇಲ್ಲದ ಗುಂಡೂರಾಯರು, ಕುತೂಹಲದಿಂದ ಹುಬ್ಬೇರಿಸುತ್ತಾ-"ಸುಧಾ ಏನು ಹೇಳಿದಳು?" ಎಂದರು.

ವಾಸುದೇವಯ್ಯ ತಾವು ಸುಧಾಳಿಂದ ಕೇಳಿದ ವಿವರಗಳನ್ನು ಚಾಚೂ ತಪ್ಪದೆ ವಿವರಿಸಿದರು.ಕೊನೆಗೆ ತಮ್ಮ ಮನಸ್ಸಿನಲ್ಲಿ ಕೊರೆಯುತ್ತಿದ್ದ ಮಹತ್ವಾಕಾಂಕ್ಷೆಯನ್ನು ಹೇಳಿ "ಆದ್ದರಿಂದ ಸುಧಾ ನಿಮ್ಮ ಮನೇಲೇ ಇರ್‍ಲಿ... ಗುಂಡಾ... ಇದಕ್ಕೆ ಸುಧಾನೂ ಒಪ್ಪಿದ್ದಾಳೆ... ವಿಜಯ್ ಭಾಳಾ ಸಂತೋಷ ಪಟ್ಟಿದ್ದ" ಎಂದರು.

ಗುಂಡೂರಾಯರು ಕೂಡಲೇ ಯಾವ ಮಾತನ್ನೂ ಆಡಲಿಲ್ಲ. ಆದರೆ, ಅವರ ಮುಖದಲ್ಲಿ, ವಾಸುದೇವಯ್ಯನ ಸಲಹೆ ತೃಪ್ತಿ ನೀಡಿದಂತೆ ಕಾಣಲಿಲ್ಲ. ವಾಸುದೇವಯ್ಯ ಕಾತುರರಾಗಿ ರಾಯರ ಮುಖವನ್ನೇ ದಿಟ್ಟಿಸಿ"ಯಾಕೆ ಗುಂಡಾ... ನನ್ನ ಅಭಿಪ್ರಾಯ ನಿಂಗೆ

ಸರಿ ಬರ್ರಿಲ್ವೆ?"—ಎಂದದ್ದು ಕೇಳಿ, ರಾಯರು ಒಮ್ಮೆ ಬಲವಾಗಿ ಆಕಳಿಸಿ—"ಅಲ್ಲಪ್ಪಾ—ಸುಧಾ ಆ ವಿಜಯನ ಜೊತೇಲಿ ಮೂರು ದಿನ ಹಗಲೂ ರಾತ್ರಿ ಕಳೆದಿದಾಳೆ... ಇನ್ನು ಅವಳು ಹೇಳೋ ಮಾತು ಎಷ್ಟರ ಮಟ್ಟಿಗೆ ನಿಜ ಇರಬಹುದು? ಅದೆಲ್ಲ ಅವಳ ಹೇಳಿಕೆ ತಾನೆ? ಸತ್ಯವನ್ನು ಕಂಡೋನು ಯಾವನೂ ಇಲ್ಲ..." ಎನ್ನುತ್ತಾ ನಿಲ್ಲಿಸಿದರು.

"ಅಂದ್ರೆ, ಅವರಿಬ್ಬರಲ್ಲೂ ಏನೋ ನಡೀ ಬಾರದ್ದು ನಡೆದು ಹೋಗಿದೆ ಅಂತ್ಲೇ ನೀ ಹೇಳೋದು?"

"ಹಾಗಲ್ಲ... ಒಂದ್ವೇಳೆ ನಡೀದೇ ಇದ್ರೂ ಇರಬಹುದು... ನಡೆದಿದ್ರೂ ನಡೆದಿರಬಹುದು. ಅಂತೂ ಮೂರು ದಿನ ಅವರು ಒಟ್ಟಿಗೆ ಬಾಳಿದಾರೆ... ಕಂಡೂ ಕಂಡೂ... ಸುಧಾನ್ನ ನನ್ನ ಈ ಮನೇಲಿ ನಾನು ಹ್ಯಾಗೆ ಇಟ್ಕೊಳ್ಳಿ? ಒಂದ್ವೇಳೆ ನಾನೊಪ್ಪಿದ್ರೂ, ಇವ ಳಂತೂ ಖಂಡಿತಾ ಇದಕ್ಕೆ ಒಪ್ಪಲ್ಲ."

ವಾಸುದೇವಯ್ಯನವರಿಗೆ ಮತ್ತೆ ಚಿಂತೆ ಕವಿಯಿತು. ಹೌದು... ವ್ಯಾವಹಾರಿಕವಾಗಿ ಯೋಚಿಸಿದಾಗ, ಸುಧಾಳನ್ನು ಗುಂಡೂರಾಯರು ಹೇಗೆ ತಾನೇ ತಮ್ಮ ಮನೆಯಲ್ಲಿಟ್ಟುಕೊಳ್ಳಬಲ್ಲರು? ಅವರು ತುಂಬ ಮರ್ಯಾದೆಯುಳ್ಳ ಕುಟುಂಬದವರು. ಅವರಿಗಿಂತಲೂ ಒಂದು ಕೈ ಹೆಚ್ಚಾಗಿ ಕಮಲಮ್ಮನವರು ತೀರಾ ಸಂಪ್ರದಾಯಸ್ಥೆ. ಇಂತಹ ಪರಿಸ್ಥಿತಿಯಲ್ಲಿ ತಾವು ಅವರನ್ನು ಈ ವಿಚಾರವಾಗಿ ಬಲವಂತ ಮಾಡುವಂತಿಲ್ಲ. ಹಾಗಾದರೆ ಸುಧಾ ವಿಜಯನ ಜೊತೆಗೇ ಇರುವುದೇ? ಬೆಳೆದ ಹುಡುಗಿ ಒಂಟಿಯಾಗಿ ತರುಣನೊಬ್ಬನೊಡನೆ ಬರೀ ಸ್ನೇಹಿತರಂತೆ ಇರಲು ಸಾಧ್ಯವೆ? ಜೀವನದ ಹಲವಾರು ಪದರುಗಳನ್ನು ಒಳ ಹೊಕ್ಕುನೋಡಿದ್ದ ವಾಸುದೇವಯ್ಯನವರಿಗೆ ಅದು ಮಾನವನ ಮಿತಿಯಲ್ಲಿ ಸಾಧ್ಯವಿಲ್ಲದ ವಿಚಾರವೆನ್ನಿಸಿತು. ಕ್ಷಣಿಕ ಆವೇಗಕ್ಕೊಳಗಾಗಿ ಮಗಳು ಭವಿಷ್ಯವನ್ನೇ ಹಾಳು ಮಾಡಿಕೊಂಡರೆ? ಈ ಹಾಳು ನೌಕರಿಯನ್ನೇ ಅವಳು ಬಿಟ್ಟರೂ ಚಿಂತೆಯಿಲ್ಲ—ಅಂದೇ ಅವಳಿಂದ ರಾಜೀನಾಮೆಯನ್ನು ಬರೆಯಿಸಿ, ತಮ್ಮ ಜೊತೆಗೇ ಏಕೆ ಸುಧಾಳನ್ನು ಕರೆದೊಯ್ಯಬಾರದು? ಅವಳ ವಿವಾಹದ ಬಗ್ಗೆ ತಾವಿಟ್ಟುಕೊಂಡ ಕನಸಂತೂ ನುಚ್ಚು ನೂರಾಗಿ ಹೋಗಿತ್ತು. ಗುಂಡೂರಾಯರ ಬಾಂಧವ್ಯಕ್ಕೆ ತಿಲಾಂಜಲಿಯನ್ನಿತ್ತ ಹಾಗೇ ಆದ ಬಗ್ಗೆ ವಾಸುದೇವಯ್ಯನವರಿಗೆ ಅತೀವ ವೇದನೆಯಾಗದಿರಲಿಲ್ಲ.

"ನಂದೊಂದು ಸಲಹೆ ವಾಸು..." ರಾಯರು ಚಿಂತಾಪರರಾದ ವಾಸುದೇವಯ್ಯನನ್ನು ಕುರಿತು ಹೇಳಿದಾಗ ವಾಸುದೇವಯ್ಯನಿಗೆ "ಮುಳುಗುವವನಿಗೆ ಹುಲ್ಲು ಕಡ್ಡಿ ಸಿಕ್ಕಿದ ಹಾಗಾಯಿತು. ಕುತೂಹಲದಿಂದ ರಾಯರ ಮುಖವನ್ನು ಪ್ರಶ್ನಾರ್ಥಕವಾಗಿ ದಿಟ್ಟಿಸಿದರು.

"ಈಗ ಹ್ಯಾಗೂ ಸುಧಾ ಆ ವಿಜಯನ ಜೊತೇಲಿದಾಳೆ... ವಿಜಯನ ಪೂರ್ವಾಪರಗಳನ್ನು ವಿಚಾರಿಸಿ, ಅವನಿಗೇ ಅವಳನ್ನು ಕೊಡೋ ಯೋಚ್ನೆ ಯಾಕೆ ಮಾಡಬಾರ್ದು? ಅವನೂ ವಿದ್ಯಾವಂತ... ಕೈತುಂಬ ಸಂಪಾದಿಸ್ತಾ ಇದಾನೆ."

ವಾಸುದೇವಯ್ಯನವರಿಗೆ ಏನೋ ಬೆಳಕು ಕಂಡ ಹಾಗಾಯಿತು. ಹೌದು... ಈ ವಿಚಾರವನ್ನು ತಾವು ಮೊದಲೇ ಏಕೆ ಯೋಚಿಸಲಿಲ್ಲ? ಗುಂಡೂರಾಯರ ಸಲಹೆಯಿಂದ, ಅವರಿಗೆ ಸುಧಾಳನ್ನು ಸೊಸೆಯಾಗಿ ಸ್ವೀಕರಿಸುವ ಇಷ್ಟವಿಲ್ಲವೆಂಬುದಂತೂ ಸುಸ್ಪಷ್ಟವಾಗಿತ್ತು. ಈಗ ಯೋಜನೆಯಂತೆ ಯಾವ ಕಾರ್ಯವೂ ನಡೆದಿಲ್ಲ. ಆದ್ದರಿಂದ ಕಾರ್ಯ ಹೇಗೆ ನಡೆದಿದೆಯೋ ಅದರಂತೆಯೇ ಯೋಚನೆಯನ್ನು ಬದಲಿಸಿಕೊಂಡ ರಾಯಿತು. ಕೊನೆಗೆ ವಾಸುದೇವಯ್ಯ ಏನೋ ನಿರ್ಧಾರಕ್ಕೆ ಬಂದವರಂತೆ—

"ಸರಿ ಗುಂಡಾ... ನೀನು ಹೇಳಿದ ಹಾಗೇ ಇವತ್ತೇ ಸಾಯಂಕಾಲ ಈ ಬಗ್ಗೆ ಏನಾದ್ರೂ ಒಂದು ತೀರ್ಮಾನಕ್ಕೆ ಬರೋಣ ವಾಸಿ... ಇಲ್ಲ ಅಂದ್ರೆ ಸುಧಾ ಈ ಕೆಲಸಾನೇ ಬಿಟ್ಟು ಸುಮ್ನೆ ನನ್ನ ಜೊತೆಗೇ ಊರಿಗೇ ವಾಪಸ್ ಬರ್ಲಿ ಅಷ್ಟೆ."—ಎಂದರು.

"ಛೆ! ಛೆ! ತಾನಾಗಿ ಸಿಕ್ಕ ಕೆಲ್ಸ ಯಾಕೆ ಬಿಡಬೇಕು? ಈಗ ಒಂದು ಉದ್ಯೋಗ ಅಂತ ಸಿಕ್ಕೋದೇ ಕಷ್ಟ... ಎಂಥೆಂಥಾರೋ ಕೆಲ್ಸ ಇಲ್ದೆ ಲಾಟ್ರಿ ಹೊಡಿತಿದಾರೆ... ಅಂಥಾದ್ರಲ್ಲಿ ನಿನ್ನ ಮಗಳಿಗೆ ಸುಲಭವಾಗಿ ಸಿಕ್ಕಿದೆ ಕೆಲ್ಸ... ಅದೂ ಇಂಥ ದೊಡ್ಡ ಊರಿನ ಹೈಸ್ಕೂಲಿಗೆ..."

ರಾಯರು ಹೇಳುವುದೂ ಸರಿ ಎನ್ನಿಸಿತು. ಅವಳು ಸಂಪಾದನೆ ಮಾಡಿದ ಹಣ ಅವಳ ವಿವಾಹಕ್ಕಾದರೂ ಉಪಯೋಗಕ್ಕೆ ಬಂದೀತು...

ಅಷ್ಟರಲ್ಲಿ ಕ್ಷಣ ಹೊತ್ತು ಮಲಗಿ ಮೇಲೆದ್ದ ನರಹರಿ ಅವರನ್ನು ಕೂಡಿಕೊಂಡ... ಅವನಿಗೂ ಈ ಹೊಸ ನಿರ್ಧಾರದ ವಿಷಯ ತಿಳಿಸಿದರು.

"ಅದ್ಸರೀ ಅಪ್ಪಾ... ಈಗ ವಿಜಯ ಒಂದ್ವೇಳೆ ಸುಧಾನ್ನ ಮದ್ವೆಯಾಗೋಕೆ ಒಪ್ಪಿದರೂ ನಮ್ಮ ಸಮಸ್ಯೆ ಬಗೇ ಹರಿದ ಹಾಗಾಗ್ಲಿಲ್ಲ... ಮದುವೇನೂ ತಕ್ಷಣವೇ ಮುಗೀಬೇಕು... ಹಾಗಾದ್ರೆ ಅವರಿಬ್ರೂ ಒಟ್ಟಿಗೇ ಇರೋದ್ರಲ್ಲಿ ಯಾವ ಅಭ್ಯಂತರಾನೂ ಇರೋದಿಲ್ಲ... ಈಗಿರೋ ಹಾಗೇ ಅವರು ಮುಂದುವರಿದು, ಮದುವೇನೂ ನಡೀದಿದ್ರೆ ಮುಂದೆ ಏನಾದ್ರೂ ಆಗಬಾರದ್ದಾಗಿ, ಅವನು ತನ್ನ ಮನಸ್ಸು ಬದ್ಲಾಯಿಸಿ..."

ನರಹರಿಯೂ ಈ ಸಮಸ್ಯೆಗೊಂದು ಹೊಸ ಮುಖ ನೀಡಿದನು. ವಾಸುದೇವಯ್ಯನವರಂತೂ ಈ ಸಮಸ್ಯಾ ಪರಂಪರೆಗಳಿಂದ ಕಂಗಾಲಾಗಿ ಹೋದರು. ಏನು ಮಾಡಬೇಕೆಂಬುದೇ ಬಗೆ ಹರಿಯದೆ ಮೇಲ್ಛಾವಣಿಯತ್ತ ದೃಷ್ಟಿಯಿಟ್ಟು ಕುಳಿತುಬಿಟ್ಟರು.

× × ×

ಸಾಯಂಕಾಲ ವಿಜಯನನ್ನು ಭೇಟಿ ಮಾಡಬೇಕೆಂದು ಸಿದ್ಧವಾಗುತ್ತಿದ್ದರು ವಾಸುದೇವಯ್ಯ, ನರಹರಿ ಮತ್ತು ಗುಂಡೂರಾಯರು. ರವಿ ಇನ್ನೂ ಬಂದಿರಲಿಲ್ಲ—ಅಷ್ಟರಲ್ಲಿ ಸುಧಾ ರಾಯರ ಮನೆಯೊಳಗೆ ಪ್ರವೇಶಿಸಿದಳು... ಅವಳ ಹಿಂದೆಯೇ ವಿಜಯನೂ ಬಂದಿದ್ದ—

"ಬಾ ಸುಧಾ... ಬನ್ನಿ ವಿಜಯ್...ಕೂತ್ಕೊಳ್ಳಿ" ಎನ್ನುತ್ತಾ ರಾಯರು ಇಬ್ಬರನ್ನೂ ಆಹ್ವಾನಿಸಿದರು. ವಾಸುದೇವಯ್ಯನವರಿಗೆ ದಿಕ್ಕು ತೋಚದಂತಾಯಿತು. ತಾವು ವಿಜಯನೊಡನೆ ಆಡಬೇಕಾಗಿದ್ದ ಮಾತುಕತೆಗಳು! ತಾವಿನ್ನೂ ತಮ್ಮ ಮಗಳ ನಿವಾಸವನ್ನು ಈ ವರೆಗೂ ನೋಡಿಲ್ಲ. ಅಲ್ಲಿಯೇ ಈ ಮಾತುಗಳು ನಡೆದಿದ್ದರೆ ಮೇಲು ಎನಿಸಿತ್ತು. ಗುಂಡೂರಾಯರಿಗೆ ವಾಸುದೇವಯ್ಯನ ಈ ತಳಮಳ ಅರ್ಥವಾಗಿರಬೇಕು. ಅವರು ಹೇಳಿದರು:

"ವಾಸು... ನಡಿ ನಾವೆಲ್ಲ ಈಗ ನಮ್ಮ ವಿಜಯ ಸುಧಾ ಇರೋ ಮನೇನಾದ್ರೂ ನೋಡಿಬರೋಣ.."

ಕೃಷಿ

ಎಂಥ ಪಾಂಡ ಹೋರಿಯುಸೂ ಬಗ್ಗಿಸಿ
ಕೃಷಿ ಮಾಡುವ ಛಾತೀ ಐತಿ;
ಕಟಕರಂಗಡಿಗೆ ಹೊಡೆಯುವ ಎತ್ತು
ಕೊರಳಿಗೆ ಬಿದ್ದರೆ ಏನು ಗತಿ!

—ಎಂ. ಅಕಬರ ಅಲಿ

"ಅಗತ್ಯವಾಗಿ ದಯಮಾಡಿಸಿ... ನಾವಿಬ್ರೂ ಈಗ ನಿಮ್ಮನ್ನೆಲ್ಲ ಅಲ್ಲಿಗೆ ಕರ್ಕೊಂಡು ಹೋಗೋದಕ್ಕೇ ಬಂದಿದ್ದು"—ಎಂದ ವಿಜಯ.

ವಾಸುದೇವಯ್ಯ ದೇವಪುರಕ್ಕೆ ಹೆಜ್ಜೆ ಇಟ್ಟಾಗಿನಿಂದಲೂ ಹೊಯ್ದಾಡುತ್ತಲೇ ಇದ್ದರು. ಕ್ಷಣ ಹೊತ್ತು ತೀವ್ರ ಅಶಾಂತಿ, ಮತ್ತೊಮ್ಮೆ ಸಮಾಧಾನ—ಮರುಗಳಿಗೆಯೇ ಮತ್ತೆ ಯಾವುದೋ ಭೀತಿ-ಈ ದ್ವಂದ್ವಗಳ ಆಘಾತಕ್ಕೆ ಸಿಕ್ಕಿ ತತ್ತರಿಸಿ ಹೋಗಿದ್ದರು. ವಿಜಯ ತಮ್ಮನ್ನು ತನ್ನ ಮತ್ತು ಸುಧಾಳ ನಿವಾಸಕ್ಕೆ ಆಹ್ವಾನಿಸಲು ಬಂದ ವಿಷಯ ತಿಳಿದು ನೆಮ್ಮದಿಯಾಯಿತು. ಆದರೆ, ಆ ನಿವಾಸಕ್ಕೆ ಹೋದ ನಂತರ ಮತ್ಯಾವ ಗಂಡಾಂತರ ತಮಗಾಗಿ ಕಾದಿದೆಯೋ ಎಂಬ ಅವ್ಯಕ್ತ ಭೀತಿ ಅವರನ್ನು ಕಾಡದಿರಲಿಲ್ಲ.

ಕಾಫಿ ಮುಗಿಸಿಕೊಂಡು ಎಲ್ಲರೂ ಹೊರಟು ನಿಲ್ಲುವುದಕ್ಕೂ ರವಿ ಹೊರಗಿನಿಂದ ಒಳಗೆ ಬರುವುದಕ್ಕೂ ಸರಿಹೋಯಿತು. ಎಲ್ಲರೂ ಎಲ್ಲಿಗೋ ಹೊರಡಲು ಸಿದ್ಧರಾಗಿರುವುದನ್ನು ಕಂಡ ರವಿಗೆ ಅರೆನಿಮಿಷ ಆಶ್ಚರಿಯಾದರೂ, ವಿಜಯನನ್ನು ಕೇಳಿದ—

"ಏನು ವಿಜಯ್?... ಮನೇಗೆ ಕರ್ಕೊಂಡು ಹೋಗೋದಕ್ಕೆ ಬಂದ್ಯಾ?"—

"ಹೌದು ರವಿ... ಬಾ ನೀನೂ—"

"ತಡಿ... ನಾನೂ ಸ್ವಲ್ಪ ಕಾಫಿ ಮುಗಿಸಿ ಬರ್ತೀನಿ" ಎಂದವನೇ ರವಿ ಒಳಕ್ಕೆ ಹೋಗಿ ಹತ್ತು ನಿಮಿಷಗಳಲ್ಲಿ ಅವರ ಜೊತೆಗೂಡಿದ.

ಗುಂಡೂರಾಯರ ಮನೆಯಿಂದ ಒಂದು ಫರ್ಲಾಂಗ್ ದೂರದಲ್ಲಿದ್ದ ಗೋಪಾಲನ ಔಟ್ ಹೌಸಿಗೆ ಎಲ್ಲರೂ ಬಂದಾಗ ಸಾಯಂಕಾಲ ಆರು ಗಂಟೆಯಾಗಿತ್ತು. ಹಾಸಿದ್ದ ಎರಡು ಮಂದಲಿಗೆಗಳ ತುಂಬ ಅವರೆಲ್ಲ ಕುಳಿತರು.

ವಾಸುದೇವಯ್ಯನವರಿಗೆ ಮನಸ್ಸಿನಲ್ಲಿಯೇ ತಾಕಲಾಟ—ವಿಷಯವನ್ನು ಹೇಗೆ ಪ್ರಾರಂಭಿಸುವದು? ವರನಿಗೆ ಕನ್ಯೆಯನ್ನು ತೋರಿಸುವಾಗಿನ ಮನಸ್ಥಿತಿಯಲ್ಲಿದ್ದ ಅವರು ಪದೇ ಪದೇ ಗುಂಡೂರಾಯರ ಮುಖವನ್ನು ನೋಡತೊಡಗಿದರು. ಲಾಯರ್ ರಾಯರಿಗೆ ವಾಸುದೇವಯ್ಯನವರ ಸಂದಿಗ್ಧ ಅರ್ಥವಾಯಿತು.

"ವಿಜಯ್... ನಮ್ಮ ವಾಸು ನಿಮ್ಮ ಹತ್ರ ಒಂದು ಮಹತ್ವದ ವಿಚಾರ ಮಾತನಾಡಬೇಕೂಂತಾ

ಬಿಟ್ಟಿದ್ದಾನೆ... ನೀವು ಸ್ವಲ್ಪ ಸೀರಿಯಸ್ಸಾಗಿ ಈ ವಿಚಾರವಾಗಿ ಯೋಚನೆ ಮಾಡಬೇಕು..."

"ಅದೇನು ಹೇಳಿ ಸ್ವಾಮಿ... ನನಗೆ ಈ ಜೀವನದಲ್ಲಿರೋ ಸರ್ವಸ್ವವೂ ಸೀರಿಯಸ್ಸೇ... ನಿಸ್ಸಂಕೋಚವಾಗಿ ಹೇಳಿ"–

ಗುಂಡೂರಾಯರು ವಾಸುದೇವಯ್ಯನ ಮುಖ ನೋಡಿದರು. ವಾಸುದೇವಯ್ಯ ರಾಯರ ಕಡೆ ನೋಡುತ್ತಾ "ನೀನೇ ಹೇಳು" ಎಂದರು.

"ಅಂದ್ರೆ ವಿಷಯ ಇಷ್ಟೆ... ಈಗ ನೀವು ನಮ್ಮ ವಾಸು ಮಗಳ ಜೊತೇಲೇ ವಾಸಮಾಡ್ತಿದೀರಿ... ಅವಳನ್ನು ನಮ್ಮ ಮನೆಗೆ ಬರದ ಹಾಗೆ ಮಾಡಿಬಿಟ್ರೆ... ಅವಳಿಗೆ ನೀವು ಅವಕಾಶ ಕೊಡೋ ಹೊತ್ತಿಗೆ ತಾನೇ ನಿಮ್ಮ ಜೊತೇಲಿರೋದು? ಅವಳಿನ್ನೂ ಹುಡುಗಿ... ನೀವು ಅವಳಿಗೆ ಬುದ್ಧಿ ಹೇಳಬಹುದಾಗಿತ್ತು..."

"ಸ್ವಾಮಿ ಗುಂಡೂರಾಯರೇ... ನೀವು ಹೇಳೋದು ನಂಗೆ ಅರ್ಥವೇ ಆಗ್ತಾ ಇಲ್ಲ... ಸುಧಾ ಯಾವ ತಪ್ಪು ಮಾಡಿದಾರೆ ಅಂತ ನಾನವರಿಗೆ ಬುದ್ಧಿ ಹೇಳಲಿ?"

"ಅವಳು ನಿಮ್ಮ ಜೊತೆಗೆ, ಕೇವಲ ಒಬ್ಬ ಅಪರಿಚಿತ ತರುಣನ ಜೊತೆಗೆ ಒಂಟಿಯಾಗಿ ವಾಸ ಮಾಡ್ತಿರೋದು ಅಪರಾಧ ಅಲ್ವೆ? ಕಾನೂನಿನ ದೃಷ್ಟಿಯಿಂದ್ಲೂ ಇದೊಂದು ಮಹಾಪರಾಧ..."

"ಹಾಗೇನೂ ಇಲ್ವಲ್ಲ... ನಾವಿಬ್ರೂ ಬರೀ ಸ್ನೇಹಿತರಂತೆ ಇದೀವಿ... ನಮ್ಮಲ್ಲಿ ಯಾವ ದುರುದ್ದೇಶವೂ ಇಲ್ಲ... ಸ್ವಂತ ಇಚ್ಛೆಯಿಂದ್ಲೇ ಇಬ್ರೂ ಜೊತೆಗೆ ಇದೀವಿ"

ರವಿ, ನರಹರಿ, ಸುಧಾ, ವಾಸುದೇವಯ್ಯ–ಇವರೆಲ್ಲ ಮೂಕರಂತೆ ಕುಳಿತು ರಾಯರ ಹಾಗೂ ವಿಜಯನ ವಾಗ್ವಾದವನ್ನು ಕೇಳುತ್ತಿದ್ದರು.

"ನೋಡಿ, ನಿಮ್ಮಲ್ಲಿ ದುರುದ್ದೇಶ ಇಲ್ದೇ ಇರಬಹುದು... ಆದ್ರೆ ಈ ವಾಸುದೇವಯ್ಯ ಒಂದ್ವೇಳೆ ಕಾನೂನು ಸಹಾಯ ತಗೊಂಡ್ರೆ, ನೀವು ಅಪರಾಧಿಗಳಾಗ್ತೀರಿ... ಇದು ಖಂಡಿತ"

ವಿಜಯ ಸ್ವಲ್ಪ ಹೊತ್ತು ಸುಮ್ಮನಾದ-ಆ ಮೇಲೆ

"ಹಾಗಾದ್ರೆ, ನಾನೀಗ ಏನು ಮಾಡಬೇಕೂಂತ ನೀವು ಹೇಳೋದು? ಬೆಳಿಗ್ಗೆ ಈ ವಾಸುದೇವಯ್ನೋರು ಸುಧಾ ಇನ್ಮೇಲೆ ನಿಮ್ಮ ಮನೇಲೇ ಇರ್ತಾಳೆ ಅಂದಾಗ ತುಂಬಾ ಸಂತೋಷವಾಗಿ ಒಪ್ಪಿದ್ದೆ... ಅದಕ್ಕೆ ನಾನು ಈಗ್ಲೂ ಸಿದ್ಧವಾಗಿದೀನಿ" ಎಂದು ಸುಧಾಳನ್ನು ನೋಡಿದ.

"ನೀವೇನೋ ಸಿದ್ಧವಾಗಿದೀರಿ... ಆದ್ರೆ... ನಾನು ಸಿದ್ಧವಾಗಿಲ್ಲ... ಈಗ ಮೂರು ನಾಲ್ಕು ದಿನ ಒಟ್ಟಿಗೇ ನಿಮ್ಮ ಜೊತೆಗಿದ್ದ ಈ ಹುಡುಗೀನ ನಾನಾಗ್ಲಿ ನನ್ನ ಹೆಂಡತಿಯಾಗ್ಲಿ ನಮ್ಮನೇಲಿ ಖಂಡಿತಾ ಇಟ್ಕೋಳೋದಿಲ್ಲ... ನೀವಿಬ್ರೂ ಪರಿಶುದ್ಧರಾಗೇ ಇರಬಹುದು... ಆದ್ರೂ ಜನಾ ಏನಂತಾರೆ?"–

"ನೋಡಿ ಸ್ವಾಮಿ... ಜನ ಏನು ಬೇಕಾದ್ರೂ ಅಂತಾರೆ... ಹಾಗಂತ ನಾವು ನಮ್ಮ ಅಂತಸ್ಸಾಕ್ಷಿಗೆ ವಿರುದ್ಧವಾಗಿ ನಡೆಯೋಕ್ಕಾದೀತೆ? ನೀವು ಹೇಳೋ ಮಾತ್ನಿಂದ ಸುಧಾ ರವಿ–ಇವರ ಮದ್ವೆ ವಿಚಾರ ರದ್ದಾಯ್ತು ಅನ್ನೋ ಅರ್ಥ ಬರುತ್ತಲ್ಲ?"

ರವಿ ಚಕಿತನಾಗಿ ತಲೆ ಎತ್ತಿದ. ಹಾಗಾದರೆ. ಸುಧಾ ತನಗಾಗಿ ಈ ಊರಿಗೆ ಬಂದ ಕನ್ಯೆ, ಆ ವಿಚಾರ ವಿಜಯನಿಗೂ ಗೊತ್ತಿದೆ... ವಿಜಯನ ಜೊತೆಗೆ ಮೂರು ರಾತ್ರಿಗಳನ್ನು ಕಳೆದ ಸುಧಾ ಬಗ್ಗೆ ರಾಯರಿಗೆ ಅಸಮಾಧಾನವಿದೆ– ಇದರಿಂದ ತನಗೆ ಸುಧಾ ದೊರೆಯುವ ಅವಕಾಶವೂ ತಪ್ಪಿದೆ–

ಕಾನೇನಾದರೂ ಈಗ ಬಾಯಿ ಬಿಟ್ಟು ಹೇಳಲೇಬೇಕಾಗಿತ್ತು.

"ಅಪ್ಪಾ, ಸುಧಾ ಈಗಲೂ ನಮ್ಮ ಮನೇಲಿ ಇದ್ರೆ ಏನು ನಷ್ಟ? ಜನ ಏನು ಬೇಕಾದ್ರೂ ಮಾತಾಡ್ತಾರೆ... ಆದ್ರೆ ನಮ್ಮ ಅಭಿಪ್ರಾಯಗಳನ್ನು ಜನಕ್ಕೆ ತಕ್ಕ ಹಾಗೆ ಯಾಕೆ ಬದ್ಲಾಯಿಸಬೇಕು?"

ರಾಯರು ಮಗನ ಕಡೆ ತೀಕ್ಷ್ಣವಾಗಿ ನೋಡಿದರು. ಎಂತೆಂತಹ ಕನ್ಯೆಯರನ್ನೋ ಧಿಕ್ಕರಿಸಿ, ತಮಗೆ ಅವಮಾನ ಮಾಡಿದ್ದ ಈ ರವಿ ಇದೀಗ ಈ ಸುಧಾಳನ್ನು ಕಂಡು ಮರುಳಾಗಿದ್ದಾನೆ... ಅವನು ಮೆಚ್ಚಿದ ಹುಡುಗಿಯನ್ನು ತಂದು ಅವನಿಗೆ ತಾವು ವಿವಾಹ ಮಾಡಬೇಕೆಂಬ ತೀರ್ಮಾನ ಅವರದು. ಆದರೆ ಸುಧಾ ಮೂರು ರಾತ್ರಿಗಳನ್ನು ವಿಜಯನೊಂದಿಗೆ ಕಳೆದಿದ್ದಾಳೆ... ವಿಜಯ... ಸುಧಾ... ರವಿ...ಈ ಮೂವರೂ ಏನೇ ಹೇಳಲಿ, ತಮ್ಮ ಮನಸ್ಸು ಮಾತ್ರ ಮಾನವನ ಮಾನಸಿಕ ದೌರ್ಬಲ್ಯವನ್ನು ಗುರುತಿಸುತ್ತಿದೆ... ವಿಶ್ವಾಮಿತ್ರ, ಪರಾಶರ, ಋಷಿಪುಂಗವರೆಲ್ಲ ಎಲ್ಲಿ ಸೋತರೋ, ಆ ಸ್ಥಾನದಲ್ಲೇ ವಿಜಯ ತಾನು ಗೆದ್ದಿದ್ದೇನೆ–ಎನ್ನುತ್ತಾನೆ... ಸುಳ್ಳು...ಸುಳ್ಳು– ಆದರೆ ಮಗನೂ ವಿಜಯನ ಪಕ್ಷ ವಹಿಸುತ್ತಿದ್ದಾನೆ... ಇನ್ನು ನೇರವಾಗಿ ವಿಷಯಕ್ಕೆ ಬರುವುದು ಒಳ್ಳೆಯದು– ಎಂದುಕೊಂಡರು.

"ರವಿ ನೀನು ಸುಮ್ನೆ ಇರು... ವಿಜಯ್... ನಾನೀಗ ನಿಮ್ಮೆದುರಿಗೆ ಹೇಳಿದ ಸಮಸ್ಯೆಗಳಿಗೆಲ್ಲ ಒಂದೇ ಪರಿಹಾರ ಇದೆ... ಅಥವಾ ಅದಕ್ಕೆ ಪರ್ಯಾಯವಾಗಿ ಮತ್ತೊಂದು ಹಾದಿಯಿದೆ... ಪರಿಹಾರ ಇಷ್ಟೆ... ಸುಧಾ ತನ್ನ ಕೆಲ್ಸಕ್ಕೆ ನಾಳೇನೆ ರಾಜೀನಾಮೆ ಬರೆದು ವಾಸು ಜೊತೆಗೆ ಊರಿಗೆ ಹೊರಡೋದು–"

"ಅದು ಮಾತ್ರ ಖಂಡಿತಾ ಸಾಧ್ಯವಿಲ್ಲ... ಪ್ರಾಣ ಹೋದ್ರೂ ನಾನೀ ಕೆಲ್ಸ ಬಿಡೋಲ್ಲ"– ಸುಧಾ ಉದ್ವೇಗದಿಂದ ನುಡಿದಳು.


"ಸುಧಾ... ನೀವು ಯಾಕೆ ಅಷ್ಟೊಂದು ಉದ್ವೇಗಗೊಳ್ತೀರಿ? ನೀವೇನೂ ಕೆಲ್ಸ ಬಿಡಬೇಕಾಗಿಲ್ಲ... ಗುಂಡೂರಾಯ್ರು ಮನೇಲಿ ನೀವಿರೋದು ಸಾಧ್ಯವಿಲ್ಲ ಅಂದ್ರೆ ಇಲ್ಲೇ ನನ್ನ ಮನೆಯಲ್ಲೇ ಇರಿ... ಅಥವಾ ನೀವೇ ಬೇರೆ ಮನೆ ಮಾಡಿ ನಿಮ್ಮ ತಾಯಿನೋ ಅಣ್ಣ ತಂಗಿಯರನ್ನೋ ಜೊತೆಗಿಟ್ಕೊಂಡಿರಿ..." ಎಂದ ವಿಜಯ.

"ನಾವ್ಯಾರೂ ಸುಧಾ ಜೊತೆಗೆ ಇಲ್ಲಿರೋದಕ್ಕೆ ಬರೋಕಾಗೋಲ್ಲ ವಿಜಯ್... ಅವಳು ನಿಮ್ಮ ಜೊತೆಗೇ ಇರ್ಲಿ ಬಿಡಿ... ಅದೇ ನನ್ನ ಅಪೇಕ್ಷೆ.. ಆದ್ರೆ ಈಗಿರೋ ಹಾಗೆ ನೀವು ಇದ್ರೆ ನಾನು ಒಪ್ಪೋದಿಲ್ಲ..."

"ಹಾಗಾದ್ರೆ ನಿಮ್ಮ ಕರಾರುಗಳೇನು?"

"ಕರಾರೇನೂ ಅಲ್ಲ... ಆದ್ರೆ ನನ್ನ ಅಭಿಲಾಷೆ.. ನೀವು ಸುಧಾ ಜೊತೆಗೆ ವಿವಾಹವಾಗ್ಬೇಕು... ನಾವು ಹೀಗೆಲ್ಲ ಕೇಳ್ಬಾರ್ದು ಅಂತ ಗೊತ್ತು.. ಆದ್ರೆ ಈಗ ಪರಿಸ್ಥಿತಿ ಹತೋಟಿ ಮೀರಿದೆ... ನೀವಿಬ್ರೂ ಮದುವೆಯಾದ್ರೆ ನಾನು ನಿಶ್ಚಿಂತನಾಗಿರ್ತೀನಿ... ನೀವೂ ಜೊತೆಗೇ ಇರೋದಕ್ಕೆ ಯಾವ ಅಭ್ಯಂತರವೂ ಇರೋದಿಲ್ಲ" ವಾಸುದೇವಯ್ಯ ಬೇಗ ಬೇಗ ಹೇಳಿ ನಿಟ್ಟುಸಿರು ಬಿಟ್ಟರು.

ಸುಧಾ. ರವಿ, ವಿಜಯ- ಮೂವರೂ ಸ್ತಂಭೀಭೂತರಾದರು, ಕ್ಷಣಕಾಲ ತಡೆದು ವಿಜಯನೇ



ಬಾಯಿ ಬಿಟ್ಟ– "ಈ ಪ್ರಶ್ನೆಗೆ ತಕ್ಷಣ ಉತ್ತರ ಕೊಡೋಕಾಗಲ್ಲ... ಸ್ವಲ್ಪ ಸಮಯ ಕೊಡಿ."

ಗುಂಡೂರಾಯರಿಗೆ ಸ್ವಲ್ಪ ಕಾವೇರಿತು–"ನೀವು ಸುಧಾ ಜೊತೆಗೆ ಮನೆ ಮಾಡಬೇಕು ಅಂದಾಗ ಯಾಕೆ ತಕ್ಷಣ ಮಾಡಿದ್ರಿ? ಆಗ ಸಮಯ ಬೇಕಾಗ್ಲಿಲ್ವೆ?"

"ಹಾಗಲ್ಲ ಸ್ವಾಮಿ, ಅದು ನನ್ನ ಮತ್ತು ಸುಧಾರವರ ಮಟ್ಟಿಗೆ ಸಂಬಂಧಿಸಿದ ಪ್ರಶ್ನೆ... ಆದರೆ ಇದು ಹಾಗಲ್ಲ... ಈ ಪ್ರಶ್ನೆಗೆ ಹಲವಾರು ಮುಖ ಇವೆ... ದಯವಿಟ್ಟು ಇದೊಂದು ರಾತ್ರಿ ಅವಕಾಶಕೊಡಿ... ನಾನು ಚೆನ್ನಾಗಿ ಯೋಚ್ನೆ ಮಾಡಬೇಕು..."

ವಿಧಿಯಿಲ್ಲದೆ, ವಾಸುದೇವಯ್ಯ, ಗುಂಡೂರಾಯರು, ನರಹರಿ, ರವಿ ಮೇಲೆದ್ದರು. ನರಹರಿಯ ಬಿಸಿರಕ್ತ ತ್ವರಿತ ಪ್ರತಿಕ್ರಿಯೆಗಾಗಿ ಕುದಿಯುತ್ತಿತ್ತು. "ಸುಧಾನೂ ನಿಮ್ಮ ಜೊತೇಲೆ ಇರಲಿ..." ವಿಜಯ ಹೇಳಿದಾಗ ಅವಳೂ ಹೊರಟಳು,

– ೫ –

ವಿಜಯ ರವಿಯನ್ನು ತನ್ನೊಡನೆ ಉಳಿಸಿಕೊಂಡ. "ಈ ದಿನ ಇಲ್ಲೇ ಮಲಗು ರವಿ... ನಿನ್ನ ಜೊತೆಗೆ ಸ್ವಲ್ಪ ಮಾತಾಡಬೇಕಾಗಿದೆ" ರವಿ ಅನ್ಯಮನಸ್ಕನಾಗಿದ್ದ. ಸುಧಾ ತನ್ನನ್ನು ಆಕರ್ಷಿಸಿದ್ದಾಳೆ... ಆದರೆ ಈ ವಿಜಯನ ಜೊತೆಗೆ ಅವಳು ಕಳೆದ ಮೂರು ರಾತ್ರಿಗಳು? ಅವನು ಯಾಂತ್ರಿಕವಾಗಿ ವಿಜಯನ ಮಾತುಗಳಿಗೆ 'ಹೂಂ' ಗುಟ್ಟಿದ.

"ರವಿ... ಪ್ರಾಮಾಣಿಕವಾಗಿ ಹೇಳು... ನೀನು ಸುಧಾಳನ್ನು ಪ್ರೀತಿಸೋಕೆ ಸಾಧ್ಯವೆ?"

"ವಿಜಯ್... ನೀನು ತುಂಬಾ ಡೆಲಿಕೇಟ್ ಪಾಯಿಂಟು ಕೇಳ್ತಾ ಇದೀಯ... ನನಗಾಗಿ ನೀನೇನೂ ಅವಳನ್ನು ತ್ಯಾಗ ಮಾಡಬೇಕಾಗಿಲ್ಲ... ನಿಜ ಹೇಳ್ಬೇಕು ಅಂದ್ರೆ.... ಅವಳಲ್ಲಿ ನನಗೀಗ ಯಾವ ಇಂಟರೆಸ್ಟೂ ಉಳಿದಿಲ್ಲ"

"ಅಲ್ಲೇ ನೀನು ತಪ್ಪು ಮಾಡ್ತಾ ಇದೀಯ... ಒಂದು ಹೆಣ್ಣಿನಲ್ಲಿ ಒಬ್ಬ ಗಂಡಿಗಿರೋ ಇಂಟರೆಸ್ಟಿನ ಆಳ ಇಷ್ಟೇನಾ? ಅವಳನ್ನು ಮದುವೆಯಾಗೋ ಮಟ್ಟಿಗೆ ಇಂಟರೆಸ್ಟಿದ್ರೆ ಏನು ಪ್ರಯೋಜನ? ಮದುವೆ ಆಗಿರೋರಿಗೆಲ್ಲ ಬೇರೆ ಹೆಣ್ಣುಗಳ ವಿಚಾರದಲ್ಲಿ ಬೇರೆ ರೀತಿಯ ಇಂಟರೆಸ್ಟ್ ಇರೋದೆ ಇಲ್ವಾ?... ನೋಡು ರವಿ?... ನಾನು ಧೈರ್ಯವಾಗಿ ಕೇಳ್ತಾ ಇದೀನಿ... ನನ್ನ ಮತ್ತು ಅವಳ ಈ ಮೂರು ರಾತ್ರಿಗಳ ಸಹಬಾಳ್ವೆಯ ಬಗ್ಗೆ ನಿನ್ನ ಅನಿಸಿಕೆ ಏನು? ಪ್ರಾಮಾಣಿಕವಾಗಿ ಉತ್ತರಕೊಡು!"

ರವಿ ಸುಮ್ಮನಾದ್ನ, ಯೋಚನೆಗಳು... ಒಂದು ವೇಳೆ ತಾನೇ ವಿಜಯನ ಸ್ಥಾನದಲ್ಲಿ ಇದ್ದರೆ ತಾನು ಹೇಗಿರುತ್ತಿದ್ದೆ? ಕಾಲು ಜಾರದಂತೆ ನಿಷ್ಕಳಂಕನಾಗಿ ಖಂಡಿತ ತನ್ನಿಂದ ಉಳಿಯಲಾಗುತ್ತಿರಲಿಲ್ಲ. ಈ ವಿಜಯ ತನ್ನ ಪಾವಿತ್ರ್ಯದ ಬಗ್ಗೆ ಹೇಳುತ್ತಿದ್ದಾನೆ... ಆದರೆ ಯಾವ ನಂಬಿಕೆ? ಅವಳಾಗಿ ಬಯಸಿ ಇವನೊಡನೆ ಒಂದೇ ರೂಮಿನಲ್ಲಿ ಇರತೊಡಗಿದಾಗ ಇವನೇನೂ ನಿಷ್ಕಳಂಕನಾಗಿರಬೇಕಾಗಿಲ್ಲವಷ್ಟೆ? ಅಥವಾ... ವಾಸುದೇವಯ್ಯನಿಂದ ಸುಧಾಳನ್ನು ತನಗೆ ಕೊಡುವ ವಿಚಾರ ತಿಳಿದು ಇವನು ಈಗ ಈ ನಾಟಕ ಆಡುತ್ತಿರಬಹುದು... ಹೌದು... ಆ ಸುಧಾಳ ಅಗತ್ಯ ತನಗೀಗ ಇಲ್ಲ...

"ವಿಜಯ್.. ನನಗೆ ಅರ್ಜೆಂಟ್ ಕೆಲ್ಸ ಇದೆ... ನಾನು ಬರ್ತೀನಿ" ಎಂದವನೇ ಅವನ ಉತ್ತರಕ್ಕೂ ಕಾಯದೆ ರವಿ ಅಲ್ಲಿಂದ ಹೊರಬಿದ್ದ. ವಿಜಯ ರವಿಯನ್ನು ನಾಲ್ಕಾರು ಬಾರಿ ಕರೆದರೂ ರವಿ ಕೇಳಿಸದವನಂತೆ ಮುಂದೆ ನಡೆದಿದ್ದ.

ವಿಜಯ ಚಾಪೆಯ ಮೇಲೆ ನಿಶ್ಚೇಷ್ಟಿತನಾಗಿ ಕುಳಿತು ಯೋಚಿಸತೊಡಗಿದ. ತನ್ನ ಅಪೂರ್ವ ಪ್ರಯೋಗದ ಗತಿ?

ಕೆಲವಾರು ನಿಮಿಷಗಳ ನಂತರ, ಈ ವಿಜಯ ಹಾಳೆಯನ್ನೂ ಪೆನ್ನನ್ನೂ ಹಿಡಿದು ಬರೆಯತೊಡಗಿದ–

"ಗೆಳತಿ, ಸುಧಾಳಿಗೆ, ಈ ಜನಗಳೆಲ್ಲ ಯಾಕೆ ಹೀಗೆ? ನಮ್ಮಿಬ್ಬರ ಈ ಸ್ನೇಹ ಅವರಿಗೆ ಕಾಮರಹಿತವಾಗಿ ಏಕೆ ಕಾಣುತ್ತಿಲ್ಲ? ಅದು ಈ ಸಮಾಜದ ರೀತಿ ನೀತಿಗೆ ಹೊರತಾದುದೆಂದಿರಬಹುದೆ? ಹೌದು ಸುಧಾ... ಈ ಅಂಶವನ್ನು ಸಮಾಜಕ್ಕೆ ಸ್ಪಷ್ಟ ಪಡಿಸುವುದು ಹೇಗೆ? ಒಂದು ಹೆಣ್ಣಿನೊಡನೆ ತಾನು ನಿರ್ವಿಕಾರನಾಗಿ ಏಕಾಂತದಲ್ಲಿರಬಲ್ಲೆ ಎಂಬುದನ್ನು ಸಿದ್ಧಪಡಿಸಿ ತೋರಿಸುವುದು ಹೇಗೆ? ನಾವೀಗ ಅನುಸರಿಸಿರುವ ಕ್ರಮ ಈ ಪ್ರಪಂಚಕ್ಕೇ ತೀರಾ ಹೊರತಾದುದು. ಅದನ್ನೊಂದು ಅದ್ಭುತ ಸಾಹಸ ಎಂದು ಈ ಜನ ಏಕೆ ತಿಳಿಯಬಾರದು? ದೌರ್ಬಲ್ಯವನ್ನೇ ಈ ವಿಷಯದಲ್ಲಿ ಏಕೆ ಆರೋಪಿಸುತ್ತಾರೆ? ಋಷಿ ಮುನಿಗಳೂ ಜಾರಿದರೆ, ಉಳಿದ ಪ್ರತಿಯೊಬ್ಬನೂ ಜಾರಲೇಬೇಕೆಂಬ ನಿಯಮವೆಲ್ಲಿದೆ? ಅಥವಾ ಋಷಿ ಮುನಿಗಳಿಗಿಂತ ಉತ್ತಮಜೀವಿಗಳು ಹುಟ್ಟುವುದೇ ಅಸಾಧ್ಯವೆಂಬ ಭಾವನೆ ಏಕೆ?" ವಿಜಯ ಕ್ಷಣಹೊತ್ತು ತನ್ನ ಬರಹವನ್ನು ನಿಲ್ಲಿಸಿದ. ಯಾವುದೋ ಕರಿಯ ನೆರಳೊಂದು ಅವನನ್ನು ಅಣಕಿಸಿದಂತಾಯಿತು. ಮರುಗಳಿಗೆಯೇ ಮತ್ತೆ ಯೋಚನೆ–ಮತ್ತೆ ಬರಹ ಸಾಗಿತು.

"ನಾನು ನನ್ನೊಬ್ಬನನ್ನು ನಿರಪರಾಧಿ ಎಂದು ಭಾವಿಸಿದ್ದೇನೆಯೆ? ಹೌದು... ನನ್ನಲ್ಲಿ ಯಾವುದೋ ಅಹಂಕಾರ ಕ್ಷಣಕ್ಷಣಕ್ಕೂ ಹೆಮ್ಮರವಾಗುತ್ತಿದೆ... ನನ್ನ ಆಲೋಚನೆಗಳನ್ನೆಲ್ಲ ಬುಡಮೇಲು ಮಾಡುವ, ಮಾಡುತ್ತಿರುವ ಈ ಅಹಂಕಾರವನ್ನು ಗೆಲ್ಲಬೇಕು– ನನ್ನ ಇರುವಿಕೆಗೆ ನನ್ನದೇ ಆದ ಸ್ವಂತ ಅರ್ಥವನ್ನು ಕಂಡುಕೊಳ್ಳಬೇಕು. ಅದಕ್ಕೆ ಸಾಮಾಜಿಕ ಅರ್ಥವೊಂದರ ಅಗತ್ಯವೇನು? ಪ್ರತಿಯೊಬ್ಬನೂ ಇದೇ ತಪ್ಪು ಮಾಡುತ್ತಾನೆ... ಅಂದರೆ ಅವನು ತನ್ನ ಇರುವಿಕೆಯನ್ನು ಸಾಮಾಜಿಕ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತಾನೆ... ತನ್ನ ಸ್ವಂತಿಕೆಯನ್ನು ಮಾರುತ್ತಾನೆ. ಹೌದು... ನಾನು ಈಗ ಈ ಪರಿಸ್ಥಿತಿಯಲ್ಲಿದ್ದೇನೆ... ನೀನು ನನ್ನ ಜೊತೆಯಾದಾಗಲೇ ನಾನು ಅಹಂಕಾರವನ್ನು ಬಡಿದೆಬ್ಬಿಸಿದೆ... ಇತರರೊಡನೆ ನನ್ನ ವಿಲು

ವಿಕೆಯನ್ನು ಹೋಲಿಸಿಕೊಳ್ಳುವ ಅಸಹಾಯಕತೆಗೆ ಬಲಿಯಾಗಿ ಬಿಟ್ಟೆ... ಇದರಿಂದ ಬಿಡುಗಡೆ ಹೇಗೆ? ಇದೀಗ ನೀನೂ ಸಹ ಅಹಂಕಾರವಶಳಾಗಿದ್ದೀಯೆ. ನಮ್ಮಿಬ್ಬರನ್ನೂ ನಮ್ಮ ಸಂಯಮಕ್ಕಾಗಿ ಹೊಗಳ ಬೇಕಾದ ಜನ, ಸಾಮಾಜಿಕ ತಕ್ಕಡಿಯಲ್ಲಿಟ್ಟು ನಮ್ಮನ್ನು ತೂಗುತ್ತಿದ್ದಾರೆ... ಹಾಗೆಂದೇ ಇಲ್ಲಿ ಎರಡು ಪಕ್ಷಗಳಲ್ಲೂ ಹೊಂದಾಣಿಕೆ ಕಾಣುತ್ತಿಲ್ಲ" ಮತ್ತೆ ಬರಹ ನಿಂತಿತು.

ವಿಜಯ ಬಹಳ ಹೊತ್ತಿನವರೆಗೆ ಯೋಚಿಸುತ್ತಲೇ ಇದ್ದ. ಈ ಪರಿಸ್ಥಿತಿ ಅವನ ಮಟ್ಟಿಗೆ ಸಮಸ್ಯೆಯೇನೂ ಆಗಿರಲಿಲ್ಲ... ಆದರೆ ಇಂತಹ ಸಂದರ್ಭದಲ್ಲಿ ಅನುದ್ವೇಗಕರವಾಗಿ ಚಿಂತಿಸುವುದು ಶಕ್ಯವೇ ಎಂಬುದನ್ನು ಪ್ರಯೋಗಕ್ಕೊಳಪಡಿಸಿದ್ದ. ಮತ್ತೆ ಬರೆಯತೊಡಗಿದ.

"ನಿನ್ನನ್ನು ನಾನು ಮದುವೆಯಾದರೆ?... ನನ್ನ ಇರುವಿಕೆಯ ಎಲ್ಲ ಅರ್ಥಗಳೂ ಸಮಾಧಿಯಾದಂತೆಯೇ... ನನ್ನ ನಿನ್ನ ಕಳೆದ ಮೂರುದಿನಗಳ ಆ ಅನುಬಂಧ ಅರ್ಥಹೀನವಾಗುತ್ತದೆ... ಸಮಾಜ ನಮ್ಮಿಬ್ಬರನ್ನೂ ನಿಲ್ಲಿಸುವ ಸ್ಥಾನ ನಮಗೆ ಸ್ಥಿರವಾಗುತ್ತದೆ... ನೀನು ಅವಿವಾಹಿತಳಾಗಿ ನನ್ನೊಡನಿರುವುದು ಈ ಸಮಾಜಕ್ಕೆ ಅವಮಾನವೆಂಬ ಭಾವನೆ ಅವರೆಲ್ಲರಿಗಿದೆ... ಆದರೆ ಸಮಾಜದ ಮಾನ ಉಳಿಸಲು ನನ್ನ ವೈಯಕ್ತಿಕ ಮಾನದ ಪ್ರಶ್ನೆ? ನಾನು ಸಮಾಜಕ್ಕೆ ಯಾವ ಬಗೆಯ ದ್ರೋಹವನ್ನೂ ಮಾಡಿಲ್ಲ... ಮಾಡಲು ನನ್ನ ಹಾಗೂ ಸಮಾಜದ ಪರಸ್ಪರ ಅನುಬಂಧದಲ್ಲಿ ಯಾವ ಕಾರಣವೂ ಇಲ್ಲ... ಹಾಗೆಂದು ಸಮಾಜಕ್ಕೆ ಹಿತವನ್ನು ಮಾಡಬಯಸಿದರೆ ಅದು ನ್ಯಾಯವಲ್ಲ. ಕಾರಣವೇನೆಂದರೆ... ಆ ಸಮಾಜ ತನ್ನ ಹಿತವನ್ನು ಮಾನವನ ಮಾನಸಿಕ ದೌರ್ಬಲ್ಯವೊಂದರ ಆಧಾರದ ಮೇಲೆ ರೂಪಿಸಿಕೊಳ್ಳುತ್ತಿದೆ"- ಮತ್ತೆ ನಿಲ್ಲಿಸಿ, ಎಲ್ಲವನ್ನೂ ಓದಿದ. ಯಾವುದೋ ಭಯ ಆವರಿಸಿದಂತಾಗಿ, ಆ ಹಾಳೆಯನ್ನು ಹರಿದೊಗೆದ.

ವಿಜಯನಿಗೆ ನಿದ್ರೆ ದೂರವಾಯಿತು... ಬೆಳಗಿನ ಜಾವ ನಾಲ್ಕು ಗಂಟೆಯ ಸಮಯ. ವಿದುಳಿನ ಕಂಪನಗಳು ತೀವ್ರಗತಿಯಲ್ಲಿ ಹೊರಹೊಮ್ಮುತ್ತಿದ್ದವು. ವಿಜಯ ಏನನ್ನೋ ತೀರ್ಮಾನಿಸಿಕೊಂಡ. ಮೇಲೆದ್ದು ದೀಪ ಹಾಕಿದ. ಎದುರಿಗೆ ದಿನಚರಿಯ ಪುಸ್ತಕವಿತ್ತು. ಮತ್ತೆ ಬರಹ...

× × ×

ವಾಸುದೇವಯ್ಯನವರು ಬಾಗಿಲು ತಳ್ಳಿದಾಗ ತಾನಾಗಿಯೇ ತೆರಯಿತು. ಹಿಂದೆಯೇ ಗುಂಡೂರಾಯರು, ನರಹರಿ, ಹಾಗೂ ಸುಧಾ ಪ್ರವೇಶಿಸಿದರು.

ಹಾಸಿಗೆ ಹಾಸಿದಂತೆಯೇ ಇತ್ತು. ವಿಜಯನ ಸುಳಿವಿಲ್ಲ...

"ವಿಜಯ್... ವಿಜಯ್"—ವಾಸುದೇವಯ್ಯ ಗಟ್ಟಿಯಾಗಿ ಕೂಗಿದರು. ಯಾವ ಉತ್ತರವೂ ಬರಲಿಲ್ಲ. ವಕೀಲ ರಾಯರು ಹಾಸಿಗೆಯ ಬದಿಗಿದ್ದ ಒಂದು ಕವರನ್ನೆತ್ತಿಕೊಂಡರು—

"ಇಲ್ನೋಡು ವಾಸು... ಈ ಕಾಗದ..."

ವಾಸುದೇವಯ್ಯ ಪತ್ರವನ್ನು ಮನಸ್ಸಿನಲ್ಲೇ ಓದಿಕೊಂಡರು. ನಂತರ ಗುಂಡೂರಾಯರ ಕೈಗಿತ್ತರು. ರಾಯರೂ ಆಮೂಲಾಗ್ರ ಓದಿದರು

"ಸುಧಾ... ಇದನ್ನು ನೀನೂ ಒಂದ್ಸಾರಿ ಓದು" ಎಂದರು.

ಸುಧಾ ಪತ್ರವನ್ನು ಬಿಡಿಸಿ ಓದತೊಡಗಿದಳು—

"ಈ ಪತ್ರವನ್ನು ಯಾರಿಗೆ ಬರೆಯಬೇಕೆಂದು ಗೊತ್ತಾಗದೆ ಸುಮ್ಮನೆ ಬರೆದಿದ್ದೇನೆ... ಮುಖ್ಯವಾಗಿ ಇದನ್ನು ಓದಬೇಕಾದವರು ಮೂವರು... ವಾಸುದೇವಯ್ಯನವರು... ಗುಂಡೂರಾಯರು ಹಾಗೂ ಸುಧಾ... ಸುಧಾ ಮತ್ತು ನಾನೂ ಕಳೆದ ಮೂರು ರಾತ್ರಿಗಳು ಕೇವಲ ಸ್ನೇಹಿತರಂತೆ ಕಳೆದವುಗಳು... ಅದಕ್ಕಿಂತ ಹೆಚ್ಚಿನ ಭಾವನೆ ನನಗೆ ಸುಧಾ ಬಗ್ಗೆ ಇಲ್ಲ... ಇದು ಅಸಹಜವೆಂಬ ಅವನಂಬುಗೆ ಸಮಾಜಕ್ಕೆ ಸಹಜ. ಆದರೆ, ಸಮಾಜ, ತಾನು ನಿರ್ಮಿಸಿಕೊಂಡಿರುವ ಬಹುಭಾಗ ಮೌಲ್ಯಗಳು ಮಾನವನ ದೌರ್ಬಲ್ಯವನ್ನೇ ಬಂಡವಾಳವನ್ನಾಗಿರಿಸಿಕೊಂಡಿದೆ. ಬಹುಪಾಲು ಜನ ಸಮಾಜದ ಕೈಗೊಂಬೆಗಳಾಗಿಯೇ ಉಳಿದಿರುವುದರಿಂದ ನನ್ನ ವರ್ತನೆ ಅಸಹಜ, ನಂಬಿಕೆಗೆ ಅನರ್ಹ—ಎನ್ನಿಸಬಹುದು... ಇದರಿಂದ ನಮ್ಮಿಬ್ಬರ, ಮೂರುದಿನಗಳ ಏಕಾಂತವಾಸಕ್ಕೆ ಮದುವೆಯೊಂದೇ ಏಕಮಾತ್ರ ಪರಿಹಾರವಾಗಿ ನಿಮಗೆಲ್ಲ ಕಂಡಿದೆ. ಅದು ಸಮಾಜಕ್ಕೆ ಪರಿಹಾರವೇ ಹೊರತು, ನನಗಲ್ಲ. ನಿಶ್ಚಯವಾಗಿ ಹೇಳುವುದಾದರೆ, ನನ್ನ ಮಟ್ಟಿಗೆ ಅದು ಯಾವ ಸಮಸ್ಯೆಯೂ ಅಲ್ಲ... ಸಮಾಜದ ಅಂಗವಾದ ವ್ಯಕ್ತಿ ಅದಕ್ಕೆ ಅಡಿಯಾಳೇ ಆಗಬೇಕೆಂದು ಬಯಸುವ ಮನೋಧರ್ಮ ಸಮಾಜದ ವಿಕಾಸಕ್ಕೆ ಅಡ್ಡಿ— ವ್ಯಕ್ತಿಸ್ವಾತಂತ್ರ್ಯವನ್ನು ಸಮಾಜ ಅಪಹರಿಸಲು ಯತ್ನಿಸುತ್ತಿದೆ... ಮಾನವನ ದುರ್ಬಲ ಮುಖವನ್ನೇ ದೊಡ್ಡದು ಮಾಡುವ ಸಮಾಜ, ಇಂದು ಎಲ್ಲರನ್ನೂ ಅಪರಾಧಿಗಳನ್ನಾಗಿ ಮಾಡುತ್ತಿದೆ. ಈ ಕಾರಣಗಳಿಂದ ನಾನು ಅಪರಾಧಿಯಾಗಲಾರೆ. ನಾನು ಸ್ವಾತಂತ್ರ್ಯವನ್ನು ಬಯಸುತ್ತೇನೆ. ನನ್ನ ಇರುವಿಕೆಯನ್ನು ಉಳಿಸಿಕೊಳ್ಳಲು ನಾನೀಗ ಇಲ್ಲಿಂದ ಹೊರಟಿದ್ದೇನೆ. ಪ್ರಾಯಶಃ ನಿಮ್ಮ ಸಮಸ್ಯೆಗೆ ಹೆದರಿ ಓಡಿ ಹೋಗಿದ್ದೇನೆಂದು ನಿಮಗನ್ನಿಸಬಹುದು... ಹೌದು ಅದು ಕೇವಲ ಸಾಮಾಜಿಕ ತೀರ್ಮಾನ - ನಾನು ಅದಕ್ಕೆ ಬೆಲೆ ಕೊಡಲಾರೆ. ಈ ಪತ್ರದ ಜೊತೆಗಿರುವ ನನ್ನ ಒಂದು ತಿಂಗಳ ರಜಾ ಅರ್ಜಿಯನ್ನು ಶಾಲೆಯ ಮುಖ್ಯಸ್ಥರಿಗೆ ಸುಧಾ ತಲುಪಿಸಬಹುದೆಂದು ಭಾವಿಸುತ್ತೇನೆ."

ಪತ್ರದ ಜೊತೆಗೆ ರಜಾ ಅರ್ಜಿಯೊಂದು ಇತ್ತು. ವೈಯಕ್ತಿಕ ಕಾರಣಗಳಿಗಾಗಿ—ಎಂದು ನಮೂದಿಸಲಾಗಿದ್ದ ಆ ಅರ್ಜಿಯನ್ನು ಸುಧಾ ತೆಗೆದುಕೊಂಡಳು..

ಎಲ್ಲರೂ ಪರಸ್ಪರ ನೋಡಿಕೊಂಡರು. ಹಾಗೆಯೇ ಆ ಮನೆಯ ಒಳಭಾಗವನ್ನೆಲ್ಲ ಪರಿಶೀಲಿಸಿದರು. ವಿಜಯನ ಬಟ್ಟೆ ಬರೆಗಳು, ಪುಸ್ತಕಗಳು. ಎಲ್ಲವೂ ಅಲ್ಲಿಯೇ ಇದ್ದವು. ಮತ್ತೊಂದು ಬದಿಗೆ ಸುಧಾಳ ಸಾಮಾನುಗಳೆಲ್ಲ ಇದ್ದವು.

"ವಿಜಯ ಏಕೆ ಹೊರಟು ಹೋಗಿದ್ದಾನು?" ಗುಂಡೂರಾಯರು ವಾಸುದೇವಯ್ಯನನ್ನು ಪ್ರಶ್ನಾರ್ಥಕವಾಗಿ ನೋಡಿದರು.

ವಾಸುದೇವಯ್ಯ ಯಾವ ಮಾತನ್ನೂ ಆಡದೆ ಸುಧಾ ಕಡೆ ನೋಡಿದರು.

"ನಾವು ಸುಧಾನ ಮದುವೆ ಮಾಡ್ಕೋ ಅಂತ ಕೇಳ್ತೀವಿ ಎಂದೇ ಹೀಗೆ ಓಡಿಹೋಗಿರಬಹುದು"— ನರಹರಿ ಸ್ವಲ್ಪ ಬಿಸಿಯಾಗೇ ಹೇಳಿದ.

"ಇಲ್ಲ... ಖಂಡಿತ ಇಲ್ಲ— ವಿಜಯನ ಸ್ವಭಾವ ನಂಗೆ ಚೆನ್ನಾಗಿ ಗೊತ್ತು. ಅವರು ಬೇಸ...ಂಡು ಖಂಡಿತ ಹೋಗಿಲ್ಲ... ಅಂತಹ ಕ್ಷುಲ್ಲಕ ಭಾವನೆಗೆ ಅವರ ಮನಸ್ಸಲ್ಲಿ ಜಾಗವೇ ಇಲ್ಲ"— ಎಂದಳು ಸುಧಾ.

"ಹಾಗಾದರೆ ಈಗೇನ್ಮಾಡೋದು?... ಹೇಗೂ ಆತ ಹೊರಟು ಹೋದ... ಒಂದು ತಿಂಗ್ಳು ರಜೆ ಬೇರೆ ಹಾಕಿದ್ದಾನೆ... ಈಗ್ಲಾದ್ರೂ ಸುಧಾನ ನಿಮ್ ನೇಲಿ..." ಎಂದು ವಾಸುದೇವಯ್ಯ ಪೀಠಿಕೆ ಹಾಕಿದರು.

"ಅದೊಂದು ವಿಚಾರ ಮಾತ್ರ ನನ್ನ ಕೇಳಬ್ಯಾಡಾ ವಾಸೂ.... ದಯವಿಟ್ಟು ಸ್ನೇಹಿತನನ್ನು ಪರೀಕ್ಷೆ ಮಾಡಬೇಡ..." ಗುಂಡೂರಾಯರು ಖಡಾಖಂಡಿತವಾಗಿಯೇ ಹೇಳಿದರು.

ನರಹರಿಗೆ ಸಿಟ್ಟು ಬಂತು— "ಎಲ್ಲಾ ಇವಳು ಮಾಡಿದ್ದೇ ಅನಾಹುತ... ಲೇ ಸುಧಾ... ನಾನು ಹೇಳ್ತೀನಿ.., ಸುಮ್ನೆ ಕೆಲ್ಸಕ್ಕೆ ರಾಜೀನಾಮೆ ಬರೆದು ಈ ಕೂಡ್ಲೇ ಹೊರಡು ನಮ್ಮ ಜೊತೆಗೆ" ಎಂದ.

ಇವರ ಮಾತುಗಳಲ್ಲಿ ಅದುವರೆಗೆ ಸಕ್ರಿಯ ಪಾತ್ರ ವಹಿಸದ ಸುಧಾ ತಟ್ಟನೆ ಹೇಳಿದಳು— "ಅಣ್ಣಾ, ನಿನಗೂ ಈ ವಿಚಾರಕ್ಕೂ ಸಂಬಂಧ ಇಲ್ಲ- ನಾನೀಗ ಚಿಕ್ಕಮಗು ಅಲ್ಲ... ನನಗೂ ನನ್ನ ಸ್ವಂತ ಜವಾಬ್ದಾರಿ ಇದೆ... ನಾನು ಒಬ್ಬ ಹೆಣ್ಣು ಅಂತ ನೀವೆಲ್ಲ ಇಷ್ಟು ಹಾರಾಡ್ತಿದೀರಿ ಆದರೆ... ಈಗ ನಾನೇ ಹೇಳ್ತೀನಿ... ನಾನು ರಾಜೀನಾಮೆ ಕೊಡೋದಿಲ್ಲ... ಆ ವಕೀಲರ ಮನೇವಳಗೂ ಇರೋದಿಲ್ಲ... ನನ್ನ ಪಾಡಿಗೆ ನಾನು ಇದೇ ಮನೇಲೇ ಇರ್ತೀನಿ..."

"ಒಬ್ಬಳೇ ಇರ್ತೀಯಾ?" ವಾಸುದೇವಯ್ಯ ಕೋಪವನ್ನು ತಡೆದು ಕೇಳಿದರು.

"ಹೌದು... ಒಬ್ಬಳೇ ಇರ್ತೀನಿ... ಹೇಗೂ ವಿಜಯ ಇನ್ನೊಂದು ತಿಂಗಳ ನಂತರ ಬರಲೇ ಬೇಕಾಗುತ್ತೆ... ಆಮೇಲೆ ನೋಡೋಣಂತೆ..."

"ಸುಧಾ... ನೀನು ತುಂಬಾ ಅತಿಯಾಗಿ ಆಡ್ತಾ ಇದೀಯ... ನಿಂಗೆ ತಂದೆ ತಾಯಿ, ಅಣ್ಣ ತಮ್ಮ ಯಾರ ಭಯವೂ ಇಲ್ಲ. ಹುಷಾರಾಗಿರು... ನೀನು ಇದೇ ಹಟ ಮುಂದುವರಿಸಿದೇ ಅಂದ್ರೆ... ನೀನು ನಮ್ಮನೆಲ್ಲ ಮರೀ ಬೇಕಾಗುತ್ತೆ ...

"ಅಪ್ಪಾ... ನೀವು, ತಂದೆ ತಾಯಿ ಅಣ್ಣ ಇವರ ಭಯ ಇಲ್ಲ ಅಂತ ಹೇಳಿದಿ,... ನಿಜ... ನೀವೆಲ್ಲ ಭಯಪಡಿಸೋ ಜನ... ಪ್ರೀತಿ ಅನ್ನೋ ಮೌಲ್ಯಕ್ಕೆ ನಿಮ್ಮಲ್ಲಿ ಬೆಲೆ ಇಲ್ಲ... ಇಂಥ ನಿಮ್ಮ ರಕ್ಷಣೆ ನಂಗೂ ಬೇಡ. ನನ್ನ ರಕ್ಷಣೆ ನಾನು ಮಾಡ್ಕೋತೀನಿ"

ವಾಸುದೇವಯ್ಯ, ನರಹರಿ, ಇಬ್ಬರೂ ಸಿಟ್ಟಿನಿಂದ ಕಂಗಾಲಾದರು. ಗುಂಡೂರಾಯರೇ ಮಧ್ಯೆ ಬಾಯಿಹಾಕುತ್ತಾ—

"ಹೋಗ್ಲಿ ಬಿಡೋ ವಾಸೂ... ಅವಳ ಇಷ್ಟ ಇದ್ದ ಹಾಗೇ ಇರ್ಲಿ... ನೀವು ಊರಿಗೆ ಹೋಗ್ರಿ ನಿಮ್ಮ ಪಾಡಿಗೆ..." ಎಂದರು.

ಮೂವರೂ ಸುಧಾಳನ್ನು ಅಲ್ಲಿಯೇ ಬಿಟ್ಟು ನಡೆದರು.

ಸುಧಾ ಬೇಗ ಬೇಗ ಹಾಸಿಗೆ ಸುತ್ತಿಟ್ಟಳು. ಮನೆಯನ್ನೆಲ್ಲ ಒಪ್ಪವಾಗಿ ಗುಡಿಸಿದಳು. ಗಡಿಯಾರ ನೋಡಿದಾಗ ಇನ್ನೂ ಎಂಟೂಕಾಲು ಗಂಟೆಯಾಗಿತ್ತು. ಬಚ್ಚಲು ಮನೆಯ ಹಂಡೆಗೆ ತೊಟ್ಟಿಯಿಂದ ನೀರು ತೋ...ಳು. ಒಲೆಗೆ ಉರಿಯನ್ನು ಹಾಕಿ ಪ್ರೆಷರ್ ಕುಕರ್ ...ಲೆ ಅಡಿಗಿಟ್ಟು ಆ ದಿನದ ಪಾಠದ ಸಿದ್ಧತೆಗೆ ತೊ...ದಳು. ವಿಜಯನ ಪತ್ರ ಎದುರಿಗೆ

ಇತ್ತು–ಅದನ್ನು ಮತ್ತೊಮ್ಮೆ ವಾಚಿಸುವ ಮನ ಸ್ಸಾಯಿತು–

ಸಮಾಜದ ಬಗ್ಗೆ ವಿಜಯನ ಕಲ್ಪನೆ ಎಷ್ಟೊಂದು ಯಥಾರ್ಥ! ಅದು ವ್ಯಕ್ತಿಗೆ ಯಾವ ಸ್ವಾತಂತ್ರ್ಯವನ್ನೂ ನೀಡುವುದಿಲ್ಲ– ಏಕೆ? ಹೌದು... ಅದಕ್ಕೆ ಅಗಾಧ ಜನಬಲವಿದೆ. ಬಹು ಜನಗಳ ಶಕ್ತಿಯ ಮುಂದೆ ವ್ಯಕ್ತಿ ನಿರ್ವಿಣ್ಣ... ಅವನು ಎಷ್ಟೇ ಬಲಾಢ್ಯ ನೆನೆಸಿದರೂ, ಅವನ ಬಲವೆಲ್ಲ ಯಾವುದೋ ಸಾಮಾಜಿಕ ಮೌಲ್ಯದ ಬೃಹದ್ರೂಪವಷ್ಟೆ! ಅದು ವ್ಯಕ್ತಿಯನ್ನು ಅವನಂತೆ ಬೆಳೆಯಗೊಡುವುದಿಲ್ಲ. ತನ್ನಂತೆಯೇ ಅವನು ಬೆಳೆಯಲಿ ಎಂದು ಬಯಸುತ್ತದೆ. ವ್ಯಕ್ತಿ ಸೋಲುತ್ತಾನೆ. ಅವನು ಮೊದಲು ಸೆಣಸಿದರೂ, ತನ್ನಾಟ ಸಾಗದೇ ಸೋತು ಸಮಾಜದ ಜೊತೆ ಬೆರೆಯುತ್ತಾನೆ. ಹತ್ತರಲ್ಲಿ ಹನ್ನೊಂದನೆಯವನಾಗುತ್ತಾನೆ... ಗುಂಪಿನಲ್ಲಿ ಗೋವಿಂದನಾಗುತ್ತಾನೆ... ಸಮಾಜ ಹೀಗೆ ಪಡೆದು ಗೆಲುವು ಮುಂದುವರಿದು ವ್ಯಕ್ತಿಯ ವೈಯಕ್ತಿಕ ಚಿಂತನೆ ಲೋಪವಾಗುತ್ತದೆ... ಪಾಪವಾಗುತ್ತದೆ...

ಸುಧಾ ಪತ್ರವನ್ನು ಮಡಿಸಿಟ್ಟಳು. ಒಳಗೆದ್ದು ಹೋಗಿ ಪ್ರೆಷರ್‌ಕುಕರ್ ಕೆಳಗಿಳಿಸಿ ಬಂದು ಕುಳಿತಾಗ ತಾನು ಮಾಡಿದ್ದು ಆತುರವೇ ಎಂಬ ಪ್ರಶ್ನೆ ಅವಳೆದುರು ನಿಂತಿತು. ಇನ್ನು ತಾನು ಚಿತ್ರದುರ್ಗವನ್ನು ಮರೆತ ಹಾಗೆಯೇ. ಅಪ್ಪ, ಅಮ್ಮ– ಅಣ್ಣ ಅಕ್ಕ ಎಲ್ಲರೂ ತನ್ನಿಂದ ದೂರ! ತಾನು ಹಾಗೆ ಒಂಟಿಯಾಗಿ ಬಾಳಬಲ್ಲೆನೆ? ತನ್ನ ವ್ಯಕ್ತಿತ್ವವನ್ನು ಆ ವ್ಯಕ್ತಿಗಳ ಗುಂಪಿನೊಡನೆ ಕರಗಿಸಿಕೊಂಡಿದ್ದ ತಾನು ಇದೀಗ ನೆಮ್ಮದಿಯಾಗಿರಬಲ್ಲೆನೆ? ವಿಜಯ ತನ್ನ ಈ ವರ್ತನೆಯ ಬಗೆ ಯಾವ ಪ್ರತಿಕ್ರಿಯೆ ತೋರಿಸಬಹುದು? ಅಥವಾ ಅಪ್ಪ ಹೇಳಿದಂತೆ, ರಾಜೀನಾಮೆ ಬರೆದು ಯಾಕೆ ಊರಿಗೆ ಹಿಂದಿರುಗಬಾರದು?

ಆದರೆ... ಆದರೆ... ರಾಜೀನಾಮೆ ಎಷ್ಟು ಮಿಥ್ಯೆಗಳನ್ನು ಸ್ಥಾಪಿಸುತ್ತದೆ... ತಾನು ನೀತಿಗೆಟ್ಟವಳು.. ನಿರ್ಲಜ್ಜಳು... ಅಪರಿಚಿತನೊಡನೆ ಮೂರು ರಾತ್ರಿಗಳನ್ನು ನಿರಾತಂಕವಾಗಿ ಕಳೆದವಳು... ಅನುದ್ವೇಗಕರ ವರ್ತನೆಯನ್ನು ಈ ಕೃತಕ ಜೀವನದಲ್ಲಿ ರೂಢಿಸಿಕೊಳ್ಳತೊಡಗಿದ ತನ್ನ ಪ್ರಯತ್ನ ಕೇವಲ ಹಾಸ್ಯಾಸ್ಪದ!

ಇದ್ದಕ್ಕಿದ್ದ ಹಾಗೆಯೇ, ಅವಳಿಗೆ ರವಿಯ ನೆನಪಾಯಿತು! ತನ್ನ ತಂದೆ ತನ್ನನ್ನು ಆತನಿಗೆ ಕೊಡಬೇಕೆಂದು ಬಯಸಿದ್ದ. ತನ್ನ ಮನಸ್ಸು ಆ ತರುಣನತ್ತ ಕೆಲವು ಸಾರಿ ತಿರುಗಿದುದೂ ಸುಳ್ಳಲ್ಲ... ಆದರೆ. ತನ್ನ ಮತ್ತು ವಿಜಯನ ಸಂಬಂಧದ ಮುಗ್ಧತೆಯನ್ನು ಗ್ರಹಿಸಲು ಅವನೂ ಸಿದ್ದನಿಲ್ಲ. ಛೆ... ರವಿಯೂ, ತನ್ನ ತಂದೆ, ಅಣ್ಣ– ಇವರ ಸಾಲಿಗೆ ಸೇರುವ ಆ ಹಾಳು ಸಮಾಜದ ಸ್ವಯಂಸೇವಕ...! ಹೌದು... ತಾನು ಇವರೆಲ್ಲರನ್ನೂ ಸೆಣಸಿ ನಿಲ್ಲಬೇಕು.. ಅವರ ಅನಿಸಿಕೆಗಳಿಂದ ನನ್ನ ವ್ಯಕ್ತಿತ್ವದ ನಿರ್ಮಾಣವಾಗಬೇಕಾಗಿಲ್ಲ. ನನ್ನನ್ನು ನಾನೇ ಕಂಡುಕೊಳ್ಳಬೇಕು.. ನಾನು ಮಾಡಿದ್ದೇ ಸರಿ... ಎಂದು ತೀರ್ಮಾನಿಸಿದವಳೇ ಸ್ನಾನಕ್ಕಾಗಿ ಹೊರಟಳು.

ಒಂದು ವಾರ ಕಳೆದು ಹೋಯಿತು... ಸುಧಾ ಒಂಟಿಯಾಗಿಯೇ ಉಳಿದಳು. ದಿನಕ್ಕೆ ಮೂರು ನಾಲ್ಕು ಬಾರಿಯಾದರೂ ವಿಜಯನ ಪತ್ರವನ್ನು ಓದಿಕೊಳ್ಳುತ್ತಾ ತನ್ನ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಳು. ಆ ದಿನ ಶಾಲೆಗೆ ಹೋದಾಗ ಅಲ್ಲಿ ಎರಡು ಪತ್ರಗಳು ಇವಳಿಗಾಗಿ ಕಾಯುತ್ತಿದ್ದವು. ಅವೇ ಪತ್ರಗಳೇ ಅವಳಿಗೆ ಆ ಊರಲ್ಲಿ ಬಂದ ಪ್ರಥಮ ಪತ್ರಗಳು–

ಒಂದು ತಂದೆಯಿಂದ; ಮತ್ತೊಂದು ಯಾವುದೆಂದು ನೋಡಿದಾಗ ಅವಳಿಗೆ ಏನೋ ಸಂತೋಷ! ಪತ್ರದ ಮೇಲಿದ್ದ ಅಕ್ಷರಗಳಿಂದಲೇ ಅದು ವಿಜಯನ ಪತ್ರ ಎಂದು ಕಂಡುಕೊಂಡಳು. ತಂದೆಯ ಪತ್ರವನ್ನು ಓದುವ ಕುತೂಹಲ ಹುಟ್ಟಲಿಲ್ಲ... ವಿಜಯನ ಪತ್ರವನ್ನು ತೆರೆಯುತ್ತಿದ್ದಳು. ಅಷ್ಟರಲ್ಲೇ ಗಂಟೆಯಾದುದರಿಂದ ಹಾಗೇ ಮಡಿಸಿ ಪುಸ್ತಕದ ಮಧ್ಯೆ ಇಟ್ಟಳು. ವಿರಾಮ ವೇಳೆ ಸಿಗುವವರೆಗೂ ಚಡಪಡಿಸಿದ ಸುಧಾ, ಸ್ಟಾಫ್‌ರೂಮಿನ ಮೂಲೆಯಲ್ಲಿ ಕುಳಿತು ಅವನ ಪತ್ರ ಬಿಚ್ಚಿದಳು–

"ಸುಧಾ, ನೀನು ಅದೇ ಶಾಲೆಯಲ್ಲಿ ಮುಂದುವರಿದಿದ್ದೀಯೆ–ಎಂಬ ನಂಬುಗೆಯಿಂದ ಈ ಪತ್ರ ಬರೆದಿದ್ದೇನೆ. ನಾನು ಅಲ್ಲಿಂದ ಹೊರಟು ನೇರವಾಗಿ ಇಲ್ಲಿಗೆ ಬಂದೆ– ಪ್ರವಾಸೀ ಮಂದಿರದಲ್ಲಿ ತಂಗಿದ್ದೇನೆ.. ಒಂಟಿಯಾಗಿದ್ದೇನೆ... ಪ್ರಾಯಶಃ ನಿನ್ನ ಸಮಸ್ಯೆಗಳೆಲ್ಲ ಬಗೆ ಹರಿದು, ಇದೀಗ ನೀನು ಗುಂಡೂರಾಯರ ಮನೆಯಲ್ಲಿಯೇ ವಾಸಿಸುತ್ತಿದ್ದೀಯೆ–ಎಂದು ನಂಬಿದ್ದೇನೆ. ದಯವಿಟ್ಟು ನನಗಾಗಿ ಒಂದು ಕೆಲಸ ಮಾಡು... ನನ್ನ ಹೋಲ್ಡಾಲಿನ ಒಳಪದರದಲ್ಲಿ ನನ್ನ ಡೈರಿ ಇದೆ... ಅದನ್ನು ಅಂಚೆಯ ಮೂಲಕ ನಾಳೆಯೆ ಕಳಿಸಿಕೊಡು. ದಯವಿಟ್ಟು ಅದನ್ನು ಓದುವ ಸಾಹಸ ಮಾಡಬೇಡ... ನನ್ನ ರಜೆಯ ಅವಧಿ ಮುಗಿದೊಡನೆ ಬರುತ್ತೇನೆ... ದಯವಿಟ್ಟು ಯಾವ ಪತ್ರವನ್ನೂ ಬರೆಯಬೇಡ... ಡೈರಿಯನ್ನು ಮರೆಯದೆ ಕಳುಹಿಸು–ಇಂತು–"

ನಂತರ ತಂದೆಯಿಂದ ಬಂದ ಪತ್ರ–

"ಚಿ॥ ಸುಧಾಗೆ ಆಶೀರ್ವಾದಗಳು,... ನೀನು ನನ್ನ ಮಾತಿಗಾಗಲೀ, ನಿಮ್ಮ ಅಣ್ಣನ ಮಾತಿಗಾಗಲೀ ಕುರುಡು ಕವಡೆಯ ಬೆಲೆಯನ್ನೂ ಕೊಡಲಿಲ್ಲ... ನಿನ್ನನ್ನು ಮಗಳೆಂದು ಹೇಳಿಕೊಳ್ಳಲೂ ನನಗೆ ಮನಸ್ಸಿಲ್ಲ.. ಆದರೂ ನಿನ್ನ ತಾಯಿಯ ಒತ್ತಾಯದಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ... ನಿಮ್ಮ ಅಕ್ಕ ಭಾವ ಇಲ್ಲಿಗೆ ಬಂದು ಎರಡು ದಿನವಾಯ್ತು... ನಿನ್ನನ್ನು ನೋಡಬೇಕೆಂದು ಹಂಬಲಿಸುತ್ತಾರೆ. ಆದಕಾರಣ... ನೀನು ನಾಳೆಯೇ ಅಲ್ಲಿಂದ ಹೊರಟು ಬಂದು ಒಂದೇ ದಿನ ಇಲ್ಲಿದ್ದು ಹೋಗು... ನಿಮ್ಮ ತಾಯಿ, ಅಕ್ಕ ಭಾವ ಎಲ್ಲರೂ ನಿನಗೆ ಆಶೀರ್ವಾದ ತಿಳಿಸಿದ್ದಾರೆ... ಇಂತು ಆಶೀರ್ವಾದಗಳು..."

ಅಷ್ಟರಲ್ಲಿ ಗಂಟೆಯಾಯಿತು... ಸುಧಾ ಮೇಲೆದ್ದಳು. ಎರಡು ಪತ್ರಗಳೂ ಒಂದೊಂದು ರೀತಿ ಅವಳನ್ನ ಸೆಳೆಯುತ್ತಿದ್ದವು "ಹೇಗೂ ವಿಜಯ ಇರುವ ಸ್ಥಳ ಗೊತ್ತಾಗಿದೆ.. ನಾನೇ ನೇರವಾಗಿ ಈ ಡೈರಿಯೊಡನೆ ಏಕೆ ಹೋಗಬಾರದು? ಬೇಕಾದಷ್ಟು ಮಾತನಾಡಬೇಕಾಗಿದೆ... ನನ್ನ ಜೀವನದ ಹೊಸ ನಿರ್ಧಾರದಿಂದ ಅವನು ಬಹುಮಟ್ಟಿಗೆ ಸಂತೋಷಗೊಳ್ಳಬಹುದು"–ಎಂದುಕೊಂಡಳು. ಮತ್ತೊಮ್ಮೆ ತನ್ನ ಪ್ರೀತಿಯ ಅಕ್ಕ ಬಂದಿದ್ದಾಳೆ... ತಾನೇಕೆ ಒಂದು ದಿನ ಮಟ್ಟಿಗೆ ಊರಿಗೆ ಹೋಗಬಾರದು? ಎನ್ನಿಸಿತು.

ಶಾಲೆ ಮುಗಿದೊಡನೆಯೇ ಬೇಗ ಬೇಗ ಮನೆಯ ಕಡೆ ಹೆಜ್ಜೆ ಹಾಕತೊಡಗಿದಳು.

"ಹಲೋ ಸುಧಾ..." ಕೂಗಿದವರಾರೆಂದು ಸುಧಾ ತಿರುಗಿ ನೋಡಿದಳು. ರವಿ ನಗುತ್ತಾ ನಿಂತಿದ್ದ. ಇತ್ತೀಚೆಗೆ ಅವನೊಂದಿಗೆ ಮಾತನಾಡುವ ಅವಕಾಶವೇ ಅವಳಿಗೆ ಸಿಕ್ಕಿರಲಿಲ್ಲ. ಮನೆಯನ್ನು ಬಿಟ್ಟು ಶಾಲೆಯ ವಿನಾ ಕಳೆದ ಒಂದು ವಾರದಿಂದ ಅವಳು ಅತ್ತಿತ್ತ ಚಲಿಸಿರಲಿಲ್ಲ. ಇದೀಗ ಆಕಸ್ಮಿಕ ಭೇಟಿಯಾಗಿತ್ತು ರವಿಯೊಂದಿಗೆ.

"ಚೆನ್ನಾಗಿದ್ದೀರಾ ರವಿ?" ಎಂದಳು.

"ಹೀಗಿದೀನಿ... ವಿಜಯನಿಂದ ಏನಾದರೂ ಪತ್ರ ಗಿತ್ರ..."

ಈಗ ಏನು ಹೇಳಬೇಕೆಂಬುದೇ ಸುಧಾಳಿಗೆ ಸಮಸ್ಯೆಯಾಯಿತು. ಪತ್ರ ಬಂದಿರುವುದು ನಿಜ... ಆದರೆ ಹೇಳಬೇಕೋ ಬೇಡವೋ. ಬಹಳ ಹೊತ್ತು ಸುಮ್ಮನಿರುವ ಹಾಗಿಲ್ಲವಲ್ಲ... ಏನಾದರೂ ಒಂದು ಹೇಳಲೇಬೇಕು... ವಿಜಯನೇನೂ ತನ್ನ ಪತ್ರದಲ್ಲಿ ವಿಳಾಸವನ್ನು ಯಾರಿಗೂ ತಿಳಿಸಬಾರದೆಂದು ಬರೆದಿಲ್ಲ... ಹಾಗಿದ್ದರೆ ಅವನ ಪತ್ರದ ವಿಷಯ ಏಕೆ ಹೇಳಬಾರದು?

"ಇಲ್ಲ ರವಿ... ಅವರು ಎಲ್ಲಿದ್ದಾರೆಂದೇ ನನಗೆ ಗೊತ್ತಿಲ್ಲ... ಪತ್ರವಂತೂ ಇಲ್ಲ." ಎಂದಳು. ಯಾಕೆ ತಾನು ಹಾಗೆ ಹೇಳಿದೆ ಎಂಬುದು ಅವಳಿಗೇ ಗೊತ್ತಾಗಲಿಲ್ಲ...

"ಸರಿ ಬಿಡಿ... ವಿಚಿತ್ರ ಮನುಷ್ಯ... ಅದಿರ್ಲಿ ಸುಧಾ... ಈಗ ನಾನು ಪಿಕ್ಚರಿಗೆ ಹೊರಟದೀನಿ... ನೀವೂ ಬರ್ತೀರೇನು?"

ಸುಧಾಗೆ ಎದೆ ಡವಗುಟ್ಟತೊಡಗಿತು. ಈ ಊರಿಗೆ ಬಂದ ಪ್ರಥಮದಲ್ಲಿ ತಾನು ವಿಜಯನನ್ನು ಹೀಗೆಯೇ ಹಿಂಬಾಲಿಸಿದ್ದೆ... ಅವನೇನೂ ಹೀಗೆ ತನ್ನನ್ನು ಕರೆದಿರಲಿಲ್ಲ. ಇದೀಗ ರವಿ ಆಹ್ವಾನ ನೀಡುತ್ತಿದ್ದಾನೆ.

ಹೋಗುವುದೇ ಬಿಡುವುದೇ? ಸುಧಾ ಕ್ಷಣ ಹೊತ್ತು ನಿರ್ಧಾರದ ಇಬ್ಬಂದಿಯಲ್ಲಿ ತೂಗಾಡಿದಳು.

"ಬನ್ನಿ ಹೋಗೋಣ... ಪಾಪ... ನಿಮ್ಗೂ ಒಬ್ಬರಿಗೇ ಬೇಜಾರು... ನಂಗೂ ಇವತ್ತು ಯಾರೂ ಫ್ರೆಂಡ್ಸ್ ಸಿಕ್ಲಿಲ್ಲ... ಹೇಗೂ ನೀವು ಅನಾಯಾಸವಾಗಿ ಸಿಕ್ಕಿದ್ರಿ... ಅಥವಾ ನಿಮಗೆ ನನ್ನ ಜೊತೆಗೆ ಬರೋದಕ್ಕೆ ಇಷ್ಟ ಇಲ್ದಿದ್ರೆ ಬೇಡ... ಬಲವಂತವೇನೂ ಇಲ್ಲ."

"ಛೆ...ಛೆ..., ಸಾರಿ ರವಿ! ನೀವಾರೀತಿ ಯಾಕೆ ಯೋಚಿಸ್ತೀರಿ? ನಡೀರಿ ಹೋಗೋಣ... ನಂಗೂ ನೀವು ಹೇಳಿದ ಹಾಗೆ ಈಗೊಂದು ವಾರದಿಂದ ಬಲೇ ಬೇಜಾರಾಗಿದೆ..." ಎಂದವಳೇ ರವಿಯೊಡನೆ ಜೊತೆಯಾದಳು.

ಇಬ್ಬರೂ ಕೆಲದೂರ ಮೌನವಾಗಿ ಸಾಗಿದರು. ಏನನ್ನು ಕುರಿತು ಮಾತನಾಡಬೇಕೆಂದು ಇಬ್ಬರೂ ಯೋಚಿಸುತ್ತಿದ್ದರು.

"ವಿಜಯನಿಗೆ ರಜಾ ಸ್ಯಾಂಕ್ಷನ್ ಆಯ್ತಾ?" ಎಂದ ರವಿ. ಸುಮ್ಮನೆ ಒಂದು ಪ್ರಶ್ನೆ ಅದು. ಅಷ್ಟೇ... ಅದರ ಉತ್ತರದಿಂದ ಅವನಿಗಾಗಬೇಕಾದುದೇನೂ ಇಲ್ಲ.

"ಹೌದು... ನಿನ್ನೆ ಬಂತು ಸ್ಯಾಂಕ್ಷನ್ ಆರ್ಡರು..." ಮತ್ತೆ ಸುಧಾ ಮೌನತಾಳಿದಳು, ಅವಳಿಗೆ ತಾನು ರವಿಯೊಡನೆ ರಸ್ತೆಯಲ್ಲಿ ನಡೆಯುತ್ತಿರುವ ದೃಶ್ಯ ಏಕೋ ಹಿಂಸೆಯಾದಂತೆನಿಸಿತು.

ದಾರಿಯಲ್ಲಿ ರವಿಯ ಪರಿಚಿತರು ಹಲವಾರು ಜನ ಭೇಟಿಯಾದರು. ಈ ವೇಳೆಗೆ ಸುಧಾ ಸಹ ಆ ಊರಿನ ಹಲವರಿಗೆ ಚಿರಪರಿಚಿತಳಾಗಿ ಬಿಟ್ಟಿದ್ದಳು. ಅವಳು ವಿಜಯನೊಂದಿಗೆ ತಿರುಗಾಡಿದುದನ್ನು ಅನೇಕರು ಕಂಡಿದ್ದರು. ಇದೀಗ ರವಿಯ ಜೊತೆಗೆ ಅವಳು ಹೋಗುತ್ತಿರುವ ಬಗ್ಗೆ ಸುತ್ತ ಮುತ್ತಣ ಕೆಲಜನರಲ್ಲಿ ಕುಹಕ ತಲೆದೋರಿದುದು ಸಹಜವೇ. ಬಾಲ್ಕನಿಯಲ್ಲಿ ಅಕ್ಕಪಕ್ಕದ ಸೀಟುಗಳಲ್ಲಿ ಇಬ್ಬರೂ ಕುಳಿತರು. ಯಾವುದೋ ಹಿಂದಿ ಚಿತ್ರ ನೆರಳು ಬೆಳಕುಗಳ ಕಣ್ಣು ಮುಚ್ಚಾಲೆ ಸಾಗತೊಡಗಿತು. ರವಿಯ ಬಲತೋಳು ತನ್ನ ಬಲಭುಜದಿಂದ ಇಳಿಬಿದ್ದಿರುವುದನ್ನು ಸುಧಾ ಗುರುತಿಸಿದಳು... ಛಿ... ಇವನೆಂತಹ ಅನಾಗರಿಕ! ಜೊತೆಗೇ ಮೂರು ರಾತ್ರಿಗಳನ್ನು ಏಕಾಂತದಲ್ಲಿ ಕಳೆದರೂ ವಿಚಲಿತನಾಗದ ವಿಜಯನೆಲ್ಲಿ! ಈ ಕಾಮುಕನೆಲ್ಲಿ! ಎಂದು ಅವಳ ಮನಸ್ಸು ಆ ಇಬ್ಬರು ಪುರುಷರನ್ನೂ ತಕ್ಕಡಿಯಲ್ಲಿಟ್ಟು ತೂಗಿತು. ಆದರೆ ತನ್ನ ಭುಜದ ಮೇಲಿದ್ದ ರವಿಯ ಒರಟು ತೋಳುಗಳನ್ನು ಅವಳು ವಿರೋಧಿಸಲಿಲ್ಲ. ಆ ಕೈ ಭುಜದಿಂದ ಕೆಳಗಿಳಿಯತೊಡಗಿದಾಗ ರಜತಪರದೆಯ ಮೇಲೆ ಮೂಡಿದ್ದ ಸನ್ನಿವೇಶವೊಂದರಲ್ಲಿ ಸುಧಾ ತನ್ಮಯಳಾಗಿ ತನ್ನ ಎಡಗೈಯಿಂದ ಆ ಒರಟು ಕೈಯನ್ನು ಹಿಡಿದು ತನ್ನ ಎದೆಯ ಮೇಲೆ ಇಟ್ಟುಕೊಂಡಾಗ–

"ಸುಧಾ... ನೀನು ತುಂಬ ಚೆಲುವೆ..." ಎಂದು ರವಿ ಅವಳ ಕಿವಿಯಲ್ಲಿ ಬಾಯಿಟ್ಟ. ರವಿಯ ಕೈಯನ್ನು ಹಿಡಿದೇ ಇದ್ದ ಸುಧಾ ಬೆಚ್ಚಿದಳು. ಕೈಬಿಟ್ಟಳು... ಅವಳ ಮನಸ್ಸಿಗೆ ಯಾರೋ ಬೆಂಕಿ ಇಟ್ಟಂತಾಗಿತ್ತು. ಕಣ್ಣುಗಳು ಕೆಂಪಾಗಿದ್ದವು.. ಒಂದು ರೀತಿಯ ಅಪಮಾನದ, ಸೋಲಿನ ಅನುಭವವಾಯಿತು... "ಥೂ... ನಾನು ತೀರಾ ದುರ್ಬಲಳು... ವಿಜಯ್... ನಿನ್ನ ಸ್ಥೈರ್ಯ ನನಗಿಲ್ಲ... ನೀನು ಗೆದ್ದೆ... ನಾನು ಸಂಪೂರ್ಣ ಸೋತೆ... ಈ ಪರಾಭವಕ್ಕಾಗಿ ನಾನು ಇಷ್ಟೆಲ್ಲ ಸಮಸ್ಯೆಗಳನ್ನು ಏಕೆ ಮೈಮೇಲೆ ಎಳೆದುಕೊಂಡೆ? ಪ್ರಪಂಚವೇ ತನ್ನ ಸೋಲೊಪ್ಪಿ ಮುನ್ನಡೆದಿರುವಾಗ, ನಿನ್ನನ್ನು ಕಂಡು ನಾನೂ ನಿನ್ನಂತೆಯೇ ಸೋಲಬಾರದೆಂಬ ದುರಾಶೆ ನನ್ನಲ್ಲೇಕೆ ಹುಟ್ಟಿತು? ವಿಜಯ್... ನೀನು ನನ್ನ ಪರಿಚಯ ಮಾಡಿಕೊಳ್ಳಬಾರದಾಗಿತ್ತು... ಹೌದು... ನಾನು ಪರಾಜಿತೆ" ಎಂದುಕೊಂಡಳು– ಅವಳ ಕಣ್ಣಂಚಿನಲ್ಲಿ ಅವಳರಿವಿಲ್ಲದೇ ಎರಡು ಹನಿಗಳು ಮೂಡಿದುವು.

ರವಿಗೆ ಅವಳ ಮಾನಸಿಕ ತುಮುಲದ ಪರವೆ ಇರಲಿಲ್ಲ... ಅವಳು ಚೆಲುವೆ... ಆ ವಿಜಯನೊಂದಿಗೆ ಮೂರು ರಾತ್ರಿಗಳನ್ನು ಕಳೆದವಳು. ವಿಜಯನ ಹೇಳಿಕೆಯಂತೆ ಅವರಿಬ್ಬರೂ ನಿಷ್ಕಲ್ಮಷರು... ಇದೀಗ ಪರೀಕ್ಷಿಸಿಯಾಯಿತು. ಸುಧಾ ತನ್ನ ವರ್ತನೆಗೆ ತೋರಿದ ಪ್ರತಿಕ್ರಿಯೆ? ವಿರೋಧವಿಲ್ಲದ ಸಮ್ಮತಿ? ಹೌದು ಸುಧಾ ಚೆಲುವೆ–ವಿಜಯನೂ ಆಕರ್ಷಕ ಯುವಕ... ಇವಳು ಕೆಡದಿರುವ ಸಂಭವವೇ ಇಲ್ಲ... ಇವಳು ಆಕರ್ಷಕ ಯುವಕರ ತೋಳ್ತೆರೆಯ ಬಂದಿ... ಬೆಲೆ ಬಾಳುವ ಹೆಣ್ಣಲ್ಲ... ಒಬ್ಬಂಟಿಯಾಗಿದ್ದಾಳೆ... ಇವಳನ್ನು ತಾನೀಗ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲೇಬೇಕು...

ರವಿಯ ಮುಖದಲ್ಲಿ ಎಂಥದೋ ಕ್ರೌರ್ಯ ಸುಳಿದಾಡಿತು. ಕಣ್ಣೆದುರಿಗೆ ಬೆಳ್ಳಿ ತೆರೆಯ ಮೇಲೆ ನಾನಾ ದೃಶ್ಯಗಳು ಮೂಡಿ ಮಾಯವಾಗುತ್ತಿದ್ದವು. ಅವನು ಆ ದೃಶ್ಯ ಪರಂಪರೆಗಳೊಂದಿಗೆ ಬೆರೆಯಲು ನಿರಾಕರಿಸತೊಡಗಿದ. ವಿಜಯ ಒಂದು ತಿಂಗಳ ಕಾಲ ರಜೆ ಹಾಕಿದ್ದಾನೆ... ಅದರಲ್ಲಿ ಎಂಟು ದಿನಗಳು ಕಳೆದಿವೆ. ಉಳಿದ ಮೂರುವಾರಗಳಷ್ಟು ಸಮಯವನ್ನು ಅವನು ತನಗೆ ನೀಡಿ ಹೋಗಿದ್ದಾನೆ... ಸ್ನೇಹ ಧರ್ಮ ಎಂದರೆ ಹೀಗಿರಬೇಕು... ತಾನು ಸವಿದ ವಸ್ತುವನು ಸ್ನೇಹಿತನಿಗೂ ನೀಡಬೇಕಲ್ಲವೆ?


ಹಬ್ಬದ ಹರುಷ! ಸಫಲತೆಯ ಪ್ರತಿಧ್ವನಿ!
ಉತ್ಸಾಹ ಜನಕ ಭಾವೋದ್ರೇಕದ ಸ್ಫೂರ್ತಿ ಮತ್ತು ಸ್ಪಂದನ. ಹೆಚ್ಚು ಉಳಿತಾಯ→ ಹೆಚ್ಚು ಉತ್ಪಾದನೆ→ ಬೆಲೆಗಳ ಇಳಿಕೆ→ ಮತ್ತೂ ಉಳಿತಾಯ
ದುಡಿಮೆ, ಉತ್ಪಾದನೆ ಮತ್ತು ಉಳಿತಾಯಗಳ ಮೂಲಕ ಈ ಆನಂದೋತ್ಸವಗಳಲ್ಲಿ ಬ್ಯಾಂಕ ಆಫ್ ಇಂಡಿಯಾ ಜೊತೆ ಸೇರಿರಿ. ಬ್ಯಾಂಕ ಆಫ್ ಇಂಡಿಯಾ ಕಡೆಗೆ ಅನೇಕ ಉಳಿತಾಯ ಯೋಜನೆಗಳಿವೆ; ಸಾಲದ ಯೋಜನೆಗಳಿವೆ. ಮತ್ತು ನಿಮ್ಮ ನಿರ್ದಿಷ್ಟ ಅವಶ್ಯಕತೆಗಳನ್ನು ಪೂರೈಸಬಲ್ಲ ಇತರ ಉಪಯುಕ್ತ ಸೇವೆಗಳೂ ಉಂಟು.
ಬ್ಯಾಂಕ ಆಫ್ ಇಂಡಿಯಾ

"-ಯಾಕೋ ಸಿನಿಮಾ ಬೇಸರವಾಯ್ತು. ಹೋಗೋಣವೆ?" ಮರುಮಾತಾಡದೆ ಸುಧಾ ಮೇಲೆದ್ದಳು. ಇಬ್ಬರೂ ಮೆಟ್ಟಲಿಳಿದು ಹೊರಬಾಗಿಲಿಗೆ ಬಂದರು. ಚಿತ್ರಮಂದಿರದ ಹೊರಗೆ ರಿಕ್ಷಾಗಳು ನಿಂತಿದ್ದವು. ರವಿ ಕೈಬೀಸಿ ಒಂದು ರಿಕ್ಷಾವನ್ನು ಹತ್ತಿರ ಬರಮಾಡಿಕೊಂಡ. ಅಕ್ಕ ಪಕ್ಕದಲ್ಲಿ ಇಬ್ಬರೂ ಕುಳಿತರು. ರಿಕ್ಷಾ ಧಾವಿಸಿತು.

ತನ್ನ ಮನೆಯ ತಿರುವು ಬಂದಾಗ ಅದನ್ನು ಅಲ್ಲೇ ತಡೆದು ರವಿ ಕೆಳಗಿಳಿದ. ಸುಧಾ ಹಿಂಬಾಲಿಸಿದಳು.

"ನಿಮ್ಮ ಮನೆಗೆ ನಿಮ್ಮನ್ನು ಬಿಟ್ಟು ಬರ್ತೀನಿ ನಡೀರಿ..." ಎನ್ನುತ್ತಾ ಗೋಪಾಲನ ಮನೆಯ ಕಡೆ ಹೆಜ್ಜೆಹಾಕಿದ ರವಿಯನ್ನು ಸುಧಾ ಮೂಕ ಪಶುವಿನಂತೆ ಹಿಂಬಾಲಿಸಿದಳು. ತನ್ನ ಪರ್ಸಿನಿಂದ ಬೀಗದ ಕೈ ಹೊರತೆಗೆದು ಬೀಗ ತೆಗೆದು ಒಳಕ್ಕೆ ಹೋಗಿ ದೀಪ ಹಾಕಿದಳು... ರವಿ ಒಳಕ್ಕೆ ಬಂದ.

ಇನ್ನೂ ಒಂಬತ್ತು ಗಂಟೆಯಾಗಿತ್ತು. ಸುಧಾ ಮೌನವಾಗಿ ತನ್ನ ಕೈಲಿದ್ದ ಪರ್ಸನ್ನು ಎದುರಿಗಿದ್ದ ಗೂಡಿನಲ್ಲಿಟ್ಟಳು. ರವಿ ನಿಂತೇ ಇದ್ದ. ಸುಧಾ ಅವನನ್ನು ಕುಳಿತುಕೊಳ್ಳಲೂ ಹೇಳಲಿಲ್ಲ. ರವಿ ಅಲ್ಲಿದ್ದ ಹೋಲ್ಡಾಲಿನ ಮೇಲೆ ತಾನಾಗಿಯೇ ಕುಳಿತುಕೊಳ್ಳುತ್ತಾ–

"ಊಟ ಮಾಡ್ತೀರಾ ಸುಧಾ? ಅಡಿಗೆ ಆಗಬೇಕಾ?" ಎಂದು ಕೇಳಿದ.

ಸುಧಾ ಯಾವ ಉತ್ತರವನ್ನೂ ಕೊಡಲಿಲ್ಲ. ಅವಳಿಗೆ ಏನೋ ಒಂದು ವಿಧವಾದ ಭಯ ಆವರಿಸತೊಡಗಿತು. ರವಿ ಏಕೆ ಮನೆಗೆ ಹೋಗುವುದಿಲ್ಲ? ಇವನ ಉದ್ದೇಶ ಯಾವ ಭಯಂಕರ ರೂಪ ತಾಳಿದೆಯೋ? ಆದರೆ ಎದ್ದು ಹೋಗೆಂದು ಹೇಗೆ ಹೇಳುವುದು? ಕೂಗಿಕೊಳ್ಳಲೂ ಭಯ! ಮೌನವಾಗಿ ಒಳಮನೆಗೆ ನಡೆದಳು. ಬಾಗಿಲನ್ನು ಭದ್ರಪಡಿಸಿಕೊಂಡಳು. ಸೀರೆಯನ್ನು ಬದಲಾಯಿಸಿ, ಬಚ್ಚಲಿಗೆ ಹೋಗಿ ಕೈಕಾಲು ತೊಳೆದುಕೊಂಡವಳೇ ಸ್ಟೋವ್ ಬಳಿಯಿಟ್ಟಿದ್ದ ಕೆನೆಹಾಲನ್ನು ಲೋಟಕ್ಕೆ ಬಗ್ಗಿಸಿಕೊಂಡಳು. ಊಟ ಮಾಡುವ ಸಮಾಧಾನವಾಗಲೀ, ಹಸಿವೆಯಾಗಲೀ ಇರಲಿಲ್ಲ. ಪಾತ್ರೆಯಲ್ಲಿ ಇನ್ನೂ ಹಾಲು ಮಿಕ್ಕಿತ್ತು. ಮತ್ತೊಂದು ಲೋಟಕ್ಕೆ ಆ ಹಾಲನ್ನು ಬಗ್ಗಿಸಿದಳು. ಮುಕ್ಕಾಲು ಭಾಗ ಹಾಲಿನಿಂದ ತುಂಬಿದ ಆ ಲೋಟವನ್ನು ಕೈಗೆತ್ತಿಕೊಂಡಳು. ಬಾಗಿಲನ್ನು ತೆರೆದು ಹೊರಮನೆಗೆ ಬಂದಾಗ ರವಿ ಇನ್ನೂ ಕುಳಿತೇ ಇದ್ದ. ಮರುಮಾತಿಲ್ಲದೆ ಅವನ ಮುಂದೆ ಆ ಲೋಟವನ್ನು ಕುಕ್ಕಿದಳು.

ಬೆಚ್ಚಿ ಬಿದ್ದ ರವಿ ತಗ್ಗಿಸಿದ ತಲೆಯಿಂದ. ಲೋಟದಲ್ಲಿರುವ ಹಾಲನ್ನು ನೋಡಿ "ಛೆ... ಛೆ... ಸುಧಾ. ನಂಗ್ಯಾಕೆ ಈ ಹಾಲು? ಈಗ ಊಟ ಮಾಡೋದಕ್ಕೆ ನಾನು ಹೋಗೋನು... ನೀವು ತಗೊಳ್ಳಿ" ಎನ್ನುತ್ತಿದ್ದುದನ್ನು ಕೇಳಿಯೂ ಸುಧಾ ಯಾವ ಉತ್ತರವನ್ನೂ ಕೊಡದೆ ಒಳಮನೆಗೆ ನಡೆದು ಬಾಗಿಲನ್ನು ಭದ್ರಪಡಿಸಿದಳು. ಲೋಟದಲ್ಲಿದ್ದ ಹಾಲನ್ನು ಬಾಯಿಗೆ ಸುರಿದುಕೊಂಡು, ಕೈಗೆ ಸಿಕ್ಕ ಪುಸ್ತಕವೊಂದನ್ನು ಹಿಡಿದು ಅಲ್ಲೇ ಕುಳಿತಳು. ಓದಿನಲ್ಲಿ ಮನಸ್ಸು ಬೆರೆಯಲಿಲ್ಲ. ವಿಜಯನೊಟ್ಟಿಗೆ ತಾನು ಆ ಊರಿನಲ್ಲಿ ಕಳೆದ ಪ್ರಥಮ ರಾತ್ರಿಯ ನೆನಪಾಯಿತು. ವಿಜಯ ಎಷ್ಟೊಂದು ನಿರ್ವಿಕಾರ ಚಿತ್ತನಾಗಿ ಆಗ ತನ್ನ ಜೊತೆಗಿದ್ದ! ಆ ದಿನ ತನ್ನ ಮನಸ್ಸು ಹೇಗೆ ವಿಕಾರವಶವಾಗಿ ಚಡಪಡಿಸತೊಡಗಿತ್ತು! ಮರುಗಳಿಗೆಯೇ ಅವನ ವಿಚಾರಶೀಲತೆ, ನಿರುದ್ವಿಗ್ನ ವರ್ತನೆ ಎಲ್ಲವೂ ಅವಳ ಮನಸ್ಸಿನ ತೆರೆಯ ಮೇಲೆ ಒಂದೊಂದಾಗಿ ಹಾದು ಹೋದವು

ಇದೀಗ ಚಿತ್ರಮಂದಿರದಲ್ಲಿ ತನ್ನ ಎದೆಯ ಮೇಲೊರಗಿದ ರವಿಯ ಕೈಯನ್ನು ಜ್ಞಾಪಿಸಿಕೊಂಡಳು... ಎಂಥ ಮತ್ತೇರಿಸುವ ಅನುಭವ– ಎಂದುಕೊಳ್ಳುವಷ್ಟರಲ್ಲಿಯೇ, "ಛೀ... ನಾನು ಎಷ್ಟ ದುರ್ಬಲಳು! ನನ್ನಲ್ಲಿ ಆ ದೃಢತೆ ಏಕಿಲ್ಲ?" ಎಂದು ಪ್ರಶ್ನಿಸಿಕೊಂಡಳು... ಕೂಡದು... ತಾನು ಈ ದೌರ್ಬಲ್ಯವನ್ನು ಗೆಲ್ಲಬೇಕು... ರವಿಯೊಡನೆ ಸಂಭಾಷಣೆಯನ್ನು ನಿಲ್ಲಿಸಬೇಕು. ಮುಚ್ಚಿರುವ ಈ ಬಾಗಿಲುಗಳು ಎಂದಿಗೂ ಹೀಗೆಯೇ ಇರಬೇಕು.

ಕೈಯಲ್ಲಿದ್ದ ಪುಸ್ತಕ ಜಾರಿ ತೊಡೆಯ ಮೇಲೆ ಬಿದ್ದಾಗಲೇ ಸುಧಾ ಗಾಬರಿಯಿಂದ ಕಣ್ಣು ಬಿಟ್ಟು ಕೈಗಡಿಯಾರ ನೋಡಿಕೊಂಡಳು. ಗಂಟೆ ಹನ್ನೊಂದಾಗಿತ್ತು. ಕತ್ತೆತ್ತಿ ಬಾಗಿಲ ಕಡೆ ನೋಡಿದಳು...ಹಾಕಿದ್ದ ಬೋಲ್ಟ್ ಭದ್ರವಾಗಿತ್ತು... ಸದ್ಯ ಬದುಕಿದೆ ಎಂದುಕೊಂಡಳು. ವಿಜಯನೊಂದಿಗಿದ್ದಾಗ ತನ್ನ ರಕ್ಷಣೆಗೆ ಯಾವ ಬಾಗಿಲುಗಳ ಅಗತ್ಯವೂ ಇರಲಿಲ್ಲ... ತಟ್ಟನೆ ಅವನು ಕೇಳಿದ್ದ ಡೈರಿಯ ಜ್ಞಾಪಕವಾಯಿತು. ಹೌದು... ಇದೀಗ ಅವನ ಹೋಲ್ಡಾಲನ್ನು ಬಿಚ್ಚಿ ಆತನ ಡೈರಿಯನ್ನು ತೆಗೆದಿಟ್ಟುಕೊಳ್ಳಬೇಕು.

ಒಳಮನೆಯ ಬಾಗಿಲಿನ ಬೋಲ್ಟ್ ತೆರೆದು ಹೊರಕ್ಕೆ ಬಂದಳು. ದೀಪ ಉರಿಯುತ್ತಿತ್ತು ಮುಂಬಾಗಿಲು ಒಳಗಿನಿಂದ ಬೋಲ್ಟ್ ಮಾಡಲಾಗಿತ್ತು... ಉರಿಯುವ ದೀಪದ ಪ್ರಕಾಶದಲ್ಲಿ ವಿಜಯನ ಹೋಲ್ಡಾಲಿನ ಮೇಲೆ ರವಿ ಇನ್ನೂ ಹಾಗೆಯೇ ಕುಳಿತಿರುವುದನ್ನು ಕಂಡಾದ ಸುಧಾ ನಡುಕಬಂದವರಂತೆ ಕಂಪಿಸಿದಳು. "ರವಿ!... ನೀವಿನ್ನೂ ಮನೆಗೆ ಹೋಗ್ಲಿಲ್ವೆ?" ಅಕಸ್ಮಿಕವಾಗಿ ಅವಳ ಬಾಯಿಂದ ಈ ಪ್ರಶ್ನೆ ಹೊರಬಿತ್ತು. ರವಿ ಮೇಲೆದ್ದು ನಿಂತ... ಅವಳನ್ನೊಮ್ಮೆ ಆಪಾದ ಮಸ್ತಕ ನೋಡಿದ.

"ಹೊರಟಿದ್ದೆ ಸುಧಾ... ಆದ್ರೆ ಈ ಮುಂಬಾಗಿಲು ತೆರೆದೇ ಇತ್ತು... ನಿಮಗೆ ಈ ಬಾಗಿಲು ಮುಚ್ಚಿಕೊಳ್ಳಲು ಹೇಳಿ ಹೋಗೋಣಾಂತ ಕೂಗ್ದೆ... ನೀವು ಮಾತೇ ಆಡಲಿಲ್ಲ... ಸರಿ... ನೀವು ಇಲ್ಲಿಗೆ ಬರೋವರ್ಗೂ ಕಾದಿರೋಣ ಅಂತ ಇಲ್ಲೇ ಇದ್ದೆ..."

"ಸರಿ... ನಾನೀಗ ಬಾಗಲು ಹಾಕ್ಕೊಳ್ತೀನಿ... ನೀವಿನ್ನು ಹೊರಡಬಹುದು" ರವಿ ಎರಡು ಹೆಜ್ಜೆ ಮುಂದಿಟ್ಟ. ಆಮೇಲೆ ಉಗುಳು ನುಂಗಿಕೊಂಡು–

"ಏನ್ಮಾಡ್ಲಿ ಸುಧಾ... ನಿನ್ನ ಬಿಟ್ಟು ಹೋಗೋದಕ್ಕೆ ನನ್ನ ಮನಸ್ಸು ಒಪ್ತ ಇಲ್ಲ... ಆಹ್... ಈ ಸುಂದರ ಮುಖ..." ಎನ್ನುತ್ತಾ ಮಿಂಚಿನಂತೆ ಹಾರಿ ಅವಳ ನಡುವನ್ನು ತನ್ನ ಎಲಗೈಯಿಂದ ಬಳಸಿನಿಂತ.

ಸುಧಾಳ ಅಂತಃಕರಣಗಳೆಲ್ಲ ನಿಶ್ಚೇಷ್ಟಿತವಾದವು. ಏನನ್ನೂ ಯೋಚಿಸಲು ಸಾಧ್ಯವಾಗದ ಶೂನ್ಯಸ್ಥಿತಿಯನ್ನು ತಲುಪಿದಳು. ಅವಳ ಎರಡೂ ತೋಳುಗಳು ರವಿಯ ಬೆನ್ನನ್ನು ಬಳಸಿದುದರ ಅರಿವೂ ಅವಳಿಗಿರಲಿಲ್ಲ. ತನ್ನ ವ್ಯಕ್ತಿತ್ವದಿಂದ ರವಿಯನ್ನು ಪ್ರತ್ಯೇಕಿಸಿ ವಿವೇಚಿಸುವುದು ಅವಳಿಂದ ಸಾಧ್ಯವಾಗಲಿಲ್ಲ.

ಅವಳ ಸೆರಗು ಕೆಳಕ್ಕೆ ಜಾರಿತು; ಅವಳನ್ನು ಬಳಸಿಕೊಂಡೇ ರವಿ ವಿಜಯನ ಹೋಲ್ಡಾಲಿನ ಬಳಿ ಬಂದ. ಕಾಲಿನಿಂದ ರಭಾಡಿಸಿದಾಗ ಆ ಸುರುಳಿ ಬಿಚ್ಚಿ ಹಾಸಿಕೊಂಡಿತ್ತು, ರವಿ ಅದರ ಮೇಲೆ ಕೂತಾಗ, ಅವನ



ತೋಳುಗಳಲ್ಲಿ ಸುಧಾ ಬಂದಿಯಾಗಿದ್ದಳು... ಯಾವುದೋ ಪ್ರೇತಶಕ್ತಿಯೊಂದು ಅವಳ ಗಂಟಲನ್ನು ಒತ್ತಿ ಹಿಡಿದಂತೆ, ಅವಳಿಂದ ಯಾವ ಮಾತೂ ಹೊರಡದಾಯಿತು. ವಿರೋಧ–ಸಹಕಾರ– ಎರಡೂ ಇಲ್ಲದ ಪುತ್ಥಳಿಯಾಗಿ ಬಿಟ್ಟಳು.

ಅವಳ ಕುಪ್ಪಸವನ್ನೂ ಬಿಚ್ಚಿ ಎಸೆದ ರವಿ, ಅವಳನ್ನು ಮತ್ತೆ ತಬ್ಬಿದಾಗ, ಸುಧಾ ಸಂಪೂರ್ಣ ಶೂನ್ಯವನ್ನು ತಲುಪಿದಳು. ಅವಳ ವಕ್ಷಕ್ಕೆ ಕೈಹಾಕಿದ ರವಿ "ಸುಧಾ... ಈ ಸ್ವರ್ಗಸುಖಕ್ಕಾಗಿ ಎಷ್ಟುದಿನದಿಂದ ಕಾಯ್ತಾ ಇದ್ದೆ ಗೊತ್ತಾ?" ಎನ್ನುತ್ತಾ ಅವಳ ಗಲ್ಲವನ್ನು ನೇವರಿಸಿದ. ಸುಧಾ ವಿಸ್ಫುರಿತ ನೇತ್ರಗಳಿಂದ ಅವನನ್ನೇ ನೋಡುತ್ತಾ, ತಟ್ಟನೆ ಬೇರೆಡಗೆ ಮುಖತಿರುಗಿಸಿದಳೇ ವಿನಾ ತುಟಿ ಎರಡು ಮಾಡಲಿಲ್ಲ.

"ಈ ಸುಂದರ ಶಿಲ್ಪಕ್ಕೆ ಈ ಬಟ್ಟೆಯೊಂದು ದೊಡ್ಡ ಅಡ್ಡಿ ಸುಧಾ" ಅವಳ ಮೈಮೇಲೆ ಅಂಗುಲದಷ್ಟೂ ಬಟ್ಟೆಯನ್ನು ಬಿಡದೆ ರವಿ ತೃಪ್ತಿಪಟ್ಟ. ಸುಧಾ ತನ್ನ ವಿಲೀನವಾದ ಮನಸ್ಸನ್ನು ಅರಸುತ್ತಿದ್ದಳು... ತಾನೆಲ್ಲಿದ್ದೇನೆ? ಏನಾಗಿ ಹೋದೆ...? ಕರಗಿಹೋಗುತ್ತಿದ್ದೇನೆ... ಕೂಗಲೂ ಸಾಧ್ಯವಾಗುತ್ತಿಲ್ಲ...

ಅವಳೂ ರವಿಯನ್ನು ತಬ್ಬಿದ್ದಳು... ಹಾಗಾದರೆ ಅವನನ್ನು ತಬ್ಬಿ ಹಿಡಿದ ಶಕ್ತಿ ತನ್ನ ಮೂಲ ಸಂವೇದನೆಯೆ? ಮನಸ್ಸನ್ನು ಕಳೆದುಕೊಂಡು, ಯಾವುದೋ ಆಳದಲ್ಲಿ ಸಿಕ್ಕಿಕೊಂಡ ತನ್ನ ವ್ಯಕ್ತಿತ್ವವನ್ನು ಅಗೆದು ತೆಗೆಯಲು ಸುಧಾ ಹೆಣಗಾಡುತ್ತಿದ್ದಳು–ಆದರೂ ಅವಳ ಭೌತಿಕ ದೇಹದಲ್ಲಿ ಅವಳ ವ್ಯಕ್ತಿತ್ವದ ಯಾವುದೋ ಅತಿ ಕ್ಷುಲ್ಲಕ ಅಂಶವೊಂದು ರವಿಗೆ ತನ್ನ ಪೂರ್ಣ ಸಹಕಾರ ನೀಡುತ್ತಿದೆ... ಹೌದು... ತನಗೆ ಅಷ್ಟಂತೂ ಚೆನ್ನಾಗಿ ಅರ್ಥವಾಗುತ್ತಿದೆ ರವಿಯು ಪಡೆಯುತ್ತಿರುವ ಆ ಸ್ವರ್ಗ ಸುಖದ ರೋಮಾಂಚದ ಅನುಭವವನ್ನು ತಾನೂ ಎಲ್ಲಿಯೋ ನಿಂತು ಅನುಭವಿಸುತ್ತಿದ್ದೇನೆ.

ರವಿ ಅವಳ ಪೂರ್ಣ ಪ್ರಯೋಜನ ಪಡೆದು, ಬಂಧನವನ್ನು ಸಡಿಲಗೊಳಿಸುತ್ತಲೇ ಸುಧಾಳ ಮನಸ್ಸು ಮರಳಿತು... ತನ್ನ ನಗ್ನ ದೇಹವನ್ನು, ಅದಕ್ಕೆ ರವಿ ನೀಡಿದ ಅವಸ್ಥೆಯನ್ನು ಕಂಡು ಕೆರಳಿದಳು... ಕಾಲುಗಳೆರಡನ್ನೂ ರಭಾಡಿಸಿ ಅವನ ಎದೆಗೊದೆದಳು... "ಥೂ... ನಾಯಿ... ತೊಲಗಾಚೆ... ನಾಚ್ಕೆ ಆಗೋಲ್ಲ ನಿಂಗೆ? ಚಂಡಾಲ... ಇನ್ನೊಂದ್ಸಾರಿ ಈ ಮನೆ ಹೊಸಿಲು ತುಳಿದಿಯೋ" ಎನ್ನುತ್ತಾ ಬಲವಾಗಿ ಅವನ ಮುಖದ ಮೇಲೆ ಉಗುಳಿದಳು–

ರವಿ ಅವಕ್ಕಾದ! ತನ್ನ ಎಲ್ಲ ಲೀಲೆಗಳಿಗೂ ಸರಾಗವಾಗಿ ಅವಕಾಶವಿತ್ತ ಸುಧಾ ಹೀಗಾಡಬಹುದೆಂದು ನಿರೀಕ್ಷಿಸಿರಲಿಲ್ಲ. ಸುಧಾ ಬೇಗ ಮೇಲೆದ್ದು ತನ್ನ ಬಟ್ಟೆಗಳನ್ನು ಧರಿಸುತ್ತಲೇ ರವಿಯನ್ನು ವಾಚಾಮಗೋಚರ ಬೈಯತೊಡಗಿದಳು– "ನೀಚಾ... ಮೊದಲು ಇಲ್ಲಿಂದ ತೊಲಗ್ತೀಯೋ ಅಥ್ವಾ ಜೋರಾಗಿ ಕೂಗಿಬಿಡ್ತೀನಿ... ನೋಡು" ಎನ್ನುತ್ತಲೇ ರವಿ ಅವಸರದಿಂದ ಬಾಗಿಲು ತೆರೆದು ಬೀದಿಯಲ್ಲಿ ಕಣ್ಮರೆಯಾದ.

ರವಿ ಹೊರಟುಹೋದ ಮೇಲೆ ಸುಧಾ ಕಂಪಿಸುವ ಕೈಗಳಿಂದ ಹೊರಬಾಗಿಲನ್ನು ಭದ್ರಪಡಿಸಿಬಿಟ್ಟಿದ್ದ ವಿಜಯನ ಹೋಲ್ಡಾಲಿನ ಮೇಲೆ ಧೊಪ್ಪನೆ ಕುಸಿದಳು–ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯತೊಡಗಿತು... "ವಿಜಯ್... ನನ್ನನ್ನು ಕ್ಷಮಿಸು ವಿಜಯ್... ನಾನು ನಿನ್ನನ್ನು ಸಂಪೂರ್ಣ ನಿರಾಶೆಗೊಳಿಸಿಬಿಟ್ಟೆ... ನಿನ್ನ ಸ್ನೇಹಕ್ಕಾಗಿಯೇ ನಾನು ಕಷ್ಟಪಟ್ಟು ಸಂಪಾದಿಸಿದ ಅರ್ಹತೆಯೆಲ್ಲ ನುಚ್ಚುನೂರಾಯಿತು... ದುಡುಕಿಬಿಟ್ಟೆ... ವಿಜಯ್... ಭಾವೋದ್ವೇಗಕ್ಕೆ ಬಲಿಯಾಗಿ ಬಿಟ್ಟೆ... ಮನುಷ್ಯತ್ವ ಮತ್ತೊಮ್ಮೆ ಕಳಕೊಂಡೆ... ವಿಜಯ್... ವಿಜಯ್" ಹೋಲ್ಡಾಲಿಗೆ ತಲೆಯನ್ನು ಘಟ್ಟಿಸಿ ಅಳತೊಡಗಿದಳು. ತಾನು ಈ ಪ್ರಪಂಚದಲ್ಲಿ ಒಂಟಿಯಾಗಿರಬಲ್ಲೆ ನೆನ್ನುವ ಯಾವ ಹಕ್ಕೂ ತನಗಿಲ್ಲ... ತನ್ನ ತಂದೆ ತಾಯಿಗಳು ಈ ಬಗ್ಗೆ ಎಚ್ಚರವಾಗಿರಲು ಹೇಳಿ ಬುದ್ಧಿವಂತರಾದರು. ವಿಜಯನ ವರ್ತನೆ ಅವರ ಬುದ್ಧಿವಾದಕ್ಕೊಂದು ಸವಾಲಾಗಿತ್ತು... ಅದನ್ನು ಕಂಡು ಮರುಳಾದ ತಾನು ತನ್ನ ಬಗ್ಗೆ ಮಿತಿಮೀರಿದ ಆತ್ಮವಿಶ್ವಾಸ ತಾಳಿದಂತಾಯಿತೆ? ರವಿಯಿಂದಾದ ಪರಾಭವ...? ಅಯ್ಯೋ... ಯಾವ ದುರಂತವನ್ನು ಆಗಗೊಡದಂತೆ ಎಚ್ಚರವಹಿಸಬೇಕೆಂದು ಕಾದಿದ್ದಳೋ ಅದು ಮತ್ತೊಮ್ಮೆ ಘಟಿಸಬೇಕೆ?

ದಿಙ್ಮೂಢಳಾದಂತೆ ಹಾಸಿಗೆಯ ಮೇಲೆ ಕುಳಿತ ಸುಧಾ ಉರಿಯುತ್ತಿದ್ದ ದೀಪವನ್ನೇ ದಿಟ್ಟಿಸತೊಡಗಿದಳು–

ಆ ದಿನ, ಮೈಸೂರಿಗೆ ಟ್ರಿಪ್ ಹೊರಟಿದ್ದ ಗೆಳತಿಯರ ತಂಡ... ಇಂಗ್ಲೀಷ್ ಲೆಕ್ಚರರ್ ಕೃಪಸ್ವಾಮಿ ತಂಡದ ನಾಯಕ... ಪ್ರಿನ್ಸಿಪಾಲರ ಸಪ್ಪ

ಗಾವಲು... ಚಾಮುಂಡಿ ಬೆಟ್ಟಕ್ಕೆ ಹೊರಡಲು ಸಿದ್ಧತೆಗಳು...

"ಸಾರ್... ನಂಗೆ ಯಾಕೋ ತುಂಬಾ ತಲೆ ನೋವು... ನಾನಿಲ್ಲೇ ಸ್ವಲ್ಪ ಮಲಗ್ತೀನಿ ಸಾರ್... ಬೆಟ್ಟಕ್ಕೆ ಬರೋದಿಲ್ಲ" ಎಂದವಳೇ ಸುಧಾ ಮಂಚದ ಮೇಲೆ ರಗ್ ಹೊದೆದು ಮಲಗಿ ಬಿಟ್ಟಳು... ನಿದ್ರೆ ಹತ್ತಿತು.

ಮತ್ತವಳು ಕಣ್ಣು ಬಿಟ್ಟಾಗ ತಲೆನೋವು ಇರಲಿಲ್ಲ. ಮೈಯೆಲ್ಲ ಹದವಾಗಿ ಬೆವರಿತ್ತು... ಯಾರ ದೋ ಕೈಗಳು ತನ್ನ ದೇಹದ ಮೇಲೆ ಚಲಿಸುವು ದನ್ನು ತಿಳಿದ ಸುಧಾ ಬೆಚ್ಚಿ ಎದ್ದು ಕುಳಿತಳು.

"ಓ... ಈಗ ಹೇಗಿದೆ ಸುಧಾ ತಲೆನೋವು?" ಎಂದವರು ಕೃಷ್ಣಸ್ವಾಮಿ?...

"ಪರವಾಗಿಲ್ಲ ಸಾರ್... ಈಗೇನೂ ಇಲ್ಲ... ಎಲ್ರೂ ಬಂದ್ರಾ ಸಾರ್?"

"ಉಹುಂ... ಅವರೆಲ್ಲ ಕೆ.ಆರ್. ಸಾಗರಕ್ಕೆ ಹೊರಟು ಹೋದ್ರು..."

"ಮತ್ತೆ ನೀವು ಹೋಗಿಲ್ವಾ ಸಾರ್?"

"ಉಹುಂ... ಎಲ್ಲಾದ್ರೂ ಉಂಟೆ? ಇಲ್ಲಿ ನಿನ್ನೊಬ್ಬಳನ್ನೇ ಬಿಟ್ಟು ಹ್ಯಾಗೆ ನಾನು ಹೋಗೊ ದು? ಜವಾಬ್ದಾರಿ ಅಲ್ವೆ? ನಿನ್ನ ಫ್ರೆಂಡ್ಸ್ ಇಲ್ಲಿ ಇರೋದಕ್ಕೆ ಒಪ್ಪೋ ಹಾಗೆ ಕಾಣ್ಲಿಲ್ಲ... ಪಾಪ... ಅವರಿಗೂ ಬೃಂದಾವನ ನೋಡೋ ಆಸೆ... ಅದಕ್ಕೇ ಪ್ರಿನ್ಸಿಪಾಲರೇ ನನ್ನನ್ನು ಇಲ್ಲಿಗೆ ಕಳಿಸಿದ್ರು... ನೀನು ಬಾಗಿಲು ಭದ್ರವಾಗಿ ಬೋಲ್ಟ್ ಮಾಡಿರಲೇ ಇಲ್ವಲ್ಲ?" ಎಂದರು, ಕೃಷ್ಣಸ್ವಾಮಿ.

"ಇಲ್ಲ ಸಾರ್... ನೀವು ಮುಂದುಗಡೆ ಲಾಕ್ ಮಾಡಿದ ಹಾಗಿತ್ತು... ಅಲ್ದೇ, ನನಗೆ ಆ ತಲೆ ನೋವಿನ ಯಾತನೇಲಿ ಯಾವ್ದೂ ತೋಚಲೇ ಇಲ್ಲ.."

"ಹೋಗ್ಲಿ ಬಿಡು ಸುಧಾ ಈಗೇನು ಊಟಕ್ಕೆ ಹೇಳಲಾ? ಅಥವಾ ಕಾಫಿ..."

"ಕಾಫಿ ಏನೂ ಬೇಡಿ ಸಾರ್... ಊಟಾನೇ ಮಾಡ್ತೀನಿ"

ಸರಿ... ಕೃಷ್ಣಸ್ವಾಮಿ ಎದ್ದು ಹೋಗಿ ಊಟ ವನ್ನು ತೆಗೆಸಿಕೊಂಡು ಬಂದರು. ಜೊತೆಗೆ ತಾವೂ ಕಂಪನಿ ಕೊಟ್ಟರು. ಊಟದ ನಂತರ ಬೀಡಾ ಸೇವ ನೆಯೂ ಆಯಿತು. ಕ್ಲೀನರ್ ಊಟದ ಪ್ಲೇಟು ಗಳನ್ನೆತ್ತಿಕೊಂಡು ಹೋದ.

"ಸುಧಾ... ಬೇಕಾದ್ರೆ ಸ್ವಲ್ಪ ರೆಸ್ಟ್ ತಗೋ... ನಾನೂ ಹೀಗೆ ಸ್ವಲ್ಪ ಮಲಗ್ತೀನಿ... ಅವರು ಬರೋ ದು ಸಾಯಂಕಾಲ ನಾಲ್ಕೂವರೆಗೆ..."

ಸುಧಾಗೆ ಅವರೆದುರು ಮಲಗಲು ಸಂಕೋಚ ವಾಯಿತು. ತನ್ನ ಉಪಾಧ್ಯಾಯರಾದರೂ, ಏಕಾಂತ ದಲ್ಲಿರುವೆವೆಂಬ ಭಾವ ಅವಳ ದೇಹದಲ್ಲಿ ತೂಗು ತ್ತಿತ್ತು. ಕೃಷ್ಣಸ್ವಾಮಿ ಬಹಳ ಬಲವಂತ ಮಾಡಿ ಅವಳನ್ನು ಮಲಗ ಹೇಳಿದರು. ನಿರ್ವಾಹವಿಲ್ಲದೆ ಸುಧಾ ಮಂಚದ ಮೇಲೊರಗಿದಳು. ಎದುರಿಗಿದ್ದ ಮತ್ತೊಂದು ಮಂಚದ ಮೇಲೆ ಅವರೂ ಪವಡಿ ಸಿದರು.

ಯಾರಿಗೂ ಮಾತನಾಡಲು ತೋಚಲಿಲ್ಲ ವೆಂಬಂತೆ ಕ್ಷಣಹೊತ್ತು ಇಬ್ಬರೂ ಮೌನವಾಗಿದ್ದರು. ಕೃಷ್ಣಸ್ವಾಮಿ ಇದ್ದಕ್ಕಿದ್ದಂತೆ ಎದ್ದು ಕುಳಿತರು.

"ಹಾಳು ನಿದ್ದೇನೆ ಬರೋದಿಲ್ಲ- ಅಭ್ಯಾಸವೇ ಇಲ್ಲ ನಂಗೆ..." ಎಂದರು.

"ನಂಗೂ ಅಷ್ಟೆ ಸಾರ್... ನಾನು ತಲೆನೋವು ಅಂತ ಮಲಗಿದಾಗ್ಲೆ ನಿದ್ದೇನೂ ಪೂರೈಯಿಸಿಬಿಟ್ಟೆ" ಎಂದಳು ಸುಧಾ.

ಕೃಷ್ಣಸ್ವಾಮಿ ಮೇಲೆದ್ದವರೇ ತಮ್ಮ ಬ್ಯಾಗಿ ನಿಂದ ಕಾರ್ಡ್ಸ್ ಪ್ಯಾಕ್ ತೆಗೆದು "ಸುಧಾ... ಒಂದಾಟ ಕಾರ್ಡ್ಸ್ ಆಡೋಣ... ಬಾ" ಎಂದು ಅವಳ ಮಂಚದ ಮೇಲೆ ಕುಳಿತರು. ಸುಧಾಗೆ ಗಾಬರಿಯಾಯಿತು. ಏನೋ ಒಂದು ಹರ್ಷಯುಕ್ತ ಭೀತಿ ಆವರಿಸ ತೊಡಗಿತು.

"ನಂಗೆ... ಆಡೋಕೆ... ಬರೋಲ್ಲ...ಸಾರ್.." ಎಂದು ತೊದಲಿದಳು.

"ನಾ ಹೇಳಿಕೊಡ್ತೀನಿ...ಫಾರ್ ಎಕ್ಸಾಂಪಲ್... ಇಗೋ ಈ ಹದಿಮೂರು ಎಲೆಗಳನ್ನು ಹೀಗೆ ಹಿಡ್ಕೋ..." ಎನ್ನುತ್ತಾ ಕೃಷ್ಣಸ್ವಾಮಿ ಹದಿಮೂರು ಎಲೆಗಳನ್ನು ಬೀಸಣಿಕೆಯಾಕಾರದಲ್ಲಿ ಜೋಡಿಸಿ ಅವಳ ಬಲಗೈಯೊಳಗೆ ತಾವೇ ಇಟ್ಟರು. ಅವಳ ಪಕ್ಕದಲ್ಲಿ ಕುಳಿತು- ಆ ಎಲೆಗಳ ವ್ಯಾಖ್ಯೆ ನೀಡತೊಡ ಗಿದರು-

"ನೋಡು ಸುಧಾ- ಇದು ಆಟಿನ್ ಗುರುತು. ಇದು ಎಸ್... ಇದು ಕಳಾವರ... ಇದು ಡೈ ಮೆಂಡ್... ಪ್ರತಿ ಚಿಹ್ನೆಯಲ್ಲೂ ಹದಿಮೂರು ಎಲೆಗಳು. ಒಂದರಿಂದ ಹತ್ತು... ಜಾಕಿ ಹನ್ನೊಂದು ಕ್ವೀನ್... ಹನ್ನೆರಡು... ಕಿಂಗ್ ಹದಿಮೂರು..." ಹೀಗೆ ವಿವರಿಸುವಾಗ ಅವಳ ಕೈಯನ್ನು ಪೂರ್ತಿ ಹಿಡಿದಾಗಿತ್ತು.

ಸುಧಾ ಅವರ ವಿವರಣೆ ಕೇಳುತ್ತಾ ಅವರ ಮುಖವನ್ನೇ ದಿಟ್ಟಿಸುತ್ತಿದ್ದಳು. ಕೃಷ್ಣಸ್ವಾಮಿ ಮದು ವೆಯಿಲ್ಲದ ಯುವಕನೆಂದು ಎಲ್ಲರೂ ಬಲ್ಲರು... ಅದರಲ್ಲೂ ಆತನ ಆಕರ್ಷಕ ಮುಖ ಹುಡಿಗಿಯರಿ ಗೊಂದು ಹಬ್ಬವಾಗಿತ್ತೆಂದು ಅವಳೂ ಬಲ್ಲಳು...

"ಸುಧಾ... ಈ ಹದಿಮೂರು ಎಲೆಗಳಲ್ಲದೇ. ಹದಿನಾಲ್ಕನೇ ಎಲೆ ಒಂದಿದೆ."

"ಯಾವುದು ಸಾರ್ ಅದು?"

"ಇಗೋ ಇಲ್ಲಿದೆ ನೋಡು... ಇದು ಬ್ಯೂಟಿ ಕ್ವೀನ್... ಅಂತ" ಎನ್ನುತ್ತಾ ಅವಳ ಚೆಲುವಾದ ಮುಖವನ್ನು ತಮ್ಮ ಎಡಗೈಲಿ ಎತ್ತಿ ಹಿಡಿದರು.

ಸುಧಾ ಭಾವೋದ್ವೇಗಕ್ಕೆ ಒಳಗಾದಳು... ಮುಖ ಕೆಂಪಾಯಿತು... ಅಪ್ರಯತ್ನವಾಗಿಯೇ ಅವಳ ದೇಹ ಕೃಷ್ಣಸ್ವಾಮಿಯ ಎದೆಯಲ್ಲೊರಗಿತು. ಅವರ ತೋಳುಗಳು ಅವಳನ್ನು ಬಂಧಿಸಿದವು. ತುಟಿಗಳು ಒಂದಾದವು.

ಪುರುಷನೆಂದರೆ ಹೆಣ್ಣಿಗೆ ಏನು- ಎಂಬುದನ್ನು ಸುಧಾ ಚೆನ್ನಾಗಿ ಅರ್ಥಮಾಡಿಕೊಂಡಳು... ಬಳಲಿ ಸೋತಿದ್ದ ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ವಿಶ್ರಾಂತಿ ಪಡೆಯುತ್ತಿರುವಾಗಲೇ "ಧಡಧಡನೆ" ಬಾಗಿಲು ತಟ್ಟುವ ಶಬ್ದ !

ಕೃಷ್ಣಸ್ವಾಮಿ ಸುಧಾ ಇಬ್ಬರೂ ಪಾದರಸದಂತೆ ಚಟನೆ ಸಿಡಿದೆದ್ದರು... ಆತ ಬೇಗ ಹೋಗಿ ಬಾಗಿಲು ತೆರೆದಾಗ-

"ಏನ್ರೀ ಇದು ನಿಮ್ಮ ಹುಡುಗಾಟ! ಏನ್ಮಾಡ್ತಾ ಇದ್ರಿ ಇಲ್ಲಿ?... ಯಾಕೆ ಇಲ್ಲಿಗೆ ಬಂದ್ರಿ...?" ಎಂದು ತೀಕ್ಷ್ಣವಾಗಿ ಕೇಳಿದರು ಪ್ರಿನ್ಸಿಪಾಲರು.

ಕೃಷ್ಣಸ್ವಾಮಿ ತಲೆ ತಗ್ಗಿಸಿ ನಿಂತ... ಸುಧಾ ಮುಖ ಮುಚ್ಚಿಕೊಂಡು ಅಳುತ್ತಿದ್ದಳು.

"ಇದಕ್ಕೇನೋ ನೀವು ಕೆ.ಆರ್. ಸಾಗರಕ್ಕೆ ಬಾರದೆ ಇದ್ದದ್ದು? ನೀವು ಇಲ್ಲಿಗೆ ಬರೋ ವಿಚಾರಾನೇ ನಂಗೆ ಹೇಳ್ಲಿಲ್ಲವಲ್ಲ? ಎಂಥಾ ಹಲ್ಕಾ ಕೆಲ್ಸ! ಥೂ..."

ಹಾಗಾದರೆ ಕೃಷ್ಣಸ್ವಾಮಿ ತನಗಾಗಿ ಈ ನಾಟಕ ಆಡಿದನೆಂಬುದು ಅರ್ಥವಾಗಿ ಸುಧಾಗೆ ಇನ್ನೂ ಹರ್ಷವಾಯಿತು. ಆದರೆ ವ್ಯಕ್ತಪಡಿಸುವಂತಿರಲಿಲ್ಲ.

ಟ್ರಿಪ್ ಅಲ್ಲಿಗೇ ಮುಗಿದುಹೋಗಿತ್ತು... ಕೃಷ್ಣಸ್ವಾಮಿಗೆ ಮೂರೇ ದಿನಗಳಲ್ಲಿ ವರ್ಗವಾಗಿತ್ತು... ಕಾದ ಹೆಂಚಿನ ಮೇಲೆ ಬಿದ್ದ ನೀರಿನಂತೆ ಸುಧಾಳ

ಮನಸ್ಸಿನ ದಾವಾಗ್ನಿ ತಣಿವು ಕಾಣದೆ ಪ್ರಜ್ವಲಿಸ ಹತ್ತಿತ್ತು.

ವಿದ್ಯಾಭ್ಯಾಸ ಮುಗಿಯಿತು... ತಂದೆ ತಾಯಿಗಳ ಪರಿಸರದಲ್ಲಿ ಹುದುಗಿಟ್ಟ ತನ್ನ ದಾವಾಗ್ನಿ, ತನಗೆ ಕೆಲಸ ಸಿಕ್ಕೊಡನೆಯೇ ಮತ್ತೆ ಉರಿದೆದ್ದು, ವಿಜಯ ನಿಂದ ತಣಿವನ್ನು ಬಯಸಿ, ಸಾಧ್ಯವಾಗದೇ–ಅವನಿಂದ ತನ್ನ ವಿಚಾರಗಳ ದಿಕ್ಕನೇ ಬದಲಿಸಲು ಹೊರಟಿದ್ದಳು. ಸಮಸ್ಯೆಗಳನ್ನು ಮೇಲೆಳೆದುಕೊಂಡಳು. ರವಿಯತ್ತ ಬಾಗುವ ತನ್ನ ಮನಸ್ಸನ್ನು ಹತೋಟಿಯಲ್ಲಿಡುವ ಸಾಹಸ ಮಾಡಿದ್ದಳು.

ಕೊನೆಗೆ ತಾನು ಮುಚ್ಚಿಟ್ಟಿದ್ದ ದಾವಾಗ್ನಿ ಪ್ರಜ್ವಲಿಸಿತು! ರವಿ ಅದನ್ನು ಮತ್ತಷ್ಟು ಉತ್ತೇಜನಗೊಳಿಸಿದ್ದ... ಅವನನ್ನೇ ಮದುವೆಯಾಗಬಹುದಾಗಿದ್ದ ಅವಕಾಶ ವಿಜಯ ತಪ್ಪಿಸಿದ್ದ ಅಥವಾ ವಿಜಯನ ನೆಪದಿಂದಾಗಿ ತಾನೇ ತಪ್ಪಿಸಿಕೊಂಡೆ- ಆದರೆ ಈಗ?–

ಸುಧಾ ತನ್ನ ಬಳಲಿದ ಅಂಗಾಂಗಗಳನ್ನು ಮುಟ್ಟಿ ನೋಡಿಕೊಂಡಳು. ರವಿ ತನ್ನ ದೇಹದ ಪ್ರತಿ ಅಂಗುಲದಲ್ಲಿಯೂ ಅಗ್ನಿಪರ್ವತವನ್ನೇ ಸೃಷ್ಟಿಸಿದ್ದ... ಅಬ್ಬಾ... ಮನುಷ್ಯನ ವ್ಯಕ್ತಿತ್ವದ ಈ ಮುಖ ಎಂತಹ ಬಲಶಾಲಿ! ಸುಧಾ ಆಕಳಿಸತೊಡಗಿದಳು... ತನ್ನ ದೇಹದ ನರನಾಡಿಗಳೆಲ್ಲ ಯಾವುದೋ ತೃಪ್ತಿಯ ಆವೇಗದಿಂದ ಬಳಲಿ ವಿಶ್ರಾಂತಿಯನ್ನು ಬಯಸುತ್ತಿದ್ದವು. ಅಪ್ರಯತ್ನವಾಗಿಯೇ ಅವಳಬಾಯಿಂದ- “ಓಹ್... ಎಂಥ ಮಧುರ ಅನುಭವ... ರವಿ...ಯು ಆರ್ ಎಜೆಮ್!” ಎಂಬ ಮಾತುಗಳು ಹೊರಬಿದ್ದವು.. ಹಾಗೆಯೇ ನಿದ್ರೆ ಅವಳನು ಆವರಿಸಿತು... ಮೂರು ವರ್ಷಗಳಿಂದಲೂ ಅವಳುಪಡೆಯಬೇಕೆಂದು ಬಯಸಿದ್ದ ಆ ಅನುಭವದ ಅಮಲಿನಲ್ಲಿ ಅವಳಿಗೆ ಬೆಳಿಗ್ಗೆ ಏಳೂವರೆಯಾದರೂ ಏಳಬೇಕೆನಿಸಲಿಲ್ಲ.

- ೭ -

ವಿಜಯನ ಡೈರಿಯನ್ನು ಕಳುಹಿಸುವ ವಿಚಾರವನ್ನು ಅವಳು ಪೂರ್ತಿಯಾಗಿ ಮರೆತುಬಿಟ್ಟಳು. ಆ ದಿನವನ್ನೆಲ್ಲ ಅವಳ ಮನಸ್ಸು ಹಕ್ಕಿಯಂತೆ ಹಾರಾಡತೊಡಗಿತ್ತು. ತಂದೆಯ ಪತ್ರಕ್ಕೆ ಉತ್ತರಿಸಬೇಕಾಗಿದ್ದುದೂ ನೆನಪಿಗೆ ಬರಲಿಲ್ಲ.

ಶಾಲೆಯ ಕೆಲಸ ಮುಗಿದೊಡನೆಯೇ ಮನೆಯ ಕಡೆ ಹೆಜ್ಜೆ ಹಾಕತೊಡಗಿದಳು... ಬರುವಾಗ ಹಿಂದಿನ ದಿನ ರವಿಯನ್ನು ಭೇಟಿಯಾದ ಜಾಗವನ್ನು ಕಂಡು ಏನೋ ರೋಮಾಂಚವಾಯಿತು. ಅಲ್ಲೇ ಕೆಲವು ನಿಮಿಷ ನಿಂತಳು. ನಂತರ ತನ್ನ ವರ್ತನೆಯ ಬಗ್ಗೆ ತನಗೇ ನಗು ಬರುವಂತಾಗಿ, ಮುಂದೆ ಹೆಜ್ಜೆ ಹಾಕತೊಡಗಿದಳು. ಆ ದಿನ ರವಿ ಅವಳಿಗೆ ಕಾಣಿಸಲಿಲ್ಲ.

ಮನೆಗೆ ಬಂದು ಯಾವುದೋ ಪುಸ್ತಕ ಹಿಡಿದು ಕುಳಿತಳು... ಆದರೆ ಅವಳ ಮನಸ್ಸಿನ ಮುಂದೆ ಹಿಂದಿನ ರಾತ್ರಿಯ ದೃಶ್ಯಗಳು, ಅನುಭವಗಳು ಪುನರಾವರ್ತನೆಯಾದವು. ರವಿಯ ಬಿಸಿಯಪ್ಪುಗೆಯಲ್ಲಿ ತನಗುಂಟಾದ ಆನಂದವನ್ನು ಪದೇ ಪದೇ ಸ್ಮರಿಸಿ ಮಿಡುಕಿದಳು.

ಹಾಗಾದರೆ ತಾನೇಕೆ ರವಿಗೆ ಸಿಕ್ಕಾಪಟ್ಟೆ ಬೈದೆ? ಅದು ಕೇವಲ ತನ್ನ ಡಾಂಭಿಕತೆ ಇದ್ದೀತೆ? ಹೌದು.. ಅದು ತನ್ನ ಪರಾಭವ ಎಂದು ತಾನು ಹೇಳಿಕೊಳ್ಳುತ್ತಿರುವುದೇ ಪರಮ ಡಾಂಭಿಕತೆ! ಖಂಡಿತ ಅದು ತನ್ನ ಪರಾಭವವಲ್ಲ... ಜನ್ಮ ಸಾರ್ಥಕ್ಯ... ಮಾನವನಾದ ಮಾತ್ರಕ್ಕೆ ಈ ದೇಹಸುಖ ಬಯಸುವದು ತಪ್ಪೆ? ಪ್ರಾಣಿಗಳಲ್ಲಿರುವ ಎಷ್ಟೋ ವರ್ತನೆಗಳು ನಮಗೂ ಸಾಮಾನ್ಯವಾಗಿಲ್ಲವೆ? ಅವು ಆಹಾರ ಸೇವಿಸುತ್ತವೆ ನಾವೂ ತಿನ್ನುತ್ತೇವೆ... ಹಾಗೆಯೇ ಇದೂ ಒಂದು ಸಂವೇದನೆ! ಇವುಗಳೆಲ್ಲದರ ಜೊತೆಗೆ ವಿವೇಚನೆ ಎಂಬುದು ಮಾನವನ ವೈಶಿಷ್ಟ್ಯ...ಅಂದರೆ ಮಾನವ ಎಂದರೆ ಪ್ರಾಣಿಗಳು ಮತ್ತು ವಿವೇಚನೆ ಇವುಗಳ ಸಂಯೋಜನೆ!

ವಿಜಯ ಇದಕ್ಕೆ ತೀರ ವ್ಯತಿರಿಕ್ತವಾಗಿ ವಾದಿಸುತ್ತಾನೆ... ಏಕಾಂತದಲ್ಲಿ ಗಂಡು ಹೆಣ್ಣುಗಳು ಸೇರಿದಾಗ ಪರಸ್ಪರ ಬಯಸುವದು ಸುಲಭ ಸಹಜ- ಎಂಬುದನ್ನವನು ಒಪ್ಪುತ್ತಾನೆ... ಆದರೆ ಕಷ್ಟಕೃತಕವಾದುದನ್ನು ಸಾಧಿಸಲು ಮಾನವ ಹೆಣಗಬೇಕು ಎನ್ನುತ್ತಾನೆ... ರಾಮಕೃಷ್ಣ ಪರಮಹಂಸರು ತಮ್ಮ ಪತ್ನಿಯನ್ನು ತಾಯಿಯೆಂದು, ದೇವಿಯೆಂದು ತಿಳಿದು ಪೂಜಿಸಿದರಂತೆ! ಈ ಪೂಜೆ ಮಾಡುವ ಸಂಪತ್ತಿಗೆ ಅವರು ಮದುವೆ ಏಕಾದರೋ? ಅಥವಾ ಅವರು ಗುಟ್ಟಾಗಿ ನಡೆಸಿದ ಈ ಪೂಜೆ ಇಷ್ಟೊಂದು ಬಹಿರಂಗಗೊಂಡಿರುವಾಗ ಇದು ಯಾವುದೋ ಪ್ರದರ್ಶನವಾಗಿರಲಿಕ್ಕಿಲ್ಲವಷ್ಟೆ! ಈ ವಿಜಯ ತನ್ನ ವೈಚಾರಿಕತೆಯನ್ನು ಪ್ರದರ್ಶನಕ್ಕಾಗಿ ಇಟ್ಟುಕೊಂಡಿರಲಾರನೆ?

ತಟ್ಟನೆ ಅವಳಿಗೆ ಅವನ ಡೈರಿಯ ನೆನಪಾಯಿತು. ಹೌದು... ಡೈರಿ ಸಾಮಾನ್ಯವಾಗಿ ಅವನ ಮನಸ್ಸಿಗೆ ತೆರೆದಿಟ್ಟ ಕನ್ನಡಿ.. ಅವನ ವೈಚಾರಿಕತೆಗೆ ಅವನೇ ಎಷ್ಟರ ಮಟ್ಟಿಗೆ ನಿಷ್ಠನಾಗಿದ್ದಾನೆ ಎಂಬುದನ್ನು ತಿಳಿಯಲು ಅವನ ಡೈರಿಯ ಪುಟಗಳನ್ನೇಕೆ ಮಗುಚಿ ನೋಡಬಾರದು? ಅವನ ಜೊತೆಗೆ ತಾನು ಕಳೆದ ಎರಡನೇ, ಮೂರನೇ ರಾತ್ರಿಗಳ ಬಹುಭಾಗ ಸಮಯವನ್ನು ಅವನು ಈ ದಿನಚರಿ ಪುಸ್ತಕ ತುಂಬುವುದರಲ್ಲೇ ಕಳೆದಿದ್ದ.

ಸುಧಾ ಮೇಲೆದ್ದಳು. ಅವನ ಹೋಲ್ಡಾಲನ್ನು ಬಿಚ್ಚಿ ತಲೆಯಡಿಗೆ ಕೈಹಾಕಿದಾಗ ಅವನ ಆ ಕರೀ ರಟ್ಟಿನ ದಿನಚರಿ ಸಿಕ್ಕಿತು. ಬಾಗಿಲನ್ನು ಭದ್ರಪಡಿಸಿ, ಅದರ ಪುಟಗಳನ್ನು ತಿರುವಿ ಹಾಕತೊಡಗಿದಳು.

“ಛೆ... ಇಂದು ನನ್ನ ಮನಸ್ಸು ಏಕೋ ಕಲುಷಿತ ವಿಚಾರಗಳನ್ನೇ ಕುರಿತು ಚಿಂತಿಸುತ್ತಿದೆ. ಇದನ್ನು ಬದಿಗೊತ್ತಬೇಕು. ಮನಸ್ಸು ಪವಿತ್ರವಾಗಿ ಇರಬೇಕು.. ಕೆರೆಯ ಬಳಿ ಹೋಗಿದ್ದೆ... ಪಕ್ಕಕ್ಕೆ ತಿರುಗಿದಾಗ ಶೌಚಕ್ಕೆಂದು ಕುಳಿತ ಹೆಣ್ಣೊಬ್ಬಳ ನಿತಂಬಗಳನ್ನು ಕಂಡಾಗ ನನ್ನ ಮನಸ್ಸೇಕೆ ಉದ್ರೇಕಗೊಂಡಿತು? ಥೂ... ಈ ಭಾವೋದ್ವೇಗವನ್ನು ಗೆಲ್ಲಬೇಕು... ದೀರ್ಘಶ್ವಾಸವನ್ನು ಅಭ್ಯಾಸ ಮಾಡುತ್ತಿದ್ದೇನೆ... ಅಪ್ಪನಿಂದ ಪತ್ರ ಬಂದಿದೆ.. ಯಥಾಪ್ರಕಾರ ಮದುವೆಗಾಗಿ ವರಾತ... ನನಗೆ ಮದುವೆ ಬೇಕೆನಿಸಿಲ್ಲವೆ? ಹಾಗಿದ್ದರೆ ಕ್ಷುಲ್ಲಕ ವಿಚಾರಗಳಿಗೆಲ್ಲ ಉದ್ರೇಕಗೊಳ್ಳುವ ಈ ಮನಸ್ಸೇಕೆ ? ಸ್ವಾಮಿ ವಿವೇಕಾನಂದರ ರಾಜಯೋಗವನ್ನು ಓದುತ್ತಿದ್ದೇನೆ... ಶಾಲೆಗೆ ಹೋದೆ. ಹಾಳಾದ ಈ ಹಳ್ಳಿಯ ಶಾಲೆಯಲ್ಲಿ ಹುಡುಗರೇ ಕಡಿಮೆ... ಆಲೋಚನಾ ಶಕ್ತಿಯೇ ಇಲ್ಲದ ವಿದ್ಯಾರ್ಥಿಗಳು... ಪಾಠ ಹೇಳುವ ಉತ್ಸಾಹವೇ ಇಲ್ಲ...”

ಸುಧಾ ಪುಟಗಳನ್ನು ಮಗುಚಿ ಹಾಕುತ್ತಿದ್ದಳು.

“ಇದೀಗ ಭಗವದ್ಗೀತೆಯನ್ನು ಅಭ್ಯಾಸ ಮಾಡುತ್ತಿದ್ದೇನೆ... ಧ್ಯಾಯತೋ ವಿಷಯಾನ್ ಪುಂಸಾನ್ ಸಂಗಸ್ತೇಷೂಪಜಾಯತೇ ಎಂಬ ಸೂತ್ರ ವಾಕ್ಯ ನನಗೆ ತುಂಬಾ ಹಿಡಿಸಿದೆ... ಹೌದು ನನ್ನ ಮನಸ್ಸಿಗೆ ನಾನು ವಿಷಯಗಳ ಬಗ್ಗೆ ಚಿಂತಿಸದಂತೆ ಆಜ್ಞೆ ಮಾಡುತ್ತೇನೆ. ಅದು ನನ್ನನ್ನು ಆಳದಂತೆ ನಾನೇ ಅದರ ಯಜಮಾನನಾಗುತ್ತೇನೆ... ಊಹಾಶಕ್ತಿಯನ್ನು ಅದು ಮಿಡುತ್ತೇನೆ... ಇಂದು ಶಾನುಭೋಗರು ದಯಮಾಡಿಸಿದ್ದರು... ಅವರ ಮಗಳ ವಿಷಯವನ್ನು ಮತ್ತೆ ಪ್ರಸ್ತಾಪಮಾಡಿದರು... ಪಾಪ... ಅವರವರ ಸಂಕಟ

ಅವರಿಗೆ... ನಾನು ಯಾವುದನ್ನೂ ನಿರ್ದಿಷ್ಟವಾಗಿ ಹೇಳಲಿಲ್ಲ... ತಂಗಿಯ ಮದುವೆ ಆಗಲಿ ಎಂದೆ... ಊರಿಗೆ ಪತ್ರ ಬರೆಯಬೇಕು... ಮನಸ್ಸಿಲ್ಲ..."

ಸುಧಾ ಕ್ಷಣಕಾಲ ಯೋಚಿಸತೊಡಗಿದಳು; ಈ ವಿಜಯನೂ ಸಾಕಷ್ಟು ಸತ್ವ ಪರೀಕ್ಷೆಗೊಳಗಾಗಿದ್ದಾನೆ... ಇವನ ದಿನಚರಿ ಸಂಪೂರ್ಣವಾಗಿ ಇವನ ಮಾನಸಿಕ ಚಿತ್ರಣವೇ... ಇದರಲ್ಲಿ ಬರಿಯ ಘಟನೆಗಳಿಲ್ಲ... ಯಾವುದೋ ಒಂದು ಘಟನೆಯನ್ನು ನಮೂದಿಸಿ, ಅದರ ಸುತ್ತ ಹಬ್ಬುವ ತನ್ನ ಭಾವನೆಗಳನ್ನು ತೆರೆದಿಡುವ ಪ್ರಯತ್ನ ಮಾಡಿದ್ದಾನೆ... ವಿಶೇಷವಾಗಿ, ಈ ಗಂಡು ಹೆಣ್ಣುಗಳ ಕಾಮ ಸಂಬಂಧ ಅವನ ಆಲೋಚನೆಯನ್ನು ಸೆಳೆದಿದೆ... ಅಂತಹ ಎಲ್ಲ ಘಟನೆಗಳಿಗೂ ಆತನ ಸೂಕ್ಷ್ಮ ಪ್ರತಿಕ್ರಿಯೆ ಇಲ್ಲಿ ಕಾಣಸಿಗುತ್ತದೆ. ಕಾಮಕ್ಕೆ ವಶವಾಗಬಾರದು ಎಂಬ ಹಳೆಯ ಮೌಲ್ಯವೊಂದಕ್ಕೆ ನೇತು ಹಾಕಿಕೊಂಡಿದ್ದಾನೆ... ಕಾಮ ಸಂಬಂಧ ಅತ್ಯಂತ ಪಾಪಪೂರ್ಣವಾದುದು... ಪಾಪ ಪುಣ್ಯಗಳ ಕಲ್ಪನೆ... ಇತ್ಯಾದಿ ಪೂರ್ವ ನಿಶ್ಚಿತ ಭಾವನೆಗಳು ಇವನ ಚಿಂತನೆಯನ್ನು ವಿಶೇಷವಾಗಿ ಆಳುತ್ತಿವೆ. ಸರಿ... ಮುಂದೆ ಈ ಬೆಳವಣಿಗೆ ಯಾವ ರೂಪವನ್ನು ಗ್ರಹಿಸಿದೆಯೋ ನೋಡಬೇಕು— ಮತ್ತೆ ಅವನ ದಿನಚರಿಯ ಪುಟಗಳತ್ತ ಕಣ್ಣುಹಾಯಿಸಿದಳು...

"...ಗಂಡು ಹೆಣ್ಣುಗಳ ದೇಹ ಸಂಪರ್ಕ ಜೀವಿಯ ಅನಿವಾರ್ಯಗಳಲ್ಲೊಂದು ಎಂಬ ರಮೇಶನ ವಾದವನ್ನು ನಾನು ಒಪ್ಪಲಾರೆ... ಹಸಿವು, ನಿದ್ರೆ-ಮುಂತಾದ ಯಾವ ಕಾರ್ಯಕ್ಕೂ ಗಂಡಾಗಲೀ ಹೆಣ್ಣಾಗಲೀ ಒಂಟಿಯಾಗಿ ಪ್ರಯತ್ನಿಸಬಹುದು. ಆದರೆ ದೇಹ ಸಂಪರ್ಕ ಪಡೆಯಲು ಇಬ್ಬರ ಸಹಕಾರ ಅಗತ್ಯ. ಇದರಿಂದಲೇ ಇದು ಅನಿವಾರ್ಯವಲ್ಲ... ಪೂರ್ವ ನಿಶ್ಚಿತ ಪ್ರಯತ್ನ! ಮನಸ್ಸು ಮಾಡಿದರೆ ಇದನ್ನು ಗೆಲ್ಲಬಹುದು..."

ಪುಟಗಳು ತಿರುವಿ ಬಿದ್ದವು.

"...ಹೊಸ ಊರಿನ ವಾತಾವರಣ ಬಹಳ ಚೆನ್ನಾಗಿದೆ... ಆದರೆ ಗದ್ದಲ, ಗೊಂದಲ ಹೆಚ್ಚು. ಮನೆಯ ಮಾಲೀಕರು ಬಹಳ ಒಳ್ಳೆಯ ವ್ಯಕ್ತಿ... ಅಥವಾ ಆತನ ವ್ಯಕ್ತಿತ್ವದ ಒಳ್ಳೆಯ ಮುಖ ಮಾತ್ರ ನನಗೆ ಕಂಡಿದೆ... ಶಾಲೆ ದೊಡ್ಡದು... ಯಾರೊಡನೆಯೂ ಸ್ನೇಹ ಬೆಳೆಸುವ ಬಯಕೆಯಿಲ್ಲ... ನನ್ನ ಭಾವನೆಗಳಿಗೆ ವ್ಯಾಖ್ಯಾನ ನೀಡುವುದೇ ನನ್ನಿಂದ ಸಾಧ್ಯವಾಗುತ್ತಿಲ್ಲ... ಹೌದು. ಹಿರಣ್ಮಯ ಎಂಬ ಸಹೋದ್ಯೋಗಿಯೊಬ್ಬರ ವಿಚಾರ ತುಂಬಾ ಹಿಡಿಸಿತು... 'ಮಾನವ ಪ್ರಧಾನವಾಗಿ ಬುದ್ಧಿಜೀವಿ-ಎಂದು ಆರಂಭಿಸಿ ಅವರು ಯಾರೊಂದಿಗೋ ಮಾತನಾಡುತ್ತಿದ್ದುದು ನನ್ನ ಗಮನ ಸೆಳೆಯಿತು... ಕ್ಷಮೆ ಬೇಡಿದೆ... ಏಕಾಗಿ? ಎಂದರು. ನಿಮ್ಮ ಸ್ನೇಹ ಬಯಸುತ್ತೇನೆ ಎಂದೆ... ಯಾಕೆ? ಎಂದರು.

"ನಿಮ್ಮ ವಿಚಾರಶೀಲತೆಯಿಂದ ನಾನು ಪ್ರಭಾವಿತನಾದೆ" ಎಂದೆ.

"ಹಾಗೆಲ್ಲ ಯಾರ ಪ್ರಭಾವಕ್ಕೂ ಒಳಗಾಗುವುದು ಒಳಿತಲ್ಲ... ನೀವೇ ಯೋಚಿಸಿ ತೀರ್ಮಾನಕ್ಕೆ ಬನ್ನಿ" ಎಂದರು.

ಛೆ! ಈತ ಎಂಥ ಅಹಂಕಾರಿ ಎನ್ನಿಸಿತು. ಸ್ನೇಹವನ್ನು ಯಾಚಿಸಿ ಬಂದ ನನಗೆ ಇವರು ತೋರುವ ಪ್ರತಿಕ್ರಿಯೆ ಇದೇ ಏನು? ಇನ್ನು ಈ ವ್ಯಕ್ತಿಯನ್ನು ಮಾತನಾಡಿಸಲೇಬಾರದು. ಎಂದುಕೊಂಡೆ- ಈತನ ವಿಚಾರಗಳು ಉತ್ತಮವಿರಬಹುದು... ಆದರೇನು? ಸೌಜನ್ಯವಿಲ್ಲದವ..."

–ಓಹೋ... ವಿಜಯನ ವ್ಯಕ್ತಿತ್ವ ಎಂಥ ಏರುಪೇರಿಗೆ ಸಿಕ್ಕಿಹಾಕಿಕೊಳ್ಳುತ್ತಿದೆ. ಎಂದುಕೊಂಡಳು ಸುಧಾ ಮತ್ತೆ ಓದಿದಳು–ಕುತೂಹಲ ಬೇರೆ–

"...ಆಕಸ್ಮಿಕವಾಗಿ ಹೋಟೆಲಿನಲ್ಲಿ ಹಿರಣ್ಮಯನ ಭೇಟಿಯಾಯಿತು... ನಾನು ನಮಸ್ಕಾರ ಎನ್ನಬೇಕೆಂದುಕೊಂಡವನು ಮತ್ತೆ ಬಿಗುಮಾನದಿಂದ ಬೇರೆ ಕಡೆ ಹೋಗಿ ಕುಳಿತೆ. ಹಿರಣ್ಮಯ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಆತ ಕಾಫಿ ಕುಡಿಯುತ್ತಾ ಕುಳಿತಿದ್ದ. ನನಗೆ ಎಷ್ಟೇ ತಡೆದುಕೊಂಡರೂ ಆತನನ್ನು ತಿರುಗಿ ನೋಡದಿರಲು ಸಾಧ್ಯವಾಗಲಿಲ್ಲ. ಆತ ನನ್ನ ಕಡೆ ತಿರುಗಿ ಸಹ ನೋಡಲಿಲ್ಲ. ಅಷ್ಟರಲ್ಲಿ ಯಾರೋ ಒಬ್ಬಾತ ಸೂಟುಧಾರಿ ಬಂದವನೇ ಹಿರಣ್ಮಯನಿಗೆ ಗೌರವದಿಂದ ಕೈಮುಗಿದು 'ನಮಸ್ಕಾರ ಸಾರ್" ಎಂದ. ಹಿರಣ್ಮಯ ಪ್ರತಿನಮಸ್ಕಾರವನ್ನೂ ಹೇಳದೆ–"ಬನ್ನಿ ರಾಜು... ಕೂತ್ಕೊಳ್ಳಿ..." ಎಂದಾಗ ನನಗೆ ಮೈ ಉರಿಯಿತು...

"ಸಾರ್... ಒಂದು ವಿಚಾರದಲ್ಲಿ ಸ್ವಲ್ಪ ಅನುಮಾನ ಬಂತು ಸಾರ್... ನಿಮ್ಮನ್ನು ಕೇಳೋಣಾಂತ ಅಂದ್ಕೊಂಡಿದ್ದೆ... ತಾವೇ ಸಿಕ್ಕಿದಿರಿ..." ಎಂದ ಆ ಸೂಟುಧಾರಿ.

"ಕೇಳಿ..."



"ಮೊನ್ನೆ ನಮ್ಮ ಶಾಲೇ ಇನ್ಸ್ಪೆಕ್ಷನ್ ಆಯ್ತು...ಆಗ ಸಬ್ಜೆಕ್ಟ್ ಇನ್ಸ್ಪೆಕ್ಟರ್ ಮಹಾಶಯರು ನಿಮ್ಮ ಹುಡುಗರ ಹೋಂ ವರ್ಕ್ ಪುಸ್ತಕ ತೋರ್ಸಿ-ಅಂದರು. ನಾನು ತೋರಿಸಿದೆ. ಆಮೇಲೆ ಅವರನ್ನೇ ಕೇಳ್ದೆ ಏನ್ಸಾರ್... ಈ ಹೋಂವರ್ಕ್‌ನ ನಾವು ತಿದ್ದಿದರೆ ಹುಡುಗರಿಗೇನು ಪ್ರಯೋಜ್ನ? ಐವತ್ತಾರು ಜನ ಹುಡುಗರಲ್ಲಿ ಒಬ್ಬರೋ ಇಬ್ಬರೋ..." ಸರಿ. ಏನೋ. ಹಾಳು ಸ್ಕೂಲಿನ ವಿಷಯ... ಇರಲಿ... ಹಿರಣ್ಮಯ ಏನು ಉತ್ತರ ಕೊಡುತ್ತಾನೆ ನೋಡೋಣ.

"ನೋಡ್ರಿ... ಈ ಹೋಂವರ್ಕ್ ಮೇಲೆ ಕೆಂಪು ಮಸಿ ಚೆಲ್ಲೋ ಕೆಲಸ ಇದೆಯಲ್ಲ ಇದು ಬರೀ ಪ್ರದರ್ಶನಕ್ಕೆ... ಹುಡುಗ ಏನಾದ ಎಂದು ತಿಳಿಯೋದಕ್ಕೆ ಅದರಿಂದ ಏನೂ ಉಪಯೋಗವಿಲ್ಲ... ಮೇಷ್ಟ್ರು ಲೀಜರ್ ಇದ್ದಾಗ ಸುಮ್ನೆ ಕಾಲಹರಣ ಮಾಡಬಾರದು ಅನ್ನೋ ದುರುದ್ದೇಶ ಈ ಇಲಾಖೆಗೆ.."

ಅಬ್ಬ... ಇವನೂ ಉಪಾಧ್ಯಾಯನಾಗಿ, ಎಂಥ ಕಟುಸತ್ಯ ಬಯಲಿಗಿಡುತ್ತಿದ್ದಾನೆ ಎನ್ನಿಸಿತು. ಹೌದು... ಆತ ಹೇಳುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ."

ಸುಧಾಗೆ ಮುಂದೆ ಓದಲು ಬೇಸರವಾಯಿತು. ಕೆಲವು ಪುಟಗಳನ್ನು ಮಗುಚಿ ಹಾಕಿದಳು.

"ಹಿರಣ್ಮಯನೂ ನಾನೂ ಕೆರೆ ಏರಿಯ ಮೇಲೆ ಹೊರಟಿದ್ದೆವು-ಭಾವಾವೇಶವನ್ನು ಗೆಲ್ಲುವ ಬಗ್ಗೆ ಅವನ ವಿಚಾರಗಳು ಸೊಗಸಾಗಿವೆ. ಪ್ರೇಮ, ದ್ವೇಷ, ಕೋಪ, ಮತ್ಸರ ಎಲ್ಲ ಭಾವನೆಗಳನ್ನೂ ವಿಚಾರದ ಅಡಿಯಾಳಾಗಿ ಮಾಡಿಕೊಂಡಿದ್ದಾನೆ. ಗಂಡು ಹೆಣ್ಣುಗಳ ಸಂಬಂಧದ ಬಗ್ಗೆ ಅವನ ವಿಚಾರಗಳಲ್ಲಿ ಯಾವ ಉದ್ವೇಗವೂ ಇಲ್ಲ..

"ಒಂದ್ಸಾರಿ ಏನಾಯ್ತು ವಿಜಯ್ ಗೊತ್ತಾ? ಆಗ ನಾನು ಒಂದು ಹಳ್ಳೀಲಿದ್ದೆ... ನಮ್ಮ ಮನೆ ಎದುರಿಗೇ ಒಬ್ಬ ಹುಡುಗಿ... ನನ್ನ ಹತ್ರ ಇಂಗ್ಲೀಷ್ ಹೇಳಿಸಿಕೊಳ್ಳೋಕೆ ಬರ್‍ತಾ ಇದ್ಲು. ಅವಳ ಅಪ್ಪ ಅಮ್ಮನ ಉದ್ದೇಶ ನನ್ನನ್ನು ಅಳಿಯನನ್ನ ಮಾಡ್ಕೋಬೇಕೂ ಅಂತ... ಆ ಹುಡ್ಗೀನ ನನ್ನ ರೂಮ್ನಲ್ಲೆ ರಾತ್ರಿಯೆಲ್ಲ ಮಲಗೋದಕ್ಕೂ ಬಿಟ್ಟು ಬಿಡ್ತಾ ಇದ್ರು..."

"ಹೌದಾ?..." ನನಗೆ ಉದ್ವೇಗ ಜಾಸ್ತಿಯಾಯ್ತು.

"ಖಂಡಿತ... ಆದ್ರೆ, ಒಬ್ಬ ಗಂಡು ಹುಡುಗನೇ ನನ್ನ ಜೊತೆ ಮಲಗಿದ್ರೆ ಹೇಗೆ ಇರ್‍ತಾ ಇದ್ನೋ ಹಾಗೇ ಇದ್ದೆ ಅವಳ ಜೊತೆ... ಅವಳ ಯಾವ ಪ್ರಯತ್ನಾನೂ ಸಾಗ್ಲಿಲ್ಲ"

ನನಗೆ ಹಿರಣ್ಮಯನಲ್ಲಿ ಪೂಜ್ಯಭಾವ ಉಂಟಾಯಿತು. "ನೀನೊಬ್ಬ ಮಹಾತ್ಮ"ಎಂದೆ-

ಅವನು ಗಹಗಹಿಸಿ ನಕ್ಕ "ಮಹಾತ್ಮಾ! ಇದರಲ್ಲೇನಿದೆ ಮಹಾತ್ಮೆ? ಇದು ಬರೀ ವಿಚಾರದಿಂದ ಗೆಲ್ಲೋ ವಿಷಯ... ಅಷ್ಟೆ... ನೋಡು, ಈ ಕೋಟ್ಯಾಂತರ ಜನ ಇದಾರಲ್ಲ ಇವರು ಈ ಉದ್ವೇಗಕ್ಕೆ ದಾಸರಾಗಿ, ಯಾವನೋ ಒಬ್ಬ ಹೀಗಿದ್ದ ಅಂದ್ರೆ ಅವನನ್ನು 'ಮಹಾತ್ಮ' ಅಂತ ಅನ್ನೋಕೆ ಶುರುಮಾಡ್ತಾರೆ... ಅದು ಆ ಮಹಾತ್ಮನ ದೊಡ್ಡಸ್ತಿಕೆ ಅಲ್ಲ.. ಈ ಜನರ ಸಣ್ಣತನ ಅಷ್ಟೆ."

ಹಿರಣ್ಮಯನ ವರ್ತನೆ, ವಿಚಾರ-ಎಲ್ಲವೂ ನನಗೆ ಪ್ರಿಯವಾದವು. ವಿಚಾರ ಶಕ್ತಿಗೆ ಯಾವ ಗ್ರಂಥದ ಪೋಷಣೆಯೂ ಬೇಕಿಲ್ಲವೆನ್ನಿಸಿತು. ಅಂದಿನಿಂದ ಉದಾತ್ತ ಗ್ರಂಥಗಳ ವಾಚನಕ್ಕೆ ತಿಲಾಂಜಲಿಯಿತ್ತೆ... ನಾನು ಕಾಮವಶನಾದೇನು ಎಂಬ ಭೀತಿಯಿಂದ ದೂರವಿರಲು ಅದುವರೆಗೂ ಗ್ರಂಥದ ಸಹಾಯ ಪಡೆದ ನಾನು, ಆ ಕಟ್ಟನ್ನು ಕಳಚಿಕೊಂಡ ಹಾಗಾಯಿತು."

ಸುಧಾ ದೊಡ್ಡದಾಗಿ ನಿಟ್ಟುಸಿರುಬಿಟ್ಟಳು. ಗಡಿಯಾರ ನೋಡಿದಾಗ ರಾತ್ರಿ ಹನ್ನೊಂದಾಗಿತ್ತು.

× × ×

ಮಾರನೆಯ ದಿನ ವಿಜಯನ ದಿನಚರಿಯನ್ನೋದುವ ಕುತೂಹಲದಿಂದ ಬೇಗ ಮನೆಗೆ ಬಂದಳು. ಸಾಯಂಕಾಲ ಏಳೂವರೆಗೇ ಊಟವನ್ನು ಮುಗಿಸಿ ದಿನಚರಿಯನ್ನು ಕೈಗೆತ್ತಿಕೊಂಡಳು-

"...ಈ ಸಾವಿತ್ರಿಯ ವ್ಯಾಮೋಹದಿಂದ ಹೇಗೆ ಬಿಡುಗಡೆ ಪಡೆಯುವದೋ ಗೊತ್ತಾಗುತ್ತಿಲ್ಲ... ಹಿರಣ್ಮಯನೆದುರಿಗೆ ನನ್ನ ಈ ದೌರ್ಬಲ್ಯವನ್ನು ತೋಡಿಕೊಳ್ಳಲು ಯಾವುದೋ ಅಭಿಮಾನ ಅಡ್ಡಿಯಾಗುತ್ತಿದೆ... ಈ ಮನೆಯನ್ನಾದರೂ ಬಿಟ್ಟು ಬಿಡಬೇಕು. ನಿನ್ನೆ ಸಾಯಂಕಾಲವಂತೂ ಅವಳು. ನನ್ನನ್ನು ವಿಪರೀತ ಹಿಂಸೆಗೆ ಗುರಿಮಾಡಿದಳು... ಅವಳ ದುಂಡುತೋಳನ್ನು ಹಿಡಿದಾಗ ಹಿರಣ್ಮಯನ ವಿಚಾರಗಳೆಲ್ಲ ಎಲ್ಲಿಯೋ ಲುಪ್ತವಾಗುತ್ತವೆ... ವಿಚಾರವಂತಿಕೆಯನ್ನು ಕಷ್ಟಪಟ್ಟು ಅಭ್ಯಾಸಮಾಡಿಕೊಳ್ಳುವ ವಿದ್ಯಾರ್ಥಿ



ನಮ್ಮಲ್ಲಿ ದಿನವೂ ಹಬ್ಬ, ದಿನವೂ ಸಂಭ್ರಮ

ನಾವು ಮೈಸೂರು ಮಹಾರಾಜರ ಫರ್ನ್‌ಹಿಲ್ ಅರಮನೆಯನ್ನು ವೈಭವೋಪೇತವಾದ ಹೋಟೆಲ್ ಆಗಿ ಪರಿವರ್ತಿಸಿದ್ದೇವೆ. ಇಲ್ಲಿ ಹಬ್ಬ ಹರಿದಿನಗಳಿಗೆ ಕಾಯಬೇಕಿಲ್ಲ. ಕಾರಣ ಇಲ್ಲಿ ದಿನವೂ ಹಬ್ಬ, ದಿನವೂ ಸಂಭ್ರಮ.

೩೩ ಸೌಕರ್ಯಪೂರ್ಣ ಕೊಠಡಿಗಳು, ಅಭೂತಪೂರ್ವವಾದ ರೆಸ್ಟೋರೆಂಟ್, ಚೇತೋಹಾರಿಯಾದ ಕಾಫಿಶಾಪ್, ಸ್ಫೂರ್ತಿಯ ಸೆಲೆಯಾದ ಕಾನ್ಫರೆನ್ಸ್ ಹಾಲ್, ಟೆನ್ನಿಸ್, ಬಿಲಿಯರ್ಡ್ಸ್ ಮುಂತಾದ ಮನರಂಜನಾ ಕ್ರೀಡೆಗಳು, ರೂಮ್ ಸರ್ವೀಸ್, ಕಾರ್ ಪಾರ್ಕ್ ಇತ್ಯಾದಿ ಸೌಲಭ್ಯಗಳು ಮತ್ತು ಸದ್ಯದೇ ವೈಶಿಷ್ಟ್ಯವಾಗಿರುವ ರಾಜತ್ವದ ವಾತಾವರಣ, ಇವು ನಮ್ಮನ್ನು 'ಒಂದೇ ಇದೊಂದೇ' ಎನಿಸುವ ಹೋಟೆಲನ್ನಾಗಿಸಿದೆ.

ಅಂದಮೇಲೆ ಇಂತಹ ಸನ್ನಿವೇಶದಲ್ಲಿ ದಿನವೂ ಹಬ್ಬವಾಗದೇ ? ದಿನವೂ ಸಂಭ್ರಮದ ಸೊಗಸಿರದೇ ?

ಹೋಟೆಲ್ ಫರ್ನ್‌ಹಿಲ್ ಇಂಪೀರಿಯಲ್

ಫರ್ನ್‌ಹಿಲ್ ಪಿ. ಓ., ಉದಕಮಂಡಲ-೬೪೩ ೦೦೪

ಫೋನ್ : ೨೦೫೫ (೬ ಲೈನ್ಸ್), ೨೯೭೭, ೨೯೬೨ ತಂತಿ : ಫರ್ನ್‌ಇಂಪ್

ಹೋಟೆಲ್ ಫರ್ನ್‌ಹಿಲ್ ಇಂಪೀರಿಯಲ್ - ಹಿಂದಿನ ವೈಭವ, ಇಂದಿನ ಅನುಭವ

ಯಂತಾಗುತ್ತೇನೆ... ಖಂಡಿತ ಆ ಮನೆಯನ್ನು ಈ ದಿನ ಬದಲಾಯಿಸಬೇಕು... ಅಪ್ಪನಿಂದ ಎರಡು ತಿಂಗಳಿಂದಲೂ ಪತ್ರವಿಲ್ಲ... ಅದಕ್ಕೆ ಯಾವ ಮಹತ್ವವನ್ನೂ ನೀಡಬಾರದು..."

× × ×

"ಮನೆಯನ್ನು ಬದಲಾಯಿಸಿದೆ... ಮನಸ್ಸಿಗೆ ನೆಮ್ಮದಿಯಾಗಿದೆ.. ಆದರೆ ಭಾವೋದ್ವೇಗದ ಎಲ್ಲೆಯನ್ನು ಮೀರಲು ಸಾಕಷ್ಟು ಸಮರ್ಥನಾಗಲಿಲ್ಲವೆನ್ನಿಸುತ್ತದೆ... ಇನ್ನೂ ಅಭ್ಯಾಸ ಸಾಗಬೇಕು... ಪ್ರವೃತ್ತಿಯಿಂದ ಇದು ಸಾಧ್ಯ ಎಂಬ ವಿಚಾರ ತಲೆದೋರಿದೆ... ಹಾಗೆಂದೇ ಈ ದಿನ ಕಾಮಶಾಸ್ತ್ರದ ಪುಸ್ತಕಗಳನ್ನು ತಂದಿದ್ದೇನೆ. ಬೆಡ್‌ರೂಂ ಚಿತ್ರಗಳನ್ನೂ ತಂದಿದ್ದೇನೆ. ಇವುಗಳನ್ನು ನಿರುದ್ವಿಗ್ನನಾಗಿ ಅಭ್ಯಾಸ ಮಾಡಬೇಕು..."

"...ಕಾಮಶಾಸ್ತ್ರದ ವ್ಯಾಖ್ಯಾನಗಳೆಲ್ಲ ಕಂಠಸ್ಥವಾಗುವಷ್ಟು ಬಾರಿ ಓದಿ ಮುಗಿಸಿದ್ದೇನೆ... ಇದೀಗ ಆ ವಿಚಾರವಾಗಿ ಏನನ್ನು ಯೋಚಿಸಿದರೂ ಸ್ವಲ್ಪವೂ ಭಾವೋದ್ರೇಕವಿಲ್ಲ. ನಿಜ... ಇದೇ ಪ್ರಯೋಗವನ್ನು ಸಾವಿತ್ರಿಯೊಂದಿಗೆ ಏಕೆ ಮಾಡಬಾರದೆಂಬ ನಿರ್ಧಾರವೂ ಬಂದಿದೆ... ಹೌದು... ಅವಳ ತೋಳಸೆರೆಯಲ್ಲಿದ್ದರೂ ಸ್ವಲ್ಪವೂ ವಿಚಲಿತನಾಗಬಾರದು... ಸಾಯಂಕಾಲ ಆರಕ್ಕೆ ಸಾವಿತ್ರಿ ಬಂದಳು...

"ಈ ದಿನ ಪಾಠ ಬೇಗ ಮುಗಿಸಿ ಸಾರ್... ನಾನು ಸೆಕೆಂಡ್ ಷೋಗೆ ಹೋಗ್ಬೇಕು" ಎಂದಳು.

"ಈ ದಿನ ಬೇಡ ಸಾವಿತ್ರಿ... ನಾಳೆ ಹೋದ್ರೆ ಆಗದೆ? ನಾನೂ ಬರ್‍ತೀನಿ ಬೇಕಾದ್ರೆ..." ಎಂದೆ.

ಸಾವಿತ್ರಿಗೆ ಆಶ್ಚರ್ಯವಾಯಿತು; ಎಂದೂ ಒಪ್ಪದ ನಾನು ಹೀಗೆ ಒಬ್ಬಿಗೆ ಸೂಚಿಸಿದುದು ಅದೇ ಪ್ರಥಮ.."

"ಹಾಗೇ ಆಗ್ಲಿ ಸಾರ್..." ಎಂದಳು.

ಸರಿ ಪಾಠ ಪ್ರಾರಂಭವಾಯಿತು. ನಮ್ಮಿಬ್ಬರ ಮಧ್ಯೆ ಇದ್ದ ಅಂತರ ಬಹುಬೇಗ ಕರಗಿತು. ಅವಳು ಆಶ್ಚರ್ಯ ಚಕಿತಳಾದಳು. ನನ್ನನ್ನು ಬಲವಾಗಿ ತಬ್ಬಿದಳು.

ಆದರೆ... ಬರೀ ಪ್ರಜ್ಞೆಯ ಮಟ್ಟದಲ್ಲಿ ಪ್ರತಿಕ್ರಿಯೆಯ ಮೇಲೆ ವಿಜಯವನ್ನು ಸಾಧಿಸಿದ ನಾನು ದೈಹಿಕ ಸ್ಪರ್ಶದ ಮೇಲೆ ಯಾವ ಹತೋಟಿಯನ್ನೂ ಹೊಂದಿರಲಿಲ್ಲವೆಂಬುದು ತಿಳಿಯತೊಡಗಿದಾಗ ಹೆದರಿಕೆಯಾಯಿತು. ಯಾವ ದೈಹಿಕ ಸಂಪರ್ಕ ಅನಿವಾರ್ಯವಲ್ಲ ಎನ್ನಿಸಿತ್ತೋ ಅದು ತೀವ್ರ ಅನಿವಾರ್ಯ ಘಟನೆಯಾಗಿ ಹೋಯಿತು"

-ಸುಧಾ ಮುಗುಳ್ನಗೆ ಬೀರಿದಳು... ವಿಜಯನೂ ಒಮ್ಮೆ ಜಾರಿದ್ದಾನೆ... ಹೌದು.. ಅವನಿಗೆ ಈ ಅನುಭವದ ಮಾಹಿತಿ ಚೆನ್ನಾಗಿದೆ. ಹಾಗಾದರೆ ನಾನು ರವಿಗೆ ಅವಕಾಶಕೊಟ್ಟು ತಪ್ಪೇನೂ ಮಾಡಲಿಲ್ಲ.

ಮತ್ತೆ ದಿನಚರಿ-

"ಕಳೆದ ಒಂದು ತಿಂಗಳಿಂದ ದಿನಚರಿ ಬರೆಯಲಾಗಲಿಲ್ಲ... ಈ ಒಂದು ತಿಂಗಳ ಅವಧಿಯಲ್ಲಿ ದಿನಕ್ಕೆ ಎರಡುಬಾರಿಯಾದರೂ ಸಾವಿತ್ರಿಯನ್ನು ಸಂಪರ್ಕಿಸಿದ್ದೇ, ಇದೀಗ ಈ ದೇಹಕ್ಕೆ ಆ ಬಗೆಯ ಆಕರ್ಷಣೆಯೂ ತಗ್ಗಿದಂತಾಗಿದೆ. ಹೌದು... ಈ ಮಧ್ಯೆ ಸಾವಿತ್ರಿಗೆ ಗಂಡಾಂತರವೊಂದು ಒದಗಿದ ವಿಚಾರ ನನ್ನನ್ನು ಸುಡುತ್ತಿದೆ. ಅದಕ್ಕೆ ನಾನೇ ಕಾರಣ... ಆದರೆ ನನ್ನ ಪ್ರಯೋಗಕ್ಕಾಗಿ ಹಾಗೆ ಅವಳನ್ನು ಉಪಯೋಗಿಸಿಕೊಂಡೆನಲ್ಲದೆ ಅವಳೊಡನೆ ವಿವಾಹವಾಗಲು ಸಾಧ್ಯವಿಲ್ಲ... ಸಾವಿತ್ರಿಗೆ ಹಾಗೂ ನನಗೆ-ಇಬ್ಬರಿಗೆ ಮಾತ್ರ ಬಯಲಾಗಿರುವ ಈ ಅಂಶ ನಾಳೆ ಅವಳ ತಂದೆ ತಾಯಿಗಳಿಗೂ ತಿಳಿದರೆ... ಹೌದು... ಇದಕ್ಕೆ ಏನಾದರೂ ಒಂದು ಪರಿಹಾರ ಹುಡುಕಬೇಕು... ಜನಾರ್ದನನ್ನು ತೋರಿಸಿದರೆ?..."

ಸುಧಾಗೆ ವಿಜಯನ ಬಗ್ಗೆ ಇದ್ದ ಪೂಜ್ಯತೆಯೆಲ್ಲವೂ ಕ್ಷಣಾರ್ಧದಲ್ಲಿ ಅಳಿಸಿಹೋದಂತಾಯಿತು. ಥೂ... ಎಂಥ ನೀಚತನ ಇವನದು! ಡೈರಿಯನ್ನು ಮುಂದೆ ಓದುವುದಕ್ಕೂ ಅವಳಿಗೆ ಮನಸ್ಸು ಬರಲಿಲ್ಲ.

ನಾಲ್ಕಾರು ಹಾಳೆಗಳನ್ನು ಮಗುಚಿ ಹಾಕಿದಳು.

"ಈಗ ನಾನು ಎಲ್ಲ ಭಾವೋದ್ವೇಗದಿಂದಲೂ ಮುಕ್ತನಾಗಿರಬಲ್ಲೆ... ವಿಚಾರವಂತಿಕೆಯನ್ನು ಬಳಸಿಕೊಳ್ಳಬಲ್ಲೆ... ಮಾನವನ ವೈಶಿಷ್ಟ್ಯವಾದ ಈ ಚಿಂತನಶೀಲತೆಯನ್ನೇ ಎತ್ತಿ ಹಿಡಿಯಬಲ್ಲೆ... ಹಿರಣ್ಣಯನಿಗೆ ವರ್ಗವಾಗಿದೆ. ಅವನಿಗೆ ನನ್ನನ್ನು ಬಿಟ್ಟು ಹೋಗುವ ಇಷ್ಟವಿಲ್ಲ. ಆದರೆ ನನ್ನ ನಿರ್ವಿಕಾರತೆಯ ಹಿನ್ನಲೆಯಲ್ಲಿರುವ ಕ್ರೂರ ಪ್ರಯೋಗದ ಅರಿವು ಆತನಿಗೆ ಸ್ವಲ್ಪವೂ ಇಲ್ಲ..."

"ಅಯ್ಯೋ! ಇದಕ್ಕೆ ನಾನೇ ಕಾರಣ... ಛೆ! ಇಂತಹ ಅನ್ಯಾಯವಾಗಬಾರದಾಗಿತ್ತು... ಸಾವಿತ್ರಿ ಬಾವಿಗೆ ಹಾರಿದಳು... ಜನಾರ್ದನ ಒಪ್ಪಲಿಲ್ಲವೆಂದು.. ಛೆ... ನಾನಿಲ್ಲಿರುವವರೆಗೂ ಅವಳ ಪ್ರೇತ ನನ್ನನ್ನು ಕಾಡಿಸುತ್ತದೆ... ಈ ಸ್ಥಳವನ್ನು ಆದಷ್ಟು ಬೇಗ ಬಿಡಬೇಕು... ವಿಚಾರವಂತಿಕೆಯ ತಕ್ಕಡಿಯಲ್ಲಿ ಈ ಘಟನೆಯನ್ನು ತೂಗಿ, ಇದರ ಬೆಲೆಯನ್ನು ಕಟ್ಟಿದಾಗ, ನನ್ನ ಒಳಗುದಿ ಹತೋಟಿಗೆ ಬಂದ ಹಾಗಾಯಿತು... ಹೌದು... ಅವಳು ಈಗ ಸತ್ತಿದ್ದಾಳೆ... ಅದೊಂದು ಸತ್ಯ ಸಂಗತಿ... ಅದಕ್ಕೆ ನನ್ನ ಪ್ರತಿಕ್ರಿಯೆಯಿಂದ ಯಾವ ಲಾಭವೂ ಇಲ್ಲ. ಇನ್ನು ಮುಂದೆ ಹೆಣ್ಣುಗಳ ವಿಚಾರದಲ್ಲಿ ನಿರುದ್ವಿಗ್ನವರ್ತನೆ ಅವಶ್ಯಕ-"

ಅಲ್ಲಿಂದ ಮುಂದೆ ನಾಲ್ಕೈದು ಪುಟಗಳು ಖಾಲಿಯಿದ್ದುವು. ಆಮೇಲೆ ಮತ್ತೆ ದಿನಚರಿ ಮುಂದುವರಿದಿತ್ತು... ಅದು ಪ್ರಾರಂಭವಾದ ರೀತಿಯಿಂದಲೇ ಅದು ದೇವಪುರಕ್ಕೆ ಬಂದ ನಂತರ ಬರೆದುದು-ಎಂದು ಸುಧಾಗೆ ಅರ್ಥವಾಯಿತು.

"ಹೊಸ ಸ್ಥಳವೊಂದಕ್ಕೆ ಹೊರಟಿದ್ದೆ..: ಸಾವಿತ್ರಿಯನ್ನು ಭೂಗರ್ಭದಲ್ಲಿ ಹುಗಿದು, ಹೆಣ್ಣುಗಳ ಬಗ್ಗೆ ಅತ್ಯಂತ ನಿರ್ವಿಕಾರವರ್ತನೆಯನ್ನು ತೋರಿಸುವ ಸಂಕಲ್ಪವನ್ನು ಹುರಿಗೊಳಿಸಿ ಪ್ರಯಾಣಕ್ಕೆ ಅನುವಾದೆ... ಮಾಮೂಲಿನಂತೆ ಪುಸ್ತಕ ಕೈಯಲ್ಲಿತ್ತು... ಮನಸ್ಸು ವಿಷಯವನ್ನು ಗ್ರಹಿಸದಾಯಿತು.. ಸೀಟಿನ ಮುಂದೆ ಕುಳಿತ ಪ್ರಾಯದ ಹೆಣ್ಣು ನನ್ನನ್ನು ಸೆಳೆಯುತ್ತಿದೆ-ಎನ್ನಿಸಿತು. ಸಚೇತನಾಗಿ ವಿಚಾರವಂತಿಕೆಯ ಮುಸುಕೆಳೆದುಕೊಂಡೆ... ಪುಸ್ತಕದಲ್ಲಿ ನೆಟ್ಟ ಕಣ್ಣನ್ನು ಅತ್ತಿತ್ತ ತಿರುಗಿಸಲಿಲ್ಲ... ಪುಟಗಳನ್ನು ಮಗುಚಿ ಹಾಕತೊಡಗಿದೆ... ಜಟ್ಕಾವಾಲನ ವರ್ತನೆಯಿಂದ ಮನಸ್ಸು ಕೆರಳಿದರೂ ನಿರುದ್ವಿಗ್ನತೆಯ ಅಭ್ಯಾಸ ನಡೆಸಿದೆ... ಊರನ್ನು ತಲುಪಿದಾಗ ಆ ಹೆಣ್ಣು ನನ್ನನ್ನು ಹಿಂಬಾಲಿಸಿತು. ನನ್ನ ಎದೆ ಸಣ್ಣಗೆ ಕಂಪಿಸಿತು... ವಿಚಾರವಂತಿಕೆಯನ್ನು ಬಲವಾಗಿ ತಬ್ಬಿದೆ... ಮಾತಿನಲ್ಲಿ ಸಂಘರ್ಷವನ್ನು ತುರುಕುವ ಪ್ರಯತ್ನ ನಡೆಯಿತು... ಅವಳು ನನ್ನೊಟ್ಟಿಗೆ ಒಂದೇ ಕೋಣೆಯಲ್ಲಿ ಮಲಗಲು ಒಪ್ಪಿದಾಗ ಸತ್ವಪರೀಕ್ಷೆ ನಿಜವಾಗಿಯೂ ಆರಂಭವಾಯಿತು.. ಅವಳನ್ನು ಕಣ್ಣೆತ್ತಿ ಸಹ ನೋಡುವ ಆತ್ಮವಿಶ್ವಾಸ ಅಳಿಸಿಹೋಯಿತು... ಪುಸ್ತಕದಲ್ಲಿ ಮಗ್ನನಾದೆ... ಹಣಕಾಸಿನ ದೃಷ್ಟಿಯಿಂದಲೂ ವ್ಯವಹಾರವನ್ನು ಪ್ರಯೋಗಿಸಿ, ನಿಧಾನವಾಗಿ, ಆಕೆ, ಸುಧಾ, ನನ್ನ ಸುತ್ತ ನೇಯುತ್ತಿದ್ದ ಬಲೆಯನ್ನು ಹರಿಯಲು ಪ್ರಯತ್ನಿಸಿದೆ. ಅವಳ ಅಂತರಂಗದ ಬಯಕೆ ಅರ್ಥವಾದಾಗ, ಹಟಮಾಡಿದೆ-ಸಂಭಾಷಣೆಗೆ ತೊಡಗಿದಾಗ, ಗಾಂಭೀರ್ಯದ ಮುಸುಕೆಳೆದೆ. ಪೂರ್ವನಿಶ್ಚಿತ ತೀರ್ಮಾನಗಳಿಲ್ಲದ ಸದ್ಯೋಜಾತ ಪ್ರಜ್ಞೆಯಿಂದ ಮೂಡಿದ ವಾದ ಸರಣಿಯನ್ನು ಬೇಕೆಂದೇ ನನ್ನ ರಕ್ಷಣೆಗಾಗಿ ಹೆಣೆದುಕೊಂಡೆ... ಮುಸುಕೆಳೆದು ನಿದ್ರಿಸುವಂತೆ ನಟಿಸಿದೆ-ಸುಧಾ ಆ ಕನ್ನಡಿ ಎದುರು ನಿಂತಾಗ ಅವಳ ಅಂಗಾಂಗಗಳು ನನ್ನನ್ನು ಸೆಳೆಯುತ್ತಿದ್ದ ರೀತಿಗೆ ನನಗೇ ಹೆದರಿಕೆಯಾಗತೊಡಗಿತು... ಏನಿದು? ಪ್ರವೃತ್ತಿಯಿಂದ ಈ ದೇಹ ಮತ್ತೊಮ್ಮೆ ಸ್ತ್ರೀ ಸಂಗವನ್ನು ಬಯಸದಂತೆ ಮಾಡಿಕೊಂಡ ಪ್ರಯೋಗ ಯಾವ ಫಲವನ್ನೂ ನೀಡಲಿಲ್ಲವೆ? ಸಾವಿತ್ರಿಯ ಜೀವನವನ್ನು ಆಹುತಿ ತೆಗೆದುಕೊಂಡದ್ದೇ ಅದರ ಏಕೈಕ ಪರಿಣಾಮವೆ? ಹಿರಣ್ಣಯ ಒಬ್ಬ ಹುಡುಗಿಯ ಜೊತೆ ಯಾವಭಾವ ಸಂವೇದನೆಯೂ ಇಲ್ಲದೆ ಹೇಗೆ ಇದ್ದ? ಅದು ನಿಜವಿರಬಹುದೆ?

ಇಷ್ಟೆಲ್ಲ ಮಾನಸಿಕ ಆಂದೋಲನವನ್ನು ನಾನೇಕೆ ಸೃಷ್ಟಿಮಾಡಿಕೊಂಡೆ? ಸುಮ್ಮನೆ ಅಪ್ಪನ ಮಾತಿನಂತೆ ಮದುವೆಯಾಗಿ ಬಿಟ್ಟರೆ? ಆದರೆ ಅದು ನನ್ನ ತಾತ್ವಿಕ ಪರಾಜಯ! ಅದನ್ನು ನಾನು ಸಹಿಸಲಾರೆ..

ಆ ಹುಡುಗಿ ಸುಧಾ, ಯಾರದೋ ಮನೆಗೆ ಹೋಬೇಕಾಗಿತ್ತೆಂದು ಹೇಳಿದಾಗ ಏನೋ ಸಮಾಧಾನ. ಆದರೂ ಏನನ್ನೋ ಕಳೆದುಕೊಳ್ಳಲಿರುವೆನೆಂಬ ಸಂಕಟ... ವಿಚಾರವಂತಿಕೆಯ ಬಗ್ಗೆ ಉಪದೇಶ ನೀಡಿದ ನನ್ನ ಭಾವೋನ್ಮಾದ ನನಗೆ ನಿದ್ರೆಯನ್ನು ಕೊಡಲಿಲ್ಲ..."

"ಇಂದು ಸುಧಾ ನನ್ನೊಡನೆಯೇ ಇರುವುದಾಗಿ ತೀರ್ಮಾನಿಸಿದ್ದಾಳೆ. ಇದು ನನ್ನನ್ನು ಮತ್ತೆ ಯಾವ ಕಂದಕಕ್ಕೆ ನೂಕುವದೋ? ಪ್ರವೃತ್ತಿಯಿಂದ ನನ್ನ ಭಾವ ಸಂವೇದನೆಗಳು ನಿಯಂತ್ರಿಸಲ್ಪಟ್ಟಿವೆ-ಎಂಬ ಮೂಲಭೂತ ಭಾವನೆಯಿಂದಲೇ ನಾನು ಅವಳ ತೀರ್ಮಾನಕ್ಕೆ ಯಾವ ಮಹತ್ವವನ್ನೂ ಕೊಡಲಿಲ್ಲವೆಂಬಂತೆ ವರ್ತಿಸಿದೆ... ಆಕಸ್ಮಿಕವಾಗಿ ರವಿಯ ಭೇಟಿಯಾಯಿತು. ಮನೆಯನ್ನು ಕೊಡಿಸುವುದಾಗಿ ಹೇಳಿದ್ದಾನೆ... ಸುಧಾ ಅವನ ಮನೆಗೇ ಹೋಗಬೇಕಾಗಿತ್ತು... ಹಾಗಾದರೆ ಈಗ ಈ ವಿಷಯ ಸಂದಿಗ್ಧವಾಗಿದೆ... ಹೌದು... ನಾನು ಯಾವುದೋ ಅಪಾಯದ ಬಾಯಿಯಲ್ಲಿ ತಲೆ ಇಡುತ್ತಿದ್ದೇನೆ... ಸುಧಾ ಖಂಡಿತವಾಗಿಯೂ ಗುಂಡೂರಾಯರ ಮನೆಗೆ ಹೋಗಬೇಕಾಗುತ್ತದೆ ಎಂದು ನನ್ನ ಒಳದನಿ ನುಡಿದು ಕೊರಗುತ್ತಿದೆ... ಒಂದು ರಾತ್ರಿ ಒಟ್ಟಾಗಿ ಕಳೆದು, ಪತನಹೊಂದದ ಹೆಮ್ಮೆಗೆ ಬರೆಬೀಳುವಂತಾಗುತ್ತಿದೆ.

"ಆ ರಾತ್ರಿ ಸುಧಾ ನಿಶ್ಚಿಂತಳಾಗಿ ನಿದ್ರಿಸುತ್ತಿದ್ದಾಳೆ... ನಾನು ಉರಿಯುವ ದೀಪದ ಬೆಳಕಿನಲ್ಲಿ ಅವಳ ದೇಹವನ್ನು ನೋಡುತ್ತಿದ್ದೇನೆ... ಬಲಮಗ್ಗುಲಿಗೆ ಅವಳು ಹೊರಳಿದಾಗ ಉಂಟಾದ ಹೊದಿಕೆಯ

ಅಸ್ತವ್ಯಸ್ತತೆ, ಉಟ್ಟ ಸೀರೆ, ಲಂಗಗಳು ಬಹುಭಾಗ ತೆರೆದು ಬಿದ್ದಾಗಿನ ಸಂದರ್ಭ, ನನ್ನ ವಿಚಾರವಂತಿಕೆಯನ್ನು ಖೂನಿ ಮಾಡಿ ಗಹಗಹಿಸುತ್ತವೆ... ಅಥವಾ ಮೇಕ್ ಅಪ್ ಅಳಿಸಿಕೊಂಡು ಮೇಲೆದ್ದು ಅವಳ ಮಂಚದ ಮೇಲೆ ಕೂಡುತ್ತೇನೆ... ಸುಧಾ ನಿದ್ದೆಗಣ್ಣಿನಲ್ಲಿ ತನ್ನ ಬಲಗೈಯಿಂದ ನಾನು ಮುಟ್ಟಿದ ಜಾಗಗಳನ್ನು ಕೆರೆದುಕೊಳ್ಳುತ್ತಾಳೆ... ಸದ್ದು ಮಾಡದ ಮಿಂಚಿನ ವೇಗದಲ್ಲಿ ನನ್ನ ಮಂಚ ತಲುಪುತ್ತೇನೆ... ಕೈಯಲ್ಲೊಂದು ಪುಸ್ತಕ ಹಿಡಿಯುತ್ತೇನೆ... ಆಕಸ್ಮಿಕವಾಗಿ ಅವಳಿಗೆ ಎಚ್ಚರವಾದರೆ ಪುಸ್ತಕ ನನ್ನನ್ನು ರಕ್ಷಿಸಬೇಕಲ್ಲ!

ಛೆ... ನಾನು ತೀರ ದುರ್ಬಲನಾಗುತ್ತಿದ್ದೇನೆ... ಹಿರಣ್ಮಯ ತಾನು ಯಶಸ್ಸು ಗಳಿಸಿದೆನೆಂದು ಹೇಳುತ್ತಿರುವ ಈ ವಿಚಾರದಲ್ಲಿ ನನಗೆ ಯಾವ ವಿಶ್ವಾಸವೂ ಉಂಟಾಗುತ್ತಿಲ್ಲ... ಈಕೆ ನನ್ನ ಜೊತೆಗೆ ಏಕಾದರೂ ಇರಲು ಬಯಸುತ್ತಾಳೋ...ಪ್ರಾಯಶಃ ನನ್ನ ವಿಚಾರಗಳು ಅವಳ ಮೇಲೆ ಸಾಕಷ್ಟು ಪ್ರಭಾವ ಬೀರಿರಬಹುದು.

ಸಾವಿತ್ರಿಗೂ ಇವಳಿಗೂ ಬಹಳ ಅಂತರವಿದೆ.. ಅವಳು ಸಂವೇದನೆ, ಭಾವೋದ್ವೇಗಗಳ ಮೂಟೆ... ಇವಳು ವಿಚಾರ ಶೀಲೆ. ನನ್ನ ಮಟ್ಟವನ್ನು ತುಂಬ ಎತ್ತರದಲ್ಲಿ ಕಂಡಿದ್ದಾಳೆ. ಇವಳನ್ನು ಸ್ಪರ್ಶಿಸುವುದೂ ನನಗೆ ಸಲ್ಲದೆನ್ನಿಸುತ್ತದೆ... ನಿರ್ವಿಕಾರವಾಗಿರಲು ಪ್ರಯತ್ನಬೇಕು... ಅವಳೊಡನೆ ಮಾತನಾಡುವಾಗೆಲ್ಲ ಈ ನಿರುದ್ವಿಗ್ನತೆಯ ಮುಖವಾಡವೇ ನನಗೆ ಗತಿ?... ಆದರೆ... ಓಹ್... ಸುಧಾ ಎಂಥ ಸುಂದರಿ! ಅವಳು ನನ್ನನ್ನು ದೈಹಿಕವಾಗಿ ತುಂಬ ಸೆಳೆಯುತ್ತಾಳೆ... ಹೇಗೆ ನಾನು ಇವಳಿಂದ ಪಾರಾಗಲಿ?"

"ಇಂದು ಸುಧಾ ತಂದೆಯೊಡನೆ ನಡೆದ ಮಾತುಕತೆಗಳು... ರವಿಗೆ ಇವಳು ಹೆಂಡತಿಯಾಗಬೇಕಾದವಳಂತೆ! ಹಾಗಾದರೆ ಇವಳೀಗ ನನ್ನ ಕೈತಪ್ಪಿ ಹೋಗುತ್ತಾಳೆ. ಹಾಗಾಗುವುದರೊಳಗೇ ಒಮ್ಮೆ ಇವಳನ್ನು ಏಕೆ ಸಂಪರ್ಕಿಸಬಾರದು? ಹೌದು. ನನ್ನಲ್ಲಿ ಯಾವುದೋ ಪೈಶಾಚಿಕ ಬಯಕೆಯೊಂದು, ಅದುಮಿದಂತೆಲ್ಲ ಮೇಲೆ ಮೇಲೇರುತ್ತಿದೆ. ಈ ರಾತ್ರಿಯೇ.."

"ಆದರೆ ಸಮಸ್ಯೆಗೆ ಬಹಿರಂಗವಾಗಿ ಹೊಸ ಮುಖವೊಂದು ಹುಟ್ಟಿ, ಇವಳನ್ನು ನಾನು ಮದುವೆಯಾಗಬೇಕೆಂಬ ಸಲಹೆ ಅವಳ ತಂದೆಯಿಂದ ಬಂದಿದೆ. ಹೌದು. ಆಗಲಿ-ಎನ್ನಲೆ? ಮುಖವಾಡವನ್ನು ಕಿತ್ತು ಹಾಕುವ ಧೈರ್ಯವಿಲ್ಲ... ಮುಂದುವರಿಸುವ ಯೋಗ್ಯತೆಯಿಲ್ಲ- ಹಾಳಾಗಿ ಹೋಗಲಿ... ರವಿಯನ್ನು ಒಪ್ಪಿಸಿ ಇವಳಿಂದ ದೂರವಾಗುವುದೇ ಮೇಲು... ಜನಾರ್ದನ ಕೈಕೊಟ್ಟ ಹಾಗೆ ರವಿಯೂ ಮಾಡಿದರೆ...

"ಇದೀಗ ನಿಜವಾಗಿಯೂ ನಾನು ಸಮಸ್ಯೆಯ ಆಳದಲ್ಲಿದ್ದೇನೆ... ರವಿ ಸುಧಾಳನ್ನು ತ್ಯಜಿಸಿದ. ಅವಳು ನನ್ನ ಬಳಿಯೇ ಉಳಿಯುವುದು ಖಾತ್ರಿ... ಆದರೆ, ಅವಳೊಡನೆ ಮದುವೆ... ಹಿರಣ್ಮಯನ ಸಾಧನೆ! ಈಗೇನು ಮಾಡಲಿ?...ಹೌದು... ಹೀಗೆ ಮಾಡುತ್ತೇನೆ... ನೇರವಾಗಿ ಹಿರಣ್ಮಯನನ್ನೇ ಹೋಗಿ ನೋಡುತ್ತೇನೆ. ಅವನೇ ಈ ದಿನಚರಿಯನ್ನು ನೋಡಲಿ... ಸರಿ, ಪತ್ರವನ್ನೂ ಬರೆದಾಗಿದೆ... ರಜೆಯನ್ನು ಒಂದು ತಿಂಗಳು ಹಾಕಿ, ಬೆಳಗಿನ ಜಾವದ ಎಕ್ಸ್‌ಪ್ರೆಸ್‌ಗೇ ಹೊರಟುಬಿಡಬೇಕು"

ಸುಧಾ ಗಡಿಯಾರ ನೋಡಿಕೊಂಡಳು... ರಾತ್ರಿ ಹನ್ನೊಂದು! ಅಬ್ಬಾ... ವಿಜಯ! ಎಂಥ ಭಯಂಕರ ವ್ಯಕ್ತಿ! ಹೆಣ್ಣು ಎಂದರೆ ಇವನ ಹಲವಾರು ಪ್ರಯೋಗಗಳಿಗೆ ಕಚ್ಚಾಮಾಲು ಎಂದು ತಿಳಿದಿದ್ದಾನೆ! ಇವನೊಡನೆ ತಾನು ಜೀವಮಾನವಿಡೀ ಇದ್ದಿದ್ದರೆ! ತಾನೆಂತಹ ಆತುರ ಮಾಡಿಕೊಂಡು ಬಿಟ್ಟೆ! ರವಿಯನ್ನು ಆ ರಾತ್ರಿ ಬಾಯಿಗೆ ಬಂದ ಹಾಗೆ ಏಕೆ ಬೈದೆ? ಮುಂತಾಗಿ ಮಿಡುಕಾಡಿದಳು... ರವಿಯೊಡನೆ ಪಡೆದ ಆ ಮಧುರ ಅನುಭವಕ್ಕಾಗಿ ಮತ್ತೆ ಹಾತೊರೆಯತೊಡಗಿದಳು.. ಅವನ ಮನವೊಲಿಸಿ, ತಾನು ಅವನನ್ನೇ ಮದುವೆಯಾದರೆ, ಅಪ್ಪನಿಗೂ ಸಮಾಧಾನ!

ಇನ್ನು ಆ ಡೈರಿಯನ್ನು ವಿಜಯನ ವಿಳಾಸಕ್ಕೆ ಕಳಿಸುವ ವಿಚಾರ ಅವಳನ್ನು ಬೀಳ್ಕೊಟ್ಟಿತು! ಹಾಳಾಗಿ ಹೋಗಲಿ ಆ ವಿಜಯ! ತನಗೆ ಏನೂ ಗೊತ್ತಿಲ್ಲವೆಂದು ಹೇಳಿದರಾಯಿತು ಎಂದುಕೊಂಡಳು. ಹಾಗೆಯೇ ಅವನ ಹಾಸಿಗೆ, ಬಟ್ಟೆ, ಬರೆ, ಪುಸ್ತಕ ಎಲ್ಲವೂ ಅವಳಿಗೆ ಬೆಂಕಿಯಂತೆ ಕಾಣತೊಡಗಿದವು. ಆ ಅಪವೇಳೆಯಲ್ಲೂ ಅವಳು ಅವುಗಳನ್ನೆಲ್ಲ ಒಂದು ಮೂಲೆಗೆ ಸೇರಿಸಿ, ಮೇಲೊಂದು ಚಾಪೆಯನ್ನು ಹೊದಿಸಿದಳು.

ತನ್ನ ಹಾಸಿಗೆಯನ್ನುರುಳಿಸಿ ಮಲಗಿದಳು... ಅವಳಿಗೆ ಈ ರಾತ್ರಿ ಏಕೋ ತಾನು ಒಂಟಿಯಾಗಿದ್ದೇನೆಂಬ ಭಯ ಆವರಿಸತೊಡಗಿತು... ಹೌದು,

ತಾನು ಏಕಾಂಗಿನಿ! ಒಂಟಿಯಾಗಿ ಈ ಮನೆಯಲ್ಲಿ ಕಾಲಹಾಕುವುದು ತೀರ ಅಪಾಯ ಎನ್ನಿಸತೊಡಗಿತು. ದೀಪವನ್ನು ಆರಿಸಲು ಮನಸ್ಸಾಗಲಿಲ್ಲ. ನಿದ್ರೆಯೂ ಹತ್ತಿರ ಸುಳಿಯಲಿಲ್ಲ. ಭೀತಿಯಂತೂ ಕ್ಷಣಕ್ಷಣಕ್ಕೂ ಹೆಚ್ಚಾಗತೊಡಗಿತು.

ಇದ್ದಕ್ಕಿದ್ದಂತೆ, ಬಾಗಿಲು ತಟ್ಟಿದ ಶಬ್ದವಾಯಿತು... ಸುಧಾಗೆ ಹೃದಯವೇ ಬಾಯಿಗೆ ಬಂದ ಹಾಗಾಯಿತು! ಕೂಗಿಕೊಳ್ಳಲೂ ಗಂಟಲು ಏಳಲಿಲ್ಲ...

"ಸುಧಾ..." ಮೆತ್ತಗೆ ಕೂಗಿದ ಧ್ವನಿ ರವಿಯದೆಂದು ತಿಳಿದಾಗ ಅವಳ ಆನಂದಕ್ಕೆ ಪಾರವಿಲ್ಲದಾಯಿತು.

- ೮ -

ಬಾಗಿಲು ತೆರೆದೊಡನೆಯೇ ರವಿ ಒಳಗೆ ಬಂದ. ಬಾಗಿಲು ಮುಚ್ಚಿದ ಸುಧಾ ಅವನನ್ನು ತೆಕ್ಕೆಬಿದ್ದಳು. "ರವಿ... ನನ್ನನ್ನು ದಯವಿಟ್ಟು ಕ್ಷಮಿಸಿ...ಪ್ಲೀಸ್.." ಎನ್ನತೊಡಗಿದಳು.

ರವಿ ಅವಳನ್ನು ತಬ್ಬಿಕೊಂಡು, ತಲೆಯನ್ನು ನೇವರಿಸುತ್ತಾ-"ಯಾಕೆ ಸುಧಾ? ನಾನ್ಯಾಕೆ ಕ್ಷಮಿಸಬೇಕು?... ಸಿನಿಮಾಕ್ಕೆ ಹೋಗಿದ್ದೆ. ಹಾಗೆ ಯಾರದೋ ಸ್ನೇಹಿತರ ರೂಮಿಗೆ ಹೋಗಿ ಮಾತಾಡ್ತಾ ಕೂತಿದ್ದೆ.. ವಾಪಸ್ ಬರ್ತಿದ್ದಾಗ, ನಿನ್ನ ಮನೇಲಿ ಇನ್ನೂ ಲೈಟ್ ಉರೀತಿತ್ತು.... ಹೀಗೆ ಬಂದೆ... ನಿಂಗೇನೂ ತೊಂದ್ರೆ ಕೊಡಲ್ಲ... ಎಲ್ಲಾ ಆರೋಗ್ಯ ತಾನೆ?" ಎಂದ.

ಸುಧಾ ಅವನನ್ನು ಬಳಸಿಕೊಂಡೇ ತನ್ನ ಹಾಸಿಗೆಯವರೆಗೂ ಕರೆತಂದು "ನೀವು ಏನು ತೊಂದ್ರೆ ಕೊಟ್ರೂ ಪರವಾಗಿಲ್ಲ... ನಾನವತ್ತು ನಿಮ್ಮನ್ನು ತುಂಬಾ ಅಂದು ಬಿಟ್ಟೆ... ನಿಮಗೆಷ್ಟು ಬೇಸರ ಆಯ್ತೋ ಏನೋ... ದಯವಿಟ್ಟು ಅದನ್ನೆಲ್ಲಾ ಮರ್ತುಬಿಡಿ... ಇಷ್ಟಾದ್ರೂ ಮತ್ತೆ ನೀವೇ ನನ್ನ ಮನೆಗೆ ಬಂದ್ರಲ್ಲ" ಎಂದು ಅವನ ಮುಖಕ್ಕೆ ಒಮ್ಮೆ ಮುತ್ತಿಟ್ಟಳು.

ರವಿಗೆ ದಿಗ್ಭ್ರಾಂತಿಯಾದಂತಾಯಿತು. ಅವನು ಈ ಸ್ವಾಗತವನ್ನು ಖಂಡಿತ ನಿರೀಕ್ಷಿಸಿರಲಿಲ್ಲ. ಇನ್ನೊಮ್ಮೆ ಬಲಾತ್ಕಾರಕ್ಕಾಗಿಯೇ ಬಂದ ಅವನಿಗೆ ಆಶ್ಚರ್ಯವಾಯಿತು.

"ನೀನೇನು ಬೇಕಾದ್ರೂ ಅನ್ನು ಸುಧಾ...ನಿನ್ನಂಥ ರೂಪವತಿಯಿಂದ ಬೈಸಿಕೊಳ್ಳೋದೂ ಒಂದು ಪುಣ್ಯ.... ಅದಕ್ಕೇ ಬಂದ್ಬಿಟ್ಟೆ."

ಸುಧಾ ಅವನ ಬಾಯಿ ಮೇಲೆ ಕೈಯಿಟ್ಟು- "ಇನ್ಮೇಲೆ ನೀವು ದಿನಾ ಬರಬೇಕು...ಬರದೇ ಇದ್ರೆ ನೋಡಿ..." ಎಂದು ಅವನ ಕಣ್ಣಲ್ಲಿ ಕಣ್ಣಿಟ್ಟಾಗ-

"ಏನ್ಮಾಡ್ತೀಯಾ ಬರದೇ ಇದ್ರೆ?" ಎಂದು ಹೇಳುತ್ತಾ ರವಿ ಅವಳನ್ನು ತನ್ನ ಹತೋಟಿಗೆ ತೆಗೆದುಕೊಂಡ.

ಆಮೇಲೆ ಕೆಲವಾರು ನಿಮಿಷಗಳು ಅವರಿಬ್ಬರೂ ಪ್ರಪಂಚವನ್ನೇ ಮರೆತರು. ಅವರ ಭಾವೋನ್ಮಾದದ ಅಮಲು ಇಳಿದ ನಂತರ ಸುಧಾ-

"ನೀವು ಇಲ್ಲೇ ಮಲಗಿ...ನಂಗೊಬ್ಬಳಿಗೇ ಹೆದರಿಕೆ" ಎಂದಳು.

ರವಿ ಬೇಡವೆಂದು ಹೇಳಿಯಾನೆ?

ಒಬ್ಬರ ತೋಳಿನಲ್ಲೊಬ್ಬರು ಹುದುಗಿಕೊಂಡಾಗ ಸುಧಾ ವಿಜಯನ ಕತೆಯನ್ನೆಲ್ಲ ಬಿತ್ತರಿಸಿದಳು....ರವಿ ಅವಳು ಹೇಳುವುದನ್ನು ಕೇಳಿ, ವಿಜಯನ ದಿನಚರಿಯನ್ನು ನೋಡಬಯಸಿದ. ಸುಧಾ ಅವನ ವಶಕ್ಕೆ ಅದನ್ನು ನೀಡಿದಳು. ಇಬ್ಬರೂ ಪ್ರಪಂಚದ ಅರಿವಿಲ್ಲದೇ ಗಾಢವಾಗಿ ನಿದ್ರಿಸಿದರು.

× × ×

ಗುಂಡೂರಾಯರು ರವಿ ಹೇಳಿದುದನ್ನು ನಂಬಿದರು. ಪಾಪ...ಸ್ನೇಹಿತರು...ರಾತ್ರಿ ಜೊತೆಗೆ ಮಲಗಲು ಕರೆದರೆ ತಪ್ಪೇನು?-ಎಂದುಕೊಂಡರು.

"ದಿನಾಗ್ಲೂ ಹೋಗ್ಬೇಕೇನೋ ರವಿ?" ಕಮಲಮ್ಮ ಕೇಳಿದರು.

"ಹೌದಮ್ಮಾ...ದಿನಾ ಹೋಗ್ಬೇಕು...ಎಂಟು ಗಂಟೆಗೆ ಊಟ ಮುಗಿಸಿ ಹೊರಟು ಬಿಡ್ತೀನಿ" ಎಂದ ರವಿ.

ಆ ದಿನ ಬ್ಯಾಂಕಿನಲ್ಲಿ ರವಿ ವಿಜಯನ ದಿನಚರಿಯನ್ನು ಸಂಪೂರ್ಣ ಓದಿದ. ಅವನಿಗೆ ಸುಧಾ ಬಗ್ಗೆ ಹೊಸ ರೀತಿಯ ಆಲೋಚನೆ ಹುಟ್ಟ ತೊಡಗಿತು...ಹೌದು... ತಾನು ಸುಧಾಳನ್ನು ಮದುವೆಯಾಗಬೇಕು...ಅವಳನ್ನು ಕೈ ಬಿಡಬಾರದು. ಅವಳು ವಿಜಯನಿಂದ ನಿಷ್ಕಲ್ಮಷವಾಗಿಯೇ ಉಳಿದಿದ್ದಾಳೆ. ತಾನು ಅವಳನ್ನು ತನ್ನವಳನ್ನಾಗಿ ಮಾಡಿಕೊಂಡಾಗಿದೆ. ವಿಜಯ ಸಾವಿತ್ರಿಗೆ ನೀಡಿದ ಗತಿಯನ್ನು ತಾನು ಸುಧಾಗೆ ನೀಡಬಾರದು. ತಾನೀಗ ಅಪ್ಪ, ಅಮ್ಮನೆದುರು ಹಟ ಹಿಡಿದು ಕುಳಿತರೆ ಖಂಡಿತ ಅವರು ಈ ವಿವಾಹಕ್ಕೆ ಸಮ್ಮತಿಸುತ್ತಾರೆ...ತನ್ನ ಮದುವೆಯ ಸಮಸ್ಯೆ ಅವರಿಬ್ಬರನ್ನೂ ಎಷ್ಟು ಹಣ್ಣು ಮಾಡಿದೆ ಎಂಬುದನ್ನು ತಾನು ಬಲ್ಲೆನಷ್ಟೆ!

ರಾತ್ರಿ ಊಟಕ್ಕೆ ಕುಳಿತಾಗ ಅಕಸ್ಮಿಕವಾಗಿಯೇ ಗುಂಡೂರಾಯರು ಕೇಳಿದರು-"ರವಿ...ದಾವಣಗೆರೆಯಿಂದ ಒಂದು ಹುಡುಗಿ ಫೋಟೋ, ಜಾತಕ ಎಲ್ಲಾ ಬಂದಿದೆ...ನೋಡ್ತೀಯೇನು?"

ರವಿಗೆ ತನ್ನ ನಿರ್ಧಾರವನ್ನು ತಿಳಿಸುವ ಅವಕಾಶ ತಾನಾಗಿಯೇ ಒದಗಿ ಬಂತು.

"ಅಪ್ಪ...ನಾನಾಗ್ಲೇ ಒಬ್ಬ ಹುಡುಗೀನ ಮೆಚ್ಚಿ, ಅವಳಿಗೆ ಮಾತೂ ಕೊಟ್ಟಿದೀನಿ...ಇವತ್ತು ನಾನೇ ಹೇಳ್ಬೇಕು ಅಂತಿದ್ದೆ"

ಗುಂಡೂರಾಯರಿಗಿಂತ ಕಮಲಮ್ಮನವರಿಗೆ ಅತ್ಯಾನಂದವಾಯಿತು.

"ಹೌದೇನೋ ರವಿ? ಸದ್ಯ ಒಂದು ಹೆಣ್ಣನ್ನು

ಒಪ್ಪಿದೆ ಅಂದ್ಹಾಗಾಯ್ತು. ಯಾರೋ ಅವಳು?" ಎಂದರು.

"ಯಾರಯ್ಯ ನೀನು ಮೆಚ್ಚಿರೋ ಆ ಹುಡುಗಿ?" ರವಿ ತಟ್ಟನೆ ಉತ್ತರ ಕೊಟ್ಟ–"ಸುಧಾ"

ಗುಂಡೂರಾಯರಿಗೂ ಕಮಲಮ್ಮನವರಿಗೂ ಷಾಕ್ ಹೊಡೆದಂತಾಯ್ತು. ರಾಯರು ಚೇತರಿಸಿಕೊಂಡು

"ಏನಂದೆ? ಆ ನೀತಿಗೆಟ್ಟ ಸುಧಾನ್ನ ನೀನು ಮದ್ವೆ ಆಗ್ತೀಯಾ?" –ಎಂದರು ಸ್ವಲ್ಪ ಒಗರಾದ ಧ್ವನಿಯಲ್ಲಿ.

ಯರ ಕೈಗೆ ರವಿ ವಿಜಯನ ಡೈರಿಯನ್ನು ಕೊಟ್ಟು – ಅಪ್ಪಾ...ಇದು ಆ ವಿಜಯನ ದಿನಚರಿ...ಇದನ್ನು ಪೂರ್ತಿ ಓದ್ರಿ...ಯೋಚ್ನೆ ಮಾಡಿ...ನಾನಿನ್ನು ಬರ್ತೀನಿ. ಬೆಳಗ್ಗೆ..." ಎಂದವನೇ ಸ್ವೆಟರ್ ಹಾಕಿಕೊಂಡು, ಚಪ್ಪಲಿ ಮೆಟ್ಟಿಕೊಂಡು ಸುಧಾಳ ಮನೆಯ ಕಡೆ ವೇಗವಾಗಿ ಹೊರಟ.

× × ×

ಅವನನ್ನೇ ನಿರೀಕ್ಷಿಸುತ್ತಿದ್ದ ಸುಧಾ, ರವಿ ಒಳಗೆ ಬಂದಾಗ ನಗೆ ಮೊಗದ ಸ್ವಾಗತ ನೀಡಿದಳು. ರವಿ ಅವಳನ್ನು ತಬ್ಬಿಕೊಂಡೇ -


"ಸುಧಾ, ನಿನ್ನ ವಿಚಾರವಾಗಿ ಅಪ್ಪ ಅಮ್ಮನೆದುರಿಗೆ ಎಲ್ಲ ಹೇಳಿದೀನಿ...ನಿನ್ನ ಬಗ್ಗೆ ಅವರಿಗಿರೋ ಅನುಮಾನ ಬಗೆಹರಿಯೋ ಹಾಗೆ ವಿಜಯನ ಡೈರೀನೂ ಅಪ್ಪನ ಕೈಲೇ ಕೊಟ್ಟು ಬಂದಿದೀನಿ..." ಎಂದ,

ಗಿಯೂ ಈ ಮದುವೆಗೆ ಒಪ್ಪೇ ಒಪ್ತಾರೆ...ನಿಮ್ತಂದೆಗೂ ಪತ್ರ ಬರೀತಾರೆ..." ಎಂದು ಆಶ್ವಾಸನೆ ನೀಡಿದ.

"ತಂದೆಯ ವಿಷಯ ನೆನಪಾಯಿತು...ಅವರ ಪತ್ರಕ್ಕೆ ತಾನಿನ್ನೂ ಯಾವ ಉತ್ತರವನ್ನೂ ಬರೆದಿಲ್ಲ. ಏನೆಂದು ಬರೆಯುವುದು? ತನ್ನ ಜೀವಮಾನದಲ್ಲಿ ಒದಗಿ ಬಂದ ಈ ಬದಲಾವಣೆಗಳ ಬಗ್ಗೆ ಬರೆಯಬಾರದೇ? ಆದರೆ, ಹೇಗೆ ಬರೆಯುವುದು? ಅಥವಾ ಒಂದು ದಿನದ ಮಟ್ಟಿಗೆ ಊರಿಗೆ ಹೋಗಿ ಬಂದರೆ? ಅಕ್ಕ ಭಾವ–ಇವರನ್ನೂ ನೋಡಿದ ಹಾಗಾಗುತ್ತದೆ.

"ಸುಧಾ..." ಯಾರೋ ಬಾಗಿಲಲ್ಲಿ ಕೂಗುತ್ತಿದ್ದರು. ರವಿ ಮತ್ತು ಸುಧಾ ಇಬ್ಬರೂ ತಮ್ಮ ಆಲಿಂಗನದಿಂದ ಬಿಡುಗಡೆ ಹೊಂದಿ ದೂರ ದೂರ ನಿಂತರು. ಸುಧಾ ಸ್ವಲ್ಪ ಮುಂದೆ ಬಂದು "ಯಾರು?" ಎಂದಳು.

"ಸುಧಾ...ಬಾಗಿಲು ತೆಗಿ" ವಾಸುದೇವಯ್ಯ



"ಆ ನಾಯಿ ಮುಟ್ಟಿದ ಮಡಕೇನ ನನ್ನ ಸೊಸೆ ಅಂತ ಹೆಂಗೋ ನಾ ಹೇಳೋದು?" ಎಂದರು ಕಮಲಮ್ಮ.

ರವಿಯ ಮುಖ ಕೆಂಪಾಯಿತು. "ಅಪ್ಪಾ...ನೀವು ತಿಳಿದಂತೆ ಅವಳು ನೀತಿಗೆಟ್ಟೋಳೂ ಅಲ್ಲ...ನಾಯಿ ಮುಟ್ಟಿದ ಮಡಕೇನೂ ಅಲ್ಲ...ಅವಳು ನನಗಾಗೇ ಮೀಸಲಾದ ಹುಡುಗಿ...ನೀವು ಒಪ್ದೇ ಇದ್ರೆ ನಾನೇ ರಿಜಿಸ್ಟ್ರರ್ ಮ್ಯಾ......"

"ಹಾ...ಹಾ... ತಾಳಯ್ಯ ಸ್ವಲ್ಪ ಇಲ್ಲಿ ಕೇಳು... ಅವಳು ಸತಿ ಸಾವಿತ್ರಿ ಅಂತ ನಿಂಗೆ ಹೇಗಯ್ಯ ಗೊತ್ತು?" ರಾಯರು ಕೇಳಿದರು.

"ಹೇಗೆ?... ನಿಮಗೂ ಗೊತ್ತಾಗೋ ಅಂಥ ಪುರಾವೆ ನನ್ನ ಹತ್ರ ಇದೆ ಅಪ್ಪಾ... ಊಟಾ ಆಗ್ಲಿ... ಅದನ್ನು ನಿಮಗೆ ಕೊಟ್ಟು ಹೋಗ್ತೀನಿ. ರಾತ್ರಿಯೆಲ್ಲ ಸ್ಟಡಿ ಮಾಡಿ.. ನಿಮ್ಗೇ ಅರ್ಥವಾಗುತ್ತೇ".

ಊಟವಾದ ಮೇಲೆ ಕೈ ಒರೆಸುತ್ತಾ ಬಂದ ರಾ

"ಈಗ ನೀವು ನನ್ನ ಕೈ ಬಿಟ್ಟರೆ. ನಂಗೆ ಯಾರೂ ದಿಕ್ಕಿಲ್ಲ ರವೀ...ಅಪ್ಪ ಅಮ್ಮನಿಗೂ ಸಮಾಧಾನವಾಗುತ್ತೆ...ಮುಂದೆ ಏನು ಹೇಳಬೇಕೆಂದು ಅವಳಿಗೆ ತೋಚಲಿಲ್ಲ. ವಿಜಯನ ಇಬ್ಬಗೆಯ ಬಗ್ಗೆ ಅವಳು ಆಳವಾಗಿ ಚಿಂತಿಸುತ್ತಿದ್ದಳು...ಅಬ್ಬಾ! ಅವನು ಇಲ್ಲಿಂದ ಹೊರಟು ಹೋಗುವಾಗ ಬರೆದ ಪತ್ರವೂ ಅವನ ನೈಜವನ್ನು ಹೊರಗೆಡವುತ್ತಿಲ್ಲ...ಅಂದರೆ ಅವನು ಈ ಊರಿನ ವ್ಯಕ್ತಿಗಳಿಂದ ಸಂಪೂರ್ಣವಾಗಿ ತನ್ನ ಭೂತವನ್ನು ಮರೆಮಾಚಿದ್ದಾನೆ...ಡೈರಿಯನ್ನು ಮರೆತು ಹೋಗಿರಬೇಕು... ಡೈರಿಯಲ್ಲಿ ಇಷ್ಟೆಲ್ಲ ವಿಷಯಗಳಿರುವಾಗ ಅದನ್ನು ಳಿಸುವಂತೆ ತನಗೆ ಅವನು ಪತ್ರವನ್ನೇಕೆ ಬರೆದ? ಪ್ರಾಯಶಃ ಅವನ ಕೋರಿಕೆಯಂತೆ ತಾನು ಅದನ್ನು ವಾಚಿಸುವ ಪ್ರಯತ್ನ ಮಾಡಲಾರೆನೆಂಬ ನಂಬಿಕೆ ಅವನಿಗಿರಬೇಕು....

"ಸುಧಾ...ಇನ್ನೂ ನಿಂಗೆ ನನ್ಮೇಲೆ ಅನುಮಾನವಾ? ನಾಳೆ ಬೆಳಗಾಗಲಿ ನೋಡು, ಅಪ್ಪ ಖಂಡಿತವಾ

ನವರ ಧ್ವನಿ"!

"ಅಪ್ಪ ಬಂದ ಹಾಗಿದೆ!" ಎಂದ ಸುಧಾ ರವಿಯತ್ತ ನೋಡಿದಳು. ರವಿ ಒಂದೇ ಹಾರಿಕೆಗೆ ಒಳಮನೆಯನ್ನು ಸೇರಿ ಬಾಗಿಲು ಮುಚ್ಚಿಕೊಂಡ.

ಸುಧಾ ನಡುಗುವ ಕೈಗಳಿಂದ ಬಾಗಿಲು ತೆರೆದಳು.

ವಾಸುದೇವಯ್ಯ, ಮೀನಾಕ್ಷಿ, ರಾಮಮೂರ್ತಿ, ನರಹರಿ ಎಲ್ಲರೂ ಒಟ್ಟಿಗೇ ಒಳಕ್ಕೆ ಹೆಜ್ಜೆಯಿಟ್ಟರು. ಮೀನಾಕ್ಷಿಯನ್ನು ಕಂಡ ಸುಧಾ "ಅಕ್ಕಾ...ಚೆನ್ನಾಗಿದಿಯೇನಕ್ಕ?..." ಎನ್ನುತ್ತ ಅಕ್ಕನನ್ನು ತಬ್ಬಿಕೊಂಡಳು.

"ಸಾಕು ಬಿಡೇ ಸುಧಾ...ಪತ್ರ ಬರೆದರೂ ಒಂದಿನದ ಮಟ್ಟಿಗೆ ನಿಂಗೆ ಬರೋಕಾಗ್ಲಿಲ್ಲ...ನೀನೇನಮ್ಮಾ...ಈಗ ಭಾರೀ ದೊಡ್ಡ ಮನುಷ್ಯಳಾಗ್ಬಿಟ್ಟಿದೀಯೆ..." ಮೀನಾಕ್ಷಿ ತಂಗಿಯನ್ನು ಮೂದಲಿಸಿದಳು.

ಎಲ್ಲರೂ ನಿಂತೇ ಇದ್ದುದನ್ನು ಕಂಡ ಸುಧಾ 'ಬನ್ನಿ ಎಲ್ರೂ ಕುತ್ಕೊಳ್ಳಿ... ಪಾಪ... ಎಷ್ಟೊತ್ತಿಗೆ ಹೊರ

ಬಿದ್ರೋ ಏನೋ ಊರ್ನಿಂದ? ಯಾಕಿಷ್ಟು ತಡ?" ಎಂದು ಚಾಪೆಯನ್ನು ಹಾಸುತ್ತಾ ಉಪಚರಿಸಿದಳು.

"ಮಧ್ಯಾಹ್ನವೇ ಹೊರಟಿದ್ವು...ಹಾಳಾದ ಬಸ್ಸು ದಾರೀಲಿ ಕೆಟ್ಟು ಹೋಯ್ತು...ನೀನೇನೋ ಈಗ ನಮಗೆ ಅಡಿಗೆ ಗಿಡಿಗೆ ಅಂತ ತೊಂದ್ರೆ ತಗೋ ಬ್ಯಾಡ. ನಾವೆಲ್ಲ ಆ ಸವಿತಾ ಭವನದಲ್ಲಿ ಊಟ ಮುಗಿಸ್ಕೊಂಡೇ ಬಂದಿದೀವಿ" ಎನ್ನುತ್ತಾ ವಾಸುದೇವಯ್ಯನವರು ಚಾಪೆಯ ಮೇಲೆ ಕೂತು –"ಬಾ ರಾಮಮೂರ್ತಿ... ಬಾರೋ ನರಹರಿ...ಕೂತ್ಕೊಳ್ರಿ..." ಎಂದು ಅಳಿಯನನ್ನೂ ಮಗನನ್ನೂ ಕರೆದರು.

"ಅಮ್ಮ ಚೆನ್ನಾಗಿದಾಳಾ ಅಕ್ಕಾ?"

"ಅಮ್ಮನಿಗಾಗೇ ಈಗ ನಾವೆಲ್ಲ ಬಂದಿದೀವಿ ಸುಧಾ...ನೀನು ನಾಳೆ ಬೆಳಿಗ್ಗನೇ ಇಲ್ಲಿಂದ ನಮ್ಮ ಜೊತೆಗೆ ದುರ್ಗಕ್ಕೆ ಹೊರಡಬೇಕು...ಒಂದೇ ದಿನದ ಮಟ್ಟಿಗೆ ಅಲ್ಲಿದ್ದು ಬೇಕಾದ್ರೆ ನಾಡಿದ್ದೇ ಇಲ್ಲಿಗೆ ಬರ್ತೀಯಂತೆ" ಮೀನಾಕ್ಷಿ ಹೇಳಿದಳು. ಸುಧಾಗೆ ಏನೋ ಒಂದು ವಿಧದ ಸಂತೋಷ, ಆಶ್ಚರ್ಯ ಎರಡೂ ಆಯಿತು. ಅವಳು ಕೆಲವು ನಿಮಿಷಗಳ ಹಿಂದೆ ಚಿತ್ರದುರ್ಗಕ್ಕೆ ಹೋಗುವ ವಿಚಾರವಾಗಿ ಯೋಚಿಸಿದ್ದಳು.

"ಸ್ವಲ್ಪ ಕಾಲು ತೊಳ್ಕೋಬೇಕಾಗಿತ್ತಲ್ಲೇ ಸುಧಾ... ಬಚ್ಚಲು ಎಲ್ಲಿದೆ?" ಎಂದು ಮೀನಾಕ್ಷಿ ಮೇಲೆದ್ದಾಗ ಸುಧಾಗೆ ದಿಗ್ಭ್ರಮೆಯಾಯಿತು. ರವಿ ಒಂದು ವೇಳೆ ಹಿತ್ತಿಲ ಬಾಗಿಲಿನಿಂದ ಹೊರಕ್ಕೆ ಹೊರಟು ಹೋಗಿದ್ದರೆ ಕ್ಷೇಮ...ಇಲ್ಲವಾದಲ್ಲಿ?

"ಸ್ವಲ್ಪ ತಡಿಯಕ್ಕಾ...ಬಚ್ಚಲಲ್ಲಿ ಮುಸುರೆ ಪಾತ್ರೆ ಇಟ್ಟಿದ್ದೆ...ತೆಗೆದು ಬರ್ತೀನಿ..." ಎಂದವಳೇ ಸುಧಾ ಒಳಮನೆಯ ಬಾಗಿಲನ್ನು ದಬ್ಬಿದಳು.

ಹಿತ್ತಿಲ ಬಾಗಿಲು ಓರೆಯಾಗಿ [illegible] ಕಂಡಾಗ ಸುಧಾ ಸಮಾಧಾನದ ನಿಟ್ಟುಸಿರು ಬಿಟ್ಟಳು. ಮೀನಾಕ್ಷಿ ಒಳಕ್ಕೆ ಬಂದಳು.

"ಅಮ್ಮಂಗೆ ಮೈಲಿ ಚೆನ್ನಾಗಿಲ್ವೇನಕ್ಕಾ?"

"ಚೆನ್ನಾಗೇ ಇದಾಳೆ...ನಿನ್ನ ನೋಡಬೇಕೂ ಅಂತ ಒಂದೇ ಸಮನೆ ಹಂಬಲಿಸುತ್ತಾ ಇದಾಳೆ ಕಣೇ"

ಚಾಪೆ, ಹೋಲ್ಡಾಲ, ಜಮಖಾನ–ಎಲ್ಲವನ್ನೂ ಹಾಸಿ ಐವರೂ ಮಲಗಿದರು. ಪ್ರಯಾಣದ ಆಯಾಸದಿಂದಲೋ, ಅಥವಾ ಮೀನಾಕ್ಷಿ ಮಾತನಾಡಲಿ ಎಂದೋ ವಾಸುದೇವಯ್ಯ, ನರಹರಿ, ರಾಮಮೂರ್ತಿ ಮುಂತಾದ ಗಂಡಸರು ಹೆಚ್ಚು ಮಾತನಾಡಲಿಲ್ಲ.

ಮೀನಾಕ್ಷಿಯೂ ಇಪ್ಪತ್ತು ನಿಮಿಷಗಳ ವರೆಗೆ ಅದೂ ಇದೂ ಮಾತನಾಡಿ, ಸುಮ್ಮನಾದಳು. ಸುಧಾಗೆ ಮಾತ್ರ ನಿದ್ರೆ ಬರಲಿಲ್ಲ.

ಇವರೆಲ್ಲ ಏತಕ್ಕಾಗಿ ಹೀಗೆ ಬಂದಿರಬಹುದು? ಬರೀ ತನ್ನನ್ನು ಕರೆದುಕೊಂಡು ಹೋಗಲು ಅಪ್ಪ ಒಬ್ಬರೇ ಬರಬಹುದಾಗಿತ್ತು...ನರಹರಿಯೊಬ್ಬನೇ , ಸಾಕಾಗಿತ್ತು...ಅಕ್ಕನನ್ನೂ ಭಾವನನ್ನೂ ಕರೆತಂದ ಉದ್ದೇಶವೇನು? ಅಥವಾ...

ಸುಧಾ ಆ ದಿನ ತನ್ನ ತಂದೆ, ಅಣ್ಣ ಹೊರಟು ಹೋದ ದಿನದ ಘಟನೆಗಳನ್ನು ಜ್ಞಾಪಿಸಿಕೊಂಡಳು. ಯಾವ ರಗಳೆಗೂ ಅವಕಾಶವಿರದಂತೆ ಅಕ್ಕನನ್ನು ಜೊತೆಗೆ ಕರೆ ತಂದಿದ್ದಾರೆ...ಹೌದು...ಆದರೆ ತನ್ನ ಪರಿಸ್ಥಿತಿ ಇಂದು ಅವತ್ತಿನ ಹಾಗಿಲ್ಲ...ತಾನಿಂದು ಸಂತೋಷವಾಗಿ ಅವರೊಡನೆ ಹೋಗಲು ಸಿದ್ಧಳಾಗಿದ್ದೇನೆ...

ಅಕ್ಕನ ಪಕ್ಕದಲ್ಲೇ ಮಲಗಿದ್ದ ಅವಳಿಗೆ ಯಾವುದೋ ಪ್ರಬಲ ರಕ್ಷಣೆಯ ಕೋಟೆ [illegible] ದಂತಾಗಿತ್ತು. ಇವರೆಲ್ಲರನ್ನೂ ತೊರೆಯುವಂತೆ ತನಗೆ ಹುಚ್ಚು ಹಿಡಿಸಿದ್ದ ವಿಜಯನ ಬಗ್ಗೆ ಅವಳ ಹೃದಯ ವಿಷ ಕಾರಿತು.

ಇದೀಗ ರವಿಗೆ ತನ್ನ ಬಗ್ಗೆ ಆಸಕ್ತಿ ಹುಟ್ಟಿದ ವಿಷಯ ತಿಳಿದರೆ ಅಪ್ಪನಿಗೂ ಇನ್ನೂ ಸಂತೋಷವಾಗಬಹುದು...ರವಿಯ ತಂದೆಯೂ ವಿಜಯನ ದಿನಚರಿಯನ್ನು ಈ ರಾತ್ರಿಯೇ ವಾಚಿಸುತ್ತಾರೆ...ನಾಳೆಯೇ ಅವರು ಈ ಲಗ್ನಕ್ಕೆ ಒಪ್ಪಿಗೆ ನೀಡಿದರೂ ನೀಡಬಹುದು.

ಹಾಗಾದರೆ, ತಂದೆಗೆ ವಿಜಯನ ಹೀನ ವರ್ತನೆಯ ಬಗ್ಗೆ ತಿಳಿಸುವುದು ಒಳ್ಳೆಯದಲ್ಲವೆ? ಆದರೆ ಯಾವಾಗ? ಇಲ್ಲಿ...ಭಾವ ಅಣ್ಣ—ಇವರೆದುರು ಸಾಧ್ಯವಿಲ್ಲ...ಅಕ್ಕನೆದುರಿಗೆ ಹೇಗೆ ಹೇಳುವುದು? ಅವಳಿಗೆ ತನ್ನ ವಿಚಾರ ಪೂರ್ತಿ ಗೊತ್ತಿದೆಯೋ ಇಲ್ಲವೋ...ಅಪ್ಪ ಯಾವುದೋ ದೃಷ್ಟಿಯಿಂದ ಇಲ್ಲಿ ನಡೆದ ಘಟನೆಗಳನ್ನೆಲ್ಲ ಅವಳಿಂದ ಮುಚ್ಚಿಟ್ಟಿರಬಹುದು.

ಯೋಚನೆಯ ಸುಳಿಗಳಲ್ಲಿ ಅವಳಿಗೆ ನಿದ್ರೆ ಯಾವಾಗ ಬಂತೋ ತಿಳಿಯಲಿಲ್ಲ...

× × ×

ಸುಧಾ ಕಣ್ಣು ಬಿಟ್ಟಾಗ ಚೆನ್ನಾಗಿ ಬೆಳಗಾಗಿತ್ತು! ಮೀನಾಕ್ಷಿ ಅವಳನ್ನು ಬೇಗ ಸಿದ್ಧಳಾಗುವಂತೆ ಅವಸರಪಡಿಸತೊಡಗಿದಳು. ಸುಧಾ ಬೇಗ ಎದ್ದು ಮುಖ ತೊಳೆದು ಎಲ್ಲರಿಗೂ ಕಾಫಿ ಮಾಡಿದಳು. ಆ ಮೇಲೆ ಎಲ್ಲರದೂ ಸ್ನಾನವಾಯಿತು. ಸುಧಾ ಶಾಲೆಗೆ ರಜೆಯನ್ನು ಬರೆದು ಎದುರು ಮನೆಯ ಹುಡುಗಿಯ ಕೈಗಿತ್ತಳು,

"ಒಂದ್ಸಾರಿ ಗುಂಡನ ಮನೆಗೆ ಹೋಗಿ ಬಸ್ ಸ್ಟ್ಯಾಂಡಿಗ ಹೋಗೋಣವ?"

ವಾಸುದೇವಯ್ಯ ನರಹರಿಯ ಕಡೆ ನೋಡಿದರು.

"ಏನೂ ಅಗತ್ಯವಿಲ್ಲ...ಮತ್ತೆ ನಾವು ಅವರ ಮನೆಗೆ ಹೋಗೋದುಂಟೆ? ಸಾಧ್ಯವೇ ಇಲ್ಲ ಅಪ್ಪಾ. ನಡೀರಿ ಬಸ್ ಸ್ಟ್ಯಾಂಡ್‌ಗೆ" ಎಂದ ನರಹರಿ.

ಮನೆಗೆ ಬೀಗ ಹಾಕುತ್ತಿದ್ದ ಸುಧಾಗೆ ಅಣ್ಣನ ಮಾತಿನಿಂದ ದಿಗ್ಭ್ರಮೆಯಾಯಿತು...ಗುಂಡೂರಾಯರ ಬಗ್ಗೆ ಇವರಿಗೆ ಅಸಮಾಧಾನವಿದೆ...ಅವರು ತನ್ನನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳಲು ನಿರಾಕರಿಸಿದ್ದೇ ಇದಕ್ಕೆ ಕಾರಣವಿದ್ದೀತು–ಎಂದುಕೊಂಡಳು. ಹಾಗಾದರೆ, ರವಿಯೊಡನೆ ತನ್ನ ಬಾಳು!

ಅಷ್ಟರಲ್ಲಿ ನಾಲ್ವರೂ ಮುಂದೆ ಹೊರಟಿದ್ದುದರಿಂದ ಸುಧಾ ತಾನೂ ಮುಂದೆ ನಡೆಯಬೇಕಾಯಿತು.

ದಾರಿಯಲ್ಲೇ ಸಮಾಧಾನ ಮಾಡಿಕೊಂಡಳು. ಹೌದು...ಇವರಿಗೆ ಇಲ್ಲಿನ ಇತ್ತೀಚಿನ ಘಟನೆಗಳು ತಿಳಿದಿಲ್ಲ...ಇಲ್ಲಿನ ಪರಿವರ್ತನೆಗಳ ಬಗ್ಗೆ ಏನೂ ಮಾಹಿತಿಯಿಲ್ಲದೆ ಹೀಗೆ ವರ್ತಿಸುತ್ತಿದ್ದಾರೆ...ಆದರೆ ಇವರಿಗೆ ವಸ್ತುಸ್ಥಿತಿ ಅರಿವಾಗುವುದು ಹೇಗೆ?

"ಏನು ಸುಧಾ...ಏನೋ ಯೋಚ್ನೆ ಮಾಡ್ತಿದೀಯಲ್ಲ...?" ಮೀನಾಕ್ಷಿ ಸುಧಾಳನ್ನು ಎಚ್ಚರಿಸಿದಳು. ಬೆಚ್ಚಿ ಬಿದ್ದ ಸುಧಾ "ಆ ...ಏನೂ ಇಲ್ವಲ್ಲ" ಎಂದು ಹೇಳಿ ನಾಚಿಕೊಂಡಳು.

× × ×

ಚಿತ್ರದುರ್ಗಕ್ಕೆ ಹೊರಡುವ ಬಸ್ ಜನಗಳಿಂದ ಭರ್ತಿಯಾಗತೊಡಗಿತ್ತು. ಐದು ಜನ ಚಿತ್ರದುರ್ಗದವರೆಗೆ ಬರುವ ಪ್ರಯಾಣಿಕರೆಂದು ಬಸ್ಸಿನ ಏಜೆಂಟ್ ಅವರೆಲ್ಲರಿಗೂ ಅಲ್ಲೊಂದು ಇಲ್ಲೊಂದು ಸೀಟು ತೆರವು ಮಾಡಿಸಿದ...ಒಬ್ಬರಿಂದ ಮತ್ತೊಬ್ಬರು ದೂರ ದೂರವಾದುದರಿಂದ ಬಸ್ಸಿನಲ್ಲಿ ಪರಸ್ಪರ ಸಂಭಾಷಣೆಗೆ ಅವಕಾಶವಾಗಲಿಲ್ಲ. ಕೊನೆಯ ಪಕ್ಷ ಅಕ್ಕನಾದರೂ ತನ್ನ ಪಕ್ಕಕ್ಕಿದ್ದರೆ ಚೆನ್ನ ಎನ್ನಿಸಿ ಸುಧಾ ತನ್ನ ಪಕ್ಕದಲ್ಲಿದ್ದಾಕೆಯನ್ನು

"ರೀ...ನೀವು ದಯವಿಟ್ಟು ಆ ಮುಂದಿನ ಸೀಟಿಗೆ ಹೋಗಿ...ಅಲ್ಲಿರೋ ನಮ್ಮಕ್ಕ ನನ್ನ ಪಕ್ಕಕ್ಕೆ ಬರ್ತ್ತಾಳೆ. ಏನೂ ತಿಳ್ಕೋಬೇಡ್ರಿ..." ಎಂದು ಗೋಗರೆದಳು. ಆಕೆ ಇವಳನ್ನೊಮ್ಮೆ ದುರುಗುಟ್ಟಿ ಮೇಲೆದ್ದು ಮೀನಾಕ್ಷಿಯತ್ತ ನಡೆದಳು.

ಮೀನಾಕ್ಷಿ ಪಕ್ಕಕ್ಕೆ ಬಂದದ್ದು ಸುಧಾಗೆ ಎಷ್ಟೋ ಸಮಾಧಾನವಾಯ್ತು. ಬಸ್ ಹೊರಟಿತು.

ದಾರಿಯಲ್ಲಿ ಸುಧಾ ಮೆಲ್ಲಗೆ "ಅಕ್ಕಾ...ಅಪ್ಪ ನನ್ನ ಬಗ್ಗೆ ಏನಾದ್ರೂ ಹೇಳಿದ್ರಾ ನಿಂಗೆ?" ಎಂದಳು.

ಮೀನಾಕ್ಷಿ ತಕ್ಷಣ ಯಾವ ಉತ್ತರವನ್ನೂ ಕೊಡಲಿಲ್ಲ. ಸುಮ್ಮನೇ ಅವಳತ್ತ ನೋಡಿದಳು. ಕೆಲಹೊತ್ತು ಬಿಟ್ಟು–

"ನಿಜ ಹೇಳು ಸುಧಾ...ಆ ವಿಜಯ ಅನ್ನೋ ವ್ಯಕ್ತಿ ಯಾರು?" ಎಂದಳು.

"ಹಾಗಾದ್ರೆ...ನಿಂಗೆ ಅಪ್ಪ ಎಲ್ಲಾ ವಿಚಾರಾನೂ ಹೇಳಿದಾರೆ..."

"ಹೂಂ...ಸ್ವಲ್ಪ ಹೇಳಿದಾರೆ...ಆ ವಿಜಯ ನಿನ್ನ ಜೊತೆಗೆ ಮೂರು ದಿನ ಇದ್ದ ಅಲ್ವೆ?"

"ಹೌದು...ಅದೊಂದು ದೊಡ್ಡ ಕತೆ...ಆ ಬಗ್ಗೆ ಈ ಬಸ್ನಲ್ಲಿ ಯಾಕೆ ಮಾತು? ಊರಿಗೆ ಹೋದ್ಮೇಲೆ ಅವನು ಎಂಥ ನೀಚ ಅನ್ನೋದನ್ನ ಹೇಳ್ತೀನಿ..."

"ಸುಧಾ...ಆ ವಿಜಯ ಅಯೋಗ್ಯ ಅನ್ನೋ ವಿಚಾರಾನ ನೀನು ನಂಗೆ ಹೇಳಬೇಕಾ? ನಂಗೆ ನಿಂಗಿಂತಾ ಚೆನ್ನಾಗಿ ಗೊತ್ತು ಕಣೇ..."

ಸುಧಾಗೆ ಆಚ್ಚರಿಯಾಯಿತು...ಮೀನಾಕ್ಷಿಯ ಮುಖವನ್ನೇ ದಿಟ್ಟಿಸಿದಳು.

"ಹೌದು ಸುಧಾ...ಈ ವಿಜಯ ನಿಮ್ಮ ಭಾವನ ಊರ್ನಲ್ಲೇ ಮೇಷ್ಟ್ರಾಗಿದ್ದ. ಅಲ್ಲಿ ಒಬ್ಬ ಹುಡುಗೀ ಪ್ರಾಣ ತೆಗೆದು ವರ್ಗ ಮಾಡಿಸಿಕೊಂಡು ಈ ದೇವಪುರಕ್ಕೆ ಬಂದ ಚಂಡಾಲ....ಅದ್ಯಾವನೋ ಹಿರಣ್ಮಯ ಅಂತ್ಲೋ ಏನೋ...ಅವನೂ ಇವನೂ ಸೇರಿ ಏನೇನೋ ಆಟ ಆಡಿದ್ರು...ಲೀಲಾವತಿ ಅನ್ನೋ ಹುಡುಗೀನ ತನ್ನ ಜೊತೇಲೇ ಮಲಗಿಸ್ಕೊಳ್ತಾ ಇದ್ದ ಆ ಹಿರಣ್ಮಯ... ಇವನು ಸಾವಿತ್ರಿ ಅನ್ನೋ ಹುಡ್ಗೀನ ಕೆಡಿಸಿ ಹಾಕ್ದ... ಲೀಲಾಗೆ ಏನೂ ಅಪಾಯವಾಗಿಲ್ಲ. ಅವಳ ಮದ್ವೆ ಆಗೇ ಹೋಯ್ತು...ಪಾಪ ಸಾವಿತ್ರಿಗೆ ಆಗಬಾರದ್ದಾಗಿ, ನನ್ನ ಮೈದುನ ಜನಾರ್ದನ ಇಲ್ವೆ, ಅವನಿಗೆ ಅವಳನ್ನು

ಚದುರಂಗಿ

ಎರೆಯ ಹೊಲಕೆ ದಿಗ್‌ಬಂಧನ ಹಾಕಿ
ಬಳುಕಾಡುವ ಬಣ್ಣದ ಬೆಡಗಿ
ಹಾದೀಲಿ ಹೋಗುವ ಹಾರುದುಂಬಿ ಕಡೆ
ನಗೆಯ ಚೆಲ್ಲುವಳು "ಚದುರಂಗಿ"!

–ಎಂ ಅಕಬರ ಅಲಿ

ಗಂಟು ಹಾಕೋಕೆ ನೋಡ್ದ. ಇಂಥ ನೀಚ...ಪಾಪ... ಆ ಹುಡ್ಗೀ ಬಾವಿಗೆ ಬಿತ್ತು ಇವನ ಕಾಲ್ದಲ್ಲಿ."

ಸುಧಾ ನಡುಗಿಹೋದಳು. ಹೌದು ಅವನು ಡೈರಿಯಲ್ಲಿ ಬರೆದ ಘಟನೆಗಳು ಎಲ್ಲವೂ ನಿಜವೇ... ಹೆಣ್ಣನ್ನು ಪ್ರಯೋಗಶಾಲೆಯ ವಸ್ತುವನ್ನಾಗಿ ಮಾಡಿಕೊಂಡ ರಾಕ್ಷಸ!

ಬಸ್ ನಿಂತಿತು...ಯಾವುದೋ ಹಳ್ಳಿ...ಜನಗಳು ಹತ್ತುತ್ತಲೇ ಇದ್ದರು. ಆ ಗಲಾಟೆಯಲ್ಲಿ ಒಬ್ಬರ ಮಾತು ಮತ್ತೊಬ್ಬರಿಗಿಲ್ಲವಾಯಿತು...ಸುಧಾ ವಿಜಯನ ಬಗ್ಗೆ ಅಕ್ಕನಿಂದ ವಿವರಗಳನ್ನು ತಿಳಿದಳು... ಹಾಗೆಯೇ ರವಿಯ ಬಗ್ಗೆ ತಾನೂ ಮೀನಾಕ್ಷಿಗೆ ಹೇಳಬೇಕು– ಎಂಬ ಆಸೆ...ಆದರೆ ಊರಿನಲ್ಲಿ ಸರಿಯಾದ ಸ್ಥಳದಲ್ಲಿ ತಿಳಿಸುವ ವಿಚಾರ ಅದು!

"ಸುಧಾ...ನಿಜ ಹೇಳು...ವಿಜಯ ನಿನ್ನ ಜೊತೆ ಹೇಗಿದ್ದ?" ಅಕ್ಕ ತನ್ನ ಕಿವಿಯಲ್ಲಿ ಕೇಳಿದ ಸೂಕ್ಷ್ಮ ಪ್ರಶ್ನೆಯಿಂದ ಸುಧಾ ಚಡಪಡಿಸಿದಳು. ವಿಜಯನ ದಿನಚರಿಯನ್ನು ತಾನು ಜೊತೆಗೆ ತಂದಿದ್ದರೆ ಎಷ್ಟು ಚೆನ್ನಾಗಿತ್ತು! ಆದರೆ...ಆ ದಿನಚರಿ ಇದೀಗ ತನ್ನ ಭವಿಷ್ಯವನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊತ್ತಿದೆ– ಗುಂಡೂರಾಯರು ಅದನ್ನು ಪರಿಶೀಲಿಸುತ್ತಿದ್ದಾರೆ.

ಅಕ್ಕನ ಪ್ರಶ್ನೆಗೆ ತಕ್ಷಣ ಅವಳು ಏನೂ ಉತ್ತರ ಹೇಳಲಿಲ್ಲ. ಮೀನಾಕ್ಷಿಯೂ ಅವಳನ್ನು ಹೆಚ್ಚು ಒತ್ತಾಯ ಮಾಡದೆ–"ಈ ಪ್ರಶ್ನೆಗೆ ಉತ್ತರವನ್ನು ನಿಧಾನವಾಗಿ ಕೊಡು ಸುಧಾ...ಆದ್ರೆ ಪ್ರಾಮಾಣಿಕವಾಗಿ ಕೊಡು...ಊರಿಗೆ ಹೋದ್ಮೇಲೇ ನೀನು ಹೇಳು ಬೇಕಾದ್ರೆ" ಎಂದು ಕಿಟಕಿಯಿಂದ ಹೊರಕ್ಕೆ ನೋಡತೊಡಗಿದಳು.

ಎಲ್ಲರೂ ಮನೆಯನ್ನು ತಲ್ಪಿದಾಗ ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಗೌರಮ್ಮ ಮಗಳನ್ನು ಕಂಡಾಗ, ಕಳೆದು ಹೋದ ಮಗಳು ಸಿಕ್ಕಷ್ಟು ಸಂತೋಷಪಟ್ಟರು. ಸುಧಾಳನ್ನು ಕರೆತಂದ ಬಗ್ಗೆ ಮೀನಾಕ್ಷಿಯನ್ನು ಕೃತಜ್ಞತೆಯಿಂದ ನೋಡಿದರು.

ಊಟವಾದ ನಂತರ ತಾಯಿಯೊಡನೆ ಸುಧಾ ಮೀನಾಕ್ಷಿಯರು ಅಡಿಗೆಯಲ್ಲಿ ಮಾತಿಗಾರಂಭಿಸಿದರು.. ಎಷ್ಟೋ ವಿಚಾರಗಳನ್ನು ಕುರಿತು ಹರಟಿದರು. ಆದರೆ ದೇವಪುರದ ವಿಷಯವಾಗಿ 'ಚ'ಕಾರವೂ ಚರ್ಚೆಗೆ ಬಾರದಿದ್ದುದು ಸುಧಾಳಿಗೆ ಅಚ್ಚರಿಯೆನಿಸಿತು.

ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ವಾಸುದೇವಯ್ಯನವರು ಸುಧಾಳನ್ನು ತಮ್ಮ ಸ್ವಂತ ಕೊಠಡಿಗೆ ಬರಮಾಡಿಕೊಂಡರು.

"ಸುಧಾ...ನಾನು ಏನ್ಮಾಡಿದ್ರೂ ನಿನ್ನ ಹಿತಕ್ಕಾಗಿಯೇ ಮಾಡ್ತೀನಿ ಅನ್ನೋ ನಂಬ್ಕೆ ನಿನಗೆ ಇದೆಯೋ ಇಲ್ವೋ ಸ್ಪಷ್ಟವಾಗಿ ಹೇಳಿಬಿಡು"

"ಖಂಡಿತವಾಗ್ಲೂ ಅಪ್ಪಾ...ನೀವು ಹಾಕಿದ ಗೆರೇನೂ ಇನ್ಮೇಲೆ ನಾನು ದಾಟೋದಿಲ್ಲ. ಅವತ್ತು ಯಾವುದೋ ಆವೇಗದಲ್ಲಿ ನಿಮ್ಮನ್ನು ಬಾಯಿಗೆ ಬಂದ ಹಾಗೆ ಅಂದು ಕಳಿಸಿಬಿಟ್ಟೆ...ಆದ್ರೆ...ನಾನು ಯಾವತ್ತೂ ನಿಮ್ಮ ಮಗು ಅನ್ನೋ..."

ವಾಸುದೇವಯ್ಯನವರಿಗೆ ಮುಂದೆ ಕೇಳಲು ಸಾಧ್ಯವಾಗಲಿಲ್ಲ. ಎದುರಿಗೆ ನಿಂತ ಮಗಳನ್ನು ಪ್ರೀತಿಯಿಂದ ಬರಸೆಳೆದು ತಬ್ಬಿಕೊಂಡರು. ಅವರಿಗೂ ಮುಂದೆ ಮಾತನಾಡಲು ಸಾಧ್ಯವೇ ಇರಲಿಲ್ಲ. ಕೆಲ ಹೊತ್ತು ಮೌನ... ಸುಧಾ ಕಣ್ಣೀರು ಹಾಕತೊಡಗಿದಳು. ನಂತರ ವಾಸುದೇವಯ್ಯ ತಮ್ಮ ಭಾವನಾವೇಗವನ್ನು ಸ್ವಲ್ಪ ಹತೋಟಿಗೆ ತಂದುಕೊಂಡು–

"ಸುಧಾ...ನಿನ್ನ ಮದ್ವೆ ಒಂದಾಗಿ ಬಿಟ್ರೆ ನನ್ನ ಭಾರ ಇಳಿದಂತೆ...ನಾನು ನಿನಗಾಗಿ ಗೊತ್ತು ಮಾಡೋ ಗಂಡು ನಿಂಗೆ ಒಪ್ಪಿಗೆ ತಾನೆ?" ಎಂದರು.

ಸುಧಾಗೆ ಉಂಟಾದ ಆನಂದದಲ್ಲಿ ಮಾತುಗಳೇ ಹೊರಡಲಿಲ್ಲ. ರವಿಗೆ ತಾನು ನೀಡಿದ ತನ್ನ ಸರ್ವಸ್ವವೂ ಸಾರ್ಥಕವಾಯಿತೆಂದುಕೊಂಡು, ತಲೆ ತಗ್ಗಿಸಿ "ಖಂಡಿತಾ ಒಪ್ಪಿಗೆ ಅಪ್ಪ" ಎಂದು ಮೆಲ್ಲಗೆ ಹೇಳಿದಳು.

ಆ ದಿನ ಬಜಾರಿಯಂತೆ ತನ್ನನ್ನೂ ನರಹರಿಯನ್ನೂ ವಾಚಾಮಗೋಚರ ಬೈದ ಈ ಸುಧಾ ಈ ದಿನ ಅವನತಮುಖಿಯಾಗಿ ತನ್ನ ಒಪ್ಪಿಗೆ ಸೂಚಿಸುತ್ತಿರುವುದನ್ನು ಕಂಡ ವಾಸುದೇವಯ್ಯ ಅವಾಕ್ಕಾದರು.

"ಸುಧಾ...ನೀನು ಎಳೇ ಮಗುವಲ್ಲ...ವಿದ್ಯಾವತಿ...ಸ್ವಂತಕ್ಕೆ ನೀನೂ ಸಂಪಾದನೆ ಮಾಡುತ್ತಿದ್ದೀ... ನಿನ್ನನ್ನು ಬಲವಂತಪಡಿಸೋ ಇಷ್ಟ ನಂಗಿಲ್ಲ ಆದ್ರೂ ...ನಿನ್ನ ಒಪ್ಪಿಗೆ ಇಲ್ದೆ..." .

"ನೀವು ಹೇಳೋ ಮಾತಿಗೆ ಎದುರಾಡಲ್ಲ ಅಪ್ಪ... ನೀವು ನನ್ನ ಹಿತ ಬಯಸುತ್ತೀರಿ ಅನ್ನೋದು ನಂಗೆ ಗೊತ್ತಿಲ್ವಾ?" ಸುಧಾ ಮಧ್ಯೆ ಬಾಯಿ ಹಾಕಿದಳು.

ವಾಸುದೇವಯ್ಯ ದೀರ್ಘವಾಗಿ ಸಮಾಧಾನದ ನಿಟ್ಟುಸಿರು ಚೆಲ್ಲಿದರು, "ಸಧ್ಯ ನನ್ನ ಮರ್ಯಾದೆ


ಸ್ತ್ರೀ ಸಹಜ ಸೌಂದರ್ಯವೇ ಮಹಿಳೆಯ ಹೆಗ್ಗಳಿಕೆ
anita
TOILET SOAP
FOR TEENAGE COMPLEXION
anita
TOILET SOAP
ಅನಿತಾ
ಟಾಯ್‌ಲೆಟ್ ಸೋಪ್
ನಿಮ್ಮ ಸೌಂದರ್ಯವನ್ನು ರಕ್ಷಿಸುತ್ತದೆ
ತಯಾರಕರು ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್ ಮಂಗಳೂರು

ಕಾಪಾಡ್ತೆ...ಹಾಗಾದ್ರೆ ಇವತ್ತು ಸಾಯಂಕಾಲ ಐದು ಗಂಟೆಗೆ ರೆಡಿಯಾಗು...ಅಕ್ಕ, ಅಮ್ಮ, ಭಾವ, ಎಲ್ಲರೂ ಸಿದ್ಧತೆ ಮಾಡ್ತಾನೇ ಇದಾರೆ...ಹುಡುಗ ನಿನ್ನನ್ನು ನೋಡೋಕೆ ಬರ್ತಾನೆ..."

ಸುಧಾಳಿಗೆ ವಿಸ್ಮಯವಾಯಿತು. ಹಾಗಾದರೆ ತಂದೆ ಹೇಳುತ್ತಿರುವ ಆ ಹುಡುಗ ರವಿಯಲ್ಲ. ಅವಳ ಹೃದಯಕ್ಕೆ ತೀವ್ರವಾದ ಬಾಣವೊಂದು ನಾಟಿದ ಹಾಗಾಯಿತು. ಸ್ತಂಭೀಭೂತಳಾಗಿ ನಿಂತ ಅವಳನ್ನು ನೋಡಿದ ವಾಸುದೇವಯ್ಯ.

"ಯಾಕಮ್ಮಾ ಹಾಗೆ ಮಂಕಾಗಿ ನಿಂತುಬಿಟ್ಟೆ? ಏನ್ನಮಾಚಾರ? ಮೈಲಿ ಹುಷಾರಿದೆ ತಾನೆ?" ಎಂದು ಕಳಕಳಿಯಿಂದ ವಿಚಾರಿಸಿದರು.

ಹಾಗಾದರೆ ತಂದೆ ಈಗ ತನಗೆ ಗೊತ್ತು ಮಾಡಲಿರುವ ಈ ಹೊಸಬ ಯಾರೋ-ರವಿಯ ಬಗ್ಗೆ ಇವರ ವಿಚಾರ ಏಕೆ ಬದಲಾಯಿತು? ಹೌದು. ಅಂದು ಗುಂಡೂರಾಯರೇ ಈ ಸಂಬಂಧವನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದರು. ಆದರೆ ಅದಕ್ಕೆ ಕಾರಣ ಆ ಹಾಳು ವಿಜಯ! ಇದೀಗ ಅವರಿಗೆ ತಾನು ನಿರಪರಾಧಿ ಎಂಬುದು ಖಾತ್ರಿಯಾಗಿದೆ. ಹೌದು...ಆದರೆ ಈ ವಿಚಾರ ತಂದೆಗೆ ಇನ್ನೂ ತಿಳಿದಿಲ್ಲ...ನಿಜ...ಅದಕ್ಕೇ ಈ ಪರಿವರ್ತನೆ! ಅದನ್ನು ತಾನೀಗ ತಂದೆಗೆ ತಿಳಿಸಿದರೆ?

"ಅಪ್ಪ...ಇನ್ನೂ ಎರಡು ದಿನ ಬಿಟ್ಟು ಈ ಕಾರ್ಯಕ್ರಮ ಇಟ್ಕೊಳ್ಳಿ...ಗುಂಡೂರಾಯರಿಂದ ಪತ್ರ..."

"ಸುಧಾ...ಆ ಗುಂಡನ ಸುದ್ದಿ ನನ್ನ ಹತ್ರ ಎತ್ಬೇಡ...ರವಿಯೇ ಈ ಮನೆ ಬಾಗಿಲಿಗೆ ಬಂದು ನಿನ್ನ ಕೇಳಿದರೂ ನಾನದಕ್ಕೆ ಒಪ್ಪಲಾರೆ..."

ವಾಸುದೇವಯ್ಯನವರ ಧ್ವನಿಯಲ್ಲಿ ಕಾವಿತ್ತು. ಸುಧಾ ಸ್ತಬ್ಧಳಾದಳು. ಕ್ಷಣ ಹೊತ್ತು ಯೋಚಿಸಿದಳು. ಈ ಸಾಯಂಕಾಲ ಯಾವನೋ ಒಬ್ಬ ತನ್ನನ್ನು ನೋಡಲು ಬರುತ್ತಾನಷ್ಟೆ...ಅಷ್ಟಕ್ಕೇ ಎಲ್ಲವೂ ಮುಗಿಯಲಿಲ್ಲವಲ್ಲ...ತಂದೆಯ ಮನಸ್ಸಿಗೆ ಬೇಸರವೇಕಾಗಬೇಕು! ನಾಳೆ ನಾನು ದೇವಪುರಕ್ಕೆ ಹಿಂತಿರುಗಿ, ಗುಂಡೂರಾಯರಿಂದ ಇಲ್ಲಿಗೆ ಪತ್ರ ಬರುವಂತೆ ಮಾಡಿದರಾಯಿತು.

"ಅಪ್ಪಾ...ನೀವು ಹೇಳಿದ ಹಾಗೇ ಆಗ್ಲಿ...ನಾನು ರೆಡಿಯಾಗ್ತೀನಿ"

ವಾಸುದೇವಯ್ಯ ಗೌರಮ್ಮನನ್ನು ಕರೆದು, ಸುಧಾಳನ್ನು ಚೆನ್ನಾಗಿ ಅಲಂಕರಿಸುವ ಸೂಚನೆ ಕೊಟ್ಟರು.

— ೯ —

ಸುಧಾ ಎದುರಿಗೆ ಕುಳಿತ ಆ ಹುಡುಗನನ್ನು ಕಣ್ತೆರೆದು ನೋಡಿದಳು! ಅವನೂ ಇವಳನ್ನೇ ನೋಡುತ್ತಿದ್ದ. ಉಳಿದವರೆಲ್ಲ ಈ ಇಬ್ಬರ ಪರಿವೆಯೂ ಇಲ್ಲದೆ ಹರಟುತ್ತಿದ್ದರು. ಗಂಡು ಹೆಣ್ಣುಗಳು ಪರಸ್ಪರ ನೋಡಿಕೊಳ್ಳಲಿ ಎಂಬ ಉದ್ದೇಶವಿರಬೇಕು.

ಹೌದು...ಅನುಮಾನವೇ ಇಲ್ಲ...ಅವರೇ ಇವರು! ಸುಧಾ ಸಣ್ಣಗೆ ಬೆವರೊಡೆದಳು. ತಲೆ ತಗ್ಗಿಸಿದಳು! ಹುಡುಗ ಮುಗುಳ್ನಗೆ ಬೀರಿದ. ಸುಧಾಳ ಮನಸ್ಸು ಅಲ್ಲೋಲಕಲ್ಲೋಲವಾಯಿತು. ತೆರೆಗಳು ಹಿಮಾಲಯದೆತ್ತರ ಎದ್ದೆದ್ದು ಅವಳ ಮನಸ್ಸಿನಾಳದಲ್ಲಿ ಅಬ್ಬರಿಸತೊಡಗಿದವು. ಆ ಭಯಂಕರ ಅಬ್ಬರದಲ್ಲಿ ಅವಳ ಕಿವಿ ಗಡಚಿಕ್ಕಿತು. ಮಾನವ ಜೀವನದ ಬಗ್ಗೆ ಅವಳಲ್ಲಿ ವಿಸ್ಮಯ ಹೆಮ್ಮರವಾಯಿತು. ಹೌದು...ತಾನೊಂದು ಉಯ್ಯಾಲೆಯಲ್ಲಿ ಕುಳಿತಿದ್ದೇನೆ...ಅದು ಅತ್ತಿಂದಿತ್ತ ತೂಗಾಡುತ್ತಿದೆ...ಒಮ್ಮೆ ಆ ಕೊನೆಯಲ್ಲಿರುವ ವಸ್ತು ಹತ್ತಿರವಾದಂತೆ ತೋರುತ್ತದೆ....ಮರುಗಳಿಗೆಯೇ ಈ ಕೊನೆಯ ವಸ್ತು ಹತ್ತಿರವಾಗುತ್ತದೆ. ಈ ಎರಡು ಬದಿಗಳಲ್ಲಿ ಯಾವುದು ತನ್ನದು ಎಂಬ ನಿರ್ಧಾರ ಆ ತೂಗುಮಣೆ ನಿಲ್ಲುವವರೆಗೂ ಸಾಧ್ಯವಾಗುವುದಿಲ್ಲ. ಅದು ನಿಂತ ಮೇಲೆ ನೋಡಿದರೆ, ತಾನು ಎರಡು ವಸ್ತುಗಳಿಗೂ ಸಮಾನ ದೂರದಲ್ಲಿ ಮಧ್ಯೆ ನಿಲ್ಲುತ್ತೇನೆ...ಈ ವಿಚಿತ್ರವೇ ಮಾನವ ಜೀವನವೇ?

"ಏನು ನಿನ್ನ ಅಭಿಪ್ರಾಯ ಕಿಟ್ಟೂ?" ಹುಡುಗನ ಪಕ್ಕದಲ್ಲಿದ್ದ ಆತನ ಗೆಳೆಯ ಶಂಕರ್ ಮೆತ್ತಗೆ ಕೇಳಿದ... ಕೃಷ್ಣಸ್ವಾಮಿ ಅವನ ಕಡೆ ತಿರುಗಿ ಒಮ್ಮೆ ಮುಗುಳ್ನಗೆ ಬೀರಿದ. ಶಂಕರ ಅವನ ಅಭಿಪ್ರಾಯವನ್ನು ಗ್ರಹಿಸಿದ. ತಕ್ಷಣ ಕೃಷ್ಣಸ್ವಾಮಿಯ ಭಾವ ವೆಂಕಟೇಶಯ್ಯನವರ ಕಿವಿಯಲ್ಲಿ,

"ಸ್ವಾಮೀ...ಹುಡುಗ ದಂಗಾಗಿದಾನೆ...ಅನುಮಾನವೇ ಇಲ್ಲ" ಎಂದಾಗ ವೆಂಕಟೇಶಯ್ಯ ಮೇಲೆದ್ದು ಗಿರಿಜಳನ್ನು ಹತ್ತಿರ ಕರೆದು

"ಗಿರಿಜಾ...ನಿನ್ನ ತಮ್ಮ ಈ ಹುಡುಗೀನ ಒಪ್ಪಿದ. ಸದ್ಯ ಇವನು ಈ ಜನ್ಮದಲ್ಲೇ ಯಾರನ್ನಾದ್ರೂ ಒಪ್ತಾನೋ ಇಲ್ವೋ ಅಂತಿದ್ದೆ. ಮಹರಾಯ...ನೋಡು... ಹುಡುಗೀನೂ ಎಜುಕೇಟೆಡ್...ಇಂಥ ವಿಷಯದಲ್ಲಿ ನಿಧಾನ, ಮುಚ್ಚುಮರೆ ಯಾವ್ದೂ ಬ್ಯಾಡ...ಹುಡುಗೀ ತಾಯಿಗೆ ಈ ವಿಚಾರ ತಿಳ್ಸಿ ಹುಡುಗಿ ಅಭಿಪ್ರಾಯ ತಿಳ್ಕೋ..." ಎಂದು ಮೆತ್ತಗೆ ಸೂಚಿಸಿದರು.

ಗೌರಮ್ಮನವರಿಗೆ ಅಪಾರ ಹರ್ಷವಾಯಿತು. ಮೀನಾಕ್ಷಿಗಂತೂ ಮಾತೇ ಹೊರಡದಷ್ಟು ಸಂತೋಷ! ಹೊರಗೆ ವೆಂಕಟೇಶಯ್ಯ, ಶಂಕರ, ನರಹರಿ, ವಾಸುದೇವಯ್ಯ, ರಾಮಮೂರ್ತಿ ಎಲ್ಲರೂ ನಾನಾ ವಿಚಾರಗಳನ್ನು ಕುರಿತು ಹರಟುತ್ತಿದ್ದರು. ಮೀನಾಕ್ಷಿಯ ಜೊತೆಗೇ ಸುಧಾ ಸಹ ಒಳಗೆ ಬಂದಳು.

ಗಿರಿಜ, ಸುಧಾ ಕೆನ್ನೆಯನ್ನು ನೇವರಿಸಿ "ದಂತದ ಬೊಂಬೆ ಇದ್ದ ಹಾಗೆ ಇದೀಯಮ್ಮ...ರೂಪ, ವಿದ್ಯೆ, ಗುಣ ಎಲ್ಲಾದ್ರಲ್ಲೂ ನಮ್ಮ ಕಿಟ್ಟೂಗೆ ಹೇಳಿ ಮಾಡಿಸಿದ ಹಾಗಿದೀ...ನಮ್ಮ ಕಿಟ್ಟು ಇಷ್ಟು ದಿನ ತಕರಾರು ಮಾಡಿದರೂ ಒಳ್ಳೇ ಹುಡುಗೀನೇ ಮೆಚ್ಕೊಂಡ... ಇನ್ನು ನಿನ್ನ ಅಭಿಪ್ರಾಯಾನ ನಿರ್ದಾಕ್ಷಿಣ್ಯವಾಗಿ ಹೇಳಿಬಿಡು ಸುಧಾ" ಎಂದಳು.

ಸುಧಾ ಕತ್ತು ತಗ್ಗಿಸಿ ಯೋಚಿಸತೊಡಗಿದಳು.– ಮೈಸೂರಿನ ಟ್ರಿಪ್ ಸನ್ನಿವೇಶ ಕಣ್ಣುಮುಂದೆ ಹಾದುಹೋಯಿತು. ಕೃಷ್ಣಸ್ವಾಮಿ ತನಗೆ ಮೊಟ್ಟಮೊದಲು ಗಂಡಿನ ಸಹವಾಸದ ಮಾಧುರ್ಯವನ್ನು ಉಣಿಸಿದಾತ. ತನ್ನ ಮೈಯಲ್ಲೇ ಅದುವರೆಗೂ ಸುಪ್ತವಾಗಿದ್ದ ಹೆಣ್ತನವನ್ನು ಕೆರಳಿಸಿ, ದಾವಾಗ್ನಿಯನ್ನು ಬಡಿದೆಬ್ಬಿಸಿ ಹೊರಟು ಹೋಗಿದ್ದ. ಆಗ ತನಗೆ ಅವನ ವಿರಹದಿಂದ ಎಂಥ ದಳ್ಳುರಿ ಎದ್ದಿತು! ಆ ಕಾಮಾಗ್ನಿ ಒಳಗೇ ಉರಿಯಾಗಿ, ವಿಜಯನಲ್ಲಿ ಅದರ ತಣಿವನ್ನು ಬಯಸಿದಾಗ ಅವನು ಕಾಲ್ಪನಿಕ ಅವಸ್ಥೆಯೊಂದರ ನಾಟಕವಾಡಿಸಿದ್ದ... ನಂತರ ರವಿ ಆ ದಳ್ಳುರಿಯನ್ನು ತಣಿಸತೊಡಗಿದ. ಹಾಗಾದರೆ ತಾನು ಪದೇ ಪದೇ ಈ ಗಂಡುಗಳನ್ನು ಪರಿವರ್ತಿಸಿಕೊಳ್ಳುತ್ತಿರುವುದು ಏಕಾಗಿ? ಇದು ತನ್ನ ದೇಹದ ಅನಿವಾರ್ಯ ಹಸಿವೆಯಾಗಿರಬೇಕು. ಈ ಹಸಿವು ಎಲ್ಲ ಹೆಣ್ಣುಗಳಿಗೂ, ಅಂದರೆ ಮೀನಾಕ್ಷಿ, ಗಿರಿಜ, ಕಮಲಮ್ಮ, ಅಮ್ಮ, ಇತ್ಯಾದಿ...ಇವರೆಲ್ಲರಿಗೂ ಇರಲೇಬೇಕು... ಹಸಿದಾದ ಊಟ ಸಿಕ್ಕುವಂತೆ, ಈ ಹೆಣ್ಣುಗಳಿಗೆ ಈ ರೀತಿಯ ಹಸಿವ ಹಿಂಗಲು ಒಂದು ವ್ಯವಸ್ಥೆಯಾಗಿ ಹೋಗಿದೆ...ತನಗೆ ಆ ವ್ಯವಸ್ಥೆ ಇನ್ನೂ ಇಲ್ಲವೆಂದೇ ತಾನೀಗ ಚಿಟ್ಟೆಯಂತೆ ಹಾರಾಡುತ್ತಿದ್ದೇನೆ–ತನಗೂ ವ್ಯವಸ್ಥೆ ಬೇಕು.

ಸುಧಾ ತಾಯಿಯ ಬಳಿ ನೇರವಾಗಿ "ಅಮ್ಮಾ... ನೀವು ಒಪ್ಪಿದ ಮೇಲೆ ನನ್ನ ಒಪ್ಪಿಗೆ ಕೇಳೋ ಅಗತ್ಯ ಇಲ್ಲಮ್ಮ" ಎಂದುಬಿಟ್ಟಳು.

ಕ್ಷಣಾರ್ಧದಲ್ಲಿ ಎಲ್ಲರೂ ಈ ಸಿಹಿ ವರ್ತಮಾನವನ್ನು ಕೇಳಿ ಸಂತೋಷಗೊಂಡರು. ಮೀನಾಕ್ಷಿ ಸುಧಾಳ ಕೆನ್ನೆ ಚಿವುಟಿ "ಅಂತೂ ಚಾನ್ಸ್ ಹೊಡ್ದೆ ಕಣೇ... ಎಲ್ಲ ನಿಮ್ಮ ಭಾವನ ಪ್ರಯತ್ನ...ಇದು ಅಂತೂ ನಾನೂ ಈ ವಿಚಾರದಲ್ಲಿ ಕೈ ಹಾಕಿದ್ದಕ್ಕೂ ಒಂದು ಬೆಲೆಬಂತು" ಎಂದಾಗ ಸುಧಾಗೆ ಅನಿರ್ವಚನೀಯ ಆನಂದವಾಯಿತು.

ಕೃಷ್ಣಸ್ವಾಮಿ ತನ್ನ ಒಂದು ಅಪೇಕ್ಷೆಯನ್ನು ಭಾವ ವೆಂಕಟೇಶಯ್ಯನ ಮುಂದೆ ಇಟ್ಟಾಗ, ಅವರು ವಾಸುದೇವಯ್ಯನವರ ಮುಖ ನೋಡುತ್ತಾ, ಅನುಮಾನಿಸಿ ಹೇಳಿದರು– "ಆ...ವಾಸುದೇವಯ್ಯ...ನಮ್ಮ ಕಿಟ್ಟು ಒಂದು ವಿಷಯ ತಮ್ಮನ್ನು ಕೇಳ್ತಾನೆ...ಆಗ್ಬಹುದೇ?"

"ಓಹೋ....ಸಂತೋಷವಾಗಿ....ಹೇಳಿ...ಏನದು?"

"ಇನ್ನೇನೂ ಇಲ್ಲ...ಎಲ್ಲ ಎಜುಕೇಟೆಡ್ ನೋಡಿ. ಈಗಿನ್ನೂ ಆರು ಗಂಟೆ...ನಿಮ್ಮ ಸುಧಾ ಜೊತೆಗೆ ಪಿಕ್ಚರ್‌ಗೆ ಹೋಗ್ಬೇಕು ಅಂತಾನೆ. ತಮ್ಮ ಅಭ್ಯಂತರ ಇಲ್ದಿದ್ರೆ... ಜೊತೆಗೆ ನಾನೂ ಗಿರಿಜಾ, ಮೀನಾಕ್ಷಮ್ಮ, ರಾಮಮೂರ್ತಿ ಹೋಗ್ತೀವಿ..."

"ಅಷ್ಟೆ ತಾನೆ? ಯಾರು ಬೇಡಾಂತಾರೆ? ಸಂತೋಷವಾಗಿ ಹೋಗಿ ಬನ್ನಿ ಸುಧಾ...ರೆಡಿಯಾಗು ಮತ್ತೆ... ಮೀನಾಕ್ಷಿ... ರಾಮಣ್ಣ... ಲೋ ನರಹರಿ ಬೇಕಾದ್ರೆ ನೀನೂ ಹೋಗ್ಬಾರೋ"

"ಅವನ್ಯಾಕೆ? ಒಂಟರ ಬಡುಕ ಸೊಂಟರ ಗಾಳಿ... ನಾವೆಲ್ಲ ಜೋಡಿ ಜೋಡಿ ಇರೋವಾಗ" ಮೀನಾಕ್ಷಿ ಹಾಸ್ಯ ಮಾಡಿದಳು. ನರಹರಿಯೂ ಹಾಸ್ಯವಾಗಿಯೇ "ಬಿಡಕ್ಕಾ...ನಾನೇನು ನಿಮ್ಮ ಮಧ್ಯೆ ಕೂತು ನಿಮ್ಗೆ ತೊಂದ್ರೆ ಮಾಡೋಲ್ಲ...ನಾನೇ ಬೇರೆ ಕ್ಲಾಸ್‌ಗೆ ಹೋಗ್ತೀನಿ...ನೀವೆಲ್ಲ ಬಾಲ್ಕನಿಗೆ" ಎನ್ನುತ್ತಾ ಹೊರಟೇಬಿಟ್ಟ.

ನರಹರಿಯೇ ಈ ಮೂರು ಜೊತೆ ಗಂಡು ಹೆಣ್ಣುಗಳಿಗೆ ಟಿಕೆಟ್ ತರಲು ಹೊರಟ. ಎಲ್ಲರೂ ದಾರಿಯಲ್ಲೇ ತೀರ್ಮಾನಿಸಿದಂತೆ, ಕೃಷ್ಣಸ್ವಾಮಿ ಹಾಗೂ ಸುಧಾ ಬಾಲ್ಕನಿಗೆ, ಉಳಿದವರೆಲ್ಲ ಅದರ ಕೆಳಗಿನ ಕ್ಲಾಸಿಗೆ ಟಿಕೆಟ್ ಪಡೆದು ಒಳಹೊಕ್ಕರು.

ಅಕ್ಕಪಕ್ಕದಲ್ಲಿ ಕುಳಿತ ಸುಧಾ– ಕೃಷ್ಣಸ್ವಾಮಿಗೆ ಮನಸ ಬಿಚ್ಚಿ ಮಾತನಾಡಲು ಅವಕಾಶವಾಯಿತು.

"ಸುಧಾ...ನೀನೇನೂ ನಂಗೆ ಹೊಸಬಳಲ್ಲ."

"ಹೌದು ಸಾರ್..." ಎಂದು ತುಟಿ ಕಚ್ಚಿಕೊಂಡ ಸುಧಾಳ ಕೈಯನ್ನು ಬಲವಾಗಿ ಅದುಮಿದ ಕೃಷ್ಣಸ್ವಾಮಿ.

"ನನ್ನ ಜ್ಞಾಪಕ ಇಷ್ಟಾದ್ರೂ ಇಟ್ಕೊಂಡಿದೀರಲ್ಲ"

"ಜ್ಞಾಪಕ? ಸುಧಾ...ನಿನ್ನಾಣೆ. ನಾನು ನಿಂಗಾಗೇ ಬೇರೆ ಯಾರನ್ನೂ ಒಪ್ಪಲೇ ಇಲ್ಲ...ಖಂಡಿತ ಮತ್ತೊಂದ್ಸಾರಿ ನೀನು ನನಗೆ ಸಿಕ್ಕೇ ಸಿಕ್ತೀಯಾ ಅಂತ ಯಾವ್ದೋ ಒಳದನಿ ಹೇಳ್ತಾ ಇತ್ತು."

ಸುಧಾ ಮೈಮರೆತಳು... ಹೌದೇ... ತನಗಾಗಿ ಬೇರೆ ಯಾರನ್ನೂ ವರಿಸದೆ ಕಾದಿದ್ದ ಕೃಷ್ಣಸ್ವಾಮಿ ಮತ್ತೆ ತನಗೆ ದೊರೆತಿದ್ದಾನೆ...ತನಗೂ ಆತನ ಬಗ್ಗೆ ಬಲವಾದ ಆಕರ್ಷಣೆ ಇದ್ದದ್ದು ಸುಳ್ಳಲ್ಲ...ಈತನ ಮೇಲಿನ ಆ ಮೋಹವೇ ಗುಟ್ಟಾಗಿ ಅಡಗಿದ್ದು, ವಿಜಯ ಮತ್ತು ರವಿ–ಇವರ ಮೂಲಕ ಹೊರಬರಲು ಹವಣಿ

...ಬಹುದು. ಕೃಷ್ಣಸ್ವಾಮಿಗೆ ತನ್ನ ಜೀವನದ ಇತ್ತೀಚಿನ ಕಹಿಪ್ರಸಂಗಗಳ ಅರಿವಿಲ್ಲ. ಒಂದುವೇಳೆ ಈತ ಅವುಗಳ ಬಗ್ಗೆ ತಿಳಿದುಕೊಂಡರೆ ತನ್ನ ಗತಿ ಏನಾಗಬಹುದು? ಅಥವಾ ಈತ ತಾನಾಗಿ ಅವುಗಳನ್ನು ತಿಳಿಯುವ ಪ್ರಸಂಗ ಬರುವ ಮೊದಲೇ ತಾನೇ ತನ್ನ ಚರಿತ್ರೆಯನ್ನೆಲ್ಲ ಹೇಳಿಕೊಂಡರೆ...ಆದರೆ...ಹಾಗೆ ಹೇಳಿದರೆ ಆತ ತನ್ನನ್ನು ಕ್ಷಮಿಸಿ ಸ್ವೀಕರಿಸುವಷ್ಟು ವಿಶಾಲ ಹೃದಯಿಯೆ? ಯ್ಯಾರು ಬಲ್ಲರು? ಸೂಕ್ಷ್ಮವಾಗಿ ಯೋಚಿಸಿದಲ್ಲಿ ತನಗೆ ನಿಜವಾಗಿ ಬೇಕಾಗಿದ್ದ ವ್ಯಕ್ತಿ ಇದೇ ಕೃಷ್ಣಸ್ವಾಮಿಯೇ ಎನ್ನಿಸುತ್ತದೆ. ಇವನನ್ನೇ ತನಗೆ ಸಿಕ್ಕ ಗಂಡಸರೆಲ್ಲರಲ್ಲೂ ಅರಸಲು ಪ್ರಯತ್ನಿಸಿ ರವಿಗೆ ತಾನು ಬಲಿಯಾದೆನೆ ?

"ಯಾಕೆ ಸುಧಾ. ಸುಮ್ಮನಾಗಿಬಿಟ್ಟೆ ? ಏನಾದ್ರೂ ಮಾತಾಡು"

"ನಿಮ್ಮ ಜೊತೆಗಿರೋದೇ ನಂಗೆ ಸಂತೋಷ... ಮಾತೇ ಹೊರಡಾತ್ತ ಇಲ್ಲ...ಆದರೆ ಒಂದು ಪ್ರಶ್ನೆ... ನಿಜವಾಗ್ಲೂ ನನ್ಮೇಲೆ ನಿಮಗೆ ಪ್ರೀತಿ ಇದೆ ಅಲ್ವಾ?"

"ಇದೇನು ಹೀಗೆ ಕೇಳ್ತಾ ಇದ್ದಿ? ನನ್ನ ಪ್ರೀತಿ ಎಷ್ಟು ಅನ್ನೋದನ್ನು ಈಗ ಎರಡು ವರ್ಷ ಮುಂಚೇನೆ ಅರ್ಥ ಮಾಡ್ಕೊಂಡಿದೀಯ"

"ಹಾಗಲ್ಲ... ಆಮೇಲೆ ನಾವಿಬ್ರೂ ಭೇಟಿಯಾಗಿಲ್ಲ"

"ಆದರೇನು? ನಾನು ನಿಂಗಾಗಿ ಕಾಯ್ತಾನೇ ನನ್ನ ಮದುವೇನ ಮುಂದೂಡ್ತಾ ಬಂದಿದೀನಿ"

ಸುಧಾ ಕ್ಷಣ ಹೊತ್ತು ಸುಮ್ಮನಿದ್ದಳು. ನಂತರ–

"ನಾನೀಗ ದೇವಪುರದ ಗರ್ಲ್ಸ್ ಹೈಸ್ಕೂಲ್ನಲ್ಲಿ ಕೆಲಸಕ್ಕೆ ಸೇರಿದೀನಿ..."

"ಓಹೋ..ಆದ್ರೆ ಸುಧಾ..ನಂದೊಂದು ಮಾತು... ದಯವಿಟ್ಟು ನಮ್ಮ ಮದ್ವೆ ಆದ್ಮೇಲೆ ಆ ಕೆಲ್ಸಕ್ಕೆ ರಾಜೀನಾಮೆ ಕೊಟ್ಟುಬಿಡು... ಆ ಹಾಳು ಕೆಲಸ ಇಬ್ಬರಿಗೂ ಇದ್ರೆ ಇಬ್ಬರೂ ಸುಖವಾಗಿರೋಕಾಗಲ್ಲ... ನಾನೊಬ್ನೇ ಸಾಕು...ನೀನು ನನ್ನ ಮನೆಗೆ ರಾಣಿಯಾಗ್ಬೇಕು...ಗೊತ್ತಾಯ್ತಾ?"

ಸುಧಾಗೆ ಇದರಿಂದ ಸಂತೋಷವೇ ಆಯಿತು. ತನಗಿನ್ನು ಆ ಕೆಲಸದ ಅಗತ್ಯ ಖಂಡಿತ ಇಲ್ಲವೆನ್ನಿಸಿತು.

"ಹಾಗೇ ಆಗ್ಲಿ...ಇನ್ಮೇಲೆ ನೀವು ಹೇಳ್ದ ಹಾಗೆ ತಾನೇ ನಾನು ಕೇಳ್ಬೇಕು?"

"ಹಾಗೇನಿಲ್ಲ ಸುಧಾ... ಇದೊಂದು ಮಾತು ಮಾತ್ರ ನಾನು ಹೇಳಿದ ಹಾಗೆ ಕೇಳು... ಆಮೇಲೆ ನೀನ್ಹೇಳೋದೆಲ್ಲ ನಾನೇ ಕೇಳ್ತೀನಿ."


ಸಿನಿಮಾ ಅದರ ಪಾಡಿಗೆ ಅದು ನಡೆಯುತ್ತಿತ್ತು. ಬಾಲ್ಕನಿ ತರಗತಿಯಲ್ಲಿ ಜನರೇ ಇರಲಿಲ್ಲವೆನ್ನುವ ಹಾಗೆ ಇತ್ತು. ಇವರಿಬ್ಬರಂತಹುದೇ ಮತ್ತೊಂದು ಜೋಡಿ ಆಚೆ ಬದಿಗೆ ಕುಳಿತಿತ್ತು.

ಕೃಷ್ಣಸ್ವಾಮಿ ನೆಪಮಾತ್ರಕ್ಕೆ ರಜತ ಪರದೆಯತ್ತ ನೋಡುತ್ತಿದ್ದರೂ, ಅವನ ಕೈ ಸುಧಾಳ ಭುಜವನ್ನು ಬಳಸಿತ್ತು. ಸುಧಾ ಯಾವುದೋ ಅವ್ಯಕ್ತ ಭಾವವೊಂದರ ಬಂದಿಯಾಗಿ ಯೋಚಿಸುತ್ತಾ ಕುಳಿತಳು.

ತಾನು ಈಗ ಆ ಹಾಳು ದೇವಪುರಕ್ಕಾದರೂ ಏಕೆ ಹೋಗಬೇಕು? ಮದುವೆ ಮುಗಿವ ವರೆಗೂ ಮತ್ತೆ ತಾನು ಆ ಒಂಟಿ ಬಾಳನ್ನು ಬಾಳಲು ಸಾಧ್ಯವೆ ಯಾವುದರ ಆಸೆಯಿಂದ ತಾನು ಉದ್ಯೋಗವನ್ನರಸಿ ಹೊರಟದ್ದೆನೋ, ಆ ಸೌಭಾಗ್ಯ ಇದೀಗ ಶಾಶ್ವತವಾಗಿಯೇ ತನ್ನದಾಗಿದೆ. ದೇವಪುರದಲ್ಲಿರುವವರೆಗೂ ಆ ರವಿಯ ಕಾಟ ತಪ್ಪಿದ್ದಲ್ಲ. ಇದುವರೆಗೂ ಈ ಹಾಳು ದೇಹವನ್ನು ಅವನಿಗೆ ಸಮರ್ಪಿಸಿದ್ದೇ ಸಾಕು. ತಾನೂ ಸಹ ಮತ್ತೆ ಪ್ರಲೋಭನಕ್ಕೆ ಒಳಗಾಗುವ ಸಂದರ್ಭವನ್ನು ಏಕೆ ಸೃಷ್ಟಿಸಿಕೊಳ್ಳಬೇಕು? ನಾಳೆಯೇ ತನ್ನ ರಾಜೀನಾಮೆಯನ್ನು ಏಕೆ ಕಳಿಸಬಾರದು? ತನ್ನ ಸಾಮಾನು ಸರಂಜಾಮುಗಳನ್ನು ನರಹರಿಯೇ ಹೋಗಿ ತರುತ್ತಾನೆ. ಆ ವಿಜಯನೂ ಈ ವೇಳೆಗೆ ತಿರುಗಿ ಬರುವ ಸಮಯವಾಗಿದೆ. ಇನ್ನು ಐದು ದಿನಗಳ ನಂತರ ಅವನು ಮತ್ತೆ ಅದೇ ಮನೆಗೆ ತಿರುಗಿ ಬಂದು ವಾಸ ಮಾಡಬಹುದು. ಅವನ ವಿಷಯ ಹೇಗಾದರೂ ಇರಲಿ–ಮತ್ತೆ ತಾನು ದೇವಪುರಕ್ಕೆ ಕಾಲಿಡಬಾರದು.

ಆದರೆ, ಕೃಷ್ಣಸ್ವಾಮಿಗೆ ತನ್ನ ಪೂರ್ವಾಪರವೆಲ್ಲ ತಿಳಿದರೆ? ಅವರು ತನ್ನನ್ನು ಸ್ವೀಕರಿಸಲು ಹಿಂತೆಗೆದರೆ?

ಸುಧಾಗೆ ತನ್ನ ಆತ್ಮಪ್ರತ್ಯಯವನ್ನು ಎಚ್ಚರಿಸುವ ಹಂಬಲವಾಯಿತು. ಹೌದು...ತಾನು ಮಾಡಿದ ಅಪರಾಧವಾದರೂ ಏನು? ಕೃಷ್ಣಸ್ವಾಮಿಯೂ ಸಹ ಈ ಮೊದಲು ತನ್ನೊಡನೆ ಅನೈತಿಕ ಸಂಪರ್ಕವಿಟ್ಟುಕೊಳ್ಳಲಿಲ್ಲವೆ? ಆ ಸಂಪರ್ಕ ನೈತಿಕ ಅಥವಾ ಅನೈತಿಕ ಎಂಬ ತೀರ್ಮಾನ ತನ್ನ ವೈಯಕ್ತಿಕ ಪರಿಸ್ಥಿತಿಗೆ ಹೊಂದುವ ಹಾಗಿದೆಯೆ? ಹೆಣ್ಣು ಎಲ್ಲಿಯ ವರೆಗೆ ನಾಲ್ಕು ಗೋಡೆಗಳ ಮಧ್ಯೆ ಉಳಿದಿದ್ದಳೋ ಆ ತನಕ ಅವಳ ನೈತಿಕ ಮಟ್ಟ ಎಂಬುದು ತನ್ನ ಗಂಡನ ದೈಹಿಕ ಸಂಪರ್ಕವೊಂದರಲ್ಲೇ ತೀರ್ಮಾನವಾಗುತ್ತಿತ್ತು. ಆದರೆ ಹೆಣ್ಣು ಇದೀಗ ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿರಿಸಿದ್ದಾಳೆ... ಪರಪುರುಷರೊಡನೆ ಬೆರೆಯುವ ಅವಕಾಶಗಳಂತೂ ತೀರ ಅನಿವಾರ್ಯವಾಗಿವೆ–ಹೀಗಿರುವಾಗ ಅವಳ ನೈತಿಕಮಟ್ಟ ಗಂಡಸಿನ ನೈತಿಕಮಟ್ಟಕ್ಕಿಂತ ಹೇಗೆ ಭಿನ್ನವಾಗಿರಬಲ್ಲುದು? ಈ ನೈತಿಕಮಟ್ಟ ಎನ್ನುವ ಪದವೂ ಭಾವೋದ್ವೇಗಗಳ ಆಧಾರದ ಮೇಲೆಯೇ ರೂಪಿತವಾಗುವುದರಿಂದ ನಾಲ್ಕು ಗೋಡೆಗಳ ಮಧ್ಯೆ ಇರುವವಳ ಭಾವ ಸಂವೇದನೆಗಳು, ಹೊರಜಗತ್ತಿನೊಡನೆ ವ್ಯವಹರಿಸುವವಳ



ಭಾವಸಂವೇದನೆಗಳಿಗಿಂತ ತೀರ ಭಿನ್ನವೇ ಆಗಿವೆ. ಈ ಅರ್ಥದಲ್ಲಿ ತನ್ನ ನೈತಿಕ ಅಧಃಪತನವಾಗಿದೆಯೆ?

ಯೋಚಿಸಿದಷ್ಟೂ ಸುಧಾಗೆ ತನ್ನ ಅಪರಾಧ ತೀರ ಕ್ಷುಲ್ಲಕವೆನ್ನಿಸತೊಡಗಿತು. ಈ ಅಂಶವನ್ನು ತಾನು ಮೊದಲೇ ಏಕೆ ಯೋಚಿಸಲಿಲ್ಲ. ವಿಜಯನ ವಾದಸರಣಿಯನ್ನು ಈ ವಾಸ್ತವಾಂಶದಿಂದ ಕತ್ತರಿಸಿ ಒಗೆಯಬಹುದಾಗಿತ್ತು. ಆದರೂ ವಿಜಯನ ವಾದದಲ್ಲಿನ ಪೊಳ್ಳುತನ ಅವನ ದಿನಚರಿಯಿಂದಲೇ ವ್ಯಕ್ತವಾಗಿರುವಾಗ ಅದಕ್ಕೆ ಯಾವ ಬೆಲೆಯನ್ನೂ ತೆರಬೇಕಾಗಿಲ್ಲ. ...ಆದರೆ ನಾಳೆಯೇ ತಾನು ರಾಜೀನಾಮೆಯನ್ನು ಕಳಿಸುವ ಬಗ್ಗೆ ಮತ್ತೊಮ್ಮೆ ಯೋಚನೆ ಅವಶ್ಯಕ. ಕೃಷ್ಣಸ್ವಾಮಿಗೆ ತಾನು ಉದ್ಯೋಗದಲ್ಲಿರುವುದು ಇಷ್ಟವಿಲ್ಲದ ವಿಚಾರ. ಏಕೆ? ಈ ಮೂಲಕ ಇವರು ಹೆಂಗಸಿನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಹವಣಿಸುತ್ತಿಲ್ಲವಷ್ಟೆ! ಈ ಹೆಣ್ಣು ಉದ್ಯೋಗದಲ್ಲಿರುವವರೆಗೂ ಪರಪುರುಷರ ನೋಟಕ್ಕೆ ಗುರಿಯಾಗುತ್ತಾಳೆ. ಆಗ ಇವಳು ಕೆಲವೊಮ್ಮೆ ತನ್ನ ನಿಷ್ಠೆಯನ್ನು ಬದಲಿಸಲೂಬಹುದು. ಅಥವಾ ಕ್ಷಣಿಕವಾಗಿ ಬೇರೊಬ್ಬನೊಡನೆ ಸಂಪರ್ಕಿಸಬಹುದು... ಆ ಸ್ವಾತಂತ್ರ್ಯ ಅವಳಿಗಿದ್ದೇ ಇದೆ. ಈ ದೃಷ್ಟಿಯಿಂದಲೇ ಈತ ತನ್ನನ್ನು ಆತನೊಬ್ಬನಿಗೇ ನಿಷ್ಠುರಳಾಗಿರುವಂತೆ ಬಯಸಿ ಈ ಸೂಚನೆಯನ್ನು ನೀಡುತ್ತಿರಬಹುದು... ಇದು ಎಷ್ಟರಮಟ್ಟಿಗೆ ಸಾಧುವಾದ ವಿಚಾರ? ಈ ಬಗ್ಗೆ ಈಗಲೇ ವಿಚಾರ ವಿನಿಮಯ ಒಳ್ಳೆಯದೆನ್ನಿಸಿತು.

ಸುಧಾ ಆತನ ಕಡೆ ತಿರುಗಿ—"ಒಂದು ಪ್ರಶ್ನೆ ಕೇಳಲೇ?" ಎಂದಳು.

"ಅಗತ್ಯವಾಗಿ...ಬೇಕಾದಷ್ಟು ಪ್ರಶ್ನೆ ಕೇಳು"

"ನೀವು ನನ್ನನ್ನು ಕೆಲಸಕ್ಕೆ ರಾಜೀನಾಮೆ ಕೊಡು ಅಂದ್ರಲ್ಲ...ಏಕೆ?"

"ಓಹೋ...ಮತ್ತೇಕೆ ಆ ವಿಚಾರ? ನಿಂಗೆ ತೀರಾ ಅಷ್ಟೊಂದು ಇಷ್ಟ ಇದ್ರೆ ಬಿಡಬ್ಯಾಡ"

"ನನ್ನ ಇಷ್ಟಾನಿಷ್ಟದ ಪ್ರಶ್ನೆ ಅಲ್ಲ...ನಿಮ್ಮ ಉದ್ದೇಶ ಏನು?"

"ನನ್ನ ಉದ್ದೇಶ ಇಷ್ಟೇ ಚಿನ್ನಾ...ನಾವಿಬ್ರೂ ಕೆಲಸಕ್ಕೆ ಹೋಗ್ಬಿಟ್ರೆ...ಇಬ್ಬರಿಗೂ ಹೊರಗಿನ ಒಂದೊಂದು ಕ್ಷೇತ್ರ ಸುತ್ತಿ ಹಾಕಿಕೊಳ್ಳುತ್ತೆ...ನಾವು ಒಬ್ಬರಿಗಾಗಿ ಒಬ್ಬರು ಬಾಳ್ತಾ ಇದೀವಿ ಅನ್ನೋ ಭಾವನೆ ಹಾಳಾಗುತ್ತೆ...ಅಲ್ವೆ?"

"ಒಂದ್ವೇಳೆ ನೀವೇ ರಾಜಿನಾಮೆ ಕೊಟ್ಟು ನಾನೇ ಉದ್ಯೋಗದಲ್ಲಿದ್ರೆ?"

ಕೃಷ್ಣಸ್ವಾಮಿ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಕ್ಷಣ ಕಾಲ ಅವನು ಏನನ್ನೋ ಯೋಚಿಸತೊಡಗಿದ. ಈ ಹುಡುಗಿ ಹೇಳುತ್ತಿರುವುದರಲ್ಲಿ ಯಾವುದೋ ಅರ್ಥವಿದೆ ಎನ್ನಿಸಿತು. ಹೌದು...ಅವಳೇ ಉದ್ಯೋಗಿಯಾಗಿ, ತಾನೇ ಕೆಲಸ ಬಿಟ್ಟರೆ? ಈ ಸುಂದರ ಹೆಣ್ಣು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದು, ಅದರಿಂದ ವಂಚಿತನಾದ ತನ್ನನ್ನು ಹೇಗೆ ಕಾಣಬಹುದು? ಇವಳಿಗಿರುವ ಆರ್ಥಿಕ ಸ್ವಾತಂತ್ರ್ಯ ಇವಳ ವಿಚಾರ ಸ್ವಾತಂತ್ರ್ಯವನ್ನು ಹೆಚ್ಚಿಸಿ, ಸಾಮಾಜಿಕ ಅನುಬಂಧಗಳನ್ನೇ ಬುಡಮೇಲು ಮಾಡತೊಡಗಿದರೆ? ಭಾರತದ ಕುಟುಂಬಪದ್ಧತಿಯೋ ಒಂದು ಪಿತೃಪ್ರಧಾನವಾದ ಪದ್ಧತಿ. ನಮ್ಮ ಪರಿಸರದ ಬಾಳು ಹೀಗೇ ಇದೆ. ಸುಧಾ ಹೇಳುವ ರೀತಿಯಲ್ಲಿ ಈ ಪದ್ಧತಿಗೆ ವ್ಯತಿರಿಕ್ತ ಭಾವನೆಗಳಿವೆ—ಆದರೂ ಹೆಣ್ಣು ಈ ಸ್ವಾತಂತ್ರ್ಯವನ್ನು ಕೈಗೆ ತೆಗೆದುಕೊಂಡಾಗ ಉಂಟಾಗಬಹುದಾದ ಪರಿಣಾಮ ಭೀಕರವೆಂದು ತನ್ನ ಒಳಮನಸ್ಸು ನುಡಿಯುತ್ತದೆ. ಕೊನೆಗೆ ಏನೋ ನಿರ್ಧಾರಕ್ಕೆ ಬಂದವನಂತೆ ಹೇಳಿದ.

"ಸುಧಾ...ಹೆಣ್ಣು ಗಂಡುಗಳ ಪರಸ್ಪರ ಅನುಬಂಧದಲ್ಲಿ ತಿಕ್ಕಾಟ ಬರುವ ಸಂಭವ ನೀನು ಹೇಳಿದ ಸಲಹೆಯಲ್ಲಿದೆ...ಇದು ದೊಡ್ಡ ಪ್ರಶ್ನೆ. ಇದಕ್ಕೆ ಹೆಣ್ಣಿನ ಮನೋಧರ್ಮ ಪ್ರಧಾನ ಕಾರಣ ಅನ್ಸುತ್ತೆ. ದುಡಿಮೆ ಅನ್ನೋ ಪದ ಜವಾಬ್ದಾರಿ ಅನ್ನೋ ಪದಾನೂ ಸೂಚಿಸುತ್ತೆ...ಇಬ್ಬರೂ ದುಡಿದರೆ ಜವಾಬ್ದಾರಿ ಅರ್ಧ ಹಂಚಲ್ಪಡುತ್ತೆ...ಒಬ್ಬರೇ ಆದರೆ ಪೂರ್ಣ ಜವಾಬ್ದಾರಿ ಒಬ್ಬರದೇ...ಈಗ ಪ್ರಶ್ನೆ ಏನೂ ಅಂದ್ರೆ ಹೆಂಗಸು ಈ ಪೂರ್ಣ ಜವಾಬ್ದಾರಿಗೆ ಅರ್ಹಳೇ ಅನ್ನೋದು"

"ಯಾಕಲ್ಲ? ಹೆಂಗಸೂ ಜವಾಬ್ದಾರಿ ಚೆನ್ನಾಗೇ ಹೊರಬಲ್ಲಳು."

ಸುಧಾ ತಟ್ಟನೆ ಹೇಳಿದಳು.

ಕೃಷ್ಣಸ್ವಾಮಿ ಮತ್ತೆ ಸ್ವಲ್ಪ ಹೊತ್ತು ಯೋಚಿಸಿದ ನಂತರ,

"ಹಾಗಲ್ಲ ಸುಧಾ...ಹೆಣ್ಣು ಯಾವ ಜವಾಬ್ದಾರೀನೂ ತಗೊಳ್ದೇ ಇದ್ರೂ, ಗಂಡು ಅವಳ ವಶದಲ್ಲೇ ಇರ್ತಾನೆ...ಪ್ರಕೃತಿ ಆ ದೇಹಾನ ಹಾಗೆ ಸೃಷ್ಟಿ ಮಾಡಿದೆ. ಆದರೆ ಹೆಣ್ಣು ಎಲ್ಲಾ ಜವಾಬ್ದಾರೀನೂ ತಗೊಂಡು, ಗಂಡು ನಿಷ್ಪ್ರಯೋಜಕನಾದಾಗ ಹೆಣ್ಣು ಅವನ ವಶದಲ್ಲಿ ಉಳಿಯೋದು ತೀರ ಅನುಮಾನ."

ಸುಧಾ ಬೆಚ್ಚಿದಳು! ಹೌದು...ತಾನು ಅಂದುಕೊಂಡಂತೆ ಇವರೂ ಯೋಚಿಸಿದ್ದಾರೆ...ಇವರಿಗೆ ತನ್ನ ಶೀಲದಲ್ಲಿ ನಂಬಿಕೆಯಿಲ್ಲ. ಇವರೇನು, ಯಾವ ಗಂಡಸಾದರೂ ಅಷ್ಟೆ! ಗಂಡು ಹೆಣ್ಣನ್ನು ನಂಬುವುದಿಲ್ಲ. ಅವಳಿಗೆ ಪೂರ್ಣ ಜವಾಬ್ದಾರಿ ಕೊಡಲಿಷ್ಟಪಡುವುದಿಲ್ಲ...ಆದರೆ ಹೆಣ್ಣು ಇವನನ್ನು ನಂಬಲೇಬೇಕು... ಇವನು ಏನು ಬೇಕಾದರೂ ಮಾಡಿಕೊಳ್ಳಬಹುದು."

"ಮತ್ತೊಂದು ಪ್ರಶ್ನೆ...ನೀವು ತಪ್ಪು ಭಾವಿಸಬಾರದು"

"ಏನ್ಬೇಕಾದ್ರೂ ಕೇಳು ಚಿನ್ನಾ..."

"ನಿಜ ಹೇಳಿ...ಈಗ ಎರಡು ವರ್ಷಗಳಿಂದ್ಲೂ ನೀವು ಯಾವ ಹೆಣ್ಣನ್ನೂ ಮೋಹಿ......"

"ಸುಧಾ...ಎಂಥ ಪ್ರಶ್ನೆ ಕೇಳ್ತಾ ಇದೀಯ! ಖಂಡಿತ ನಾನು ಯಾವಳನ್ನೂ ಮೋಹಿಸಲಿಲ್ಲ... ಪ್ರಾಮಾಣಿಕವಾಗಿ ಹೇಳಬೇಕು ಅಂದ್ರೆ ಅಂಥ ಎರಡು ಮೂರು ಅವಕಾಶಗಳು ಸಿಕ್ಕರೂ ನಾನು ನಿನಗಾಗೇ ಅವುಗಳನ್ನು ಬಿಟ್ಟೆ. ನಿಮ್ಮ ಭಾವನ ಪರಿಚಯ ಬೇರೆ ಆಯ್ತು. ಅವರ ಹತ್ರ ನನ್ನ ಅಭಿಲಾಷೇನ ಸೂಕ್ಷ್ಮವಾಗಿ ಸೂಚಿಸ್ದೆ"

ಸುಧಾ ಮತ್ತೊಂದು ತಿರುವಿನಲ್ಲಿ ಯೋಚಿಸಿದಳು....ಇರಬಹುದು...ತಾನು ಕಳೆದ ಎರಡು ವರ್ಷಗಳಲ್ಲಿ ತನ್ನ ಶೀಲವನ್ನು ಕೆಡಿಸಿಕೊಂಡಿದ್ದೇನೆ....ವಿಜಯ ಸಹ ತನ್ನನ್ನು ಕೆಡಿಸುವವನಿದ್ದ. ರವಿಯಂತೂ ತನ್ನ ದೇಹದ ಪ್ರತಿ ಅಂಗುಲವನ್ನೂ ಬಲ್ಲ...ಹೌದು...ತಾನು ಹೆಣ್ಣು. ತನಗೆ ಜವಾಬ್ದಾರಿಯನ್ನು ಹೊರುವ ಅರ್ಹತೆ ಸಾಲದು....ಅಥವಾ ತಾನು ಗಂಡು ಅಥವಾ ಹೆಣ್ಣು

ಎಂಬ ಲಿಂಗಭೇದವನ್ನು ಮೆಟ್ಟಿ ನಿಂತು ಸಾರ್ವಜನಿಕ ಕ್ಷೇತ್ರಕ್ಕಿಳಿಯುವ ಸತ್ವ ತನ್ನಲ್ಲಿಲ್ಲ. ಈ ಸತ್ವವಿಲ್ಲದ ತಾನು ರಾಜೀನಾಮೆ ಕೊಡುವುದೇ ಒಳಿತು.

"ಹೌದು...ನೀವು ಹೇಳೋದೇ ಸರಿ...ನಾಳೇನೇ ನನ್ನ ರಾಜೀನಾಮೆ ಕಳಿಸ್ತೀನಿ..." ಎಂದಳು.

"ಛೆ...ಛೆ...ಅಷ್ಟೊಂದು ಆತುರ ಯಾಕೆ? ನಮ್ಮ ಮದುವೆ ತಾರೀಖು ಸೆಟ್ಲ್ ಆಗೋವರೆಗೂ ಕೆಲಸಕ್ಕೆ ಹೋಗು..."

"ಬೇಡ...ಬೇಡ...ನಂಗೆ ಅಲ್ಲಿ ಒಬ್ಬೇ ಇರೋಕೆ ಹೆದರ್ಕೆ..."

"ಇಷ್ಟು ದಿನಾ ಇಲ್ಲದ ಹೆದರ್ಕೆ ಈಗ ಬಂದ್ಬಿಡ್ತು ಅಲ್ವಾ?..." ಎಂದು ಕೃಷ್ಣಸ್ವಾಮಿ ಅವಳ ಗಲ್ಲಕ್ಕೆ ಕೈ ಹಾಕುವುದಕ್ಕೂ ಚಲನಚಿತ್ರ ಮುಗಿಯುವುದಕ್ಕೂ ಸರಿಹೋಯಿತು.

× × ×

ನರಹರಿ ದೇವಪುರಕ್ಕೆ ಬಂದಾಗ ಒಂಬತ್ತೂವರೆ ಗಂಟೆಯಾಗಿತ್ತು. ನೇರವಾಗಿ ತಂಗಿಯ ಮನೆಗೆ ಹೋಗಿ ಬೀಗವನ್ನು ತೆಗೆದು, ಅವಳು ಹೇಳಿದ್ದ ಸಾಮಾನುಗಳನ್ನೆಲ್ಲ ಕಟ್ಟಿಟ್ಟನು. ಹೊರಗೆ ಯಾರೋ ಬಂದ ಹಾಗಾಯಿತು. ಕತ್ತೆತ್ತಿ ನೋಡಿದ.

"ಯಾರು ನೀವು...ಇಲ್ಲಿದ್ರಲ್ಲ ಆ ವಿಜಯ...ಸುಧಾ...ಅವರು" ಎಂದು ಕೇಳಿದ ಆತ.

"ಅದು ಸರಿ...ನೀವ್ಯಾರು? ಗೊತ್ತಾಗಲಿಲ್ಲ?"

"ನಾನು ಈ ಮನೆ ಮಾಲೀಕ...ಗೋವಿಂದಯ್ಯ ಅಂತ ನನ್ನ ಹೆಸ್ರು....ಅದೇ ನಿನ್ನೆಯಿಂದ ಈ ಔಟ್ ಹೌಸ್ ಬೀಗ ಹಾಕಿತ್ತು....ಮನೆ ಬಿಟ್ಟು ಹೋದರೋ ಏನೋ ಅಂತಿದ್ದೆ...ಬೀಗದಕ್ಕೈ ಸಹ ಕೊಡ್ಲಿಲ್ಲ. ಇದೇನು ಒಂದು ತಿಂಗಳೂ ಮುಗೀತಾ ಬಂತು...ಅಡ್ವಾನ್ಸ್"

"ನೋಡಿ ಗೋವಿಂದಯ್ನೋರೆ...ನಾನು ಸುಧಾಳ ಅಣ್ಣ...ನರಹರಿ. ನಾನು ಹಿಂದೆ ಇಲ್ಲಿಗೆ ಒಂದ್ಸಾರಿ ಬಂದಿದ್ದೆ. ಪ್ರಾಯಶಃ ನೀವು ನೋಡಿರಲಿಕ್ಕಿಲ್ಲ. ಸುಧಾ ಕೆಲ್ಸಕ್ಕೆ ರಾಜೀನಾಮೆ ಕೊಟ್ಬಿದ್ದಾಳೆ. ಅವಳು ಮತ್ತಿಲ್ಲಿಗೆ ಬರೋದಿಲ್ಲ. ಈ ವಿಜಯ ಅನ್ನೋರು ನಾಡಿದ್ದೋ ಆಚೆ ನಾಡಿದ್ದೋ ಬರ್ತಾರಂತೆ...ಬೀಗದ ಕೈ ನಿಮ್ಮ ಹತ್ರಾನೇ ಕೊಡೋಕೆ ಸುಧಾ ಹೇಳಿದಾಳೆ. ನಿಮ್ಮ ಕೈಲೇ ಕೊಡ್ತೀನಿ. ವಿಜಯ ಬಂದ್ಮೇಲೆ ಮುಂದಿನ ಅಡ್ವಾನ್ಸ್ ವಿಷಯ ನೀವೇ ವಿಚಾರ್ಸಿ..." ಎಂದ.

"ಓಹೋ–ಸುಧಾ ರಾಜೀನಾಮೆ ಕೊಟ್ಬಿಟ್ರೋ? ಈ ವಿಜಯ ನಿಮಗೇನಾಗಬೇಕು?" ಎಂದ ಆ ಗೋವಿಂದಯ್ಯ.

ನರಹರಿಗೆ ಸ್ವಲ್ಪ ಸಿಟ್ಟು ಬಂತು. ಇವನ ಪ್ರಶ್ನೆಯಲ್ಲಿ ಏನೋ ಕುಹಕವಿದೆ ಎನ್ನಿಸಿತು...ಸದ್ಯ ಬೇಗ ಈ ಮನೆಯನ್ನು ಬಿಟ್ಟು ತೊಲಗಬೇಕೆಂದುಕೊಂಡು "ಆತ ನಮ್ಮದೊಡ್ಡಪ್ಪನ ಮಗ ಆಗ್ಬೇಕು"...ಎಂದವನೇ ಸಾಮಾನುಗಳನ್ನು ತೆಗೆದುಕೊಂಡು ಬೀಗ ಜಡಿದು "ಇಗೋ ತಗೊಳ್ರಿ ಈ ಬೀಗದ ಕೈ–ನಾನು ಬರ್ತೀನಿ" ಎಂದವನೇ ಉತ್ತರಕ್ಕಾಗಿ ಕಾಯದೇ ಬೀಗದಕೈಯನ್ನು ಆತನ ಮುಂದೆಸೆದು ಶಾಲೆಯ ಕಡೆ ವೇಗವಾಗಿ ನಡೆದ.

"ಹಲೋ ನರಹರಿ...ನರಹರೀ..." ಎಂದು ಯಾರೋ ಕೂಗಿದರು. ನರಹರಿ ತಿರುಗಿ ನೋಡಿದ. ರವೀ! ಅವನ ಮುಖವನ್ನು ನೋಡಲೂ ನರಹರಿಗೆ ಇಷ್ಟವಾಗಲಿಲ್ಲ...ಆದರೆ ರವಿ ಅವನನ್ನು ಸಮೀಪಿಸಿದ.

"ಇದೇನು ಇಷ್ಟೊಂದು ಅರ್ಜಂಟು! ಯಾವಾಗ ಬಂದಿದ್ರಿ? ಸುಧಾ ಬರ್ಲಿಲ್ವೆ? ಇದೇನು ಅವಳ ಬ್ಯಾಗೇಜ್ ಎಲ್ಲಾ ತಂದ್ಬಿಟ್ಟಿದೀರಿ? ನಡೀರಿ...ಮನೇಗೆ ಹೋಗೀರಂತೆ...ಊಟಗೀಟ..."

ನರಹರಿ ಚುರುಕಾಗಿ ಚುಟುಕಾಗಿ "ಕ್ಷಮಿಸಿ ರವಿ, ಈಗ ಸ್ವಲ್ಪ ಅರ್ಜಂಟಿದೆ...ಆ ಮೇಲೆ ಬರ್ತೀನಿ...ಸುಧಾ...ಅಲ್ಲೇ ಇದಾಳೆ" ಎಂದು ಮುಂದಕ್ಕೆ ಹೆಜ್ಜೆಯಿಟ್ಟ...ಹೌದು...ಸುಧಾ ರಾಜೀನಾಮೆ ನೀಡಿದ ವಿಷಯವನ್ನು ತಾನು ಇವನಿಗೇಕೆ ತಿಳಿಸಲಿ? ತಮ್ಮ ಮನೆಯಲ್ಲಿ ಸುಧಾಗೆ ಸ್ಥಾನ ಸಿಗದುದರಿಂದಲೇ ರಾಜೀನಾಮೆ ಇತ್ತಳು–ಎಂದು ಇವನೂ ಇವನ ಆ ವಕೀಲ ಅಪ್ಪನೂ ಪ್ರಚಾರ ಮಾಡಿಯಾರು. ಬ್ಯಾಂಕಿಗೆ ಹೊರಟ ರವಿ. ಇವನನ್ನೇ ಅವಾಕ್ಕಾಗಿ ನೋಡುತ್ತಿದ್ದ ಹಾಗೆಯೇ ನರಹರಿ ಶಾಲೆಯ ಕಡೆ ನಡೆದ.

ಶಾಲೆಯ ಕಚೇರಿಯಲ್ಲಿ ಸುಧಾ ಕೊಟ್ಟ ರಾಜೀನಾಮೆ ಪತ್ರವನ್ನು ಸಲ್ಲಿಸಿ, ನರಹರಿ ಬೇಗ ಬೇಗ ಬಸ್‌ಸ್ಟಾಂಡಿಗೆ ಬಂದ. ಚಿತ್ರದುರ್ಗಕ್ಕೆ ಹೋಗುವ ಬಸ್ ಸಿದ್ಧವಾಗಿ ನಿಂತಿತ್ತು.

ರವಿಗೆ ಬ್ಯಾಂಕಿನಲ್ಲಿ ಕುಳಿತಾಗಲೂ ಸಮಾಧಾನವಾಗಲಿಲ್ಲ. ನರಹರಿಯ ವರ್ತನೆ ಯಾಕೋ ವಿಲಕ್ಷಣವಾಗಿತ್ತು. ಅಂದು ರಾತ್ರಿ ವಾಸುದೇವಯ್ಯ ಮತ್ತು ಪರಿವಾರ ಸುಧಾಳ ಮನೆಗೆ ಬಂದಾಗ ತಾನು ಹಿತ್ತಲ ಬಾಗಿಲಿನ ಮನೆಯಲ್ಲಿ ನಿಂತು ಎಲ್ಲ ಸಂಭಾಷಣೆಯನ್ನೂ ಆಲಿಸಿದ್ದ. ಹಾಗಾದರೆ ಮರುದಿನವೇ ಸುಧಾ ಚಿತ್ರದುರ್ಗಕ್ಕೆ ಹೊರಡುತ್ತಾಳೆಂದು ತಿಳಿದಿತ್ತು. ಶಾಲೆಯಲ್ಲಿ ಹೋಗಿ ವಿಚಾರಿಸಿದಾಗ ಅವಳು ಎರಡು ದಿನ ಮಾತ್ರ ರಜೆ ಹಾಕಿರುವುದಾಗಿ ತಿಳಿಯಿತು. ಇನ್ನೇನು ಮೂರನೆಯ ದಿನವೇ ಮತ್ತೆ ಬರುತ್ತಾಳೆ ಎಂದು ನಿರೀಕ್ಷಿಸಿ ಸಂತೋಷಿಸಿದ್ದ. ಅವನ ಸಂತೋಷಕ್ಕೆ ಕಾರಣ, ಗುಂಡೂರಾಯರು ವಿಜಯನ ದಿನಚರಿಯನ್ನು ಪರಿಶೀಲಿಸಿ, ಸುಧಾ ನಿರ್ದೋಷಿ ಎಂದು ತೀರ್ಮಾನಿಸಿದುದೇ ಆಗಿತ್ತು.

"ರವಿ...ಪಾಪ...ಆ ಹುಡ್ಗೀದೇನೂ ತಪ್ಪಿಲ್ಲ ಕಣೋ. ಆ ವಿಜಯ ನೀಚ...ಅವನಿಂದ್ಲೇ ಹಾಗಾಯ್ತು" ಎಂದರು ರಾಯರು.

ರವಿಗೆ ಅಪಾರ ಹರ್ಷವಾಯ್ತು..."ಅಪ್ಪಾ ಈಗ್ಲಾದ್ರೂ ಅವಳ್ನ ನಾನು ಮದ್ವೆಯಾಗ್ಬಹುದಲ್ವೆ?" ಎಂದಾಗ,

"ಭೇಷಾಗಿ...ಆಗಯ್ಯ...ಇನ್ನು ಎರಡು ತಿಂಗ್ಳಲ್ಲೇ ಆಯ್ತು ಅನ್ನಿಬಿಡೋಣ. ಆದ್ರೆ ವಾಸೂಗೆ ನಾನು ಯಾವ ಮುಖ ಇಟ್ಕೊಂಡು ಪತ್ರ ಹಾಕ್ಲಿ?"

"ಅದಕ್ಯಾಕೆ ಯೋಚ್ನೆ? ಹೇಗೂ ನಾಡಿದ್ದು ಸುಧಾ ಬರ್ತಾಳೆ. ಅವಳು ಬಂದ್ಮೇಲೆ ನಮ್ಮನೇಲೇ ತಾನೇ ಇರೋದು? ಆ ವಿಚಾರ ತಿಳಿಸಿ, ಅವರಿಗೆ ಒಂದು ಪತ್ರ ಬರೀರಿ...ಹಾಗೇ ಮಗಳನ್ನು ನೋಡ್ಕೊಂಡು ಹೋಗ್ರಿ ಅಂತ ಒಂದು ಸಾಲು ಬರೆದ್ರೂ ಆಗುತ್ತೆ..." ಕಮಲಮ್ಮನವರೇ ಸೂಚಿಸಿದಾಗ ರಾಯರಿಗೆ ಬಹಳ ಸಮಂಜಸವಾಗಿ ಕಂಡಿತು. ರವಿಯೂ ನಿಶ್ಚಿಂತನಾಗಿ ಎರಡು ದಿನಗಳು ಕಳೆಯುವುದನ್ನೇ ಕಾಯತೊಡಗಿದ.

ಮೂರನೇ ದಿನವೇ ತಾನು ಬ್ಯಾಂಕಿಗೆ ಹೊರಟಾಗಲೇ ದಾರಿಯಲ್ಲಿ ನರಹರಿಯ ಭೇಟಿಯಾಗಿತ್ತು. ಆದರೆ ಅದು ಆದರ ವಿಶ್ವಾಸಗಳಿಲ್ಲದ ನೀರಸ ಭೇಟಿ! ರವಿ ತಡೆಯಲಾರದೇ ಮೇಲೆದ್ದ. ಬ್ಯಾಂಕಿನ ಮ್ಯಾನೇಜರರಿಗೆ ಒಂದು ಮಾತು ಹೇಳಿ ಸುಧಾ ಶಾಲೆಯ ಕಡೆಗೆ ವೇಗವಾಗಿ ಧಾವಿಸಿದ.

ಶಾಲೆಯ ಕಚೇರಿಯಲ್ಲಿ ಗುಮಾಸ್ತ ಕಲ್ಲಪ್ಪನಿಂದ ಸುಧಾ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿರುವುದಾಗಿ ತಿಳಿಯಿತು. ರವಿಗೆ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದ ಹಾಗಾಯಿತು" ಏನು ಕಾರಣವಿದ್ದೀತು? ತಾನು ಆ ರಾತ್ರಿ ಅವಳೊಂದಿಗಿದ್ದುದನ್ನು ವಾಸುದೇವಯ್ಯ ಬಾಗಿಲಿನ ಬಿರುಕಿನ ಮೂಲಕ ನೋಡಿರಬಹುದೆ?... ನರಹರಿಯ ಮುಖದಲ್ಲಿಯೂ ಏನೋ ಅಸಮಾಧಾನ ತನ್ನ ಬಗ್ಗೆ ಎದ್ದು ಕಾಣುತ್ತಿತ್ತು. ಹಾಗಾದರೆ ಈಗ ಮುಂದಿನ ಯೋಜನೆ..." ಎಂದು ಯೋಚಿಸುತ್ತಾ ಬ್ಯಾಂಕಿನ ಕಡೆ ನಿಧಾನವಾಗಿ ಹೊರಟ.

-೧೦-

ರವಿಯ ಮುಖ ಪೆಚ್ಚಾಗಿರುವುದನ್ನು ಕಂಡ ಗುಂಡೂರಾಯರು ಏನು, ಏಕೆ ಎಂದು ವಿಚಾರಿಸುವ ಮೊದಲೇ ರವಿ ಹೇಳಿದ–

"ಸುಧಾ ತನ್ನ ಕೆಲ್ಸಕ್ಕೆ ರಾಜೀನಾಮೆ ಕೊಟ್ಟಿದ್ದಾಳಪ್ಪ."

ಊಟ ಮಾಡುತ್ತಿದ್ದ ರಾಯರು ತಟ್ಟನೆ ಕತ್ತೆತ್ತಿ ರವಿಯನ್ನೇ ದಿಟ್ಟಿಸಿದರು. ನಂತರ ಏನನ್ನೋ ಯೋಚಿಸುತ್ತಾ "ವಾಸೂಗೆ ಒಂದು ಪತ್ರಾನಾದ್ರೂ ಬರೀಬೇಕು...ಆದ್ರೆ ಏನು ವಿಚಾರ ಬರಿಯೋದು?" ಎಂದು ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಂಡವರಂತೆ ಗಟ್ಟಿಯಾಗಿ ಹೇಳಿದರು. ಅಲ್ಲಿಂದ ಮುಂದೆ ಕೆಲವು ಕ್ಷಣಗಳು ಮೌನವಾಗಿ ಕಳೆದವು.

"ನಾವು ಆ ಹುಡುಗೀನ ನಮ್ಮನೇಲಿ ಇಟ್ಕೊಳ್ಳೋದಕ್ಕೆ ಒಪ್ಲಿಲ್ಲ ನೋಡಿ. ಅದೇ ಕಾರಣ ಇದ್ರೂ ಇರಬಹುದು." ಕಮಲಮ್ಮ ಊಹಿಸಿ ಹೇಳಿದರು.

ಗುಂಡೂರಾಯರಿಗೆ ಈ ಮಾತಿನಿಂದ ಮತ್ತಷ್ಟು ಬೇಸರವಾಯಿತು. ಹೌದು. ಆ ದಿನ ವಾಸುದೇವಯ್ಯ ಸುಧಾಳನ್ನು ತಮ್ಮ ಮನೆಯಲ್ಲಿಟ್ಟುಕೊಳ್ಳುವಂತೆ ಅಂಗಲಾಚಿ ಕೇಳಿಕೊಂಡರೂ, ಒಣ ಪ್ರತಿಷ್ಠೆ, ಗೌರವಗಳಿಗೆ ಬೆಲೆ ತೆತ್ತು, ತಾವು ಆ ಕೋರಿಕೆಯನ್ನು ನಿಷ್ಠುರವಾಗಿಯೇ ನಿರಾಕರಿಸಿದ್ದರು. ಆದರೆ ಮಾಡುವುದೇನು? ಆಗಿನ ಪರಿಸ್ಥಿತಿ ಹಾಗಿತ್ತು. ಸುಧಾ ನಿರ್ದೋಷಿಯೆಂದು ತಮಗಾರಿಗೂ ಆಗ ಗೊತ್ತಿರಲಿಲ್ಲ... ಇದೀಗ ಅವಳ ಶೀಲದ ಬಗ್ಗೆ ದೊರೆತ ಅರ್ಹತಾಪತ್ರವೆಂಬಂತೆ ವಿಜಯನ ದಿನಚರಿಯ ಪುಸ್ತಕ ತಮ್ಮೆದುರಿಗಿದೆ. ಈ ವಿವರಗಳನ್ನೆಲ್ಲ ವಾಸುವಿಗೆ ತಿಳಿಯಪಡಿಸುವುದಾದರೂ ಹೇಗೆ? ಪತ್ರ ಬರೆದರೆ ಸರಿಹೋದೀತೆ?

ರವಿ ಸರಿಯಾಗಿ ಊಟವನ್ನೂ ಮಾಡದೆ ಕೈ ತೊಳೆದು, ಮಲಗಲು ತನ್ನ ರೂಮಿಗೆ ನಡೆದ.

"ಏನು ಹೇಳ್ತಿ ನೀನು? ಈಗ ಹ್ಯಾಗೆ ಮಾಡೋಣ?" ಕಮಲಮ್ಮನನ್ನೇ ರಾಯರು ಕೇಳಿದರು.

"ಏನಾದ್ರೂ ಮಾಡ್ಲೇಬೇಕೀಗ...ರವಿಯಂತೂ ಆ ಹುಡುಗೀನ ತುಂಬ ಹಚ್ಕೊಂಡಿದಾನೆ...ಈಗ ನಾವು ಗಂಡಿನೋರು...ಹೆಣ್ಣಿನ ಅಪ್ಪನೇ ನಮ್ಮ ಮನೆ ಬಾಗ್ಲಿಗೆ ಬರ್ಲಿ ಅಂತ ಹಟ ಮಾಡೋ ಹಾಗಿಲ್ಲ...ಪಾಪ...ವಾಸುದೇವಯ್ಯ ಸಹ ನಾವು ಒಂದು ಚೂರು ಸೂಚನೆ ಕೊಟ್ರೂ ಸಾಕು, ಖಂಡಿತ ಈ ವಿಚಾರ ಕೇಳಿ ಸಂತೋಷಪಡ್ತಾರೆ."

"ಹಾಗಿದ್ರೆ ಎಲ್ಲ ವಿಚಾರಾನೂ ಸೇರ್ಸಿ ಒಂದು ಪತ್ರ ಇವತ್ತೇ ಬರೀಲೇ?" ವಕೀಲರಾದ ರಾಯರು ಭಾರ್ಯೆಯ ಸಲಹೆಯನ್ನು ಕೇಳುತ್ತಿದ್ದರು.

"ಬರೀರಿ...ಇವತ್ತೇ ಬರೆದಿಡಿ" ಎಂದರು ಕಮಲಮ್ಮ.

ರಾಯರು ಮಲಗುವ ಮನೆಗೆ ಹೋದವರೇ ಪತ್ರ ಬರೆಯಲು ಕುಳಿತರು. ಪತ್ರವನ್ನು ಐದಾರು ಬಾರಿ ಪ್ರಾರಂಭಿಸಿ ಹೊಡೆದು ಹಾಕಿ, ತಲೆ ಕೆಡಿಸಿಕೊಳ್ಳುವಷ್ಟರಲ್ಲೇ ಕಮಲಮ್ಮ ಕೈ ಒರೆಸಿಕೊಳ್ಳುತ್ತಾ ಬರುವುದನ್ನು ರಾಯರು ಕಂಡರು.

"ರೀ...ಪತ್ರಗಿತ್ರ ಅಂತ ಯಾವ್ದೂ ಬ್ಯಾಡ... ಒಂದಿವ್ಸದ ಮಟ್ಟಿಗೆ ನೀವೇ ಅಲ್ಲಿಗೆ ಯಾಕೆ ಹೋಗಿ ಬರಬಾರ್ದು? ಇಂಥ ವಿಷಯಾನೆಲ್ಲ ಪತ್ರದಲ್ಲಿ ಬರೆಯೋದು ನಂಗೆ ಯಾಕೋ ಹಿಡಿಸ್ತಾ ಇಲ್ಲ" ಎಂದರು ಕಮಲಮ್ಮ.

ಹೌದು...ಇವಳು ಹೇಳುತ್ತಿರುವುದು ಯಥಾರ್ಥ ತನಗೇ ಈ ಉಪಾಯ ಮೊದಲೇ ಹೊಳೆಯಲಿಲ್ಲ? ಪ್ರತ್ಯಕ್ಷ ತಾವೇ ಅವನ ಮನೆಗೆ ಹೋದಲ್ಲಿ, ವಾಸು ಕೂಡ ಬಹಳ ಸಂತೋಷಪಟ್ಟುಕೊಳ್ತಾನೆ. ಪತ್ರ ಮಾಡುವ ಕೆಲಸಕ್ಕಿಂತ ಹತ್ತು ಪಟ್ಟು ಚೆನ್ನಾಗಿ ಪ್ರತ್ಯಕ್ಷ ರಾಯಭಾರ ಮಾಡಬಲ್ಲುದು ಎಂದುಕೊಂಡರು.

"ಹೌದು ಕಮಲು, ನಂಗೆ ಈ ಯೋಚನೆ ಹೊಳೀಲೇ ಇಲ್ಲ. ನಾನೇ ಒಂದು ದಿವ್ಸ ಹೋಗ್ಬರ್ತೀನಿ ಚಿತ್ರದುರ್ಗಕ್ಕೆ...ಎಂದು ಹೋಗ್ಲಿ?"

ಗುಂಡೂರಾಯರು ಹಳೆಯ ಸಂಪ್ರದಾಯಗಳಲ್ಲಿ ಕೆಲವಕ್ಕೆ ವಿಶೇಷ ಗೌರವ ಕೊಟ್ಟಿದ್ದರು. ಅವುಗಳ ಪೈಕಿ ಪಂಚಾಂಗ ನೋಡಿ ಪ್ರಯಾಣದ ದಿನ, ವೇಳೆಗಳನ್ನು ನಿರ್ಧರಿಸುವುದೂ ಒಂದು. ಕಮಲಮ್ಮ ತಂದುಕೊಟ್ಟ ಪಂಚಾಂಗ ಬಿಡಿಸಿ, ಲೆಕ್ಕಾಚಾರ ಹಾಕಿ, ಮುಂದಿನ ಸೋಮವಾರ ಹೊರಡಲು ನಿಶ್ಚಯಿಸಿದರು.

"ಇನ್ನೇನು...ಇವತ್ತು ಗುರುವಾರ...ಶುಕ್ರ, ಶನಿ ಭಾನು–ಮೂರು ದಿನಾ ಬಿಟ್ಟು ಹೊರಡ್ತೀನಿ... ರವೀನೂ ಜೊತೆಗಿರ್ಲ್ಲೀ ಅಥವಾ...?"

"ಬ್ಯಾಡಾರೀ...ರವಿ ಯಾಕೆ? ಅವನೇನು ಹುಡುಗೀನ ಹೊಸದಾಗಿ ನೋಡಬೇಕಾಗಿದೆಯೆ?...ನೀವೊಬ್ರೇ ಲಕ್ಷಣವಾಗಿ ಹೋಗಿ ಕಾರ್ಯ ಮುಗಿಸಿಕೊಂಡು ಬನ್ನಿ"

ರಾಯರು ಸಮಾಧಾನದ ನಿಟ್ಟುಸಿರು ಬಿಟ್ಟರು. ಕಮಲಮ್ಮನಿಗಂತೂ ಮಗನದೇ ಚಿಂತೆ.

"ರೀ...ಪಾಪ, ಈ ವಿಚಾರವಾಗಿ ರವಿಗೂ ಒಂದ್ಮಾತು ಈಗ್ಲೆ ತಿಳಿಸಿ...ರಾತ್ರಿಯೆಲ್ಲ ನಿದ್ದೆ ಮಾಡ್ತಾನೋ ಇಲ್ವೋ..." ಎಂದು ರಾಯರಿಗೆ ಸಲಹೆ ನೀಡಿದರು.

ಗುಂಡೂರಾಯರು ರವಿಗೆ ಈ ವಿಚಾರವನ್ನು ತಿಳಿಸಬೇಕೆಂದು ಆತುರವಾಗಿ ಅವನ ರೂಮಿನ ಕಡೆ ಹೊರಟರು. ಬಾಗಿಲಿನ ಬಿರುಕಿನಲ್ಲಿ ಬೆಳಕು ಕಾಣುತ್ತಿತ್ತು...ರಾಯರು ಒಮ್ಮೆ ಆ ಬಿರುಕಿನಲ್ಲಿ ಕಣ್ಣಿಟ್ಟು ನೋಡಿದರು. ರವಿಯನ್ನು ನೋಡಿ ದಿಗ್ಭ್ರಾಂತರಾದರು.

ತಲೆಯನ್ನು ಕೆದರಿದ ರವಿ, ಮಂಚದ ಮೇಲೆ ಕುಳಿತು ಒಂದೇ ಸಮನೆ ಕಣ್ಣೀರು ಸುರಿಸುತ್ತಿದ್ದ. ರಾಯರಿಗೆ ಕರುಳು 'ಚುರ್' ಎಂದಿತು.

"ರವೀ..." ತುಂಬು ಕಂಠದಿಂದ ಕೂಗಿದ ರಾಯರ ಧ್ವನಿಗೆ ಉತ್ತರವಾಗಿ "ಬಂದೆ ಅಪ್ಪ" ಎನ್ನುತ್ತಾ ರವಿ ಬಂದು ಬಾಗಿಲು ತೆರೆದ. ಗುಂಡೂರಾಯರು ಒಳಗೆ ಬಂದವರೇ ಮಗನನ್ನು ತಬ್ಬಿಕೊಂಡು "ಯಾಕೆ ರವೀ? ಇಷ್ಟೊಂದು ಮಂಕಾಗಿದೀಯ...ನಿನ್ಮುಖಾ ನೋಡಿದ್ರೆ ನನ್ನ ಕರುಳೆಲ್ಲ ಬೆಂದು ಹೋಗ್ತಾ ಇದೆ" ಎಂದು ಕಳಕಳಿಯಿಂದ ಕೇಳಿದರು.

"ಅಪ್ಪಾ...ನಾನು ಸುಧಾ ಇಲ್ದೆ ಬದುಕಲಾರೆ... ಅಪ್ಪಾ...ನಾಳೇನೇ ನಾನು ಚಿತ್ರದುರ್ಗಕ್ಕೆ ಹೋಗ್ತೀನಿ. ವಾಸುದೇವಯ್ಯನವರ ಕಾಲಿಗೆ ಬಿದ್ದಾದ್ರೂ..."

"ಛೆ...ಛೆ...ನಾನೂ ಈಗ ಅದನ್ನು ಹೇಳ್ಳೋಕೇ ನಿನ್ನ ಹತ್ರ ಬಂದಿದೀನಿ...ನೀನು ಹೋಗೋದು ಅಷ್ಟಾಗಿ ಸರಿಯಲ್ಲ...ಮುಂದಿನ ಸೋಮವಾರ, ಆ ದಿಕ್ಕಿಗೆ ಪ್ರಯಾಣ ಭಾಳಾ ಪ್ರಶಸ್ತವಿದೆ..,ನಾನೇ ವಾಸೂ ಹತ್ರ ಹೋಗ್ತಾ ಇದೀನಿ, ಸುಧಾನ ಸೊಸೆಯಾಗಿ ಕೇಳೋದಕ್ಕೆ ಹೋಗ್ತಾ ಇದೀನಪ್ಪಾ...ವಾಸೂಗೆ ಈ ವಿಚಾರದಿಂದ ಎಷ್ಟು ಸಂತೋಷ ಆಗುತ್ತೆ ಅಂದ್ಕೊಂಡಿದೀ! ಅವನ ಅಪೇಕ್ಷೇನೂ ಇದೇ ಆಗಿತ್ತು...ನೀನು ಇಲ್ಲದ ಯೋಚ್ನೆ ಹಚ್ಕೊಂಡು ಕೊರಗಬ್ಯಾಡ"

ರವಿ ಅಪ್ಪನ ಮಾತು ಕೇಳಿ ಚಕಿತನಾದ! "ನಿಜವೆ ಅಪ್ಪಾ?" ಎಂದಾಗ ರಾಯರು "ಖಂಡಿತ ನಿಜ...ನಾನು ಇದನ್ನು ನಿಂಗೆ ಈಗ್ಲೇ ಹೇಳೋದಕ್ಕೆ ಇಲ್ಲಿಗೆ ಬರಬೇಕಾಯ್ತು...ಇನ್ನು ಮಲಕ್ಕೋ ರವೀ...ಹೊತ್ತಾಯ್ತು" ಎಂದವರೇ ರವಿಯನ್ನು ಮಲಗಿಸಿ, ರೂಮಿನ ದೀಪವಾರಿಸಿ, ಬಾಗಿಲೆಳೆದುಕೊಂಡು ತಮ್ಮ ಮಲಗುವ ಮನೆಯತ್ತ ನಡೆದರು.

× × ×

ರಾಮಮೂರ್ತಿ, ಮೀನಾಕ್ಷಿ, ಇಬ್ಬರೂ ತುಮಕೂರಿಗೆ ಹೊರಟು ನಿಂತರು.

"ಏನು ಅವಸರ ರಾಮು, ಇನ್ನೆರಡು ದಿನ ಬಿಟ್ಕೊಂಡು ಹೋದ್ರೆ ಆಗದೇ? ಇಷ್ಟೆಲ್ಲ ನಡೆಸಿಕೊಟ್ಟಿದೀ ಸುಧಾ ಜೀವನ ಬಂಗಾರವಾಗೋ ಹಾಗೆ ಮಾಡಿದೀ" ವಾಸುದೇವಯ್ಯ ಬಲವಂತ ಮಾಡಿದರು.

"ಇಲ್ಲ ಮಾವ...ಊರು ಬಿಟ್ಟು ತಿಂಗಳಾಗ್ತಾ ಬಂತು...ನಾಳೆ ನಾವು ಹೊರಡ್ತೀವಿ...ಬಂದ ಕೆಲ್ಸ ಆಯ್ತಲ್ಲ...ಕಿಟ್ಟು ಸಹ ಮೊನ್ನೇನೇ ಹೊರಟುಬಿಟ್ಟ. ಅವನೂ ದೊಡ್ಡ ಮನಸ್ಸು ಮಾಡ್ದ...ನಾನೇ ಮುಂದಿನ ವಿಷಯಾನ ಅವರ ಮನೇಲಿ ಮಾತಾಡಿ ಲಗ್ನ ಪತ್ರಿಕೆ ಯಾವಾಗ ಆಗ್ಬೇಕು ಅನ್ನೋ ವಿಚಾರಕ್ಕೆ ಪತ್ರ ಬರೀತೀನಿ."

ಮೀನಾಕ್ಷಿ ಗೌರಮ್ಮನೆದುರಿಗೆ ತನ್ನ ಬೇಡಿಕೆಯನ್ನಿಟ್ಟಳು.

"ಅಮ್ಮಾ...ಕಿಟ್ಟೂ ಮನೇಲಿ ಸುಧಾನ್ನ ನೋಡ್ತಾರೆ...ಅವಳನ್ನೂ ಜೊತೆಗೆ ಕಳಿಸು. ನಂಗೂ ಬೇಜಾರು ಕಳೆಯುತ್ತೆ ಒಂದೆರಡು ದಿನ"

ಗೌರಮ್ಮನವರ ಮುಖಾಂತರ ವಾಸುದೇವಯ್ಯನವರಿಗೂ ಈ ಕೋರಿಕೆ ತಲುಪಿ, ಅವರೂ 'ಅಸ್ತು' ಎನ್ನಬೇಕಾಯಿತು.



ಅಕ್ಕ ಭಾವನೊಡನೆ ಸುಧಾ ತುಮಕೂರಿಗೆ ಹೊರಟು ಹೋದಳು...ಅವರೆಲ್ಲರನ್ನೂ ಬಸ್‌ಸ್ಟಾಂಡಿನಲ್ಲಿ ಬೀಳ್ಕೊಡಲು ಹೋಗಿದ್ದ ನರಹರಿ, ವಾಸುದೇವಯ್ಯ ಇಬ್ಬರೂ ಹೋಗಿದ್ದವರು ಮನೆಗೆ ಹಿಂದಿರುಗಿದಾಗ ಹಜಾರದಲ್ಲಿದ್ದ ಕುರ್ಚಿಯ ಮೇಲೆ ಕುಳಿತ ಗುಂಡೂರಾಯರು ಅವರ ಕಣ್ಣಿಗೆ ಬಿದ್ದರು.

ಗುಂಡೂರಾಯರನ್ನು ಕಂಡೊಡನೆಯೇ, ವಾಸುದೇವಯ್ಯನವರಿಗೆ ಯಾವುದೋ ಅಪಶಕುನವನ್ನು ಕಂಡಷ್ಟು ಹಳಹಳಿಯಾಯಿತು. ನರಹರಿಯೂ ಯಾವ ಮಾತನ್ನೂ ಆಡದೆ ಒಳ ಮನೆಯನ್ನು ದಾಟಿದ. ವಾಸುದೇವಯ್ಯನವರಿಗೆ ಸಂದಿಗ್ಧಕ್ಕಿಟ್ಟಿತು ಏನು ಮಾಡಬೇಕೆಂದು ಯೋಚಿಸುತ್ತಾ ಒಳಕ್ಕೆ ಬಂದ ಅವರನ್ನು ಕಂಡಕೂಡಲೇ ರಾಯರೇ ಮೇಲೆದ್ದು ನಿಂತು

"ವಾಸೂ...ಎಲ್ರೂ ಸೌಖ್ಯವೇನಪ್ಪ?" ಎಂದರು.

ವಾಸುದೇವಯ್ಯನಿಗೆ ನಾಚಿಕೆಯಾದಂತಾಯಿತು. ಛೆ...ಗುಂಡೂರಾಯ ಪಾಪ...ಸಂದರ್ಭವಶಾತ್ ತನ್ನ ಮಗಳ ಬಗ್ಗೆ ನಿಷ್ಠುರನಾಗಿಯೇ ನಡೆದುಕೊಂಡಿರಬಹುದು...ಆದಾಕ್ಷಣ, ಶಿಷ್ಟಾಚಾರವನ್ನು ತಾನೇಕೆ ಬಿಡಬೇಕು? ಹೇಗೂ ಆತ ಈಗ ತಾನಾಗಿಯೇ ಇಲ್ಲಿಗೆ ಅತಿಥಿಯಾಗಿ ಬಂದಿದ್ದಾನೆ...ಆತನನ್ನು ವಿಶ್ವಾಸದಿಂದ ಮಾತನಾಡಿಸಿದಲ್ಲಿ ಯಾವ ಹಾನಿಯೂ ಇಲ್ಲವಲ್ಲ.

"ಓಹೋ...ಗುಂಡಾ...ಯಾವಾಗ್ಬಂದೆ? ಎಲ್ರೂ ಸೌಖ್ಯವೆ? ಏನು ಹೀಗೆ ಅಪರೂಪಕ್ಕೆ ಬಂದ್ಬಿಟ್ಟೆ? ಕಮಲಮ್ಮನನ್ನು ಕರ್ಕೊಂಡು ಬರ್ಲಿಲ್ವೆ?"

ಗುಂಡೂರಾಯರಿಗೆ ವಾಸುದೇವಯ್ಯನ ಪ್ರಶ್ನೆಗಳಿಂದ ಸಮಾಧಾನವಾಯಿತು. ಆ ಮನೆಗೆ ಬಂದಾಗಿನಿಂದ ಯಾರೂ ಆತನನ್ನು ಮಾತನಾಡಿಸಿಯೇ ಇರಲಿಲ್ಲ. ಗೌರಮ್ಮ ಅವರನ್ನು ಕುರ್ಚಿಯಲ್ಲಿ ಕೂಡ ಹೇಳಿ ಅಡಿಗೆ ಮನೆ ಸೇರಿದ್ದರು. ರಾಯರು ಮೂಕರಂತೆ ಕುರ್ಚಿಯಲ್ಲೇ ಆದುವರೆಗೂ ಕೂಡಬೇಕಾಯಿತು.

ಗೆಳೆಯರಿಬ್ಬರೂ ನಾನಾ ವಿಷಯಗಳ ಬಗ್ಗೆ ಮಾತನಾಡತೊಡಗಿದರು...ಅಷ್ಟರಲ್ಲಿ ಗೌರಮ್ಮ ಚೌಚೌಭಾತ್, ಬೋಂಡಾಗಳ ಪ್ಲೇಟನ್ನು ರಾಯರೆದುರಿಗಿಟ್ಟರು.

"ಯಾಕೆ ವಾಸೂ... ನೀ ತಗೋಳೊದಿಲ್ವೆ?"

"ಇಲ್ಲಪ್ಪ...ನಂದು ಈಗ್ತಾನೆ ಆಯ್ತು...ಇವತ್ತು ನನ್ನ ಹಿರೇಮಗಳು ಅಳಿಯ ಊರಿಗ್ಹೋದ್ರು... ಅವರ ಜೊತೇಲೆ ನಾನು ತಗೊಂಡಿದ್ದೆ-ನೀನು ನಿಧಾನವಾಗಿ ತಗೋ" ಎಂದು ಉಪಚಾರ ಹೇಳಿದರು.

ಸುಧಾ ವಿಷಯವನ್ನು ಹೇಗೆ ಆರಂಭಿಸಬೇಕೆಂದು ರಾಯರು ಅಳೆದೂ ಹೊಯ್ದೂ ಮಾಡುತ್ತಿದ್ದರು. ಸುಧಾ ಸಹ ಎಲ್ಲಿಯೂ ಕಾಣುತ್ತಿಲ್ಲ. ಅವಳೂ ಅವಳಕ್ಕನ ಜೊತೆಗೆ ಹೋಗಿರಬಹುದೆ?

"ವಾಸೂ...ಅದೇನು ಇದ್ದಕ್ಕಿದ್ದ ಹಾಗೇ ಸುಧಾ ರಾಜೀನಾಮೆ ಕೊಟ್ಟಳು ಅಂತ ಕೇಳಿದ್ನಲ್ಲ?" ಧೈರ್ಯವಹಿಸಿ ಕೇಳಿಯೇಬಿಟ್ಟರು.

ವಾಸುದೇವಯ್ಯನವರೂ ವಿಚಲಿತರಾದರು.... ಸುಧಾಳನ್ನು ತನ್ನ ಮನೆಯಲ್ಲಿಟ್ಟುಕೊಳ್ಳಲು ತಕರಾರು ಹೂಡಿದ ಈ ಗುಂಡ, ಈಗ ಅವಳ ರಾಜೀನಾಮೆ ಕಟ್ಟಿಕೊಂಡೇನು ಮಾಡಿಯಾನು? ಅವಳ ವಿವಾಹ ನಿಶ್ಚಿತವಾದ ವಿಚಾರವನ್ನು ತಾನೇಕೆ ಇವನಿಗೆ ತಿಳಿಸಬೇಕು?

"ಇನ್ನೇನ್ಮಾಡೋದು ಗುಂಡಾ? ಅಲ್ಲಿ ಅವಳು ಒಂಟಿಯಾಗಿ ಹ್ಯಾಗೆ ಇರ್ತ್ತಾಳೆ? ಏನೋ ಅವತ್ತು ಯಾವ್ದೋ ಆವೇಶದಲ್ಲಿ ಬಾಯಿಗೆ ಬಂದ್ಹಾಗೆ ಬಡಬಡಿಸಿದ್ಲು...ಕೊನೆಗೆ ವಿಧಿಯಿಲ್ದೆ ರಾಜೀನಾಮೆ ಬರೀಲೇಬೇಕಾಯ್ತು."

ಗುಂಡೂರಾಯರು ಮಾತನಾಡಲಿಲ್ಲ...ಅವರಿಗೆ ಮನಸ್ಸಿನಲ್ಲೇ ಅಳುಕಿದಂತಾಯಿತು. ಹೌದು...ತಮ್ಮ ನಿರಾಕರಣೆಯಿಂದಲೇ ಸುಧಾಗೆ ಅಲ್ಲಿ ಸರಿಯಾದ ವಸತಿಯ ಏರ್ಪಾಟಾಗಲಿಲ್ಲ...ಆ ವಿಚಾರವನ್ನು ಅವರು ಅಷ್ಟಕ್ಕೆ ಕೈ ಬಿಟ್ಟರು–ರವಿಯ ವಿವಾಹದ ಪ್ರಸ್ತಾಪವನ್ನು ಎತ್ತುವುದು ಹೇಗೆಂದು ಯೋಚಿಸುತ್ತಾ ಕುಳಿತರು.

ಕೆಲ ಹೊತ್ತಾದ ನಂತರ "ವಾಸೂ...ನಿನ್ಹತ್ರ ಕೆಲವು ಮುಖ್ಯ ವಿಚಾರ ಮಾತಾಡ್ಬೇಕಾಗಿತ್ತು...ಹೀಗೆ ಸ್ವಲ್ಪ ತಿರುಗಾಡಿಕೊಂಡು ಬರೋಣ ನಡೆ...ಹೇಗೂ ನಾನು ಈ ರಾತ್ರಿ ಇಲ್ಲೇ ಹಾಲ್ಟ್ ಮಾಡ್ತೀನಿ...ನಾಳೆ ಬೆಳಗಿನ ಬಸ್‌ಗೆ ಹೋದರಾಯ್ತು" ಎಂದು ಮೇಲೆದ್ದರು. ವಾಸುದೇವಯ್ಯನವರೂ ಮರುಮಾತಿಲ್ಲದೆ ರಾಯರನ್ನು ಹಿಂಬಾಲಿಸಿದರು. ಬೆಟ್ಟದ ದಿಕ್ಕಿಗೆ ಇಬ್ಬರೂ ಹೊರಟು ಕೋಟೆಯ ಬಾಗಿಲ ಬಳಿ ಇರುವ ಕಾಮನ ಬಾವಿಯ ಪಕ್ಕದ ಕಟ್ಟೆಯ ಮೇಲೆ ಕುಳಿತರು. ಗುಂಡೂರಾಯರೇ ಪ್ರಾರಂಭಿಸಿದರು.

"ವಾಸೂ...ನನ್ನಿಂದ ನಿಜವಾಗ಼್ೂ ದೊಡ್ಡ ಅವ

ಚಾರ ಆಗಿದೆ ನಿಂಗೆ...ಅದಕ್ಕಾಗಿ ಮೊದ್ಲು ನಿನ್ನ ಕ್ಷಮೆ ಕೇಳ್ಬೇಕಾಗಿದೆ."

"ಅದೆಲ್ಲ ಇರ್ಲಿ ಬಿಡು ಗುಂಡಾ...ಸ್ನೇಹದಲ್ಲಿ ಅವೆಲ್ಲ ಯಾವ ದೊಡ್ಡ ವಿಚಾರ?"

"ನಿಜ ವಾಸೂ...ಸ್ನೇಹ ಅನ್ನೋದು ತುಂಬ ದೊಡ್ಡ ವಸ್ತು...ಅದ್ರೆ ನಾನು ಆ ಸ್ನೇಹ ಧರ್ಮಕ್ಕೆ ಸ್ವಲ್ಪಾನೂ ಬೆಲೆ ಕೊಡ್ದೇ, ಬರೀ ನನ್ನ ಸ್ವಂತ ಪ್ರತಿಷ್ಠೇನೆ ದೊಡ್ಡದು ಮಾಡ್ಕೊಂಬಿಟ್ಟೆ...ಅದನ್ನು ನೀನು ಕ್ಷಮಿಸಲೇಬೇಕು...ನಾನೀಗ ನಿನ್ನತ್ರ ಬಂದಿರೋದು ಕನ್ಯಾರ್ಥಿಯಾಗಿ"

ವಾಸುದೇವಯ್ಯ ದಿಗ್ಭ್ರಾಂತರಾದರು! "ಏನಂದೆ? ಸುಧಾನ ರವೀಗೆ ಕೇಳೋದಕ್ಕೆ ಬಂದ್ಯಾ ಗುಂಡಾ ಬೇಡ—ಈ ಪ್ರಸ್ತಾಪ ದಯವಿಟ್ಟು ಇಲ್ಲಿಗೇ ನಿಲ್ಲಿಸು.... ನಾನು ಅವತ್ತು ದೇವಪುರದ ಬೀದಿ ಬೀದೀಲಿ ನಾಯಿ ಅಲೆದ ಹಾಗೆ ಅಲೀಬೇಕಾಗಿ ಬಂತು...ಯಾವನೋ ಒಬ್ಬ ಅನಾಮಧೇಯನೆದುರು ಮಂಡಿ ಊರಿ, ನನ್ನ ಮಗಳನ್ನು ಮದುವೆಯಾಗು ಅಂತ ಬೇಡೋ ಅವಸ್ಥೆ ಬಂತು ನಂಗೆ...ಇವ್ಟೆಲ್ಲ ಇಟ್ಕೊಂಡು ನೀನು ಸುಧಾನ್ನ ಕೇಳೋದಕ್ಕೆ ಹ್ಯಾಗೆ ಬಂದೆ? ದಯವಿಟ್ಟು ಈ ವಿಚಾರ ಇಲ್ಲಿಗೇ ಮುಗಿಸಿಬಿಡು ಗುಂಡಾ"

ರಾಯರಿಗೆ ದಿಕ್ಕು ತೋಚದಂತಾಯಿದು. "ವಾಸೂ...ನನ್ನಿಂದ ನಿಂಗೆ ಆಗ ಏನೇನೋ ಆಗಬಾರದ್ದೆಲ್ಲ ಆಗ್ಹೋಯ್ತು...ಅದಕ್ಕ ನಾನೊಬ್ನೇ ಕಾರಣ ಅಲ್ಲ...ಸುಧಾ ನೇರವಾಗಿ ನನ್ಮನೇಗೆ ಬಂದಿದ್ರೆ ಹಾಗೆಲ್ಲ ಆಗ್ತಾನೇ ಇರ್ಲಿಲ್ಲ...ಅವಳೇ ಏನೇನೋ ಕಾರುಬಾರು ಮಾಡಿದ್ದಕ್ಕೆ ತಾನೇ ನಾನೂ ಹಾಗೆ ಮಾಡಬೇಕಾಯ್ತು. ಈಗ ನಾನು ಸುಧಾ ಹೇಗಿದ್ರೂ ಸರೀನೇ...ಸ್ನೇಹಿತನ ಮಗಳು ಅಂತ ತಿಳಿದು ನನ್ಸೊಸೆಯಾಗ್ಮಿ ಮಾಡ್ಕೊಳ್ಳೋಕೆ ಬಂದಿದೀನಿ...ನನ್ನ ಕೋರಿಕೇನ ತಳ್ಳಿ ಹಾಕೋದಕ್ಕೆ ಮುಂಚೆ ನಾನಾಗಿ ನಿನ್ನ ಮನೇ ಬಾಗ್ಲಿಗೆ ಬಂದಿದೀನಿ ಅನ್ನೋ ಅಂಶ ಮರೀಬ್ಯಾಡಾ."

"ಹಾಗಲ್ಲ ಗುಂಡ...ನೀನು ನನ್ನ ಮಗಳ ಬಗ್ಗೆ ಅಥವಾ ನನ್ನ ಬಗ್ಗೆ ಯಾವ ಅನುಕಂಪಾನೂ ಇಟ್ಕೋಬೇಕಾಗಿಲ್ಲ...ಆಗ ನಿನ್ನ ಕಣ್ಗೆ ನೀತಿಗೆಟ್ಟೋಳಾಗಿದ್ದ ಸುಧಾ ಈಗ ಯಾಕೆ ಬೇಕಾದಳು? ಸಲ್ಪ ಹೇಳ್ತೀಯಾ ನೋಡೋಣ?"

ಇಬ್ಬರು ಗೆಳೆಯರೂ ಪರಸ್ಪರ ಶ್ರೇಷ್ಠತೆಗಳನ್ನ ಸ್ಥಾಪಿಸುತ್ತಲೇ ಹೋದರು. ವಾಸುದೇವಯ್ಯ ಸುಧಾಳ ವಿವಾಹದ ಬಗ್ಗೆ ನಿಶ್ಚಿಂತರಾಗಿದ್ದುದರಿಂದ ಗುಂಡೂರಾಯರಿಗೆ ನಕಾರಾತ್ಮಕ ಉತ್ತರ ಕೊಡುವುದು ಖಚಿತವಾಗಿತ್ತು. ಆದರೆ, ಕೃಷ್ಣಸ್ವಾಮಿಯು ತನ್ನ ಮಗಳನ್ನು ಒಪ್ಪಿಕೊಂಡಿರುವ ವಿಷಯವನ್ನು ರಾಯರಿಗೇಕೆ ತಿಳಿಸಬೇಕು? ಈ ವಕೀಲ ಸಾಮಾನ್ಯನಲ್ಲ...ಇಲ್ಲದ್ದೊಂದು ಅಪಪ್ರಚಾರ ಮಾಡಿ ವಿವಾಹಕ್ಕೆ ವಿಘ್ನ ತಂದಾನು-ಮುಂತಾಗಿ ವಾಸುದೇವಯ್ಯ ಯೋಚಿಸುತ್ತಿದ್ದರು.

ಇದಕ್ಕೆ ತದ್ವಿರುದ್ಧವಾಗಿ ರಾಯರು ಸುಧಾಳ ಚಾರಿತ್ರ್ಯ, ಕಳಂಕರಹಿತ ಎಂಬ ಅಂಶ ವಿಜಯನ ದಿನಚರಿಯಿಂದ ತಮಗೆ ಸ್ಪಷ್ಟವಾದ ವಿಷಯವನ್ನು ವಾಸುವಿನಿಂದ ಮುಚ್ಚಿಡಲು ಬಯಸಿದರು. ತನ್ನ ಮಗಳು ಕಲಂಕಿನಿ ಎಂಬ ಅವಗುಣವನ್ನು ಹೊತ್ತಿದ್ದರೆ ಮಾತ್ರ ವಾಸು ತಮ್ಮ ಬೇಡಿಕೆಗೆ ಸೊಪ್ಪು ಹಾಕುತ್ತಾನೆ ಎಂಬ ಯೋಚನೆ ಆ ವಕೀಲರದು.

"ವಾಸೂ...ಈಗ ನೀನೇನಾದ್ರೂ ನನ್ನ ಕೋರಿಕೆ ನಡೆಸದೇ ಇದ್ರೆ ಮುಂದೆ ಅವಳನ್ನು ಯಾರೂ



ಒಪ್ಪೋದಿಲ್ಲ...ಚೆನ್ನಾಗಿ ಯೋಚ್ನೆ ಮಾಡು...ರವೀನೂ ದೊಡ್ಡ ಮನಸ್ಸು ಮಾಡಿ ಒಪ್ಪಿದಾನೆ...ನೀನು ಒಂದೇ ಮನಸ್ನಿಂದ 'ಹೂ' ಅನ್ನು"

"ಇದೇನು ಗುಂಡಾ ಹೀಗ್ಹೇಳ್ತಿ? ನಿನ್ನ ಮಾತ್ನಲ್ಲಿ ನನ್ನನ್ನು ಹೆದರಿಸೋ ಪ್ರಯತ್ನ ಕಾಣ್ತಾ ಇದೆ... ಅದೆಲ್ಲ ಮರ್ತುಬಿಡು...ಅವರವರ ಕಂಕಣಬಲ ಎಲ್ಲಿರುತ್ತೋ ಅಲ್ಲಿ ಅವರ ಮದುವೆ ಆಗುತ್ತೆ...ನಾನಂತೂ ರವೀಗೆ ಸುಧಾ ಕೊಡೋ ವಿಚಾರಾನೇ ಬಿಟ್ಟದೀನಿ. ಅದರ ಬಗ್ಗೆ ಬೇರೆ ಮಾತಿಗೆ ಅವಕಾಶವೇ ಇಲ್ಲ"

"ಹಂಗಾದ್ರೆ ಇದೇ ಕೊನೇ ಮಾತೋ?"

"ಹೌದು ಗುಂಡಾ...ಇದೇ ತೀರ್ಮಾನ...ನೀನು ಅದೊಂದು ವಿಚಾರಾನ ಮರೆತುಬಿಡು."

"ಸರಿ ವಾಸೂ...ಹಾಗಿದ್ರೆ...ನನ್ನ ನಿನ್ನ ಸ್ನೇಹ ಇವತ್ತೀಗೇ ಬಗೇಹರೀತು. ಇದೇ ಮಾತು ಸೆರಗೀಗೆ ಗಂಟು ಹಾಕ್ಕೋ...ಇನ್ನೊಂದು ತಿಂಗ್ಳಲ್ಲೇ ನಮ್ಮ ರವಿಗೆ ಮದುವೆ ಮುಗಿಸ್ತೀನಿ...ಆದ್ರೆ...ಆ ಸುಧಾ ಮದುವೇನ ಈ ಜನ್ಮದಲ್ಲೇ ಆಗದ ಹಾಗೂ ಮಾಡಬಲ್ಲೆ... ಬರ್‍ತೀನಿ..."

ಗುಂಡೂರಾಯರು ವಾಸುದೇವಯ್ಯನವರ ಉತ್ತರಕ್ಕಾಗಿ ಕಾಯದೆ ಅಲ್ಲಿಂದೆದ್ದು ಧಡ ಧಡನೆಹೊರಟು ಹೋದರು. ವಾಸುದೇವಯ್ಯನೂ ಎದ್ದು ನಿಧಾನವಾದ ಹೆಜ್ಜೆಗಳೊಂದಿಗೆ ಮನೆಗೆ ಬಂದುಸೇರಿದರು. ಗುಂಡೂರಾಯ ಹೇಳಿದ ಕೊನೆಯ ಮಾತುಗಳು ಅವರ ಚಿತ್ತಸ್ವಾಸ್ಥ್ಯವನ್ನೇ ಕೆಡಿಸಿದ್ದವು...ಆದಷ್ಟು ಬೇಗ ಸುಧಾಳ ಲಗ್ನಪತ್ರಿಕೆ ಮುಗಿಸಿ ಮದುವೆಯನ್ನೂ ...ತು ಎನ್ನಿಸಿಬಿಡಬೇಕೆಂದುಕೊಂಡರು. ಮನೆಯಲ್ಲಿ ಯಾರೊಡನೆಯೂ ತಮ್ಮ ಜೊತೆಗೆ ಗುಂಡೂರಾಯರು ನಡೆಸಿದ ಸಂಭಾಷಣೆಯ ವಿಷಯವಾಗಿ ಏನೊಂದೂ ಹೇಳದೆ, ಆ ರಾತ್ರಿಯೇ ಅಳಿಯನಿಗೆ ಸುದೀರ್ಘವಾದ ಪತ್ರವೊಂದನ್ನು ಬರೆದು, ಸುಧಾಳ ಲಗ್ನಪತ್ರಿಕೆ ಶಾಸ್ತ್ರವನ್ನು ಬೇಗ ಮುಗಿಸಿ ಆದಷ್ಟು ಜಾಗ್ರತೆ ಮದುವೆ ನೆರವೇರುವಂತೆ ಪ್ರಯತ್ನಿಸಬೇಕೆಂದು ರಾಮಮೂರ್ತಿಯಲ್ಲಿ ಕಳಕಳಿಯಿಂದ ಬಿನ್ನಯಿಸಿಕೊಂಡರು. ಆದರೆ ಗುಂಡೂರಾಯರ ಆಗಮನದ ಬಗ್ಗೆ 'ಚ'ಕಾರವನ್ನೂ ಆ ಪತ್ರದಲ್ಲಿ ಅವರು ಬರೆಯಲಿಲ್ಲ.

× × ×

ರಾತ್ರಿ ಏಳು ಗಂಟೆಯಾಗಿತ್ತು...ರವಿ ಉಲ್ಲಾಸದಿಂದ ಯಾವುದೋ ಚಿತ್ರಗೀತೆಯನ್ನು ಗುರುಗುತ್ತಾ ಮನೆಯಲ್ಲಿ ಹೆಜ್ಜೆ ಇರಿಸಿದಾಗ ಹಜಾರದಲ್ಲಿ ಕುರ್ಚಿಯ ಮೇಲೆ ಕುಳಿತ ರಾಯರನ್ನು ಕಂಡು ಅಪ್ರತಿಭನಾದ. ಹೋದ ಕೆಲಸ ಇಷ್ಟು ಬೇಗ ನೆರವೇರಿತಲ್ಲ ಎಂಬ ಹರ್ಷದ ಎಳೆ ಅವನ ಮುಖದಲ್ಲಿ ಕಂಡಿತಾದರೂ ತಂದೆಯ ಮುಖ ದುಮುದುಮಿಸುವುದನ್ನು ಗಮನಿಸಿದಾಗ ಆತಂಕವಾಯಿತು. ಇಬ್ಬಗೆಯ ಭಾವನೆಗಳ ಮೇಲೆ ಮುಸುಕೆಳೆದು ರಾಯರನ್ನು ಕೇಳಿದ.

"ಯಾವಾಗ ಬಂದ್ರಿ ಅಪ್ಪಾ?"

ಗುಂಡೂರಾಯರು ಮಾತನಾಡಲಿಲ್ಲ. ಸುಮ್ಮನೇ ಮಗನ ಕಡೆ ಒಂದು ಹರಿತವಾದ ನೋಟ ಬೀರಿದರು. ಹೋದ ಕೆಲಸ ಯಶಸ್ವಿಯಾಗಲಿಲ್ಲವೆಂಬುದನ್ನು ರವಿಯೇ ಊಹಿಸಿದ. ಏಕೆ? ಅಂತಹ ಪ್ರಬಲ ಕಾರಣವೇನು? ... ನಾಮಗೂ ಆ ಕಾರಣಕ್ಕೂ ಏನು

ದರೂ ಸೂಕ್ತ ಸಂಬಂಧವಿದೆಯೆ? ತಂದೆಯನ್ನು ಮತ್ತೆ ಕೇಳುವ ಮನಸ್ಸಾಗಲಿಲ್ಲ.

"ಆ ಹಾಳು ಸುಧಾನ ಮರ್ತುಬಿಡೋ ರವಿ" ತಂದೆಯು ಇದ್ದಕ್ಕಿದ್ದ ಹಾಗೇ ಆಸ್ಫೋಟಿಸಿದ ಮಾತನ್ನು ಕೇಳಿದಾಗ ರವಿ ಬೆಚ್ಚಿದ. ತಂದೆಯ ಮುಖವನ್ನು ನೋಡಲೂ ಅವನಿಂದ ಕೆಲ ಹೊತ್ತು ಸಾಧ್ಯವಾಗಲಿಲ್ಲ.

"ಇಲ್ನೋಡು ರವಿ...ನಾನು...ನಿಮ್ಮಪ್ಪ, ನಿಂಗ ಹೇಳ್ತಾ ಇದೀನಿ...ನಿಂಗೆ ಹೆಣ್ಣು ಕೊಡೋರು ಸಾಲಾಗಿ ನಿಂತಿದಾರೆ...ಆ ದಾವಣಗೆರೆ ವಕೀಲ ರಾಮರಾಯ ಅಡ್ಡ ಬಿದ್ದು ನಿಂಗೆ ಮಗಳನ್ನು ಕೊಡೋಕೆ ರೆಡಿಯಾಗಿದಾನೆ. ಅಥ್ವಾ ನಿಂಗೆ ಆ ಹೆಣ್ಣು ಬ್ಯಾಡಾಂದ್ರೆ ಬೇರೆ ಯಾವ್ದಾದ್ರೂ ಸರಿ...ನಾಳೆಯಿಂದ್ಲೇ ಪ್ರಯತ್ನ ಮಾಡಿ ಇವತ್ತಿಗೆ ತಿಂಗಳಲ್ಲಿ ನಿನ್ನ ಮದುವೆ ಮುಗೀಬೇಕು....ನನ್ನ ಮನೇಗೆ ಸೊಸೆ ಬರಬೇಕು...ಅಲ್ಲೀವರ್ಗೂ ಸಮಾಧಾನವಿಲ್ಲ...ಏನು ಹೇಳ್ತಿ ನೀನು?"

"ಯಾಕಪ್ಪಾ ವಾಸುದೇವಯ್ಯ ಊರಲ್ಲಿ..."

"ಸಾಕು ನಿಲ್ಸೋ ಆ ವಾಸುದೇವಯ್ಯನ ಸುದ್ದಿ! ಅವನು ನೆಗೆದುಬಿದ್ದ ನನ್ನ ಪಾಲಿಗೆ! ಶುದ್ಧ ಕಂತ್ರಿ ಜನ! ಇಷ್ಟಿದ್ರೂ ನಿಂಗೆ ಅದೇ ಕೆಟ್ಟ ಹುಡುಗೀನೇ ಬೇಕೂ ಅನ್ನೋ ಹಾಗಿದ್ರೆ ಈಗ್ಲೇ ಹೊರಟುಬಿಡು...ನಂಗೂ ನಿಂಗೂ ಯಾವ ಸಂಬಂಧಾನೂ ಇಲ್ಲ ಅಂದ್ಕೊಂಡು ಹಾಯಾಗಿರ್ತೀನಿ."

ತಂದೆ–ಮಕ್ಕಳಲ್ಲಿ ವಾಗ್ವಾದ ಬಿರುಸಾಗಿ ನಡೆದಿರಬಹುದೆಂದೆಣಿಸಿ ಕಮಲಮ್ಮನವರೂ ಅಡಿಗೆ ಮನೆಯಿಂದ ಹೊರಬಂದರು.

"ಯಾಕೋ ರವಿ? ನಿಮ್ಮಪ್ಪ ಹೇಳೋ ಮಾತಾದ್ರೂ ಕೇಳೋ... ನಮ್ಮ ಮಾನ ಮರ್ಯಾದೆಗಳ ಕಡೇನೂ ಸ್ವಲ್ಪ ನಿಗಾ ಇಡಪ್ಪ...ಯಾಕಿಷ್ಟು ಹಟ ಮಾಡ್ತಾ ಇದೀ" ಎಂದರು.

ರವಿಗೆ ಸಂದಿಗ್ಧಕ್ಕಿಟ್ಟಿತು. ಅಪ್ಪ ಅಮ್ಮ ತನ್ನನ್ನು ಯಾಕೆ ಹೀಗೆ ಪೀಡಿಸುತ್ತಿದ್ದಾರೋ ಅರ್ಥವಾಗಲಿಲ್ಲ...ಹೋಗಲಿ ಅಲ್ಲಿ ನಡೆದ ವಿಷಯವನ್ನಾದರೂ ಹೇಳಬಾರದೆ?

"ಅಪ್ಪಾ...ನೀವು ಯಾಕಿಷ್ಟು ಉದ್ವೇಗಪಡ್ತಾ ಇದೀರೋ ನಂಗಂತೂ ಅರ್ಥವಾಗ್ತಾ ಇಲ್ಲ...ಅಲ್ಲಿ ಏನೇನು ನಡೀತು ಅದನ್ನಾದ್ರೂ ಹೇಳ್ಬಾರ್ದೆ? ಈಗ ನಾನೇನು ನಿಮ್ಮನ್ನೆಲ್ಲ ಬಿಟ್ಟು ಓಡಿ ಹೋಗ್ತಾ ಇಲ್ವಲ್ಲ!"

ರಾಯರ ಉದ್ವೇಗ ಸ್ವಲ್ಪ ಮಟ್ಟಿಗೆ ಇಳಿಯಿತು. ಹೌದು...ತಾವು ಇನ್ನೂ ಯಾವ ವಿಷಯವನ್ನೂ ರವಿಗೆ ಹೇಳಿಯೇ ಇಲ್ಲ–ಸುಮ್ಮನೇ ಆವೇಗ ವಶರಾಗಿ ಕೂಗುತ್ತಿದ್ದಾರೆ.

"ಹೌದು ರವೀ...ನಿಂಗೆ ಅಲ್ಲಿ ನಡೆದಿದ್ದನ್ನು ಹೇಳ್ಲೇ ಇಲ್ಲ...ಬಾ...ಕೂತ್ಕೋ ಹೇಳ್ತೀನಿ"

ಚಿತ್ರದುರ್ಗದಲ್ಲಿ ತಮಗೆ ದೊರೆತ ಕಳಪೆ ಸ್ವಾಗತದಿಂದ ಆರಂಭಿಸಿ ಎಲ್ಲವನ್ನೂ ರಸವತ್ತಾಗಿ ಮಗನಿಗೆ ವಿವರಿಸಿದರು. ವಕೀಲರಾದ ರಾಯರು ಯಾವ ರೀತಿಯ ನಿರೂಪಣೆ ಉಚಿತ ಎಂಬುದನ್ನು ಚೆನ್ನಾಗಿ ಬಲ್ಲವರೇ ಆಗಿದ್ದರು.

ರವಿ ಒಮ್ಮೆ ದೀರ್ಘವಾಗಿ ನಿಡುಸುಯ್ದು "ಓಹೋ ಹೀಗೋ ಸಮಾಚಾರ? ವಾಸುದೇವಯ್ಯಂಗೆ ಇಷ್ಟ ಇಲ್ದಿದ್ರೆ ನಂಗೇನೂ ಅಂಥ ಅನಿವಾರ್ಯವಿಲ್ಲ ಅವಳನ್ನು ಮದುವೆಯಾಗೋದು..." ಎಂದ.

ರಾಯರಿಗೆ ಅಪಾರ ಹರ್ಷವಾಯಿತು. "ಭೇಷ್ ...ರವಿ...ಆದ್ರೆ...ನಾಳೆಯಿಂದ್ಲೇ ನಾನು ನಿನ್ನ ಮದುವೇಗೆ ಪ್ರಯತ್ನ ನಡೆಸ್ತೀನಿ. ನೀನು ಆದಷ್ಟು ಬೇಗ ಯಾರನ್ನಾದ್ರೂ ಒಪ್ಪಿ ರೆಡಿಯಾಗು... ಆಯ್ತಾ?" ಎಂದರು.

"ಏಳಿ ಊಟಕ್ಕೆ...ಹೊತ್ತಾಯ್ತು" ಎಂದು ಕಮಲಮ್ಮ ಇಬ್ಬರನ್ನೂ ಎಚ್ಚರಿಸಿದರು.

ಊಟ ಮಾಡಿ ಮಲಗಿದ ರವಿಗೆ ನಿದ್ದೆ ಬರಲಿಲ್ಲ... "ಎಲಾ ಹಾಳು ನನ್ನ ಮನಸ್ಸೇ" ಎಂದುಕೊಂಡ. ಸುಧಾ ತನ್ನ ಮನೆಯಲ್ಲಿಯೇ ವಾಸ ಮಾಡಲು ಬರುತ್ತಾಳೆಂಬ ಸುದ್ದಿ ಕೇಳಿದಾಗಲೇ ತಾನು ಅವಳ ಬಗ್ಗೆ ಯಾವುದೋ ಹೇಳಲಾರದ ಆಕರ್ಷಣೆಗೆ ಒಳಗಾಗಿದ್ದ. ವಿಜಯನ ಜೊತೆಗೆ ಅವಳಿರುವುದನ್ನು ಕಂಡಾಗ ಎಂಥದೋ ಮಾತ್ಸರ್ಯ ಒಳಗುದಿ ಆರಂಭವಾಗಿದ್ದವು. ವಿಜಯ ರಜೆ ಪಡೆದು ಹೊರಟ ನಂತರ ಸುಧಾಳ ಒಂಟಿ ಬಾಳಿನ ದುರುಪಯೋಗ ಮಾಡಿಕೊಳ್ಳಲು ಹವಣಿಸಿದ. ಸುಧಾ–ಎಂದರೆ ಒಬ್ಬ ಆಕರ್ಷಕ ಯುವತಿ. ಅವಳನ್ನು ಸಂಪರ್ಕಿಸುವುದೊಂದೇ ತನ್ನ ಧ್ಯೇಯವಾಗಿತ್ತು. ಅದನ್ನೂ ಯಶಸ್ವಿಯಾಗಿ ಮಾಡಿ ಮುಗಿಸಿದಾಗ ಎಂಥದೋ ಒಂದು ರಾಕ್ಷಸೀ ತೃಪ್ತಿಯನ್ನನುಭವಿಸಿದ್ದ. ಅಲ್ಲಿಯುವರೆಗೂ ಅವಳೊಡನೆ ವಿವಾಹವಾಗುವ ಬಗ್ಗೆ ಕನಸಿನಲ್ಲಿಯೂ ಯೋಚಿಸಿರಲಿಲ್ಲ.

ಆದರೆ...ಇದೀಗ ವಾಸುದೇವಯ್ಯನ ಧಿಮಾಕಿನ ಮಾತುಗಳಿಂದ ಮತ್ತೆ ತನ್ನಲ್ಲಿ ಎಂಥದೋ ರೋಷ ಉಕ್ಕುತ್ತಿದೆ! ಇವನ ಮಗಳು ಎಂತಹ ಶೀಲವತಿ? ಅವಳ ಶೀಲವನ್ನು ತಾನೇ ಕೆಡಿಸಿದ್ದ...ಈ ಜಾರಿದ ಹೆಣ್ಣು, ನಾಯಿ ಬಂದು ಮುಟ್ಟಿದ ಮಡಕೆಯನ್ನು ತನಗೆ ಕೊಡಲು ವಾಸುದೇವಯ್ಯ ನಿರಾಕರಿಸಿದ. ಇರಲಿ...ಅವನು ಸುಧಾಳ ಮದುವೆಯನ್ನು ಹೇಗೆ ಮಾಡುತ್ತಾನೋ ನೋಡುವ...ಅಥವಾ...

ಯೋಚಿಸುತ್ತಾ ಯೋಚಿಸುತ್ತಾ ರವಿಗೆ ಏನೋ ಹೊಳೆದಂತಾಯ್ತು. ಹೌದು...ಅದೇ ಸರಿ...ಸುಧಾಳನ್ನು ಯಾವನೋ ವರ ಮದುವೆಯಾಗಲು ಒಪ್ಪಿದ್ದಾನೆ. ಅದಕ್ಕಾಗಿಯೇ ಆ ರಾತ್ರಿ ತುರ್ತಾಗಿ ಬಂದು ಆ ವಾಸುದೇವಯ್ಯ ಅವಳನ್ನು ಕರೆದೊಯ್ದ...ಗಂಡು, ಹುಡುಗಿಯನ್ನು ನೋಡಿ ಒಪ್ಪಿರಬಹುದು. ಹಾಗೆಂದೇ ಇಷ್ಟೊಂದು ಪೊಗರು ಮಾತುಗಳಿರಬೇಕು...ರಾಜೀನಾಮೆಯನ್ನೂ ಅದಕ್ಕಾಗಿಯೇ ನೀಡಿದ್ದಾಳೆ...ಆದರೆ ಅಪ್ಪ ಯಾಕೆ ಈ ವಿಷಯವನ್ನು ತನಗೆ ಹೇಳಲಿಲ್ಲ? ಅಥವಾ ಅಪ್ಪನಿಗೆ ಈ ವಿಚಾರ ಗೊತ್ತಿಲ್ಲವೆ? ಹೇಗೆ ಸಾಧ್ಯ?

ರವಿಯ ಮನಸ್ಸು ಸಿಕ್ಕಾಪಟ್ಟೆ ಯೋಚಿಸತೊಡಗಿತು. ಸುಧಾಳನ್ನು ಮೊಟ್ಟ ಮೊದಲು ರುಚಿ ನೋಡಿ ಬಿಟ್ಟ ಭೂಪತಿ ತಾನು...ಅವಳು ಯಾವನನ್ನಾದರೂ ಮದುವೆಯಾಗಲಿ, ತಾನು ಎಸಗಿದ ಕಾರ್ಯವನ್ನೇ ಅಳಿಸಿ ಹಾಕಲು ಅವನಿಗಾಗಲೀ ಇವಳಿಗಾಗಲೀ ಸಾಧ್ಯವಿಲ್ಲವಲ್ಲ...ಆದರೆ ಈ ವಿಚಾರ ಗೊತ್ತಿರುವುದು ತಮ್ಮಿಬ್ಬರಿಗೇ...ಇದನ್ನು ಜಾಹೀರುಪಡಿಸುವ ಬಗೆ ಹೇಗೆ? ಸುಧಾ ತನ್ನಿಂದ ಶೀಲಭ್ರಷ್ಟಳಾಗಿದ್ದಾಳೆಂದು ಜಗತ್ತಿಗೆ ತಿಳಿದರೆ ತನಗೆ ಏನೋ ಸಮಾಧಾನ! ಆದರೆ ತಾನೇ ಈ ವಿಚಾರವನ್ನು ಪ್ರಚಾರ ಮಾಡಿದರೆ ಯಾರು ನಂಬುತ್ತಾರೆ? ಕೇವಲ ಎರಡು ದಿನಗಳ ಅನ್ಯೋನ್ಯ ಯಾರ ಕಣ್ಣಿಗೂ ಬೀಳದೆಯೇ ಮುಗಿದು ಹೋಯಿತು...

ಆದರೆ ತನ್ನ ವಿವಾಹ?...ಹೌದು...ತನಗೀಗ ಅವಳೇ ಬೇಕು ಎಂಬ ಯಾವ ಹಟವೂ ಇಲ್ಲ...ಪ್ರೇಮ ಪ್ರೀತಿ ಥೆ!ಥೆ! ಇವೆಲ್ಲ ತೀರಾ ಅರ್ಥಹೀನ ವಿಚಾರಗಳು! ತನಗೆ ಅವಳಲ್ಲಿ ಯಾವ ಪ್ರೀತಿಯೂ ಇಲ್ಲ...ಬರೀ ಅವಳ ದೈಹಿಕ ಸಂಪರ್ಕವೊಂದೇ ತನಗೆ ಬೇಕಿದ್ದುದು. ಅದನ್ನು ಯಾವ ಹೆಣ್ಣಾದರೂ ಒದಗಿಸುತ್ತಾಳೆ—ನಾಳೆಯೇ ಅಪ್ಪನಿಗೆ ತನ್ನ ನಿರ್ಧಾರ ತಿಳಿಸಬೇಕು...ಅಪ್ಪ ಆರಿಸುವ ಹೆಣ್ಣುಗಳಲ್ಲೇ ಯಾವುದಾದರೊಂದನ್ನು ಆಯ್ಕೆ ಮಾಡಿದರಾಯಿತು. ...ಆದರೆ... ..ಸುಧಾ ವಿವಾಹ ಜರುಗದಂತೆ ಮಾಡುವ ವಿಧಾನ??

ರವಿಗೆ ಈ ಹೊಯ್ದಾಟದಲ್ಲಿ ನಿದ್ರೆ ಯಾವಾಗ ಹತ್ತಿತೋ ತಿಳಿಯಲಿಲ್ಲ.

೧೧

ಗೆಳೆಯರಿಬ್ಬರೂ ಕೆಲವು ನಿಮಿಷ ಪರಸ್ಪರ ಆಲಂಗಿಸಿಕೊಂಡು ಮೌನವಾಗಿ ನಿಂತರು.

"ಏನು ಹೀಗೆ ಇದ್ದಕ್ಕಿದ್ದ ಹಾಗೇ ಬಂದ್ಬಿಟ್ಟೆ?"

"ಹೌದು...ಬಂದಿದೀನಿ...ಏನ್ಮಾಡ್ಲಿ ಹೇಳು? ನೀನು ಯಾವ ಅಂಶ ಗೆದ್ದಿದೀಯೋ, ಅಥವಾ ಗೆದ್ದೆ ಅಂತ ಹೇಳ್ತೀಯೋ ಆ ಅಂಶದಲ್ಲಿ ನಂಗೆ ಮೇಲಿಂದ ಮೇಲೆ ಬರೀ ಸೋಲೇ ಆಗ್ತಾ ಇದೆ"

"ಹಂಗಾದ್ರೆ ನೀನು ಆ ಪ್ರಯೋಗ ಬಿಟ್ಟುಬಿಡು ವಿಜಯ್...ಯಾವುದು ನಿನ್ನಿಂದ ಅಸಾಧ್ಯವೋ ಅದನ್ಯಾಕೆ ಮಾಡೋಕೆ ಹೋಗ್ತೆ?"

"ಉಹುಂ...ಅದು ಮಾತ್ರ ಸಾಧ್ಯವೇ ಇಲ್ಲ ಹಿರಣ್ಮಯಾ...ನನ್ನ ತತ್ವ ಏನೂ ಅಂದ್ರೆ...ಈ ಪ್ರಪಂಚದಲ್ಲಿ ಯಾವ ಕೆಲ್ಸಾನೇ ಆಗ್ಲಿ ಒಬ್ಬ ಮನುಷ್ಯಂಗೆ ಸಾಧ್ಯವಿದೆ ಅಂತಾದ್ರೆ, ಅದಕ್ಕಾಗಿ ಪ್ರಯತ್ನಿಸೋ ಎಲ್ರಿಗೂ ಸಾಧ್ಯವಿದ್ದೇ ಇದೆ ಅಂತ...ನೀನು ನಿರುದ್ವಿಗ್ನನಾಗಿದೀಯ ಅಂದಾಗ ನಾನೂ ಇರ್ಲೇಬೇಕು...ನಿನ್ನ ಪ್ರಯೋಗ ಯಶಸ್ವಿಯಾಯ್ತು. ನಾನು ಪ್ರಯೋಗ ಮಾಡಿ ಅನ್ಯಾಯವಾಗಿ ಒಂದು ಹುಡುಗೀನೇ ಕೊಂದ ಹಾಗಾಯ್ತು...ಪ್ರವೃತ್ತಿಯಿಂದ ಈ ವಿಚಾರ್ದಲ್ಲಿ ಗೆಲವು ಸಿಕ್ಕುತ್ತೆ ಅನ್ನೋ ನಂಬ್ಕೇನೂ ಹೋಗ್ತಾ ಇದೆ ನಂಗೆ"

"ವಿಜಯ್...ಈ ಹೆಣ್ಣು ಗಂಡುಗಳ ವಿಷಯದಲ್ಲಿ ಭಾವೋದ್ವೇಗ ಮೀರಿ ನಿಲ್ಲೋದು ಎಲ್ಲರಿಗೂ ಸಾಧ್ಯವಾಗೋಲ್ಲ ಅಂತ ನಾನು ಈಗ ಎರಡು ವರ್ಷಕ್ಕೆ ಮುಂಚೇನೆ ಹೇಳಿದ್ದೆ...ನೀನು ನನ್ನ ಹೇಳಿಕೇನ ಅಲ್ಲಗಳೆದು ಇನ್ನೂ ಪ್ರಯೋಗ ಮಾಡ್ತಾನೇ ಇದೀಯಾ? ದೇವಪುರದಲ್ಲಿ ಯಾವ್ದಾದ್ರೂ ಪ್ರಯೋಗ ಶುರೂ ಮಾಡಿದೀಯೇನು?"

"ಹೌದು...ಪ್ರಯೋಗ ನಡೆಸೋ ಅವಕಾಶ ತಾನಾಗೇ ಒದಗಿಬಂತು" ಎಂದು ಆರಂಭಿಸಿ ವಿಜಯ ತಾನು ದೇವಪುರಕ್ಕೆ ಹೆಜ್ಜೆ ಇಟ್ಟಾಗಿನಿಂದ ನಡೆದುದೆಲ್ಲವನ್ನೂ ಸಂಪೂರ್ಣವಾಗಿ ವಿವರಿಸಿದನು.

ವಿಜಯ ಹೇಳುವುದನ್ನೇ ಉಸಿರುಹೊಯ್ಯದೆ ಕೇಳುತ್ತಿದ್ದ ಹಿರಣ್ಮಯ ಒಮ್ಮೆ ಗಟ್ಟಿಯಾಗಿ ನಕ್ಕ.

"ವಿಜಯ್...ನಾನೊಂದು ಸಲಹೆ ಕೊಡ್ತೀನಿ..."

"ಏನು ?"

"ಏನೂ ಇಲ್ಲ...ನೀನು ಸುಮ್ನೆ ಆ ಹುಡುಗೀನ ಮದ್ವೆ ಮಾಡ್ಕೋ ಹ್ಯಾಗೂ ತಾನಾಗಿ ಅವಕಾಶ ಬಂದಿದೆ. ಇಲ್ಲದ ಹುಚ್ಚೆಲ್ಲ ತಲೇಗೆ ಯಾಕೆ ಹಚ್ಕೋತೀಯ"

ವಿಜಯನಿಗೆ ಸ್ವಲ್ಪ ಕೆರಳಿದಂತಾಯ್ತು.

"ಹಿರಣ್ಮಯ...ಹಾಸ್ಯ ಮಾಡ್ಬೇಡ...ನೀನೊಬ್ನೇ ಜಿತೇಂದ್ರಿಯ ಅಂತ ತಿಳ್ಕೊಂಡಿದೀಯ? ನಂಗೆ ನಿನ್ಮೇಲೂ ಅನುಮಾನ... ನೀನು ಕಾಮವಶನಾಗಿಲ್ಲ ಅಂತ ನಾ ನಂಬೋದು ಹೇಗೆ? ನಿನ್ನ ಹೇಳಿಕೆ ತಾನೆ?"

"ಹಾಗೇ ತಿಳ್ಕೋ ವಿಜಯ್...ಆದ್ರೆ ನಾನು ನೀನು ಕಂಡ ಹಾಗೇ ಯಾವ ಹೆಂಗಸಿಗೂ ಈ ವರೆಗೂ ಮರುಳಾಗಿಲ್ಲ. ಬರೀ ವಿಚಾರ ಶಕ್ತಿಯಿಂದಲೇ ಈ ಸಂಯಮ ನಂಗೆ ಸಾಧ್ಯವಾಗಿದೆ. ಇದಕ್ಕೆ ರುಜುವಾತನ್ನು ನಾನ್ಹ್ಯಾನೇ ಹೇಗೆ ಕೊಡೋದು?"

"ಹೋಗ್ಲಿಬಿಡು... ನಾನು ಮೂರು ರಾತ್ರಿ ಪ್ರಯತ್ನಪೂರ್ವಕ ನನ್ನ ಭಾವೋದ್ವೇಗವನ್ನು ಹತೋಟಿಯಲ್ಲಿಟ್ಟಿದ್ದೆ. ಆದ್ರೆ ಅಲ್ಲಿಗೇ ನನ್ನ ಶಕ್ತಿ ಕುಂದುತ್ತಾ ಬಂತು...ಪ್ರವೃತ್ತಿ ಮಾರ್ಗದಿಂದ್ಲೂ ನಿವೃತ್ತಿ ಸಿಗದೇ ಇದ್ದಾಗ ಮತ್ತೆ ನಿನ್ನ ಹತ್ರ ಚರ್ಚಿಸೋಕೆ ಬಂದೆ..."

ಇಬ್ಬರೂ ಗೆಳೆಯರೂ ಮೇಲೆದ್ದರು...ಬಾಗಿಲಿಗೆ ಬೀಗ ತಗುಲಿಸಿದ ಹಿರಣ್ಮಯ ವಿಜಯನೊಡನೆ ಸುತ್ತಾಡಿ ಬರಲು ಪೇಟೆಯಲ್ಲಿ ಹೊರಟ.

ಹೋಟೆಲಿನಲ್ಲಿ ಇಬ್ಬರೂ ಊಟ ಮುಗಿಸಿ ಹಿಂತಿರುಗಿದರು. ರಾತ್ರಿಯೆಲ್ಲ ಮತ್ತೆ ಚರ್ಚೆ ನಡೆಯಿತು.

ಸುಮಾರು ಒಂಬತ್ತು ಗಂಟೆಯ ವೇಳೆಗೆ ಯಾರೋ ಬಾಗಿಲು ಬಡಿದ ಹಾಗಾಯಿತು. "ಸಾರ್..." ಎಂಬ ಹೆಣ್ಣು ಧ್ವನಿ! ಹಿರಣ್ಮಯ ಎದ್ದು ಹೋಗಿ ಬಾಗಿಲು ತೆರೆದ.



ನೋಡಿ, ಪ್ಯಾಡಸ್ ನಡುಗೆ ಯಾವ ಚಂದಾ ಬ್ಯಾಡ ಕೃಷ್ಣನ ದೇವಸ್ಥಾನದ ಕಟ್ಟಡ ಸಹಾಯಾರ್ಥ ಒಂದು ಕ್ಯಾಬರೆ ಡ್ಯಾನ್ಸ್ ಪ್ರಾಗ್ರಾ ಕೊಟ್ಬಿಡಿ ಸಾಕು.

ಸುಮಾರು ಇಪ್ಪತ್ತೆಂಟರ ಹರೆಯದ ಹೆಣ್ಣೊಬ್ಬಳು ಒಳಕ್ಕೆ ಬಂದಳು.

"ವಿಜಯ್...ಇವರು ಮಿಸ್ ಸುಮಿತ್ರಾ...ಅಂತ ಇದೇ ಊರಿನ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಟೈಪಿಸ್ಟ್ ಆಗಿದಾರೆ...ಇವರು ವಿಜಯ್ ಅಂತ ...ನನ್ನ ಆಪ್ತ ಮಿತ್ರರು....ದೇವಪುರದ ಗರ್ಲ್ಸ್ ಹೈಸ್ಕೂಲಿನಲ್ಲಿ ಉಪಾಧ್ಯಾಯರು"

ಪರಸ್ಪರ ಪರಿಚಯ ಮಾಡಿಸಿದಾಗ ವಿಜಯ, ಸುಮಿತ್ರ ಇಬ್ಬರೂ ಪರಸ್ಪರ ಕೈ ಮುಗಿದರು.

"ಏನು ಸುಮಿತ್ರಾ...ಇಷ್ಟು ದೂರ ಬಂದ್ರಿ?" ಹಿರಣ್ಮಯ ಕೇಳಿದ.

"ಏನೂ ಇಲ್ಲ...ನಾಳೆ ನನ್ನ ಬರ್ತ್‌ಡೇ ಇದೆ... ನಮ್ಮನೇಗೆ ನಿಮ್ಮನ್ನು ಊಟಕ್ಕೆ ಕರೆಯೋಕೆ ಬಂದಿದೀನಿ...ನೀವೂ ಬನ್ನಿ ವಿಜಯ್...ಹೇಗೂ ನಾಳೆ ಭಾನುವಾರ..."

"ಕೂತ್ಕೊಳ್ಳಿ ಸುಮಿತ್ರಾ..." ವಿಜಯ ಉಪಚಾರ ಹೇಳಿದಾಗ ಅವಳೂ ಕುಳಿತಳು. ಹತ್ತು ನಿಮಿಷ ಮಾತುಕತೆಯಾದ ನಂತರ

"ನಾನು ಬರ್ತೀನಿ ಸಾರ್...ನಾಳೆ ಇಬ್ರೂ ಮರೀಬ್ಯಾಡಿ" ಎನ್ನುತ್ತಾ ಹೊರಟು ಹೋದಳು.

"ಈ ಹುಡುಗಿ ನಿಂಗೆ ಹ್ಯಾಗೆ ಪರಿಚಯ?" ಎಂದ ವಿಜಯ.

"ಇವಳೇ...? ಯಾಕೆ? ಇವಳಿಗೂ ನನಗೂ ಏನಾದ್ರೂ ಗುಟ್ಟಾಗಿ ನಡೆದಿದೆ ವ್ಯವಹಾರ ಅಂದ್ಕೊಂಡಿದೀಯೇನು?"

"ಛೆ...ಛೆ...ಹಾಗಲ್ಲ...ಸುಮ್ನೆ ಕೇಳ್ದೆ ಅಷ್ಟೆ"

"ಇವಳ ಮನೆ ಅಗೋ ಎದುರಿಗೇ ಕಾಣ್ತಾ ಇದೆ ನೋಡು...ನಾನಿಲ್ಲಿಗೆ ಬಂದಾಗ ಇವಳಪ್ಪ ನನ್ನ ಪರಿಚಯಾನೂ ಮಾಡ್ಕೊಂಡ್ರು...ಇವಳನ್ನು ನನಗೇ ಗಂಟು

ಹಾಕೋದಕ್ಕೆ ಭಾಳಾ ಟ್ರೈ ಮಾಡ್ತಿದಾರೆ...ಏಷ್ಟೋ ಬಾರಿ ಈ ಸುಮಿತ್ರಾ ರಾತ್ರಿ ಮನೆಗೆ ಹೋಗೋದಿಲ್ಲ. ಇಲ್ಲೇ ಮಲಗಿರ್ತಾಳೆ...ನಾನು ಮಾತ್ರ ಟೈಟ್!"

ವಿಜಯನಿಗೆ ನಾಚಿಕೆಯಾದಂತಾಯಿತು. ಹಿರಣ್ಮಯ ಲೀಲಾಜಾಲವಾಗಿ ಹೆಣ್ಣನ್ನು ಎದುರಿಸಬಲ್ಲ. ತಾನೇಕೆ ವಿಕಾರವಶನಾಗುತ್ತೇನೆ?...ಅಥವಾ ಇದೆಲ್ಲ ಬರೀ ಇವನ ಪೊಳ್ಳು ಮಾತುಗಳಿರಬಹುದೆ? ಹೌದು...ಗಂಡು ಹೆಣ್ಣುಗಳು ಏಕಾಂತದಲ್ಲಿರುವಾಗ ಹೇಗಿರುತ್ತಾರೆ ಎಂಬ ವಿಚಾರ ಆವರಿಬ್ಬರಿಗೇ ಬಯಲಾಗುವ ರಹಸ್ಯ...ತಾನು ಸುಧಾ ಜೊತೆಗೆ ಕಳೆದ ರಾತ್ರಿಗಳು ಯಾವ ಅನಾಹುತದ ಘಟ್ಟವನ್ನೂ ಮುಟ್ಟಲಿಲ್ಲವೆನ್ನುವ ವಿಚಾರವನ್ನು ಯಾರೂ ನಂಬುತ್ತಿಲ್ಲ...ತನ್ನ ಪತ್ರಗಳಿಂದ ತನ್ನ ಗಂಭೀರ, ನಿರುದ್ವಿಗ್ನ ಮಾತುಗಳಿಂದ ತಾನು ಯಾರಲ್ಲಿಯೂ ನಂಬುಗೆಯನ್ನು ಹುಟ್ಟಿಸಲು ಅಸಮರ್ಥನಾಗಿದ್ದ.

ವಿಜಯ ಮಲಗಿಕೊಂಡಾಗಲೂ ಯೋಚಿಸುತ್ತಲೇ ಇದ್ದ. ಹಿರಣ್ಮಯ ಗೊರಕೆ ಹೊಡೆಯುವುದು ಕೇಳಿಸಿತು. ಇವನ ನಿದ್ರೆ ನಿದ್ರೆಯೋ ಅಥವಾ ಬರೀ ನಟನೆಯೋ? ಹಿರಣ್ಮಯನ ಆಳ ತನಗೆ ಸಿಗುತ್ತಿಲ್ಲ... ಇವನ ಮತ್ತು ಆ ಸುಮಿತ್ರಳ ಸಂಬಂಧವನ್ನು ಯಾಕೆ ಪರೀಕ್ಷಿಸಿ ನೋಡಬಾರದು? ಆದರೆ ಹೇಗೆ? ತಾನಿಲ್ಲಿರುವರೆಗೂ ಇವನು ನಟನೆಯ ಮುಖವನ್ನು ನನ್ನ ಕಡೆ ತಿರುಗಿಸಿ, ನೈಜವನ್ನು ಮರೆಮಾಚುತ್ತಾನೆ...ತಾನೇ ಮರೆಯಾದಂತೆ ನಟಿಸಿದರೆ?

ವಿಜಯ ದೇವಪುರಕ್ಕೆ ಹೆಜ್ಜೆ ಇಟ್ಟಾಗಿನಿಂದ, ಎಲ್ಲರೆದುರಿಗೆ ತಾನು ತೋರಿಸಿದ ಮುಖವಾಡವನ್ನು ಜ್ಞಾಪಿಸಿಕೊಂಡ. ಹೌದು. ಪ್ರಾಮಾಣಿಕವಾಗಿ ಯೋಚಿಸಿದಲ್ಲಿ ತಾನು ಬರೀ ಮುಖವಾಡವನ್ನೇ ಧರಿಸಿದ್ದೆ. ಸುಧಾಳಿಗೆ ತನ್ನಲ್ಲಿ ಅಪಾರ ಗೌರವ ಬೆಳೆದಿದ್ದೂ ಈ ಮುಖವಾಡದ ಬಗ್ಗೆ...ಆದರೆ... ಇದು ಬರೀ ಮುಖವಾಡ ಮಾತ್ರವೆ? ಪ್ರಪಂಚದಲ್ಲಿ ಈ ವಿಚಾರವಾಗಿ ನಮಗೆ ಸಿಗುವುದು ಬರೀ ಮುಖವಾಡವೆ? ಗಂಡು ಹೆಣ್ಣುಗಳ ಏಕಾಂತ ನಿರ್ವಿಕಾರವಾಗಿರಲು ಸಾಧ್ಯವಿಲ್ಲವೆ? ಹಿರಣ್ಮಯ ಹೇಳುತ್ತಾನೆ ತಾನದನ್ನು ಸಾಧಿಸಿ ತೋರಿಸಿದ್ದೇನೆಂದು. ಇವನದೂ ಮುಖವಾಡವೇ ಏಕಿರಬಾರದು? ಇವನು ಈ ನಿರ್ವಿಕಾರ ಸ್ಥಿತಿಯನ್ನು ಸಮರ್ಥಿಸಿಕೊಳ್ಳುತ್ತಿರುವುದರಿಂದ ಜಗತ್ತಿನಲ್ಲಿ ಇಂತಹ ದಿವ್ಯ ಸ್ಥಿತಿಯೊಂದಿದೆ ಎಂಬುದನ್ನು ತಾನು ಒಪ್ಪಿದ್ದೆ. ಅದನ್ನು ತನ್ನದಾಗಿಸಿಕೊಳ್ಳುವ ಏಕೈಕ ಹಂಬಲವನ್ನೇ ತನ್ನ ಜೀವನದ ಗುರಿಯಾಗಿಟ್ಟುಕೊಂಡ. ತಂದೆ ತಾಯಿಗಳ ಆಗ್ರಹಕ್ಕೆ ಪಾತ್ರನಾಗಿದ್ದ. ಈ ಅಪಾಯಕರ ಪ್ರಯೋಗದಿಂದ ತನ್ನ ಸಾಮಾಜಿಕ ಅನುಬಂಧಗಳೆಲ್ಲ ಕೊಂಡಿ ಕಳಚಬಹುದೆಂಬ ಭೀಕರ ನಿರೀಕ್ಷೆ!

ಹಿಂದಿನ ಋಷಿ ಮುನಿಗಳೂ ಸಹ ಹಲವಾರು ಬಾರಿ ಜಾರಿದ ನಿದರ್ಶನಗಳು! ಋಷಿಮುನಿಗಳಿಗೆ ಅಸಾಧ್ಯವಾದುದು ತನಗೆ ಸಾಧ್ಯವಾಗಲೂಬಹುದು. ಹಿರಣ್ಮಯನಿಗಂತೂ ಇದು ಸಾಧ್ಯವಾಗಿದೆ. ಹಸಿವೆ-ಕಾಮ, ಇವೆರಡನ್ನೂ ಗೆದ್ದವನಿಗೆ ಈ ಪ್ರಪಂಚದಿಂದಾಗ ಬೇಕಾದುದೇನೂ ಇಲ್ಲ. ಅದರಲ್ಲಿ ಈ ಹಿರಣ್ಮಯ ಕಾಮವನ್ನು ಗೆದ್ದಿದ್ದಾನೆ.ಅವನಿಗೆ ಸಾಧ್ಯವಾದುದು ತನಗೂ ಸಾಧ್ಯವಾಗಬೇಕು. ಆದರೆ ಆ ಹಂಬಲ ಹಂಬಲವಾಗಿಯೇ ಉಳಿದು, ತನ್ನ ಪ್ರಯೋಗ ಯಶಸ್ವಿಯಾಗದೆ ಅತೃಪ್ತನಾಗಿ, ವಿಜಯ ಇದೀಗ ಹಿರಣ್ಮಯನ ಪರಿಸ್ಥಿತಿಯನ್ನು ಪರೀಕ್ಷಿಸಬಂದಿದ್ದ.

ಮಾರನೇ ದಿನ ಹಿರಣ್ಮಯ ಶಾಲೆಗೆ ಹೊರಟು ನಿಂತಾಗ ವಿಜಯನೂ ಹೊರಡಲು ಸಿದ್ಧನಾಗಿ "ಹಾಗಿದ್ರೆ ನಾನೂ ಬರ್ತೀನಪ್ಪ"...ಎಂದ.

"ಏನು ದೇವಪುರಕ್ಕೆ ಹೊರಟೆಯಾ?"

"ಹೌದು...ಇವತ್ತೇ ಹೊರಡ್ತೀನಿ"

"ಸರಿ...ಹೋದ ಕೂಡ್ಲೆ ಪತ್ರ ಬರಿ..." ಎಂದವನೇ ಹಿರಣ್ಮಯ ಹೊರಟು ಹೋದ. ವಿಜಯನೂ ಅಲ್ಲಿಂದ ನೇರವಾಗಿ ಪ್ರವಾಸೀ ಮಂದಿರದ ಕಡೆ ಹೊರಟು ಬಂದ. ಅಲ್ಲೊಂದು ಕೋಣೆಯನ್ನು ಪಡೆದು, ಮಂಚದ ಮೇಲೆ ಮೈ ಚೆಲ್ಲಿ ಮತ್ತೆ ಯೋಚಿಸತೊಡಗಿದ–

ಈಗ ತಾನು ಈ ಹಿರಣ್ಮಯನನ್ನು ಪರೀಕ್ಷಿಸಬೇಕು...ಆದರೆ ಹೇಗೆ? ಸುಮಿತ್ರ ಅವನೊಟ್ಟಿಗಿರುವುದನ್ನು ಪರೀಕ್ಷಿಸಬೇಕು. ಹೌದು ತನಗೆ ಬಹಳ ಅಗತ್ಯವಾದ ವಿಚಾರ. ಅವನು ಈ ಸಾಧ್ಯತೆಯನ್ನು ಸ್ಥಾಪಿಸಿದಲ್ಲಿ, ತಾನೂ ಪ್ರಯತ್ನವನ್ನು ಮುಂದುವರಿಸಬಹುದು. ತನ್ನ ಅನುಭವವೇ ಅವನದೂ ಆದರೆ...ಆಗ ಈ ವರೆಗಿನ ತನ್ನ ಸಾಧನೆ ಬರೀ ಒಂದು ವ್ಯರ್ಥ ಪ್ರಯತ್ನವಷ್ಟೆ!

ಸುಧಾ, ರವಿ, ಗುಂಡೂರಾಯರು, ವಾಸುದೇವಯ್ಯ ಎಲ್ಲರೆದುರಿಗೂ ತಾನು ನೀಡಿದ ಒಂದು ಮುಖ ಬರೀ ತನ್ನ ಹೇಳಿಕೆಗಳಿಂದ, ತನ್ನ ಪತ್ರಗಳಿಂದೆ ಸೃಷ್ಟಿಯಾದುದು...ತನ್ನ ಅಂತರ್ಯವನ್ನು ಅವರೆಲ್ಲ ತಿಳಿಯುವ ಹಾಗಿದ್ದರೆ...

ಇದ್ದಕ್ಕಿದ್ದ ಹಾಗೇ ವಿಜಯ ಗಾಬರಿಯಿಂದ ಮೇಲೆದ್ದ ಹೌದು ತನ್ನ ದಿನಚರಿ...ಅದನ್ನು ತನ್ನ ಹೋಲ್ಡಾಲಿನ ಒಳ ಪದರಿನಲಿಯೇ ಇಟ್ಟು ಬಂದಿದ್ದ. ಸುಧಾ ಅದೇ ಮನೆಯಲ್ಲಿರಲೂಬಹುದು...ಒಂಟಿಯಾಗಿರಲಾರದೇ ಅವಳ ತಂದೆ ತಾಯಿಗಳಲ್ಲಿ ಯಾರಾದರೊಬ್ಬರನ್ನು ಕರೆ ತಂದಿರಲೂಬಹುದು...ಅವರಲ್ಲಿ ಯಾರಾದರೊಬ್ಬರು ಅದರ ಕಡೆ ಕಣ್ಣು ಹಾಯಿಸಿದರೆ...? ತಾನು ಕಳೆದ ಏಳು ವರ್ಷಗಳಿಂದಲೂ ಬರೆಯುತ್ತ ಬಂದ ದಿನಚರಿ...ಯಾವುದೋ ಪತ್ರಿಕೆಯಲ್ಲಿ ದಿನಚರಿಯ ವಿಶ್ಲೇಷಣೆ ಬಹಳ ಸೊಗಸಾಗಿ ಬಂದಿತ್ತು...ದಿನಚರಿಯನ್ನು ಬರೆಯುವುದರಿಂದ ಮಾನವ ಸತ್ಯಪ್ರಿಯನಾಗುತ್ತಾನೆ...ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಬಲ್ಲವನಾಗುತ್ತಾನೆ...ತನ್ನ ಬೆಳವಣಿಗೆಯ ಸ್ತರಗಳನ್ನು ತಾನೇ ಗುರ್ತಿಸಿಕೊಳ್ಳುತ್ತಾನೆ. ...ನಿರಂತರವೂ ಬೆಳೆಯುವವನಾಗುತ್ತಾನೆ. ಇತ್ಯಾದಿ...ಇತ್ಯಾದಿ...ಆ ಲೇಖನದಿಂದ ಪ್ರಭಾವಿತನಾದ ವಿಜಯ ಅಂದಿನಿಂದ ದಿನಚರಿಯನ್ನು ಬರೆಯಲು ಪ್ರಾರಂಭಿಸಿದ್ದ. ಪ್ರಾಮಾಣಿಕವಾಗಿ ಬರೆದ ಆ ವಿಚಾರಗಳು ಸುಧಾಳ ಗಮನಕ್ಕೆ ಬಂದರೆ?

ಹಾಗಾದರೆ ದೇವಪುರಕ್ಕೆ ಹಿಂತಿರುಗಲೆ? — ಸುಧಾ ಅಲ್ಲಿಯೇ ಇರದೆ, ರಾಜೀನಾಮೆಯನ್ನು ನೀಡಿ ಹೊರಟು ಹೋಗಿದ್ದರೆ? ಯಾವುದಕ್ಕೂ ಮೊದಲು ಒಂದು ಪತ್ರವನ್ನು ಬರೆಯುವುದು ವಾಸಿ.

ಸುಧಾಗೆ ಒಂದು ಪತ್ರವನ್ನು ಬರೆದು ಅಂಚೆಗೆ ಹಾಕಿದ ಮೇಲೆ ಅವನಿಗೆ ಏನೋ ಸಮಾಧಾನವಾದ ಹಾಗಾಯಿತು. ಅವಳು ಒಂಟಿಯಾಗೇ ಇದ್ದರೆ ಖಂಡಿತ ತನ್ನ ಕೋರಿಕೆಯಂತೆ, ಆ ದಿನಚರಿಯ ಪುಟಗಳನ್ನು ಅವಳು ತಿರುವಿ ಹಾಕಲಾರಳು...ತನ್ನ ಬಗ್ಗೆ ಅವಳಿಗೆ ಅಪಾರ ಗೌರವ...ವಿಶ್ವಾಸ ಎಲ್ಲವೂ ಇದೆ. ಆದರೆ ಆ ದಿನಚರಿಯನ್ನೋದಿದರೆ ಅದೆಲ್ಲ ಹಾಗೇ ಉಳಿಯಲಾರದೇನೋ? ಅವಳ ಪ್ರತ್ಯುತ್ತರವನ್ನು ನೋಡಿಕೊಂಡು ಅಗತ್ಯ ಬಿದ್ದರೆ ತಾನೇ ಅಲ್ಲಿಗೆ ಹೋಗುವುದು...

ವಿಜಯ ಒಮ್ಮೆ ತಾನು ಕಳೆದ ನಾಲ್ಕೈದು ವರ್ಷಗಳಿಂದ ಕೈಗೊಂಡಿರುವ ಈ ವಿಚಿತ್ರ ಶೋಧದ ಬಗ್ಗೆ ವಿಲಕ್ಷಣವಾದ ತನ್ನ ವರ್ತನೆಯ ಬಗ್ಗೆ, ಹಿರಣ್ಮಯನ ಯಶಸ್ಸಿನ ಬಗ್ಗೆ ಯೋಚಿಸಿದಾಗ ಏನೋ ಭೀತಿಯಾದಂತಾಯಿತು. ತಾನು ಈ ಜೀವನವನ್ನು ಬರೀ ಪ್ರಯೋಗಕ್ಕಾಗಿಯೇ ಬಳಸಿದಂತಾಯಿತೇ ಎಂಬ ಪ್ರಶ್ನೆಯೂ ಬೃಹದಾಕಾರ ತಳೆಯಿತು.

× × ×

ಆ ದಿನ ವಿಜಯ ಪ್ರವಾಸಿ ಮಂದಿರದ ಕೋಣೆಗೆ ಬೀಗ ತಗುಲಿಸಿ ರಾತ್ರಿ ಒಂಬತ್ತಕ್ಕೆ ಹಿರಣ್ಮಯನ ರೂಮಿನತ್ತ ನಡೆದ. ಹಿರಣ್ಮಯನ ಕೋಣೆಯ ದೀಪ ಉರಿಯುತ್ತಿತ್ತು. ಮುಂಬಾಗಿಲು ಅರ್ಧ ತೆರೆದಿತ್ತು... ಕಿಟಕಿಯ ಮೂಲಕ ವಿಜಯ ಒಳಕ್ಕೆ ಕಣ್ಣಾಡಿಸಿದಾಗ ಯಾರೂ ಕಾಣಲಿಲ್ಲ...ಹಾಗಾದರೆ, ಹಿರಣ್ಮಯ ಎಲ್ಲಿ ಹೋದ? ರಸ್ತೆಯಲ್ಲೆಲ್ಲ ಕಣ್ಣಾಡಿಸಿದ...ಸ್ವಲ್ಪ ದೂರದಲ್ಲೇ ಯಾರೋ ಇಬ್ಬರು ಹೋಗುತ್ತಿದ್ದರು...ಕಿಟಕಿಯ ಬಳಿಯೇ ನಿಂತಿರಲು ಮುಜುಗರವಾಗಿ ಬಾಗಿಲ ಬಳಿ ಬಂದ. ಅರ್ಧ ತೆರೆದ ಬಾಗಿಲನ್ನು ಇನ್ನೂ ಸ್ವಲ್ಪ ತಳ್ಳಿದಾಗ ಒಳಗೆ ಯಾರೂ ಇರಲಿಲ್ಲ.

ಹಿರಣ್ಮಯನ ನಾಗರಿಕ ಮಂಚದ ಮೇಲಿತ್ತು; ಸುತ್ತಲೂ ಸೊಳ್ಳೆ ಪರದೆ...ಮೇಜಿನ ಮೇಲೆ ಯಾವುದೋ ಪುಸ್ತಕ ತೆರೆದಿಡಲಾಗಿತ್ತು. ಬಗ್ಗಿ ನೋಡಿದ. ಇಂಗ್ಲಿಷ್ ಕಾದಂಬರಿ.

ಕೋಣೆಯ ಹೊರ ಭಾಗದಲ್ಲಿ, ರಸ್ತೆಯಲ್ಲಿ ಹಿರಣ್ಮಯ ಮಾತನಾಡುವ ಶಬ್ದ ಕೇಳಿಸಿತು.

ವಿಜಯ ನೆಟೆದು ನಿಂತ. ತಾನೀಗ ಹೊರಕ್ಕೆ ಹೊರಟರೆ ಅವನ ಕೈಗೆ ಸಿಕ್ಕುತ್ತೇನೆ...ಮತ್ತೆ ನಾಟಕ ಪ್ರಾರಂಭಿಸಬೇಕು...ತಾನು ಇವನ ಈ ರೂಮಿನೊಳಗೆ



ಸ್ವಾಮಿ ಸಂಪಾದಕರೆ ಅಪ್ರತಿಮ ಕಲೆಗಾರ ಅನ್ನುವ ಬದಲು ಅಪ್ರತಿಮ ಕೊಲೆಗಾರ ಅಂತ ಪ್ರಕಟಿಸಿದ್ದೀರಲ್ಲ ಪೋಲೀಸಿನವರು ನನ್ನ ಹುಡುಕುತ್ತಾ ತಿರುಗುತ್ತಾ ಇದಾರೆ... ನಾನೇನ್ಹೇಳಲಿ ಅವರಿಗೆ!



ಬಂದ ಉದ್ದೇಶವಾದರೂ ಏನು? ಯಾಕೆ ಬಂದ?

ಅಷ್ಟರಲ್ಲಿ ಮತ್ತೊಂದು ಧ್ವನಿ ಕೇಳಿಸಿತು... ಹಿರಣ್ಮಯನ ಜೊತೆಗೆ ಸುಮಿತ್ರ ಮಾತನಾಡುತ್ತಿದ್ದಳು.

ವಿಜಯನಿಗೆ ಮಿಂಚಿನಂತೆ ಉಪಾಯವೊಂದು ಹೊಳೆಯಿತು. ಬಗ್ಗಿ ಅಲ್ಲಿದ್ದ ಮಂಚದ ಕೆಳಗೆ ಗೋಡೆಯ ಪಕ್ಕಕ್ಕೆ ಮಲಗಿಬಿಟ್ಟನು.

ಹೌದು...ಇದೇ ಅವಕಾಶವನ್ನೇ ತಾನು ಬಯಸಿದ್ದು...ಇವತ್ತು ಆ ಸುಮಿತ್ರ, ಹಿರಣ್ಮಯನ್ನೇ ತನ್ನೊಡನೆ ಎಷ್ಟೋ ಬಾರಿ ಹೇಳಿದಂತೆ, ಇಲ್ಲಿಯೇ ಮಲಗಿದರೆ, ಆಗ ಇವನ ಬಂಡವಾಳವೆಲ್ಲ ತನಗೆ ತಿಳಿಯುತ್ತದೆ.

ವಿಜಯ ಬಹಳ ಹೊತ್ತು ಮಂಚದ ಕೆಳಗೆ ಮಲಗಿದ್ದ...ಆದರೆ ಹಿರಣ್ಮಯನಾಗಲೀ, ಸುಮಿತ್ರೆಯಾಗಲೀ ಒಳಕ್ಕೆ ಬಂದಂತೆ ಕಾಣಲಿಲ್ಲ. ವಿಜಯ ಯಾವ ಅವಕಾಶಕ್ಕಾಗಿ ಕಾಯುತ್ತಿದ್ದನೋ ಅದು ಒದಗಿ ಬರಲಿಲ್ಲ.

ಅಷ್ಟರಲ್ಲಿ ಹಿರಣ್ಮಯ ಒಳಕ್ಕೆ ಬಂದುದನ್ನು ವಿಜಯ ನೋಡಿದ... ಆದರೆ ಸುಮಿತ್ರ ಒಳಕ್ಕೆ ಬಂದಂತೆ ಕಾಣಲಿಲ್ಲ. ವಿಜಯನಿಗೆ ನಿರಾಶೆಯಾಯಿತು.

ಹಿರಣ್ಮಯ ಸ್ವೆಟರ್‌ಹಾಕಿಕೊಂಡು, ಟಾರ್ಚ್ ಸಮೇತ ಮತ್ತೆ ಚಪ್ಪಲಿ ಮೆಟ್ಟಿ ರೂಮಿನ ದೀಪ ಆರಿಸಿ, ಹೊರಕ್ಕೆ ಹೊರಟ. ಬಾಗಿಲಿಗೆ, ಬೀಗವನು ಹಾಕುವ ಶಬ್ದ ವಿಜಯನಿಗೆ ಸ್ಪಷ್ಟವಾಗಿ ಕೇಳಿಸಿತು–

ಅವನಿಗೆ ಗಾಬರಿಯಾಯಿತು... ಎಲ್ಲಿಗೆ ಹೋದ ಈ ಹಿರಣ್ಮಯ? ಸಿನಿಮಾ ನೋಡಲು ಹೋಗಿರಬಹುದೆ...? ಹತ್ತು ನಿಮಿಷಗಳ ನಂತರ ವಿಜಯ ಮಂಚದಡಿಯಿಂದ ಹೊರಕ್ಕೆ ಬಂದು ರೂಮಿನ ದೀಪ ಹಾಕಿದ. ಕಿಟಕಿಯ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿದ.

ದೀಪದ ಬೆಳಕಿನಲ್ಲಿ ವಿಜಯ, ಸ್ನೇಹಿತನ ಕೋಣೆಯಲ್ಲಿದ್ದ, ಬೀರು, ಪೆಟ್ಟಿಗೆ, ಬಟ್ಟೆ, ಬರೆ, ಪುಸ್ತಕ, ಹೀಗೆ ಯಾವುದನ್ನೂ ಬಿಡದೆ ಸೂಕ್ಷ್ಮವಾಗಿ ಪರಿಶೀಲಿಸಿದ. ಆದರೆ ಇವನಿಗೆ ಬೇಕಾದ ಅಂಶ ಆ ಪದಾರ್ಥಗಳಿಂದ ಹೇಗೆ ದೊರಕಬಲ್ಲದು?

ಪುಸ್ತಕಗಳ ರಾಶಿಯನ್ನು ಪರೀಕ್ಷಿಸುವಾಗ ಮೇಜಿನ ಮೇಲೊಂದು ಕಾಗದದ ಚೂರು ಯಾವುದೋ ಪುಸ್ತಕದಿಂದ ಬಿತ್ತು... ವಿಜಯ ಆ ತುಂಡನ್ನು ಪರೀಕ್ಷಿಸಿದ. ಅದೊಂದು ಬಿಳೀಕಾಗದ... ಅದರ ಒಂದು ಬದಿಯಲ್ಲಿ ಹಿರಣ್ಮಯ ತನ್ನ ಸಹಿಯನ್ನು ನಾನಾ ಭಂಗಿಗಳಲ್ಲಿ ಮೂಡಿಸಿದ್ದ. ಮತ್ತೊಂದು ಬದಿಯಲ್ಲಿ "unfortunate" ಎಂಬ ಪದ ಬರೆದಿದ್ದ. ಹೌದು... ಆ ಅಕ್ಷರ ಅವನದೇ... ಸರಳಿಯಂತಹ ತನ್ನ ಲಿಪಿಯಲ್ಲಿ ಮುದ್ದಾಗಿ ಬರೆದ ಆ ಪದದ ಅರ್ಥವೇನು? ಹಾಗೆ ಅವನು ಬರೆಯಲು ಕಾರಣವಾದರೂ ಏನು?

ಹಿರಣ್ಮಯ ಯಾರನ್ನು ಕುರಿತು ಈ ಪದವನ್ನು ಬಳಸಿದ್ದಾನೆ? ಅದರ ಹಿಂದು ಮುಂದುಗಳಲ್ಲಿ ಮತ್ತಾವ ಬರವಣಿಗೆಯೂ ಇರಲಿಲ್ಲ. ಹಾಳೆಯ ಹಿಂಭಾಗ ಅವನ ಸಹಿಗಳಿಂದ ತುಂಬಿಹೋಗಿತ್ತು... ಹಾಗಾದರೆ, ಈ ದುರದೃಷ್ಟಶಾಲಿ ಇದೇ ಹಿರಣ್ಮಯನೇ ಇರಬಹುದೆ? ವಿಜಯ ಯಾವುದೋ ಪುಸ್ತಕದಲ್ಲಿ 'ಆಟೋ ರೈಟಿಂಗ್' ಬಗ್ಗೆ ಓದಿದುದನ್ನು ಜ್ಞಾಪಿಸಿಕೊಂಡ. ಮಾನವನ ಸುಪ್ತಚೇತನ ಈ ರೀತಿಯ ಬರವಣಿ

ಗೆಯ ಮೂಲಕ ತನ್ನಲ್ಲಿರುವ ನಿಷ್ಠುರ ಸತ್ಯಗಳನ್ನು ಹೊರಚೆಲ್ಲುವುದಂತೆ. ಇದೂ ಹಾಗೆಯೇ ಹಿರಣ್ಮಯನ ಸುಪ್ತಚೇತನ ಹೊರಚೆಲ್ಲಿರುವ ಒಂದು ಸತ್ಯಸಂಗತಿಯೆ? ಅವನು ಯಾವ ದೃಷ್ಟಿಯಿಂದ ದುರದೃಷ್ಟಶಾಲಿ? ವಿಜಯ ಆ ಹಾಳೆಯನ್ನು ತನ್ನ ಜೇಬಿಗಿಟ್ಟುಕೊಂಡ. ದಿಕ್ಕಾಪಟ್ಟೆ ಬಿದ್ದಿದ್ದ ಪುಸ್ತಕಗಳನ್ನೆಲ್ಲ ಮತ್ತೊಮ್ಮೆ ಜೋಡಿಸಿದ. ಅಧ್ಯಾತ್ಮ ಸಂಬಂಧವಾದ ಗ್ರಂಥಗಳಾವುವೂ ಅಲ್ಲಿರಲಿಲ್ಲ, ಬಹುತೇಕ ಮಾಸಿಕಗಳು, ವಾರ್ಷಿಕ ಸಂಚಿಕೆಗಳು ಅರ್ಥಕೋಶಗಳು, ವಿಶ್ವಕೋಶ–ಇವುಗಳೇ ಅಲ್ಲಿದ್ದ ಪುಸ್ತಕಗಳಾಗಿದ್ದವು.

ವಿಜಯ ಯಾವುದೋ ಒಂದು ವಾರ್ಷಿಕ ಸಂಚಿಕೆಯನ್ನು ವಾಚಿಸುತ್ತಾ ಕುಳಿತ. ಆದರೆ ಓದಿನಲ್ಲಿ ಅವನ ಮನಸ್ಸು ಬೆರೆಯದೇ ಹೋಯಿತು. ಸುಧಾಳ ನೆನಪು ಕಾಡತೊಡಗಿತು. ಹೇಗಿದ್ದರೂ ಅವರ ತಂದೆ ಸುಧಾಳನ್ನು ವಿವಾಹವಾಗುವಂತೆ ತನ್ನನ್ನು ಕೇಳಿದ್ದರು... ಸುಧಾ ರೂಪವತಿ, ವಿದ್ಯಾವತಿ, ಆಲೋಚನಾಪರಳು. ಏಕೆ ತಾನು ಅವಳನ್ನು ಮದುವೆಯಾಗಬಾರದು? ಆದರೆ ಇದು ದೌರ್ಬಲ್ಯ ಎನ್ನಿಸುತ್ತಿದೆ. ಯಾವ ಗಂಡಾದರೂ ತನ್ನ ಮದುವೆಗೆ ಒಪ್ಪಿಗೆಯನ್ನು ಸೂಚಿಸುವುದರ ಅರ್ಥ-ಅವನು ತನ್ನ ಕಾಮುತೃಷೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲಾರನೆಂದು ಸಾರಿದಂತೆಯೇ. ಪ್ರಪಂಚದಲ್ಲಿ ಎಷ್ಟೋ ಮಂದಿ ಅವಿವಾಹಿತರಾಗಿಯೇ ಉಳಿದಿದ್ದಾರೆ. ಅವರೆಲ್ಲರಿಗೂ ವಿವಾಹಿತರಿಗಿಂತ ಒಂದು ಕೈ ಮೇಲಲ್ಲವೆ? ಅಥವಾ ಅವಿವಾಹಿತ ಸ್ಥಿತಿಯು ಅವರ ಮನಸ್ಸಿನಾಳದಲ್ಲಿ ವಿವರಿಸಲಾಗದಂತಹ ತುಮುಲವನ್ನೆಬ್ಬಿಸಿ ಅವರ ಇಡೀ ಬಾಳನ್ನೇ ಸುಡುವುದೋ ಏನೋ... ತನ್ನ ಬಾಳಿನ ಸ್ಥಿತಿಯೂ ಹಾಗೆಯೇ ಅದಂತಾಗಿದೆ. ಸುಧಾ ತನ್ನನ್ನು ಎಷ್ಟೊಂದು ಆಕರ್ಷಿಸಿದಳು.! ಆ ಆಕರ್ಷಣೆಯ ಬಿಗಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ತನ್ನ ಚೈತನ್ಯವನ್ನೆಲ್ಲ ಒಟ್ಟುಗೂಡಿಸಬೇಕಾಯಿತು. ಈ ದುರ್ದಮನೀಯ ಸಾಹಸದಿಂದ ತನಗೆ ದೊರೆಯುವ ಲಾಭವಾದರೂ ಯಾವುದು?

ಸುಧಾಳನ್ನು ತಾನು ವರಿಸುವುದರಿಂದ ತಂದೆ ತಾಯಿಗಳೊಡನೆ ತನಗುಂಟಾಗಿರುವ ವಿರಸ ಬಗೆಹರಿಯುತ್ತದೆ– ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ... ಸಾಮಾಜಿಕ ಅನುಬಂಧಗಳು ಮತ್ತೆ ಬಿಗಿಯಾಗಿ ತಾನೊಬ್ಬ ಸುಸ್ಥಿತಿಯುಳ್ಳ ಮಾನವನಾಗಬಲ್ಲೆ... ಹಾಗಿದ್ದಲ್ಲಿ, ಇಷ್ಟೊಂದು ಹಟವನ್ನು ತಾನೇಕೆ ಮುಂದುವರಿಸುತ್ತಿದ್ದೇನೆ?

ಮರುಗಳಿಗೆಯೇ ಎದುರು ಗೋಡೆಗಿದ್ದ ಹಿರಣ್ಮಯನ ಭಾವಚಿತ್ರ ಕಣ್ಣು ಕುಕ್ಕಿತು. ಆತ್ಮವಿಶ್ವಾಸವನ್ನು ಸೂಚಿಸುವ ಕಣ್ಣುಗಳು! 'ತಾನು ಹುಟ್ಟಿರುವುದೇ ಹೆಣ್ಣುಗಳನ್ನು ದೂರವಿಡಲು' ಎಂಬಂತಹ ಅವನ ಧೀರ ನಿಲವು! ಹೆಣ್ಣಿನ ಜೊತೆಗಿದ್ದರೂ ತಾನೂ ಸ್ವಲ್ಪವೂ ವಿಚಲಿತನಾಗಲಾರೆನೆಂಬ ಅವನ ಮನೋಸ್ಥೈರ್ಯ! ಛಿ... ತಾನೊಬ್ಬ ಕ್ಷುಲ್ಲಕಜೀವಿ ಎಂದುಕೊಂಡ.

ಆದರೆ ಈ ಹಿರಣ್ಮಯನೂ ತನ್ನಂತೆಯೇ ನಾಟಕವಾಡುತ್ತಿಲ್ಲವಷ್ಟೆ-ಎಂಬ ಅನುಮಾನ ಮತ್ತೆ ತಲೆಎತ್ತಿತ್ತು... ಇದನ್ನು ತಾನು ಪರೀಕ್ಷಿಸಿಯೇ ತೀರಬೇಕು. ಈ ತನ್ನ ಪರೀಕ್ಷೆ ತನ್ನ ಬಾಳಿನಲ್ಲಿ ಬಹುದೊಡ್ಡ ತೀರ್ಮಾನವನ್ನು ತಂದುಕೊಡುತ್ತದೆ... ಹಿರಣ್ಮಯ ಸಾಧಿಸಿರುವುದು ತನಗೂ ಸಾಧ್ಯವಿದೆ...

ವಿಜಯ ಯೋಚನೆಯಲ್ಲಿ ಮುಳುಗಿದ್ದ. ಒಮ್ಮೆ ಕೈಗಡಿಯಾರ ನೋಡಿಕೊಂಡಾಗ ರಾತ್ರಿ ಹನ್ನೆರಡೂವರೆಯಾಗಿತ್ತು! ಹೊರಗೆ ಬೀಗ ಬಿದ್ದಿದೆ. ತಾನಿಲ್ಲಿ ಸೆರೆಯಾಳಾಗಿದ್ದೇನೆ!

ಹಾಗೆಯೇ ಅವನು ಯೋಚಿಸುತ್ತಿರುವಾಗಲೇ–

ಹೊರಗಿನ ಕಾಲಿನ ಸಪ್ಪಳ ಬಹಳ ತಗ್ಗಿದ ಧ್ವನಿಯಲ್ಲಿ ಮಾತನಾಡುವ ಶಬ್ದ... ಕ್ಷಣ ಹೊತ್ತಿನಲ್ಲೇ, ಬೀಗ ಅಲುಗಾಡಿದಂತಾಗಲು. ವಿಜಯ ಬೇಗನೆದ್ದು ದೀಪವಾರಿಸಿ ಮಂಚದ ಕೆಳಗೆ ಅವಿತುಕೊಂಡ. ಅವನ ಎದೆಯ ಬಡಿತ ಅವನ ಕಿವಿಗೇ ಸ್ಪಷ್ಟವಾಗಿ ಕೇಳುತ್ತಿತ್ತು.

ಬಾಗಿಲು ತೆರೆದ ಶಬ್ದ. ಚಪ್ಪಲಿಗಳು... ದೀಪ ಪುನಃ ಬೆಳಗಿತು!



ನಾನೆಷ್ಟು ಪ್ರಯತ್ನ ಪಟ್ಟರೂ ನನ್ನ ಹೆಂಡತಿಯನ್ನು ನನ್ನ ಬಾರಿಗೆ ಕರೆಲು ಸಾಧ್ಯವಾಗಲಿಲ್ಲ. ಅಷ್ಟೇ ಇಂದ ಬಾಸ್ ಅವರ ಬಾರಿಗೆ ಹೋಗುತ್ತಿದ್ದೇನೆ

-೧೨-

"ನೀನು ಮನೇಗೆ ಹೋಗಲ್ವಾ?"

"ಉಹುಂ... ನ್ನಾನಾಗ್ಲೆ ಹೇಳಿದ್ನೆನಲ್ಲ...ಅಪ್ಪಂಗೆ ಹೇಳಿ ಬಂದಿದೀನಿ... ಸಿನಿಮಾ ತುಂಬ ಚೆನ್ನಾಗಿತ್ತಲ್ಲ?"

"ಏನೋ ಹಾಗಿತ್ತು. ಅದೇ ಹಳೇ ಲವ್‌ಸ್ಟೋರಿ.."

"ನೀವು ಯಾಕೆ ಈ ಲವ್ ಸ್ಟೋರಿ ಅಂದ್ರೆ ಹೀಗಾಡ್ತೀರಿ?"

"ನಂಗೊತ್ತಿಲ್ಲ ಸುಮಿತ್ರ... ಈ ಗಂಡು ಹೆಣ್ಣು-ಇವುಗಳನ್ನು ಲವ್ ಅನ್ನೋ ದಾರದಿಂದ್ಲೇ ಬಿಗಿಯೋ ಕೆಲ್ಸ ಈ ಸಿನಿಮಾಗಳದ್ದು-ಬುದ್ಧಿ ಇಲ್ದೋರು ಇವನ್ನು ನೋಡ್ತಾರೆ... ಅಷ್ಟೆ! ನಂಗಂತೂ ಭಾಳಾ ಬೋರ್ ಆಯ್ತು..."

"ಹೋಗ್ಲಿ ಬಿಡಿ. ನಂಗೋಸ್ಕರನಾದ್ರೂ ಬಂದ್ರಲ್ಲ... ನಿಮ್ಗೆ ಬೇಸರ ಆಗಿದ್ರೆ ನನ್ನನ್ನು ಕ್ಷಮಿಸಿ"

"ಕ್ಷಮಿಸಿದೆ ಅನ್ನು..., ಹೋಗ್ಲಿ... ಹೊತ್ತಾಯ್ತು ಮಲಕ್ಕೋ..."

"ತುಂಬಾ ನಿದ್ರೆ ಬರ್‍ತಾ ಇದೆಯಾ? ನೀವು ಮಲಕ್ಕೊಳ್ಳಿ... ನಾನು ಸ್ವಲ್ಪ ಓದಬೇಕು"

"ಏನಾದ್ರೂ ಮಾಡ್ಕೋ... ನಂಗಂತೂ ನಿದ್ದೆ ತಡೆಯೋಕಾಗಲ್ಲ"

ಹಿರಣ್ಮಯ ಸೊಳ್ಳೆ ಪರದೆಯನ್ನು ಸೇರಿದ. ಸುಮಿತ್ರ ಅಲ್ಲೇ ಎದುರಿಗಿದ್ದ ಕುರ್ಚಿಯ ಮೇಲೆ ಕುಳಿತಳು.

ಮಂಚದಡಿಯಿಂದ ವಿಜಯ ಎಲ್ಲವನ್ನೂ ನೋಡುತ್ತಿದ್ದ. ಅವನಿಗೆ ದೇವಪುರದಲ್ಲಿ ತಾನು ಕಳೆದ ಮೊದಲ ರಾತ್ರಿಯ ನೆನಪಾಯಿತು. ಹಿರಣ್ಮಯನೂ ತನ್ನಂತೆಯೇ, ಯಾವುದೋ ಹಟಕ್ಕೆ ಬಲಿಯಾಗಿ, ಅಪಾರ ಯಾತನೆಗಳ ಮಧ್ಯೆ ಇವಳನ್ನು ತೃಣೀಕರಿಸಿ ಮಲಗಿದ್ದಾನೆಯೆ? ಇವನಿಗೆ ಇವಳಲ್ಲಿ ಅಷ್ಟೊಂದು ಆಸಕ್ತಿ ಇಲ್ಲದಿದ್ದ ಮೇಲೆ ಇವಳನ್ನು ತನ್ನ ರೂಮಿಗೇಕೆ ಸೇರಿಸುತ್ತಾನೆ? ಇದರಲ್ಲಿ ಏನೋ ಸ್ವಾರಸ್ಯವಿದೆ ಎನ್ನಿಸಿತು.

ಸುಮಿತ್ರ ತಾನು ಅಲ್ಲಿಟ್ಟಿದ್ದ ವಾರ್ಷಿಕ ಸಂಚಿಕೆಯ ಪುಟಗಳನ್ನೆ ತಿರುವಿ ಹಾಕತೊಡಗಿದಳು–

"ಸುಮಿತ್ರಾ... ಬೇಗ ಮಲಗಬಾರ್ದೇ..., ಆಗ್ಲೇ ಒಂದು ಗಂಟೆ"

ಹಿರಣ್ಮಯನ ಎಚ್ಚರಿಕೆಯಿಂದ ಸುಮಿತ್ರಳಿಗೆ ಬೇಸರವಾಯ್ತು.

"ಯಾಕೋ ಆ ಸಿನಿಮಾ ನೋಡಿದ ಮೇಲೆ ನನ್ನ ನಿದ್ದೇನೆ ದೂರ ಹೋಗಿಬಿಟ್ಟಿದೆ... ಅಲ್ಲ.. ಆ ಹೀರೋಯಿನ್ ವೇಷ ಹೇಗಿತ್ತು ನೀವು ನೋಡ್ಲೇ ಇಲ್ವ... ಅಬ್ಬ... ಎಷ್ಟೊಂದು ಮಿನಿಮಮ್ ಡ್ರೆಸ್!"

"ಛೆ... ಎಲ್ಲೀ ಹಾಳು ವಿಷಯ ಬಿಡು ಸುಮಿತ್ರ.."

"ಅಬ್ಬಾ... ನಂಗೆ ಆ ವೇಷದಲ್ಲಿ, ನಿಮ್ಮ ಮುಂದೆ ನಿಂತ್ಕೊಳ್ಳೋಕೂ ನಾಚ್ಕೆ ಆಗುತ್ತೆ..." ಎನ್ನುತ್ತಾ ಕುರ್ಚಿ ಬಿಟ್ಟು ಮೇಲೆದ್ದಳು.

ಅವಳ ಸೆರಗು ಕುರ್ಚಿಯ ಬೆನ್ನಿಗೆ ಸಿಕ್ಕಿಕೊಂಡು ಕೆಳಗೆ ಜಾರಿತು. ವಿಜಯನಿಗೆ ಅವಳ ಉಬ್ಬಿದ ವಕ್ಷಗಳು ಮತ್ತು ಬರಿಸಿದವು...

ಸುಮಿತ್ರ ತನ್ನ ಸೆರಗನ್ನು ಮತ್ತೆ ಹೊದೆಯಲಿಲ್ಲ... ಹಾಗೆಯೇ ಅದನ್ನು ಬಿಡಿಸಿ ಕೆಳಗೊಗೆದಳು. ನೆರಿಗಗಳನ್ನು ಹೊರಚೆಲ್ಲಿ ಸೀರೆಯನ್ನು ಕಳಚಿ ಹಾಕಿದಳು. ಕುಪ್ಪಸವನ್ನೂ ಬಿಚ್ಚಿ ಒಗೆದಾಗ ಅವಳು ತೊಟ್ಟ ಬ್ರಾ ಮತ್ತು ಸ್ಕರ್ಟುಗಳು ವಿಜಯನ ಕಣ್ಣು ಕುಕ್ಕಿದವು. ಕ್ರಮೇಣ ಸ್ಕರ್ಟನ್ನೂ ಬಿಚ್ಚಿ ಕೆಳಗೊಗೆದ ಸುಮಿತ್ರಳ ದೇಹದ ಮೇಲೆ ಕಾಚ ಮಾತ್ರ ಉಳಿದಾಗ–

"ಏನಿದು ಸುಮಿತ್ರಾ ನಿನ್ನ ಅವಸ್ಥೆ? ಯಾಕೋ ಅತಿ ಮಾಡ್ತಾ ಇದೀಯ... ಹೀಗೆಲ್ಲ ನೀನು ಎಂದೂ ಮಾಡಿರಲಿಲ್ಲ.. ಆದ್ರೆ ಈ ಹಿರಣ್ಮಯ ಇಷ್ಟಕ್ಕೆಲ್ಲ ಮರುಳಾಗೋ ಹೀನ ಮನುಷ್ಯ ಅಲ್ಲ...ಬೇಕಿದ್ರೆ ಪರೀಕ್ಷೆ ಮಾಡು ನನ್ನನ್ನು... ನಾನು ವಿಚಾರವಾದಿ.." ಎಂದು ಹಿರಣ್ಮಯ ಹೇಳುವುದು ಕೇಳಿಸಿತು ವಿಜಯನಿಗೆ.

ಹಿರಣ್ಮಯ ಮೇಲೆದ್ದು ಮಂಚದಿಂದ ಕೆಳಗಿಳಿದ. ವಿಜಯ ಸಚೇತನಾದ. ಅವನ ಮನಸ್ಸು ಒಮ್ಮೆ ಗಢಗಟಿಸಿ ನಕ್ಕಿತ್ತು... ಎಷ್ಟಾದರೂ ಅವನೂ ಉಪ್ಪು ಹುಳಿ ಖಾರ ತಿನ್ನುವ ಮನುಷ್ಯನಲ್ಲವೆ..ಎಂದುಕೊಂಡ.

ಹಿರಣ್ಮಯ ಸುಮಿತ್ರಳ ಭುಜವನ್ನು ಹಿಡಿದು ಬಲವಂತವಾಗಿ ಕುರ್ಚಿಯಲ್ಲಿ ಕೂರಿಸುತ್ತಾ–

"ಲೇ ಸುಮಿತ್ರಾ... ಇಲ್ನೋಡು... ಇದೇ ನನ್ನ ಕೊನೇ ಎಚ್ಚರಿಕೆ- ನೀನು ತೀರಾ ಇಷ್ಟೊಂದು ಭಂಡತನ ತೋರಿಸ್ತೀಯಾ ಅಂತ ನಾನು ಭಾವಿಸಿರ ಲಿಲ್ಲ... ಮರ್ಯಾದೆಯಿಂದ ನಿನ್ನ ಬಟ್ಟೆಬರೆ ಹಾಕ್ಕೋ. ಇಲ್ದಿದ್ರೆ ಇದೇ ಅವಸ್ಥೇಲಿ ನಿನ್ನ ಬೀದಿಗೆ ದಬ್ತೀನಿ... ನೀನು ಏನು ನೆಗೆದಾಡಿದರೂ ನಾನು ಈ ಜನ್ಮ ದಲ್ಲೇ ಮದುವೆಯಾಗೋದು ಸಾಧ್ಯವಿಲ್ಲ... ಇದು ನನ್ನ ಸಾಧನೆಗೆ ಅಪಚಾರ..." ಎಂದು ತೀಕ್ಷ್ಣವಾಗಿ ಹೇಳಿದಾಗ, ವಿಜಯನ ಉದ್ರೇಕವೆಲ್ಲ ಇಳಿಯಿತು.

"ಭೇಷ್..., ಹಿರಣ್ಮಯ! ಮೆಚ್ಚಿದೆ. ಒಪ್ಪಿದೆ! ಎಂಥ ಮನೋನಿಗ್ರಹ ನಿಂದು...! ಹೌದು... ಮನೋನಿಗ್ರಹ ಸಾಧ್ಯವಿದೆ... ನಾನೂ ಅದನ್ನು ಸಾಧಿಸ್ತೀನಿ... ಅದರಲ್ಲೂ ಒಂದು ಆನಂದವಿದೆ" ಎಂದುಕೊಂಡ ವಿಜಯ.

ಸುಮಿತ್ರ ಪೆಚ್ಚಾದಳು... ಅವಳು ಸಿನಿಮಾ ದಲ್ಲಿನ ದೃಶ್ಯಗಳಿಂದ ಹಿರಣ್ಮಯ ಭಾವೋದ್ವೇಗ ಗೊಂಡಿರಬಹುದೆಂದು ಭಾವಿಸಿದ್ದಳು. ಆ ಮನಃ ಸ್ಥಿತಿಯನ್ನು ಮತ್ತಷ್ಟು ಉದ್ರೇಕಿಸುವ ಸಲುವಾಗಿ ತನ್ನ ನಗ್ನ ದೇಹವನ್ನು ಅವನ ಮುಂದೆ ಪ್ರದರ್ಶಿ ಸುವ ಸಾಹಸ ಮಾಡಿದ್ದಳು. ಹಿರಣ್ಮಯನ ಪ್ರತಿ ಕ್ರಿಯೆಯಿಂದ ಅವಳಿಗೆ ತೀವ್ರ ನಿರಾಶೆಯಾಯಿತು. ಬೇಗ ಬೇಗ ತನ್ನ ಬಟ್ಟೆಗಳನ್ನೆಲ್ಲ ತೊಟ್ಟುಕೊಂಡು ನಿಂತಳು. ಅವಳ ಮುಖದಲ್ಲಿ ಎಂಥದೋ ಕ್ರೌರ್ಯ ತಾಂಡವವಾಡಿದಂತಾಯಿತು.

"ಹಿರಣ್ಮಯಾ... ನೀವು ನನ್ನ ಯೌವನಕ್ಕ ಅವಮಾನ ಮಾಡಿದ್ರಿ... ಇರಲಿ... ಇನ್ನೆಂದೂ ನಿಮ್ಮ ಮುಖ ಸಹ ನೋಡೋದಿಲ್ಲ... ಆದರೆ ನಾನು ಇದರ ಸೇಡು ತೀರಿಸ್ಕೊಳ್ಳೋವರ್ಗೂ ನಂಗೆ ಸಮಾ ಧಾನವಿಲ್ಲ...ಬರ್ತೀನಿ' ಎಂದವಳೇ ಬಾಗಿಲು ತೆರೆದು ಆ ವೇಳೆಯಲ್ಲೇ ತನ್ನ ಮನೆಯತ್ತ ವೇಗವಾಗಿ ನಡೆ ದಳು.

ಹಿರಣ್ಮಯ ಬಾಗಿಲು ಮುಚ್ಚಿದ. ಒಂದು ನಿಮಿಷ ಅಲ್ಲಿದ್ದ ಕುರ್ಚಿಯೆದುರು ದಿಗ್ಭ್ರಾಂತನಂತೆ ನಿಂತ. ಇದ್ದಕ್ಕಿದ್ದ ಹಾಗೇ ಆ ಕುರ್ಚಿಯ ಮೇಲೆ ಕುಸಿದು ಮೇಜಿಗೆ ತಲೆ ಕೊಟ್ಟು ಬಿಕ್ಕತೊಡಗಿದ.


ಕಣ್ಣೀರಿನ ನಡುವೆ ಹಿರಣ್ಮಯ ಉದ್ಗರಿಸಿದ-

"ಅಯ್ಯೋ... ಸುಮಿತ್ರಾ..! ನಾನು... unfortunate !"

ವಿಜಯನಿಗೆ ಅದು ಸ್ಪಷ್ಟವಾಗಿ ಕೇಳಿಸಿತು. ಹೌದು... ಇದೇ ಪದಗಳೇ ಆ ಕಾಗದದ ತುಂಡಿ ನಲ್ಲಿವೆ– ದುರದೃಷ್ಟಶಾಲಿ ಇವನೇ... ಎಷ್ಟೊಂದು ವ್ಯಥೆ ಪಡುವಂತಾಯಿತು ಇವನಿಗೆ! ಯಾಕೆ ಈ ದೌರ್ಭಾಗ್ಯ... ವಿಜಯ ಮಂಚದ ಕೆಳಗೇ ಯೋಚಿಸ ತೊಡಗಿದ...

ತಟ್ಟನೆ ವಿಜಯನಿಗೆ ವಸ್ತುಸ್ಥಿತಿಯ ಅರಿ ವಾಯಿತು- ಅವನ ತಲೆ ಒಂದೇ ಸವನೆ ಸುತ್ತ ತೊಡಗಿತು... ಛೆ... ಎಂಥ ಆದರ್ಶವನ್ನು ಕಣ್ಣೆ ದುರಿಗಿಟ್ಟುಕೊಂಡು ತಾನು ಇದುವರೆಗೂ ನರಳಿ ದ್ದಾಯಿತು! ಇನ್ನು ಈ ನಾಟಕ ಪರಂಪರೆಗೆ ಮುಕ್ತಾ ಯ ಹಾಡಬೇಕು... ಹಿರಣ್ಮಯಾ ...ಸಾಕು ನಿನ್ನ ನಾಟಕ!

ತಡೆಯಲಾರದೇ ವಿಜಯ ಮಂಚದ ಕೆಳಗಿನ ಿಂದ ಹೊರಕ್ಕೆ ಬಂದು ಹಿರಣ್ಮಯನೆದುರು ನಿಂತ.



ತಲೆ ತಗ್ಗಿಸಿದ ಹಿರಣ್ಮಯನಿಗೆ ಮೊದಲು ವಿಜಯ ತನ್ನೆದುರಿಗೆ ನಿಂತದ್ದು ಕಾಣಿಸಲಿಲ್ಲ.

"ಹಿರಣ್ಮಯಾ... ನಿನ್ನ ಗುಟ್ಟು ರಟ್ಟಾಯಿತು.. ನಿನ್ನ ನಾಟಕ ಅರ್ಥವಾಯ್ತು... ಆದ್ರೆ, ನನ್ನ ಜೀವ ನದ ಅಮೂಲ್ಯಭಾಗಾನೇ ನೀನು ಹಾಳ್ಮಾಡಿಬಿಟ್ಟೆ"

ಹಿರಣ್ಮಯ ಅಪ್ರತಿಭನಾದ. ತಲೆ ಮೇಲೆ ತ್ತಿದ. ಕಣ್ಣೀರೊರಸಿಕೊಂಡು ಸೆಟೆದುನಿಂತ.

"ವಿಜಯ್... ನೀನು ಹ್ಯಾಗ್ಬಂದೆ ಇಲ್ಲಿಗೆ?" ಅವನ ಧ್ವನಿಯಲ್ಲಿ ನೋವಿತ್ತು.

"ನಂಗೊತ್ತು ಹಿರಣ್ಮಯಾ, ನಾನು ಹೀಗೆಲ್ಲ ಇಲ್ಲಿಗೆ ಬರಬಾರ್ದೂ ಅಂತ... ಆದ್ರೆ... ನಾನು ಇವತ್ತು ಬರ್ದೇ ಹೋಗಿದ್ರೆ ಇಡೀ ನನ್ನ ಜೀವ ನವೇ ವ್ಯರ್ಥ ಆಗ್ತಿತ್ತು... ಈಗ ಸುಮಾರು ಒಂದ ತಿಂಗಳಿಂದಲೂ ನಿನ್ನ ಮತ್ತು ಸುಮಿತ್ರಾನ ಅಂತ ರ್ಯ ಭೇದಿಸೋಕೇ ಈ ಊರ್ನಲ್ಲೇ ಹೊಂಚುಹಾಕ್ದೆ. ಇವತ್ತಿಗೆ ನನ್ನ ರಜೇನೂ ಮುಗಿತು... ನಾಳೇ ನಾನಿ ಲ್ಲಿಂದ ದೇವಪುರಕ್ಕೆ ಸೀದಾ ಹೊರಡ್ತೀನಿ... ಆದ್ರೆ ನಾನು ನಿಂಗೆ ಭರವಸೆ ಕೊಡ್ತೀನಿ... ನಿನ್ನ ವಿಷ್ಯ ಯಾರ ಹತ್ರಾನೂ ಹೇಳೋದಿಲ್ಲ."

"ವಿಜಯ್... ಇನ್ನೇನು ಪ್ರಯೋಜ್ನ...? ಯಾವ ಗುಟ್ಟನ್ನು ಇಲ್ಲೀ ವರೆಗೂ ಕಾಪಾಡಿಕೊಂಡು ಬಂದ ನಾನು, ಎಲ್ಲರ ದೃಷ್ಟಿಯಲ್ಲೂ ಗೌರವಾನ್ವಿತ ಅನ್ನಿಸ್ಕೊಂಡಿದ್ನೋ, ಆ ಗುಟ್ಟು ನಿನ್ನೆದುರಿಗೇ ಇವತ್ತು ಬಯಲಾಯ್ತು... ನಾನು ಮೊದಲೇ ನಿಂಗೆ ಹೇಳ್ದೆ-

ನೀನು ಮದುವೆಯಾಗಿ ಸುಖವಾಗಿರು ಅಂತ... ನೀನ್ಯಾಕೆ ನನ್ನನ್ನು ಆದರ್ಶವನ್ನಾಗಿ ಇಟ್ಕೊಂಡೆ?"

"ಹಿರಣ್ಮಯಾ... ನೀನು ನಂಗೆ ಮದುವೆಯಾಗೂ ಅಂತ ಹೇಳಿದ್ದು, ನಾನು ತೀರ ದುರ್ಬಲ. ಸಂಯಮ ಇಲ್ದೇ ಇರೋ ಮನುಷ್ಯ ಅನ್ನೋ ದೃಷ್ಟಿಯಿಂದ. ನೀನು ಬಹಳ ಸಂಯಮಿ, ವಿಚಾರವಂತ ಅನ್ನೋ ಭ್ರಮೆಯ ಜಾಲವನ್ನೇ ನನ್ನ ಸುತ್ತ ಹೆಣೆದುಬಿಟ್ಟೆ... ಹೋಗ್ಲಿ ಬಿಡು... ಆದದ್ದಾಯ್ತು... ನಾನಿನ್ನು ದೇವಪುರಕ್ಕೆ ಹೋಗಿ ಮೊದ್ಲು ಅಪ್ಪನಿಗೊಂದು ಪತ್ರ ಬರೀಬೇಕು... ಆದರೆ... ಹಿರಣ್ಮಯ... ನಿನ್ನ ಭವಿಷ್ಯ... ಆ ಸುಮಿತ್ರಾ ಏನೇನು ಅನಾಹುತ ಮಾಡ್ತಾಳೋ..."

"ವಿಜಯ್...ನಂಗೆ ಇನ್ನು ಯಾವ ಭಯಾನೂ ಇಲ್ಲ... ನೀನು ಸುಖವಾಗಿ ದೇವಪುರಕ್ಕೆ ನಡಿ"

ಗೆಳೆಯರಿಬ್ಬರೂ ಬಹಳ ಹೊತ್ತಿನವರೆಗೆ ನಿದ್ರಿಸಲಿಲ್ಲ. ಮರುದಿನ ಬೆಳ್ಳಿಗೆದ್ದು ವಿಜಯ ದೇವಪುರದ ಬಸ್ ಹಿಡಿದ.

× × ×

ಬಸ್ ದೇವಪುರವನ್ನು ತಲುಪಿದಾಗ ಹತ್ತೂವರೆಯಾಗಿತ್ತು. ವಿಜಯ ಬಸ್ಸಿನಿಂದಿಳಿದವನೇ ನೇರವಾಗಿ ಶಾಲೆಗೆ ಹೋದ. ಅಲ್ಲಿ ಅವನಿಗೆ ಮೊದಲು ತಿಳಿದ ವರ್ತಮಾನವೆಂದರೆ ಸುಧಾ ರಾಜೀನಾಮೆ ನೀಡಿ ಐದು ದಿನವಾಯಿತು ಎಂಬುದು.

ವಿಜಯನಿಗೆ ದಿಗ್ಭ್ರಾಂತಿಯಾಯಿತು. ಸುಧಾ ರಾಜೀನಾಮೆ ಕೊಡುವ ಕಾರಣವಾದರೂ ಏನಿದ್ದೀತು? ತಾನು ಇಲ್ಲದುದನ್ನು ಕಂಡು ಬೇಸರಿಸಿ, ಹೀಗೆ ಮಾಡಿರಬಹುದೆ? ಯಾರನ್ನು ಕೇಳುವುದು? ರವಿಯನ್ನು ವಿಚಾರಿಸಿದರೆ? ಹೌದು... ಸುಧಾ ಬಗ್ಗೆ ಅವನಿಗೆ ಅಲ್ಪ ಮಾಹಿತಿಯಾದರೂ ಗೊತ್ತಿರಬಹುದು... ಅಥವಾ ತನ್ನ ಮನೆಯ ಮಾಲಿಕ ಗೋವಿಂದಯ್ಯ, ಅಥವಾ ಅವರ ಮಗ ಗೋಪಾಲ—ಇವರಾರಿಗಾದರೂ ಈ ರಾಜೀನಾಮೆಯ ಹಿನ್ನೆಲೆ ತಿಳಿದಿದ್ದರೂ ತಿಳಿದಿರಬಹುದು.

ಆ ದಿನ ತರಗತಿಯಲ್ಲಿ ಅವನ ಮನಸ್ಸು ಸ್ವಸ್ಥವಾಗಿರಲಿಲ್ಲ. ಸಣ್ಣದಾಗಿ ತಲೆನೋವು ಆರಂಭವಾಯಿತು. ನಾಲ್ಕು ಗಂಟೆಯಾಗುತ್ತಲೇ, ಮುಖ್ಯಸ್ಥರ ಅನುಮತಿ ಪಡೆದು ಮನೆಯ ಕಡೆ ಹೊರಟ.

ಗೋವಿಂದಯ್ಯ ವಿಜಯನನ್ನು ಕಂಡವನೇ— "ಏನು ಸ್ವಾಮಿ... ಇವತ್ತು ಬಂದ್ರಾ? ಅದ್ಯಾರೋ ನಿಮ್ಗೆ ತೆಗಿದ್ರಲ್ಲ ಸುಧಾ ಅಂತ... ಅವರು ಕೆಲ್ಸ ಬಿಟ್ರಂತೆ... ನೀವೂ ಬರ್‍ಲಿಲ್ಲ... ನಾನಾಗ್ಲೇ ಮನೇನ ಬೇರೆ ಯಾರ್‍ಗಾದ್ರೂ ಕೊಡೋದು ಅಂತ ತೀರ್ಮಾನಿಸಿದ್ದೆ.. ನಿಮ್ಮ ಅಡ್ವಾನ್ಸೂ ಮುಗೀತು... ಈಗೇನ್ಮಾಡ್ತೀರಿ..."-ಎಂದು ಒಂದೇ ಉಸಿರಿಗೆ ಹಲವಾರು ಸಮಸ್ಯೆಗಳನ್ನು ಮುಂದಿಟ್ಟನು.

ವಿಜಯನಿಗೆ ಬೇಸರವಾಗಿತ್ತು. ಅವನು ಹೆಚ್ಚು ಮಾತಾಡದೆ, ಜೇಬಿನಿಂದ ಮೂವತ್ತು ರೂಪಾಯಿಗಳನ್ನು ತೆಗೆದು— "ಇಗೊಳ್ಳಿ ಮುತ್ತೊಂದು ತಿಂಗಳ ಅಡ್ವಾನ್ಸ್... ಕೊಡಿ ಮೊದ್ಲು ಬೀಗದ ಕೈನ..." ಎಂದವನೇ ಅವರಿಂದ ಬೀಗದ ಕೈಪಡೆದು ಮನೆಯತ್ತ ನಡೆದ.

ಮನೆಯೊಳಗೆ ಹೆಜ್ಜೆ ಇಟ್ಟಾಗ ತನ್ನ ಬಟ್ಟೆಬರೆ, ಹೋಲ್ಡಾಲು, ಪುಸ್ತಕ ಸ್ಟೋವ್, ಪಾತ್ರೆ... ಎಲ್ಲವೂ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಸುಧಾಳಿಗೆ ಸೇರಿದ ಯಾವ ಒಂದು ಪದಾರ್ಥವೂ ಅಲ್ಲಿ ಕಾಣಲಿಲ್ಲ... ತಟ್ಟನೆ ವಿಜಯನಿಗೆ ತನ್ನ ದಿನಚರಿಯ ಜ್ಞಾಪಕವಾಯ್ತು... ಹೌದು... ಅದನ್ನು ಕಳಿಸುವಂತೆ ಸುಧಾಗೆ ತಾನೊಂದು ಪತ್ರ ಬರೆದಿದ್ದೆ. ಆದರೆ ಹಿರಣ್ಮಯನನ್ನು ಪರೀಕ್ಷಿಸುವ ಗಡಿಬಿಡಿಯಲ್ಲಿ ಅದರ ವಿಚಾರ ತನಗೂ ಮರೆತುಹೋಗಿತ್ತು. ಅವಳೂ ಅದನ್ನು ಕಳಿಸಿರಲಿಲ್ಲವಲ್ಲ.

ಆತುರದಿಂದ ತನ್ನ ಹೋಲ್ಡಾಲನ್ನು ಬಿಚ್ಚಿ ನೋಡಿದನು. ಪುಸ್ತಕಗಳ ರಾಶಿಯನ್ನೆಲ್ಲ ಕೊಡವಿ ನೋಡಿದನು. ಆದರೆ ಎಲ್ಲಿಯೂ ಆ ದಿನಚರಿಯ ಸುಳಿವಿಲ್ಲ... ಆದರೆ ತನ್ನ ಹೋಲ್ಡಾಲಿನ ಪದರಿನಲ್ಲಿ ಒಂದು ಒಣಗಿದ ಮಲ್ಲಿಗೆ ದಂಡೆ ಸಿಕ್ಕಿತು. ಅದನ್ನು ವಿಜಯ ಕೈಗೆತ್ತಿಕೊಂಡು ನೋಡಿದ. ಇದು ಸುಧಾ ಮುಡಿದ ಮಲ್ಲಿಗೆಯೇ ಇರಬೇಕು. ಆದರೆ ಇದು ತನ್ನ ಹಾಸಿಗೆಯಲ್ಲಿ ಬಂದ ಬಗೆ? ಸುಧಾ ತನ್ನ ಹಾಸಿಗೆಯಲ್ಲಿ ಮಲಗಿದ್ದಾಳೆ... ಹೌದು... ಅವಳಿಗೆ ತನ್ನಲ್ಲಿ ಅಪಾರ ಪ್ರೀತಿ... ಹಾಗೆಂದೇ ತಾನಿಲ್ಲಿಂದ ಹೊರಟು ಹೋದ ಮೇಲೆ ಅವಳು ತನ್ನ ಸುಂದರ ದೇಹವನ್ನು ಈ ಹಾಸಿಗೆಯ ಮೇಲೆ ಎಷ್ಟೋ ದಿನ ಚೆಲ್ಲಿದ್ದಾಳೆ!

ಆ ಭಾವದಿಂದಲೇ ಅವನು ಪುಳಕಿತನಾದ ಈ ಹಿಂದೆ ಈ ತನ್ನ ಭಾವನೆಗಳ ಮುಕ್ತ ವ್ಯವಹಾರಕ್ಕೆ ಆ ಹಾಳು ಹಿರಣ್ಮಯ ಅಡ್ಡಿಯಾಗಿ ಕುಳಿತಿದ್ದ. ಇನ್ನ ವನ ಕಟ್ಟು ಬಗೆ ಹರಿಯಿತು... ಸುಧಾ ತನ್ನವಳು...

ಆದರೆ... ಸುಧಾ ರಾಜೀನಾಮೆ ನೀಡಿದ್ದಾಳೆ... ಜೊತೆಗೆ ತನ್ನ ಆ ರಹಸ್ಯತಮವಾಗಿದ್ದ ದಿನಚರಿಯೂ ಕಾಣೆಯಾಗಿದೆ. ಅವಳು ಅದನ್ನು ಓದಿರಬಹುದೆ? ಓದಿದಾಗ ಅವಳಿಗೆ ತನ್ನ ಬಗ್ಗೆ ಯಾವ ಭಾವನೆ ಉಂಟಾಗಿರಬಹುದು?

ಮನಸ್ಸು ತಡೆಯದೇ ಮೇಲೆದ್ದ. ಸಾಮಾನು ಗಳನ್ನೆಲ್ಲ ಅಚ್ಚುಕಟ್ಟಾಗಿ ಜೋಡಿಸಿಯಾದ ಮೇಲೆ, ಬಾಗಿಲನ್ನೆಳೆದುಕೊಂಡು ಬೀಗ ಹಾಕಿ ರವಿಯ ಮನೆ ಕಡೆ ಹೊರಟ.

× × ×

"ಎಲ್ಲ ಚೆನ್ನಾಗಿದೀರಾ ಸಾರ್?" ಎನ್ನುತ್ತಾ ಒಳಬಂದ ವಿಜಯನನ್ನು ರಾಯರು ಆಪಾದಮಸ್ತಕ ವಾಗಿ ನೋಡಿದರು. ವಿಜಯನೆಂದು ಚೆನ್ನಾಗಿ ಅರ್ಥ ವಾಯಿತು.

"ಓಹೋ ಬನ್ರೀ ವಿಜಯ್... ಯಾವಾಗ ಬಂದ್ರಿ? ನಿಮ್ಮ ರಜಾ ಎಲ್ಲ ಮುಗೀತಾ ?" ಎಂದು ಸ್ವಾಗತಿಸಿದರು.

ಕಮಲಮ್ಮನವರೂ ಹಜಾರದಲ್ಲಿ ಇಣುಕಿನೋಡಿ ದಾಗ ವಿಜಯ ಕಣ್ಣಿಗೆ ಬಿದ್ದ. "ಏನಪ್ಪ? ಯಾವಾಗ ಬಂದ್ರಿ? ಎಲ್ಲ ಆರೋಗ್ಯವೆ?"

ವಿಜಯ ಮುಗುಳ್ನಗೆಯೊಡನೆ ಹೇಳಿದ–"ಎಲ್ಲ ಅಂದ್ರೆ ಯಾರಮ್ಮಾ? ನಾನೊಬ್ನೇ ತಾನೇ... ಇವತ್ತು ಬೆಳಿಗ್ಗೆ ಬಂದೆ... ರವಿ ಮನೇಲಿಲ್ವಾ?"

ಆ ಹೊತ್ತಿಗೆ ಸರಿಯಾಗಿ ರವಿ ಅಲ್ಲಿಗೆ ಬಂದ. ವಿಜಯನನ್ನು ಕಂಡ ಕ್ಷಣಕಾಲ ಅವನಿಗೂ ಆಚ್ಚರಿ ಯಾಯಿತು. ವಿಜಯನೇ ಮೇಲೆದ್ದು ಹೋಗಿ ಅವನ ಭುಜದ ಮೇಲೆ ಕೈಹಾಕಿ "ಹಲೋ ರವಿ... ಚೆನ್ನಾ ಗಿದೀಯಾ? ನನ್ನ ಮರೆತೇಬಿಟ್ಯಾ?" ಎಂದು ಮಾತಾಡಿಸಿದ.

"ಛೆ...ಛೆ... ಎಲ್ಲಾದ್ರೂ ಉಂಟೇ ವಿಜಯ್.. ನಿನ್ನ ಮರೆಯೋದಾ! ಆದಿದ್ರಿ... ನೀನು ಇದ್ದಕ್ಕಿದ್ದ ಹಾಗೇ ಇಲ್ಲಿಗೆ ಬಂದದ್ದು ನೋಡಿ ನಂಗೆ ಆಶ್ಚರ್ಯ ಆಯ್ತು... ಇವತ್ತು ಬಂದಿರಬೇಕಲ್ವೆ ನೀನು?"

"ಹೌದು... ಬೆಳಿಗ್ಗೆ ಬಂದೆ... ಸುಧಾ ಸಮಾಚಾರ ಏನು? ಅವಳು ರಾಜೀನಾಮೆ ಕೊಟ್ಟ ದ್ದಕ್ಕೆ ನಿಮ್ಗೇನಾದ್ರೂ ಕಾರಣ...!?"

ರಾಯರು ಸುಧಾ ಹೆಸರು ಕೇಳಿದೊಡನೆಯೇ ಕೆರಳಿದರು–

"ಇಲ್ನೋಡ್ರೀ... ನೀವು ಈ ಮನೇವಳಗೇ ಆ ಹೆಸರೆತ್ತಕೂಡದು...ಯಾಕೆ ರಾಜೀನಾಮೆ ಕೊಟ್ಳೋ ನಮಗೇನು ಗೊತ್ತು? ನೀವೇ ಹೋಗಿ ಅವರ ಮನೇಲಿ ವಿಚಾರ್ಸಿ ಬೇಕಿದ್ರೆ..."

ರವಿ ಮಧ್ಯೆಬಾಯಿ ಹಾಕಿದ: "ಛೆ...ಛೆ... ನೀವ್ಯಾಕೆ ಅಷ್ಟು ರೇಗ್ತೀರಿ? ಪಾಪ... ಯಾವ ವಿಷ ಯಾನೂ ಗೊತ್ತಿಲ್ಲ ವಿಜಯ್‌ಗೆ. ವಿಜಯ್... ನೀನೇನೂ ಬೇಜಾರು ಮಾಡ್ಕೋಬ್ಯಾಡಾ... ಈಗ ನಮಗೂ ಸುಧಾ ಮನೇಯವರಿಗೂ ಅಷ್ಟಕ್ಕಷ್ಟೆ... Dont worry...ಬಾ ಕೂತ್ಕೋ.. ಇವತ್ತು ಇಲ್ಲೇ ಊಟ ನಿನ್ಗೂಟ..."

ವಿಜಯ ಇದೆಲ್ಲ ವಿಷಯಗಳಿಂದ ಸ್ತಂಭೀ ಭೂತನಾದ.. ಸುಧಾ ಈ ಊರನ್ನೇ ಬಿಡುವ ಕಾರಣ ವಾದರೂ ಏನಿದ್ದೀತು? ಅವಳ ಮದುವೆಯ ವಿಚಾ ರದಲ್ಲಿ ಉದ್ಭವಿಸಿದ ಸಮಸ್ಯೆ ಯಾವ ಹಂತವನ್ನು ಮುಟ್ಟಿತು? ಇದರಲ್ಲಿ ರವಿಯ ಹಾಗೂ ಗುಂಡೂ ರಾಯರ ಪಾತ್ರವೇನು? ಮುಂತಾದ ಅವನ ಹಲ ವಾರು ಪ್ರಶ್ನೆಗಳಿಗೆ ಉತ್ತರ ದೊರೆಯದಾಯಿತು.

"ಏನೂ ಬೇಡ ರವಿ... ನಾನು ಮನೆಗೇ ಹೋಗ್ತೀನಿ... ಅಲ್ಲೇ ಅಡಿಗೆ ಮಾಡ್ತೀನಿ... ಬೇಜಾ ರಾದ್ರೆ ಹೋಟಲಿದ್ದೇ ಇದೆ..." ಎನ್ನುತ್ತಾ ಮೇಲೆದ್ದ.

ಅಷ್ಟರಲ್ಲಿ ಗುಂಡೂರಾಯರು ಶಾಂತರಾಗಿ ದ್ದರು. ಅವರೇ ಎದ್ದು ಬಂದು ವಿಜಯನ ಕೈ ಹಿಡಿದು,

"ದಯವಿಟ್ಟು ಬೇಜಾರಾಗಬ್ಯಾಡ್ರೀ...ಇವತ್ತು ಇಲ್ಲಿ ನೀವು ಊಟ ಮಾಡ್ಲೇಬೇಕು..." ಎಂದು ಕೇಳಿಕೊಂಡರು. ವಿಜಯ ನಿರ್ವಾಹವಿಲ್ಲದೆ ಕುಳಿತ.

ಊಟವಾದ ಮೇಲೆ ವಿಜಯ ಹೊರಕೋಣೆ ಯಲ್ಲಿ ಒಬ್ಬನೇ ಕುಳಿತಿದ್ದ. ಎದುರಿಗಿದ್ದ ಮೇಜಿನ ಮೇಲಿನ ಪುಸ್ತಕಗಳ ಮಧ್ಯೆ ಒಂದು ಪುಸ್ತಕ ಇವನ ಗಮನವನ್ನು ವಿಶೇಷವಾಗಿ ಸೆಳೆಯಿತು..

ಹೌದು... ಅನುಮಾನವೇ ಇಲ್ಲ... ಅದು ತನ್ನದೇ ದಿನಚರಿ! ಅರೆ! ಅದು ಹೇಗೆ ಇಲ್ಲಿಬಂತು? ಅದು ಇಷ್ಟು ಬಹಿರಂಗ ಸ್ಥಳದಲ್ಲಿ ರಾರಾಜಿಸುತ್ತಿ ರುವಾಗ ಅದನ್ನು ಎಲ್ಲರೂ ಅಂದರೆ, ಈ ರವಿ, ಸುಧಾ, ಗುಂಡೂರಾಯರು ಇತ್ಯಾದಿ–ಓದಿದ್ದಾರೆ. ಓದಿ ತನ್ನ ಒಳಮುಖವನ್ನು ಚೆನ್ನಾಗಿ ಅರ್ಥಮಾಡಿ ಕೊಂಡು ತನ್ನ ಬೆನ್ನ ಹಿಂದೆ ಮುಸಿಮುಸಿ ನಗುತ್ತಿ ದ್ದಾರೆ– ಎಂದುಕೊಂಡ. ಇನ್ನು ಆ ದಿನಚರಿಯು ತನ್ನೆಲ್ಲ ಅರ್ಥಗಳನ್ನು ಕಳೆದುಕೊಂಡಿದೆ.. ಅದರ ಪ್ರತೀಕ–ಪ್ರತಿರೂಪವಾದ ತಾನೂ ಹಾಗೆಯೇ ಇವ ರೆಲ್ಲರ ಪಾಲಿಗೆ ಅರ್ಥಹೀನನಾಗಿದ್ದೇನೆ ಎನ್ನಿಸಿತು.

"ವಿಜಯ್...ನೀನೂ ಇಲ್ಲೇ ಮಲಗು ಇವತ್ತು. ಒಬ್ನೇ ಇನ್ನೇನು ಮಲಗ್ತಿ ಅಲ್ಲಿ... ನಿನ್ನತ್ರ ಭಾಳಾ ಮಾತಾಡೋದಿದೆ..." ಎನ್ನುತ್ತಾ ರವಿ ಒಳಕ್ಕೆ ಬಂದಾಗ ವಿಜಯ್ ಬೆಚ್ಚಿದ. ರವಿಯ ಕೇಳಿಕೆಯನ್ನು ಸ್ವೀಕರಿಸುವ ಅಥವಾ ನಿರಾಕರಿಸುವ ಸ್ಥಿತಿಯಲ್ಲಿ ಅವನ ಮನಸ್ಸು ಇರಲಿಲ್ಲ. ಅವನು ಸುಧಾ ಬಗ್ಗೆ ತೀವ್ರವಾಗಿ ಏನೇನೋ ಯೋಚಿಸುತ್ತಿದ್ದನು.

ರವಿಯೇ ಮಾತಿಗಾರಂಭಿಸಿದ. "ನೀನು ಇಷ್ಟು ದಿನ ಎಲ್ಲಿಗೆ ಹೋಗಿದ್ದೆ? ಸುಧಾ ಮದುವೆ ವಿಷಯ ವಾಗಿ ಏನು ತೀರ್ಮಾನಕ್ಕೆ ಬಂದೆ?"

"ರವಿ, ಈ ಎಲ್ಲ ಪ್ರಶ್ನೆಗಳಿಗೂ ಉತ್ತರಹೇಳೋ ದಕ್ಕೆ ನಂಗಿನ್ನೂ ಮೂರು ದಿನ ಅವಕಾಶ ಬೇಕು... ನಾನೀಗ ನನ್ನ ಜೀವಮಾನದಲ್ಲಿ ಒಂದು ಷಾಕ್ ಟ್ರೀಟ್ ಮೆಂಟ್ ತಗೊಂಡು ಬಂದಿದೀನಿ. ಆ ಷಾಕ್ ನನ್ನ ಒಳ್ಳೇದಕ್ಕೆ ಆಗಿದ್ರೂ, ಅದರ ತೀವ್ರತೆ ತಡೆಯೋಕೆ ನಂಗಿನ್ನೂ ಸಾಧ್ಯವಾಗಿಲ್ಲ..."

ರವಿಗೆ ವಿಜಯನ ಮಾತುಗಳು ದೊಡ್ಡ ಒಗಟಿ ನಂತಿದ್ದವು. ಯಾವುದೂ ಅರ್ಥವಾಗದ ರವಿ ಸ್ವಲ್ಪ ಹೊತ್ತು ಮೌನ ವಹಿಸಿದ.

"ರವಿ... ನಿನಗೆ ನನ್ನ ಮಾತು ಅರ್ಥವಾಗ್ದೇ ಇರಬಹುದು... ಆದ್ರೆ ಈಗ್ಲೇ ನಾನು ನಿಂಗೆ ಯಾವ್ದನ್ನೂ ವಿವರಿಸೋಕೆ ಹೋಗೋದಿಲ್ಲ... ಕ್ರಮೇಣ ನಿಂಗೆ ತಿಳಿಯುತ್ತೆ... ಆದ್ರೆ ನಂದೊಂದು ಪ್ರಶ್ನೆ... ನನ್ನ ದಿನಚರಿ ಪುಸ್ತಕ ನಿಮ್ಮನೇಗೆ ಹ್ಯಾಗೆ ಬಂತು? ಹೇಳ್ತೀಯಾ?"

ರವಿಗೆ ದಿಕ್ಕೇ ತೋಚದಂತಾಯಿತು. ಆ ಹಾಳು ದಿನಚರಿಯ ಪುಸ್ತಕವನ್ನು ಹಾಳು ಮಾಡಬೇಕಾ ಗಿತ್ತು... ಇಲ್ಲವೇ ಎಲ್ಲಿಯಾದರೂ ಜೋಪಾನ ವಾಗಿ ಭದ್ರಪಡಿಸಬೇಕಾಗಿತ್ತು... ವಿಜಯನ ಆಕಸ್ಮಿಕ ಆಗಮನದ, ಸುಳಿವು ತಮಗಾರಿಗೂ ಹತ್ತಲಿಲ್ಲ... ಇದ್ದ ಸ್ಥಿತಿಯನ್ನು ಹೇಳುವುದು ಹೇಗೆ ?

"ವಿಜಯ್...ನಿನ್ನ ದಿನಚರೀನ ನಮಗೆ ಕೊಟ್ಟ ವಳು ಸುಧಾ..."

"ಏನಂದೆ? ಸುಧಾ ಕೊಟ್ಟಳೆ? ಯಾಕೆ?" ಕಾತುರ ವಾಗಿ ಕೇಳಿದ ವಿಜಯ.

"ಅದೇನೋ ನೀನು ಅದನ್ನು ಕಳಿಸೋದಕ್ಕೆ ಪತ್ರ ಬರ್ದಿದ್ದೆಯಂತೆ...ಅವಳಿಗೆ ವರ್ಗ ಹೋಯ್ತಂತೆ... ರಾಜೀನಾಮೆ ಕೊಟ್ಟು ಹೋಗ್ತೇಕಾದ್ರೆ ಅವಳ ತಮ್ಮನ ಕೈಲಿ ಕೊಟ್ಟು ಕಳಿಸಿದ್ದಳು....ನಮಗೆ ನಿನ್ನ ವಿಳಾಸ ಗೊತ್ತಿರಲಿಲ್ಲವಲ್ಲ"

ಓಹೋ...ಇರಬಹುದು. ಹಾಗಾದರೆ ಇವರಾರೂ ತನ್ನ ದಿನಚರಿಯನ್ನು ಓದುವ ಸಾಧ್ಯತೆಗಳಿಲ್ಲ...ಓದಿ ದರೂ ಕೆಲವು ಭಾಗ ಇವರಿಗೆ ಅರ್ಥವಾಗುವುದೂ ಕಷ್ಟ. ತಡೆಯಲಾರದೇ ಕೇಳಿದ–

"ರವಿ...ಒಂದ್ವಿಷಯ ಸಿರಿಯಸ್ಸಾಗಿ ಹೇಳು. ನೀವಾರೂ ಈ ದಿನಚರಿ ಓದಿಲ್ಲ ತಾನೆ?"

"ಎಲ್ಲಾದ್ರೂ ಉಂಟೆ ವಿಜಯ್? ಮತ್ತೊ ಬ್ಬರ ಪರ್ಸನಲ್ ರಿಕಾರ್ಡ್ಸ್ ಓದೋ ಅಂಥ ಕೀಳ ಮಟ್ಟದ ಜನ ಇಲ್ಲಾರೂ ಇಲ್ಲ...ಸುಧಾ ಓದಿ ದ್ದಾಳೋ ಇಲ್ವೋ ನನಗೆ ಗೊತ್ತಿಲ್ಲ...ನಮ್ಮನೇಲಂತೂ ಅದನ್ನ ಯಾರೂ ತಿರುಗಿ ಸಹಿತಾ ನೋಡಿಲ್ಲ... ಆ ನರಹರಿ ಕೊಟ್ಟು ಹೋದಾಗ ಎಲ್ಲಿ ಇಟ್ಟಿದ್ನೋ, ಅಲ್ಲೇ ಆ ಮೇಜಿನ ಮೇಲೇ ಬಿದ್ದಿದೆ...ಬೇಕಾದ್ರೆ ತಗೋ ಅಲ್ಲಿದೆ ನೋಡು"

ಎಂದು ತಟ್ಟನೆ ಎಡಬಿಡದೆ ಹೇಳಿ ಮುಗಿಸಿದ ರವಿ.

ವಿಜಯ ಆ ದಿನಚರಿಯನ್ನೆತ್ತಿಕೊಂಡ. ಆಮೇಲೆ ತನಗೆ ಏಕಾಂತ ಬೇಕೆನ್ನಿಸಿತು..

"ರವಿ ನೀನೇನೂ ಮಿಸ್ಟೇಕ್ ಮಾಡ್ಕೋಬ್ಯಾಡ. ನಾನು ಈ ದಿನಚರಿ ಬರೀಬೇಕು...ಈಗೊಂದು ತಿಂಗ ಳಿಂದ ಬರೆದೇ ಇಲ್ಲ...ನಾನು ಅಲ್ಲೇ ನನ್ನ ಮನೆಗೆ ಹೋಗ್ತೀನಿ...ಬರಲಾ?" ಎಂದವನೇ ದಿನಚರಿಯ ಸಮೇತ ಮೇಲೆದ್ದ.

× × ×

ತಾನು ಬರೆದುದನ್ನು ತಾನೇ ಆಮೂಲಾಗ್ರ ಒಮ್ಮೆ ಓದಿದ. ಮೊದಲು ತನ್ನ ಮೇಲೆ ಪ್ರಭಾವ ಬೀರಿದ ರಾಮಸ್ವಾಮಿಗಳ ಸಲಹೆಯಂತೆ, ತಾನು ದರ್ಶನ ಶಾಸ್ತ್ರದ, ವೇದಾಂತದ ಗ್ರಂಥಗಳನ್ನುವ್ಯಾಸಂಗ ಮಾಡ ತೊಡಗಿದುದು–ಆಮೇಲೆ ಹಿರಣ್ಮಯನ ಪ್ರಭಾವ ದಿಂದ ವಿಚಾರವಂತಿಕೆಯನ್ನು ಬೆಳೆಸಿಕೊಳ್ಳುವ ತನ್ನ ಹಂಬಲ...ವಿಚಾರದಿಂದಲೇ ಕಾಮವಾಸನೆಯನ್ನು ಹತ್ತಿಕ್ಕುವ ತನ್ನ ಅದಮ್ಯ ಸಾಹಸ! ಸಾವಿತ್ರಿಯೊಡನೆ ತಾನು ಪ್ರವೃತ್ತಿಯಲ್ಲಿ ತೊಡಗಿ, ಪ್ರಯೋಗ ನಡೆಸಿ ದುದು, ಅವಳ ಸಾವಿನಿಂದ ತನಗಾದ ಆಘಾತ!ಆವರೂ ಹಿರಣ್ಮಯನ ಸಾಧನೆಯಿಂದ ತನ್ನ ಮೇಲಾದ ಅಗಾಧ ಪ್ರಭಾವ!

ಓದುತ್ತಾ, ಓದುತ್ತಾ ವಿಜಯನಿಗೆ ದುಃಖ ಉಮ್ಮಳಿಸಿ ಬಂತು. ತಾನು ಮೃಗಜಲವೊಂದರ ಬೆನ್ನು ಹತ್ತಿ, ಎದುರಿಗಿದ್ದ ವಾಸ್ತವವನ್ನು ತುಚ್ಛೀಕರಿಸಿದೆನೆನ್ನಿ ಸಿತು. ತಂದೆಯ ಹಿತ ನುಡಿಗಳು, ತಾಯಿಯ ವಾತ್ಸಲ್ಯ ಅಕ್ಕ–ತಂಗಿಯರ ಪ್ರೀತಿ ಎಲ್ಲವನ್ನೂ ವಿಚಾರವಂತಿಕೆಯ ಕಾಳ್ಗಿಚ್ಚಿನಲ್ಲಿ ಹಾಕಿ ಚಪ್ಪಾಳೆ ತಟ್ಟಿದೆನೆನ್ನಿಸಿತು. ಮೊದಲು ಈ ಪ್ರಪಂಚದಲ್ಲಿ ತನ್ನ ಸಂಘಕ್ಕೆ ಸದಸ್ಯತ್ವ

ಒದಗಿಸಿದ ತನ್ನ ಕುಟುಂಬವನ್ನು ತಾನು ತೃಣವಾಗಿ ಕಂಡು, ಇಡೀ ಸಮಾಜದ ಮೂಲಭೂತ ಕಲ್ಪನೆಗಳಿಗೇ ಸವಾಲು ಹಾಕುವ ಹುಚ್ಚನ್ನು ತಾನು ಮೈ ಮೇಲೆ ಹಾಕಿಕೊಂಡೆನೆಂದು ಮಿಡುಕಾಡಿದ. ಮೊಟ್ಟಮೊದಲು ತಾನೀಗ ಕಾಣಬೇಕಾದುದು ಸುಧಾ ಅಲ್ಲ... ತನ್ನ ಕುಟುಂಬದವರನ್ನು ಎಂದುಕೊಂಡ.

೧೩

ರಾಮಮೂರ್ತಿ ಮರುದಿನ ಬೆಳಿಗ್ಗೆ ಚಿತ್ರದುರ್ಗಕ್ಕೆ ಹೋಗಬೇಕೆಂದು ಸಿದ್ಧತೆ ಮಾಡತೊಡಗಿದ. ವಾಸುದೇವಯ್ಯನವರು, ಮೀನಾಕ್ಷಿಯನ್ನು ಸುಧಾಳನ್ನೂ ಕರೆದುಕೊಂಡು ಬರಬೇಕೆಂದು ಬರೆದಿದ್ದರು. ಇವರ ಜೊತೆಗೆ ಕೃಷ್ಣಸ್ವಾಮಿ ಅವರ ತಂದೆ ಲಕ್ಷ್ಮಣರಾಯರು, ತಾಯಿ ಸೀತಮ್ಮ ಸಹ ಚಿತ್ರದುರ್ಗಕ್ಕೆ ಹೊರಡುವವರಿದ್ದರು. ಇಷ್ಟೊಂದು ಜನ ಪ್ರಯಾಣ ಮಾಡುವ ಬದಲು ವಾಸುದೇವಯ್ಯ ಹಾಗೂ ಗೌರಮ್ಮನವರೇ ತುಮಕೂರಿಗೇಕೆ ಬರಬಾರದು–ಎಂಬ ಪ್ರಶ್ನೆಯನ್ನೂ ರಾಮಮೂರ್ತಿ ಎತ್ತಿದ್ದ. ಆದರೆ ಲಗ್ನಪತ್ರಿಕೆ ಹೆಣ್ಣಿನ ಮನೆಯಲ್ಲೇ ಆಗಬೇಕೆಂದು ವಾಸುದೇವಯ್ಯ ಅಭಿಪ್ರಾಯಪಟ್ಟರು. ಲಕ್ಷ್ಮಣರಾಯರೂ ಅದನ್ನೇ ಅನುಮೋದಿಸುತ್ತಾ "ವೆಂಕಟೇಶ, ಗಿರಿಜಾ –ಇವ್ರೂ ಅಲ್ಲೇ ಇದಾರೆ... ಅವರೇ ಈ ಕಾರ್ಯಕ್ಕೆ ಸೂತ್ರಧಾರಿಗಳು...ಅಲ್ಲಿಗೇ ಹೋಗೋಣಂತೆ" ಎಂದಿದ್ದರು.

ಸಿದ್ಧತೆಗಳೆಲ್ಲ ಮುಗಿದಿತ್ತು. ತಿರುಗಿ ಪ್ರಾತಃಕಾಲ ಎಂಟು ಗಂಟೆಯ ಬಸ್ಸಿಗೆ ಎಲ್ಲರೂ ಹೊರಡಬೇಕಾಗಿತ್ತು. ಸೀತಮ್ಮನವರಿಗೆ ಈ ಸಂಬಂಧದ ಬಗ್ಗೆ ಬಹಳ ಸಂತೋಷವಾಗಿತ್ತು. ...ಸುಧಾಳನ್ನು ಅವರು ಬಹಳ ಮೆಚ್ಚಿಕೊಂಡಿದ್ದರು. ಆ ರಾತ್ರಿ ರಾಮಮೂರ್ತಿಯ ಮನೆಯವರೆಲ್ಲರನ್ನೂ ತಮ್ಮಲ್ಲಿಗೇ ಊಟಕ್ಕೆ ಆಹ್ವಾನಿಸಿದ್ದರು.

ಕೃಷ್ಣಸ್ವಾಮಿ ಸುಧಾ–ಇಬ್ಬರಿಗೂ ಎದುರು ಬದರಾಗಿ ಎಲೆಗಳನ್ನು ಹಾಕಿ, ಮೀನಾಕ್ಷಿ ಅವರಿಬ್ಬರನ್ನೂ ಊಟ ಮಾಡುವಾಗ ತುಂಬ ಗೋಳಾಡಿಸಿದಳು. ಉಳಿದವರೆಲ್ಲ ಹೊಟ್ಟೆ ತುಂಬ ನಕ್ಕರು. ಸುಧಾಳಿಗೆ ಒಳಗೊಳಗೇ ನಗು ಬರುತ್ತಿದ್ದರೂ, ಅಕ್ಕನ ಮೇಲೆ ಮುನಿಸು ಮಾಡುತ್ತಿದ್ದಳು.

"ನಿಧಾನವಾಗಿ ಊಟ ಆಗ್ಲಪ್ಪಾ ಕಿಟ್ಟೂ, ಸುಧಾ ಕಡೆ ನೋಡುತ್ತಾ ಅರೆ ಹೊಟ್ಟೆ ಊಟ ಮಾಡೀಯೆ" ಎಂದು ರಾಮಮೂರ್ತಿಯೂ ಒಂದು ಚಟಾಕಿ ಹಾರಿಸಿದ.

"ನ್ಯಾಯವಾಗಿ ಮದುವೆಗಿಂತ ಮುಂಚೆ ಹೀಗೆ ಗಂಡು ಹೆಣ್ಣುಗಳ ಮನೆಯೋರು ಒಬ್ಬರ ಮನೇಲಿ ಒಬ್ಬರು ಊಟ ಮಾಡೋಲ್ಲ. ಅಂತ ಶಾಸ್ತ್ರ ಇದೆ... ಆದ್ರೆ ನಾವು ಎಷ್ಟೋ ಆಗ್ಲಿ ಮುಂದುವರಿದ ಜನ ಅಲ್ವೆ?"

ಎಂದು ಕೃಷ್ಣಸ್ವಾಮಿ ಸಮಾಜಶಾಸ್ತ್ರದ ಬೆಳವಣಿಗೆ ಕುರಿತು ಮಾತನಾಡಿದ.

ಊಟವೆಲ್ಲ ಮುಗಿದು ಎಲ್ಲರೂ ಕೈ ತೊಳೆಯುತ್ತಿದ್ದರು. ಸುಧಾ ಕೈ ತೊಳೆಯುತ್ತಿದ್ದ ಹಾಗೆಯೇ "ಅಕ್ಕಾ..." ಎಂದು ಕೂಗಿದವಳೇ ಬಿದ್ದೇಬಿಟ್ಟಳು.

ಎಲ್ಲರೂ ಗಾಬರಿಯಿಂದ ಸುಧಾಳ ಸುತ್ತಲೂ ಸೇರಿದರು. ಸುಧಾಗೆ ಮೂರ್ಛೆ ಬಂದ ಹಾಗಾಗಿತ್ತು. ರಾಮಮೂರ್ತಿ ಡಾಕ್ಟರನ್ನು ಕರೆ ತರಲು ಆತುರವಾಗಿ ಓಡಿದ. ಮೀನಾಕ್ಷಿ, ಸೀತಮ್ಮ, ಇಬ್ಬರೂ ಅವಳಿಗೆ ಗಾಳಿ ಹಾಕತೊಡಗಿದರು. ಕೃಷ್ಣಸ್ವಾಮಿ ದಿಕ್ಕು ತೋಚದೆ



ಅಲ್ಲೇ ಮೌನ ವಹಿಸಿ ಕುಳಿತ. ಕ್ಷಣ ಹೊತ್ತಿಗೆ ಮುಂಚೆ ನಗುತ್ತಿದ್ದವರೆಲ್ಲ ಸ್ತಂಭೀಭೂತರಾದರು.

ಐದು ನಿಮಿಷಗಳಲ್ಲೇ ಸುಧಾ ಕಣ್ಣು ತೆರೆದು "ಅಕ್ಕಾ..." ಎಂದು ನರಳಿದುದು ಕೇಳಿಸಿದಾಗ ಮೀನಾಕ್ಷಿಗೆ ಸಮಾಧಾನವಾಯಿತು. "ಸುಧಾ...ಸುಧಾ... ಏನಾಯ್ತು?" ಎಂದು ಮುಖ ಹಿಡಿದೆತ್ತಿ ಕೇಳಿದಳು. ಮೀನಾಕ್ಷಿಯ ಸಹಾಯದಿಂದ ಸುಧಾ ಎದ್ದು ಕುಳಿತಳು. ಒಂದು ನಿಮಿಷ ಬಿಟ್ಟು, ಅವಳಿಗೆ ಆಗ ತಾನೇ ಊಟ ಮಾಡಿದುದೆಲ್ಲ ವಾಂತಿಯಾಯಿತು. ಬಾಯಿ ತೊಳೆದುಕೊಂಡನಂತರ ಸ್ವಲ್ಪ ಸಮಾಧಾನವಾದಂತಾಗಿ ಅಕ್ಕನ ಭುಜ ಹಿಡಿದುಕೊಂಡೇ ಒಳಗೆ ಬಂದಳು... ಸೀತಮ್ಮ ಸಿದ್ಧಪಡಿಸಿದ ಹಾಸಿಗೆಯಲ್ಲಿ ಮಲಗಿದಳು.

ಡಾಕ್ಟರ್ ರಾಮಾನುಜಂರವರೇ ಬಂದರು. ಇಡೀ ತುಮಕೂರಿಗೇ ಪ್ರಖ್ಯಾತ ಗೈನೋಕಾಲಜಿಸ್ಟ್ ರಾಮಾನುಜಂರಿಗೆ ಬಿಡುವೇ ಇರುತ್ತಿರಲಿಲ್ಲ. ರಾಮಮೂರ್ತಿ ಬಹು ಸಾಹಸಪಟ್ಟು, (ಮರುದಿನವೇ ಪ್ರಯಾಣವಿದ್ದುದರಿಂದ) ಅವರನ್ನೇ ಕರೆದುಕೊಂಡು ಬಂದಿದ್ದ.

ರಾಮಾನುಜಂ ಸುಧಾಳ ನಾಡಿಯನ್ನು ಪರೀಕ್ಷಿಸಿದರು. ಹತ್ತು ನಿಮಿಷ ಸಾಗಿದ ಅವರ ಪರೀಕ್ಷೆ ಒಂದು ಘೋರ ಸತ್ಯವನ್ನು ಬಯಲಿಗೆಳೆಯಿತು.

"ಇವರಿಗೇನೂ ಆಗಿಲ್ಲ...ಗಾಬರಿಯಾಗ್ಬೇಡಿ... ಎರಡನೇ ತಿಂಗಳು ...ಅಷ್ಟೆ. ಈ ಮಾತ್ರೆ ಕೊಡಿ... ಏನೂ ಯೋಚಿಸಬೇಡಿ"

ಡಾ. ರಾಮಾನುಜಂ ತಮ್ಮ ಕಾರಿನಲ್ಲಿ ಹೊರಟೇ ಹೋದರು.

ಏನೂ ಯೋಚಿಸಬೇಡಿ–ಎಂಬ ಅವರ ಮಾತು ಪೊಳ್ಳಾಯಿತು...ಲಕ್ಷ್ಮಣರಾಯರು, ಸೀತಮ್ಮ ಪರಸ್ಪರ ಮುಖ ನೋಡಿಕೊಂಡರು. ಕೃಷ್ಣಸ್ವಾಮಿ ಅಲ್ಲಿ ಎಲ್ಲೂ ಕಾಣಿಸಲಿಲ್ಲ...ರಾಮಮೂರ್ತಿ ತಲೆಯ ಮೇಲೆ ಕೈ ಹೊತ್ತ...ಮೀನಾಕ್ಷಿ ತಲೆ ತಗ್ಗಿಸಿದಳು. ಕಣ್ಣೀರು ಹಾಕುತ್ತಿದ್ದಳು. ಆದರೆ ಇವರ ಕಡೆ ಯಾರ ಗಮನವೂ ಹೋಗಲಿಲ್ಲ.

ರಾಮಮೂರ್ತಿ ಎದ್ದು ಹೋಗಿ ಒಂದು ಜಟಕಾ ತಂದ. ...ಸುಧಾಳನ್ನು ಎಬ್ಬಿಸಿಕೊಂಡು ಜಟಕಾದಲ್ಲಿ ಕೂಡಿಸಲಾಯಿತು. "ಬರ್‍ತೀವಿ ಸೀತಮ್ಮ ...ಲಕ್ಷ್ಮಣರಾಯ್ರೇ" ಎಂದಾಗ ಸೀತಮ್ಮ ಮಾತನಾಡಲಿಲ್ಲ. ಲಕ್ಷ್ಮಣರಾಯರು "ದೇವ್ರು ದೊಡ್ಡೋನು ನಮ್ಮ ಮಾನ ಉಳಿಸಿದ...ನಮಸ್ಕಾರ ಹೋಗಿ...ಬರ್‍ರಿ... ಇನ್ನೊಂದ್ಸಲ ಈ ದಿಕ್ಕಿಗೇ ಬರಬ್ಯಾಡ್ರಿ ದಯವಿಟ್ಟು" ಎಂದುಬಿಟ್ಟರು.

ಮನೆಗೆ ಬರುವವರೆಗೂ ರಾಮಮೂರ್ತಿ, ಸುಧಾ, ಮೀನಾಕ್ಷಿ–ಈ ಮೂರವಲ್ಲಿ ಯಾರೊಬ್ಬರೂ ಮಾತನಾಡಲಿಲ್ಲ. ಮೂವರೂ ಒಂದೊಂದು ದಿಕ್ಕಿನಲ್ಲಿ ಯೋಚಿ

ಸುತ್ತಿದ್ದರೆಂದು ಕಾಣುತ್ತದೆ. ರಾಮಮೂರ್ತಿ ತನ ಸ್ಥಾನಮಾನದ ಬಗ್ಗೆ ಯೋಚಿಸತೊಡಗಿದ. ನಾಳೆ ಈ ವಿಚಾರ ಇಡೀ ಊರಿನಲ್ಲೆಲ್ಲ ಗುಲ್ಲಾಗುತ್ತದೆ...ತನ್ನನ್ನು ಕಂಡ ಪರಿಚಿತರೆಲ್ಲ ತಿರಸ್ಕಾರದಿಂದ ತನ್ನತ್ತ ನೋಡಿ ನಗುತ್ತಾರೆ...ತಾನಿನ್ನು ತಲೆ ಎತ್ತುವ ಹಾಗೇ ಇಲ್ಲ... ಈ ಹಾಳು ನೀತಿಗೆಟ್ಟ ಹುಡುಗಿ ಇದರ ಸೂಚನೆಯನ್ನು ಕಳೆದ ಇಪ್ಪತ್ತೈದು ದಿನಗಳಲ್ಲಿ ಒಮ್ಮೆಯೂ ಕೊಡ ಲಿಲ್ಲ...ಹಾಗಿದ್ದಲ್ಲಿ ಗುಟ್ಟಾಗಿ ಏನಾದರೂ ವ್ಯವಸ್ಥೆ ಮಾಡಬಹುದಾಗಿತ್ತು...ಇನ್ನು ನಾಳೆ ತಾನು ಚಿತ್ರ ದುರ್ಗಕ್ಕೆ ವಿಷಯ ತಿಳಿಸುವುದಾದರೂ ಹೇಗೆ? ಸುಧಾ ಳನ್ನು ಇನ್ನು ಇಲ್ಲಿ ಅರೆಗಳಿಗೆಯೂ ಇಟ್ಟುಕೊಳ್ಳುವ ಹಾಗಿಲ್ಲ.


ಮೀನಾಕ್ಷಿ ಸುಧಾಳ ಭವಿಷ್ಯದ ಬಗ್ಗೆ ಚಿಂತೆಗೊಳ ಗಾದಳು...ಇವಳಿಗ ಯಾರಿಂದ ಈ ದುರವಸ್ಥೆ ಪ್ರಾಪ್ತ ವಾಗಿರಬಹುದು? ವಿಜಯನೇ ಈ ಅನರ್ಥಕ್ಕೆ ಕಾರಣ ಎಂದು ಅವಳ ಮನಸ್ಸು ಚೀರಿ ಹೇಳಿತು. ಹೌದು. ಆ ಸಾವಿತ್ರಿಯೂ ಹೀಗೆಯೇ ಪ್ರಾಣ ಕಳೆದುಕೊಂಡಳು. ಈಗ ತನ್ನ ಮುದ್ದು ತಂಗಿಯನ್ನು ಬಲಿ ತೆಗೆದುಕೊಳ್ಳುವ ಪ್ರಯತ್ನಮಾಡಿ ಯಶಸ್ವಿಯಾಗಿದ್ದಾನೆ. ಆ ಚಂಡಾಲ ಹೀಗೆ ಇನ್ನೆಷ್ಟು ಹೆಣ್ಣುಗಳ ಪ್ರಾಣಹರಣ ಮಾಡಲಿದ್ದಾ ನೋ? ಈಗ ತಂಗಿಯ ಗತಿ ಏನು?

ಸುಧಾ ಏನನ್ನೂ ಯೋಚಿಸಲಾರದೆ ನಿರ್ವಿಣ್ಣ ಳಾಗಿದ್ದಳು...ಪ್ರಕೃತಿ ಅವಳಿಗೆ ವಿವಂಚನೆಯನ್ನೊಡ್ಡಿ ತ್ತು...ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣ ರವಿಯ ಕಾಣಿಕೆ ಎಂಬ ಭಾವನೆಯೊಂದಿಗೆ ಅವನ ನೆನಪೂ ಮೂಡಿಬಂತು. ತಾನು ಈ ವಿಚಾರವಾಗಿ ಯಾರೊಡನೆಯೂ ಏನೂ ಹೇಳಿಲ್ಲ ಈ ದುರವಸ್ಥೆಗೆ ಕಾರಣ ವಿಜಯನೆಂದೇ ಎಲ್ಲರೂ ತೀರ್ಮಾನಿಸಬಹು ದು. ಆದರೆ ತಾನೀಗ ನಿಜ ಸ್ಥಿತಿಯನ್ನು ತಿಳಿಸಿದರೆ? ಹೌದು ತನಗೀಗ ಬೇಕಾಗಿರುವುದು ಒಂದು ವ್ಯವ ಸ್ಥಿತ ಜೀವನ...ವ್ಯವಸ್ಥಿತ ಜೀವನ ಬೇಕಾಗಿದ್ದರೆ, ತನಗೊಂದು ಮದುವೆಯ ಅಗತ್ಯವಿದೆ! ಕೆಲಸಕ್ಕಂತೂ ರಾಜೀನಾಮೆ ಕೊಟ್ಟಾಯಿತು. ಈಗ ತನಗೆ ಉಳಿ ದಿರುವ ಮಾರ್ಗ ಯಾವುದು? ತಂದೆ ತಾಯಿಗಳು ಈ ವಿಚಾರವನ್ನು ಹೇಗೆ ಸ್ವೀಕರಿಸಬಹುದು? ಅಕ್ಕನ ಮನೆಯಲ್ಲಿ ತನ್ನ ಸ್ಥಾನ ಹೊರಟು ಹೋಯಿತು. ತಂದೆ ತಾಯಿಗಳೂ ತನ್ನನ್ನು ತಿರಸ್ಕರಿಸಿದರೆ?...ಆಗ... ಸಾವು ಮಾತ್ರ ತನಗೆ ಆಶ್ರಯ ನೀಡಬಲ್ಲದು... ತಂದೆ ತಾಯಿಯರನ್ನೆದುರಿಸಿ ನಂತರ ಸಾಯುವು ದಕ್ಕಿಂತ ಆ ಕಾರ್ಯ ಈಗಲೇ ಇಂದೇ...

ಮೌನವಾಗಿಯೇ ಮೂವರೂ ಮನೆಯನ್ನು ಪ್ರವೇಶಿಸಿದರು. ಸುಧಾ ಸಹ ಯಾರೊಡನೆಯೂ ಮಾತನಾಡದೆ ಕೋಣೆಗೆ ಹೋದಳು. ರಾಮಮೂರ್ತಿ ಮೀನಾಕ್ಷಿ ಮಲಗುವ ಮನೆಗೆ ನಡೆದರು.

ಸುಧಾ ಹಾಸಿಗೆಯ ಮೇಲೆ ಕುಳಿತು ಮತ್ತೆ ಯೋಚಿಸ ತೊಡಗಿದಳು. ತನ್ನ ಈ ಜನ್ಮದ ಕತೆ ಇಂದಿಗೆ ಮುಗಿ ಯಿತು. ಕೇವಲ ಮೂರು ಬಾರಿ ಪಡೆದ ಆ ಅಲೌಕಿಕ ಅನು ಭವ ತನಗಿನ್ನೆಂದಿಗೂ ಅಲಭ್ಯ. ಹೌದು...ಹಾಗೆಂದೇ ಮದುವೆ ಎಂಬ ಸಾಮಾಜಿಕ ಬಂಧನವನ್ನು ವ್ಯವಸ್ಥೆ ಗೊಳಿಸಿದ್ದಾರೆ ಈ ಜನ...ಮದುವೆಯಿಲ್ಲದೇ ಇಂತಹ ಅವಸ್ಥೆ ಪಡೆದ ಹೆಣ್ಣಿನ ಬಗ್ಗೆ ಇಷ್ಟೊಂದು ಮಿತಿ ಗಳನ್ನೇಕೆ ನಿರ್ಮಿಸಿದರು? ರವಿಗೆ ಈ ಬಗ್ಗೆ ಯಾವ ಯೋಚನೆಯೂ ಇಲ್ಲ. ಅವನು ಸಾಯಬೇಕಾಗಿಲ್ಲ... ಹಾಗಾದರೆ ಈ ಸಂಯಮ, ತಾಳ್ಮೆ, ಶಿಕ್ಷೆ ಇವುಗಳೆಲ್ಲ ಹೆಣ್ಣಿಗೇ ಮೀಸಲೇಕೆ? ಅಕ್ಕನ ಮದುವೆಯಾಗಿ ಮೂರು ವರ್ಷವಾದರೂ ಅವಳಿನ್ನೂ ಗರ್ಭ ಧರಿಸಿಲ್ಲ. ಹಾಗಾದರೆ ಅವರೀರ್ವರೂ ಸಂಪರ್ಕ ಹೊಂದಿಲ್ಲವೆಂದು ಅರ್ಥವೆ? ಕೇವಲ ಎರಡು ಅನುಭವಗಳ ಫಲವಾಗಿ ತನಗೀ ಗತಿಯೊದಗಿತು...ಇದು ಪ್ರಕೃತಿಯ ನಿಯಮ. ಆಗಬಾರದುದೇನಲ್ಲ...ಮದುವೆಗಿಂತ ಮುಂಚಿನ ಕಾಮ ವ್ಯವಹಾರ ನಿಷ್ಫಲ ಎಂಬುದು ಪ್ರಕೃತಿಯ ತೀರ್ಮಾ ನವೇ ಆಗಿದ್ದರೆ ತನಗೇಕೆ ತಾಯ್ತನ ಲಭಿಸುತ್ತಿತ್ತು? ಇದು ಬರೀ ಮನುಷ್ಯನ ಆದರ್ಶಲ್ಲೂ ಗಂಡಿನ ಸ್ವಾರ್ಥ ದಿಂದಲೇ ರೂಪುಗೊಂಡ ನಿಯಮ...

ಈ ನಿಯಮಕ್ಕೆ ಬೆಲೆ ತೆತ್ತು ತಾನೇಕೆ ಸಾಯಲಿ? ಬೇಡ ಅಕ್ಕ ಭಾವ ಇವರಿಗೆ ತನ್ನಿಂದ ಅವಮಾನವೆನಿಸು ವಂತಿದ್ದರೆ ನಾಳೆಯೇ ತಾನಿಲ್ಲಿಂದ ಹೊರಡಬೇಕು... ತಂದೆ ತಾಯಿಗಳ ಅಭಿಪ್ರಾಯ ತಿಳಿದು ಅವರೂ ತನಗೆ ಬಾಳಲು ಅವಕಾಶ ಕೊಡದಿದ್ದರೆ, ಮನೆಯನ್ನೂ ಬಿಟ್ಟು ಹೊರಡಬೇಕು...ಬಂದದ್ದು ಬರಲಿ... ಸಾಯುವುದೇಕೆ?



ಇವರೇ ಸ್ವಾಮಿ ನಮ್ಮೂರಿನ ಕಲೋಪಾಸಕರು! ಕಲಾದೇವಿ ಕೀರ್ತಿ - ಶಕ್ತಿ ಎಲ್ಲವನ್ನೂ ಕರುಣಿಸಿದ್ದಾಳೆ ಸಂಪತ್ತು ಒಂದನ್ನು ಬಿಟ್ಟು

"ಸುಧಾ..." ಮೆಲ್ಲಗೆ ಅಕ್ಕ ಕರೆದ ಹಾಗಾ ಯಿತು. ಒಂದು ನಿಮಿಷ ನಡುಗಿದಳು ಸುಧಾ... ಆ ಮೇಲೆ ಮತ್ತೆ ಧೈರ್ಯವಹಿಸಿ ಬಾಗಿಲು ತೆರೆದಳು. ಮೀನಾಕ್ಷಿ ದುಗುಡದಿಂದ ಒಳಕ್ಕೆ ಹೆಜ್ಜೆ ಇಟ್ಟು ಬಾಗಿಲು ಮುಚ್ಚಿದಳು.

"ಏನ್ಮಾಡ್ತಾ ಇದೀ ಸುಧಾ? ಇನ್ನೂ ಮಲಗ ಲಿಲ್ವಾ?" ಎಂದಳು.

"ಅಕ್ಕಾ...ನಾನು ಮಲಗಿದ್ರೂ ನಿದ್ದೆ ಬಂದೀತಾ? ನೀನೇ ಹೇಳು..."

"ನಿನ್ನ ರೂಮ್ನಲ್ಲಿ ಇನ್ನೂ ಲೈಟು ಉರೀತಾ ಇದ್ದದ್ದು ನೋಡೀ ನಾನು ಓಡಿ ಬಂದೆ ಸುಧಾ... ನನ್ನಾಣೆ...ನಿನ್ನ ಜೀವಕ್ಕೆ ಏನೂ ಅಪಾಯವಾಗದಿರ್ಲಿ ಬೇಡ" ಎಂದು ಸುಧಾಳನ್ನು ತಬ್ಬಿದಳು ಮೀನಾಕ್ಷಿ.

ಸುಧಾ ನಗುತ್ತ ಹೇಳಿದಳು: "ಯಾಕೆ? ಅದ್ಯಾಕೆ ನೀನು ಹಾಗೆ ಹೆದರುತ್ತಿ ಅಕ್ಕಾ? ನಾನ್ಯಾಕೆ ಜೀವ ಕಳೆದು ಕೊಳ್ಳಲಿ? ನನ್ನ ಗರ್ಭದಲ್ಲಿ ಮತ್ತೊಂದು ಜೀವ ಬೇರೆ ಇದೆ."

ಮೀನಾಕ್ಷಿ ದಂಗಾದಳು. "ಹಂಗಾದ್ರೆ ನಿಂಗೆ ಈ ಬಗ್ಗೆ ಯಾವ ವ್ಯಥೇನೂ ಇಲ್ಲ ಅನ್ನು?"

"ಉಹುಂ...ಎಂಥದೂ ಇಲ್ಲ...ನಾಳೇನೇ ನಾನು ಊರಿಗೆ ಹೋಗ್ತೀನಿ ಅಪ್ಪ ಅಮ್ಮ ಇಬ್ರಿಗೂ ಎಲ್ಲ ವಿಷಯಾನೂ ಸ್ಪಷ್ಟವಾಗಿ ಹೇಳ್ತೀನಿ...ಅವರೂ ನನ್ನ ಬಗ್ಗೆ ತಿರಸ್ಕಾರ ತೋರ್ಸಿದ್ರೆ ನನ್ನ ದಾರಿ ನಂಗೆ"

"ಅಂದ್ರೆ ...ಸಾಯ್ತೀಯ ಅಲ್ವಾ?"

"ಉಹುಂ...ಅಂಥ ಹೇಡಿ ಕೆಲ್ಸ ನಾನ್ಯಾಕೆ ಮಾ ಡ್ಲಿ? ನಂಗೆ ಸಾಯೋ ಇಷ್ಟ ಇಲ್ಲಕ್ಕ...ನಂಗೆ ಬದುಕೋ ಆಸೆ ಇದೆ. ಈ ಜೀವನ ಸವಿಯೋ ಅಭಿಲಾಷೆ"

ಮೀನಾಕ್ಷಿಗೆ ತಂಗಿಯ ಧೈರ್ಯದಿಂದ ಸ್ವಲ್ಪ ಸಮಾಧಾನವಾಯಿತು.

"ಸುಧಾ...ನಿಜ ಹೇಳು...ನಿನ್ನ ಸ್ಥಿತಿಗೆ ವಿಜಯ ತಾನೇ ಕಾರಣ?"

"ನಿಜ ಹೇಳ್ತೀನಿ ಅಕ್ಕಾ...ಇನ್ನು ಸುಳ್ಳು ಹೇಳೋ ಅಗತ್ಯವೇ ನಂಗೆ ಕಾಣ್ತಾ ಇಲ್ಲ. ನಿಜವಾಗ಼್ೂ ಇದ್ದಕ್ಕೆ ವಿಜಯ ಎಳ್ಳಷ್ಟೂ ಕಾರಣ ಅಲ್ಲ...ಇದಕ್ಕೆ ಕಾರಣ ರವಿ" ಎಂದವಳೇ ದೇವಪುರದ ಘಟನೆಗಳನ್ನೆಲ್ಲ ಸಾದ್ಯಂತ ಅಕ್ಕನಿಗೆ ವಿವರಿಸಿದಳು.

× × ×

ಮರುದಿನ ಅಕ್ಕ ತಂಗಿಯರಿಬ್ಬರೇ ಚಿತ್ರದುರ್ಗ ಬಸ್ ಸ್ಟ್ಯಾಂಡಿನಲ್ಲಿ ಇಳಿದಾಗ ವಾಸುದೇವಯ್ಯ ಅವಾ ಕ್ಕಾದರು.

"ಯಾಕೆ ಮೀನಾ...ಯಾರೂ ಬರ್ಲಿಲ್ವೆ? ರಾಮು, ಲಕ್ಷ್ಮಣರಾಯ್ರು" ಎಂದು ಕೇಳುತ್ತಲೆ ಇದ್ದ ವಾಸು ದೇವಯ್ಯನನ್ನು ಮಧ್ಯೆ ತಡೆದ ಮೀನಾಕ್ಷಿ–"ಇಲ್ಲಾಪ್ಪ ಅವರ್ಯಾರೂ ಬರ್ಲಿಲ್ಲ...ನಡೀ ಮನೆಗೆ ಹೋಗೋಣಂತೆ. ಅಲ್ಲೆ ಎಲ್ಲಾನೂ ಹೇಳ್ತೀನಿ" ಎಂದಳು.

ಗೌರಮ್ಮನವರಿಗೂ ಯಾರೂ ಬಾರದಿದ್ದುದನ್ನು ಕಂಡು ಅಚ್ಚರಿಯಾಯಿತು. ನರಹರಿಯೂ ದಿಙ್ಮೂಢ ನಾದ.

ವಾಸುದೇವಯ್ಯ ಮಗಳು ಏನು ಹೇಳುವಳೋ ಎಂದು ಕಾತುರರಾಗಿ ಕಾಯತೊಡಗಿದರು. ಗೌರಮ್ಮ ಕೊಟ್ಟ ಕಾಫಿಯನ್ನು ಇಬ್ಬರೂ ಮುಗಿಸಿದರೂ, ಯಾರೂ ಬಾಯಿ ಬಿಡಲಿಲ್ಲ.

ಕೊನೆಗೆ ವಾಸುದೇವಯ್ಯ ತಡೆಯಲಾರದೇ ಕೇಳಿ ದರು–

"ಈ ಕಾರ್ಯಕ್ರಮಾನ ಮತ್ತೆಂದು ಇಟ್ಕೊಂಡಿ ದಾರಂತೆ?"

ಮೀನಾಕ್ಷಿ ತಂದೆಯ ಮುಖವನ್ನೊಮ್ಮೆ ನೋ ಡುತ್ತಾ,

"ಅಪ್ಪಾ...ಅವರು ಈ ಸಂಬಂಧ ಬೆಳೆಸೋದಿಕ್ಕೆ ಒಪ್ಪಲಿಲ್ಲ...ನಿನ್ನೆ ರಾತ್ರಿ ಸ್ಪಷ್ಟವಾಗಿ ಹೇಳಿದ್ರು... ಎಂದಳು.

ವಾಸುದೇವಯ್ಯ, ಗೌರಮ್ಮ, ನರಹರಿ ಎಲ್ಲರೂ ಒಂದು ಕ್ಷಣ ಗರಬಡಿದವರಂತೆ ಕುಂತುಬಿಟ್ಟರು, ಆಮೇಲೆ.

"ಯಾಕೆ? ಏನು ಹುಡುಗಾಟ ಆಡ್ತಿದಾರೇನು ಅವರು? ಒಪ್ಪಿಗೆ ಅಂತ ಹೇಳಿದ್ದೇನು? ಲಗ್ನಪತ್ರಿಕೆ ಬರೆಸೋಕೆ ಬರ್‍ತೀವಿ ಅಂದಿದ್ದು ಯಾಕೆ?" ಎಂದು ಸ್ವಲ್ಪ ಕೆರಳಿಯೇ ಕೇಳಿದರು ವಾಸುದೇವಯ್ಯ.

ಸುಧಾ ಅದುವರೆಗೂ ಯಾವ ಮಾತನ್ನೂ ಆಡಿರಲಿಲ್ಲ. ಆದರೆ ಇನ್ನು ಸುಮ್ಮನಿದ್ದಷ್ಟೂ ಅಕ್ಕನಿಗೆ ಉತ್ತರ ಹೇಳಲು ಕಷ್ಟವಾದೀತು ಎಂದುಕೊಂಡು

"ಅಪ್ಪಾ...ಇದಕ್ಕೆ ನಾನೇ ಕಾರಣ" ಎಂದಳು.

"ಏನು ಹಾಗಂದ್ರೆ?" ಅಬ್ಬರಿಸಿದರು ವಾಸುದೇವಯ್ಯ

ಸುಧಾ ಮೇಲೆದ್ದು ಹೋಗಿ ಮೇಜಿನ ಮೇಲಿದ್ದ ಬರೆಯುವ ಫಲಕವನ್ನು ಕೈಗೆತ್ತಿಕೊಂಡು ನಾಲ್ಕು ಸಾಲು ಗೀಚಿದಳು. ಆಮೇಲೆ ಆ ಚೀಟಿಯನ್ನು ಕೊಡುತ್ತಾ

"ಅಪ್ಪ...ನೀನು ಬರೀ ಕೂಗಾಡ್ತೀಯ. ನಾನು ಹೇಳಬೇಕಾದ ವಿಚಾರವೆಲ್ಲ ಈ ಚೀಟೀಲಿದೆ...ಓದ್ಕೊ" ಎಂದಳು.

ವಾಸುದೇವಯ್ಯ ಬಿಗಿದ ಮುಖಮುದ್ರೆಯಲ್ಲೇ ಆ ಚೀಟಿಯನ್ನು ವಾಚಿಸಿದರು. ಅವರ ಹುಬ್ಬುಗಳು ಗಂಟುಬಿದ್ದವು. ಮೈಯೆಲ್ಲ ಕಂಪಿಸಿತು. ಅವರ ಮುಖದಲ್ಲಾಗುತ್ತಿದ್ದ ಭೀಕರ ಮಾರ್ಪಾಡುಗಳನ್ನು ಗೌರಮ್ಮ, ನರಹರಿ, ಮೀನಾಕ್ಷಿಯವರು ಆತಂಕದಿಂದ ನೋಡುತ್ತಿದ್ದರು. ಸುಧಾ ಬಾಗಿಲಿಂದಾಚೆ ಶೂನ್ಯವನ್ನು ದಿಟ್ಟಿಸುತ್ತಿದ್ದಳು.

ವಾಸುದೇವಯ್ಯ ಚೀಟಿಯನ್ನು ತಮ್ಮ ಮುಷ್ಟಿಯಲ್ಲಿ ಬಲವಾಗಿ ಹಿಸುಕಿ, ಕೆಳಗೊಗೆದು ಕಾಲಿನಿಂದ ತಿಕ್ಕಿದರು. ಮೀನಾಕ್ಷಿಯೇ ನರಹರಿಗೆ ಸನ್ನೆ ಮಾಡಿ, ಸುಧಾಳನ್ನು ಒಳಗೆ ಕರೆದೊಯ್ಯುವಂತೆ ತಿಳಿಸಿ ತಂದೆಯ ಕೈಗಳನ್ನು ಹಿಡಿದು, "ಅಪ್ಪ... ಬಾ ಇಲ್ಲಿ... ನಾನೊಂದ್ವಿಚಾರ ಹೇಳ್ತೀನಿ" ಎಂದು ರೂಮಿಗೆ ಕರೆದೊಯ್ದಳು.

ವಾಸುದೇವಯ್ಯ ಅಗ್ನಿ ಪರ್ವತವಾಗಿದ್ದರು. ಮೀನಾಕ್ಷಿ ತಂದೆಯ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು-"ಅಪ್ಪಾ... ಈಗ ನೀನು ರೇಗಿ ಕೂಗಾಡೋದ್ರಲ್ಲಿ ಯಾವ ಅರ್ಥವೂ ಇಲ್ಲ... ಸುಮ್ಮನೆ ಮಾನ ಮರ್ಯಾದೆ ಎಲ್ಲಾ ಬೀದಿಪಾಲಾಗುತ್ತದೆ... ಮುಂದೆ ಇದನ್ನು ಸರಿ ಮಾಡೋ ಯೋಚ್ನೆ ಮಾಡು" ಎಂದಳು.

"ಏನು ಸರಿಮಾಡಬೇಕು ಮೀನಾಕ್ಷಿ? ಎಲ್ಲ ಮುಗಿದು ಹೋಯ್ತು... ಆ ದರಿದ್ರ ಮುಂಡೆ ಕುತ್ತಿಗೆ ಹಿಚುಕಿ, ನಾನೂ ವಿಷತಗೊಂಡು ಪ್ರಾಣಬಿಡೋದೊಂದೇ ಬಾಕಿ... ಆ ರಾಕ್ಷಸ ವಿಜಯ ನನ ಕೈಗೆ ಸಿಕ್ಕಿದ್ರೆ ಅವನ್ನ ತುಂಡು ತುಂಡು ಮಾಡಿ ಬಿಸಾಕ್ತಾ ಇದ್ದೆ... ಅಬ್ಬ... ಎಷ್ಟು ನಾಟ ಆಡಿಬಿಟ್ಟ ಚಂಡಾಲ!"

"ಅಪ್ಪಾ... ನೀನು ತಿಳಿದಿರೋದು ತಪ್ಪು... ಇದಕ್ಕೆ ಕಾರಣ ಆ ಗುಂಡೂರಾಯರ ಮಗ ರವಿ... ಅವನನ್ನೇ ಹಿಡಿದು ನ್ಯಾಯವಾಗಿ ಸುಧಾನ ಮದುವೆ ಮಾಡ್ಕೋ ಅಂತ ಕೇಳೋಣ"–

"ಆ... ಏನಂದೆ? ಇದಕ್ಕೆ ಕಾರಣ ರವೀನೇ? ಎಲ್ಲಾದ್ರೂ ಉಂಟೆ?"–ಎಂದ ವಾಸುದೇವಯ್ಯ ಸ್ತಬ್ಧರಾದರು.

ಮೀನಾಕ್ಷಿ ತಾನು ಸುಧಾಳಿಂದ ತಿಳಿದ ವಿಚಾರಗಳನ್ನೆಲ್ಲ ತಂದೆಗೆ ವಿವರಿಸಿದಳು. ವಾಸುದೇವಯ್ಯ ಕುಸಿದು ಕುಳಿತರು.

"ಎಂಥ ಕೆಲ್ಸ ಆಯ್ತು ಮೀನಾ? ತಾನಾಗೇ ಗುಂಡು ಬಂದು ನನ್ನ ವಿಪರೀತ ಬಲವಂತ ಮಾಡ್ದ ಅವತ್ತು... ನಾನೇ ಅವನನ್ನು ಧಿಕ್ಕರಿಸಿ ಬಿಟ್ಟೆ. ಈಗ ನಾನು ಯಾವ ಮುಖ ಇಟ್ಕೊಂಡು ಈ ಪ್ರಸ್ತಾಪ ಮಾಡಿ ಹೇಳು?"

ಮೀನಾಕ್ಷಿ ತುಮಕೂರಿಗೆ ಹೋದಾಗ ಗುಂಡೂರಾಯರು ಬಂದ ವಿಚಾರವಾಗಿ ವಾಸುದೇವಯ್ಯ ತಿಳಿಸ್ಸಿದರು.

"ಸರಿ ಅಪ್ಪಾ... ಈಗ್ಲೂ ಏನೂ ತಡವಾಗಿಲ್ಲ... ಹೆಣ್ಣಿನ ತಂದೆಯಾಗಿ ನೀನೇ ಈಗ ಯಾಕೆ ಅವರ ಮನೆ ಬಾಗ್ಲಿಗೆ ಹೋಗ್ಬಾರ್‍ದು? ಅದರಲ್ಲಿ ತಪ್ಪೇನು?"

"ಎಲ್ಲಾದ್ರೂ ಉಂಟೆ ಮೀನಾ? ಆ ದಿನ ಗುಂಡ ನಮ್ಮಿಬ್ಬರ ಸ್ನೇಹಕ್ಕೆ ತಿಲಾಂಜಲಿ ಕೊಟ್ಟು ಹೋಗ್ಬಿಟ್ಟ... ಇನ್ನು ಈ ವಿಚಾರ ಮತ್ತೆ ಅವನ ಹತ್ರ ಪ್ರಸ್ತಾಪ ಮಾಡೋದು ಹೇಗೆ?"

"ಅಪ್ಪಾ... ನೀನು ತಿಳಿದೋನು... ನಿಂಗೆ ಹೇಳೋ ಅಷ್ಟು ಶಕ್ತಿ ನಂಗಿಲ್ಲ... ಆದ್ರೆ ಒಂದ್ಸಾರಿ ಹೋಗ್ಬನ್ನಿ... ಅವರು ಬ್ಯಾಡಾಂದ್ರೆ ಆಮೇಲೆ ಬೇರೆ ನೋಡೋಣ... ನೀನು ನಾಳೇನೇ ಯಾಕೆ ಹೊರಡಬಾರ್‍ದು?"

ರೂಮಿನ ಬಾಗಿಲು ತೆರೆಯಿತು. ಸುಧಾ ಬಿರುಗಾಳಿಯಂತೆ ಧಾವಿಸಿಬಂದಳು. ಅವಳನ್ನು ನೋಡಿದೊಡನೆಯೇ ವಾಸುದೇವಯ್ಯನ ಕಣ್ಣುಗಳು ಕಿಡಿಕಾರಿದವು. "ಚಂಡಾಲೀ..." ಎನ್ನುತ್ತಾ ಅವಳತ್ತ ಹಾರಿದ ವಾಸುದೇವಯ್ಯನವರನ್ನು ಮೀನಾಕ್ಷಿ ಹಿಡಿದುಕೊಂಡಳು. ಬಾಗಿಲಲ್ಲಿ ಗೌರಮ್ಮ, ನರಹರಿ, ದಿಙ್ಮೂಢರಾಗಿ ನಿಂತರು.

"ಅಪ್ಪಾ... ನಾನು ನಿನ್ನ ಹತ್ರ ನೇರವಾಗಿ ಮಾತಾಡೋಕೆ ಬಂದಿದ್ದೀನಿ. ನೀನು ಯಾಕೆ ಹೀಗೆ ರೇಗ್ತಾ ಇದೀಯ? ನಾನೇನು ಮಾಡಬಾರದ ಕೆಲ್ಸ ಮಾಡಿಲ್ಲ... ಪ್ರಪಂಚದಲ್ಲಿ ಯಾರೂ ಬಸಿರಾಗೇ ಇಲ್ವೇನು? ವ್ಯತ್ಯಾಸ ಇಷ್ಟೆ.. ನಂದಿನ್ನೂ ಮದುವೆ ಅಂತ ಆಗಿಲ್ಲ.. ಅದಕ್ಯಾಕೆ ಇಷ್ಟು ಹಾರಾಡ್ತಿ? ನಾನೇ ಆ ರವಿ ಹತ್ರ ಹೋಗ್ತೀನಿ... ಬೇಕಿದ್ರೆ ನೀನೂ ಬಾ... ಅವನು ನ್ಯಾಯವಾಗಿ ಒಪ್ಕೊಂಡ್ರೆ ಸರಿ... ಇಲ್ಲಾಂದ್ರೆ ಅವನ ಕೃಪೆ ನಂಗೆ ಬೇಕಿಲ್ಲ... ನಿಮಗೆಲ್ಲ ನನ್ನಿಂದ ಮಾನ ಹೋಗುತ್ತೆ ಅಂತಾದ್ರೆ ನಂಗೆ ನಿಮ್ಮ ಹಂಗೂ ಬ್ಯಾಡ... ನಾನೊಬ್ಳೇ ಹೊರಟು ಹೋಗ್ತೀನಿ... ನನ್ನ ಹಣೇಲಿ ಏನು ಬರೆದಿದೆಯೋ ಅನುಭವಿಸೋಕೆ ಸಿದ್ಧಳಾಗಿದೀನಿ... ಆದ್ರೆ ಇದೊಂದು ಕ್ಷುಲ್ಲಕ ಕಾರಣಕ್ಕಾಗಿ ಸಾಯೋ ಅಂಥ ಹೇಡಿ ಕೆಲ್ಸ ನಾನು ಮಾಡಲಾರೆ... ಹೇಳು... ನಾಳೇನೇ ನೀನು ನನ್ನ ಜೊತೆ ಬರೋಕೆ ರೆಡಿಯಾಗಿದೀಯ?" ಬಿರುಸಾಗಿ ಎಡೆಬಿಡದೆ ಹೇಳಿದ ಸುಧಾ ದಿಟ್ಟತನದಿಂದ ತಂದೆಯ ಮುಖ ನೋಡುತ್ತಾ ನಿಂತಳು.

ಎಲ್ಲರೂ ಅವಳ ಈ ಭಂಡಧೈರ್ಯಕ್ಕೆ ಬೆರಗಾದರು.

× × ×

ದೇವಪುರದ ಬಸ್‌ಸ್ಟಾಂಡಿನಲ್ಲಿ ಮತ್ತೊಮ್ಮೆ ಸುಧಾ, ಗೌರಮ್ಮ, ಮೀನಾಕ್ಷಿ, ವಾಸುದೇವಯ್ಯ, ನರಹರಿ ಎಲ್ಲರೂ ಕಾಣಿಸಿದರು. ಎಲ್ಲರೂ ಗುಂಡೂರಾಯರ ಮನೆಯ ಕಡೆ ವೇಗವಾಗಿ ಸಾಗಿದರು. ವಾಸುದೇವಯ್ಯನ ನಡಿಗೆ ತೀರಾ ಯಾಂತ್ರಿಕವಾಗಿತ್ತು. ಸುಧಾ ಮಾತ್ರ ಎಲ್ಲರಿಗಿಂತ ಮುಂದೆ ಬೇಗ ಬೇಗ ಸಾಗುತ್ತಿದ್ದಳು. ಅವಳ ಮುಖದಲ್ಲಿ ಯಾವುದೋ ಒಂದು ತೀರ್ಮಾನ ರೂಪುಗೊಂಡಿದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ಈ ಒಂದು ಕಾರ್ಯಕ್ರಮಕ್ಕೆ ವಾಸುದೇವಯ್ಯ ಸುತರಾಂ ಒಪ್ಪಿರಲಿಲ್ಲ. ಮೀನಾಕ್ಷಿಯ ಮಧ್ಯಸ್ತಿಕೆಯಿಂದಾಗಿ ಎಲ್ಲರೂ ಈ ರೀತಿ ಹೊರಟಿದ್ದರು.

ರಸ್ತೆಗಳು ಹಿಂದಾದವು. ಸವಿತಾಭವನವನ್ನು ದಾಟುವಾಗ ಸುಧಾ ಒಮ್ಮೆ ಕತ್ತೆತ್ತಿ ಆ ಕಡೆ ನೋಡಿದಳು. ನಂತರ ಮುಂದುವರಿಯುತ್ತಾ ಗೋವಿಂದಯ್ಯನ ಮನೆಯ ಮುಂದಾದರು– ಹಿಂದಿನ ಔಟ್‌ಹೌಸಿನ ಕಡೆಗೂ ಒಮ್ಮೆ ನೋಟ ಬೀರಿದಳು ಸುಧಾ... ಮತ್ತೆ ಗುಂಪು ಮುಂದೆ ಮುಂದೆ ನಡೆಯಿತು.

ಗುಂಡೂರಾಯರ ಮನೆ ದೂರದಿಂದಲೇ ಕಾಣಿಸಿತು. ವಾಸುದೇವಯ್ಯ ಮುಂದೆ ಹೆಜ್ಜೆಗಳನ್ನಿಡಲಾರದೆ ಇಡತೊಡಗಿದರು. ಗೌರಮ್ಮ ಪತಿಯ ಹಾದಿಯನ್ನೇ ತುಳಿಯುತ್ತಿದ್ದರು. ನರಹರಿ ಯಾವುದೋ ಅಪಮಾನದ ಭಾರದಿಂದ ತಲೆತಗ್ಗಿಸಿದ್ದನು. ಮೀನಾಕ್ಷಿ ತಂಗಿಯ ಆತ್ಮವಿಶ್ವಾಸಕ್ಕೆ ಬೆರಗಾಗಿ ಅವಳ ಜೊತೆಗೇ ನಡೆಯುತ್ತಿದ್ದಳು. ಸುಧಾ ಬಿರುಗಾಳಿಯಂತೆ ಮುಂದೆ ಮುಂದೆ ನಡೆಯುತ್ತಾ ಗುಂಡೂರಾಯರ ಭವ್ಯವಾದ ಮನೆಯ ಮುಂಭಾಗದಲ್ಲಿ ಬಂದು ನಿಂತಾಗ–

ಬಾಗಿಲಿಗೆ ಬಡಿದ ಬಲವಾದ ಬೀಗ ಅವಳನ್ನು ಹಿಂದಕ್ಕೆ ದಬ್ಬಿತು. ಎಲ್ಲರೂ ಮನೆಯನ್ನು ಸಮೀಪಿಸಿದಾಗ ಬಾಗಿಲಿಗೆ ಬೀಗ ಬಿದ್ದುದನ್ನು ಕಂಡು ಅಪ್ರತಿಭರಾದರು. ಬಾಗಿಲಿಗೆ ಹೊಸದಾಗಿ ತೋರಣ ಕಟ್ಟಿದಂತೆ ಕಾಣುತ್ತಿತ್ತು. ಗುಂಡೂರಾಯರ ಪರಿವಾರವೆಲ್ಲ ಎಲ್ಲಿಗೆ ಹೋಗಿದೆಯೆಂದು ಅಲ್ಲಿನ ಅಕ್ಕಪಕ್ಕದವರನ್ನು ವಿಚಾರಿಸಲು ಎಲ್ಲರಿಗೂ ಮುಜುಗರವಾದಂತಾಯಿತು.

ವಾಸುದೇವಯ್ಯನ ಮುಖ ಕಳೆಗುಂದಿತು. ಅದುವರೆಗೂ ಅವರು ಯಾವುದೋ ಮೃಗಜಲದ ಬೆನ್ನುಹತ್ತಿ ಹೊರಟವರಂತೆ ಮಗಳನ್ನು ಹಿಂಬಾಲಿಸಿದ್ದರು. ಆದರೆ ಇದೀಗ ಅವರಿಗೆ ನಿಜವಾಗಿಯೂ ಅವಮಾನವಾದಂತಾಗಿ–

"ಸಾಕು ಸುಧಾ... ಇದುವರೆಗೆ ಆದ ಅವಮಾನ... ಇನ್ನು ..."–ಎಂದು ಏನನ್ನೋ ಹೇಳಲು ಬಾಯಿತೆರೆದರು. ಸುಧಾ ನಡುವೆ ಬಾಯಿಹಾಕಿ–

"ಅಪ್ಪಾ... ನಡೀರಿ... ಇಲ್ಲಿ ರಸ್ತೇಲಿ ಯಾವ ಚರ್ಚೆನೂ ಬ್ಯಾಡ... ನಾನು ವಾಸವಾಗಿದ್ದ ಔಟ್ ಹೌಸ್ ಬಾಗಿಲು ತೆಗೆದಹಾಗಿದೆ–ಎಲ್ರೂ ಬನ್ನಿ"–ಎಂದು ಮತ್ತೆ ಮುಂದೆ ನಡೆದಳು.

ಔಟ್‌ಹೌಸಿನ ಎದುರು ಬಂದಾಗ, ವಯಸ್ಸಾದ ಹೆಂಗಸೊಬ್ಬಳು ಬಾಗಿಲಲ್ಲಿ ಕುಳಿತಿದ್ದಳು. ಬಂದವರನ್ನು ಕಂಡು ಮೇಲೆದ್ದು

"ಯಾರು ಬೇಕಾಗಿತ್ತು?" ಎಂದು ಕೇಳಿದಳು.

"ಇಲ್ಲಿ ವಿಜಯ್ ಅಂತ ಒಬ್ರು ಮೇಷ್ಟ್ರಿದ್ರಲ್ಲ.."–ಸುಧಾ ವಿಜಯನ ಹೆಸರು ಹೇಳುತ್ತಿದ್ದ ಹಾಗೆಯೇ ಆಕೆ ಓಹೋ... ಬನ್ನಿ... ನಮ್ಮ ವಿಜಯನ ಪರಿಚಯ ನಿಮಗಿದೆ ಅಲ್ವೆ... ವಿಜಯ ಇಲ್ಲೇ ಆ ಗುಂಡೂರಾಯ್ರು ಅಂತ ವಕೀಲರಿದ್ದಾರಲ್ಲ ಅವರ ಮಗನ ಮದುವೆಗೆ ದಾವಣಗೆರೆಗೆ ಹೋಗಿದಾನೆ... ನಾನು ಅವನ ತಾಯಿ... ಬನ್ನಿ ಒಳಗೆ" ಎಂದು ಎಲ್ಲರನ್ನೂ ಸ್ವಾಗತಿಸಿದಳು.

● ●


ದೀಪಾವಳಿಯ ಶುಭಾಶಯ
ಕೋರುವ
—ಜಯಮಾಲಾ



"ಕಾಡು" ಕನ್ನಡದ ಖ್ಯಾತಿಯ ಅಮರೀಶಪುರಿ "ನಿಶಾಂತ್"ದಲ್ಲಿ.



ಚರಿತ್ರ ನಟರಲ್ಲೀ ಅಗ್ರಗಣ್ಯರಾಗಿರುವ .ಅವತಾರ್ ಕೃಷ್ಣ ಹಾನಗಲ್ (ಕಾಶ್ಮೀರದವರು).

ನವ್ಯ ಕಲಾತ್ಮಕ ಚಿತ್ರಗಳು ಜನಸಾಮಾನ್ಯರ ಮೇಲೆ ಪರಿಣಾಮ ಬೀರುವುದರಲ್ಲಿ, ಮನೋರಂಜನೆ, ಶಿಕ್ಷಣ ಕೊಡುವುದರಲ್ಲಿ ಎಷ್ಟು ಯಶಸ್ವಿಯಾಗಿವೆ? ಸಿನಿಮಾ ಮಾಧ್ಯಮ ವೈಚಾರಿಕ ಸರ್ಕಸ್ಸು ಆಗಿ ಬಿಟ್ಟರೆ, ಅದು ಯಾವ ಮೌಲ್ಯ ಬದಲಾವಣೆಗಳನ್ನೂ ತರಲಾರದು. ಮಸಾಲೆಯ 'ಫಾರ್ಮುಲಾ' ಚಿತ್ರಗಳಿಗೂ ಇವುಗಳಿಗೂ ಏನು ಭೇದ ?

ನವ್ಯ ಸಿನಿಮಾ ಒಂದು ವಿವೇಚನೆ

ಸಂತೋಷಕುಮಾರ ಗುಲ್ವಾಡಿ

ಫೋಟೋಗಳು: ಶಿವರಂಜನ



ಗುಡ್ಡಿ-ಜಯಾಬಾಧುರಿ ಕಮರ್ಶಿಯಲ್ ಚಿತ್ರಗಳಲ್ಲೂ ಕಲಾತ್ಮಕತೆ ತುಂಬುವ ನಟಿ.

ಕಲಾತ್ಮಕ, ಸಮಾನಾಂತರ, ನವ್ಯ, ಪ್ರಯೋಗಾತ್ಮಕ, ನ್ಯೂವೇವ್ ಎಂದು ಮೊದಲಾಗಿ ಕರೆಯಲ್ಪಡುವ ಚಿತ್ರಗಳು ಈ ಹತ್ತು ವರ್ಷಗಳಲ್ಲಿ ಭಾರತದ ಸಾಮಾನ್ಯ ಜನರ ಮೇಲೆ ಹಳ್ಳಿಯ ಮುಗ್ಧ ಜನತೆಯ ಮೇಲೆ—ಪಟ್ಟಣದ ವಿದೇಶೀ ಪ್ರಭಾವಿತ ನಾಗರಿಕನ ಮೇಲೆ ಅಲ್ಲ—ದೊಡ್ಡ ಪ್ರಮಾಣದಲ್ಲಿ ಯಾವ ಪರಿಣಾಮ ಬೀರಿವೆ? ದೇಶದ ಜೀವಾಳವಾಗಿರುವ ೮೦% ಹಳ್ಳಿಗಳ ಜನತೆಯ ಜೀವನ ರೀತಿ—ನೀತಿಗಳನ್ನು ಪ್ರಾಮಾಣಿಕವಾಗಿ ಪ್ರತಿಬಿಂಬಿಸುವಲ್ಲಿ, ಅವರಿಗೂ ಆಧುನಿಕ ಜಗತ್ತಿಗೂ ನಡುವೆ ಸೇತುವೆ ನಿರ್ಮಿಸುವಲ್ಲಿ ಎಷ್ಟು ಯಶಸ್ವಿಯಾಗಿವೆ ಈ ಮಹಾನ್ ಮಾಧ್ಯಮಗಳು? ಕಮರ್ಶಿಯಲ್ ಚಿತ್ರಗಳ ಮಸಾಲೆ ಹಳಸಾದರೆ, ಕಲೆಯ ಹೆಸರಲ್ಲಿ ವಾಸ್ತವಿಕ ಚಿತ್ರಣ ಕೊಡುವ ನೆವದಲ್ಲಿ ಕೆಲವು ನವ್ಯ ಚಿತ್ರಗಳು ಬೋರ್ ಆಗಹತ್ತಿವೆ. ಕೃತಕ ಜೀವನವನ್ನೇ ಸತ್ವಯುತವೆಂದು ಬಾಳುವ ಪಟ್ಟಣದ ನಾಗರಿಕರಲ್ಲೂ ಕೆಲವರು ಮಾತ್ರ ನೋಡಿದ ಈ ಚಿತ್ರಗಳು ಹಳ್ಳಿಯವರಿಗೆ ಇನ್ನೂ ಮುಟ್ಟಿಲ್ಲ. ಈ ಚಿತ್ರಗಳನ್ನು ಹಳ್ಳಿಗಳ ಲೋಕೇಶನ್‌ನಲ್ಲಿ ತೆಗೆದುದೇ ಹೊರತು ಆ ಬಳಿಕ ಹಳ್ಳಿಗರಿಗೂ ಅವುಗಳಿಗೂ ಹೆಚ್ಚಿನ ಸಂಬಂಧ ಬೆಳೆಯಲಿಲ್ಲ. ಏಕೆಂದರೆ ಸೆಲ್ಯೂಲ್ಯಾಡಿನಲ್ಲಿ ಸೆರೆಹಿಡಿದ ಅಮೂರ್ತ, ಸಾಂಕೇತಿಕ, ವೈಚಾರಿಕ ಸರ್ಕಸ್ಸು ಹಳ್ಳಿಯ ಬಡ ಬೋರೇಗೌಡನಿಗೆ ಅರ್ಥವಾಗೋಲ್ಲ.

ಕ. ಡಿ. ಸಂ. ೨೪

ವಮೌಲ್ಯ

ಭಾರತೀಯ ಜನಜೀವನದ ಮೌಲ್ಯ ಬದಲಾವಣೆಗಳನ್ನು ಈ ಚಿತ್ರಗಳು ಗಮನಿಸಿಲ್ಲ. ಪ್ರಚಲಿತ ಜ್ವಲಂತ ಸಮಸ್ಯೆಗಳನ್ನು, ಬೆಳವಣಿಗೆಗಳನ್ನು ಪ್ರತಿಬಿಂಬಿಸಲಿಲ್ಲ. ಮಹತ್ವದ ಘಟನೆಗಳನ್ನು ಕಡೆಗಣಿಸಿದ್ದಾರೆ. ಈ ಮಾತನ್ನು ಹೇಳುವುದು ಇದೇ ರೀತಿಯ ಬದಲಾವಣೆ ಕಂಡಿರುವ ಜಪಾನು, ಇಟಲಿ, ಕ್ಯೂಬಾ ಮುಂತಾದ ದೇಶಗಳ ಅರ್ಥಪೂರ್ಣ ಚಿತ್ರಗಳನ್ನು ಕಂಡ ಬಳಿಕವೆ. ಇಂಥ ಚಿತ್ರಗಳಲ್ಲಿ ಸಾಮಾನ್ಯನಿಗೆ ಮನೋರಂಜನೆಯೂ ಇಲ್ಲ. ಶಿಕ್ಷಣವೂ ಇಲ್ಲ; ಅಭಿವ್ಯಕ್ತಿಯಂತೂ ಪೂರ್ಣ ಅರ್ಥವಾಗಿಲ್ಲ. ಕಲೆ ಕಲೆಗಾಗಿ ಮಾತ್ರ ಎಂಬ ಉದ್ದೇಶರಹಿತ ಚಿತ್ರಗಳಿಂದ ಮತ್ತೆ ಏನು ಸಾಧಿಸಲಾದೀತು? ಅವುಗಳಿಗೂ ಹಣ ಮಾಡುವ ಧಾರಣೆಯ ಚಿತ್ರಗಳಿಗೂ ವ್ಯತ್ಯಾಸವೇ ಉಳಿಯಲಾರದು.

ಖುಶ್‌ವಂತ್‌ಸಿಂಗರು ಒಮ್ಮೆ ಸತ್ಯಜಿತ್ ರೇ ಅವರ 'ಪಥೇರ್ ಪಾಂಚಾಲಿ' ಚಿತ್ರ ನೋಡಲು ಹೋಗಿ ಗೊರಕೆ ಹೊಡೆದರೆಂದು ಅವರೇ ಬರೆದಿದ್ದಾರೆ. ರೇ ಅವರ ಚಿತ್ರಗಳು ನಗರದ ಬುದ್ಧಿವಂತರಿಂದ ಯಾವ ಪ್ರತಿಕ್ರಿಯೆ ಪಡೆಯುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆಯಲ್ಲದೆ, ರೇ ಅವರ ಚಿತ್ರಗಳು ಕಳಪೆ ಎನ್ನುವ ಅರ್ಥದಲ್ಲಿ ಇದನ್ನು ಬರೆದಿಲ್ಲ.

ಈ ಯುಗದ ಮಹತ್ವದ ಚಿತ್ರಕಾರರಾಗಿ ಸತ್ಯಜಿತ್ ರೇಯವರು ಜಗತ್ತಿನಾದ್ಯಂತ ಸಿನಿಮಾ ತೆಗೆದರು. ಪಥೇರ್,ಪಾಂಚಾಲಿ, ಅಪುರ್‌ಸಂಸಾರ್, ಸೀಮಾ ಬದ್ಧ, † 'ನಾಯಕ', † 'ಚಾರುಲತಾ' ಮೊದಲಾಗಿ ಅವರ ಹಲವಾರು ಚಿತ್ರಗಳು ಭಾರತೀಯ ಚಲಚಿತ್ರರಂಗದಲ್ಲಿ ಹೊಸ ಹಾದಿಯನ್ನೇ ನಿರ್ಮಿಸಿ, ನೂತನ ಆಯಾಮಗಳನ್ನು ಸೃಷ್ಟಿಸಿವೆ. ಒಂದು ಅರ್ಥದಲ್ಲಿ ಅವರು ಇಂದಿನ ಭಾರತೀಯ ನವ್ಯ ಸಿನಿಮಾದ ಪಿತಾಮಹರು. ಅವರನ್ನು ಆ ಬಳಿಕ ಅನೇಕರು (ಅಂಧವಾಗಿ?) ಅನುಕರಿಸಿದರು. ಬಂಗಾಳದ ಇನ್ನೊಬ್ಬ ಅಪೂರ್ವ ಪ್ರತಿಭಾವಂತ ದಿಗ್ದರ್ಶಕ ರಿತ್ವಿಕ್ ಘಟಕ್ ಅವರ 'ಸುವರ್ಣ ರೇಖಾ', 'ಮೇಘೆ ದಾಖಾ ತಾರಾ' ಮತ್ತು ಇತ್ತೀಚಿನ † ಜುಕ್ಕಿ ಕಕ್ಕೊ ಔರ್ ಗಪ್ಪೊ" ವೈಯಕ್ತಿಕ ಚಿತ್ರಗಳು. ಮೃಣಾಲ್ ಸೇನರ † ಭುವನ್‌ಶೋಮ್ ಈ ಹಾದಿಯ ಗತಿಯನ್ನು ಇನ್ನಷ್ಟು ಸ್ಪಷ್ಟಪಡಿಸಿತು. ವೆನಿಸ್‌ನಲ್ಲಿ ಅಂತಾರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿ ಪ್ರಶಸ್ತಿ ಗಳಿಸಿದ ಈ ಚಿತ್ರ ನಮ್ಮ ಚಿತ್ರೋದ್ಯಮದ ಸ್ಟಾರ್ ಪದ್ಧತಿಯ ಪಾಚಿ ಪರಂಪರೆಗೆ ವಜ್ರಾಘಾತವಾಯಿತು.

---

† ಈ ಚಿತ್ರಗಳು F. F. C. ಸಹಾಯದಿಂದ ನಿರ್ಮಿಸಲ್ಪಟ್ಟವೆ.

ಹೊಸ ಕಲಾವಿದರೊಂದಿಗೆ ಕಡಿಮೆ ವೆಚ್ಚದಲ್ಲಿ ಚಿತ್ರವನ್ನು ತಯಾರಿಸಬಹುದೆಂಬುದನ್ನು ಅವರು ತೋರಿಸಿದರು. ಫಿಲ್ಮ್ ಫೈನಾನ್ ಕಾರ್ಪೊರೇಷನ್ F.F.C. ಈ ಚಿತ್ರದಲ್ಲಿ ಹಣ ತೊಡಗಿಸಿತ್ತು. F.F.C.ಗೆ ಮೊತ್ತ ಮೊದಲಾಗಿ ಹಾಕಿದ ಹಣ ಮರಳಿಬಂತು. ಮೃಣಾಲ್ ಸೇನರ "ಇಂಟರ್‌ವ್ಯೂ" "ಪದಾತಿಕ" "ಏಕ್ ಅಧೂರೀ ಕಹಾನಿ", "ಕಲ್ಕತ್ತಾ ೭೧" "ಕೋರಸ್", "ಹಾರ್ಮೋನಿಯಂ" ಚಿತ್ರಗಳು ನವ್ಯಚಿತ್ರಗಳ ದಾಳಿಗೆ ನಾಂದಿಯಿಟ್ಟವು. ಒಟ್ಟು ಈ ಬಗೆಯ ಸುಮಾರು ೩೦ ಚಿತ್ರಗಳು ಇತ್ತೀಚೆಗೆ ತೆರೆಕಂಡಿವೆ. ಇವುಗಳಲ್ಲಿ ಹಣದ ದೃಷ್ಟಿಯಿಂದ ಯಶಸ್ವಿಯಾದುವು. ಬರೇ ಎರಡು (ಬಾಸು ಚಟರ್ಜಿಯವರ 'ರಜನಿಗಂಧಾ' ಮತ್ತು ಶ್ಯಾಮ್ ಬೆನಗಲ್‌ರ 'ಅಂಕುರ') ಇದರ ಪರಿಣಾಮದಿಂದ ನವ್ಯ ಚಿತ್ರಗಳಲ್ಲೂ ಈಗ ಹೊಸ ತಿರುವು ಬಂದಿದೆ.

ಪ್ರತಿಧ್ವನಿ

ಇಂಥ ಚಿತ್ರಗಳ ಪ್ರತಿಧ್ವನಿ ದೇಶದಲ್ಲೆಲ್ಲ ಮೊಳಗಿದೆ. ಆದರೆ ಅದು ಅರಣ್ಯರೋದನವಾಗಿದೆಯೆ? ಈ ಚಿತ್ರಗಳನ್ನು ನೋಡಿರುವ ಹೆಚ್ಚಿನ ಮಂದಿ "ಚೆನ್ನಾಗಿತ್ತು, ಆದರೆ ಅರ್ಥವಾಗಿಲ್ಲ" ಅನ್ನುವುದರ ಹಿನ್ನೆಲೆ



ವ್ಯಾಪಾರಿ ಚಿತ್ರಗಳ ಮರುಳುಗಾಡಿನಲ್ಲಿ ಓಯಾಸಿಸ್ ಎನಿಸಿದ 'ಅಂಕುರ್' ಚಿತ್ರದಲ್ಲಿ ಸಾಧು ಮೆಹರ್-ಶಬನಾ ಅಜ್ಮಿ.

ಯೇನು? ನಗರವಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಇನ್ನೊಂದು ಗುಂಪು ಇದೆ. ಈ ಬಗೆಯ ಚಿತ್ರಗಳನ್ನು ನೋಡಿದ್ದೇವೆ ಎಂದರೆ ಜೀವನದಲ್ಲಿ ಅದೇನೋ ಸಾಧಿಸಿದಂತೆ, ತಮ್ಮ ಸ್ಥಾನಮಾನದ ಪ್ರತಿಷ್ಠೆಯ ಪ್ರಭಾವಳಿಗೆ ಕುಂದಣ ವಿಟ್ಟಂತೆ ಎಂಬ ಭಾವನೆ ಅವರಿಗೆ. ಮೃಣಾಲ್ ಸೇನ್‌ರು ತಮ್ಮ "ಇಂಟರ್‌ವ್ಯೂ"ನಿಂದ ಹಿಡಿದು "ಕೋರಸ್" ವರೆಗೂ ರಾಜಕೀಯ ಜೀವನದ ತಳಮಳವನ್ನೇ ಪ್ರತಿಫಲಿಸಿದ್ದಾರೆ. ಆದರೆ ಈ ಚಿತ್ರಗಳು ನಮ್ಮ ಹೊಲಸು ರಾಜಕೀಯ ಜೀವನದ ಅಂತರಾಳವನ್ನು ಬಗೆಯುವಲ್ಲಿ ಯಶಸ್ವಿಯಾಗಿಲ್ಲ. ಅದು ಮೇಲಿಂದ ಮೇಲಕ್ಕಷ್ಟೆ ನೋಡಿದ ವಿಹಂಗಮ ದೃಶ್ಯವಾಗಿಬಿಟ್ಟಿತ್ತು ಅಷ್ಟೆ. ಅವರ ಚಿತ್ರಗಳ ಮೇಲೆ ನಕ್ಸಲ್‌ಬಾರಿ ಪ್ರಭಾವ ವಿಪರೀತವಾಗಿದೆ. ಭಾರತೀಯ ಜೀವನದ ಸಮಗ್ರತೆಯ ಮೇಲೆ ಇದೊಂದು ಘಟನಾವಳಿ ಮಾತ್ರ. ಸೆಂಟಿಮೆಂಟೆಲಿಟಿಯ ರೋಗವನ್ನು ಪೂರ್ಣವಾಗಿ ಚಿತ್ರದಿಂದ ಗಡಿಪಾರು ಮಾಡಿದ ಮೃಣಾಲಸೇನರು ವಾಸ್ತವಿಕವಾಗಿ ಜೀವನದಿಂದ ಕಲ್ಪನಾ ಲೋಕಕ್ಕೆ (ಆದರ್ಶ ವಾದದೆಡೆಗೆ) ಸರಿದಿರುವುದು ಸ್ಪಷ್ಟವಿದೆ.

† ಉಸ್ಕಿ ರೋಟಿ', † ದುವಿಧಾ', ಮತ್ತು †'ಆಷಾಡ್‌ಕಾ ಏಕ್ ದಿನ್' ರಚಿಸಿದ ಮಣಿ ಕೌಲರ ಚಿತ್ರಗಳನ್ನು ವಿಮರ್ಶಕರು ಹೊಗಳಿದ್ದಾರೆ. ಇವುಗಳ ಅಭಿವ್ಯಕ್ತಿಯಲ್ಲಿ ಹೊಸ ಧಾಟಿ ಕಾಣಬಹುದು. ಜಾನಪದ ಕತೆಯೊಂದರ ಹಂದರದ ಮೇಲೆ ನೈಜತೆ ಮತ್ತು ಭಾಸವಾಗುವ ಸುಂದರ ಚಿತ್ರಣ ಕೊಟ್ಟಿರುವ ಅವರು ಆರೋಗ್ಯಕರವಾದ ಚಿತ್ರಗಳನ್ನೇ ಕೊಟ್ಟಿದ್ದಾರೆ. ಉದ್ದೇಶ ಕಲೆಯ ಅಭಿವ್ಯಕ್ತಿ, ಅಷ್ಟೆ. ಕುಮಾರ ಸಾಹ್ನಿಯ † "ಮಾಯಾ ದರ್ಪಣ " ಒಂದು ದೃಷ್ಟಿಯಲ್ಲಿ ರಾಜಕೀಯ ಚಿತ್ರವಾದರೂ ಹೊಸ ಭಾಷೆಯಲ್ಲಿ ಅದನ್ನು ಹೇಳಿದ ರೀತಿ ಬಹು ಸೊಗಸಾದುದು. ಅದಕೆ ಲೊಕಾರ್ನೊ ಪ್ರಶಸ್ತಿಯೂ ದೊರೆಯಿತು.

ನವ್ಯ ಚಿತ್ರಗಳಲ್ಲಿ ಮೂಲಭೂತ ಸಮಸ್ಯೆಗಳನ್ನು ವಿವೇಚಿಸುವ ಗೊಡವೆಗೆ ದಿಗ್ದರ್ಶಕರು ಹೋಗಿರುವುದೇ ಕಡಿಮೆ. ಸಮಸ್ಯೆಯನ್ನು ಹೊರಗಿಂದ ಹೊರಗೆ ನೋಡುವ ಇಂಥ ಚಿತ್ರಗಳು ರಾಜೇಂದ್ರ ಸಿಂಗ್ ಬೇಡಿಯ † "ದಸ್ತಕ್", ಬಾಸು ಭಟ್ಟಾಚಾರ್ಯರ † 'ಅನುಭವ್" ಮತ್ತು † "ಆವಿಷ್ಕಾರ", ಕಾಂತಿಲಾಲ ರಾಥೋಡ್‌ರವರ † "ಪರಿಣಯ", ಬಾಸು ಚಟರ್ಜಿಯವರ "ಸಾರಾ ಆಕಾಶ್", "ರಜನಿಗಂಧಾ" ಮೊದಲಾದವು.

ಆರಂಭದಲ್ಲಿ ಕಲಾತ್ಮಕ ಚಿತ್ರಗಳಿಗೆ ಮಾತ್ರ ಹಣ ಹಾಕುವ ಉದ್ದೇಶದಿಂದ F.F.C. ಕ್ರಮೇಣ ಹಣದಲ್ಲಿ ಹೊಡೆತ ತಿಂದಿತು. F.F.C. ಬಂಡವಾಳ ಭಾರತೀಯ ಒಟ್ಟು ಚಿತ್ರ ಜಗತ್ತಿನ ಬಂಡವಾಳದಲ್ಲಿ ಬರೇ ೨% ಮಾತ್ರ. ಇದುವರೆಗೆ ಸುಮಾರು ೧೧೪ ಚಿತ್ರಗಳಿಗೆ ಈ ಸಂಸ್ಥೆ ಹಣ ಮುಂಗಡ ಕೊಟ್ಟಿದೆ. ಇವುಗಳಲ್ಲಿ ೬೬ ಫೀಚರ್ ಚಿತ್ರಗಳಿವೆ. F.F.C. ಗೆ ಬಾಕಿ ಇರುವ ಹಣವೇ ಸುಮಾರು ರೂ. ೪೦ ಲಕ್ಷದಷ್ಟಿದೆ. ಆದುದರಿಂದ ಈಗ ಸ್ವತಃ F.F.C. ಯೇ ಚಿತ್ರ ನಿರ್ಮಿಸಲು ನಿರ್ಧರಿಸಿದೆ ಮಾತ್ರವಲ್ಲ "ಗರಂ ಹವಾ" ಚಿತ್ರವನ್ನು ಮೊತ್ತ ಮೊದಲ ಬಾರಿಗೆ ಹಂಚಿಕೆಗಾಗಿಯೂ ತೆಗೆದುಕೊಂಡಿತು.

ಹೆಚ್ಚಿನ ನವ್ಯ ಚಿತ್ರಗಳು ಭಾರತೀಯ ಜೀವನದ ಕಡು ಬಡತನ, ಕಠೋರ ಸಮಸ್ಯೆಗಳನ್ನು ತೋರಿಸುವ ದೀರ್ಘಕಾಲದ ಸಾಕ್ಷ್ಯ ಚಿತ್ರಗಳಾಗಿವೆ ಅಷ್ಟೆ




"ಗರಂ ಹವಾ" ಖ್ಯಾತಿಯ ಗೀತಾ ಪಕ್ತಂಗಡಿ ಮತ್ತು ಖ್ಯಾತ ರಂಗಭೂಮಿ ನಟ ನಿತಿನ್ ಸೇಠಿ.



"ದಸ್ತಕ್" ಚಿತ್ರದ ಚೆಲುವೆ ರೆಹನಾ ಸುಲ್ತಾನ್. ಆ ಬಳಿಕ ವಾಣಿಜ್ಯಯುತ ಚಿತ್ರಗಳ ಕಾಡಿನಲ್ಲಿ ಕಂಗೆಟ್ಟಿದ್ದಾಳೆ.

ಬಹುಶಃ ಹತ್ತು ವರ್ಷಗಳ ಕೆಳಗೆ ಇಂಥ ಚಿತ್ರಗಳನ್ನು ಜನರು ಅಲ್ಲಿಂದಲ್ಲಿಗೆ ತಿರಸ್ಕರಿಸಿ ಬಿಡುತ್ತಿದ್ದರು. ಇಂದು ಜನ ನೋಡುತ್ತಿದ್ದಾರೆ ಎಂಬುದೇ ಈ ಚಿತ್ರಗಳು ಜನರ ಅಭಿರುಚಿಯಲ್ಲಿ ಬದಲಾವಣೆ ತಂದಿವೆ ಎಂಬುದಕ್ಕೆ ಸಾಕ್ಷಿ.

ಕನ್ನಡಿಗ ಎಂ. ಎಸ್. ಸತ್ಯು ಅವರ ತಾರೆಯರೇ ಇಲ್ಲದ "ಗರಂಹವಾ" ಚಿತ್ರ ಯಶಸ್ವಿಯಾದುದಿದೆ. ದಿ. ಅವತಾರ ಕೃಷ್ಣ ಕೌಲ್ ಅವರ †"೨೭ ಡೌನ್", ಸತ್ಯದೇವ ದೂಬೆ ಅವರ † ಶಾಂತ ತಾ ಕೋರ್ಟ್ ಚಾಲೂ ಆಹೆ" ಇವನ್ನು ಜನರು ನೋಡಿ ಏನೋ ಹೊಸ ಅನುಭವವಾಯಿತು ಎಂದಾದರೂ ಹೇಳಿದರು. ಆದರೆ ಗಿರೀಶ್ ರಂಜನರ † "ಡಾಕ್ ಬಂಗ್ಲಾ" ಅರವಿಂದ ಕುಮಾರ ಸಿನ್ಹಾ ಅವರ †"ಗ್ರಹಣ" .ಪ್ರೇಂಕಪೂರರವರ † ಬದ್ನಾಮ್ ಬಸ್ತಿ' (ಇದರಲ್ಲಿ ಕೈ ಸುಟ್ಟುಕೊಂಡ ಇವರು ಈಗ "ಕಾಮಶಾಸ್ತ್ರ" ಚಿತ್ರ ತಯಾರಿಸಿದ್ದಾರೆ!) ಶಿವೇಂದ್ರ ಸಿನ್ಹಾರವರ † "ಫಿರ್‌ಭಿ", ಗಿರೀಶ್ ಶುಕ್ಲರವರ †"ಆಕ್ರಾಂತ" ಇವು ಮಹತ್ವದ ಪರಿಣಾಮವನ್ನೇನೂ ಮಾಡಲಿಲ್ಲ.



ಸತ್ಯಜಿತ್‌ರೇ ಬಳಿಕ ಅತ್ಯಂತ ಪ್ರತಿಭಾವಂತ ದಿಗ್ದರ್ಶಕರೆಂದು ಖ್ಯಾತರಾದ ಬಂಗಾಳದ ಋತ್ವಿಕ್ ಘಟಕ್. ಸಂಕಲನ ಪ್ರವೀಣರೂ ಕೂಡ.



"೨೭ ಡೌನ್" ಚಿತ್ರದಲ್ಲಿ ರಾಖಿ ಮತ್ತು ಆರ್. ಕೆ. ರೈನಾ.

ಇವುಗಳಲ್ಲಿ ಕೆಲವು ಭಾರೀ ಸೋಲು ಕಂಡವು (ಉದಾ–"ಬದ್ನಾಮ್ ಬಸ್ತಿ" ಮತ್ತು "ಆಕ್ರಾಂತ")

ನವ್ಯ ಚಿತ್ರಗಳು ಕನ್ನಡ, ಮಲಯಾಳಂ ಮತ್ತು ಬಂಗಾಳದಲ್ಲಿ ಸಾಕಷ್ಟು ಬಂದಿವೆ. ಆಯಾ ಭಾಷಾ ಮಟ್ಟದಲ್ಲಿ ಅವು ಹೊಸತನವನ್ನು ತಂದಿವೆ, ಕೆಲವು ರಾಷ್ಟ್ರೀಯ ಮಟ್ಟಕ್ಕೆ ಏರಿವೆ. ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶಿತವಾಗಿವೆ. ಆದರೆ ಕಮರ್ಶಿಯಲ್ ಕೋಟೆಯನ್ನು ಕೆಡವುದು ಇವುಗಳಿಂದ ಸಾಧ್ಯವಾಗಿಲ್ಲ.

ಗಿರೀಶ್ ಕಾರ್ನಾಡರ "ಸಂಸ್ಕಾರ", "ವಂಶವೃಕ್ಷ", "ಕಾಡು", ಬಿ. ವಿ. ಕಾರಂತರ "ಚೋಮನ ದುಡಿ", ಎಂ. ಟಿ. ವಾಸುದೇವ್ ನಾಯರ್‌ರವರ "ನಿರ್ಮಾಲ್ಯಂ" "ಕುಂಕು" ಹೆಸರಿಸಬೇಕಾದವು. ಒಟ್ಟಿನಲ್ಲಿ ನವ್ಯ ಚಿತ್ರಗಳಲ್ಲಿ ಅತ್ಯಂತ ಯಶಸಿಯಾದವರು "ರಜನಿಗಂಧಾ" ನಿರ್ಮಿಸಿದ ಬಾಸು ಚಟರ್ಜಿ, "ಅಂಕುರ" ಮತ್ತು "ನಿಶಾಂತ"ದ ಶ್ಯಾಮ್ ಬೆನಗಲ್‌ರವರು. ಅವರೂ ನವ್ಯದಲ್ಲಿ ಕಮರ್ಶಿಯಲ್ ಅಂಶ ಕಂಡಿರುವುದು ಇದಕ್ಕೆ ಕಾರಣ.

ನವ್ಯ ಎಷ್ಟು ನವ್ಯ ?

ನವ್ಯ ಚಿತ್ರಗಳು ಇತ್ತೀಚೆಗೆ ಆರಂಭವಾದುವೆ? ಖಂಡಿತವಾಗಿ ಅಲ್ಲ. ಬಹಳ ಹಿಂದೆ, ಅಂದರೆ ಇಂದಿನ ಪೀಳಿಗೆಯ ಅನೇಕ ದಿಗ್ದರ್ಶಕರು ಹುಟ್ಟುವ ಮೊದಲೇ ಇದ್ದ "ನ್ಯೂ ಥಿಯೇಟರ್ಸ್" "ಪ್ರಭಾತ" "ಬಾಂಬೆ ಟಾಕೀಸ್" ಇವರ ಅನೇಕ ಚಿತ್ರಗಳು ಹಲವು ದೃಷ್ಟಿಯಿಂದ ನವ್ಯವೇ ಆಗಿದ್ದವು. ನಾಲ್ವತ್ತು ವರುಷಗಳ ಬಳಿಕವೂ ಅವು ಎಷ್ಟೊಂದು ಚೇತೋಹಾರಿಯಾಗಿವೆ. ಅವುಗಳ ಸರಳ ಸಂಗೀತ ಚಿತ್ತರಂಜಕ, ಕಥಾವಸ್ತು ನೇರವಾಗಿ ಮನ ಮುಟ್ಟುವಂಥದ್ದು ಅಂದಿನ ಜ್ವಲಂತ ಸಾಮಾಜಿಕ ಸಮಸ್ಯೆಗಳಾದ ಕುಡಿತ, ವಿಧವಾ ಸಮಸ್ಯೆ, ವರದಕ್ಷಿಣೆ, ಸ್ತ್ರೀ ಸ್ವಾತಂತ್ರ್ಯ ಹಿಂದೂ ಮುಸ್ಲಿಂ ಭೇದಗಳ ಬಗೆಗೆ ಅವು ಕ್ಷ–ಕಿರಣ ಬೀರಿದ್ದವು. ಅವುಗಳ ಚಿತ್ರಣ ನಿಜವಾಗಿ ಮಾರ್ಮಿಕವಾಗಿತ್ತು. ಇತ್ತೀಚೆಗೆ ಇಂಥ ಚಿತ್ರಗಳ ಸಪ್ತಾಹ "ಹೌಸ್ ಫುಲ್" ಪ್ರದರ್ಶನ ಕೊಡುತ್ತಿದೆ. ಈ ಜ್ವಲಂತ ಚಿತ್ರಗಳನ್ನು ನೋಡಿದರೆ ಇಂದಿಗೂ ಮೈ ಜುಂ ಅನ್ನುತ್ತದೆ. ಇಂದಿನ ನವ್ಯ ಚಿತ್ರಗಳಿಗೆ ಈ ಜೀವಂತ ಸಂವೇದನೆ ಇದೆಯೆ? ಕಲೆ ಜೀವನಕ್ಕಾಗಿ ಎಂಬ ಸಂದೇಶವನ್ನೂ ಕೊಡುತ್ತವೆ ಈ ಹಳೆ ಚಿತ್ರಗಳು.

ಜಾಗತಿಕ ಯುದ್ಧ. ನಮ್ಮ ಸ್ವಾತಂತ್ರ್ಯ ಚಳುವಳಿ ಮಾರ್ಕ್ಸ್ ಪ್ರಭಾವಗಳ ಮಿಶ್ರಣ ಹಾಗೂ ಬದಲಾಗುವ ಸಾಮಾಜಿಕ ಪ್ರಜ್ಞೆಯ ಜೀವಂತ ಚಿತ್ರಣಗಳ ಆಯಾಮಗಳೆಲ್ಲ ಈ ಚಿತ್ರಗಳಲ್ಲಿ ಸ್ಪಷ್ಟ. ಜನತೆಯ ಮನದಾಳವನ್ನು ಕೆಣಕಬಲ್ಲ ಈ ಚಿತ್ರಗಳು ಇಂದಿನ ನವ್ಯ ಚಿತ್ರಗಳಿಗಿಂತ ಅನೇಕ ದೃಷ್ಟಿಯಲ್ಲಿ ಯಶಸ್ವಿ. ದೇವಕೀ ಬೋಸ್, ವಿ. ಶಾಂತಾರಾಮ್, ಗಜಾನನ ಜಾಗಿರ್ ದಾರ್, ಎ. ದಾಮ್ಲೆ, ಫತೇಲಾಲ್, ಬಿಮಲ್‌ರಾಯ್ ಸತ್ಯೇನ್‌ಬೋಸ್, ಇತ್ತೀಚೆಗೆ ನಮ್ಮ ಕಾಲದಲ್ಲೇ ಇದ್ದ ಗುರುದತ್ ಇವರ ಅನೇಕ ಚಿತ್ರಗಳು ಯಾವಕಾಲಕ್ಕೂ ನವ್ಯವಾಗಿಯೇ ನಿಲ್ಲಬಲ್ಲವು.

"ಅಮೃತ ಮಂಥನ", "ಪಡೋಸಿ", "ಡಾಕ್ಟರ್ ಕೋಟ್ನೀಸ್ ಕಿ ಅಮರ್ ಕಹಾನಿ" "ಆದ್ಮಿ",

"ಮನಿಯಾ ನಮೂನೆ". "ರಾಮು ಶಾಸ್ತ್ರಿ", "ದೊ ಬಿಘಾ ಜಮೀನ್", "ರಿಕ್ಷಾವಾಲಾ" "ಕಾಗಝ ಕೆ ಫೂಲ್" "ಚೌಧವಿನ್ ಕಾ ಚಾಂದ್" ಇವು ಕೆಲವು ಉದಾಹರಣೆಗಳು. ಆಂದ ಮಾತ್ರಕ್ಕೆ ಈ ಚಿತ್ರಗಳು ಪರಿಪೂರ್ಣ ಎಂದಲ್ಲ.

ಕಮರ್ಶಿಯಲ್ ಜಗತ್ತಿನಲ್ಲಿ ಕಲಾತ್ಮಕ ಚಿತ್ರ ತಯಾರಿಸಿದ ಅತಿರಥರೇ ನಮ್ಮಲ್ಲಿ ಇಲ್ಲವೆ? ರಾಜ ಕಪೂರ್‌ನ "ಜಾಗ್ತೆ ರಹೊ", ಸುನೀಲ್ ದತ್‌ನ "ಏಕ ಪಾತ್ರಾಭಿನಯ ಚಿತ್ರ "ಯಾದೇಂ", ಹೃಷಿಕೇಶ್ ಮುಖರ್ಜಿಯ "ಆನಂದ", "ಗುಡ್ಡಿ", "ನಮಕ್ ಹರಾಮ್" ಇವಲ್ಲದೆ ಕೆ. ಎ. ಅಬ್ಬಾಸರ ಅನೇಕ ಚಿತ್ರಗಳನ್ನು ಹೆಸರಿಸಬಹುದು. ಆದರೆ ಇವರು ಮತ್ತೆ ಕಮರ್ಶಿಯಲ್ ಚಿತ್ರಗಳ ಕಾಡಿಗೆ ಹೋದುದು ಗಮನಾರ್ಹ.

ಇತ್ತೀಚೆಗೆ ಕಲಾತ್ಮಕ ಚಿತ್ರಗಳ ಹೆಸರಲ್ಲಿ ನೈಜತೆಯ ನೆವದಲ್ಲಿ ನಮ್ಮ ಚಿತ್ರಗಳಲ್ಲಿ ಮಾನಭಂಗದಂಥ ದೃಶ್ಯಗಳನ್ನೂ ತುರುಕಲಾಗುತ್ತಿದೆ. ಹಳ್ಳಿಯ ಮುಗ್ಧ ರೈತರ ಮೇಲೆ ಜಮೀನ್ದಾರರು ಮಾಡುವ ದಬ್ಬಾಳಿಕೆ, ಹರಿಜನ ಹೆಣ್ಣಿನ ಮೇಲೆ ಸವರ್ಣೀಯ ಮಾಡುವ ಬಲಾತ್ಕಾರ ಇತ್ಯಾದಿ ಚಿತ್ರ ನೋಡಿದ ಪಟ್ಟಣಿಗ, ಚಿತ್ರದಲ್ಲಿ ತನ್ನ ಹಳ್ಳಿಯ ಬಗ್ಗೆ ವಿಚಿತ್ರ ಕಲ್ಪನೆ ಸೃಷ್ಟಿಸಿಕೊಂಡು (ಭಾರತವೆಂದರೆ ತಾಜಮಹಲು ರೋಪ್ ಟ್ರಿಕ್ ಮತ್ತು ಭಿಕ್ಷುಕರ ದೇಶವೆಂದು ಅಮೇರಿಕನ್ನರು ತಿಳಿದಂತೆ) ತನ್ನನ್ನು ಅಲ್ಲಿ ಗುರುತಿಸಲಾರದೆ ಅಪರಿಚಿತನಾಗುತ್ತಾನೆ. ಜಪಾನು, ಇಟಲಿಗಳಲ್ಲಿ ಬಂದು ಹೋಗಿರುವ ಒಂದು ನಮ್ಮ ಮೋಡ ನಮ್ಮಲ್ಲೂ ಹಾದು ಹೋಗುತ್ತಿದೆ, ಅದೂ ವೈಶಾಖದಲ್ಲಿ.

ಸತ್ಯಜಿತ್ ರೇ ಅವರಂತೆ ಮಾನವೀಯ ಚಿತ್ರಣ ಕೊಡುವ ಮೃಣಾಲ್ ಸೇನ್, ರಿತ್ವಿಕ್ ಘಟಕ್, ಅದರಂತೆ ರಾಜ ನೈತಿಕ ವಿಚಾರಧಾರೆಯ ಮೇಲೆ ಬೆಳಕು ಬೀರುವ, ಶ್ಯಾಮ್ ಬೆನಗಲ್, ಗಿರೀಶ್ ಕಾರ್ನಾಡರಂತೆ ಸಾಮಾಜಿಕ ಮೌಲ್ಯಗಳ ಮೇಲೆ ದೃಷ್ಟಿ ಹಾಯಿಸುವ, ಸತ್ಯುರವರಂಥ ಸಾಮಾಜಿಕ ಜೀವನದ ವಿಪರ್ಯಾಸ ಚಿತ್ರಣ ಕೊಡುವ ಬಹುಮುಖ ಪ್ರತಿಭಾವಂತ ದಿಗ್ದರ್ಶಕರ ಜತೆ ಭಾರತೀಯರ ಜೀವನದ ವಿಕೃತಿ ತೋರಿಸುವವರೂ ಇದ್ದಾರೆ.

ನಮ್ಮ ಚಿತ್ರಗಳನ್ನು ಮಾಡಿರುವುದಾದರೂ ಯಾರಿಗಾಗಿ? ಈ ದೇಶದ ಸರಾಸರಿ ೩೦% ಅಕ್ಷರಸ್ಥರಲ್ಲಿ ಇಂಥ ಚಿತ್ರ ನೋಡಿ ಅರ್ಥ ಮಾಡಿಕೊಳ್ಳುವ, ಹೆಚ್ಚೆಂದರೆ ಅವರಲ್ಲಿ ೫೦% ಪ್ರೇಕ್ಷಕರ ಮೇಲೆ ಆಗುವ ಪರಿಣಾಮ ಮೌಲ್ಯಗಳ ಬದಲಾವಣೆಯನ್ನು ಹೇಗೆ ಸಾಧಿಸೀತು? ನಮ್ಮ ಚಿತ್ರಕಾರರು ಮುಖ್ಯವಾಗಿ ತಮ್ಮ ಪ್ರೇಕ್ಷಕರು ಯಾರು ಎಂದು ಗುರುತಿಸುವಲ್ಲಿ ಸೋತಿದ್ದಾರೆ. ನಮ್ಮ ಹಳ್ಳಿಯ ಚಿತ್ರವನ್ನು ಹಳ್ಳಿಗರು ಅಲ್ಲಿ ಕಾಣಲಾರರು, ಪಟ್ಟಣಿಗ ಅದೇ ಹಳ್ಳಿಜೀವನ ಎಂದು ಮೋಸ ಹೋಗಬಹುದು. ವಿದೇಶೀಯ ಇದೇ ಭಾರತ ಎಂದು ದಿಗ್ಭ್ರಾಂತನಾಗಬಹುದು. ಹೀಗೆಂದ ಕೂಡಲೇ ಈ ಚಿತ್ರಗಳನ್ನೆಲ್ಲ ಒಟ್ಟಾಗಿ ಟೀಕಿಸುವುದಲ್ಲ. ಸಿನಿಮಾದಂಥ ಅಖಿಲ ಭಾರತ ವ್ಯಾಪ್ತಿಯ ಪ್ರಬಲ ಮಧ್ಯಮದಲ್ಲಿ ಈ ಚಿತ್ರಗಳು ಹೆಚ್ಚಿನದನ್ನು ಸಾಧಿಸಿಲ್ಲ. ಸ್ವಾತಂತ್ರ್ಯೋತ್ತರದ ಮಹತ್ವದ ಈ ೨೮ ವರ್ಷಗಳಲ್ಲಿ

ವಿವಾದಾತ್ಮಕ ನಾಟಕ ಅಥವಾ ಕಾದಂಬರಿಗಳನ್ನೇ ಆರಿಸಿ ಚಿತ್ರ ತಯಾರಿಸುವುದು ಒಂದು ಫ್ಯಾಷನ್ ಹಾಗೂ ಸ್ಟಂಟ್ ಇದು ನಮ್ಮ ಚಿತ್ರಣದ ಪ್ರಧಾನ ಗುರುತು. ಹಳ್ಳಿಗರ ಚಿತ್ರಣ ತೀರಾ ರೋಮ್ಯಾಂಟಿಕ್ ಆಗುತ್ತದೆ. ಅವು ಆ ಮಟ್ಟಿಗೆ. ಕಮರ್ಶಿಯಲ್ ಚಿತ್ರಗಳನ್ನು ಬಿಟ್ಟಿಲ್ಲ. ದೇಶದ ಹಸಿರುಕ್ರಾಂತಿ ಯಾವ ಸಿನಿಮಾ ದಿಗ್ದರ್ಶಕನ ಮೇಲೂ ಪರಿಣಾಮ ಮಾಡಿಲ್ಲವೆ? ಟ್ಯಾಕ್ಸ್ ಉಳಿಸುವ ಉದ್ದೇಶದ ಹೊರತಾಗಿ ಕುಟುಂಬ ಯೋಜನೆಯ ಚಿತ್ರಣಕ್ಕೆ ಬೇರೆ ಸನ್ನಿವೇಶದ ಅವಕಾಶವಿಲ್ಲ. ಕಲಾತ್ಮಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಯಶಸ್ವಿಯಾಗಬೇಕಾದುದು ಮುಖ್ಯ ಎಂಬುದನ್ನು ಇದೀಗ ಕಟುವಾಗಿಯಾದರೂ ನಮ್ಮ ನಮ್ಮ ಕಲಾವಿದರಿಗೆ ಅರಿವಾಗುತ್ತಿದೆ.



ನೈಜ ಅಭಿನಯ ಸಮರ್ಥ ನಿರ್ದೇಶನ, ಸತ್ವಯುತ ಕಥೆ, ಮೂರೂ ಮುಪ್ಪುರಿಗೊಂಡ ಚಿತ್ರವೆನಿಸಿದ "ನಿಶಾಂತ್" ಚಿತ್ರದಲ್ಲಿ ಶಬಾನಾ ಅಜ್ಮಿ, ಗಿರೀಶ ಕಾರ್ನಾಡ.

ಕೆ. ರಮೇಶ

ಬೆಳ್ಳಿ ಪರದೆಯ ಬೆಡಗಿನ ಹುಡುಗಿ 'ಝೀನತ್ ಅಮಾನ್'



ಝೀನತ್ ಅಮಾನ್- ಅಶೋಕರಾಯ್‌ರು ದಿಗ್ದರ್ಶಿಸುತ್ತಿರುವ "ಕಾಲಾಬಾಝು" ಚಿತ್ರದ ಭಕ್ತಿಯುತ ಸನ್ನಿವೇಶದಲ್ಲಿ

ಸ್ವತಂತ್ರ ವಿಚಾರದ, ಅತ್ಯಂತ ಬೆಡಗುಗಾತಿ ಎನಿಸಿದ ಝೀನತ್ ಅಮಾನ "ಹರೇ ರಾಮ ಹರೇ ಕೃಷ್ಣ" ಚಿತ್ರದಿಂದ ಭಾರತೀಯ ಚಿತ್ರರಂಗದಲ್ಲಿ ಬಿರುಗಾಳಿಯನ್ನೆಬ್ಬಿಸಿದ ತಾರೆ. ಪ್ರತಿಯೊಬ್ಬ ಸಿನಿ ಹೋಕನ ಆರಾಧ್ಯ ದೇವತೆಯಾಗಿರುವ ಈ ಚೆಲ್ಲುಗಾತಿ ನಟಿಸಲಿದ್ದಾಳೆಂಬ ಒಂದೇ ಕಾರಣದಿಂದ ಅವಳ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ವಿಕ್ರಮ ಸ್ಥಾಪಿಸುತ್ತಿವೆ ಎಂದರೆ, ಅವಳ ಜನಪ್ರಿಯತೆಯ ಅರ್ಥವಾದೀತು. "ಮನೋರಂಜನ" ಚಿತ್ರ ಇದಕ್ಕೊಂದು ಉತ್ತಮ ನಿದರ್ಶನ. ಝೀನತ ಹಿಂದೀ ಚಿತ್ರರಂಗದ ಇತರ ನಟಿಯರಿಗಿಂತ ಭಿನ್ನವಾಗಿದ್ದಾಳೆ. ಅಂತೆಯೇ ಅವಳು ಹಾಲಿವುಡ್ ನಟಿ ಎಂದು ಭಾವಿಸಿದವರು ಬಹಳ. ಹಾಗೆ ಭಾವಿಸಿದವರಿಗೆ ಉತ್ತರರೂಪವಾಗಿ ಝೀನತ್ "ನಾನು ಅಪ್ಪಟ ಭಾರತೀಯಳು" ಎಂದು ಹೇಳುತ್ತಾಳೆ. ವಿದೇಶಗಳಲ್ಲೂ ಅವಳು ಜನಪ್ರಿಯತೆಯನ್ನು ಪಡೆದ ತಾರೆ. ಈಕೆ ಚಿತ್ರವೊಂದರಲ್ಲಿ ನಟಿಸಲು ಸಹಿ ಹಾಕಿದ್ದಾಳೆಂದು ತಿಳಿದೊಡನೆ ವಿದೇಶಗಳಲ್ಲಿನ ಚಿತ್ರವಿತರಕರು ಆ ಚಿತ್ರವನ್ನು ಖರೀದಿಸಲು ಮುಂದಾಗುತ್ತಾರೆಂಬುದೊಂದು ವೈಶಿಷ್ಟ್ಯದ ಸಂಗತಿ. ಇತ್ತೀಚೆಗೆ ಲಂಡನ್ನಿನಲ್ಲಿ ನಡೆದ "ಅಜನಬಿ" ಚಿತ್ರದ ಪ್ರಥಮ ಪ್ರದರ್ಶನಕ್ಕೆ ಝೀನಿ ಹಾಜರಾಗಿದ್ದಳು. ಆದರೆ ಈ ತಾರೆ ಚಿತ್ರಗೃಹಕ್ಕೆ ಬರಬೇಕಾದರೆ ಪೋಲೀಸ ರಕ್ಷಣೆಯಲ್ಲಿ ಬರಬೇಕಾಯಿತು. ಸಹಸ್ರ ಸಹಸ್ರ ಸಿನಿಪ್ರಿಯರ ಕೇಂದ್ರಬಿಂದುವೆನಿಸಿದ ಝೀನತ ಹಾಗೂ ರಾಜೇಶ್ ಕಾರಿನಲ್ಲಿ ಬಂದರು. ಆಗಿನ ದೃಶ್ಯ ರಾಜ ರಾಣಿಯರನ್ನು ನೆನಪಿಗೆ ತಂದುಕೊಡುವಂತಿತ್ತು.

ಝೀನತ್ "ಹರೇ ರಾಮ ಹರೇ ಕೃಷ್ಣ" ಚಿತ್ರದ ಹುಡುಗಿ ಎಂದು ಗುರುತಿಸಲ್ಪಟ್ಟರೂ ಚಿತ್ರರಂಗ ಪ್ರವೇಶಿಸಿದುದು ಓ. ಪಿ. ರಲ್ಹನ್‌ರ "ಹಲ್ ಚಲ್" ಚಿತ್ರದ ಮುಖಾಂತರ. ಈ ಚಿತ್ರದಲ್ಲಿ ಪೋಷಕ ಪಾತ್ರದಲ್ಲಿ ಕಾಣಿಸಿಕೊಂಡ ಅವಳನ್ನು ಯಾರೂ ಅಷ್ಟಾಗಿ ಗುರುತಿಸಲಿಲ್ಲ. ಆನಂತರದ "ಹಂಗಾಮಾ"ದಲ್ಲೂ ಅವಳಿಗೆ ಪ್ರಾಶಸ್ತ್ಯವಿರಲಿಲ್ಲ. ಮೇಲಾಗಿ ಇವೆರಡೂ ಚಿತ್ರಗಳು ಸೋಲನ್ನಪ್ಪಿದವು. ಚಿತ್ರರಂಗದಲ್ಲಿ ತಾನು ಸ್ಥಿರವಾಗಿ ನಿಲ್ಲಬಲ್ಲೆನೆಂಬ ವಿಶ್ವಾಸವೂ ಅವಳಿಗೆ ಉಳಿಯಲಿಲ್ಲ. ಈ ಫ್ಯಾಶನ್ನಿನ ಹುಡುಗಿ ಭಾರತೀಯ ಚಿತ್ರರಂಗಕ್ಕೆ ಒಗ್ಗಿಕೊಳ್ಳಲಾರಳೆಂಬ ಹಾರಿಕೆಯ ಭವಿಷ್ಯ ನುಡಿದವರೂ ಬಹಳ. ಆದರೆ ಎಲ್ಲರ ಕಲ್ಪನೆಯನ್ನು ಹುಸಿಗೊಳಿಸಿ ಸ್ವಸಾಮರ್ಥ್ಯ ಹಾಗು ಪರಿಶ್ರಮದಿಂದ ಝೀನತ್ ಹಿಂದೀ ಚಿತ್ರರಂಗದಲ್ಲಿ ಮೆರೆಯುತ್ತಿದ್ದಾಳೆ.

ಒಳ್ಳೆಯ ಹುಮ್ಮಸ್ಸಿನಿಂದ ಚಿತ್ರರಂಗ ಪ್ರವೇಶಿಸಿದ್ದ ಈ ಹುಡುಗಿಗೆ "ಹಲ್ ಚಲ್" ಮತ್ತು "ಹಂಗಾಮಾ" ಚಿತ್ರಗಳು ಅವಳಿಗೆ ನಿರಾಶೆಯನ್ನುಂಟು ಮಾಡಿದವು. ಚಿತ್ರರಂಗಕ್ಕೆ ಕೈ ಮುಗಿದು ಅಮೇರಿಕೆಗೆ ತೆರಳಿ ಬಿಜಿನೆಸ್ ಮ್ಯಾನೇಜಮೆಂಟಿನಲ್ಲಿ ಹೆಚ್ಚಿನ ತರಬೇತಿ ಪಡೆಯಲು ಬಯಸಿದ್ದಳು. ಆದರಿಂದಾಗಿ ತನ್ನ ತಂದೆಯ ಉದ್ದಿಮೆಯಲ್ಲಿ ಸಹಾಯಕಳಾಗಿ ಕಾರ್ಯ ನಿರ್ವಹಿಸಬಹುದೆಂದು ಬಗೆದಿದ್ದಳು. ಹಾಗೆ ನೋಡಿದರೆ ಝೀನತ್ ಎಳವೆಯಿಂದಲೂ ಬಹು ಚೂಟಿ. ಅಭ್ಯಾಸದಲ್ಲಿ ಮುಂದು, ತನ್ನ ಮಾಧ್ಯಮಿಕ ಶಿಕ್ಷಣವನ್ನು ಪಂಚಗಣಿಯ ಸೇಂಟ ಜೋಸೆಫ್ ಕಾನ್ವೆಂಟ ಸ್ಕೂಲಿನಲ್ಲಿ ಮುಗಿಸಿದಳು. ಅಲ್ಲಿದ್ದ ೧೦ ಸಹಸ್ರ ವಿದ್ಯಾರ್ಥಿಗಳಲ್ಲಿ ಅತ್ಯಂತ ಪ್ರತಿಭಾನ್ವಿತಳೆಂದು ಹೆಸರುಗಳಿಸಿ ಸರಕಾರದ ವಿದ್ಯಾರ್ಥಿವೇತನವನ್ನೂ ಗಿಟ್ಟಿಸಿಕೊಂಡಳಲ್ಲದೆ ಹೆಚ್ಚಿನ ವ್ಯಾಸಂಗಕ್ಕಾಗಿ ಕ್ಯಾಲಿಫೋರ್ನಿಯಾಕ್ಕೆ ತೆರಳಿದಳು. ಮೊದಲಿನಿಂದಲೂ ಕಲೆಯತ್ತ ಒಲವನ್ನಿರಿಸಿಕೊಂಡ ಝೀನತ್‌ಳಿಗೆ ಹಾಲಿವುಡ್ ಚಿತ್ರರಂಗ ಹಾಗು ಟೆಲಿವಿಜನ್‌ದವರಿಂದ ಕರೆಗಳು ಅಲ್ಲಿದ್ದಾಗ ಬಂದವು. ಆದರೆ ಅವಳು ಅವನ್ನೆಲ್ಲ ಸ್ವೀಕರಿಸಲಿಲ್ಲ. ಕಲೆ ಮತ್ತು ಸಾಹಿತ್ಯವನ್ನು ಪರಿಶ್ರಮಪೂರ್ವಕವಾಗಿ ಅಭ್ಯಸಿಸಿ ಬಂಗಾರ ಪದಕದೊಂದಿಗೆ ಡಿಪ್ಲೊಮಾವನ್ನು ಪಡೆದು ಸ್ವದೇಶಕ್ಕೆ ಮರಳಿದಳು.

ಭಾರತಕ್ಕೆ ಬಂದ ಬಳಿಕ ಝೀನತ್ ವೇಳೆ ಕಳೆಯಲು ಮಾಡೆಲಿಂಗ ಉದ್ಯೋಗ ಪ್ರಾರಂಭಿಸಿದಳು. ಗೆಳತಿಯರ ಒತ್ತಾಸೆ ಹಾಗು ವಿನೋದಕ್ಕಾಗಿ ಝೀನತ್ ಸೌಂದರ್ಯ ಸ್ಪರ್ಧೆಗಿಳಿದಳು. ಒಮ್ಮೊಮ್ಮೆ ದೈವ ಅರಸಿ ಬಂದರೆ ಕಾಲು ಬಿದ್ದು ಬರುತ್ತದಂತೆ. ಝೀನತ್‌ಳಿಗೆ ಆದುದೂ ಹಾಗೆಯೇ. ಮನಿಲಾದಲ್ಲಿ ಜರುಗಿದ ಸೌಂದರ್ಯ ಸ್ಪರ್ಧೆಯಲ್ಲಿ ಈ ಬೆಡಗಿನ ಹುಡುಗಿ ೧೯೭೦ರ "ಮಿಸ್ ಏಶಿಯ" ಆಗಿ ಆಯ್ಕೆಯಾದಳು.

"ಮಿಸ್ ಏಶಿಯ"ಳಾಗಿ ಆಯ್ಕೆಯಾದ ಝೀನತಳಿಗೆ ಸುದೈವ ಬೆನ್ನಟ್ಟಿ ಬಂತು. ಅವಳ ಪ್ರತಿಭೆಯನ್ನು ಗುರುತಿಸಿದ ಅವಳ ಕುಟುಂಬದ ಸನ್ಮಿತ್ರ ರಲ್ಹನ್ ತಮ್ಮ ಚಿತ್ರ "ಹಲ್ ಚಲ್"ದಲ್ಲಿ ಅವಳಿಗೆ ಅವಕಾಶ ನೀಡಿದರು. ನಂತರ "ಹಂಗಾಮಾ"ದಲ್ಲೂ ಅವಳಿಗೆ ಪಾತ್ರ ಸಿಕ್ಕಿತು. ಆದರೆ ಅವೆರಡೂ ಚಿತ್ರಗಳು ಸೋಲಪ್ಪಿದಿದರಿಂದ ಝೀನಿಗೆ ಅವಕಾಶವೇ ದೊರೆಯದೆಂಬ ಭಾವನೆ ಉಂಟಾಗಿತ್ತು. ಆದರೆ ಈ ಬೆಡುಗುಗಾತಿಗೆ "ಹರೇ ರಾಮ ಹರೇ ಕೃಷ್ಣ" ಚಿತ್ರದಲ್ಲಿ ನಟಿಸುವ ಸುಸಂಧಿ ದೊರೆತು, ರಾತ್ರಿ ಕಳೆದು, ಬೆಳಗಾಗುವ ಪರೊಳಗಾಗಿ ಅವಳಿಗೆ ಪ್ರಸಿದ್ಧಿ ದೊರೆಯಿತು. ಆನಂತರ ಹಲವಾರು ನಿರ್ಮಾಪಕರು ತಮ್ಮ ಚಿತ್ರಗಳಲ್ಲಿ ಅಭಿನಯಿಸುವಂತೆ ಅವಳ ಮನ ಒಲಿಸತೊಡಗಿದರು. ಅವಳು ನಟಿಸಿದ ಬಿ. ಆರ್. ಛೋಪ್ರಾರ "ಧುಂದ್" ನಝೀರ ಹುಸೇನರ "ಯಾದೋಂಕಿ ಬಾರಾತ್" ಎಫ್. ಸಿ. ಮೆಹ್ರಾರ "ಮನೋರಂಜನ," ಬ್ರಿಜ್‌ರವರ ಚೋರಿ ಮೇರಾ ಕಾಮ್" ಮನೋಜ ಕುಮಾರನ "ರೋಟಿ



"ಆಶಿಕ ಹೂಂ ಬಹಾರೋಂಕಾ" ಚಿತ್ರದ ಮೇಕಪ್ಪಿನಲ್ಲಿ ರೇಖಾ.

ಕಪಡಾ ಔರ್ ಮಕಾನ" ಮುಂತಾದ ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ವಿಕ್ರಮ ಸ್ಥಾಪಿಸುವದರೊಂದಿಗೆ ರೇಖಾಳಿಗೆ ಹೆಸರು ಹಾಗೂ ಕೀರ್ತಿಯನ್ನು ತಂದುಕೊಟ್ಟವೆ. ಇದೀಗ ಈ ಬೆಡಗಿನ ಹುಡುಗಿ ಹೇಮಳನ್ನು ಮೀರಿಸಬಲ್ಲ ಏಕಮೇವ ನಟಿಯಾಗಿ ದಿನದಿಂದ ದಿನಕ್ಕೆ ಪ್ರಸಿದ್ಧಿಯನ್ನು ಪಡೆಯುತ್ತಿದ್ದಾಳೆ. "ಹರೇ ರಾಮ ಹರೇ ಕೃಷ್ಣ"ದಲ್ಲಿನ ಅವಳ ಅಭಿನಯಕ್ಕಾಗಿ ಬಂಗಾಲದ ಪತ್ರಿಕೋದ್ಯೋಗಿಗಳ ಸಂಘವು "ಉತ್ತಮ ನಟಿ" ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಹಾಗೆಯೇ ಆ ಚಿತ್ರದ ಉತ್ತಮ "ಪೋಷಕ ನಟಿ" ಎಂದು ಫಿಲ್ಮಫೇರ್ ಪ್ರಶಸ್ತಿ ಅವಳಿಗೆ ಬಂದಿದೆ.

ರೇಖಾ ಇಂದು ಹಿಂದೀ ಚಿತ್ರರಂಗದ ಶ್ರೇಷ್ಠ ನಟರೊಂದಿಗೆ ನಟಿಸುವ ತಾರೆ. ಧರ್ಮೇಂದ್ರನೊಂದಿಗೆ "ಮಹಾ ಗುರು" "ಪಾಪಿ ದೇವತಾ" ಹಾಗು "ಧರ್ಮವೀರ" ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. "ರೋಟಿ ಕಪಡಾ ಔರ ಮಕಾನ"ದ ಯಶಸ್ಸಿನಿಂದಾಗಿ ರೇಖಾ ಸದ್ಯ ಮನೋಜನಿಗೆದುರಾಗಿ 'ದೇಶದ್ರೋಹಿ' ಹಾಗು ಭಾರತ ಇಂಟರ್‌ನ್ಯಾಶನಲ್ಸ್‌ರವರ ಮುಂದಿನೆ ಚಿತ್ರದಲ್ಲಿ ನಟಿಸುತ್ತಿದ್ದಾಳೆ. ರಾಜೇಶ ಖನ್ನನ ಜೊತೆಯಾಗಿ ಮುಖರ್ಜಿ ಸೋದರರ 'ಚೈಲಾಬಾಬು,' ಜೆ. ಓಂ.ಪ್ರಕಾಶರ 'ಆಶಿಕ್ ಹೂಂ .ಬಹಾರೋಂಕಾ, ಮದನ ಮೋಹ್ಲಾರವರ 'ಜಾನವರ' ಚಿತ್ರಗಳಲ್ಲಿ ಅಭಿನಯಿಸುತ್ತಿದ್ದಾಳೆ. ಹಾಗೆಯೇ ಶಶಿ ಮತ್ತು ಸುನೀಲರೊಂದಿಗೆ ನಟಿಸುತ್ತಿರುವ ರೇಖಾ ಈಗ ಭಾರೀ ಬೇಡಿಕೆಯ ನಟ ಅಮಿತಾಭನೊಂದಿಗೆ "ದಿ ಗ್ರೇಟ ಗ್ಯಾಂಬ್ಲರ್"ದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾಳೆ. 'ಕಾಲಾ ಬಾಜ್' 'ಡಾರ್ಲಿಂಗ್ ಡಾರ್ಲಿಂಗ್' ಮತ್ತು ಇದೀಗ ತೆರೆ ಕಂಡಿರುವ "ವಾರಂಟ" ಚಿತ್ರಗಳಲ್ಲಿ ದೇವನಿಗೆದುರಾಗಿ ಅಭಿನಯಿಸಿದ್ದಾಳೆ. ಸಂಜೀವ ಕುಮಾರನೊಂದಿಗೆ ನಟಿಸುವ ಅವಕಾಶವೂ ರಲ್ಲನ್‌ರ "ಪಾಪಿ" ಚಿತ್ರದಲ್ಲಿ ಅವಳಿಗೆ ಪ್ರಾಪ್ತವಾಗಿದೆ. ಮನಮೋಹನ ದೇಸಾಯಿ ಹಾಗು ದೇವರ ಹಾಗು ಎಂ. ಜಿ. ರಾಮಚಂದ್ರನ್ ಒಂದಿಯಲ್ಲಿ ನಿರ್ಮಿಸಲಿರುವ ಚಿತ್ರಗಳಲ್ಲಿ ನಟಿಸಲು ರೇಖಾ ಅಂಕಿತ ಹಾಕಿದ್ದಾಳೆ.

ರೇಖಾ ಸಚ್ಚಾರಿತ್ರ್ಯ ಮತ್ತು ಉತ್ತಮ ನಡತೆಯುಳ್ಳ ಹುಡುಗಿ. ಇತ್ತೀಚೆಗೆ ಅವಳು ಸಿ. ವಿ. ಕೆ. ಶಾಸ್ತ್ರಿಯವರ "ದಿ ಗ್ರೇಟ್ ಗ್ಯಾಂಬ್ಲರ್" ಚಿತ್ರದ ಹೊರಾಂಗಣ ಚಿತ್ರೀಕರಣಕ್ಕಾಗಿ ಸ್ವಿತ್ಸರ್ಲಂಡಿಗೆ ಹೋದಾಗ ಅಮಿತಾಭನೊಂದಿಗೆ ಇರಬೇಕಾಯಿತು. ಅವರೀರ್ವರ ಸ್ವಚ್ಛಂದ ಸ್ನೇಹವನ್ನು ಅಪಾರ್ಥ ಮಾಡಿಕೊಂಡವರು ಬಹಳ. ಅವರ ಈ ತಪ್ಪು ಗ್ರಹಿಕೆಯನ್ನು ಒಂದೇ ಮಾತಿನಲ್ಲಿ ರೇಖಾ ಹೋಗಲಾಡಿಸಿದಳು. "ನಾನು –ಅಮಿತಾಭ ಕೇವಲ ಸ್ನೇಹಿತರು ಮಾತ್ರ. ಮೇಲಾಗಿ ಅಮಿತಾಭನಿಗೆ ಸುಂದರ ಜೊತೆಗಾತಿ ಜಯಾ ಇದ್ದಾಳೆಂಬುದು ನೆನಪಿರಲಿ"

ರೇಖಾ ಹಚ್ಚಿಕೊಂಡರೆ ಅತ್ಯುತ್ತಮ ಸ್ನೇಹಿತೆ. ದೇವಆನಂದನೊಂದಿಗೆ ಅವಳಿಗಿರುವ, ಪರಿಶುದ್ಧ ಗೆಳೆತನವೇ ಅವಳನು ಇಷು ಪ್ರಸಿದ್ಧಿಗೇರಿಸಿದೆ. "ದೇವಸಾಬ ನನ್ನ ಉತ್ತಮ ಗೆಳೆಯ, ತತ್ವಜ್ಞಾನಿ, ಮಾರ್ಗದರ್ಶಿ ಏನೆಲ್ಲ" ಎನ್ನುವ ಆಕೆ ದೇವನನ್ನು ಹಿರಿಯ ಸ್ಥಾನಕ್ಕೇರಿಸಿರುವಳಲ್ಲದೆ ಅವನ ಮಾರ್ಗದರ್ಶನದಲ್ಲೇ ಮುನ್ನಡೆದಿದ್ದಾಳೆ. ಈ ಹಿಂದೆ "ಆಜಕೀ ರಾಧಾ"ದಲ್ಲಿ ಅವಳು ನಟಿಸಲೊಪ್ಪಿದಾಗ ದೇವಆನಂದ ಬೇಡ ಎಂದು ಸಲಹೆ ನೀಡಿದ. ತತ್‌ಕ್ಷಣ ಆಕೆ ಹಿಂದೆ ಸರಿದಳು. ನಂತರ ರೆಹನಾ ಆ ಪಾತ್ರಕ್ಕೆ ಆಯ್ಕೆಯಾದಳು. ಹಾಗೆಯೇ "ರಿಕ್ಷಾವಾಲಾ"ದಲ್ಲಿ ನಟಿಸಲೊಪ್ಪಿ, ಆ ಪಾತ್ರ ಸರಿ ಬರದ್ದರಿಂದ. ಹಣವನ್ನು ನಿರ್ಮಾಪಕರಿಗೆ ಮರಳಿಸುತ್ತ ಅಭಿನಯಿಸಲು ಸಾಧ್ಯವಾಗದ್ದಕ್ಕೆ ವಿಷಾದಿಸಿದಳು. ಫಿರೋಜನ "ಧರ್ಮಾತ್ಮಾ"ದಲ್ಲಿ ರೇಖಾ ನಿರ್ವಹಿಸಿದ ಪಾತ್ರಕ್ಕೆ ಮೊದಲು ಆಯ್ಕೆಯಾದವಳು ರೀನತ್; ಆದರೆ ತನಗಿಷ್ಟವಿರದ ಪಾತ್ರವದೆಂದು ನಿರಾಕರಿಸಿದಳು. ಅದರಂತೆಯೇ ಝಮೀರ, ಕರಮ್ ಮತ್ತು ಮುಕ್ತಿ ಚಿತ್ರಗಳಲ್ಲಿ ನಟಿಸಲು ನಿರಾಕರಿಸಿದಳು. ಹಾಗೆಂದ ಮಾತ್ರಕ್ಕೆ ಅವಳಿಗೆ ಗರ್ವ ಬಂದಿದೆ ಎಂತಲ್ಲ. ತನ್ನ ಸ್ವಭಾವಕ್ಕೆ ಒಗ್ಗದ ಪಾತ್ರಗಳನ್ನು ಒತ್ತಾಯದಿಂದ ನಿರ್ವಹಿಸಿ ತನ್ನ ಹೆಸರನ್ನು ಕೆಡಿಸಿಕೊಳ್ಳುವ ಇಚ್ಛೆ ಅವಳಿಗಿಲ್ಲ. ಅವಳ ಈ ಉತ್ತಮ ಗುಣ ದೇವನಿಗೆ ತುಂಬ ಮೆಚ್ಚುಗೆಯಾಗಿದೆ. ಈಗಲೂ ದೇವ ಪ್ರತಿ ದಿನ ಜುಹೂದ ರೀನತಳ ನಿವಾಸದೆದುರು ಕಾರು ನಿಲ್ಲಿಸಿ "ಹಲೋ" ಹೇಳಿ ಹೋಗುತ್ತಾನೆ. ಇತ್ತೀಚೆ ರೇಖಾ ದೇವನ ಹತ್ತಿರಕ್ಕೆ ಬರುತ್ತಿದ್ದಾಳೆಂಬ ವದಂತಿ ಹರಡಿ, ಅದರಿಂದ ರೀನತ್ ಆಘಾತಕ್ಕೊಳಗಾಗುತ್ತಿದ್ದಾಳೆಂದು ಭಾವಿಸಿದವರೆಷ್ಟೋ ಜನ. ಆದರೆ ತೆರೆದ ಮನದ ರೀನತ್ "ರೇಖಾ ತುಂಬುಗಂಗಳ ಹುಡುಗಿ. ದೇವಸಾಬ್ ಸ್ವಚ್ಛ ಮನದ ಹಿರಿಯ ನಟ. ಅವರ ಸ್ನೇಹ ಅವರಿಗೆ. ಅವರಿವರ ಕುಹಕ ಮಾತೇಕೆ?" ಎನ್ನುತ್ತಾಳೆ.

ರೀನತ್ ಹಾಗು ದೇವ ಜೋಡಿಯನ್ನು ಎಲ್ಲರೂ ಮೆಚ್ಚುತ್ತಾರಾದರೂ ದುರ್ದೈವವಶಾತ್ ಅವರು ನಟಿಸಿದ ಯಾವ ಚಿತ್ರಗಳೂ ಯಶಸ್ಸು ಪಡೆದಿಲ್ಲ. ಈಚೆಗೆ ಬಿಡುಗಡೆಯಾದ ಇವರಿಬ್ಬರ ಅಭಿನಯದ "ವಾರಂಟ" ಯಶಸ್ಸು ಗಳಿಸಬಹುದೆಂದಾಕೆ ನಿರೀಕ್ಷಿಸಿದ್ದಾಳೆ. ಈ ಹಿಂದೆ ನವಕೇತನ್‌ರವರ "ಹೀರಾಪನ್ನಾ"ದಲ್ಲಿ ಅವರು ನಟಿಸಿದ್ದರು. ಅದು ನಿರೀಕ್ಷಿಸಿದಂತೆ ಯಶಸ್ಸು ಗಳಿಸಲ್ಲಿಲ್ಲ. ಹಾಗೆಯೇ ದೇವ ಭಾರೀ ವೆಚ್ಚದಿಂದ ನಿರ್ಮಿಸಿದ "ಇಶ್ಕ್ ಇಶ್ಕ್ ಇಶ್ಕ್"ದಲ್ಲಿ ರೀನಿ ನಟಿಸಿದ್ದರೂ ಅದೂ ಸಹ ಭಾರೀ ಸೋಲನ್ನಪ್ಪಿ ದೇವ ಅಪಾರ ಹಾನಿಯನ್ನನುಭವಿಸಿದ. ಅಂತೆಯೇ ರೀನತ್ ತನ್ನ ಗೌರವಧನವನ್ನು ಸ್ವೀಕರಿಸಲಿಲ್ಲ. ಇದು ದೇವನ ಬಗೆಗೆ ಅವಳಿಗಿರುವ ಅಭಿಮಾನದ ದ್ಯೋತಕ.


ಹಿಂದೀ ಚಿತ್ರರಂಗದ
ಖ್ಯಾತ ತಾರೆ
—ಝೀನತ್ ಅಮಾನ್
BHARAT PHOTO OFFSET WORKS, DHARWAR-1

ದೇವ–ಹೇಮ ಜತೆಯಾಗಿ ನಟಿಸಿದ ಚಿತ್ರಗಳು ಅಪಾರ ಜನಪ್ರಿಯತೆ ಪಡೆಯುತ್ತಿರುವುದಕ್ಕೆ ರಿಖೀನತಳಿಗೆ 'ಹೆಮ್ಮೆ'. 'ಜಾನಿ ಮೇರಾನಾಮ' ಮತ್ತು 'ಅಮಿೂರ ಗರೀಬ' ಚಿತ್ರದಲ್ಲಿರುವ ಈ ಜೋಡಿಯಿಂದಾಗಿ ಅವೆರಡೂ ಚಿತ್ರಗಳು ಹೊಸ ವಿಕ್ರಮವನ್ನೇ ಸ್ಥಾಪಿಸಿದವೆಂದು ರಿಖೀನತ್ ಅಭಿಮಾನದಿಂದ ಹೇಳಿಕೊಳ್ಳುತ್ತಾಳೆ.

ಇತ್ತೀಚಿ ದೇವ ರಿಖೀನಿಯರ ನಡುವೆ ವೈಮನಸ್ಸುಂಟಾಗಿದೆಂಬ ವದಂತಿ ಹಬ್ಬಿತ್ತು. ಈ ವದಂತಿಗೆ ಕಾರಣವೂ ಇತ್ತೆನ್ನಿ. ದೇವಆನಂದನೇ ನಿರ್ಮಿಸಲಿರುವ "ಜಾನೇಮನ್" ಚಿತ್ರದಲ್ಲಿ ರಿಖೀನತಳ ಬದಲಾಗಿ ಹೇಮಳನ್ನು ಆಯ್ಕೆಮಾಡಿಕೊಂಡ. ಇನ್ನು ರಿಖೀನಿಗೆ ದೇವ ಗುಂಪಿನಿಂದ ಅರ್ಧಚಂದ್ರ ಪ್ರಯೋಗವಾಯಿತೆಂದೂ ಈ ಹಿಂದೆ ಸುರಯ್ಯಾ, ವಹೀದಾ, ನೂತನರಿಗೆ ಒದಗಿದ ಗತಿಯೇ ರಿಖೀನಿಗೆ ಒದಗಲಿದೆಯೆಂಬ ಗಾಳಿ ಸುದ್ದಿಯೂ ಹಬ್ಬಿತು. ಆದರೆ ಮುಕ್ತ ಮನದ ಪರಿಶುದ್ಧ ಹೃದಯದ ರಿಖೀನತ್ ಈ ಸುದ್ದಿಗೆ ಬೆಲೆ ನೀಡದೆ ಅದನ್ನು ಅವರ ಪಾಡಿಗೆ ಬಿಟ್ಟು, "ಈ ಚಿತ್ರದಿಂದಲಾದರೂ ದೇವ ತನ್ನ ಹಿಂದಿನ ನಷ್ಟವನ್ನುತುಂಬಿಕೊಳ್ಳಲಿ" ಎಂದು ದೇವರನ್ನು ಪ್ರಾರ್ಥಿಸುತ್ತಿದ್ದಾಳೆ.

ರಿಖೀನತಳದು ಕೇವಲ ಅಬ್ಬರದ ಅಭಿನಯವಲ್ಲ. ಅವಳನ್ನು ಬಲ್ಲವರು ಅವಳೊಬ್ಬ ಶ್ರೇಷ್ಠ ನಟಿ, ಸುಪ್ರಸಿದ್ಧ ನೃತ್ಯಗಾತಿ ಎಂದು ಒಪ್ಪುತ್ತಾರೆ. ಭಾರತೀಯ ಮತ್ತು ಪಾಶ್ಚಿಮಾತ್ಯ ನೃತ್ಯಗಳೆರಡರಲ್ಲೂ ಪರಿಣತಿ ಪಡೆದ ಏಕಮೇವ ತಾರೆ ಎಂದರೆ ರಿಖೀನತ್ ಅಮಾನ ಒಬ್ಬಳೇ! ಹಿಂದೀ ಚಿತ್ರರಂಗದ ಪ್ರಥಮ ಸ್ಥಾನದಲ್ಲಿರುವ ಹೇಮಮಾಲಿನಿಯೊಂದಿಗೆ ಸ್ಪರ್ಧಿಸಬಲ್ಲ ಸಾಮರ್ಥ್ಯ ರಿಖೀನತಳಿಗಿದೆ. "ಅವಳ ಕೆಲವು ಫ್ಯಾನುಗಳು ರಿಖೀನತ್ ಹೇಮಳಿಗಿಂತ ಎತ್ತರ ಸ್ಥಾನದಲ್ಲಿದ್ದಾಳೆ" ಎಂದು ವಾದಿಸುತ್ತಾರೆ. ಆದರೆ ರಿಖೀನತ್ ಮಾತ್ರ "ಹೇಮಾಮಾಲಿನಿ, ಹಿರಿಯ ಹಾಗು ಅನುಭವಿ ನಟಿ. ನಾನು ಅವಳಿಂದ ಕಲಿಯಬೇಕಾದುದು ಬಹಳವಿದೆ"ಎಂದು ಅತ್ಯಂತ ವಿನೀತಭಾವದಿಂದ ನುಡಿಯುತ್ತಾಳೆ. ಹಲವರು ರಿಖೀನತ್‌ಳನ್ನು "ವೈಜಯಂತಿಯ ಸ್ಥಾನವನ್ನು ತುಂಬಿ ಕೊಟ್ಟ ನಟಿ" ಎಂದು ಹೊಗಳುತ್ತಾರೆ. ಆದರೆ ರಿಖೀನತ್ ಇವರೆಲ್ಲರ ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ, ಮುನ್ನಡೆಯುತ್ತಿದ್ದಾಳೆ. ಇಂಥ ಔದಾರ್ಯ, ಅದೆಷ್ಟು ಜನ ನಟಿಯರಿಗಿದೆ?

ರಿಖೀನತ್,ಯಾವಾಗಲೂ ಅಂದದ ಉಡುಪನ್ನು ಧರಿಸುತ್ತಾಳೆ. ಪಾರ್ಟಿಗಳಲ್ಲಿ ನಗುನಗುತ್ತ ಬೆಡಗಿನಿಂದ ಓಡಾಡುತ್ತಾಳೆ. ಅಕ್ಕರೆಯ ಮಾತುಗಳಿಂದ ಸ್ನೇಹಿತರಲ್ಲದವರನ್ನೂ ಸ್ನೇಹಿತರನ್ನಾಗಿಸಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾಳೆ. ಅಂತೆಯೇ ಅವಳಿಲ್ಲದ ಪಾರ್ಟಿಗಳು ತೀರ ಸಪ್ಪೆಯಾಗಿರುತ್ತವೆಂಬುದು ಎಲ್ಲರ ಅನುಭವ.

ರಿಖೀನತ್ ಶಿಸ್ತಿಗೆ ಹೆಸರಾದವಳು. ಅವಳ ಈ ಶಿಸ್ತಿನ ನಡತೆಗೆ ಪರೋಕ್ಷವಾಗಿ ಆಕೆಯ ತಾಯಿಯೇ ಕಾರಣ. ತಾಯಿಯೇ ದೇವರು; ಮಾರ್ಗದರ್ಶಿ ಗುರು ಎಂಬ ಪೂಜ್ಯ ಭಾವನೆ ಹೊತ್ತಿರುವ ರಿಖೀನಿ ತಾಯಿಯ ಅಪ್ಪಣೆಯಂತೆಯೇ ತನ್ನೆಲ್ಲ ಕಾರ್ಯಗಳನ್ನು ಪ್ರಾರಂಭಿಸುತ್ತಾಳೆ. ಆ ತಾಯಿಗೆ ಈ ಮುಗ್ಧೆ ತುಂಬ ಅಚ್ಚುಮೆಚ್ಚು. ಮನೆಯಲ್ಲಿ "ಬಾಬೂಶಾ" ಎಂದೇ ತುಂಬ ಮುದ್ದಿನಿಂದ ಕರೆಯುತ್ತಾರೆ. ಈ ತಾಯಿ ತಮ್ಮ ಮುದ್ದುಗುವರಿಯ ಮದುವೆಯ ವಿಚಾರವೂ ಅವರಿಗಿದೆ. ಆದರೆ ರಿಖೀನತ್ ಮಾತ್ರ ಮದುವೆಯನ್ನು ನಿರಾಕರಿಸುತ್ತ "ನಾನು ಅಭಿನಯವನ್ನು ಮದುವೆಯಾಗಿದ್ದೇನೆ" ಎಂದು ವೇದಾಂತಿಯಂತೆ ಮಾತಾಡುತ್ತಾಳೆ. ಅವಳ ಈ ವೇದಾಂತವನ್ನು ನಗುತ್ತ ಪ್ರಶಂಸಿಸಿದ ರಾಜಕಪೂರ "ರಿಖೀನತ್‌ಳ ಕಲಾಪ್ರೇಮ ಎಲ್ಲರೂ ಶ್ಲಾಘಿಸುವಂಥದು" ಎಂದು ನುಡಿಯುತ್ತಾರೆ. ರಿಖೀನತ್ ನಟಿಸುತ್ತಿರುವ "ವಕೀಲ ಬಾಬು" ಚಿತ್ರದಲ್ಲಿ ರಾಜಕಪೂರನೂ ನಟಿಸುತ್ತಿದ್ದಾನೆ.

ರಿಖೀನತ್ ಬಹು ಚಟುವಟಿಕೆಯ ಹುಡುಗಿ. ಪ್ರತಿ ದಿನ ಅಂಗಸಾಧನೆಯನ್ನು ತಪ್ಪದೆ ಮಾಡುತ್ತಾಳೆ. ದೇಹದ ಹಿತದೃಷ್ಟಿಯಿಂದ ಈಜುವದನ್ನು ರೂಢಿಸಿಕೊಂಡಿದ್ದಾಳೆ. ಆಲಸ್ಯವೆಂದರೆ ಅವಳಿಗಾಗದು. ಬಿಡುವಿನ ಸಮಯವನ್ನು ವ್ಯರ್ಥ ಕಳೆಯದೆ ಉತ್ತಮ ಕಾದಂಬರಿಗಳ ಪಠಣಕ್ಕೆ ಮೀಸಲಾಗಿಡುತ್ತಾಳೆ. ರಾಮಾಯಣ ಮಹಾಭಾರತಗಳಂಥ ಮಹಾನ್ ಗ್ರಂಥಗಳನ್ನು ಪ್ರತಿ ದಿನ ಓದಿ ತಿಳಿದುಕೊಳ್ಳುವಷ್ಟು ಧಾರ್ಮಿಕ ಮನೋಭಾವದವಳು ರಿಖೀನತ. ಹಾಗೆ ನೋಡಿದರೆ ರಿಖೀನತ್ ಅತ್ಯಂತ ಆಧುನಿಕತೆಗೆ ಮಾರುಹೋದ ಬೆಡಗಿನ ಯುವತಿಯಂತೆ ಕಾಣುತ್ತಾಳಾದರೂ ಆಕೆ ಕಟ್ಟಾ ಆಸ್ತಿಕಳು. ಬಾಲಾಜಿಯ (ವೆಂಕಟರಮಣನ)ಪರಮ ಭಕ್ತಳು. ಚಿತ್ರೀಕರಣದಲ್ಲಿ ಭಾಗವಹಿಸಲು ಮನೆಯಿಂದ ಹೊರಡುವ ಮುನ್ನ ಬಾಲಾಜಿಯ ಪಟಕ್ಕೆ ನಮಸ್ಕರಿಸಿ, ತೀರ್ಥ ಸ್ವೀಕರಿಸಿಯೇ ಹೋಗುತ್ತಾಳೆ. ಇಂತಹ ಸದ್ಗುಣಗಳನ್ನು ಹೊಂದಿರುವ ರಿಖೀನತ್‌ಳಿಗೆ ಮತ್ತೊಂದು ಉತ್ತಮ ಗುಣವೂ ಇದೆ. ಪ್ರತಿ ವರ್ಷ ಈಕೆ ಅನಾಥಾಶ್ರಮಗಳಿಗೆ ಹಣ ನೀಡುತ್ತಾಳೆ. ಸುದೈವಿ ನಟಿಯಾಗಿರುವ ರಿಖೀನತ್ ನವ್ಹೆಂಬರ್ ೧೯ರಂದು ಅಂದರೆ ನಮ್ಮ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಜೀಯವರ ಜನ್ಮ ದಿನದಂದೇ ಜನಿಸಿದ್ದಾಳೆ.

ರಿಖೀನತ್ ನಟಿ ಎಂದು ತಿಳಿದವರು ಅವಳ ಒಂದು ಮುಖವನ್ನಷ್ಟೇ ಕಂಡಿರುತ್ತಾರೆ. ಅವಳ ಅತಿಥಿಯಾಗಿ ಮನೆಗೆ ಹೋದವರು ರಿಖೀನತ್‌ಳ ಆತಿಥ್ಯ ಸ್ವೀಕರಿಸುವದರ ಜೊತೆಗೆ ಅವಳ ಸ್ನೇಹಮಯ ವ್ಯಕ್ತಿತ್ವ, ತನ್ನಭಿಮಾನಿಗಳ ಬಗೆಗಿರುವ ವಾತ್ಸಲ್ಯ, ಮಮತೆ ಕಂಡು ಮೂಕರಾಗಿ ಬರುತ್ತಾರೆ. ರಿಖೀನತ್‌ಳನ್ನು ಭೇಟಿಯಾದವರು ಎಂದೂ ಅವಳನ್ನು ಮರೆಯಲಾರರು. ಅವರಿಗರಿವಿಲ್ಲದಂತೆಯೇ ರಿಖೀನತ್‌ಳ ಬಗೆಗೆ ಒಂದು ಬಗೆಯ ಗೌರವ ಆದರ ಭಾವನೆಯು ಮನದಲ್ಲಿ ಮೂಡಿಬಿಡುತ್ತದೆ.

★

ರಿಖೀನತ್‌ಳ ವಿಳಾಸ:

ಕು. ರಿಖೀನತ್ ಅಮಾನ್,
೮೩, "ಶೇರಮನ್"
ನಾರಾಯಣ ಧಾಬೋಲಕರ ರೋಡ್
(ನೇಪಿಯನ್ ಸೀ ರೋಡ)
ಮುಂಬಯಿ–೪೦೦೦೦೬



ಸ್ವಿಟ್ಸರ್ಲಂಡದ ಹೊರಾಂಗಣ ದೃಶ್ಯದಲ್ಲಿ ರಾಜೇಶ ಖನ್ನಾ-ರಿಖೀನತ್ ಅಮಾನ್.
ಚಿತ್ರ: "ಅಜಿಕ ಹೂಂ ಬಹಾರೋಂಕಾ"



"ಯಾರು ಹಿತವರು" ಚಿತ್ರದ ಭಾವಪೂರ್ಣ ಸನ್ನಿವೇಶದಲ್ಲಿ ಜಯಮಾಲಾ — ವಿಜಯಕಲಾ

ಅದೃಷ್ಟಬಲದಿಂದ ಅಭಿನಯ ರಂಗಕ್ಕೆ ಬಂದ ಸುದೈವಿ

ತಾರೆ ಜಯಮಾಲಾ

(ವಿಶೇಷ ಪ್ರತಿನಿಧಿಯಿಂದ)

ಅರ್ಹತೆ, ಅವಕಾಶ ಹಾಗೂ ಅದೃಷ್ಟ ಇವು ಯಾವುದೇ ರಂಗದ ಯಶಸ್ಸಿನ ಸೋಪಾನಗಳು. ಆದರೆ ಅನೇಕರ ಬಾಳಿನಲ್ಲಿ ಒಂದಿದ್ದರೆ ಇನ್ನೊಂದರ ಅಭಾವ. ಹೀಗಾಗಿ ಕೀರ್ತಿಶಿಖರದ ಮೆಟ್ಟಲೇರಿದರೂ ತುದಿ ಮುಟ್ಟದವರು ಅನೇಕ.

ಅರ್ಹತೆಯ ಪ್ರದರ್ಶನಕ್ಕೆ ಅವಕಾಶ ಸಿಗುವ ಮೊದಲೇ ಅದೃಷ್ಟವೊಂದರ ಬಲದಿಂದಲೇ ಯಶಸ್ಸಿನ ಏಣಿಯ ತುಟ್ಟತುದಿ ಏರಿದಾಕೆ ತಾರೆ ಜಯಮಾಲಾ.

ಜಯಮಾಲಾ ತುಳುವಿನಿಂದ ಕನ್ನಡ ಚಿತ್ರರಂಗಕ್ಕೆ ಬಂದುದೊಂದು ಶುಭಗಳಿಗೆ. ಅವಳ ಮೊದಲ ಚಿತ್ರವೇ (ದಾರಿ ತಪ್ಪಿದ ಮಗ) ರಜತ ಮಹೋತ್ಸವ ಆಚರಿಸಿತು. ಆ ಚಿತ್ರದ ನಾಲ್ವರು ನಾಯಕಿಯರಲ್ಲಿ ಅವಳೂ ಒಬ್ಬಳಾದರೂ ಉಳಿದವರಿಗಿಂತ ಜಯಮಾಲಾ ಬಹುಬೇಗ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾಳೆ.

ಕನ್ನಡಕ್ಕೆ ಲೀಲಾವತಿ, ಕಲ್ಪನಾ ಅವರಂಥ ಪ್ರತಿಭಾವಂತ ಕಲಾವಿದೆಯರನ್ನು ನೀಡಿದ ಮಂಗಳೂರೇ ಜಯಮಾಲಾಳ ಜನ್ಮಸ್ಥಳ. ಆದರೆ ಅವಳ ವಿದ್ಯಾಭ್ಯಾಸ ರಂಗತಾ[illegible] ನಿಸರ್ಗ ಮತ್ತು ಚಿಕ್ಕಮಗಳೂರಲ್ಲಿ.

ಅವಳ ತಂದೆ ಜಿ. [illegible] ಮಂಗಳೂರಿನ ಪ್ರಖ್ಯಾತ ಯಕ್ಷಗಾನ ಕಲಾವಿದ. ಅವಳ ಅಕ್ಕ ರತ್ನಮಾಲಾ ರಂಗಭೂಮಿಯ ಕಲಾವಿದೆ, ಜೊತೆಗೆ ನೃತ್ಯದಲ್ಲೂ ಹೆಸರುವಾಸಿ. ಮನೆಯಲ್ಲಿ ಅಕ್ಕನೇ ಜಯಮಾಲಾಳಿಗೆ "ಡ್ಯಾನ್ಸ ಮೇಷ್ಟ್ರು"; ಕಲಾ ಗುರು. ಒಮ್ಮೆ ಅಕ್ಕ ಅಭಿನಯಿಸಿದ ತುಳು ನಾಟಕವೊಂದನ್ನು ನೋಡಲು ಜಯಮಾಲಾ ಹೋಗಿದ್ದಳು. ಆ ನಾಟಕ ವೀಕ್ಷಿಸಲು ತುಳು ಹವ್ಯಾಸಿ ಕಲಾವಿದ ಆನಂದಶೇಖರರೂ ಬಂದಿದ್ದರು.

ಆಗ ಆನಂದಶೇಖರ ತುಳು ಚಿತ್ರವೊಂದನ್ನು ತಯಾರಿಸುವ ಹವಣಿಕೆಯಲ್ಲಿದ್ದರು. ಅವರು ನಾಯಕಿಯ ಪಾತ್ರಕ್ಕೆ ಚೂಟಿಯಾದ ಹುಡುಗಿಯೊಬ್ಬಳನ್ನು ಹುಡುಕುತ್ತಿದ್ದರು. ಅಕ್ಕನ ಜೊತೆ ಬಂದಿದ್ದ ಜಯಮಾಲಾಳ ಚೆಲುವು, ಅಂದವಾದ ಅಂಗಸೌಷ್ಠವ, ಹಾಗೂ ಮಾತಿನ ಧಾಟಿಯನ್ನು ಕಂಡು ಮೆಚ್ಚಿದ ಆನಂದಶೇಖರ "ನೀನು ನನ್ನ ಚಿತ್ರದಲ್ಲಿ ಅಭಿನಯಿಸುತ್ತೀಯಾ?" ಎಂದು ನೇರವಾಗಿ ಪ್ರಶ್ನಿಸಿದರು.

ಜಯಮಾಲಾಳಿಗೆ ಒಂದೆಡೆ ಹರುಷ, ಇನ್ನೊಂದೆಡೆ ಅಚ್ಚರಿ.

"ಒಂದು ಕ್ಷಣ ನನ್ನ ಮೈ ಕಂಪಿಸಿತು. ಇದೇನೂ ಕನಸಲ್ಲವಲ್ಲ ಎಂದು ಕಣ್ಣು ತಿಕ್ಕಿಕೊಂಡೆ" ಎಂದು ಜಯಮಾಲಾ ಹೇಳಿದಳು.

"ಕಾಸದಾಯೆ ಕಂಡನೆ" (ಹಣವಿದ್ದವನೇ ಗಂಡ) ಜಯಮಾಲಾಳ ಮೊದಲ ಚಿತ್ರ. ನರತಂ ಕೆ. ಎಸ್. ಟೈಲರ್ ಜೊತೆ ಅವರೇ ತಯಾರಿಸಿದ "ಯಾನ್ ಸನ್ಯಾಸಿ ಆಪೆ" (ನಾನು ಸನ್ಯಾಸಿ ಆಗುವೆ) ಚಿತ್ರದಲ್ಲಿ ಆಕೆ ಅಭಿನಯಿಸಿದಳು. ಇವೆರಡೂ ಚಿತ್ರಗಳ ನಿರ್ದೇಶಕರಾದ ಗೀತಪ್ರಿಯ ಜಯಮಾಲಾಳಿಗೆ ಸಾಕಷ್ಟು ಧೈರ್ಯ ನೀಡಿ, ತಪ್ಪಿದ್ದರೆ ತಿದ್ದಿ, ತಿದ್ದಿಕೊಳ್ಳಲು ಸಾಕಷ್ಟು ಅವಕಾಶ ನೀಡಿ ಅವಳೊಬ್ಬ ಉತ್ತಮ ಕಲಾವಿದೆಯಾಗುವಂತೆ ಸಾಕಷ್ಟು ಶ್ರಮವಹಿಸಿದರು.

"ಕ್ಯಾಮರಾವನ್ನು ಹೇಗೆ ಧೈರ್ಯವಾಗಿ ಎದುರಿಸಬೇಕು. ಅಭಿನಯದ ಮುಖ್ಯ ಲಕ್ಷಣಗಳು ಯಾವವು? ನಟಿಯು ಗಮನಿಸಬೇಕಾದ ಮುಖ್ಯ ಅಂಶಗಳು ಯಾವವು? ಎಂಬಿವೇ ಅಂಶಗಳನ್ನು ಗೀತಪ್ರಿಯ ಚೆನ್ನಾಗಿ ತಿಳಿಹೇಳಿದರು. ಸ್ವತಃ ಖ್ಯಾತ ನಟರಾಗಿರುವ ಕೆ. ಎಸ್. ಟೈಲರ್ ಅವರ ಮಾರ್ಗದರ್ಶನವನ್ನೂ ನಾನು ಮರೆಯಲಾರೆ" ಎಂದು ಜಯಮಾಲಾ ಕೃತಜ್ಞತಾಪೂರ್ವಕ ಹೇಳಿದಳು. ೧೯೭೦ರಲ್ಲಿ ಆಕೆಗೆ "ನವಭಾರತ ತುಳು ಕೂಟ"ದ "ಅತ್ಯುತ್ತಮ ಸಹಾಯಕ ನಟಿ" ಪ್ರಶಸ್ತಿ ಸಿಕ್ಕಿತು. ನಂತರ "ಏರ್ ಮಲ್ತಿನ ತಪ್ಪು?" (ಯಾರು ಮಾಡಿದ ತಪ್ಪು) ಹಾಗೂ "ಬಯ್ಯ ಮಲ್ಲಿಗೆ" (ಸಂಜೆ ಮಲ್ಲಿಗೆ) ಚಿತ್ರಗಳಲ್ಲಿ ಆಕೆ ನಾಯಕಿಯಾಗಿ ಅಭಿನಯಿಸಿದಳು.

ನಾಟಕವೊಂದು ಜಯಮಾಲಾಳನ್ನು ಚಿತ್ರರಂಗಕ್ಕೆ ಕರೆ ತಂದಿತಾದರೆ ಅವಳನ್ನು ಕನ್ನಡ ಚಿತ್ರರಂಗಕ್ಕೆ ಎಳೆತಂದುದೂ ಒಂದು ನಾಟಕವೇ. ಮಂಗಳೂರಿನಲ್ಲಿ "ನಾವಿಲ್ಲದಾಗ" ಎಂಬ ನಾಟಕದಲ್ಲಿನ ಅವಳ ಅಭಿನಯವನ್ನು ಕಂಡು ಮೆಚ್ಚಿದ ನಿರ್ಮಾಪಕ ಮುನೀಶ್ "ಯಾರು ಹಿತವರು" ಚಿತ್ರದಲ್ಲಿ ಆಕೆಗೆ ಪ್ರಮುಖ ಪಾತ್ರವೊಂದನ್ನು ನೀಡಿದರು. ಅದೇ ಕಾಲಕ್ಕೆ "ಬೂತಯ್ಯನ ಮಗ ಅಯ್ಯು" ಚಿತ್ರದಲ್ಲಿ ಮಲೆನಾಡಿನ ಒಬ್ಬ ಹೆಣ್ಣಾಗಿ ಆಕೆ ಅಭಿನಯಿಸಿದಳು.

"ಬೂತಯ್ಯನ ಮಗ ಅಯ್ಯು" ಶತದಿನೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದ ರಾಜಕುಮಾರ ಅವರು ಜಯಮಾಲಾಳಲ್ಲಿದ್ದ ಪ್ರತಿಭೆಯನ್ನು ಗುರುತಿಸಿದರು. ಇದರ ಫಲವಾಗಿ "ದಾರಿ ತಪ್ಪಿದ ಮಗ" ಚಿತ್ರದಲ್ಲಿ ಅವಳಿಗೆ ಅವಕಾಶ ಸಿಕ್ಕಿತು.

ಈಗವಳು ಜಯದೇವಿ ಫಿಲ್ಮ್ಸ್‌ನ "ಪ್ರೇಮದ ಕಾಣಿಕೆ", ಪೂರ್ಣಿಮಾ ಎಂಟರ ಪ್ರೈಸಸ್‌ರವರ "ತ್ರಿಮೂರ್ತಿ" ಮತ್ತು ಸಿ. ಎಸ್. ಆರ್. ಶ್ರೀಶಕ್ತಿ ಪ್ರೊಡಕ್ಷನ್ಸ್ ಅವರ ಚೊಚ್ಚಲು ವರ್ಣ ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸುತ್ತಿದ್ದಾಳೆ. ಈ ಮೂರೂ ಚಿತ್ರಗಳಲ್ಲಿ ರಾಜಕುಮಾರ ನಾಯಕ.

ಹತ್ತೊಂಬತ್ತರ ಹರೆಯದ ಜಯಮಾಲಾ ಮಾತನಾಡುವುದು ತುಂಬ ಅಪರೂಪ. ಕಣ್ಣಲ್ಲಿ ಮಿಂಚು, ಮೊಗದಲ್ಲಿ ನಗೆ, ಪಾದರಸದ ನಡಿಗೆ ಕೆಲಸದ ಮಾತು ಬಂದಾಗ ಊಟ-ನೀರಡಿಕೆಗಳನ್ನೂ ಮರೆತ ದಷ್ಟಾಂತಗಳುಂಟು.

ಲೈಂಗಿಕ ಪ್ರದರ್ಶನ, ಚುಂಬನ ಇವೇ ಮೊದಲಾದ ವಿಷಯಗಳ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ಚರ್ಚೆ ನಡೆಯುತ್ತಿದೆಯೆಂದು ಜಯಮಾಲಾ ವಿಷಾದದಿಂದ ಹೇಳುತ್ತಾಳೆ. ಅವು ಅಷ್ಟೊಂದು ಮಹತ್ವ ಕೊಡಬೇಕಾದ ವಿಷಯಗಳಲ್ಲ ಎಂಬುದು ಅವಳ ಅನಿಸಿಕೆ. ಕನ್ನಡದಲ್ಲಿ ದೊಡ್ಡ ತಾರೆ ಆಗಬೇಕು ಎಂಬ ಬಹು ದೊಡ್ಡ ಆಶೆ ಅವಳದು.

"ದೊಡ್ಡದನ್ನು ಸಾಧಿಸಬೇಕೆನ್ನುವವರು ಸಣ್ಣ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು" — ಇದು ಅವಳ ಸಿದ್ಧಾಂತ.

ಎಳೆತನದ ಕನಸನ್ನು ನನಸಾಗಿ ಮಾಡಿಕೊಂಡ ವಿಕ್ರಮ

ಶಂಕರ ಪಾಟೀಲ

ಸುಮಾರು ಹದಿನೆಂಟು ವರುಷಗಳ ಹಿಂದಿನ ಮಾತು. ನಾಗಿನ್ ಚಿತ್ರವನ್ನು ನೋಡಿ ಬಂದ ಎಂಟು ವರುಷಗಳ ಬಾಲಕನೊಬ್ಬನಿಗೆ ಏನೋ ಒಂದು ಬಗೆಯ ಹುಮ್ಮಸ್ಸು; ಒಂದು ಬಗೆಯ ಹುಚ್ಚೆಂದರೂ ಸರಿ. ಅವನು ಎಷ್ಟೋ ದಿನಗಳ ವರೆಗೆ ಅಂಥದೊಂದು ಗುಂಗಿನಲ್ಲಿ ಇರುತ್ತಿದ್ದನು. ತನಗೇನಾಗಿದೆಯೆಂಬುದು ಅವನಿಗೆ ಆಗ ಗೊತ್ತಾಗಲಿಲ್ಲ. ಅದೇಕೆ ಮುಂದೆ ಎಷ್ಟೋ ದಿನಗಳ ವರೆಗೆ ಈ ಗುಂಗು ಅವನಲ್ಲಿ ಹುದುಗಿ ಕುಳಿತುಬಿಟ್ಟಿತು. ಅದು ಮತ್ತೆ ಸ್ಫುಟವಾದುದು ಆ ಬಾಲಕ ಬೆಳೆದು ಯುವಕನಾಗಿ ಕಾಲೇಜ್ ಸೇರಿದಾಗ. ವಿಜ್ಞಾನದ ವಿದ್ಯಾರ್ಥಿಯಾಗಿ ಸೇರಿದ್ದ ಆ ಯುವಕನಿಗೆ ತಾನು ಡಾಕ್ಟರನಾಗಬೇಕು; ಜನಸೇವೆ ಮಾಡಬೇಕು ಎಂದು ಬಲವಾದ ಹಂಬಲ ಆ ಕಾಲಕ್ಕೆ. ಆದರೆ ಹಿಂದೊಮ್ಮೆ ಅವನನ್ನು ಆವರಿಸಿಕೊಂಡಿದ್ದ ಆ ಗುಂಗು ಅವನಲ್ಲಿ ಸೇರಿಕೊಂಡಾಗ ಈ ವೃತ್ತಿ ತನಗಲ್ಲ; ತಾನು ಇದಕ್ಕೆ ಹೇಳಿದವನಲ್ಲ ಎಂದೆನ್ನಿಸಿಬಿಟ್ಟಿತು. ವಿಜ್ಞಾನವನ್ನು ಬಿಟ್ಟುಗೊಟ್ಟ. ಕಲಾವಿದ್ಯಾರ್ಥಿಯಾಗಿ ಪರಿಣಮಿಸಿದ. ಈ ವೇಳೆಗೆ ಅವನಿಗೆನಿಸಿತ್ತು: ತಾನೊಬ್ಬ ಉತ್ತಮ ಕಲಾವಿದನಾಗುವೆನೆಂದು. ಅದಕ್ಕಾಗಿ ಒಮ್ಮೆ ಪ್ರಯತ್ನಿಸಿಯೂ ಇದ್ದ. "ನೀನಿನ್ನೂ ಎಳೆಯ. ಇನ್ನೂ ಕಾಯಬೇಕು" ಎಂಬ ಉತ್ತರವನ್ನು ಪಡೆದು ಒಂದು ಬಗೆಯ ಅಸಮಾಧಾನ ಹೊಂದಿಯೂ ಇದ್ದ. ಈ ಅಸಮಾಧಾನದಿಂದಾಗಿಯೇ ಅವನು ಏನಾದರೊಂದು ಉದ್ಯೋಗ ಮಾಡೋಣ; ಅದರಲ್ಲಿ ತರಬೇತಿ ಹೊಂದೋಣ ಎಂದುಕೊಂಡ. ಅಂಥ ಒಂದು ತರಬೇತಿ ಶಾಲೆಗೂ ಸೇರಿಕೊಂಡ. ಅದು ಪೂರೈಸುವ ಹಂತದಲ್ಲಿ ಒಂದು ಭಾರಿ ಪವಾಡ ಸಂಭವಿಸಿತು.

ನಿಜ. ಮಾನವ ಜೀವನದಲ್ಲಿ ಅದು ಒಂದು ಪವಾಡವೇ! ಸ್ನೇಹಿತರೊಬ್ಬರು ಕಳಿಸಿದ ಜಾಹೀರಾತನ್ನು ಈ ಯುವಕ ಗಮನಿಸಿ ಹಾಕಿದ ಅರ್ಜಿಗೆ ಅವನು ನಿರೀಕ್ಷಿಸಿದ ರೀತಿಯಲ್ಲಿ ಪ್ರತಿಕ್ರಿಯೆ ದೊರಕಿತ್ತು. ಮದ್ರಾಸದಲ್ಲಿ ಸಂದರ್ಶನವೂ ನಡೆಯಿತು. ಅದರಲ್ಲಿ ಪಡೆದ ಯಶಸ್ಸು ಅದ್ಭುತ! ಈಗ ಅವನ ದಿಸೆ ಬದಲಾಗುವ ಕಾಲವೇನೊ! ಅವನ ಹುಚ್ಚು ಗುಂಗು ಹೊರ ಹೊಮ್ಮಿ ಫಲಿಸುವ ಸಮಯವೇನೊ. ಪುಣೆಯ ಫಿಲ್ಮ್ ಸಂಸ್ಥೆಯಲ್ಲಿ ಅಭಿನಯ-ನಿರ್ದೇಶಕ ತರಬೇತಿಗೆ ಆಯ್ಕೆಗೊಂಡಿದ್ದ. ಈಗ ತಂದೆ-ತಾಯಿಗಳನ್ನು ಒಪ್ಪಿಸಬೇಕಾಗಿ ಬಂದಿತು. ಸಂಪ್ರದಾಯವಂತರ ಮನೆತನದಲ್ಲಿ ಇದು ಪ್ರಯಾಸಕರವಾದ ಕೆಲಸವೂ ಸರಿ. ಆದರೂ ಒಪ್ಪಿಗೆ ಪಡೆದು ಪುಣೆಯನ್ನು ಸೇರಿದ. ನಿರ್ದೇಶನ ಮತ್ತು ಅಭಿನಯ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ. ಚಿತ್ರರಂಗದಲ್ಲಿ ಪ್ರವೇಶವೂ ಸಿಕ್ಕಿತು. ಅದರೊಂದಿಗೆ ಎಳೆತನದಲ್ಲಿ ಸೇರಿಕೊಂಡಿದ್ದ ಗುಂಗೂ ಮಾಯವಾಗಿತ್ತು. ಅದು ಕಲೆಯ-ಅಭಿನಯದ ಪ್ರೇರಣೆ; ತನ್ನನ್ನು ಬಡಿದೆಬ್ಬಿಸಿತ್ತು ಎಂಬ ಮಾತು ಆ ಯುವಕನಿಗೆ ಆಗ ಅರ್ಥವಾಯಿತು. ಅದರೊಂದಿಗೆ ತನ್ನ ಈ ಎಲ್ಲ ಸಂಗತಿಗಳ ಹಿನ್ನೆಲೆ ಅವನಿಗೆ ಅರಿವಿಗೆ ಬಂದಿತು. ಹಿಂದಿ ಚಿತ್ರರಂಗದ ಪ್ರತಿಭಾವಂತ ನಾಯಕನಾಗಿ ಅವನು ಕಾಣಿಸಿಕೊಳ್ಳತೊಡಗಿದ.

ಈ ಕಥೆ ತುಂಬ ಸೋಜಿಗವಾಗಿ ತೋರಬಹುದಾದರೂ ಹುಬ್ಬಳ್ಳಿಯ ಯುವಕ ಮೋಹಿಯುದ್ದೀನ ಮೆಕಾನದಾರ ವಿಕ್ರಮನಾಗಿ ಹೆಸರು ಪಡೆದುದು "ಜೂಲಿ" ಮೂಲಕ ಪ್ರೇಕ್ಷಕರನ್ನು, ಅನೇಕ ನಿರ್ಮಾಪಕರನ್ನು ತನ್ನೆಡೆಗೆ ಸೆಳೆದುಕೊಂಡದ್ದು ಹೀಗೆ. ಅದೇ ಬಗೆಯಲ್ಲಿ ತನ್ನ ಎಳೆತನದ ಕನಸನ್ನು ಅವನು ನನಸಾಗಿ ಮಾಡಿಕೊಂಡಿದ್ದ; ಆ ಮೂಲಕ ಕನ್ನಡಕ್ಕೆ - ಕರ್ನಾಟಕಕ್ಕೆ ಒಂದು ಹೆಸರನ್ನು ತಂದುಕೊಟ್ಟಿದ್ದ. ನಿಜವಾಗಿ ಅದೊಂದು ಅಭಿಮಾನದ ವಿಷಯವೇ.

ಈಚೆಗಷ್ಟೇ ಈತ ಹಬ್ಬದ ನಿಮಿತ್ತ ವನಃ ಹುಬ್ಬಳ್ಳಿಗೆ ಬಂದಿದ್ದಾಗ ನಾನು ಅವನನ್ನು ಕಾಣಲು ಹೋಗಿದ್ದೆ. ಅವನ ಮುಖವನ್ನು ಆ ಮೊದಲು ಚಿತ್ರಗಳಲ್ಲಿ ನಾನು ನೋಡಿದ್ದರಿಂದ ಕೂಡಲೇ ಗುರುತಿಸಿದೆ. ಇಲ್ಲವಾದರೆ ಅಂಥ ಸರಳ-ಸಾದಾ ಉಡುಪಿನ, ಬಂದೊಡನೆ ಸ್ವಾಗತಿಸುವ ವ್ಯಕ್ತಿ ಚಿತ್ರನಟನೇ ಎಂದೆನಿಸುವಂತಿತ್ತು. ನಾವು ಪರಸ್ಪರ ವಂದಿಸಿದ ನಂತರ ಸುಮಾರು ಒಂದು ಗಂಟೆ ಕಾಲ ಮಾತನಾಡಿದೆವು. ಚಿತ್ರರಂಗವನ್ನು ಅವನು ಸೇರಿದ ಬಗೆಗೆ ನನ್ನ ಕುತೂಹಲವನ್ನು ತಣಿಸಿಕೊಂಡ.

ಚಿತ್ರರಂಗದ ತನ್ನ ಯಶಸ್ಸಿಗೆ ಉತ್ತಮ ನಿರ್ದೇಶಕರು ತನಗೆ ದೊರೆತುದೇ ಕಾರಣವೆಂದು ಹೇಳುವ ವಿಕ್ರಮ ನಿರ್ದೇಶಕನ ಪಾತ್ರ ಚಿತ್ರರಂಗದಲ್ಲಿ ಅತಿ ಪ್ರಮುಖವಾದುದು. ಎಂಥ ಕಳಪೆ ಕಥಾ ವಸ್ತುವನ್ನು ಅವನು ತನ್ನ ಕೌಶಲ್ಯದಿಂದ ಉತ್ತಮ ಚಿತ್ರವಾಗಿ ಮಾರ್ಪಡಿಸ



ಅಭಿನಯ ಸಾಮರ್ಥ್ಯದಿಂದ್ಲ ಸುದ್ಯೆನ ಪಡೆದ ನಟ. ವಿಕ್ರಮ ಈಗ ಧರತೀಕೀ ಸೌಗಂಧದ ನಾಯಕ.



'ಸಂಕೋಚ' ಚಿತ್ರದ ನಿಸ್ಸಂಕೋಚ ಅಭಿನಯದಲ್ಲಿ ವಿಕ್ರಮ.
ಚಿತ್ರದಲ್ಲಿರುವ ಇತರರು ಅನಿಲ್ ಗಂಗೂಲಿ, ಸುಲಕ್ಷಣಾ ಪಂಡಿತ್.

ಬಲ್ಲನೆಂದು ಹೇಳುತ್ತಾನೆ. ನಿರ್ದೇಶನದಲ್ಲಿಯೂ ತರಬೇತಿ ಪಡೆದಿರುವ ವಿಕ್ರಮ ಅಭಿನಯದ ಅನುಭವದಿಂದ ಪರಿಪಕ್ವಗೊಂಡು ತಾನೂ ಉತ್ತಮ ನಿರ್ದೇಶಕನಾಗುವ ಮತ್ತು ತನ್ನದೇ ಚಿತ್ರ ನಿರ್ಮಿಸುವ ಅಭಿಲಾಷೆಯನ್ನು ಇರಿಸಿಕೊಂಡಿದ್ದಾನೆಂದು ತಿಳಿದಾಗ ನನ್ನ ಸಂತೋಷವನ್ನು ವ್ಯಕ್ತಪಡಿಸಿದೆ.

ಕನ್ನಡ–ಮತ್ತು ಕನ್ನಡ ಚಿತ್ರರಂಗದ ಬಗೆಗೆ ಅವನಿಗೆ ತುಂಬ ಅಭಿಮಾನವಿದೆ. ಕನ್ನಡದಲ್ಲಿ ಒಳ್ಳೆಯ ಚಿತ್ರಗಳು, ನಿರ್ಮಿತಿಯಾಗುತ್ತಿರುವುದು ತುಂಬ ಸಂತೋಷದ ಸಂಗತಿಯೆಂದೂ, ಕನ್ನಡದ ಚಿತ್ರದಲ್ಲಿ ಅಭಿನಯಿಸುವ ಲವಲವಿಕೆ ತನಗೂ ಸಾಕಷ್ಟು ಇರುವದಾಗಿಯೂ ಹೇಳಿದ ವಿಕ್ರಮ ಪಲವಾರು ನಿರ್ಮಾಪಕರು ತನಗೆ ದುಂಬಾಲು ಬಿದ್ದಿದ್ದರೆಂಬ ಅಂಶವನ್ನು ವಿದಿತಪಡಿಸಿದನು. ಆದರೆ ಕನ್ನಡ ಚಿತ್ರರಂಗಕ್ಕೆ ತಾನು ಬರಲು ಇನ್ನೂ ಕಾಲ ಬರಬೇಕೆಂಬ ಮಾತನ್ನು ಇದೇ ಸಂದರ್ಭದಲ್ಲಿ ಹೇಳಿದನು.

ಸಾಮಾಜಿಕ ಸೇವೆಯತ್ತ ಅವನು ಹೆಚ್ಚು ಗಮನ ಹರಿಸಿದ್ದಾನೆ. ಅಂಧರು, ಅಂಗಹೀನರ ಪುನರ್ವಸತಿ, ಅವರಿಗೆ ಜೀವನದಲ್ಲಿ ನೆಮ್ಮದಿ ದೊರಕುವಂತೆ ಸಂಸ್ಥೆಯೊಂದನ್ನು ರೂಪಿಸುವ ಹೆಬ್ಬಯಕೆ ಅವನಿಗೆ. ಆದಕ್ಕಾಗಿ ನಿಧಿ ಸಂಗ್ರಹಿಸಲು ಸಹ ಕಲಾವಿದರ ಪ್ರಚಂಡ ಕಾರ್ಯಕ್ರಮವೊಂದನ್ನು ಈಗಾಗಲೇ ರೂಪಿಸಿದ್ದಾನೆ. ಇದು ನಿಜವಾಗಿ ಅಪರೂಪವೆಂದು ನನಗನಿಸಿತು. ಅವನ ಈ ಕಾರ್ಯವು ಯಶಸ್ವಿಯಾಗಲಿ ಎಂದು ಹಾರೈಸಿ ನಾನು ಅವನನ್ನು ಬೀಳ್ಕೊಂಡಾಗ ತುಂಬ ಆತ್ಮೀಯತೆಯನ್ನು ತೋರಿದ: "ಇಂಥ ಒಂದು ಅವಕಾಶವನ್ನು ಮಾಡಿಕೊಂಡು ಬಂದಿರಲ್ಲ. ಅದಕ್ಕಾಗಿ ನನ್ನ ಧನ್ಯವಾದಗಳು. ಕರ್ಮವೀರದ ಓದುಗರಿಗೆ ಶುಭ ಹಾರೈಕೆಗಳು; ದೀಪಾವಳಿಯ ಶುಭಾಶಯಗಳು" ಎಂದು ವಂದಿಸುತ್ತ ಹೇಳಿದ. ಚಿತ್ರರಂಗ ಸೇರಿ ಹೆಸರು ಪಡೆದರೂ ಅವನಿನ್ನೂ ಹುಬ್ಬಳ್ಳಿಯ ಹುಡುಗನಾಗಿ ಉಳಿದುಕೊಂಡಿರುವದಕ್ಕೆ ನನಗೆ ಅಭಿಮಾನವೆನಿಸಿತು. ●



ಹೆಮ್ಮೆಯ ದಿಗ್ದರ್ಶಕ ಪುಟ್ಟಣ್ಣ ಕಣಗಾಲ



ನಿಷ್ಣಾತ ನಿರ್ದೇಶಕ ಎಂ. ಆರ್. ವಿಠ್ಠಲ

ಒಲವು ಇಲ್ಲದವರಿಗೂ, ನಿರಕ್ಷರಕುಕ್ಷಿಗಳಿಗೂ ಆಯಾ ಕಾದಂಬರಿಯ ಸೊಬಗನ್ನೂ, ಸೊಗಸನ್ನೂ ಸತ್ವವನ್ನೂ ಸಾರವನ್ನೂ ಸವಿಯಾಗಿ ಉಣಬಡಿಸಿದ ಶ್ರೇಯಸ್ಸು ಅನೇಕ ನಿರ್ದೇಶಕರಿಗೆ ಸಂದಿದೆ ಎಂದು ಧೈರ್ಯವಾಗಿ ಹೇಳಬಹುದು.

ಕನ್ನಡದಲ್ಲಿ ಕಾದಂಬರಿಯೊಂದನ್ನು ತೆರೆಗೆ ತರುವ ಸಾಹಸ ನಡೆದುದು ಮೂಕಿ ಚಿತ್ರಗಳ ಯುಗದಲ್ಲಿ. ದೇವುಡು ಅವರ 'ಕಳ್ಳರ ಕೂಟ' ಅಂಥ ಮೊದಲ ಯತ್ನ. ಆದರೆ ವಾಕ್ಚಿತ್ರಗಳ ಯುಗವು ಆರಂಭವಾದ ನಂತರ ಚಿತ್ರೀಕರಣವಾದ ಮೊದಲ ಕಾದಂಬರಿ ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ'. ಅದು 'ಕರುಣೆಯೇ ಕುಟುಂಬದ ಕಣ್ಣು' ಎಂಬ ಹೆಸರಿನಿಂದ ತೆರೆ ಕಂಡಿತು. ಆ ನಂತರ ಅವರವೇ ಕಾದಂಬರಿ ಆಧರಿಸಿ 'ಕುಲವಧು' ಹಾಗೂ 'ಬಂಗಾರಿ' ಚಿತ್ರಗಳು ತೆರೆಕಂಡವು. ಕೃಷ್ಣಮೂರ್ತಿ ಪುರಾಣಿಕರು ಚಿತ್ರರಂಗಕ್ಕೆ ಅತಿ ಹೆಚ್ಚು ಕಾದಂಬರಿಗಳನ್ನು ನೀಡಿದ ಲೇಖಕರು. ನಂತರ ತೆರೆಕಂಡ "ಸಂಧ್ಯಾರಾಗ" ಅ. ನ. ಕೃ ಅವರ ಕಾದಂಬರಿ ಎಂಬ ಪ್ರತಿಷ್ಠೆಯಿಂದಾಗಿ ಒಳ್ಳೆ ಹೆಸರು ಪಡೆದರೂ ಚಿತ್ರವಾಗಿ ಅದು ಅಷ್ಟೊಂದು ಸಮರ್ಥವಾಗಿ ಮೂಡಿಬರಲಿಲ್ಲ.

ಕನ್ನಡದಲ್ಲಿ ಕಾದಂಬರಿಗಳ ಚಿತ್ರೀಕರಣವು ಸಮರ್ಥ ರೀತಿಯಲ್ಲಿ ನಡೆದಿದೆಯೆ?

ಶ್ಯಾಮಸುಂದರ ಕುಲಕರ್ಣಿ

ಕನ್ನಡದಲ್ಲಿ ಕಾದಂಬರಿಗಳ ಚಿತ್ರೀಕರಣವು ಸಮರ್ಥ ರೀತಿಯಲ್ಲಿ ನಡೆದಿದೆಯೇ? ಇದು ಬಹು ಜಟಿಲವಾದ ಪ್ರಶ್ನೆ. ಯಾವುದಾದರೊಂದು ಕಾದಂಬರಿಯ ಹೆಸರು ಹೇಳಿ, ಆ ಕಾದಂಬರಿಯು ಚಲನಚಿತ್ರವಾಗಿ ಅದೆಷ್ಟು ಸಮರ್ಥ ರೀತಿಯಲ್ಲಿ ಮೂಡಿ ಬಂದಿದೆ ಎಂಬ ಪ್ರಶ್ನೆಗೆ ಉತ್ತರಿಸುವದು ಸುಲಭ.

ನಾವು ಹೆಮ್ಮೆಪಡಬಹುದಾದ ವಿಷಯವೆಂದರೆ, ಕಾದಂಬರಿಗಳತ್ತ ಒಲವು ಉಳಿದ ಯಾವ ಭಾಷೆಯಲ್ಲೂ ಇಲ್ಲದಷ್ಟು ಹೆಚ್ಚಿನ ಪ್ರಮಾಣದಲ್ಲಿ ನಮ್ಮಲ್ಲಿ ಕಂಡು ಬರುತ್ತಿದೆ. ಆ ಕಾದಂಬರಿಗಳನ್ನು ಅಷ್ಟೇ ನಿಷ್ಠೆಯಿಂದ ಚಿತ್ರಿಸುವ ಪ್ರಯತ್ನವೂ ನಡೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಎಲ್ಲರ ಕಣ್ಣು ಕನ್ನಡ ಚಿತ್ರರಂಗದತ್ತ ಹೊರಳಿದ್ದರೆ–ನಾವು ಉತ್ತಮ ಕಾದಂಬರಿಗಳನ್ನು ಆಯ್ದು ಚಿತ್ರ ತಯಾರಿಸಲು ಯತ್ನಿಸಿರುವದೇ ಅದಕ್ಕೆ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ವರೆಗೆ ತೆರೆಕಂಡ ೪೯೨ ಚಿತ್ರಗಳ ಪೈಕಿ ಕಥೆ–ಕಾದಂಬರಿ ಆಧರಿಸಿ ತಯಾರಾದ ೫೭ ಚಿತ್ರಗಳನ್ನು ತೆಗೆದುಬಿಟ್ಟರೆ (ಹಾಗೂ ಪೌರಾಣಿಕ ಐತಿಹಾಸಿಕ ಚಿತ್ರಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ) ಕನ್ನಡ ಚಿತ್ರರಂಗವು ಬಹುಶಃ ಹಸಿರು ಎಲೆಗಳೇ ಇಲ್ಲದ ಬೋಳುಮರದಂತೆ ಕಾಣುತ್ತದೆ.

ಸಾಹಿತ್ಯ ಕೃತಿ ಆಧರಿಸಿದ ಎಲ್ಲ ಚಿತ್ರಗಳೂ ಪರಿಣಾಮಕಾರಿಯಾಗಿ, ಸತ್ವಯುತವಾಗಿ, ಸಮರ್ಥ ರೀತಿಯಲ್ಲಿ ತೆರೆ ಕಂಡಿವೆ ಎಂಬುದು ನನ್ನ ವಾದವಲ್ಲ. ಆದರೆ ಕನ್ನಡದ ಇತ್ತೀಚಿನ ಅತ್ಯಂತ ಶ್ರೇಷ್ಠ–ಸಾಮಾಜಿಕ ಚಿತ್ರಗಳ ಒಂದು ಪಟ್ಟಿ ಮಾಡಿದರೆ ಅವು ಎಲ್ಲವೂ ಸಾಹಿತ್ಯ ಕೃತಿ ಆಧರಿಸಿ ತಯಾರಾದವುಗಳೇ ಎಂಬುದು ನಮ್ಮ ಗಮನಕ್ಕೆ ಬಾರದಿರದು. ನಮ್ಮಲ್ಲಿ ಸಾಹಿತ್ಯ ಕೃತಿ ಆಧರಿಸಿ ತಯಾರಾದ ಚಿತ್ರಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮನ್ನಣೆ ಗಳಿಸಿವೆ. ಹಣ ಗಳಿಕೆಯಲ್ಲಿ ವಿಕ್ರಮ ಸ್ಥಾಪಿಸಿದ ಚಿತ್ರಗಳೂ ಕಾದಂಬರಿ ಆಧರಿಸಿ ತಯಾರಾದವುಗಳೇ. ಕನ್ನಡ ಚಿತ್ರೋದ್ಯಮದಲ್ಲಿ ಹೊಸಯುಗದ ಆರಂಭವು ಕಾದಂಬರಿಗಳ ಚಿತ್ರೀಕರಣದೊಂದಿಗೇ ಪ್ರಾರಂಭವಾಯಿತೆಂದು ಹೆಮ್ಮೆ ಪಡಬಹುದು.

ಇದೆಲ್ಲ ನೋಡಿದಾಗ ನಾಗುವುದೇನು? ನಮ್ಮಲ್ಲಿ ಕಾದಂಬರಿಗಳ ಚಿತ್ರೀಕರಣವು ಅತ್ಯಂತ ಸಮರ್ಥ ರೀತಿಯಲ್ಲಿ ನಡೆದಿದೆ. ಸಾಹಿತ್ಯದತ್ತ ಅಂಥ


ಕನ್ನಡ ಸಾಹಿತ್ಯ ಶ್ರೀಮಂತವಾಗಿದೆ. ನಾವು ಯಾರಿಗೂ ಕಡಿಮೆ ಇಲ್ಲ ಎಂದು ನಾಡಿಗೆ ತೋರಿಸುವ



ಪ್ರಶಸ್ತಿ ವಿಜೇತ ಚಿತ್ರಗಳ ದಿಗ್ದರ್ಶಕ ಸಿದ್ಧಲಿಂಗಯ್ಯ (ಪ್ರಶಸ್ತಿ ಸ್ವೀಕರಿಸುತ್ತಿದ್ದಾಗ)



ತ್ರಿವೇಣಿಯವರ ಕಾದಂಬರಿಯಾಧರಿತವಾದ 'ಶರಪಂಜರ' ಚಿತ್ರದಲ್ಲಿ ನಾಯಕಿ ಕಲ್ಪನಾ ನಾಯಕ ಗಂಗಾಧರ



ಚಿತ್ರರಂಗದಲ್ಲೊಂದು ಮೈಲುಗಲ್ಲು ನೆಟ್ಟ 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ವಿಷ್ಣುವರ್ಧನ, ಭವಾನಿ

ದೀಕ್ಷೆತೊಟ್ಟು, ಇಂದಿಗೂ ಅಕ್ಷರಶಃ ಅದನ್ನು ಪಾಲಿಸುತ್ತಿರುವ ವ್ಯಕ್ತಿಯೆಂದರೆ ನಿರ್ದೇಶಕ ಎಸ್.ಆರ್. ಪುಟ್ಟಣ್ಣ. ತ್ರಿವೇಣಿ ಅವರ ಕಾದಂಬರಿ ಆಧರಿಸಿ ಅವರು ತಯಾರಿಸಿದ 'ಬೆಳ್ಳಿಮೋಡ' ಹಾಗೂ ಮಲಯಾಳಂ ಭಾಷೆಯ 'ಬೆಕ್ಕಿನ ಕಣ್ಣು' ಕನ್ನಡದಲ್ಲಷ್ಟೇ ಅಲ್ಲ ಇತರ ಭಾಷೆಗಳಲ್ಲೂ ಕಾದಂಬರಿ ಆಧರಿಸಿ ಚಿತ್ರ ತಯಾರಿಸುವ ಸತ್ಪರಂಪರೆಯನ್ನು ಜನಪ್ರಿಯಗೊಳಿಸಿದವು. ಸಾಹಿತ್ಯದ ಸತ್ವವನ್ನು ಉಳಿಸಿಕೊಂಡು ಪರಿಶುದ್ಧ ಮನರಂಜನೆಯ ಚಿತ್ರ ತಯಾರಿಸಿದ ಮೊಟ್ಟ ಮೊದಲ ದಿಗ್ದರ್ಶಕ ಪುಟ್ಟಣ್ಣ. ಅವರ 'ಬೆಳ್ಳಿಮೋಡ' "ಗೆಜ್ಜೆ ಪೂಜೆ" 'ಶರಪಂಜರ' 'ನಾಗರ ಹಾವು' ಹಾಗೂ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರಗಳು ಕಾದಂಬರಿಯೊಂದನ್ನು ಅದೆಷ್ಟು ಕಲಾತ್ಮಕವಾಗಿ, ಕಾವ್ಯಮಯವಾಗಿ, ಪರಿಣಾಮಕಾರಿಯಾಗಿ ಸಿನಿಮಾ ಮಾಧ್ಯಮಕ್ಕೆ ಅಳವಡಿಸಬಹುದು ಎಂಬುದಕ್ಕೆ ಉತ್ಕೃಷ್ಟ ಉದಾಹರಣೆಗಳು.

ಬಣ್ಣದ ಯುಗ ಆರಂಭವಾಗುವ ಮೊದಲು, ತೆರೆಯ ಮೇಲೆ ಅತ್ಯಂತ ಸಮರ್ಥವಾಗಿ ಕಾದಂಬರಿ ಅಳವಡಿಸಿದ ಇತರ ದಿಗ್ದರ್ಶಕರೆಂದರೆ ಎಂ.ಆರ್.ವಿಠ್ಠಲ್ (ಮಿಸ್ ಲೀಲಾವತಿ, ಹಣ್ಣೆಲೆ ಚಿಗುರಿದಾಗ), ಪೇಟೆ ಶಿವರಾಂ (ಚಕ್ರತೀರ್ಥ) ಚದುರಂಗ (ಸರ್ವಮಂಗಳ) ಹಾಗೂ ಎನ್. ಲಕ್ಷ್ಮೀನಾರಾಯಣ್ (ಮುಕ್ತಿ, ಉಯ್ಯಾಲೆ).

ಕನ್ನಡ ಚಿತ್ರೋದ್ಯಮದಲ್ಲಿ ಕಾದಂಬರಿ ಯುಗದ ಆರಂಭವಾಗಿ ಹೆಚ್ಚೆಂದರೆ ಹತ್ತು ವರ್ಷಗಳಾದವು. ಈ ಪೈಕಿ ಮೊದಲ ಐದು ವರ್ಷಗಳದೊಂದು ಘಟ್ಟವಾದರೆ, ಅನಂತರದ ಐದು ವರ್ಷಗಳದು ಇನ್ನೊಂದು ಘಟ್ಟ.

ಡಾ॥ ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿಯು ಪಟ್ಟಾಭಿರಾಮ ರೆಡ್ಡಿ ಅವರ ದಿಗ್ದರ್ಶನದಲ್ಲಿ ತೆರೆಕಂಡು, ಕನ್ನಡ ಚಿತ್ರೋದ್ಯಮಕ್ಕೆ ಹೊಸ ಪಥವನ್ನೂ, ಹೊಸ ಪರಂಪರೆಯನ್ನೂ ತೋರಿಸಿಕೊಟ್ಟದ್ದು ಈ ಎರಡನೇ ಘಟ್ಟದ ಆರಂಭದಲ್ಲಿ.

"ಸಂಸ್ಕಾರ" ಕಾದಂಬರಿ ಯುಗದಲ್ಲಿ ಕಲಾತ್ಮಕ ಚಿತ್ರಗಳ ಪರ್ವವನ್ನು ಆರಂಭಿಸಿದ ಮೊದಲ ಚಿತ್ರ. ರಾಷ್ಟ್ರೀಯ ಮಟ್ಟದಲ್ಲಿ ಕನ್ನಡಕ್ಕೆ ಕೀರ್ತಿಗಳಿಸಿಕೊಟ್ಟ ಶ್ರೇಯಸ್ಸು ಆ ಚಿತ್ರದ್ದು. ಆನಂತರ ಎಸ್.ಎಲ್. ಭೈರಪ್ಪನವರ ಕಾದಂಬರಿ ಆಧರಿಸಿ ಗಿರೀಶ್ ಕಾರ್ನಾಡ್ ಹಾಗೂ ಬಿ.ವಿ. ಕಾರಂತ್ 'ವಂಶವೃಕ್ಷ' ಚಿತ್ರ ದಿಗ್ದರ್ಶಿಸಿದರು, ಆನಂತರ ಗಿರೀಶ್ ಕಾರ್ನಾಡ್ ಆಲನಹಳ್ಳಿ ಕೃಷ್ಣ ಅವರ "ಕಾಡು" ಕಾದಂಬರಿಯನ್ನೂ ಬೆಳ್ಳಿತೆರೆಗೆ ಅಳವಡಿಸಿದರು, 'ಸಂಸ್ಕಾರ'ವು ಕನ್ನಡಕ್ಕೆ ಗಳಿಸಿಕೊಟ್ಟ ಸ್ಥಾನವನ್ನು, ಭದ್ರವಾಗಿ ಉಳಿಸಿಕೊಂಡ ಶ್ರೇಯಸ್ಸು ಈ ನಿರ್ದೇಶಕದ್ವಯರದು. ಡಾ॥ ಶಿವರಾಮ ಕಾರಂತರ "ಚೋಮನ ದುಡಿ" ಕಾದಂಬರಿ ಆಧರಿಸಿ, ಬಿ.ವಿ. ಕಾರಂತರು ನಿರ್ದೇಶಿಸಿದ ಚಿತ್ರವು ಮೊನ್ನೆ ಮೊನ್ನೆಯಷ್ಟೆ ತೆರೆಕಂಡಿದ್ದು ಒಂದು ಒಳ್ಳೆಯ ಕಾದಂಬರಿಯನ್ನು ಅಷ್ಟೇ ನೇರವಾಗಿ, ಮನಮುಟ್ಟು

ವಂತೆ ಹೇಗೆ ನಿರೂಪಿಸಬಹುದು ಎಂಬುದಕ್ಕೆ ಸಾಕ್ಷಿ. ಪ್ರಸಾದ್ ನಿರ್ದೇಶನದ 'ಕಂಕಣ' ಕೂಡ ಒಂದು ಅತ್ಯುತ್ತಮ ಕೃತಿ.

ಒಂದು ಒಳ್ಳೆಯ ಕಾದಂಬರಿ ಚಿತ್ರವಾದಾಗ ಒಂದು ಒಳ್ಳೆಯ ಚಿತ್ರ ನೋಡಿದ ಅನುಭವವಾದರೆ ಸಾಕು, ಆ ಕಾದಂಬರಿಯು ಸಮರ್ಥವಾಗಿ ಚಿತ್ರಿತವಾಗಿದೆ ಎಂದರ್ಥ. ಅಂಥ ಚಿತ್ರವು ಹಣಗಳಿಸದಿದ್ದರೂ. ಹೃದಯ ತಟ್ಟುವಂತಿರಬೇಕು. ಈ ದೃಷ್ಟಿಯಿಂದ ನೋಡಿದರೆ ಕಾದಂಬರಿಯ 'ಕೊಲೆ'ಯಾಗಿರುವ ದೃಷ್ಟಾಂತಗಳು ಕೇವಲ ಕೆಲವು ಮಾತ್ರ.

ಹಣಗಳಿಕೆಯಲ್ಲಿ ವಿಕ್ರಮ ಸ್ಥಾಪಿಸಿದ ಚಿತ್ರಗಳೂ ಕಾದಂಬರಿ ಆಧರಿಸಿದವುಗಳೇ. ಪುಟ್ಟಣ್ಣನವರ ಗೆಜ್ಜೆಪೂಜೆ, ನಾಗರ ಹಾವು ಹಾಗೂ ಶರಪಂಜರ, ಸಿದ್ಧಲಿಂಗಯ್ಯನವರ "ಬಂಗಾರದ ಮನುಷ್ಯ" (ಬೆಂಗಳೂರಿನಲ್ಲಿ ೧೦೪ ವಾರ ಓಡಿತು) ಹಾಗೂ ಭೂತಯ್ಯನ ಮಗ ಅಯ್ಯು (ಸಣ್ಣ ಕಥೆ) ದೊರೆ ಭಗವಾನ್ ನಿರ್ದೇಶನದ 'ಎರಡು ಕನಸು' ರವಿ ನಿರ್ದೇಶನದ 'ಭಾಗ್ಯಜ್ಯೋತಿ" ಇಂಥ ಅತ್ಯುತ್ಕೃಷ್ಟ ಉದಾಹರಣೆಗಳು, ದೇವುಡು ಅವರ ಕಾದಂಬರಿ ಆಧರಿತ "ಮಯೂರ" ಅಪಾರ ವೆಚ್ಚದ ಜನಪ್ರಿಯ ಚಿತ್ರವೆನಿಸಿತಾದರೂ ಕಾದಂಬರಿಗೆ ಸಂಪೂರ್ಣ ನ್ಯಾಯವನ್ನೇನೂ ಒದಗಿಸಲಿಲ.

ಅಬ್ಬಬ್ಬಾ ಎಂದು ಹೇಳಿಕೊಳ್ಳುವಂತಿರದಿದ್ದರೂ ಒಳ್ಳೆಯ ಸಾಹಿತ್ಯ ಕೃತಿಯೊಂದನ್ನು ಅಷ್ಟೇ ನಿಷ್ಠೆಯಿಂದ ನಿರೂಪಿಸಿರುವ ಕೆಲವು ಪ್ರಾಮಾಣಿಕ ಯತ್ನಗಳು ನಡೆದುದುಂಟು. ಮಾರುತಿ ಆ. ಶಿವರಾಂ ನಿರ್ದೇಶನದ "ಮಹಾತ್ಯಾಗ", ಎಸ್. ಲಕ್ಷ್ಮೀ ನಾರಾಯಣ್ ಅವರ 'ಅಬಚೂರಿನ ಪೋಸ್ಟಾಫೀಸ್', ಎಂ.ಆರ್. ವಿಠ್ಠಲ್ ಅವರ 'ಎರಡು ಮುಖ' ಗೀತಪ್ರಿಯರ 'ಯಾವ ಜನ್ಮದ ಮೈತ್ರಿ', ವೈ.ಆರ್. ಸ್ವಾಮಿ ಅವರ 'ದೇವರ ಮಕ್ಕಳು' ಹಾಗೂ 'ಸ್ವಯಂವರ' ಮೊದಲಾದ ಚಿತ್ರಗಳನ್ನು ಉದಾಹರಿಸಬಹುದು.

ಈ ಲೇಖನದ ಪರಿಮಿತಿಯಲ್ಲಿ ಕಾದಂಬರಿ ಆಧರಿಸಿ ತಯಾರಾದ ಎಲ್ಲ ೫೭ ಚಿತ್ರಗಳ ಸಮೀಕ್ಷೆ ನಡೆಸುವ ಸಾಹಸಕ್ಕೆ ನಾನು ಯತ್ನಿಸಿಲ್ಲ. ಕಾದಂಬರಿ ಆಧರಿಸಿಯೂ ಕಳಪೆ ಎನಿಸಿದ ಚಿತ್ರಗಳನ್ನೂ ನಾನಿಲ್ಲಿ ಪ್ರಸ್ತಾಪಿಸುವದಿಲ್ಲ.

ಒಟ್ಟಿನಲ್ಲಿ, ಈ ವರೆಗೆ ತೆರೆಕಂಡ ಎಲ್ಲ ೪೯೦ ಚಿತ್ರಗಳನ್ನು ಜರಡಿಗೆ ಹಿಡಿದು, ಜೊಳ್ಳು ಕಾಳುಗಳನ್ನು ಬೇರ್ಪಡಿಸಿ, ಗಟ್ಟಿಕಾಳುಗಳನ್ನಷ್ಟೆ ಹೆಕ್ಕಿ ತೆಗೆದಾಗ ಅವುಗಳಲ್ಲಿ ಬಹುಪಾಲು ಕಾದಂಬರಿ ಆಧರಿತ ಚಿತ್ರಗಳೇ ಆಗಿರುತ್ತವೆ ಎಂಬುದು ಅತ್ಯಂತ ಸಮಾಧಾನಕರ ಹಾಗೂ ಸಂತೋಷದ ವಿಷಯ. ಬಹುಶಃ ಬೇರೆ ಯಾವ ಭಾಷಾ ಚಿತ್ರರಂಗದಲ್ಲೂ ಇಂಥ ವೈಶಿಷ್ಟ ಕಂಡುಬಾರದು.



"ವಂಶವೃಕ್ಷದ" ಮೂರು ಬೊಂಬೆಗಳು- ಬಿ. ವಿ. ಕಾರಂತ, ಎಲ್. ವಿ. ಶಾರದಾ, ಗಿರೀಶ ಕಾರ್ನಾಡ



ಒಂದು ಚಿಕ್ಕ ಕಥೆಯನ್ನು ಹಿಗ್ಗಿಸಿ ಉತ್ತಮ ಚಿತ್ರವನ್ನಾಗಿ ಮಾಡಿದ ಸಮರ್ಥ ದಿಗ್ದರ್ಶಕ ಎನ್. ಲಕ್ಷ್ಮೀನಾರಾಯಣರ "ಅಬಚೂರಿನ ಪೋಸ್ಟಾಫೀಸು" ಇಲ್ಲಿದ್ದವರು ನಾಣಿ, ಗಿರಿಜ

ಅರವಿಂದ

ಪುನಃ ರಫ್ತಿನ ಪ್ರಥಮ ಪ್ರಶಸ್ತಿಗಳಿಸಿದೆ



ವಿಶ್ವದಲ್ಲೆಲ್ಲ ಅತ್ಯಂತ ಹೆಚ್ಚಾಗಿ ಮಾರಾಟವಾಗುತ್ತಿರುವ ಸುಗಂಧ ವಸ್ತುವಾದ


'ಸುಗಂಧ ಶೃಂಗಾರ' ತಯಾರಕರಾದ

ಅರವಿಂದ ಪರಿಮಳ ವರ್ಕ್ಸ್ ಇವರು

"ಬೇಸಿಕ್ ಕೆಮಿಕಲ್ಸ್, ಫಾರ್ಮಸ್ಯೂಟಿಕಲ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ಬೊಂಬಾಯಿ" ಇವರಿಂದ 1974-75 ನೇ ಸಾಲಿಗೆ ಫ್ತಿನ ಪ್ರಥಮ ಪ್ರಶಸ್ತಿ (ಫರ್ಸ್ಟ್ ಎಕ್ಸ್‌ಪೋರ್ಟ್ ಅವಾರ್ಡ್) ಗಳಿಸಿದ್ದಾರೆ.

ನಮ್ಮ ಉತ್ಪನ್ನಗಳನ್ನು 60 ದೇಶಗಳಿಗೂ ಹೆಚ್ಚಿನ ದೇಶಗಳಿಗೆ ಅಂದರೆ ಯು.ಎಸ್.ಎ. ಯು.ಕೆ. ಫ್ರಾನ್ಸ್ ಹಾಲೆಂಡ್, ಸ್ವಿಟ್ಜರ್ಲೆಂಡ್, ಮೆಕ್ಸಿಕೋ, ಗಲ್ಫ್ ದೇಶಗಳಿಗೂ ಮಧ್ಯಪ್ರಾಚ್ಯ, ಪಶ್ಚಿಮ ಜರ್ಮನಿ, ಆಗ್ನೇಯ-ಏಷ್ಯಾ ಆಫ್ರಿಕಾ ಇತ್ಯಾದಿ ದೇಶಗಳನ್ನೊಳಗೊಂಡಂತೆ ರಫ್ತು ಮಾಡಲಾಗುತ್ತಿದೆ.

1974-75 ನೇ ಸಾಲಿನ ರಫ್ತು 1973-74 ಕ್ಕಿಂತಲೂ ರೂ. 50 ಲಕ್ಷದಷ್ಟು ಅಂದರೆ ಶೇ. 85 ರಷ್ಟು ಏರಿಕೆಯನ್ನು ತೋರಿಸುತ್ತದೆ.



ವಿಶ್ವದಲ್ಲೆಲ್ಲಾ ಸುವಾಸನೆಯನ್ನು ಪ್ರಸರಿಸುವ ಸುಗಂಧ

ನಮ್ಮ ನೆಚ್ಚಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ 20 ಅಂಶಗಳ ಕಾರ್ಯಕ್ರಮದ ಯಶಸ್ಸಿಗೆ ನಾವು ನಮ್ಮ ಸೇವೆಯನ್ನು ಅರ್ಪಿಸುತ್ತೇವೆ.

This Deepavali Number of Karmaveer Weekly owened by KARNATAKA PATRIKA Private Ltd., Hubli is printed by Bhoumeshwar Das Kohli at the Samyukta karnatak Press Koppikar Road Hubli-20 and Published by him at the Samyukta Karnatak Hubli-20 and 2 Residency Road Bangalore-25

KARMAVEER 4-11-1975

Licence No. 38
Licensed to post without prepayment

Regd. No. KRNG 34

Registered with the Registrar of Newspapers for India under No. 3558/57



ಮಂಗಳೂರಿನಲ್ಲಿ ಡ್ರಾ

COVER PRINTED AT BHARAT PHOTO OFFSET WORKS, DHARWAR-1